ಕರ್ನಾಟಕ ಸರ್ಕಾರ

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು ಸಂಪುಟ-೨


ಲೇಖಕರು

**ಪಂ. ದೀನ್ ದಯಾಳ್ ಉಪಾಧ್ಯಾಯ**



ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೩೧
ವಿಚಾರ ಸಾಹಿತ್ಯಮಾಲೆ – ೪೭

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೨

**ಸಂಪಾದಕ ಮಂಡಳಿ**

| | |
|---|---|
| ಡಾ. ಪ್ರಧಾನ್ ಗುರುದತ್ತ | (ಅಧ್ಯಕ್ಷ) |
| ಶ್ರೀ ಎಸ್.ಆರ್. ರಾಮಸ್ವಾಮಿ | (ಸದಸ್ಯರು) |
| ಡಾ. ಜಿ.ಬಿ. ಹರೀಶ್ | (ಸದಸ್ಯರು) |
| ಡಾ. ಮಂಗಳಾ ಶ್ರೀಧರ್ | (ಸದಸ್ಯರು) |
| ಶ್ರೀ ಪಿ.ಎಂ. ರಮೇಶ್ | (ಸದಸ್ಯರು) |



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೨

**ಪಂ॥ ದೀನ್ ದಯಾಳ್ ಉಪಾಧ್ಯಾಯ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**DĪN DAYĀL UPĀDHYĀYA AVARA SAMAGRA BAREHAGAḶU (Samputa 2) (Complete Works of Pandit Deendayal Upadhaya Vol. 2)** Consisting of the Kannada translation of **Bhārat kī Arthanīti,** and **Rās'trajīvan kī Dis'a ;** Editor-in-Chief: **Dr. Pradhan Gurudatta;** Published by **Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2012 ; Pp. xviii + 352 ; Price : Rs. 125/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೨
ಪುಟಗಳು : viii + ೩೫೨
ಬೆಲೆ : ರೂ. ೧೨೫/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-19-2**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦. ದೂ : ೨೩೩೪೨೭೨೪



# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೨

**೧. ಭಾರತೀಯ ಅರ್ಥ ನೀತಿ**
**೨. ರಾಷ್ಟ್ರ ಜೀವನದ ದಿಕ್ಕು**

**Blank Page**



# ಪರಿವಿಡಿ

## ಸಂಪುಟ ೨

**೧. ಭಾರತೀಯ ಅರ್ಥ ನೀತಿ**
**– ವಿಕಾಸದ ಒಂದು ದಿಕ್ಕು**
ಅನು. : **ಆರ್.ಪಿ. ಹೆಗಡೆ**


| | |
|---|---|
| ಜೀವನ : ಇಣುಕು ನೋಟ | ೩ |
| ೧. ಅರ್ಥ ಚಿಂತನೆ | ೮ |
| ೨. ಭಾರತೀಯ ಸಂಸ್ಕೃತಿಯಲ್ಲಿ ಹಣ | ೧೫ |
| ೩. ಮೂಲಭೂತ ಗುರಿ | ೨೩ |
| ೪. ಆದ್ಯತೆಗಳು | ೩೦ |
| ೫. ಕೃಷಿ | ೪೦ |
| ೬. ಉದ್ಯಮ–ಕೈಗಾರಿಕೆ | ೬೩ |
| ೭. ಮನುಷ್ಯ ಮತ್ತು ಯಂತ್ರ | ೬೯ |
| ೮. ಬಂಡವಾಳ ಹಾಗೂ ವ್ಯವಸ್ಥಾಪನೆ | ೮೨ |
| ೯. ಸರಕು, ಬೇಡಿಕೆ, ಹಾಗೂ ಔದ್ಯೋಗಿಕ ಆದ್ಯತೆಗಳು | ೯೯ |
| ೧೦. ಚಿಕ್ಕ ಮತ್ತು ದೊಡ್ಡ ಉದ್ಯಮ | ೧೦೮ |
| ೧೧. ಸಾರಿಗೆ ಮತ್ತು ವ್ಯಾಪಾರ | ೧೩೩ |
| ೧೨. ಸಮಾಜಸೇವೆಗಳು | ೧೪೧ |
| ೧೩. ಉಪಸಂಹಾರ | ೧೫೧ |


**೨. ರಾಷ್ಟ್ರ ಜೀವನದ ದಿಕ್ಕು**
ಅನು. : **ಜಿ. ಡಾ. ಶಾಂತಕುಮಾರಿ**


| | |
|---|---|
| ೧. ಪರಮ ಸುಖದ ಮಾರ್ಗ | ೧೬೯ |
| ೨. ‘ನಾನು’ ಮತ್ತು ‘ನಾವು’ | ೧೭೫ |
| ೩. ರಾಷ್ಟ್ರದ ಜೀವದಾಯಕ ಶಕ್ತಿ | ೧೮೬ |
| ೪. ರಾಷ್ಟ್ರ ಹಾಗೂ ರಾಜ್ಯ | ೧೯೦ |
| ೫. ರಾಷ್ಟ್ರದ ಸ್ವರೂಪ : ಚಿತಿ | ೧೯೬ |
| ೬. ಸೆಕ್ಯುಲರ್ : ಅರ್ಥ–ಅನರ್ಥ | ೨೦೭ |

| | |
|---|---|
| ೭. ರಾಷ್ಟ್ರ : ಪ್ರಕೃತಿ ಮತ್ತು ವಿಕೃತಿ | ೨೧೨ |
| ೮. ನಮ್ಮ ರಾಷ್ಟ್ರ ಧ್ವಜ | ೨೨೦ |
| ೯. ವಿಜಯಾಕಾಂಕ್ಷೆ | ೨೩೩ |
| ೧೦. ಜನಾಭಿಪ್ರಾಯ–ಪರಿಷ್ಕಾರ | ೨೩೭ |
| ೧೧. ಪರಂ ವೈಭವಂ ನೇತುಮೇತತ್ಸ್ವರಾಷ್ಟ್ರಂ | ೨೪೨ |
| ೧೨. ಸಂಘಟನೆಯ ಆಧಾರ : ರಾಷ್ಟ್ರವಾದ | ೨೫೫ |
| ೧೩. ವ್ಯಕ್ತಿ ಹಾಗೂ ಸಮಾಜದ ಸಂಬಂಧ | ೨೬೪ |
| ೧೪. ಸಾಮರಸ್ಯಪೂರ್ಣ ಸಮಾಜ ವ್ಯವಸ್ಥೆ | ೨೭೪ |
| ೧೫. ಯಾವ ಹಾದಿಯೂ ದೊರೆಯಲಿಲ್ಲ | ೨೯೨ |
| ೧೬. ವಿಕೇಂದ್ರೀಕರಣ | ೩೦೨ |
| ೧೭. ಸ್ವದೇಶಿ–ವಿದೇಶಿ : ಗುರುಪೂಜೆ | ೩೦೮ |
| ೧೮. ಸಾರಾಂಶ | ೩೧೫ |
| ಜೀವನ–ದರ್ಶನ | ೩೪೬ |

# ಭಾರತೀಯ ಅರ್ಥ ನೀತಿ

## – ವಿಕಾಸದ ಒಂದು ದಿಕ್ಕು

ಅನು. : **ಆರ್.ಪಿ. ಹೆಗಡೆ**

Blank Page

## ಪಂಡಿತ ದೀನ್ ದಯಾಳ್ ಉಪಾಧ್ಯಾಯ

## ಜೀವನ : ಇಣುಕು ನೋಟ

ಭಾರತೀಯ ಜನಸಂಘದ ಅಧ್ಯಕ್ಷರಾದ ಪಂ॥ ದೀನದಯಾಳ ಉಪಾಧ್ಯಾಯರ ಮೃತ ಶರೀರವು ೧೯೬೮ರ ಫೆಬ್ರುವರಿ ೧೧ ರಂದು ಮೊಘಲಸರಾಯ ಸ್ಟೇಶನ್ನಿನ ಯಾರ್ಡನಲ್ಲಿ ಬಿದ್ದುಕೊಂಡಿದ್ದು ಕಾಣಿಸಿತು. ಈ ಒಳಸಂಚಿನ ಘಟನೆಯ ರಹಸ್ಯವು ಈವರೆಗೂ ಪತ್ತೆಯಾಗದೆ ಉಳಿದಿದೆ. ಮುಂದಿನ ದಿನಗಳಲ್ಲಿ ಇದರ ರಹಸ್ಯ ಪ್ರಕಟವಾಗಬಹುದು. ರಹಸ್ಯವು ಏನೇ ಇರಲಿ. ಭಾರತೀಯ ಪ್ರಜಾಪ್ರಭುತ್ವದ ರಾಜಕೀಯ ಕ್ಷಿತಿಜದಲ್ಲಿ ವಿಚಾರ, ಕಾರ್ಯ ಮತ್ತು ಪ್ರಗತಿಯ ಮಹಾನ್ ಆಸೆಗಳನ್ನು ಹೊತ್ತುಕೊಂಡು ಹೊರಹೊಮ್ಮಿ ಎದುರಿಗೆ ಬರತೊಡಗಿದ್ದ, ಮತ್ತು ಅತಿ ಪ್ರಾಚೀನ ಜೀವನ ದರ್ಶನದ ಆಧಾರದ ಮೇಲೆ ಕಾಲಕ್ಕೆ ಅನುಗುಣವಾದ ಹೊಸ ವ್ಯವಸ್ಥೆಗಳು, ಮೌಲಿಕವಾದ ಚಿಂತನೆಗಳು ಮತ್ತು ದಾರ್ಶನಿಕ ದೃಷ್ಟಿಕೋನದಿಂದ ಪರಿಪೂರ್ಣವಾದ ವ್ಯಾವಹಾರಿಕ ವ್ಯಾಖ್ಯೆಗಳನ್ನು ಎದುರಿಗಿಡುತ್ತಿದ್ದ ಅತ್ಯಂತ ದಿವ್ಯ ಜೀವನವೊಂದು ಇದ್ದಕ್ಕಿದ್ದಂತೆ ಕಣ್ಮರೆಯಾಯಿತು. ದೇಶದ ಗೌರವಶಾಲೀ ಅತೀತದಿಂದ ಭವ್ಯ ಭವಿಷ್ಯಕ್ಕೆ ವರ್ತಮಾನವನ್ನು ಜೋಡಿಸುವ ಮಹಾನ್ ಶಿಲ್ಪಿ ಚಿರನಿದ್ರೆಯಲ್ಲಿ ಲೀನನಾದರು. ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲ ಕ್ಷೇತ್ರಗಳಲ್ಲಿನ ಜನಸಾಮಾನ್ಯರ ಸುಖದುಃಖಗಳಲ್ಲಿ ಬೆರೆಯುತ್ತ ಮುಂದಾಳುತನದ ಸೂತ್ರವನ್ನು ಹಿಡಿದ ಮಹಾನ್ ಧುರೀಣ ದಿವಂಗತನಾದ. ಸಮಸ್ಯೆಗಳಿಂದ ತುಂಬಿದ ದೇಶದಲ್ಲಿ ಎಲ್ಲ ಬಗೆಯ ಪರಿಹಾರ ಹುಡುಕಬಲ್ಲ ವಿಶ್ವಾಸ ತೋರಿಸುವ ಪ್ರಕಾಶದ ಪುಂಜವೊಂದು ಆರಿಹೋಯಿತು. ಸರಳ ವ್ಯವಹಾರ, ಸಾದಾ ಜೀವನ, ಉಚ್ಚ ವಿಚಾರ, ಉಜ್ವಲ ಅಂತಃಕರಣ ಮತ್ತು ಕರ್ಮಠತೆಯ ಮೂರ್ತಿ ಒಮ್ಮೆಲೇ ನಾಶವಾಗಿ ಹೋಯಿತು. ಆದ್ದರಿಂದ ಜನಸಂಘದ ಈಗಿನ ಅಧ್ಯಕ್ಷ ಪಂ॥ ಅಟಲ್ ಬಿಹಾರಿ ವಾಜಪೇಯಿ ಹೇಳಿದ್ದು: “ಸೂರ್ಯ ಅಸ್ತಂಗತನಾದ, ಈಗ ನಾವು ನಕ್ಷತ್ರಗಳ ಬೆಳಕಿನಲ್ಲಿಯೇ ದಾರಿಯನ್ನು ಹುಡುಕಬೇಕಾಗುವುದು.” ನಿಸ್ಸಂದೇಹವಾಗಿ ಪಂ॥ ದೀನ್ ದಯಾಳರು ನಮ್ರರೂ ಸರಳರೂ ಆಗಿದ್ದರಿಂದ, ಅವರ ದೊಡ್ಡಸ್ತಿಕೆಯನ್ನು ಅರಿತುಕೊಳ್ಳುವುದೂ ಕಷ್ಟವಾಗಿತ್ತು. ಅವರ ಬಳಿಯ ಪ್ರತಿಯೊಂದು ವಸ್ತುವೂ ಧ್ಯೇಯಕ್ಕೆ ಸಮರ್ಪಿತವಾಗಿತ್ತು.

ಪಂ॥ ದೀನ್ ದಯಾಳ ಉಪಾಧ್ಯಾಯರು ಜನಿಸಿದ್ದು ೧೯೩೩ರ ಆಶ್ವಯುಜ ಮಾಸ ಕೃಷ್ಣಪಕ್ಷದ ತ್ರಯೋದಶಿಯಂದು, ಅಂದರೆ ೨೫ ಸೆಪ್ಟೆಂಬರ್ ೧೯೧೬ ರಂದು. ಅವರ ಅಜ್ಜ ಪಂ॥ ಚುನ್ನಿಲಾಲ ಶುಕ್ಲ ಜಯಪುರ ಅಜ್ಮೇರ್ ರೇಲ್ವೆ ಲೈನ್ ಬದಿ ಇದ್ದ ಧನಕಿಯಾ ಗ್ರಾಮದಲ್ಲಿ ಸ್ಟೇಶನ್ ಮಾಸ್ತರರಾಗಿದ್ದರು. ಪಂ॥ ದೀನದಯಾಳರು ಹುಟ್ಟಿದ್ದು ಇದೇ ಗ್ರಾಮದ ಅಜ್ಜನ ಮನೆಯಲ್ಲಿ. ಅವರ ತಂದೆಯ ಹೆಸರು ಶ್ರೀಭಗವತೀ ಪ್ರಸಾದ ಉಪಾಧ್ಯಾಯ ಮತ್ತು ಅವರು ಉತ್ತರ ಪ್ರದೇಶದ ಜಲೇಸರ ರೋಡ್‌ನಲ್ಲಿ ರೇಲ್ವೆ ಸ್ಟೇಶನ್ ಮಾಸ್ತರ್ ಆಗಿದ್ದರು. ಇವರ ಪಿತಾಮಹ ಪಂ॥ ಹರಿರಾಮ ಶಾಸ್ತ್ರಿಯವರು ಜ್ಯೋತಿಷಶಾಸ್ತ್ರದಲ್ಲಿ ತಮ್ಮ ಕಾಲದ ಅತಿ ಪ್ರಸಿದ್ಧ ವಿದ್ವಾಂಸರೆಂದು ಪರಿಗಣಿತರಾಗಿದ್ದರು. ಪಂ॥ ಹರಿರಾಮ ಶಾಸ್ತ್ರಿಯವರು ನಿಧನರಾದಾಗ ಆಗ್ರಾ ಮತ್ತು ಮಥುರಾಗಳಲ್ಲಿ ಅವರ ಗೌರವಾರ್ಥ ಶೋಕಾಚರಣೆ ನಡೆದಿತ್ತು ಎಂದು ತಿಳಿದುಬರುತ್ತದೆ.

ದೀನ್ ದಯಾಳರೂ ಸುಮಾರು ಏಳು ವರ್ಷ ವಯಸ್ಸಿನ ಎಳೆಯರಾಗಿದ್ದಾಗಲೇ, ಅವರ ತಂದೆ–ತಾಯಿ ನಿಧನರಾದರು. ಅನಂತರದಲ್ಲಿ ಅವರ ಪಾಲನೆ – ಪೋಷಣೆಗಳೆಲ್ಲ ಅವರ ಮಾವ ರಾಧಾರಮಣ ಶುಕ್ಲ ಅವರ ಮನೆಯಲ್ಲಿಯೇ ಆಯಿತು. ಸಂಕಟಗಳು ಹಾಗೂ ಪ್ರತಿಕೂಲ ಪರಿಸ್ಥಿತಿಯ ಜೊತೆ ಸೆಣಸಾಡುವ ಕ್ರಮ ಈ ರೀತಿ ಅವರ ಬಾಲ್ಯಕಾಲದಿಂದಲೇ ಪ್ರಾರಂಭವಾಯಿತು.

ಚಿಕ್ಕಂದಿನಲ್ಲಿಯೇ ತಂದೆ–ತಾಯಿಗಳ ಆಸರೆಯನ್ನು ಕಳೆದುಕೊಂಡ ದುಃಖ ಸಂಪೂರ್ಣ ಜೀವನವನ್ನೇ ಜರ್ಜರಿತಗೊಳಿಸಲು ಸಾಕಾಗಿತ್ತು. ದೌರ್ಭಾಗ್ಯದ ಇಂಥ ಆಘಾತಗಳನ್ನು ಸಹಿಸಿಕೊಂಡು ಕೆಲವರಷ್ಟೇ ಮೇಲೆ ಬರಬಲ್ಲರು. ಕೋಮಲವಾದ ವಯಸ್ಸಿನಲ್ಲಿ ಸ್ವಾವಲಂಬನೆ ಹಾಗೂ ಕಷ್ಟ ಸಹಿಸುವ ಪರೀಕ್ಷೆಯು ನಿಸ್ಸಂದೇಹವಾಗಿ ಕಠೋರತೆಯೆಂದೇ ಪರಿಗಣಿತವಾಗುತ್ತದೆ. ಚಿಕ್ಕ ಹುಡುಗನು ಪ್ರೀತಿ–ವಾತ್ಸಲ್ಯಗಳ ಬದಲಿಗೆ ಕೆನ್ನೆಗೆ ಏಟು ತಿನ್ನುತ್ತ, ಏಕಾಕಿಯಾಗಿ ಬಿಕ್ಕುತ್ತ ಕಣ್ಣೀರು ನುಂಗುತ್ತ ಮುಷ್ಟಿಯಲ್ಲಿ ದೌರ್ಭಾಗ್ಯವನ್ನು ಹಿಡಿದಿಡುವ ಪ್ರಯತ್ನ ಮಾಡುತ್ತಿದ್ದರೆ, ಇದು ಬಾಲಕನ ಬಗೆಗಿನ ಕಠೋರತೆಯೆಂದೇ ಭಾವಿಸಬೇಕಾಗುತ್ತದೆ. ನಿಜವಾಗಿ ತನ್ನ ಬಗೆಗಿನ ಕಠೋರತೆಯನ್ನು ಸಹಿಸುವ ಮತ್ತು ಕೆಲಸದಲ್ಲಿ ಗಮನವನ್ನು ಏಕಾಗ್ರಗೊಳಿಸುವ ಮಂತ್ರವನ್ನು ಪಂ॥ ದೀನ್ ದಯಾಳ ಬಾಲ್ಯಕಾಲದಿಂದಲೇ ಸ್ವೀಕರಿಸಿದರು. ವಿದ್ಯಾರ್ಜನೆಯ ಮೆಟ್ಟಿಲುಗಳನ್ನೂ ಅವರು ಯಶಸ್ವಿಯಾಗಿ ಏರುತ್ತ ಹೋದರು ಮತ್ತು ಅವರು ಅಜ್ಮೇರ್ ಬೋರ್ಡಿನ ಮೆಟ್ರಿಕ್ ಪರೀಕ್ಷೆಯಲ್ಲಿ ಸೀಕರ್‌ನ ಕಲ್ಯಾಣ ಹೈಸ್ಕೂಲಿನಿಂದ ಉತ್ತೀರ್ಣರಾದಾಗ ಅವರಿಗೆ ಬಂಗಾರದ ಪದಕ ದೊರೆಯಿತು. ಅವರು ಇಡೀ ಬೋರ್ಡಿಗೇ ಪ್ರಪ್ರಥಮರಾಗಿ ಪಾಸಾದರು. ಮನಸ್ಸು–ಬುದ್ಧಿಗಳನ್ನು ಏಕಾಗ್ರತೆಯೊಂದಿಗೆ ಕೈಗೊಂಡ ಕಾರ್ಯದಲ್ಲಿ ತೊಡಗಿಸಿಕೊಂಡರೆ



ಯಾವ ಅಡ್ಡಿಯೂ ನಿಲ್ಲಲಾರದು. ಗೆಲ್ಲಲಾರದ ಯಾವ ಪರೀಕ್ಷೆಯೂ ಇರಲಾರದು. ಇದೇ ಕ್ರಮ ಮುಂದುವರಿಯಿತು. ಎರಡು ವರ್ಷಗಳ ಅನಂತರ ಅವರು ಪಿಲಾನಿಯಲ್ಲಿ (ರಾಜಸ್ಥಾನ) ಇಂಟರ್ ಪರೀಕ್ಷೆಯಲ್ಲಿ ಮೊದಲ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅವರು ಬಿ.ಎ. ಪರೀಕ್ಷೆಯನ್ನು ಕೂಡ ಕಾನ್ಪುರದ ಸನಾತನ ಧರ್ಮ ಕಾಲೇಜ್‌ನಿಂದ ಮೊದಲ ಶ್ರೇಣಿಯಲ್ಲಿ ಪಾಸಾದರು.

ಇದೇ ಸಮಯದಲ್ಲಿಯೇ ಕಾನ್ಪುರದಲ್ಲಿ ೧೯೩೭ ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದೊಡನೆ ಅವರ ಸಂಪರ್ಕ ಪ್ರಾರಂಭವಾಯಿತು. ಉತ್ತರ ಪ್ರದೇಶದಲ್ಲಿ ಸಂಘದ ಕಾರ್ಯಗಳ ಅಡಿಗಲ್ಲು ಇಟ್ಟ ಮಾನ್ಯ ಭಾವೂರಾವ್ ದೇವರಸ್ ಅವರ ಪರಿಚಯವಾಯಿತು. ಅದು ಅವರಿಗೆ ರಾಷ್ಟ್ರಕ್ಕಾಗಿ ಸಮರ್ಪಿತ ಜೀವನ ನಡೆಸುವ ವ್ರತವನ್ನು ಸ್ವೀಕರಿಸುವ ಶುಭಕ್ಷಣವಾಯಿತು. ಅವರ ಬುದ್ಧಿಶಕ್ತಿಗೊಂದು ಗುರಿ ದೊರೆಯಿತು ಮತ್ತು ಅವರು ತಮ್ಮ ಸಾಮರ್ಥ್ಯವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯದಲ್ಲಿ ತೊಡಗಿಸಿದರು.

ಕಾನ್ಪುರದ ಸನಾತನ ಧರ್ಮ ಕಾಲೇಜಿನಿಂದ ಬಿ.ಎ. ಪರೀಕ್ಷೆ ಉತ್ತೀರ್ಣರಾದ ಮೇಲೆ ಅವರು ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಮಾಡಲು ಆಗ್ರಾದ ಸೇಂಟ್ ಜಾನ್ ಕಾಲೇಜಿಗೆ ಸೇರಿದರು. ಮೊದಲ ವರ್ಷ ಅವರು ಪಾಸಾದರು. ಆದರೆ ಎರಡನೆಯ ವರ್ಷ ಪರೀಕ್ಷೆಯಲ್ಲಿ ಕೂರಲಿಲ್ಲ. ಈ ಸಮಯದಲ್ಲಿ ಅವರು ತಮ್ಮ ಸಂಬಂಧಿಯಾದ ಸೋದರಿಯೊಡನೆ ವಾಸವಾಗಿದ್ದರು. ಅವಳ ಆರೋಗ್ಯ ಕೆಟ್ಟಿತ್ತು. ಅವಳ ಸೇವೆ–ಶುಶ್ರೂಷೆಗಾಗಿ ಅವಳನ್ನು ಬೆಟ್ಟದ ಮೇಲೆ ನಿಸರ್ಗ ಚಿಕಿತ್ಸೆಗಾಗಿ ಕರೆದೊಯ್ಯಬೇಕಾಯಿತು. ಈ ಕಾರಣದಿಂದ ಅವರು ಎಂ.ಎ. ಎರಡನೆಯ ವರ್ಷದ ಅಧ್ಯಯನವನ್ನು ನಿಲ್ಲಿಸಬೇಕಾಯಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ೧೯೪೨ರಲ್ಲಿ ಲಖೀಮ್‌ಪುರ್ ಜಿಲ್ಲೆಯಲ್ಲಿ ಅವರು ನೇಮಕಗೊಂಡರು. ಶಿಕ್ಷಣ ಕಾರ್ಯದಲ್ಲಿ ಸಹಕಾರ ನೀಡಲೆಂದು ಅವರು ಆಗಾಗ ಅಲ್ಲಿನ ಒಂದು ಹೈಸ್ಕೂಲಿನಲ್ಲಿ ನಿಃಶುಲ್ಕ ಅಧ್ಯಾಪನೆಯ ಕಾರ್ಯವನ್ನು ಮಾಡುತ್ತಿದ್ದರು. ಅವರ ಅದ್ಭುತವಾದ ಪ್ರತಿಭೆ, ಉತ್ತಮ ಚಾರಿತ್ರ್ಯ–ವ್ಯವಹಾರ ಕೌಶಲದಿಂದ ಪ್ರಭಾವಿತರಾದ ಹೈಸ್ಕೂಲಿನ ಆಡಳಿತ ಮಂಡಳಿಯವರು ಇವರಿಗೆ ಮುಖ್ಯಾಧ್ಯಾಪಕ ಸ್ಥಾನವನ್ನು ಕೊಡಲು ಮುಂದೆ ಬಂದರು. ಆದರೆ ಶ್ರೀ ದೀನ್ ದಯಾಳರು ಒಪ್ಪಲಿಲ್ಲ. ಮೂರು ವರ್ಷಗಳ ಕಾರ್ಯಾವಧಿಯಲ್ಲಿಯೇ ಅವರು ಉತ್ತರ ಪ್ರದೇಶದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಪ್ರಾಂತ ಪ್ರಚಾರಕರಾದರು. ೧೯೫೧ ರಲ್ಲಿ ಜನಸಂಘದ ನಿರ್ಮಾಣ ಆಗುವವರೆಗೆ ಅವರು ಅದೇ ಕ್ಷೇತ್ರದಲ್ಲಿ ಅದೇ ಜವಾಬ್ದಾರಿ ಹೊತ್ತು ಕೆಲಸ ನಿರ್ವಹಿಸಿದರು.

ಈ ಮಧ್ಯೆ ಪಂ॥ ದೀನ್ ದಯಾಳರು ಕೇವಲ ಸಂಘದ ಶಾಖೆಗಳ ವಿಸ್ತಾರದ ಸಂಘಟನೆಯ ಕೆಲಸ ಮಾಡಿದ್ದಷ್ಟೇ ಅಲ್ಲ, ಸಂಘದ ಮೇಲೆ ನಿಷೇಧ ಹೇರಿದಾಗ, ಆ ಕಾಲದಲ್ಲಿ ಪತ್ರಿಕೆ/ಪುಸ್ತಕ ಪ್ರಕಾಶನದ ಸಾಹಿತ್ಯಕ ಕೆಲಸವನ್ನು ಯಶಸ್ವಿಯಾಗಿ ಮಾಡಿದರು. ಸಮ್ರಾಟ ಚಂದ್ರಗುಪ್ತ, ಜಗದ್ಗುರು ಶ್ರೀ ಶಂಕರಾಚಾರ್ಯ ಎಂಬ ಎರಡು ಪುಸ್ತಕಗಳನ್ನು ಅವರು ಬರೆದರು. ಇದಲ್ಲದೆ ರಾಷ್ಟ್ರಧರ್ಮ (ಮಾಸಿಕ) ಹಾಗೂ ಪಾಂಚಜನ್ಯ (ಸಾಪ್ತಾಹಿಕ)ಗಳ ಸಂಪಾದಕರಾಗಿಯೂ ಕೆಲಸ ಮಾಡಿದರು. ಲಖನೌದಲ್ಲಿ ರಾಷ್ಟ್ರಧರ್ಮ ಪ್ರಕಾಶನ ಲಿಮಿಟೆಡ್‌ನ ಸಂಸ್ಥಾಪಕರೂ ಆಗಿದ್ದರು.

ಭಾರತದ ರಾಜಕೀಯದಲ್ಲಿ ಕಾಂಗ್ರೆಸ್‌ನ ರಾಷ್ಟ್ರಘಾತಕ ಹಾಗೂ ದೂರದರ್ಶಿತ್ವವಿಲ್ಲದ ನೀತಿಯ ಪರಿಣಾಮವಾಗಿ ಪಾಕಿಸ್ತಾನದ ನಿರ್ಮಾಣವಾದ ಅನಂತರ ಕಾಂಗ್ರೆಸ್‌ನಲ್ಲಿ ಅಧಿಕಾರ ರಾಜಕಾರಣದ ಗಡಿಬಿಡಿ ಪ್ರಾರಂಭವಾಯಿತು. ದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಎಲ್ಲ ಕ್ಷೇತ್ರಗಳಲ್ಲಿಯೂ ಪತನದ ಪರಿಣಾಮ ಕಾಣಿಸಿಕೊಳ್ಳತೊಡಗಿತು. ಇಂಥ ಸಂದರ್ಭದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಹೊಸ ನಾಯಕತ್ವದ ಆವಶ್ಯಕತೆ ಉಂಟಾಯಿತು. ಈ ಮಹತ್ವದ ಆವಶ್ಯಕತೆಯನ್ನು ಪೂರ್ಣಗೊಳಿಸಲು ೧೯೫೧ರಲ್ಲಿ ಡಾ॥ ಶ್ಯಾಮಾಪ್ರಸಾದ ಮುಖರ್ಜಿಯವರ ನೇತೃತ್ವದಲ್ಲಿ ಅಖಿಲ ಭಾರತೀಯ ಜನಸಂಘದ ನಿರ್ಮಾಣದ ವಿಚಾರ ನಡೆದಿತ್ತು. ಆಗ ಪಂ॥ ದೀನ್ ದಯಾಳ್ ಉಪಾಧ್ಯಾಯರು ೧೯೫೧ರ ಸೆಪ್ಟೆಂಬರ್ ೨೧ ರಂದು ಲಖನೌದಲ್ಲಿ ಪ್ರಾದೇಶಿಕ ಸಮ್ಮೇಳ ಕರೆದು ಪ್ರದೇಶ ಜನಸಂಘವನ್ನು ಸ್ಥಾಪಿಸಿದರು. ಜನಸಂಘದ ಪ್ರಥಮ ಅಖಿಲ ಭಾರತೀಯ ಅಧಿವೇಶನವು ೧೯೫೨ರಲ್ಲಿ ಕಾನ್ಪುರದಲ್ಲಿ ಏರ್ಪಾಡಾಯಿತು. ಪಂ॥ ದೀನ್ ದಯಾಳರ ಸಂಘಟನಾ ಕೌಶಲದಿಂದ ಜನಸಂಘದ ಈ ಮೊದಲ ಅಧಿವೇಶನವೆ ಅತ್ಯಂತ ಯಶಸ್ವಿಯಾಯಿತು. ಇದೇ ಅಧಿವೇಶನದಲ್ಲಿ ಪಂ॥ ದೀನ್ ದಯಾಳ್ ಉಪಾಧ್ಯಾಯರಿಗೆ ಅಖಿಲ ಭಾರತೀಯ ಪ್ರಧಾನ ಕಾರ್ಯದರ್ಶಿಯ ಹುದ್ದೆಯನ್ನು ವಹಿಸಲಾಯಿತು. ಅದನ್ನು ಅವರು ಜನಸಂಘದ ೧೯೬೭ರ ಕಲ್ಲಿಕೋಟೆ ಅಧಿವೇಶನದವರೆಗೆ ನಿರ್ವಹಿಸಿದರು. ಕಾನ್ಪುರದಿಂದ ಕಲ್ಲಿಕೋಟೆಯವರೆಗೆ ಜನಸಂಘದ ಅಗ್ರಸ್ಥಾನದಲ್ಲಿ ಡಾ॥ ಶ್ಯಾಮಾಪ್ರಸಾದ ಮುಖರ್ಜಿ, ಆಚಾರ್ಯ ರಘುವೀರರಂತಹ ಅಖಿಲ ಭಾರತೀಯ ವಿದ್ವಾಂಸರು ವಿರಾಜಮಾನರಾದರು. ಆದರೆ ದೌರ್ಭಾಗ್ಯದಿಂದ ಅತ್ಯಲ್ಪ ಕಾಲದಲ್ಲಿಯೇ ಅವರನ್ನು ಕಳೆದುಕೊಳ್ಳಬೇಕಾಯಿತು. ಈ ಶೂನ್ಯದ ಸಮಯದಲ್ಲಿ ಆಸೆ ಮತ್ತು ವಿಶ್ವಾಸದ ಜ್ಯೋತಿಸ್ತಂಭವಾಗಿ ನಿಂತು ಮಾರ್ಗದರ್ಶನದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದವರು ಪಂ॥ ದೀನ್ ದಯಾಳ್ ಉಪಾಧ್ಯಾಯರು ಮಾತ್ರ. ಕಾಶ್ಮೀರದ ಹೋರಾಟವಾಗಲಿ, ಅಥವಾ ರೈತ ಕಾರ್ಮಿಕರ ಮೋರ್ಚಾ ಆಗಲಿ, ಪಂಚವಾರ್ಷಿಕ ಯೋಜನೆಯಾಗಲಿ, ಅಥವಾ ಸಾಮಾಜಿಕ ತೊಡಕಾಗಲಿ



ಎಲ್ಲ ಸ್ಥಾನಗಳಲ್ಲಿ ಎಲ್ಲ ಕಾರ್ಯಗಳಲ್ಲಿ ಪಂ॥ ದೀನ್ ದಯಾಳರ ಮಾರ್ಗದರ್ಶನ ದೇಶಕ್ಕೆ ದೊರೆಯಿತು. ದೇಶದ ಎಲ್ಲ ಮಹತ್ವದ ಕ್ಷೇತ್ರಗಳ ಸಮಸ್ಯೆಗಳ ನಿವಾರಣೆಗೆ ಪಂ॥ ದೀನ್ ದಯಾಳ್ ಉಪಾಧ್ಯಾಯರು ಗಂಭೀರ, ಸಾರವತ್ತಾದ ವಿಚಾರ ಮಂಥನ ಮಾಡುತ್ತಿದ್ದರು. ಈ ಎಲ್ಲವುಗಳಲ್ಲಿಯೂ ಅವರದೇ ಆದ ವಿಶೇಷತೆ ಇರುತ್ತಿತ್ತು. ಅವರು ತಾತ್ಕಾಲಿಕವಾದ ಹಾಗೂ ಚಿಕ್ಕದಾದ ವಿಷಯಕ್ಕೂ ಶಾಶ್ವತವಾದ ಸೈದ್ಧಾಂತಿಕ ರೂಪಕೊಟ್ಟು ಬರೆಯುತ್ತಿದ್ದರು, ಮಾತನಾಡುತ್ತಿದ್ದರು.

# ೧. ಅರ್ಥ ಚಿಂತನೆ

ಮನೆ–ಸಂಸಾರಗಳ ಚಕ್ರದಲ್ಲಿ ಸಿಲುಕಿದ, ಯಾವುದೇ ಸಾಮಾನ್ಯ ವ್ಯಕ್ತಿಯೊಡನೆ, ನೀವು ದೇಶ, ಧರ್ಮ, ಸಾಹಿತ್ಯ ಮುಂತಾದವುಗಳನ್ನು ಕುರಿತು ಚರ್ಚೆ ಮಾಡಿದರೆ, ಅವನ ಬಾಯಿಂದ ಅನಾಯಾಸವಾಗಿ ಈ ನಾಣ್ಣುಡಿ ಹೊಮ್ಮುತ್ತದೆ:

ಮರೆತು ಹೋಯ್ತು ಪ್ರೀತಿ–ಹರೆಯ, ಮರೆತು ಹೋಯ್ತು ಅಂದಣ
ನೆನಪು ಉಳಿದ ಮೂರು ವಸ್ತು, ಸೌದೆ, ಎಣ್ಣೆ, ಲವಣ.

ಇದು ಇವತ್ತಿನ ಸಮಾಜದ ನಿಜವಾದ ಚಿತ್ರಣ. ಸಾಮಾನ್ಯ ಜನಸಮುದಾಯಕ್ಕೆ ಉಪ್ಪು, ಎಣ್ಣೆ, ಸೌದೆಯದೇ ಚಿಂತೆ. ಅದರಲ್ಲಿಯೇ ಬೆಳಗು–ಸಂಜೆಯಾಗುತ್ತ, ದಿವಸ, ತಿಂಗಳು ಮತ್ತು ವರ್ಷ ಕಳೆಯುತ್ತ, ತಮ್ಮ ಜೀವನದ ಗಳಿಗೆಗಳು ಕಳೆದೇ ಹೋಗುತ್ತವೆ. ಜೀವನದ ಉಳಿದ ಪ್ರಶ್ನೆಗಳು ಅವರ ಎದುರಿಗೆ ಎಂದೂ ಪ್ರಮುಖ ರೂಪ ತಾಳಿ ಬರುವುದೇ ಇಲ್ಲ. ಹಾಗೊಮ್ಮೆ ಬಂದರೂ ಅವನು ಅದಕ್ಕೆ ಎರಡನೆಯ ಸ್ಥಾನ ಕೊಡುತ್ತಾರೆ. 'ಆಧಿ ಪೊಟೊಬಾ, ಮಗ್ ವಿಠೋಬಾ' ಎಂಬ ಮರಾಠಿ ಉಕ್ತಿಯಂತೆ ಮೊದಲು ಭೋಜನ, ಅನಂತರ ಭಜನೆಯ ಚಿಂತೆ ಮಾಡುತ್ತಾರೆ. ಅಲ್ಲದೆ, ಭೋಜನದ ಚಿಂತೆಯಲ್ಲಿಯೇ ಎಲ್ಲ ಸಮಯ ಹಾಗೂ ಶಕ್ತಿ ವಿನಿಯೋಗವಾದರೆ, ಭಜನೆಗೆ ಅವಕಾಶವಾದರೂ ಎಲ್ಲಿ ಉಳಿಯುತ್ತದೆ?

ಸಾಮಾನ್ಯ ಜನರಿಗಷ್ಟೇ ಅಲ್ಲ, ಸಮಾಜದ ಮುಂದಾಳುಗಳು ಹಾಗೂ ವೈಚಾರಿಕರಿಗೂ ಕೂಡ ಚಿಂತನೆಯ ನಿಜವಾದ ಮುಖ್ಯ ವಿಚಾರ ಇದೇ ಆಗಿದೆ. ೧೯೪೭ರ ಆಗಸ್ಟ್ ೧೫ರ ವರೆಗೆ ದೇಶದ ಎಲ್ಲ ಚಳವಳಿಗಳು ಹಾಗೂ ಪ್ರಯತ್ನಗಳ ಉದ್ದೇಶವು ಸ್ವಾತಂತ್ರ್ಯವನ್ನು ಪಡೆಯುವುದೇ ಆಗಿತ್ತು. ಸ್ವದೇಶ, ಖಾದಿ ಮತ್ತು ಗ್ರಾಮೋದ್ಯೋಗ, ಉಪ್ಪಿನ ಹಾಗೂ ಅರಣ್ಯ ಸತ್ಯಾಗ್ರಹ, ಕರಬಂದಿ ಮತ್ತು ಕಂದಾಯ ನಿರಾಕರಣೆಯ ಸತ್ಯಾಗ್ರಹದಂತಹ ಚಳವಳಿಗಳು, ತಿಲಕ ಫಂಡ, ಅಥವಾ ಪೈಸಾ ಫಂಡ ಆಧಾರದ ಮೇಲೆ ಸ್ಥಾಪಿತವಾದ ಉದ್ಯೋಗಗಳು, ಬಟ್ಟೆ ಹಾಗೂ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ, ಸಂರಕ್ಷಣೆ ಹಾಗೂ ಅಪಮೌಲ್ಯ ಮುಂತಾದ ಪ್ರಶ್ನೆಗಳನ್ನೆಲ್ಲ ನೋಡುವ ನಮ್ಮ ದೃಷ್ಟಿಕೋನವು ಆರ್ಥಿಕವಾಗುವುದರ ಬದಲು ರಾಜಕೀಯವಾಗಿತ್ತು. ಇವುಗಳ ನೆರವಿನಿಂದ ನಾವು ಸ್ವಾತಂತ್ರ್ಯ ಸಂಗ್ರಾಮಕ್ಕೆ ಶಕ್ತಿ ತುಂಬಲ ಬಯಸುತ್ತಿದ್ದೆವು. ಆದರೆ ಸ್ವಾತಂತ್ರ್ಯವನ್ನು ಪಡೆದ ಅನಂತರ ನಮ್ಮ ದೃಷ್ಟಿಕೋನದಲ್ಲಿ ವ್ಯತ್ಯಾಸ



ಉಂಟಾಗಿದೆ. ಈಗ ನಾವು ಪ್ರತಿಯೊಂದು ಪ್ರಶ್ನೆಯನ್ನೂ ಆರ್ಥಿಕ ದೃಷ್ಟಿಯಿಂದ ನೋಡುತ್ತಿದ್ದೇವೆ. ದೇಶದ ಆರ್ಥಿಕ ಸಮೃದ್ಧಿಯೇ ಈಗ ನಮ್ಮ ಗುರಿಯಾಗಿದೆ. ರಾಜಕೀಯ ಪಕ್ಷಗಳ ಕಾರ್ಯಕ್ರಮ ಹಾಗೂ ಆಡಳಿತದ ಯೋಜನೆಗಳನ್ನು ಇದೇ ಉದ್ದೇಶದಿಂದಲೇ ರೂಪಿಸಲಾಗುತ್ತಿದೆ. ನಮ್ಮ ಸಂಪೂರ್ಣ ಶಕ್ತಿಯು ಈ ಪ್ರಶ್ನೆಯ ಮೇಲೆಯೇ ಕೇಂದ್ರಿತವಾಗುತ್ತಿದೆ.

**ಸಾಧ್ಯ–ಸಾಧನ ವಿವೇಕ**

ಚಳವಳಿಯ ದೃಷ್ಟಿಯಿಂದ ಈ ಕೇಂದ್ರೀಕರಣದ ಪರವಾಗಿ ಯಾವುದೇ ತರ್ಕವನ್ನು ಮುಂದಿಡಬಹುದು. ಆದರೆ ಇದರಿಂದ ಮಾನವ ಜೀವನದ ವಾಸ್ತವಿಕತೆ, ಅದರ ಉದ್ದೇಶ ಮತ್ತು ಕಾರಣ ಹಾಗೂ ಉನ್ನತ ವಿಕಾಸದ ಎಲ್ಲೆಗಳು ಮುಂತಾದವುಗಳ ಸಂಬಂಧವಾಗಿ, ಒಂದು ಏಕಾಕಿಯಾದ ಹಾಗೂ ವಿಕೃತವಾದ ದೃಷ್ಟಿಕೋನದ ಪ್ರಸಾರವು ಈಗ ಬಹಳ ತೀವ್ರ ಗತಿಯೊಂದಿಗೆ ಆಗುತ್ತಿದೆ. ಸಾಧ್ಯ ಮತ್ತು ಸಾಧನದ ವಿವೇಕ ನಷ್ಟವಾಗುತ್ತಿದೆ. ಹಣಗಳಿಕೆ ಜೀವನದ ಅವಶ್ಯಕ ಆಧಾರವಷ್ಟೇ ಅಲ್ಲ, ಸಂಪೂರ್ಣ ಜೀವನವೇ ಆಗಿಬಿಟ್ಟಿದೆ. ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ, ಹಣವನ್ನು ಗಳಿಸಲು ನಾವು ನಮ್ಮ ಸೈನ್ಯವನ್ನೇ ಭಂಗಗೊಳಿಸಬೇಕು ಎಂಬಂತಹ ಸಲಹೆಗಳನ್ನೂ ನೀಡಲಾಗುತ್ತಿದೆ. ಸೈನ್ಯವಿಲ್ಲದೆ ನಾವು ನಮ್ಮ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳುವಂತಾದರೆ, ಅನಂತರ ನಾವು ಯಾರ ಆರ್ಥಿಕ ವಿಕಾಸವನ್ನು ಮಾಡೋಣ? ಪರಾಧೀನತೆಯು ಬಂಗಾರದ ಬೇಡಿಗಳೇ ನಮಗೆ ಸ್ವೀಕಾರಾರ್ಹವೆನಿಸುತ್ತವೆಯೇ? ಅಲ್ಲದೆ ಈ ಬಂಗಾರದ ಕೈಕೋಳಗಳು ಕಬ್ಬಿಣದ ಬೇಡಿಗಳಾಗಿ ಬದಲಾಗುವುದಿಲ್ಲವೆಂದು ಯಾರು ತಾನೆ ಹೇಳಬಲ್ಲರು?

ಮನುಷ್ಯನ ಜೀವನದ ಗುರಿ ಹಾಗೂ ಅದರಲ್ಲಿ ಸಂಪತ್ತಿನ ಸ್ಥಾನ ಈ ಎರಡೂ ನಿಶ್ಚಿತವಾಗಿಲ್ಲದ ಕಾರಣವಾಗಿ ನಾವು ಯಾವ ಮಾರ್ಗದಲ್ಲಿ ನಡೆದರೆ ಸಂಪತ್ತು ಹಾಗೂ ಸಮೃದ್ಧಿಯ ಉಪಭೋಗವನ್ನು ಮಾಡಬಲ್ಲೆವು ಎಂಬುದನ್ನೇ ಸರಿಯಾಗಿ ನಿರ್ಧಾರ ಮಾಡಲಾರದವರಾಗಿದ್ದೇವೆ. 'ಸಾಧ್ಯ'ದ ಬಗೆಗಿನ ಅರಿವಿಲ್ಲದೆ 'ಸಾಧನ'ದ ನಿಶ್ಚಯವಾಗುವುದಾದರೂ ಹೇಗೆ? ಮನುಷ್ಯನು ಕೇವಲ ಭೌತಿಕ ಅವಶ್ಯಕತೆಗಳ ಹಾಗೂ ಇಚ್ಛೆಗಳ ಮೊತ್ತವಲ್ಲ. ಬದಲಿಗೆ ಅವನು ಭೌತಿಕ ಶರೀರವನ್ನು ಧರಿಸಿರುವ ಒಂದು ಆಧ್ಯಾತ್ಮಿಕ ತತ್ವವಾಗಿದ್ದಾನೆಂದು ನಮ್ಮ ಪರಂಪರೆ ಮತ್ತು ಸಂಸ್ಕೃತಿಗಳು ನಮಗೆ ತಿಳಿಸುತ್ತವೆ. ಹಾಗಾಗಿ ಒಂದು ಮಂದಿರದ ಎಲ್ಲ ಪ್ರಕಾರಗಳನ್ನು ಕುರಿತು ಆಲೋಚನೆ ಮಾಡುವಾಗ ಕೂಡ, ಅದರ ಮಂದಿರತ್ವವು ಅದರಲ್ಲಿ ಪ್ರತಿಷ್ಠಾಪಿತವಾದ ಮೂರ್ತಿಯ ಕಾರಣದಿಂದ ಆಗಿದೆ. ಮೂರ್ತಿಯ ಶೃಂಗಾರ, ಧೂಪ, ದೀಪ, ನೈವೇದ್ಯ, ಅರ್ಚನೆ ಮುಂತಾದವುಗಳೆಲ್ಲ ಅದರಲ್ಲಿ ಆರೋಪಿತವಾದ

ದೈವತ್ವದ ಕಾರಣದಿಂದ ಆಗಿವೆ ಎಂಬ ಈ ನಿಜದ ಮರವೆ ನಮಗೆ ಆಗಬಾರದು. ಮಂದಿರದ ರಕ್ಷಣೆ ಹಾಗೂ ನಿರ್ಮಾಣದಲ್ಲಿ ಮೂರ್ತಿಯನ್ನೇ ಮರೆತರೆ ನಮ್ಮ ಇಡೀ ಪರಿಶ್ರಮ ವ್ಯರ್ಥವಾಗುತ್ತದೆ. ಆದರೆ ಪಶ್ಚಿಮದ ಅನುಕರಣೆ ಮಾಡಿ ನಾವು ನಮ್ಮ ಹಣದ ನೈತಿಕ ಮೌಲ್ಯಗಳ ಪ್ರತಿಷ್ಠಾಪನೆ ಮಾಡುತ್ತಿದ್ದೇವಲ್ಲ. ಅಲ್ಲಿ ಜೀವನದ ಈ ಸರ್ವಗ್ರಾಹಿ ಭಾವಕ್ಕೆ ಯಾವ ಜಾಗವೂ ಇಲ್ಲವಾಗಿದೆ. ಹೀಗಾಗಿ ಇಂದು ನಮ್ಮ ಮನಸ್ಸು ಮಾತು, ಹಾಗೂ ಕಾರ್ಯಗಳಲ್ಲಿ ಅಂತರ್ವಿರೋಧ ಹುಟ್ಟುತ್ತಿದೆ. ಅಂತರಂಗದ ಚೇತನ ಹಾಗೂ ಬಹಿರಂಗದ ಕರ್ಮ ಈ ಎರಡೂ ವಿರುದ್ಧ ದಿಕ್ಕುಗಳಲ್ಲಿ ಎಳೆದಾಡುತ್ತಿವೆ. ಈ ತಾಕಲಾಟದಿಂದಾಗಿ ನಮಗೆ ನಮ್ಮ ಸಂಪೂರ್ಣ ಶಕ್ತಿಯೊಂದಿಗೆ ಆರ್ಥಿಕ ಸಮೃದ್ಧಿಯ ಇವತ್ತಿನ ಯೋಜನೆಗಳನ್ನು ಪೂರ್ಣಗೊಳಿಸಲೂ ಕೂಡ ತೊಡಗಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾವು ಮಾಡುವುದೆಲ್ಲ ಅನ್ಯಮನಸ್ಕ ಭಾವದಿಂದ, ಮತ್ತು ನಮಗೆ ನಮ್ಮ ಪ್ರಯತ್ನವು ಸಫಲಗೊಳ್ಳುವಂತೆ ಕಾಣದಿದ್ದರೆ, ಮನಸ್ಸಿನಲ್ಲಿ ಏನೋ ಒಂದು ಬಗೆಯ ವಿಫಲತೆಯ ದಿಗಿಲು, ಆತ್ಮಜ್ಞಾನದ ಕೊರತೆ ಹಾಗೂ ಆತ್ಮವಿಶ್ವಾಸದ ಕೊರತೆಯ ಭಾವ ಹುಟ್ಟುತ್ತದೆ. ಈ ಭಾವವನ್ನು ನಾವು ಪ್ರಚಾರ ತಂತ್ರದಿಂದ, ವಾಸ್ತವಿಕತೆಯಿಂದ ಕಣ್ಣು ಮುಚ್ಚಿಕೊಂಡು, ನಮ್ಮ ವೈಫಲ್ಯಕ್ಕೆ ಇನ್ನೊಬ್ಬರನ್ನು ಗುರಿಯಾಗಿಸುತ್ತ, ಅವಾಸ್ತವಿಕ ಸಮಸ್ಯೆಗಳು ಹಾಗೂ ಸಂಕಟಗಳ ಭೂತವನ್ನು ನಿಲ್ಲಿಸಿ, ಪೊಳ್ಳು ಆದರ್ಶಗಳು ಮತ್ತು ಭವಿಷ್ಯದ ಬಹಳಷ್ಟು ಸ್ವರ್ಣಮಯ ಕಲ್ಪನೆಗಳಿಂದ ಹುಟ್ಟಿದ ಕಲ್ಪನಾತ್ಮಕ ಆದರ್ಶಗಳಿಂದ ಹತ್ತಿಕ್ಕುವ ಪ್ರಯತ್ನವನ್ನು ಮಾಡುತ್ತೇವೆ. ಪರಿಣಾಮವಾಗಿ ನಮ್ಮ ಮನಸ್ಸು ಬಹಳ ಉದ್ವಿಗ್ನಗೊಳ್ಳುತ್ತದೆ; ನಾವು ವಾಸ್ತವದ ನೆಲದಿಂದ ದೂರ ಸರಿದು ಹೋಗುತ್ತಿದ್ದೇವೆ. ಈ ಸಮಸ್ಯೆಯನ್ನು ಬಿಡಿಸಿದ ಹೊರತು ನಾವು ಮುಂದುವರಿಯಲಾರೆವು.

**ಪಶ್ಚಿಮದ ಅರ್ಥಶಾಸ್ತ್ರದ ಅನುಕೂಲತೆ**

ಬದುಕಿನ ವಿಭಿನ್ನ ಆದರ್ಶಗಳ ಕಾರಣವಷ್ಟೇ ಅಲ್ಲ, ದೇಶ ಮತ್ತು ಕಾಲದ ಭಿನ್ನ ಪರಿಸ್ಥಿತಿಗಳ ಕಾರಣದಿಂದಲೂ, ನಮ್ಮ ಆರ್ಥಿಕ ವಿಕಾಸದ ದಾರಿಯು ಪಶ್ಚಿಮಕ್ಕಿಂತ ಭಿನ್ನವಾಗಬೇಕು. ಆದರೆ ನಾವು ಮಾರ್ಷಲ್ ಮತ್ತು ಮಾರ್ಕ್ಸರ ಅತಿಯಾದ ಹಿಡಿತಕ್ಕೆ ಸಿಕ್ಕಿದ್ದೇವೆ. ಅವರು ವಿವೇಚನೆ ಮಾಡಿದ ಅರ್ಥಶಾಸ್ತ್ರದ ನಿಯಮಗಳನ್ನು ಶಾಶ್ವತವೆಂದು ಭಾವಿಸಿ ನಾವು ನಡೆಯುತ್ತಿದ್ದೇವೆ. ಆ ವ್ಯವಸ್ಥೆಗಳು ಸಾಪೇಕ್ಷವಾದವುಗಳು ಎಂಬುದನ್ನು ಅರಿತವರೂ ಕೂಡ, ಅದರ ಪರಿಧಿಯಿಂದ ಹೊರಬರಲಾಗುತ್ತಿಲ್ಲ. ಪಶ್ಚಿಮದ ಆರ್ಥಿಕ ಸಮೃದ್ಧಿಯು, ಅವರ ಹಣ ಸಂಪಾದನೆಯ ವಿಷಯದಲ್ಲಿ ಯಾವುದೇ ಬಗೆಯ ಆತಂಕವಿಲ್ಲದ ಶ್ರದ್ಧೆಯನ್ನು ನಮ್ಮ ಮನಸ್ಸಿನಲ್ಲಿ ಹುಟ್ಟಿಸಿಬಿಟ್ಟಿದೆ. ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರು ರಚಿಸಿದ ವಿವೇಚನಾತ್ಮಕ ಸಾಹಿತ್ಯದ



ಭಾರದಿಂದ ನಾವು ಸಹಜವಾಗಿಯೇ ಕುಗ್ಗಿಹೋಗುತ್ತೇವೆ. ನಾವು ಅದರಿಂದ ಮೇಲಕ್ಕೇಳಲಾರೆವು. ನಿಜ, ಈ ಅರ್ಥಶಾಸ್ತ್ರದಲ್ಲಿ, ದೇಶ–ಕಾಲ–ವ್ಯವಸ್ಥೆಯಿಂದ ನಿರಪೇಕ್ಷವಾದ, ಹಾಗೂ ಎಲ್ಲರಿಗೂ ಉಪಯುಕ್ತವೆಂದು ಸಿದ್ಧವಾಗಬಹುದಾದ, ಅನೇಕ ವಿವೇಚನೆಗಳೂ ಇರಬಹುದಾಗಿದೆ. ಆದರೆ ಖರೆ ಯಾವುದು, ಖೋಟಾ ಯಾವುದು ಎಂಬುದರ ಪರೀಕ್ಷೆಯನ್ನು ಸರಿಯಾದ ಪರೀಕ್ಷಕನೇ ಮಾಡಬಲ್ಲ. ನಮ್ಮ ಶಿಕ್ಷಣ ಮತ್ತು ಉಪದೇಶಗಳು ಇಂಥ ಪರೀಕ್ಷಕರನ್ನು ಸಿದ್ಧಗೊಳಿಸಲು ಸಾಧ್ಯವಾಗಿಲ್ಲ. ನಮ್ಮ ಅರ್ಥಶಾಸ್ತ್ರಜ್ಞರು ಪಶ್ಚಿಮದ ಅರ್ಥಶಾಸ್ತ್ರದಲ್ಲಿ ಪಾರಂಗತರಾಗಿರಬಹುದು, ಆದರೆ ಆ ಅರ್ಥಶಾಸ್ತ್ರದ ವಿಕಾಸಕ್ಕೆ ಯಾವುದೇ ಗಟ್ಟಿಯಾದ ಕೊಡುಗೆಯನ್ನು ಕೊಡಲಾರದವರಾಗಿದ್ದಾರೆ. ಯಾಕೆಂದರೆ ಭಾರತದ ಅರ್ಥವ್ಯವಸ್ಥೆಯು ಅವರ ದೃಷ್ಟಿಯಲ್ಲಿ ಅವರಿಗೆ ವಿಚಾರ ಹರಿಸುವಂತಹದಾಗಲಿ, ಮತ್ತು ಪ್ರಯೋಗ ಭೂಮಿಯಾಗಲಿ ಆಗಲು ಸಾಧ್ಯವಿಲ್ಲ. ಸ್ವತಂತ್ರವಾದ ಭಾರತೀಯ ಅರ್ಥಶಾಸ್ತ್ರದ ವಿಕಾಸದ ಅವಶ್ಯಕತೆಯನ್ನೂ ಅವರು ಅರಿತುಕೊಳ್ಳಲಿಲ್ಲ ಅಥವಾ ಅದರಲ್ಲಿ ತಾವು ಸ್ವಯಂ ಅಸಮರ್ಥರಾಗಿರುವುದನ್ನೂ ಅರಿತುಕೊಳ್ಳಲಿಲ್ಲ. ಗಾಂಧೀವಾದಿ ಅಥವಾ ಸರ್ವೋದಯವಾದಿ ವಿಚಾರಧಾರೆಯಲ್ಲಿ ಚರ್ಚಿತವಾದ ಅರ್ಥಶಾಸ್ತ್ರವು ಈ ಅವಶ್ಯಕತೆಯನ್ನು ಪೂರ್ಣ ಮಾಡಲಾರದು. ಅದು ಅನಿಶ್ಚಿತವಷ್ಟೇ ಅಲ್ಲ, ಸಾಂಪ್ರದಾಯಿಕ ಮತ್ತು ಚಳವಳಿಯ ಮಾಧ್ಯಮದ ರೂಪದಲ್ಲಿ ಜನತೆಯ ಎದುರು ಬಂದದ್ದಾಗಿದೆ. ಪಶ್ಚಿಮದ ಅರ್ಥವ್ಯವಸ್ಥೆಯ ಕೆಲವು ಕೆಡುಕುಗಳ ಕಡೆಗೆ ಅದು ಯಶಸ್ವಿಯಾಗಿ ನಮ್ಮ ಗಮನ ಸೆಳೆದಿದೆಯಾದರೂ, ಭಾರತದ ಭವಿಷ್ಯದ ವಿಧಾನವನ್ನು ರೂಪಿಸುವ ಸಾಮರ್ಥ್ಯವು ಅದರಲ್ಲಿ ಇಲ್ಲವಾಗಿದೆ.

**ಹೊಸ ಪರಿಭಾಷೆಗಳು**

ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರಲ್ಲಿ ಬಹಳಷ್ಟು ಜನರು ಅರೆವಿಕಸಿತ ಕ್ಷೇತ್ರಗಳ ಸಮಸ್ಯೆಗಳ ಮೇಲೆ ಹೊಸ ಬರೆಹವನ್ನು ರಚಿಸಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ಅನೇಕ ಏಜೆನ್ಸಿಗಳು ಮತ್ತು ಸಮಿತಿಗಳು ಕೂಡ ಈ ವಿಷಯದಲ್ಲಿ ಬಹಳಷ್ಟು ಕೆಲಸ ಮಾಡಿವೆ. ಅವರೆಲ್ಲರ ಬಗೆಗೆ ಕೃತಜ್ಞರಾಗುತ್ತಲೂ, ಅವರು ಮಾಡಿದ ರೋಗಪರೀಕ್ಷೆ ಮತ್ತು ಚಿಕಿತ್ಸೆಯ ಸಲಹೆ ಸರಿಯಿದೆಯೆಂದು ನಾವು ಹೇಳಲಾರೆವು. ಅವರು ಯಾವುದೇ ಸುಪ್ತ ಸ್ವಾರ್ಥದ ಪ್ರತಿನಿಧಿತ್ವವನ್ನು ವಹಿಸದಿದ್ದರೂ, ಅವರು ತಮ್ಮ ಪೂರ್ವಗ್ರಹಗಳಿಂದ ಹಾಗೂ ನಿಷ್ಠೆಗಳಿಂದ ಮುಕ್ತರಾಗಿ, ಸಂಪೂರ್ಣವಾಗಿ ವಸ್ತುನಿಷ್ಠ ವಿವೇಚನೆ ಮಾಡಬಲ್ಲರೆಂದು ಒಪ್ಪುವುದು ಕಠಿಣವೇ ಆಗಿದೆ ಮತ್ತು ನಮ್ಮ ಮಾನಸಿಕತೆಯ ಹಿನ್ನೆಲೆಯಲ್ಲಿ ನಮ್ಮ ಶ್ರದ್ಧೆಗಳ ಆಧಾರದ ಮೇಲೆ ವಿಚಾರ ಮಾಡುವ ಸಾಧ್ಯತೆಯಂತೂ ಅವರಿಗೆ ಅಸಾಧ್ಯ. ಆದ್ದರಿಂದ ಈ ಸಾಹಿತ್ಯದ ಉಪಯೋಗವನ್ನು

ಕೂಡ ನಾವು ಎಚ್ಚರಿಕೆಯಿಂದಲೇ ಮಾಡಬೇಕಾಗಿದೆ. ಪಶ್ಚಿಮದ ಪ್ರಬಲರಾಷ್ಟ್ರಗಳು ತಮ್ಮ ಹಿತದ ಸಂರಕ್ಷಣೆ ಮಾಡಿಕೊಳ್ಳಲು ಹೊಸ ಹೊಸ ಉಪಾಯ ಯೋಜನೆಗಳನ್ನು ಮಾಡುತ್ತಿದ್ದಾರೆ ಎಂಬುದನ್ನು ಕೂಡ ನಾವು ಮರೆಯಲು ಸಾಧ್ಯವಿಲ್ಲ. ವಸಾಹತುವಾದ ಹಾಗೂ ರಾಜಕೀಯ ಗುಲಾಮಗಿರಿಗಳು ಕಳೆದ ಯುಗದ ಸಂಗತಿಗಳಾಗುತ್ತಿದ್ದರೂ, ಆರ್ಥಿಕ ಮತ್ತು ವೈಚಾರಿಕ ಆಧಾರದ ಮೇಲೆ ದೇಶಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಗೂಢ ಉಪಾಯಗಳನ್ನು ಅನುಸರಿಸಲಾಗುತ್ತಿದೆ. ಪರಿಣಾಮವಾಗಿ ಶಬ್ದಗಳ ಪರಿಭಾಷೆಗಳು ಬದಲಾಗುತ್ತಿವೆ. ಬಂಡವಾಳ ತೊಡಗಿಸುವಿಕೆಯನ್ನು ಆರ್ಥಿಕ ನೆರವಿನ ಹೆಸರಿನಿಂದ ಕರೆಯಲು ಪ್ರಾರಂಭಿಸಲಾಗಿದೆಯಾದರೆ ಕೆಲವು ರಾಷ್ಟ್ರಗಳು ಅಂತಾರಾಷ್ಟ್ರೀಯ ಸಂಸ್ಥೆಗಳ ರಕ್ಷಣೆಯಲ್ಲಿ ತಮ್ಮ ಹೆಜ್ಜೆಗಳನ್ನಿಡುವುದು ಉಪಯುಕ್ತವೆಂದು ಭಾವಿಸಿವೆ. ಒಂದು ರೀತಿಯಲ್ಲಿ ಅದೂ ನಿಜವೇ. ಈ ರಾಷ್ಟ್ರಗಳು ಚಾಚಿರುವ ಪ್ರತಿಯೊಂದು ಸಹಾಯಹಸ್ತವನ್ನು ಅನುಮಾನದ ದೃಷ್ಟಿಯಿಂದ ನೋಡಿ ಕೊಡವಿಕೊಳ್ಳಲಾರೆವು. ಇಬ್ಬರ ಹಿತಕ್ಕೆ ಇದು ಪೂರಕವಾಗಿಯೂ ಇರಬಹುದು, ಮತ್ತು ಎಂದಾದರೊಮ್ಮೆ ಸಾರ್ವಭೌಮ ಪರಿಸ್ಥಿತಿಗಳು ಯಾವುದೋ ವಿಶೇಷ ಹೆಜ್ಜೆಗಾಗಿ ಅನಿವಾರ್ಯಗೊಳಿಸಬಹುದು. ಆದರೆ, ನಾವು ನಮ್ಮ ವ್ಯವಸ್ಥೆಯ ವಿಚಾರ–ವಿಮರ್ಶೆಯನ್ನು ಚೆನ್ನಾಗಿ ಮಾಡದೆ ಹೋದರೆ, ನಮ್ಮ ಹಿತ–ಅಹಿತಗಳು ಯಾವುದರಲ್ಲಿದೆ ಎಂಬುದರ ಅರಿವಾಗಲು ಸಾಧ್ಯವಿಲ್ಲ.

**ಅಡಗಿರುವ ಸ್ವಾರ್ಥ**

ಪಾಶ್ಚಾತ್ಯ ಅರ್ಥಶಾಸ್ತ್ರದ ಭಾರತೀಯ ವಿದ್ವಾಂಸರ ಹೊರತಾಗಿ, ತಮ್ಮ ಹಿತಕ್ಕಾಗಿ ಪಾಶ್ಚಾತ್ಯ ಅರ್ಥವ್ಯವಸ್ಥೆ ಹಾಗೂ ಉತ್ಪಾದನಾ ಪದ್ಧತಿಯೊಡನೆ ತಮ್ಮನ್ನು ಹೊಂದಿಸಿಕೊಂಡಂಥ ಬಹುದೊಡ್ಡ ಸಂಖ್ಯೆಯ ಜನರು ಭಾರತದಲ್ಲಿದ್ದಾರೆ. ಕಳೆದ ನೂರು ವರ್ಷಗಳಲ್ಲಿ ಭಾರತದಲ್ಲಿ ವಿಕಾಸಗೊಂಡ ಅರ್ಥವ್ಯವಸ್ಥೆಯು ಭಾರತ ಹಾಗೂ ಪಶ್ಚಿಮದ ಔದ್ಯೋಗಿಕ ದೇಶಗಳ ವ್ಯವಸ್ಥೆಗಳನ್ನು ಪರಸ್ಪರ ಪೂರಕಗೊಳಿಸಿತು. ಇದರಲ್ಲಿ ಭಾರತದ ಹಿತಾಸಕ್ತಿಗಳ ಸಂರಕ್ಷಣೆಯೇನೂ ಆಗಲಿಲ್ಲ. ಬದಲಾಗಿ ನಿರಂತರವಾಗಿ ಅದರ ಶೋಷಣೆಯೇ ನಡೆಯುತ್ತಾಬಂತು. ಆದರೆ ಈ ಶೋಷಣೆಯ ಕ್ರಿಯೆಯಲ್ಲಿ ಪಾಶ್ಚಾತ್ಯ ಆರ್ಥಿಕ ಹಿತಾಸಕ್ತಿಗಳು ಭಾರತದ ಕೆಲವು ವರ್ಗದವರನ್ನೂ ಕೂಡ ತಮ್ಮ ಏಜಂಟರ ರೂಪದಲ್ಲಿ ಮತ್ತು ಅನಂತರ ಕೆಲವು ಅಂಶಗಳಲ್ಲಿ ಉದ್ಯಮಿ, ಸ್ವತಂತ್ರ ಅಥವಾ ಪಾಲುದಾರರ ರೂಪದಲ್ಲಿ ಇವರ ಹಿತಸಂಬಂಧವು ವಿದೇಶೀ ಆರ್ಥಿಕ ಹಿತಾಸಕ್ತಿಗಳೊಂದಿಗೆ ಬೆಸೆದುಕೊಂಡಿತು. ದೇಶದ ಆರ್ಥಿಕ ಜೀವನದ ಮೇಲೆ ಈ ವರ್ಗದ ಪ್ರಭುತ್ವ ಸಾಕಷ್ಟು ಆಗಿದೆ. ಇಂದಿಗೂ ಸಂಖ್ಯೆಯಲ್ಲಿ ಹಾಗೂ ದೇಶದ ಆರ್ಥಿಕ ಆದಾಯದಲ್ಲಿ ಅವರ ಕೊಡುಗೆ ಕಡಿಮೆಯಾಗುತ್ತಿದ್ದರೂ,



ಅವರು ಸಮಾಜ ಮತ್ತು ದೇಶದ ಆರ್ಥಿಕ ಜೀವನದ ಮೇಲೆ ಭಾರೀ ಪ್ರಭಾವವನ್ನು ಇಟ್ಟುಕೊಂಡಿದ್ದಾರೆ. ಈ ವರ್ಗದ ಆಕಾಂಕ್ಷೆಗಳು ಸ್ಪಷ್ಟವಾಗಿವೆ. ಅವರು ಹೆಚ್ಚು ಹೆಚ್ಚು ತಮ್ಮ ವಿದೇಶೀ ಪ್ರತಿಸ್ಪರ್ಧಿಗಳ ಸ್ಥಾನವನ್ನು ಹಿಡಿದುಕೊಳ್ಳಲು ಬಯಸುತ್ತಾರೆ. ಸಮಾಜದ ಸಾಮಾನ್ಯ ಜನರ ಜೀವನದ ಮೇಲೆ ಅದರ ಪರಿಣಾಮ ಏನಾಗುವುದೆಂಬುದರ ಚಿಂತೆ ಅವರಿಗಿಲ್ಲ. ಪಾಶ್ಚಾತ್ಯ ಅರ್ಥಶಾಸ್ತ್ರದ ಭಾರತೀಯ ವಿದ್ವಾಂಸರೊಡನೆ ಅವರ ಹೊಂದಾಣಿಕೆ ಸಹಜವಾಗಿಯೇ ಆಗುತ್ತದೆ. ಭಾರತದ ಎಲ್ಲ ವೃತ್ತಪತ್ರಿಕೆಗಳು, ವಿಶೇಷವಾಗಿ ಇಂಗ್ಲಿಷ್ ಪತ್ರಿಕೆಗಳು ಅವರ ಪ್ರಭಾವ ವಲಯದಲ್ಲಿಯೇ ಇವೆ. ಈ ಎಲ್ಲವನ್ನು ಸೇರಿಸಿ ಗೊತ್ತಿದ್ದೋ ಗೊತ್ತಿಲ್ಲದೆಯೋ, ಸಾಮಾನ್ಯ ಜನರು ಅದರಿಂದ ಹೊರಬರಲಾರದಂತಹ ಮಾಯಾಜಾಲವನ್ನು ರಚಿಸಿದ್ದಾರೆ.

**ಪ್ರಭುತ್ವದ ಮಿತಿಗಳು**

ಸರಕಾರದ ಸ್ವರೂಪ ಕೂಡ ಹೇಗಿದೆ ಅಂದರೆ, ಅದು ಈ ಇಂದ್ರಜಾಲದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಮೊದಲನೆಯದಾಗಿ ಆಡಳಿತದ ಪೂರ್ಣ ಮಾದರಿ ಇಂಗ್ಲಿಷರಿಂದ ನಮಗೆ ವಾರಸುದಾರಿಕೆಯಾಗಿ ದೊರಕಿದ್ದು. ನಾವು ಅದನ್ನು ಬದಲಾಯಿಸಲು ಸಾಧ್ಯವಿರಲಿಲ್ಲ ಮತ್ತು ಬದಲಿಸಲೂ ಇಲ್ಲ. ೧೯೪೭ರ ನಂತರ ಕಾಂಗ್ರೆಸ್‌ನ ನಾಯಕರು ಕೂಡ ತಮ್ಮ ರಾಷ್ಟ್ರೀಯತೆಯನ್ನು ಕೇವಲ ಖಾದಿಜುಬ್ಬಾ ಮತ್ತು ಟೋಪಿಗೇ ಸೀಮಿತಗೊಳಿಸಿದರು. ಉಳಿದಂತೆ ತಮ್ಮ ಮಾತುಗಳಲ್ಲಿ ಪ್ರಗತಿಯ ಪಶ್ಚಿಮದ ಮಾನದಂಡಗಳನ್ನೇ ಉದ್ದಕ್ಕೂ ಸ್ವೀಕಾರ ಮಾಡಿದರು. ಆಗ ದೇಶದ ಸೇವಕವರ್ಗವೂ ಕೂಡ ತಮ್ಮ ಹಳೆಯ ವಿಚಾರ ಪರಂಪರೆಗೆ ಅಂಟಿಕೊಳ್ಳುವುದು ಅನಿವಾರ್ಯವಾಯಿತು. ನಮ್ಮ ಉದ್ಯೋಗದಾತರ ಆರ್ಥಿಕ ಚಿಂತನೆಯೂ ಇದೇ ವರ್ತುಲದಲ್ಲಿ ಗಿರಕಿ ಹೊಡೆಯುತ್ತದೆ. ಅಲ್ಲದೆ ವಿದೇಶೀ ನೆರವು, ವಿದೇಶೀ ವಿಶೇಷಜ್ಞರ ಒಪ್ಪಿಗೆಗಳು, ಹಾಗೂ ವಿದೇಶೀ ಜೀವನದ ಚಿತ್ತಾಕರ್ಷಕ ಬಾಹ್ಯ ಸ್ವರೂಪ ಹಾಗೂ ಅಲ್ಪಾವಧಿಯಲ್ಲಿ ಏನಾದರೂ ಮಾಡಿ ತೋರಿಸುವ ರಾಜಕೀಯ ಅವಶ್ಯಕತೆಗಳು ಅವರನ್ನು ಪ್ರಪಂಚದ ಜೀವನದಿಂದ ದೂರ ಸರಿಸಿ ಅದರ ಸಮಸ್ಯೆಗಳ ವಾಸ್ತವವನ್ನು ಸ್ವೀಕಾರ ಮಾಡಲು ಅಸಮರ್ಥರನ್ನಾಗಿ ಮಾಡಿದವು. ಹೀಗಾಗಿ ಯೋಜನೆಗಳ ಮೇಲೆ ಯೋಜನೆಗಳನ್ನು ರೂಪಿಸಲಾಗುತ್ತಿದೆ, ಆದರೆ ನಾವು ಜನಸಾಮಾನ್ಯರ ಜೀವನದಲ್ಲಿ ಸುಖ ಮತ್ತು ಸಮಾಧಾನಗಳನ್ನು ತಂದುಕೊಡಲು ಸಮರ್ಥರಾಗಲಿಲ್ಲ.

**ಮೌಲಿಕ ವಿಚಾರದ ಅವಶ್ಯಕತೆ**

ಆದ್ದರಿಂದ ನಾವು ನಮ್ಮ ಜೀವನದರ್ಶನದ ಬಗೆಗೆ ವಿಚಾರ ಮಾಡಿ, ಭಾರತೀಯ ಅರ್ಥವ್ಯವಸ್ಥೆಯ ಮೌಲಿಕ ನಿರೂಪಣೆಯನ್ನು ಮಾಡಬೇಕು ಹಾಗೂ

ಇಂದಿನ ಸಮಸ್ಯೆಗಳನ್ನು ಕಠಿಣವಾದ, ಅಸ್ತವ್ಯಸ್ತವಾದ ಆದರೆ ಗಟ್ಟಿಯಾದ ವಾಸ್ತವದ ಭೂಮಿಯಲ್ಲಿ ನಿಂತುಕೊಂಡು ಪರಿಹಾರ ಮಾಡುವ ಅವಶ್ಯಕತೆಯಿದೆ. ಭಾರತದ 'ಸ್ವ'ದ ಸಾಕ್ಷಾತ್ಕಾರ ಮಾಡಿಕೊಂಡ ಹೊರತು ನಾವು ನಮ್ಮ ಸಮಸ್ಯೆಗಳನ್ನು ಬಿಡಿಸಲಾರೆವು. ಒಮ್ಮೆ ಯಾವುದೇ ಕ್ಷೇತ್ರದಲ್ಲಿ ಅದೃಷ್ಟದಿಂದ ಅಲ್ಪಸ್ವಲ್ಪ ಸಫಲತೆ ಸಿಕ್ಕರೂ ಕೂಡ ಅದರ ಪರಿಣಾಮವು ನಮ್ಮ ಪಾಲಿಗೆ ಹಿತಕರವಾಗುವುದಿಲ್ಲ. ನಾವು ಅನ್ಯರ ಅನುಕರಣೆಯ ಕಡೆಗೇ ಹೆಚ್ಚು ವಾಲುತ್ತೇವೆ. ನಮ್ಮ ಸ್ವತ್ವ ಹಾಗೂ ಸಾಮರ್ಥ್ಯದ ವಿಕಾಸದ ಬದಲಿಗೆ ಪರಾವಲಂಬನೆಯ ಭಾವವು ನಮ್ಮ ಮನಸ್ಸಿನಲ್ಲಿ ಮನೆ ಮಾಡುವುದು. ಆತ್ಮಹೀನತೆಯ ಈ ಭಾವ ಗೆದ್ದಲಿನಂತೆ ರಾಷ್ಟ್ರದ ಬೇರುಗಳನ್ನು ಪೊಳ್ಳು ಮಾಡಿಬಿಡುವುದು. ಈ ರೀತಿ ಜರ್ಝರಿತ ಬೇರುಗಳ ರಾಷ್ಟ್ರವು ಎಂದೂ ಬಿರುಗಾಳಿಯ ಎದುರು ನಿಲ್ಲಲಾರದು. ನಾವು ದೇಶದ ವಿಕಾಸವನ್ನು ಮಾಡಬೇಕೆಂದಾದರೆ ಅಂತರ್ಮುಖಿಗಳಾಗಿ ಈ ಪ್ರಶ್ನೆಯ ಬಗೆಗೆ ವಿಚಾರ ಮಾಡಲೇಬೇಕಾಗುವುದು. ಇದಕ್ಕೆ ತುಸು ಹೆಚ್ಚು ಸಮಯ ಹಿಡಿದರೂ, ಅದು ಶಾಶ್ವತವಾದ ಸರ್ವರಿಗೂ ಹಿತಕಾರಿಯಾದ ಪರಿಹಾರವಾಗುತ್ತದೆ.



## ೨. ಭಾರತೀಯ ಸಂಸ್ಕೃತಿಯಲ್ಲಿ ಹಣ

ಆರ್ಥಿಕ ಪ್ರಶ್ನೆಗಳಿಗೆ ಸಮಾಧಾನ ಹುಡುಕುವ ಉದ್ದೇಶದಿಂದ ಪಶ್ಚಿಮದ ಕಡೆಗೆ ನೋಡುವ ಒಂದು ಪ್ರಮುಖ ಕಾರಣವೆಂದರೆ, ಭಾರತೀಯ ಸಂಸ್ಕೃತಿ ಮತ್ತು ಧರ್ಮವು ಆಧ್ಯಾತ್ಮ ಪ್ರಧಾನವಾಗಿರುವುದರಿಂದ ಭೌತಿಕ ಜೀವನದ ಸಮಸ್ಯೆಗಳ ಬಗೆಗೆ ಅದು ಉದಾಸೀನವಾಗಿದೆ ಎಂಬ ಗ್ರಹಿಕೆ. ಆದರೆ ಇದು ಈ ಭ್ರಮೆಯು ತಪ್ಪು ಪ್ರಚಾರ ಹಾಗೂ ಆಧ್ಯಾತ್ಮಿಕತೆಯ ತಪ್ಪು ವ್ಯಾಖ್ಯಾನ ಮಾಡಿದ್ದರ ಪರಿಣಾಮವಾಗಿದೆ. ವಾಸ್ತವವಾಗಿ ನಮ್ಮ ಧರ್ಮದ ವ್ಯಾಖ್ಯೆಯು ಭೌತಿಕತೆಯನ್ನು ಪೂರ್ಣ ವಿಚಾರ ಮಾಡಿಯೇ ಮುಂದುವರಿಯುತ್ತದೆ. "ಯತೋಽಭ್ಯುದಯ ನಿಃಶ್ರೇಯಸ ಸಿದ್ಧಿಃ ಸ ಧರ್ಮ" ಅಂದರೆ ಯಾವುದರಿಂದ ಐಹಿಕ ಮತ್ತು ಪಾರಲೌಕಿಕ ಉನ್ನತಿ ದೊರೆಯುವುದೋ ಅದು ಧರ್ಮ. ಈ ಲೋಕವನ್ನು ಬಿಟ್ಟವನು ಪರಲೋಕವನ್ನು ಕಟ್ಟಿಕೊಳ್ಳಲಾರ. ಭೌತಿಕತೆ ಮತ್ತು ಆಧ್ಯಾತ್ಮಿಕತೆ ಪರಸ್ಪರ ವಿರೋಧಿಯಾದ ಅಥವಾ ಬೇರೆ ಬೇರೆಯಾದ ಭಾವನೆಗಳಲ್ಲ. ಆಧ್ಯಾತ್ಮಿಕತೆಯೆಂಬುದು ಜೀವನದ ಒಂದು ದೃಷ್ಟಿಕೋನ. ಅದರ ಮೂಲಕವೇ ನಾವು ಎಲ್ಲ ಪ್ರಶ್ನೆಗಳ ಕಡೆಗೆ ನೋಡಬಲ್ಲೆವು. ಆಧ್ಯಾತ್ಮವಾದವು ವಿಶ್ವವನ್ನು ಸರಿಯಾದ ರೀತಿಯಲ್ಲಿ ವ್ಯಾಖ್ಯಾನಿಸಬಲ್ಲುದಾದರೆ, ಅದರ ಮೂಲಕ ನಾವು ವಿಶ್ವದ ಸಮಸ್ಯೆಗಳಿಗೆ ಸಮಾಧಾನಕರವಾದ ಪರಿಹಾರವನ್ನು ಕಂಡುಕೊಳ್ಳದೆ ಇರಲಾರೆವು.

### ಧರ್ಮಸ್ಯ ಮೂಲಮ್ ಅರ್ಥಃ

ಭಾರತದಲ್ಲಿ ಭೌತಿಕ ಜಗತ್ತಿನ ಬಗ್ಗೆ ಮಾತ್ರವಲ್ಲ, ಹಣ–ಸಂಪತ್ತುಗಳ ಬಗೆಗೂ ವಿಚಾರ ಮಾಡಲಾಗಿದೆ. ಮಹರ್ಷಿ ಚಾಣಕ್ಯ–ಎಂದಿದ್ದಾನೆ. "ಸುಖಸ್ಯ ಮೂಲಂ ಧರ್ಮಃ, ಧರ್ಮಸ್ಯ ಮೂಲಮ್ ಅರ್ಥಃ" ಸುಖವು ಧರ್ಮ ಮೂಲಕವಾದರೆ, ಧರ್ಮವು ಅರ್ಥಮೂಲ ಎಂದಿದ್ದಾನೆ. ಹಣವಿಲ್ಲದೆ ಧರ್ಮ ನಿಲ್ಲುವುದಿಲ್ಲ. ಇಲ್ಲಿ ನಾವು ಧರ್ಮದ ವ್ಯಾಪಕ ಪರಿಭಾಷೆಯನ್ನು ತೆಗೆದುಕೊಬೇಕು. ಧರ್ಮವನ್ನು ಮತ, ಪಂಥ ಅಥವಾ ರಿಲಿಜನ್ ಎಂದು ಭಾವಿಸುವ ಸಂಕುಚಿತ ಹಾಗೂ ಆಧುನಿಕ ಭ್ರಮಾಯುಕ್ತ ಅರ್ಥವನ್ನಲ್ಲ. ಸಮಾಜವನ್ನು ಧರಿಸಿರುವುದು, ಐಹಿಕ ಮತ್ತು ಪಾರಲೌಕಿಕ ಉನ್ನತಿಗೆ ಸಹಾಯಕವಾಗುವಂತಹದು, ಮಾನವನ ಕರ್ಮಗಳನ್ನು ನಿರ್ಧಾರ

ಮಾಡಿ ಅವನು ಕರ್ತವ್ಯದ ಸೂಚನೆಯನ್ನು ಪಡೆಯಲು ಕಾರಣವಾಗುವಂತಹದು, ವ್ಯಕ್ತಿಯು ತನ್ನ ಎಲ್ಲ ಪ್ರಕಾರದ ಉನ್ನತಿಯನ್ನು ಮಾಡಿಕೊಳ್ಳುತ್ತ, ಸಮಷ್ಟಿಯ ಉದ್ಧಾರದಲ್ಲಿ ಸಹಾಯಕವಾಗಲು ಸಾಧ್ಯವಾಗುವಂತಹದು. ಅಂತಹ ನಿಯಮ–ವ್ಯವಸ್ಥೆ ಹಾಗೂ ಅದರ ಮೌಲ್ಯದಲ್ಲಿ ಅಡಗಿದ ಭಾವವೇ ಧರ್ಮ. ಈ ಧರ್ಮವು ಅರ್ಥದ ಅಭಾವವಿದ್ದಾಗ ನಿಲ್ಲಲಾರದು. ವಿಶ್ವಾಮಿತ್ರ ಹಸಿವೆಯಿಂದ ಅತ್ಯಂತ ಪೀಡಿತನಾದಾಗ ರಾತ್ರಿಯ ಸಮಯದಲ್ಲಿ ಕಳ್ಳತನದಿಂದ ಚಾಂಡಾಲನ ಮನೆಗೆ ನುಗ್ಗಿ ನಾಯಿಯ ಎಂಜಲ ಮಾಂಸವನ್ನು ತಿಂದನೆಂದು ಹೇಳಲಾಗುತ್ತದೆ. ಅವರು ಧರ್ಮದ ಹಲವು ಎಲ್ಲೆಗಳನ್ನು ಮುರಿದರು. ಆಪತ್ ಧರ್ಮದ ಹೆಸರುಕೊಟ್ಟು ಶಾಸ್ತ್ರಕಾರರು ಅವರ ಈ ವ್ಯವಹಾರವನ್ನು ಯೋಗ್ಯವೆಂದೇ ನಿರ್ಧರಿಸಿದ್ದಾರೆ. ಹೀಗೆ ಹಣದ ತೊಂದರೆ ನಿರಂತರವಾದಾಗ ಆಪತ್‌ಧರ್ಮ ಅರ್ಥಾತ್ ಕಳ್ಳತನವೂ ಧರ್ಮವೇ ಆಗಿಬಿಡುತ್ತದೆ. ಮತ್ತು ಇಂಥ ಸಂಕಟವು ಸಮಷ್ಟಿಗೆ ಸಂಬಂಧಿಸಿದಾಗ, ಅಂದರೆ ಸಮಾಜದ ಬಹಳಷ್ಟು ಜನರನ್ನು ಇದು ಆವರಿಸಿದಾಗ, ಒಬ್ಬರು ಇನ್ನೊಬ್ಬರಲ್ಲಿ ಕಳ್ಳತನ ಮಾಡಿ ತಮ್ಮ ಧರ್ಮವನ್ನು ನಿಭಾಯಿಸುತ್ತಾರೆ. ಆದರೆ ಎಲ್ಲ ಕಡೆಯೂ ಅಭಾವವೇ ಇದ್ದಾಗ ಕಳ್ಳತನ ಮಾಡುವುದಾದರೂ ಯಾರದನ್ನು? ಅಂದರೆ ಅಂತಹ ಸಂದರ್ಭದಲ್ಲಿ ಸಮಾಜವೇ ನಾಶವಾಗಿಬಿಡುತ್ತದೆ.

## ಹಣದ ಪ್ರಭಾವ

ಹಣದ ಕೊರತೆಯಷ್ಟೇ ಅಲ್ಲ, ಹಣದ ಅತ್ಯಧಿಕ ಪ್ರಭಾವವೂ ಧರ್ಮವನ್ನು ನಾಶಗೊಳಿಸುತ್ತದೆ. ಇದು ಭಾರತದ ತನ್ನದೇ ಆದ ವಿಶಿಷ್ಟ ದೃಷ್ಟಿಕೋನ. ಪಶ್ಚಿಮದ ಜನರು ಹಣದ ಪ್ರಭಾವದ ವಿಚಾರವನ್ನು ಮಾಡಲಿಲ್ಲ. ಹಣವು ತನ್ನಲ್ಲಿ ಅಥವಾ ಅದರ ಮೂಲಕ ಪಡೆದ ಸರಕುಗಳಲ್ಲಿ ಮತ್ತು ಅದರಿಂದ ಪಡೆದುಕೊಂಡ ಭೋಗ ವಿಲಾಸದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ. ಆಗ ಅದಕ್ಕೆ ಹಣದ ಪ್ರಭಾವ ಎಂದು ಹೇಳಲಾಗುತ್ತದೆ. ಒಬ್ಬನಿಗೆ ಕೇವಲ ಹಣದ ಗುಂಗಷ್ಟೇ ಹತ್ತಿಕೊಂಡರೆ, ಅವನು ದೇಶ, ಧರ್ಮ, ಜೀವನದಸುಖ ಎಲ್ಲವನ್ನೂ ಮರೆತುಬಿಡುತ್ತಾನೆ. ಅದೇ ರೀತಿ ವಿಷಯಾಸಕ್ತ ಮನುಷ್ಯನು ಪೌರುಷಹೀನನಾಗಿ ತನ್ನ ಹಾಗೂ ಸಮಾಜದ ನಾಶಕ್ಕೆ ಕಾರಣವಾಗುತ್ತಾನೆ. ಮೊದಲ ಬಗೆಯ ಪ್ರಭಾವದಲ್ಲಿ 'ಅರ್ಥ'ದ 'ಸಾಧನತ್ವ' ನಷ್ಟವಾಗಿ ಅದು 'ಸಾಧ್ಯ'ವಷ್ಟೇ ಆಗಿಬಿಡುತ್ತದೆ. ಎರಡನೆಯದರಲ್ಲಿ ಹಣವು ಧರ್ಮಾಚರಣೆಯ ಸಾಧನವಾಗದೆ ವಿಷಯಭೋಗದ ಸಾಧನವಾಗುತ್ತದೆ. ವಿಷಯಸುಖದ ಹಸಿವೆಗೆ ಯಾವುದೇ ಮಿತಿ ಇಲ್ಲವಾದಾಗ ಒಂದು ಕಡೆ ಇಂಥ ವ್ಯಕ್ತಿಯ ಎದುರಿಗೆ ಯಾವಾಗಲೂ ಹಣದ ಕೊರತೆಯೇ ನಿಲ್ಲುತ್ತದೆ. ಎರಡನೆಯದಾಗಿ, ಪೌರುಷಹಾನಿಯಿಂದ ಅವನ ಹಣಸಂಪಾದನೆಯ ಸಾಮರ್ಥ್ಯವೂ ಕಡಿಮೆಯಾಗುತ್ತ ಹೋಗುತ್ತದೆ.



'ಅರ್ಥ'ವೇ ಸಮಾಜದ ಪ್ರತಿಯೊಂದು ವ್ಯವಹಾರ ಮತ್ತು ವ್ಯಕ್ತಿಪ್ರತಿಷ್ಠೆಯ ಮಾನದಂಡವೆಂದರೆ ಆಗಲೂ ಅರ್ಥದ ಪ್ರಭಾವ ಆಗುತ್ತದೆ. ಇಂತಹ ಸಮಾಜದಲ್ಲಿ 'ಸರ್ವೇ ಗುಣಾಃ ಕಾಂಚನಮಾಶ್ರಯಂತಿ' ಎಂಬ ಉಕ್ತಿ ಸತ್ಯವಾಗುತ್ತದೆ. ಮಾನ, ಸಮ್ಮಾನ, ರಾಜಕೀಯ ಅಧಿಕಾರ ಹಾಗೂ ಸಮಾಜದಲ್ಲಿ ಸ್ಥಾನವು ಕೇವಲ ಹಣವಂತ ವ್ಯಕ್ತಿಗೇ ದೊರೆತರೆ ಜನರಲ್ಲಿ ಧನಪರಾಯಣತೆ ಬಂದುಬಿಡುತ್ತದೆ. ಸಮಾಜದಲ್ಲಿ ಎಲ್ಲರೂ ಹಣದತ್ತ ಆಕರ್ಷಿತರಾದರೆ, ಪ್ರತಿಯೊಂದು ಕೆಲಸಕ್ಕೂ ಹೆಚ್ಚು ಹೆಚ್ಚು ಹಣದ ಆವಶ್ಯಕತೆ ಉಂಟಾಗುತ್ತದೆ. ಹಣದ ಪ್ರಭಾವವು ಪ್ರತಿಯೊಬ್ಬರ ಜೀವನದಲ್ಲಿ 'ಅರ್ಥ'ದ ಅಭಾವವನ್ನುಂಟು ಮಾಡುತ್ತದೆ.

## ಜೀವನದ ಮಾನದಂಡ

ಸಮಾಜದಲ್ಲಿ 'ಅರ್ಥ'ದ ಪ್ರಭಾವ ಮತ್ತು ಅಭಾವ ಎರಡನ್ನೂ ಅಳಿಸಿಹಾಕಿ ಅದರ ಯೋಗ್ಯ ವ್ಯವಸ್ಥೆಯನ್ನು ಮಾಡಲಿಕ್ಕೆ 'ಅರ್ಥಾಯಾಮ' ಎಂದು ಹೇಳಲಾಗುವುದು. ಸಮಾಜದ ಮಾನದಂಡವನ್ನು ಹೇಗಿರಬೇಕು ಎಂದರೆ ಪ್ರತಿಯೊಂದು ವಸ್ತುವನ್ನು ಹಣದಿಂದ ಕೊಳ್ಳಲು ಸಾಧ್ಯವಾಗಬಾರದು. ಇದು ತುಂಬಾ ಅಗತ್ಯ. ನಿಶ್ಚಿತವಾಗಿಯೂ ಈ ಕೆಲಸವನ್ನು ಕೇವಲ ಅರ್ಥವ್ಯವಸ್ಥೆಯ ಆಧಾರದ ಮೇಲೆ ಮಾಡಲು ಸಾಧ್ಯವಾಗದು. ದೇಶಕ್ಕಾಗಿ ಹೋರಾಡುವ ಸೈನಿಕ ತನ್ನ ಜೀವನವನ್ನು ಪಣಕ್ಕೊಡ್ಡುವುದು ಹಣದ ಆಸೆಯಿಂದ ಅಲ್ಲವೇ ಅಲ್ಲ. ಹಣದ ಲಾಲಸೆಯು ಅವನಿಗೆ ದೇಶದ್ರೋಹವನ್ನು ಕಲಿಸಬಹುದೇ ಹೊರತು, ದೇಶಭಕ್ತಿಯನ್ನಲ್ಲ. ಸ್ತ್ರೀಯ ಸತೀತ್ವಕ್ಕೆ ಅದರದೇ ಆದ ಮೌಲ್ಯವಿದೆ, ಅದನ್ನು ಹಣದ ಒರೆಗಲ್ಲಿನಲ್ಲಿ ತಿಕ್ಕಿ ನೋಡಲಾಗುವುದಿಲ್ಲ. ವೈದ್ಯನು ರೋಗಿಯ ಚಿಕಿತ್ಸೆಯ ಬದಲಿಗೆ ಹಣವನ್ನು ಯಾವ ಬೆಲೆಯ ಆಧಾರದ ಮೇಲೆ ತೆಗೆದುಕೊಳ್ಳಬಲ್ಲ? ಅಧ್ಯಾಪಕನು ವಿದ್ಯಾದಾನದ ಬೆಲೆಯನ್ನು ಕಟ್ಟಲಾರ. ಸರಕಾರಿ ಕೆಲಸಗಾರನೊಬ್ಬ ಒಂದು ಫೈಲನ್ನು ಮುಂದೆ ಸರಿಸಲು ಯಾವ ಆಧಾರದ ಮೇಲೆ ಮೌಲ್ಯವನ್ನು ತೆಗೆದುಕೊಳ್ಳುತ್ತಾನೆ? ದುರ್ಬಲರ ರಕ್ಷಣೆ ಮಾಡುವ ಪೋಲೀಸನು ತನ್ನ ಸೇವೆಗೆ ಮೌಲ್ಯವನ್ನು ಬೇಡಿದರೆ, ಆಗ ದುರ್ಬಲರ ರಕ್ಷಣೆಯೂ ಆಗುವುದಿಲ್ಲ, ಅಥವಾ ದೈಹಿಕವಾಗಿ ದುರ್ಬಲನಾದವನು ತನ್ನ ಬುದ್ಧಿಯ ಉಪಯೋಗ ಮಾಡಿ ಧೂರ್ತತೆಯಿಂದ ಹಣ ಸಂಪಾದಿಸಿ ತನ್ನ ರಕ್ಷಣೆಯ ಮೌಲ್ಯವನ್ನು ತೀರಿಸುತ್ತಾನೆ. ಶಾರೀರಿಕ ಶ್ರಮವಿರಲಿ, ಮಾನಸಿಕ ಶ್ರಮವಿರಲಿ, ಅದರ ಉಪಯೋಗವು ಕಾಣುವ ವಸ್ತುಗಳ ಉತ್ಪಾದನೆ ಅಥವಾ ಸೇವೆಗಳಲ್ಲಿ ಆಗಲಿ, ಹಣಕಾಸಿನ ದೃಷ್ಟಿಯಿಂದ ಅದರ ಬೆಲೆಯನ್ನು ಅಳೆಯುವುದು ಅಸಂಭವ. ಅಲ್ಲದೆ ರೂಪಾಯಿಯ ಮೂಲ್ಯವೂ ಸ್ಥಿರವಾದುದಲ್ಲ. ಶ್ರಮ ಮತ್ತು ಕೂಲಿ ಎರಡಕ್ಕೂ ಅರ್ಥಶಾಸ್ತ್ರದಲ್ಲಿ ಹತ್ತಿರವಾದ ಸಂಬಂಧವಿದ್ದರೂ ಸಹ, ವ್ಯಾವಹಾರಿಕ ಜಗತ್ತಿಗಾಗಿ

ಸರ್ವಮಾನ್ಯವಾದ ಸರ್ವಂಕಷವಾದ ಮೌಲ್ಯಸಿದ್ಧಾಂತವನ್ನು ನಿಶ್ಚಿತಗೊಳಿಸುವುದು ಸರಳವೂ ಅಲ್ಲ, ಗ್ರಾಹ್ಯವೂ ಅಲ್ಲ. ವಾಸ್ತವಿಕತೆ ಏನೆಂದರೆ, ಎರಡರ ಬೆಲೆಕಟ್ಟುವಿಕೆಯೂ ಬೇರೆ ಬೇರೆ ಮಾನದಂಡಗಳಿಂದ ಆಗುತ್ತದೆ. ಶ್ರಮದ ಪ್ರತಿಷ್ಠೆಯು ಅದರಿಂದ ದೊರೆಯುವ ಹಣದ ಕಾರಣದಿಂದಲ್ಲ, ಬದಲಿಗೆ ಅದರ ಧರ್ಮತ್ವದಿಂದ. ಅದೇ ರೀತಿ ಯಾವುದೇ ವ್ಯಕ್ತಿಗೆ ಕೊಡುವ ಗೌರವ ಸಂಭಾವನೆಯಿಂದ ಅವನು ಮಾಡಿದ ಶ್ರಮಕ್ಕೆ ಪ್ರತಿಯಾದ ದಾನವಲ್ಲ, ಬದಲಿಗೆ ಅವನ ವ್ಯವಸ್ಥೆಯಾಗಿದೆ. ಶ್ರೀಮದ್ಭಗವದ್ಗೀತೆಯಲ್ಲಿ ಅದಕ್ಕಾಗಿಯೇ ಕರ್ಮ ಹಾಗೂ ಅದರ ಫಲ ಇವೆರಡನ್ನೂ ಬೇರೆ ಬೇರೆಯಾಗಿ ಇಡಲಾಗಿದೆ. ಕರ್ಮವನ್ನು ಲೋಕಹಿತಕ್ಕಾಗಿ ಹಾಗೂ ಭಗವಂತನ ಭಕ್ತಿಯ ರೂಪದಲ್ಲಿ ಮಾಡಬೇಕು. ಶ್ರೀ ಭಗವಾನ್ ಒಂಬತ್ತನೆಯ ಅಧ್ಯಾಯದಲ್ಲಿ ಹೇಳಿದ್ದಾನೆ.

> ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
> ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥ ೨೭ ॥

ಅರ್ಜುನ ! ನೀನು ಮಾಡುವುದನ್ನು, ತಿನ್ನುವುದನ್ನು, ಹವನ ಮಾಡುವುದನ್ನು ಕೊಡುವುದನ್ನು, ತಪಸ್ಸು ಮಾಡುವುದನ್ನು, ಎಲ್ಲವನ್ನೂ ನನಗೇ ಅರ್ಪಣ ಮಾಡಿಬಿಡು. ನಮ್ಮ ಕರ್ಮದ ಗುರಿ ಭಗವದಾರಾಧನೆಯೇ ಆಗಿರಬಲ್ಲುದು. ಇಂಥ ಭಕ್ತರ ಚಿಂತೆಯ ಭಾರವನ್ನು ಭಗವಂತನೇ ಹೊರುತ್ತಾನೆ. ಅದೇ ಅಧ್ಯಾಯದಲ್ಲಿ ಅವನು ಹೇಳುತ್ತಾನೆ.

> ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
> ತೇಷಾಂ ನಿತ್ಯಾಭಿಯುಕ್ತಾನಾಂ, ಯೋಗಕ್ಷೇಮಂ ವಹಾಮ್ಯಹಮ್ ॥ ೨೨ ॥

ಯಾರು ಅನನ್ಯ ಭಾವದಿಂದ ನನ್ನ ಉಪಾಸನೆಯನ್ನು ಮಾಡುತ್ತಾರೋ, ಆ ನಿತ್ಯ ಕರ್ಮಯೋಗಿಗಳ ಯೋಗಕ್ಷೇಮವನ್ನು ನಾನು ವಿಚಾರ ಮಾಡುತ್ತೇನೆ.

ಗೀತೆಯಲ್ಲಿ ಹೇಳಿದ ಈ ಮೇಲಿನ ಸಿದ್ಧಾಂತಕ್ಕೆ ಅನುಸಾರವಾಗಿ ಕರ್ಮದ ಮೂಲ ಪ್ರೇರಣೆಯು ಹಿಡಿತವಿಲ್ಲದ ಸ್ಪರ್ಧೆ ಅಥವಾ ಲಾಭದ ವೃತ್ತಿ ಆಗಲಾರದು. ಪಾಶ್ಚಾತ್ಯ ಅರ್ಥಶಾಸ್ತ್ರದ ಸಿದ್ಧಾಂತಗಳು ಭಾರತದ ಜೀವನದರ್ಶನದೊಡನೆ ಹೊಂದಿಕೆಯಾಗುವುದಿಲ್ಲ. ಇಂದು ನಮ್ಮ ವ್ಯವಹಾರ ಮತ್ತು ದರ್ಶನಗಳಲ್ಲಿ ಭಾರೀ ಅಂತರವಿದೆ ಎಂದು ಹೇಳುವುದರಿಂದ ಕೆಲಸ ನಡೆಯಲಾರದು. ವಾಸ್ತವದಲ್ಲಿಯಂತೂ ಸಮಾಜದಲ್ಲಿ ಇಂದೂ ಕೂಡ ಹೆಚ್ಚಿನ ವ್ಯಕ್ತಿಗಳು ತಮ್ಮನ್ನು ವ್ಯವಸಾಯ ಹಾಗೂ ವೃತ್ತಿಗಳಲ್ಲಿ ಕರ್ತವ್ಯಭಾವದಿಂದಲೇ ತೊಡಗಿಕೊಂಡಿದ್ದಾರೆ. ನಾವು ಈ ಭಾವನೆಯಿಂದ ದೂರ ಸರಿಯುತ್ತ ಹೋದ ಹಾಗೆ, ನಮ್ಮ ಸಮಸ್ಯೆಗಳೂ ಬಿಗಡಾಯಿಸುತ್ತ ಹೋಗುತ್ತವೆ. ನಮಗೆ ನಮ್ಮ ರಾಷ್ಟ್ರದ ಯುಗನಿರ್ಮಾಣ ಮಾಡಬೇಕೆಂದಾದರೆ, ಅದಕ್ಕೆ ಪ್ರೇರಣೆಯನ್ನು ನಮ್ಮ ಜೀವನದರ್ಶನದಿಂದಲೇ ತೆಗೆದುಕೊಳ್ಳಬೇಕು.



**ಪಾಶ್ಚಾತ್ಯ ಅರ್ಥಶಾಸ್ತ್ರದ ಮಾನ್ಯತೆಯ ಮಿತಿಗಳು**

ಸಾಮಾನ್ಯ ಒಪ್ಪಿತಗಳ ಆಧಾರದ ಮೇಲೆ ಪಾಶ್ಚಾತ್ಯ ಅರ್ಥಶಾಸ್ತ್ರವು ತನ್ನ ವಿಶ್ಲೇಷಣೆಯನ್ನು ಪ್ರಸ್ತುತಪಡಿಸಿದ್ದು, ಅದು ಏಕಾಂಗಿಯೂ ಅಪೂರ್ಣವೂ ಆಗಿದೆ. ಅದರ ಗ್ರಹಿಕೆಗಳು ಹೀಗಿವೆ.

೧) ರಾಷ್ಟ್ರೀಯ ಅರ್ಥ ವ್ಯವಸ್ಥೆಯೆಂಬುದು ಮುಖ್ಯವಾಗಿ ವೈಯಕ್ತಿಕವಾದದ್ದು, ಅದಕ್ಕೆ ಬೇರೆಯದೇ ಆದ ಯಾವುದೇ ಸಾಮಾಜಿಕ ಮುಖ ಎಂಬುದಿರುವುದಿಲ್ಲ.
೨) ವ್ಯಕ್ತಿಗಳ ನಿರಾತಂಕ ಹಾಗೂ ಮಿತಿಯಿಲ್ಲದ ಪ್ರತಿಸ್ಪರ್ಧೆಯೇ ಸಾಮಾಜಿಕ ಜೀವನದ ಸ್ವಾಭಾವಿಕವಾದ ಹಾಗೂ ಸುರಕ್ಷಿತವಾದ ನಿಯಂತ್ರಕವಾಗಿದೆ.
೩) ರಾಜಕೀಯ ಹಾಗೂ ಪರಂಪರೆಯ ಮೂಲಕ ಅನ್ವಯಿಸಲಾದ ನಿಯಂತ್ರಣವು ಎಲ್ಲ ಸ್ವಾಭಾವಿಕ ಸ್ವತಂತ್ರತೆಯನ್ನು ಅತಿಕ್ರಮಣ ಮಾಡುತ್ತದೆ.*

ಈ ಮೇಲೆ ಹೇಳಿದ ಗ್ರಹಿಕೆಗಳು ಸತ್ಯಕ್ಕೆ ಬಹಳ ದೂರವಾದದ್ದು. ಇಂದು ರಾಷ್ಟ್ರೀಯ ಅರ್ಥವ್ಯವಸ್ಥೆಯ ಅಸ್ತಿತ್ವ ಹಾಗೂ ಆವಶ್ಯಕತೆಯನ್ನು ಯಾರೂ ನಿರಾಕರಿಸಲಾರರು. ರಾಷ್ಟ್ರಕ್ಕೆ ತನ್ನದೇ ಆದ ಯಾವುದೇ ಘಟಕ ಇದ್ದರೆ, ಮತ್ತು ಅದು ಕೇವಲ ವ್ಯಕ್ತಿಗಳ ಸಮೂಹದಿಂದ ಭಿನ್ನವಾದ ಜೀವಂತ ಘಟಕವಾಗಿದ್ದರೆ, ಅದರ ಅಭಿವ್ಯಕ್ತಿಯು ಜೀವನದ ಪ್ರತಿಯೊಂದು ವ್ಯವಹಾರದಲ್ಲಿ ತನ್ನದೇ ವಿಶಿಷ್ಟತೆಗಳೊಂದಿಗೆ ಆಗಬೇಕು. ಈ ಕಾಣದ ವಿಶಿಷ್ಟತೆಗಳನ್ನು ನಾವು ಕಣ್ಮರೆಯಾಗಲು ಬಿಟ್ಟರೂ, ಇಂದು ಪ್ರತಿಯೊಂದು ರಾಷ್ಟ್ರವು ಬೇರೆ ರಾಷ್ಟ್ರಗಳೊಂದಿಗೆ ತನ್ನೆಲ್ಲ ಆರ್ಥಿಕ ಸಂಬಂಧಗಳ ನಿರ್ಧಾರವನ್ನು ಒಂದು ವಿಶೇಷವಾದ ಘಟಕದ ಆಧಾರದ ಮೇಲೆ ಮಾಡುತ್ತಿದೆ. ಸಂಯುಕ್ತ ರಾಷ್ಟ್ರದ ಅನೇಕ ಸಂಘಟನೆ ಹಾಗೂ ವಿಭಿನ್ನ ಅಂತಾರಾಷ್ಟ್ರೀಯ ಒಡಂಬಡಿಕೆಗಳು ಇದಕ್ಕೆ ಉದಾಹರಣೆಗಳಾಗಿವೆ.

ವ್ಯಕ್ತಿಗಳ ನಿರಾತಂಕ ಮತ್ತು ಅಪರಿಮಿತ ಪ್ರತಿಸ್ಪರ್ಧೆಯನ್ನು ನಾವು ಸಾಮಾಜಿಕ ಜೀವನದ ಸಂಚಾಲಕವೆಂದು ಹಾಗೂ ಸುರಕ್ಷಿತವೆಂದು ಒಪ್ಪಿಕೊಳ್ಳಲಾರೆವು. ಅರ್ಥಶಾಸ್ತ್ರದ ಈ ಗ್ರಹಿಕೆಯು ಮತ್ಸ್ಯನ್ಯಾಯದ ಪ್ರತಿಪಾದನೆ ಮಾಡುವುದಾಗಿದೆ. ನಾವು ಈ ನ್ಯಾಯವನ್ನು ಎಂದೂ ಧರ್ಮಸಂಗತವೆಂದು ಒಪ್ಪಿಲ್ಲ. ಪಶ್ಚಿಮದಲ್ಲಿಯೂ ಇದಕ್ಕೆ ಪ್ರತಿಕ್ರಿಯೆಯಾಗಿದೆ. ಆದರೆ ಅವರು ಪ್ರತಿಸ್ಪರ್ಧೆಯನ್ನು ನಿಲ್ಲಿಸಲು ವರ್ಗಗಳ ಭಯಂಕರ ಪ್ರತಿಸ್ಪರ್ಧೆಯನ್ನು ಹುಟ್ಟುಹಾಕಿ, ಒಂದು ವರ್ಗದ ಮೂಲಕ ಇನ್ನೊಂದರ ವಿನಾಶದ ದಾರಿಯನ್ನು ಹಿಡಿದಿದ್ದಾರೆ. ಪ್ರತಿಸ್ಪರ್ಧೆಯ ಭಾವವು ಕೇವಲ ಆರ್ಥಿಕ ಕ್ಷೇತ್ರದಲ್ಲಷ್ಟೇ ಅಲ್ಲ, ಅನ್ಯ ಕ್ಷೇತ್ರಗಳಲ್ಲಿಯೂ ಇರಬಹುದಾಗಿದೆ. ಆದ್ದರಿಂದ ವರ್ಗ ವಿನಾಶದಿಂದ ಪ್ರತಿಸ್ಪರ್ಧೆ ಮುಗಿಯುವುದಿಲ್ಲ. ಪ್ರತಿಸ್ಪರ್ಧಿಯಾದ ವರ್ಗಗಳು

---

* ಜಿ. ಬಿ. ಜಠಾರ–ಕೆ. ಜಿ. ಜಠಾರ : ಭಾರತೀಯ ಅರ್ಥಶಾಸ್ತ್ರ, ಪುಟ ೨

ಬೇರೆಯದೇ ಆಧಾರದ ಮೇಲೆ ಹುಟ್ಟಿಕೊಂಡು ಮತ್ಸ್ಯನ್ಯಾಯವನ್ನು ನಡೆಸುತ್ತಿರುತ್ತವೆ. ಧರ್ಮದ ಆಧಾರದ ಮೇಲೆ ಸಂಪೂರ್ಣ ಜೀವನದ ಹತೋಟಿಯೇ ಅದರಿಂದ ಉಳಿದುಕೊಳ್ಳುವ ದಾರಿಯಾಗಿದೆ.

ಮೂರನೆಯ ಸಿದ್ಧಾಂತವು ಮೂಲತಃ ಸತ್ಯವೇ ಆಗಿದ್ದರೂ ಸಮಾಜದಲ್ಲಿ ಮಾನವನ ಕೆಲವು ಸ್ವಾತಂತ್ರ್ಯಗಳ ಮೇಲೆ ಮಿತಿಗಳು ಅವಶ್ಯವಾಗುತ್ತವೆ. **ನಿಯಂತ್ರಣವಿಲ್ಲದ ಸ್ವಾತಂತ್ರ್ಯವೆಂಬುದು ಕೇವಲ ಕಲ್ಪನೆಯ ವಸ್ತುವಾಗಿದೆ.** ನಿಜ, ಈ ನಿಯಂತ್ರಣ ಹೊರಗಿನದಾದಷ್ಟೂ ಮಾನವನಿಗೆ ಕಷ್ಟ. ಶಿಕ್ಷಣ ಮತ್ತು ಸಂಸ್ಕಾರ, ದರ್ಶನ ಮತ್ತು ಆದರ್ಶವಾದಗಳು ವ್ಯವಹಾರದಲ್ಲಿ ಮನುಷ್ಯನಿಗೆ ಆತ್ಮನಿಯಂತ್ರಣವನ್ನು ಕಲಿಸುತ್ತವೆ. ಇದೇ ರೀತಿ ಸಮಾಜದ ರೂಢಿಗಳ ಒಂದು ವ್ಯವಸ್ಥೆಯನ್ನು ತಯಾರು ಮಾಡಿ ಮನುಷ್ಯನ ಕೆಲಸವನ್ನು ಸರಳ ಹಾಗೂ ಸೌಲಭ್ಯದಾಯಕವನ್ನಾಗಿಸುತ್ತವೆ. ಹೊಲ ಕಟಾವು ಮಾಡುವ ಪರಂಪರೆಗೆ ಅನುಗುಣವಾದ ನಿರ್ದಿಷ್ಟ ಕೂಲಿಯು ಪಾಶ್ಚಾತ್ಯ ಅರ್ಥಶಾಸ್ತ್ರದ ಬೇಡಿಕೆ ಮತ್ತು ಪೂರೈಕೆಯ ನಿಯಮಗಳ ಪಾಲನೆಯನ್ನು ಮಾಡದಿದ್ದರೂ, ಅದು ರೈತ ಮತ್ತು ಕೂಲಿಕಾರ ಇಬ್ಬರಿಗೂ ಸಾಮಾಜಿಕವಷ್ಟೇ ಅಲ್ಲ, ಆರ್ಥಿಕ ದೃಷ್ಟಿಯಿಂದಲೂ ಲಾಭದಾಯಕವಾಗಿದೆ.

### ಸರ್ವಾಂಗೀಣ ದೃಷ್ಟಿಕೋನದ ಅವಶ್ಯಕತೆ

ಪಾಶ್ಚಾತ್ಯ ಅರ್ಥಶಾಸ್ತ್ರದಲ್ಲಿ ಎಷ್ಟೇ ನಿಯಮಗಳಿದ್ದರೂ, ಅದು ಒಬ್ಬ ಆರ್ಥಿಕ ಮನುಷ್ಯನ (Economic Man) ಕಲ್ಪನೆ ಮಾಡಿಕೊಂಡೇ ಮುಂದುವರಿಯುತ್ತದೆ. ಈ ಆರ್ಥಿಕ ಮಾನವನಾದರೋ ಜೀವನದಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಸ್ವಯಂ ಜೆ. ಸ್ಟು. ಮಿಲ್ ಭಾವಿಸುವುದೇನೆಂದರೆ, "ಬಹುಶಃ ಯಾವುದೇ ವ್ಯಾವಹಾರಿಕ ಪ್ರಶ್ನೆಯ ನಿರ್ಣಯವು ಆರ್ಥಿಕ ಎಲ್ಲೆಯೊಳಗಡೆಯೇ ಸಾಧ್ಯವಾಗುವಂತಹದ್ದೇನೂ ಅಲ್ಲ. ಅನೇಕ ಆರ್ಥಿಕ ಪ್ರಶ್ನೆಗಳಿಗೆ ಮಹತ್ವಪೂರ್ಣ ರಾಜಕೀಯ ಹಾಗೂ ನೈತಿಕ ಮಗ್ಗುಲುಗಳು ಇರುವುದನ್ನು ಉಪೇಕ್ಷೆ ಮಾಡುವುದು ಸಾಧ್ಯವಾಗದು." ಯಾವುದೋ ಸಮಯ ವಿಶೇಷದಲ್ಲಿ ಮಾನವ ವ್ಯವಹಾರವು ಜೀವನದ ಅನೇಕ ಮೌಲ್ಯಗಳ ಆಕರ್ಷಣೆ, ವಿಕರ್ಷಣೆಯಿಂದ ನಿಶ್ಚಿತವಾಗುತ್ತದೆ. ಬೇರೆ ಬೇರೆ ಶಾಸ್ತ್ರಗಳ ವಿದ್ವಾಂಸರು ಅದೇ ಒಂದು ವ್ಯವಹಾರದ ವಿಶ್ಲೇಷಣೆಯನ್ನು ತಮ್ಮ ತಮ್ಮ ದೃಷ್ಟಿಕೋನದಿಂದ ಮಾಡುತ್ತಾರೆ. ಅದರಲ್ಲಿ ಅನ್ಯ ಪ್ರವೃತ್ತಿಗಳ ಅಸ್ತಿತ್ವವೇ ಇರದಂತಹ ಒಂದು ಸ್ಥಿತಿಯ ಕಲ್ಪನೆ ಮಾಡಿಕೊಂಡು ಮುಂದುವರಿಯುತ್ತಾರೆ. ಆದರೆ ಅವರ ಕಾಲ್ಪನಿಕ ಜಗತ್ತು ಹಾಗೂ ವ್ಯಾವಹಾರಿಕ ಜಗತ್ತಿನಲ್ಲಿ ಯಾವಾಗಲೂ ಬಹುದೊಡ್ಡ ಅಂತರ ಇರುತ್ತದೆ. ಅವರ ಸಿದ್ಧಾಂತಗಳು ಸರಿಯಿದ್ದರೂ ಕೂಡ ಅದಕ್ಕೆ ಸೀಮಿತವಾದ ಉಪಯುಕ್ತತೆ ಇರುತ್ತದೆ.



### ನಾಲ್ಕು ಪುರುಷಾರ್ಥಗಳು

ಆದ್ದರಿಂದಲೇ ಭಾರತದಲ್ಲಿ ಮನುಷ್ಯನನ್ನು ವಿಭಜಿಸಿ ವಿಚಾರ ಮಾಡದೆ, ಪೂರ್ಣತೆಯೊಂದಿಗೆ ವಿಚಾರ ಮಾಡಲಾಗಿದೆ. ಮನುಷ್ಯನ ವಿಭಿನ್ನ ಪ್ರವೃತ್ತಿಗಳನ್ನು ನಾಲ್ಕು ಸ್ಥೂಲಭಾಗಗಳಲ್ಲಿ ವರ್ಗೀಕರಣ ಮಾಡಿ, ಅವುಗಳೆಲ್ಲದರ ಸಂತೃಪ್ತಿಯೇ ಮಾನವನ ಪುರುಷಾರ್ಥ ಎಂದು ಹೇಳಲಾಗಿದೆ. ಆ ಪುರುಷಾರ್ಥಗಳು ನಾಲ್ಕು– ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ. ಈ ನಾಲ್ಕೂ ಪರಸ್ಪರ ಪೂರಕ. ಈ ಎಲ್ಲವನ್ನೂ ಪಡೆದುಕೊಳ್ಳುವ ಕರ್ಮವೇ ಶ್ರೇಷ್ಠವಾಗಿವೆ. ಇವುಗಳಲ್ಲಿ ಯಾವುದನ್ನೇ ಆದರೂ ಅವಹೇಳನೆ ಮಾಡಿ ನಡೆಯುವ ವ್ಯಕ್ತಿಯು ದುಃಖ ಮತ್ತು ಅಶಾಂತಿಯನ್ನು ಅನುಭವಿಸುತ್ತಾನೆ.

ಈ ನಾಲ್ಕರಲ್ಲಿ ಯಾವುದಾದರೂ ಒಂದನ್ನೇ ಶ್ರೇಷ್ಠವೆಂದಾಗಲಿ, ಅಥವಾ ಉಳಿದವುಗಳ ಆಧಾರವೆಂದಾಗಲಿ ತಿಳಿಯುವುದು ಸರಿಯಲ್ಲ. ಹಾಗೆ ನೋಡಿದರೆ ಮೋಕ್ಷವನ್ನು ಪರಮ ಪುರುಷಾರ್ಥ ಎನ್ನಲಾಗಿದೆ. ಯಾಕೆಂದರೆ ಅದನ್ನು ಪಡೆದ ನಂತರ, ಪಡೆಯಬೇಕಾದ್ದು ಏನೂ ಉಳಿಯುವುದಿಲ್ಲ. ಆದರೆ ಧರ್ಮ, ಅರ್ಥ ಮತ್ತು ಕಾಮಗಳಿಲ್ಲದೆ ಮೋಕ್ಷವನ್ನು ಪಡೆಯುವುದು ಸಾಧ್ಯವಿಲ್ಲ. ಮಹರ್ಷಿ ವೇದವ್ಯಾಸರು ಹೇಳಿದ್ದಾರೆ. 'ಧರ್ಮಾದರ್ಥಶ್ಚ ಕಾಮಶ್ಚ' ಅರ್ಥಾತ್ ಧರ್ಮದಿಂದಲೇ ಅರ್ಥ–ಕಾಮಗಳ ಪ್ರಾಪ್ತಿಯಾಗುತ್ತದೆ. ಯಾವುದೇ ವ್ಯವಸ್ಥೆಯೇ ಇರದಿದ್ದರೆ ಅರ್ಥ ಮತ್ತು ಕಾಮದ ಪ್ರಾಪ್ತಿ ಹೇಗೆ ಆಗಬಲ್ಲುದು? ಆದರೆ ಇನ್ನೊಂದು ಕಡೆ ನಾವು ಇದಕ್ಕೆ ಮುನ್ನ, ಹೇಗೆ ಅರ್ಥವಿಲ್ಲದೆ ಧರ್ಮವು ನಿಲ್ಲಲಾರದು ಎಂಬ ವಿವೇಚನೆಯನ್ನು ಮಾಡಿದ್ದೇವೆ. ವಾಸ್ತವವಾಗಿ ಈ ನಾಲ್ಕೂ ಪುರುಷಾರ್ಥಗಳು ಅನ್ಯೋನ್ಯಾಶ್ರಿತವಾಗಿವೆ. ಒಂದರಿಂದ ಇನ್ನೊಂದರ ರಕ್ಷಣೆ ಮತ್ತು ಸಂವರ್ಧನೆ ಆಗುತ್ತದೆ. ಅನ್ನದಿಂದ ಪ್ರಾಣವು ಶಕ್ತಿಶಾಲಿಯಾಗುವಂತೆ, ಹಾಗೂ ಸಬಲ ಪ್ರಾಣವು ಅನ್ನವನ್ನು ಪಚನ ಮಾಡಲು ಸಾಧ್ಯವಾಗುವಂತೆ, ಧರ್ಮದಿಂದ ಅರ್ಥ ಮತ್ತು ಕಾಮದ, ಹಾಗೂ ಅರ್ಥ ಮತ್ತು ಕಾಮದಿಂದ ಧರ್ಮದ ಧಾರಣವಾಗುತ್ತದೆ.

### ನಾಲ್ಕು ವಿದ್ಯೆಗಳು

ಈ ನಾಲ್ಕು ವಿಧದ ಪುರುಷಾರ್ಥಗಳನ್ನು ಪಡೆಯುವ ವಿದ್ಯೆಗಳನ್ನು ಕುರಿತೂ ವಿವೇಚನೆ ಮಾಡುತ್ತ ಕೌಟಿಲ್ಯನು ಹೀಗೆ ಬರೆದಿದ್ದಾನೆ: "ಅನ್ವೀಕ್ಷಕೀತ್ರಯೀ ವಾರ್ತಾ ದಂಡ ನೀತಿಶ್ಚೇತಿ ವಿದ್ಯಾ". ಅನ್ವೀಕ್ಷಕೀ, ತ್ರಯೀ, ವಾರ್ತಾ, ಮತ್ತು ದಂಡನೀತಿ ಈ ನಾಲ್ಕು ವಿದ್ಯೆಗಳಿವೆ. ಇದರ ಹಿಂದಿನ ಆಚಾರ್ಯರುಗಳು ಇವುಗಳಲ್ಲಿ ಯಾವುದಾದರೂ ಒಂದನ್ನು ಎರಡನ್ನು ಅಥವಾ ಮೂರನ್ನು ಮಾತ್ರ ವಿದ್ಯೆಯೆಂದು ಪರಿಗಣಿಸಿದರು. ಆದರೆ ಕೌಟಿಲ್ಯನು ನಾಲ್ಕಕ್ಕೂ ಮಾನ್ಯತೆಯನ್ನು ಕೊಟ್ಟನು. ಅವನು

ಹೀಗೆ ಬರೆದಿದ್ದಾನೆ. "ಚನಸ್ರ ಏವಂ ವಿದ್ಯಾ ಇತಿ ಕೌಟಿಲ್ಯಃ ತಾಮಿರ್ಧರ್ಮಾರ್ಥೌರ್ಯಾದ್ವಿದ್ಯಾತದ್ವಿದ್ಯಾನಾಂ ವಿದ್ಯಾತ್ವಂ"[೧] ಅರ್ಥಾತ್, ಕೌಟಿಲ್ಯನ ಅಭಿಪ್ರಾಯದಂತೆ ನಾಲ್ಕೂ ವಿದ್ಯೆಗಳೇ ಆಗಿವೆ. ಅವುಗಳಿಂದ ಧರ್ಮ ಹಾಗೂ ಅರ್ಥದ ಅರಿವು ಉಂಟಾಗುತ್ತದೆ. ಅವು ವಾಸ್ತವದಲ್ಲಿ ವಿದ್ಯೆಗಳೇ ಆಗಿವೆ ಮತ್ತು ಅವುಗಳನ್ನು ಆ ರೂಪದಲ್ಲಿಯೇ ಗ್ರಹಿಸಬೇಕು.

ಮನುಷ್ಯನ ಜೀವನದ ಈ ಸರ್ವಾಂಗಪೂರ್ಣ ವಿಚಾರವು, ಮನುಷ್ಯನಲ್ಲಿ ನೈತಿಕ, ಸಾಮಾಜಿಕ, ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿಷ್ಠಾಪನೆ ಮಾಡಿದ ಹೊರತು ಮನುಷ್ಯನನ್ನು ಸುಖಿಯಾಗಿಸಲಾರದು, ಅಂಥ ಯಾವ ಅರ್ಥ ರಚನೆಯ ಕಲ್ಪನೆಯನ್ನೂ ಮಾಡಲಾರದು. ಅಷ್ಟೇ ಅಲ್ಲ, ಯಾವುದೇ ಅರ್ಥ–ರಚನೆಯು ತನ್ನ ಸಫಲತೆ ಹಾಗೂ ಅಭಿವ್ಯಕ್ತಿಯ ಸಲುವಾಗಿ ಅವಶ್ಯಕವಾದ ಇಚ್ಛೆ, ಉತ್ಸಾಹ ಹಾಗೂ ಸಾಮರ್ಥ್ಯದ ಸೃಷ್ಟಿಯನ್ನೂ ಸ್ವಯಂ ಮಾಡಲಾರದು. ತನ್ನದೇ ವೇಗಕ್ಕೆ ಸಮಾನವಾದ ವೇಗವುಳ್ಳ ಅರ್ಥವ್ಯವಸ್ಥೆಯು ಅಸಂಭವವಾಗಿದೆ. ಅದಕ್ಕೆ ಚಾಲನೆಯನ್ನು ಕೊಡಲು ಮತ್ತು ಅನಂತರದಲ್ಲಿಯೂ ಕನಿಷ್ಠ ತಡೆಯೊಂದಿಗೆ ಚೆನ್ನಾದ ರೀತಿಯಲ್ಲಿ ಮುಂದುವರಿಯುತ್ತಿರಲು ವ್ಯಕ್ತಿ ಮತ್ತು ಸಮಾಜದ ಜೀವನದಲ್ಲಿ ಪ್ರೇರಣೆಯ ಮೂಲವನ್ನು 'ಅರ್ಥ'ದ ಹೊರತಾಗಿ ಬೇರೆಲ್ಲಿಯೋ ಹುಡುಕಬೇಕಾಗುವುದು. ರಾಷ್ಟ್ರದ ರಾಜಕೀಯ ಮಹತ್ವಾಕಾಂಕ್ಷೆಗಳು ಪ್ರೇರಣೆಗಳು ಅರ್ಥರಚನೆಯನ್ನು ನಿರ್ಮಾಣ ಮಾಡಲು ಹಾಗೂ ಬಾಳಿಸಿಕೊಳ್ಳಲು ಸಹಾಯಕವಾಗುತ್ತವೆ. ಆದ್ದರಿಂದ ನಾವು ಸಮಾಜ ಅಥವಾ ವ್ಯಕ್ತಿಯ ಸಮಸ್ಯೆಗಳು ಹಾಗೂ ಗುರಿಗಳನ್ನು ಬಿಸಿಯಾಗಿ ವಿಚಾರ ಮಾಡಲಾರೆವು. ವಿಶೇಷ ಸನ್ನಿವೇಶದಲ್ಲಿ ಬಂದಾಗ ಯಾವುದಾದರೊಂದು ಅಂಗಕ್ಕೆ ಹೆಚ್ಚಿಗೆ ಮಹತ್ವ ನೀಡಬಹುದು, ಆದರೆ ಉಳಿದೆಲ್ಲವನ್ನೂ ನಾವು ಅವಹೇಳನೆ ಮಾಡಬಾರದು.

---

೧) ಈ ವಿದ್ಯೆಗಳ ವ್ಯಾಖ್ಯೆ ಮಾಡುತ್ತ ಹೇಳಿದ್ದಾರೆ. "ಸಾಂಖ್ಯಂ ಯೋಗೋ ಲೋಕಾಯತಂ ಚೇತ್ಯಾನ್ವೀಕ್ಷಕೀ, ಧರ್ಮಾಧರ್ಮೋ ತ್ರಯಾಮರ್ಥಾನರ್ಥೀ ವಾರ್ತಾನಾಂ ನಯಾನಯೌ ದಂಡನೀತ್ಯಾಮ್" ಅರ್ಥಾತ್ ಸಂಪೂರ್ಣದರ್ಶನ, ಯೋಗ, ಮುಂತಾದ ಉಪಾಸನಾಶಾಸ್ತ್ರ ಹಾಗೂ ಲೋಕಾಯತ ಸಾಹಿತ್ಯ ಅನ್ವೀಕ್ಷಕಿಯ ಒಳಗೆ ಬರುತ್ತವೆ. ತ್ರಯಿಯಿಂದ ಧರ್ಮ ಅಧರ್ಮಗಳ, ವಾರ್ತೆಯಿಂದ ಅರ್ಥ ಮತ್ತು ಅದರ ಅಭಾವದ ಹಾಗೂ ದಂಡನೀತಿಯಿಂದ ರಾಜನೀತಿ ಹಾಗೂ ಕೆಟ್ಟ ನೀತಿಗಳ ಅರಿವಾಗುತ್ತದೆ.



# ೩. ಮೂಲಭೂತ ಗುರಿ

ಭಾರತದ ಜನಗಳಾದ ನಾವು ಆರ್ಥಿಕ ಯೋಜನೆಯನ್ನು ಕುರಿತು ವಿಚಾರ ಮಾಡುವಾಗ ನಾವು ಬದಲಿಸಲು ಬಯಸದ ಕೆಲವು ನಿಶ್ಚಿತ ಗುರಿಗಳು ಹಾಗೂ ತಥ್ಯಗಳು ನಮ್ಮೆದುರು ಬರುತ್ತವೆ. ಎಲ್ಲ ಪ್ರಕಾರಗಳಿಂದ ಅವುಗಳ ಸಂರಕ್ಷಣೆ ಹಾಗೂ ಸಂವರ್ಧನೆ ಮಾಡುವುದು ನಮ್ಮ ಪ್ರಯತ್ನಗಳ ಉದ್ದೇಶವಾಗಿರುತ್ತದೆ. ಮೊದಲನೆಯದಾಗಿ, ಭಾರತವು ಬಹಳ ಪ್ರಯತ್ನಗಳ ನಂತರ ಇಂಗ್ಲಿಷರಿಂದ ಮುಕ್ತಿಯನ್ನು ಪಡೆದಿದೆ. ನಾವು ಯಾವುದೇ ಒತ್ತಡದಲ್ಲೂ ಈ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ನಮ್ಮ ರಾಜಕೀಯ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಒಗ್ಗೂಡಿಸಿಕೊಳ್ಳುವುದೇ ನಮ್ಮ ಯೋಜನೆಗಳ ಮೊದಲ ಗುರಿಯಾಗಬೇಕು. ಎರಡನೆಯದಾಗಿ, ನಾವು ನಮಗಾಗಿ ಪ್ರಜಾಪ್ರಭುತ್ವದ ಒಂದು ಕ್ರಮವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಆರ್ಥಿಕ ಸಮೃದ್ಧಿಯ ಯಾವುದೇ ಕಾರ್ಯಕ್ರಮವು ನಮ್ಮ ಪ್ರಜಾಪ್ರಭುತ್ವ ಪದ್ಧತಿಯ ದಾರಿಗೆ ಬಾಧಕವಾದರೆ ಅದು ನಮಗೆ ಸ್ವೀಕಾರಾರ್ಹವಲ್ಲ. ಮೂರನೆಯದಾಗಿ, ನಮ್ಮ ಜೀವನದಲ್ಲಿ ಕೆಲವು ಸಾಂಸ್ಕೃತಿಕ ಮೌಲ್ಯಗಳಿವೆ. ಅವು ನಮಗೆ ರಾಷ್ಟ್ರೀಯ ಜೀವನದ ಕಾರಣ, ಪರಿಣಾಮ, ಹಾಗೂ ಸೂಚಕಗಳಾಗಿವೆ, ಹಾಗೂ ವಿಶ್ವದ ದೃಷ್ಟಿಯಿಂದಲೂ ಅತ್ಯಂತ ಸ್ವೀಕಾರಾರ್ಹವಾಗಿವೆ. ವಿಶ್ವಕ್ಕೆ ಈ ಸಂಸ್ಕೃತಿಯ ಅರಿವು ಮಾಡಿಕೊಡುವುದು ನಮ್ಮ ರಾಷ್ಟ್ರಿಯ ಜೀವನೋದ್ದೇಶವಾಗಬಹುದು. ಈ ಸಂಸ್ಕೃತಿಯನ್ನು ಕಳೆದುಕೊಂಡು ನಾವು ಹಣವನ್ನು ಗಳಿಸಿದರೂ ಅದು ನಿರರ್ಥಕ ಹಾಗೂ ಅನರ್ಥಕಾರಿ ಆಗುತ್ತದೆ.

ನಮ್ಮ ಆರ್ಥಿಕ ಕಾರ್ಯಕ್ರಮವು ಈ ಮಿತಿಗಳ ಒಳಗೇ ಇರುವುದಾದರೆ, ನಮ್ಮ ಪ್ರಯತ್ನಗಳ ದಾರಿಯಲ್ಲಿ ಇವುಗಳಿಂದ ಯಾವ ಅಡ್ಡಿಯೂ ಇಲ್ಲ. ಇವು ಕೆಲಸ ಮಾಡುವವರ ಕಾಲಿನ ಬೇಡಿಗಳಾಗುವುದಿಲ್ಲ, ಬದಲಿಗೆ ಅವರ ಮಾರ್ಗದ ಆಸರೆಗಳಾಗಿವೆ. ಈ ಮೂರೂ ಗುರಿಗಳನ್ನು ಸರಿಯಾದ ಉಪಯೋಗ ಮಾಡಿದರೆ, ಅವುಗಳಿಂದ ರಾಷ್ಟ್ರದ ಸಾಮೂಹಿಕ ಪ್ರಯತ್ನಗಳಿಗೆ ಹೆಚ್ಚಿನ ಬಲ ಸಿಗಬಹುದಾಗಿದೆ. ನಾಳಿನ ಸಮೃದ್ಧಿಗಾಗಿ ಇಂದು ಕಷ್ಟವನ್ನು ಸಹಿಸಬೇಕಾಗಿದೆ, ಅದಕ್ಕಾಗಿ ಈ ಭಾವನೆಗಳ ಹೊರತಾದ ಆರ್ಥಿಕ ಉದ್ದೇಶಗಳಿಂದ ಮನಸ್ಸಿನ ಸಿದ್ಧತೆಯನ್ನು ಮಾಡಲು ಸಾಧ್ಯವಾಗದು.

## ಸೈನ್ಯದ ಸಾಮರ್ಥ್ಯದ ಅಭಿವೃದ್ಧಿ

ರಾಜಕೀಯ ಸ್ವಾತಂತ್ರ್ಯವನ್ನು ಸಂರಕ್ಷಿಸುವುದಕ್ಕಾಗಿ ರಾಷ್ಟ್ರವನ್ನು ಸೈನ್ಯದ ದೃಷ್ಟಿಯಿಂದ ಸಂರಕ್ಷಣಾ ಸಾಮರ್ಥ್ಯವಿರುವಂತೆ ಮಾಡಬೇಕಾದ್ದು ಅವಶ್ಯವಾಗಿದೆ. ಈ ಕಾರಣದಿಂದ ನಾವು ಯುದ್ಧಸಾಮಗ್ರಿಗಳಿಗಾಗಿ ಬೇರೆಯವರನ್ನು ಅವಲಂಬಿಸಬಾರದು. ಈ ಬಗೆಯ ಅವಲಂಬನೆಯು ಒಂದು ಕಡೆ ನಮ್ಮನ್ನು ಅವರ ಎದುರು ಕೈಯೊಡ್ಡುವಂತೆ ಮಾಡುತ್ತದೆ. ಇನ್ನೊಂದು ಕಡೆ ಯುದ್ಧ ಸಾಮಗ್ರಿಗಳನ್ನು ನಿರ್ಮಾಣ ಮಾಡುವ ರಾಷ್ಟ್ರಗಳ ಮನಸ್ಸಿನಲ್ಲಿ, ತಮ್ಮ ಈ ಯುದ್ಧ ಸಾಮಗ್ರಿಗಳ ಮಾರುಕಟ್ಟೆಯನ್ನು ಕಾಯಂ ಆಗಿ ಇಟ್ಟುಕೊಳ್ಳಲು ಮತ್ತು ಮುಂದುವರಿಸಿಕೊಂಡು ಹೋಗಲು, ಸದಾ ಯುದ್ಧದ ಭೀಕರತೆಯನ್ನು ನಿರ್ಮಾಣ ಮಾಡುವ ಮೋಹವನ್ನು ಹುಟ್ಟುಹಾಕುತ್ತದೆ. ಭಾರತದಂತಹ ಸಾಮಾಜಿಕ ಮಹತ್ವವಿರುವ ದೇಶವು ಸೈನ್ಯದ ದೃಷ್ಟಿಯಿಂದ ಸ್ವಾವಲಂಬಿಯಾದರೆ ವಿಶ್ವದ ಶಾಂತಿಯನ್ನು ಕದಡುವ ಸಾಧ್ಯತೆಯು ಕಡಿಮೆಯಾಗುತ್ತದೆ.

## ಸ್ವಾವಲಂಬನೆ

ಆರ್ಥಿಕ ಕ್ಷೇತ್ರದಲ್ಲಿಯೂ ನಾವು ಸ್ವಾವಲಂಬಿಯಾಗಬೇಕಾದ ಅವಶ್ಯಕತೆಯಿದೆ. ನಮ್ಮ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ನಾವು ವಿದೇಶೀ ನೆರವನ್ನೇ ಅವಲಂಬಿಸಿದರೆ, ಅದು ನಿಶ್ಚಯವಾಗಿಯೂ ನಮಗೆ ಪ್ರತ್ಯಕ್ಷವಾಗಿ – ಅಪ್ರತ್ಯಕ್ಷವಾಗಿ ಬಂಧನಕಾರಿಯಾಗುತ್ತದೆ. ಸಹಾಯ ನೀಡುವ ದೇಶಗಳ ಆರ್ಥಿಕ ಪ್ರಭಾವದ ಕಕ್ಷೆಯೊಳಗಡೆ ನಾವು ಬರುತ್ತೇವೆ. ನಮ್ಮ ಆರ್ಥಿಕ ಯೋಜನೆಗಳನ್ನು ಸಫಲವಾಗಿ ಪೂರ್ಣಗೊಳಿಸುವಲ್ಲಿ ಬರಬಹುದಾದ ಅಡೆತಡೆಗಳಿಂದ ಬಚಾವಾಗುವ ದೃಷ್ಟಿಯಿಂದ ನಾವು ಅನೇಕ ಸ್ಥಳಗಳಲ್ಲಿ ಮೌನವಾಗಿ ಇರಬೇಕಾಗುತ್ತದೆ. ಇನ್ನೊಬ್ಬರ ಮೇಲಿನ ಅವಲಂಬನೆಯ ಹವ್ಯಾಸವನ್ನೇ ರೂಢಿಸಿಕೊಂಡಂತಹ ರಾಷ್ಟ್ರದ ಸ್ವಾಭಿಮಾನವೂ ನಾಶವಾಗುತ್ತದೆ. ಇಂಥ ಸ್ವಾಭಿಮಾನಶೂನ್ಯ ರಾಷ್ಟ್ರವು ತನ್ನ ಸ್ವಾತಂತ್ರ್ಯದ ಬೆಲೆಯನ್ನು ಎಂದೂ ಅರಿಯಲಾರದು. ಹೊರಗಿನ ಯಾವುದೇ ದೇಶವು ತನ್ನ ನೆರವನ್ನು ನಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳಲು ನೀಡುವುದಿಲ್ಲವೆಂಬುದೂ ನಿಶ್ಚಿತ. ನಮ್ಮ ಯೋಜನೆಗಳನ್ನು ಅವರು ಪರಿಶೀಲನೆ ಮಾಡುವವರು, ಮತ್ತು ನಂತರ ನಾವು ಆ ಯೋಜನೆಗಳನ್ನು ಅವು ನಮಗೆ ಅನುಕೂಲವಲ್ಲದೆ ಹೋದರೂ ಮಾಡಬೇಕಾಗುವುದು. ಆದರೆ ವಿದೇಶೀ ನೆರವಿನೊಂದಿಗೆ ಹೊಂದಿಕೆಯಾಗಲು ಸಾಧ್ಯವಾಗಬೇಕು.



## ಪ್ರಜಾಪ್ರಭುತ್ವದ ಪೋಷಣೆ

ನಮ್ಮ ಆರ್ಥಿಕ ಯೋಜನೆಗಳು ಪ್ರಜಾಪ್ರಭುತ್ವದ ಸಂರಕ್ಷಕ ಹಾಗೂ ಪೋಷಕಗಳಾಗಬೇಕು. ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಹಭಾಗಿಯಾಗುವಂತೆ ಮಾಡುವುದು ಪ್ರಜಾಪ್ರಭುತ್ವದ ಉದ್ದೇಶವಾಗಿದೆ. ಇದಕ್ಕಾಗಿ ಚುನಾವಣಾ ಪದ್ಧತಿಯನ್ನು ಸಾಧನದ ರೂಪದಲ್ಲಿ ಸ್ವೀಕರಿಸಲಾಗಿದೆ. ಚುನಾವಣೆಯಿಂದಾಗಿ ಪ್ರಜಾಪ್ರಭುತ್ವದ ಪ್ರತಿನಿಧಿಶಾಸನದ ರೂಪವನ್ನು ಧಾರಣ ಮಾಡುವುದು. ಪ್ರಾಚೀನ ಗ್ರೀಸ್‌ನ ನಗರ ರಾಜ್ಯಗಳಂತೆ ಪ್ರಜೆಗಳ ಮೂಲಕವೇ ಪ್ರತ್ಯಕ್ಷ ಆಡಳಿತವು ವಿಶಾಲಕ್ಷೇತ್ರದಲ್ಲಿ ಸಂಭವ ಇಲ್ಲ. ಆದ್ದರಿಂದ ಪ್ರತಿನಿಧಿಯ ಅವಶ್ಯಕತೆ ಉಂಟಾಗುತ್ತದೆ. ಆದರೆ ಆಡಳಿತದ ಬಹಳಷ್ಟು ಕಾರ್ಯಗಳನ್ನು ನಾವು ಸ್ಥಳೀಯ ಆಧಾರದ ಮೇಲೆಯೇ ಮಾಡಬಹುದು. ಇವರಿಗೆ ಪ್ರತಿನಿಧಿಗಳ ಮೂಲಕ ನಡೆಸಿದ ಅಧಿಕಾರವನ್ನು ವಹಿಸಿಕೊಡುವ ಅವಶ್ಯಕತೆಯಿಲ್ಲ. ಹಾಗಾಗಿ ಆಡಳಿತಾತ್ಮಕ ವಿಕೇಂದ್ರೀಕರಣ ರಾಜಕೀಯ ಪ್ರಜಾಪ್ರಭುತ್ವಕ್ಕೆ ಸದಾ ಅವಶ್ಯಕವಾಗಿರುತ್ತದೆ.

ಪ್ರತಿನಿಧಿಗಳ ಆಯ್ಕೆಯನ್ನು ನಿಷ್ಪಕ್ಷ ಹಾಗೂ ಸ್ವತಂತ್ರವಾಗಿ ಮಾಡಲು ಸಾಧ್ಯವಾದಷ್ಟೂ ಹೆಚ್ಚಿಗೆ ಅವರು ಪ್ರಜಾಪ್ರಭುತ್ವವನ್ನು ಸಾರ್ಥಕಗೊಳಿಸಬಲ್ಲರು. ಮನುಷ್ಯನ ಯಾವುದೇ ನಿರ್ಣಯವು ಏಕಾಕಿಯಾಗಿರುವುದಿಲ್ಲ. ಆದ್ದರಿಂದ ಇಂಥ ಸ್ವಾತಂತ್ರ್ಯಕ್ಕಾಗಿ ಅವನು ಆರ್ಥಿಕವಾಗಿಯೂ ಸ್ವತಂತ್ರನಾಗಿರಬೇಕಾದ್ದು ಅವಶ್ಯಕವಾಗಿದೆ. ರಾಜಕೀಯ ಪ್ರಜಾಪ್ರಭುತ್ವವು ಆರ್ಥಿಕ ಪ್ರಜಾಪ್ರಭುತ್ವವಿಲ್ಲದೆ ನಡೆಯಲಾರದು. ಆರ್ಥಿಕ ದೃಷ್ಟಿಯಿಂದ ಸ್ವತಂತ್ರವಾದವನು ರಾಜಕೀಯ ದೃಷ್ಟಿಯಿಂದ ತನ್ನ ಮತವನ್ನು ಸ್ವತಂತ್ರವಾಗಿ ಚಲಾಯಿಸಬಲ್ಲನು. ಭೀಷ್ಮಪಿತಾಮಹನಂತಹ ವ್ಯಕ್ತಿಗೂ ಕೂಡ ಆರ್ಥಿಕ ಸ್ವಾವಲಂಬಿಯಲ್ಲದ ಕಾರಣ ತನ್ನ ರಾಜಕೀಯ ವಿಚಾರಗಳ ಮೇಲೆ ಪ್ರತಿಬಂಧವನ್ನು ಹೇರಬೇಕಾಯಿತು. ಸಭೆಯಲ್ಲಿ ಅವನು ಅನ್ಯಾಯದ ಪ್ರತಿಭಟನೆ ಮಾಡದಾದನು. ಪುರುಷನು ಅರ್ಥದ (ಹಣದ) ದಾಸನಾಗಿರುತ್ತಾನೆ ಎಂಬುದನ್ನು ಅವನು ಒಪ್ಪಿಕೊಂಡನು. (ಅರ್ಥಸ್ಯ ಪುರುಷೋ ದಾಸಃ) ಆದ್ದರಿಂದ ಹಣದ ಸ್ವಾತಂತ್ರ್ಯ ಅವಶ್ಯಕವಾಗಿದೆ.

## ವ್ಯಕ್ತಿಯ ಅಧಿಕಾರ

ವ್ಯಕ್ತಿಯಾಗಿ ನಾವು ಆರ್ಥಿಕ ಸ್ವಾತಂತ್ರ್ಯ ಅಥವಾ ಪ್ರಜಾಪ್ರಭುತ್ವದ ಬಗೆಗೆ ವಿಚಾರಮಾಡುತ್ತೇವೆ. ಆದರೆ ಅದರ ಕೆಲವು ಅಧಿಕಾರಗಳಿಗೆ ಒಪ್ಪಿಗೆಯನ್ನು ಹಾಗೂ ಅದರ ಸಂರಕ್ಷಣೆಯ ಗ್ಯಾರಂಟಿಯನ್ನು ನಾವು ಕೊಡಬೇಕಾಗುತ್ತದೆ. (ಉತ್ಪಾದನೆ ಹಾಗೂ ಉಪಭೋಗ ಈ ಎರಡು ಕೆಲಸಗಳ ಮೂಲಕ ವ್ಯಕ್ತಿಯು ಆರ್ಥಿಕ ಕ್ಷೇತ್ರಕ್ಕೆ ಇಳಿಯುತ್ತಾನೆ. ಅವನಿಗೆ ಉತ್ಪಾದನೆ ಹಾಗೂ ಬಳಕೆಯಲ್ಲಿ ಸ್ವಾತಂತ್ರ್ಯ

ದೊರೆತೊಡನೆ, ಅವನು ಆರ್ಥಿಕ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾನೆ ಎಂದು ನಾವು ಹೇಳಬಹುದು.) ಇದರಲ್ಲಿಯೂ ಉತ್ಪಾದನೆಯ ಸ್ವಾತಂತ್ರ್ಯ ಪ್ರಮುಖವಾದದ್ದು. ಯಾಕೆಂದರೆ ಅದರ ಮೂಲಕವೇ ವ್ಯಕ್ತಿಯು ತನ್ನ ಉಪಭೋಗದ ಪಾತ್ರತೆಯನ್ನು ಪಡೆಯುತ್ತಾನೆ. ಅವನು ಸಾಮೂಹಿಕ ಉತ್ಪಾದನೆಯಲ್ಲಿ ಭಾಗಿಯಾಗಿರದಿದ್ದರೆ, ಅವನು ರಾಷ್ಟ್ರಕ್ಕೆ ತನ್ನ ಕೊಡುಗೆಯನ್ನೂ ಕೊಡಲಾರ ಮತ್ತು ಉಪಭೋಗದ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಲಾರ. ನಿಜ, ಅವನು ತನ್ನ ಇಡೀ ಜೀವನ ಅಥವಾ ಎಲ್ಲ ಅವಸ್ಥೆಗಳಲ್ಲಿ ಉತ್ಪಾದನೆ ಮಾಡಲಾರ. ಮಗು ಮತ್ತು ಮುದುಕ, ರೋಗಿ ಮತ್ತು ಅಂಗವಿಕಲ ಸಾಧಾರಣವಾಗಿ ಕೆಲಸದಲ್ಲಿ ತೊಡಗಿಕೊಳ್ಳಲಾರರು. ಆದರೂ ಅವರು ಬಳಕೆಯನ್ನಂತೂ ಮಾಡಲೇಬೇಕಾಗುತ್ತದೆ. ಮತ್ತು ಹಲವು ಬಾರಿ ಅವರ ಪಾಲು 'ನಾರ್ಮಲ್'ಗಿಂತ ಹೆಚ್ಚಿಗೇನೇ ಆಗಿರುತ್ತದೆ. ಆದ್ದರಿಂದ ನಾವು ವ್ಯಕ್ತಿಗೆ ಭರವಸೆಯನ್ನು ನೀಡಬೇಕಾಗುತ್ತದೆ ಮತ್ತು ಅವನು ಕೆಲವು ಅವಸ್ಥೆಗಳಲ್ಲಿ ಕೆಲಸವನ್ನು ಮಾಡಲು ಸಾಧ್ಯವಾಗದಿದ್ದರೂ, ಆ ಸಮಯದಲ್ಲಿ ಅವನು ತನ್ನ ಬಳಕೆಯ ಸ್ವಾತಂತ್ರ್ಯದಿಂದ ವಂಚಿತನಾಗಬೇಕಾಗುವುದಿಲ್ಲ.

**ಪ್ರತಿಯೊಬ್ಬರಿಗೂ ಕೆಲಸ**

'ಪ್ರತಿಯೊಬ್ಬನಿಗೂ ವೋಟು' ಎಂಬುದು ರಾಜಕೀಯ ಪ್ರಜಾಪ್ರಭುತ್ವದ ಒರೆಗಲ್ಲು ಇರುವ ಹಾಗೆಯೇ 'ಪ್ರತಿಯೊಬ್ಬನಿಗೆ ಕೆಲಸ' ಇದು ಆರ್ಥಿಕ ಪ್ರಜಾಪ್ರಭುತ್ವದ ಮಾನದಂಡವಾಗಿದೆ. ಕೆಲಸದ ಈ ಅಧಿಕಾರವೆಂದರೆ ದಾಸ ಕೆಲಸಗಾರ (Slave Labour) ನಂತಲ್ಲ, ಕಮ್ಯುನಿಸ್ಟ ದೇಶಗಳಲ್ಲಿ 'ವೋಟು' ಪ್ರಜಾಪ್ರಭುತ್ವದ ಅಧಿಕಾರದ ಉಪಭೋಗವಾಗಿರುತ್ತದಲ್ಲ, ಹಾಗಲ್ಲ. ಕೆಲಸವು ಮುಖ್ಯವಾಗಿ ಜೀವನ ನಿರ್ವಹಣೆಗಾಗಿ ಇರಬೇಕು. ಹಾಗೂ ಎರಡನೆಯದು ವ್ಯಕ್ತಿಗೆ ಅದನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಇರಬೇಕು. ಕೆಲಸದ ಬದಲಿಗೆ ರಾಷ್ಟ್ರೀಯ ಆದಾಯದ ನ್ಯಾಯೋಚಿತವಾದ ಭಾಗ ದೊರೆಯದಿದ್ದರೆ, ಆ ಕೆಲಸವನ್ನು ಬಿಟ್ಟಿ ಕೆಲಸವೆಂದು ಪರಿಗಣಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕನಿಷ್ಠವೇತನ, ನ್ಯಾಯೋಚಿತ ವಿತರಣೆ ಹಾಗೂ ಯಾವುದಾದರೊಂದು ರೀತಿಯ ಸಾಮಾಜಿಕ ರಕ್ಷಣೆಯ ವ್ಯವಸ್ಥೆ ಬೇಕಾಗುತ್ತದೆ.

**ಮಿತಿಗಳು**

ಉತ್ಪಾದನೆ ಮತ್ತು ಉಪಭೋಗದ ಮಿತಿಯಿಲ್ಲದ ಸ್ವಾತಂತ್ರ್ಯದ ಕಲ್ಪನೆಯನ್ನು ಮಾಡಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಉತ್ಪಾದನೆಯ ಸ್ವಾತಂತ್ರ್ಯವು ಇನ್ನೊಬ್ಬನ ದಾರಿಯಲ್ಲಿ ಆತಂಕವನ್ನುಂಟುಮಾಡಿದರೆ, ಆಗ ಅದನ್ನು ನೀಡಲಾಗದು. ಒಂದು ದೊಡ್ಡ ಕಾರ್ಖಾನೆಯ ಮಾಲಿಕ ಉತ್ಪಾದನೆಯ ಸ್ವಾತಂತ್ರ್ಯದ ಉಪಭೋಗವನ್ನು



ತಾನೇ ಮಾಡುತ್ತಿದ್ದರೂ ಅವನು ಚಿಕ್ಕ ಚಿಕ್ಕ ಉದ್ಯಮಗಳನ್ನು ನಿಲ್ಲಿಸಿ ಅವರ ಸ್ವಾತಂತ್ರ್ಯದ ಅಪಹರಣ ಮಾಡುತ್ತಾನೆ. ಅಲ್ಲದೆ ಅನೇಕ ಬಾರಿ ಅವನ ಕಾರ್ಖಾನೆಯಲ್ಲಿ ಕೆಲಸಮಾಡುವ ಕಾರ್ಮಿಕರ ಸ್ವಾತಂತ್ರ್ಯ ಕೂಡ ಬಹಳ ಸೀಮಿತವಾಗಿರುತ್ತದೆ. ಆದ್ದರಿಂದ ನಿಯಂತ್ರಣದ ಅವಶ್ಯಕತೆಯಿದೆ. ಒಬ್ಬನ ಉತ್ಪಾದನೆಯ ಸ್ವಾತಂತ್ರ್ಯವು ಇನ್ನೊಬ್ಬನ ಉಪಭೋಗ ಸ್ವಾತಂತ್ರ್ಯವನ್ನು ನಿಲ್ಲಿಸಬಾರದೆಂಬ ವಿಚಾರವನ್ನೂ ನಾವು ಯೋಚಿಸಬೇಕು. ಆಹಾರದಲ್ಲಿ ಬೆರಕೆಯನ್ನು ಉತ್ಪಾದನಾ ಸ್ವಾತಂತ್ರ್ಯದ ಹೆಸರಿನಲ್ಲಿ ಮಾಡಲಾಗದು. ಇದು, ಶುದ್ಧ ಆಹಾರವನ್ನು ಬಯಸುವವನ ಸ್ವಾತಂತ್ರ್ಯಕ್ಕೆ ವಿರುದ್ಧವಾದದ್ದು.

ಸ್ವತಂತ್ರ ಹಾಗೂ ಮುಕ್ತ ಸ್ಪರ್ಧೆಯು ವ್ಯಕ್ತಿಗೆ ಉಪಭೋಗದ ಸ್ವಾತಂತ್ರ್ಯವನ್ನು ಕೊಡುತ್ತದೆಯೆಂದು ಹೇಳಲಾಗುತ್ತದೆ. ಇದಕ್ಕೆ ಅನುಸಾರವಾಗಿ ಯಾವುದೇ ವ್ಯಕ್ತಿಯು ಯಾವುದೇ ವಸ್ತುವನ್ನು ಖರೀದಿಸಿದಾಗ ಅವನು ಆರ್ಥಿಕ ಕ್ಷೇತ್ರದಲ್ಲಿ ತನ್ನ ಮತಾಧಿಕಾರದ ಪ್ರಯೋಗವನ್ನು ಮಾಡುತ್ತಾನೆ. ಈ ರೀತಿ ಆಯ್ಕೆಯ ಮೂಲಕ ಬಳಕೆದಾರನು ಉತ್ಪಾದಕರುಗಳಲ್ಲಿ ತನ್ನ ಪ್ರತಿನಿಧಿಯನ್ನು ಆಯ್ಕೆ ಮಾಡಿ ಅರ್ಥವ್ಯವಸ್ಥೆಯ ದಿಕ್ಕು ಮತ್ತು ಗತಿಯನ್ನು ನಿಶ್ಚಿತಗೊಳಿಸುತ್ತಾನೆ. ಈ ತರ್ಕವು ವ್ಯವಹಾರದಲ್ಲಿ ಇಡಿಯಾಗಿ ಕೆಲಸಕ್ಕೆ ಬರುವುದಿಲ್ಲ. ಮೊದಲಿಗೆ ಬಳಕೆದಾರನು ಯಾವುದಾದರೂ ವಸ್ತುವನ್ನು ಆಯ್ಕೆ ಮಾಡಿ, ಅದರ ಉತ್ಪಾದಕನನ್ನು ಅವಶ್ಯವಾಗಿ ಅವನ ಯೋಗ್ಯತೆ, ಮತ್ತು ಕೌಶಲ, ಕಡಿಮೆ ವೆಚ್ಚ ಹಾಗೂ ಉತ್ಕೃಷ್ಟ ಸರಕು ಉತ್ಪಾದಿಸುವ ಅವನ ಸಾಮರ್ಥ್ಯಕ್ಕಾಗಿ ಅವನನ್ನು ಪುರಸ್ಕರಿಸುತ್ತಾನೆ. ಆದರೆ ಅವನು ಯಾರಿಗೆ ತನ್ನ ಮತವನ್ನು ಕೊಡುವುದಿಲ್ಲವೋ, ಅವರು ಆರ್ಥಿಕ ಕ್ಷೇತ್ರದಿಂದ ನಿಧಾನವಾಗಿ ಸರಿದುಹೋಗುತ್ತಾರೆ. ವಿರೋಧಿಗಳೆಲ್ಲ ಮುಗಿದುಹೋದ ಮೇಲೆ ಆ ಕ್ಷೇತ್ರವು ಒಬ್ಬನ ಅಥವಾ ಕೆಲವು ಉತ್ಪಾದಕರ ಏಕಾಧಿಪತ್ಯ ಆಗಿಬಿಡುತ್ತದೆ. ಆಗ ಅವರು ಬಳಕೆದಾರನಿಂದ ಅವನ ಪ್ರಜಾಪ್ರಭುತ್ವದ ಅಧಿಕಾರವನ್ನು ಕಸಿದುಕೊಂಡು ಬಿಡುತ್ತಾರೆ. ಅಲ್ಲದೆ ಬೆಲೆಯು ಬೇಡಿಕೆ ಮತ್ತು ಪೂರೈಕೆಯ ನಿಯಮಗಳಿಂದ ನಿಶ್ಚಿತವಾಗದೆ ಉತ್ಪಾದಕರ ಅವರದೇ ಇಚ್ಛೆ ಮತ್ತು ಯೋಜನೆಯಂತೆ ಆಗುತ್ತದೆ. ಆರ್ಥಿಕ ಕ್ಷೇತ್ರದಲ್ಲಿ ಇದೊಂದು ರೀತಿಯ ಸರ್ವಾಧಿಕಾರಿತನ. ಶಕ್ತಿ ಮತ್ತು ಪ್ರಚಾರ ತಂತ್ರದ ನೆರವು ಎರಡೂ ಸಾಮಾನ್ಯ ಜನರನ್ನು ಅವರ ಅಧಿಕಾರದಿಂದ ವಂಚಿತರನ್ನಾಗಿ ಮಾಡುತ್ತದೆ. ಇದರ ಅರ್ಥವೆಂದರೆ, ಉತ್ಪಾದನೆಯ ಸಾಮರ್ಥ್ಯದ ಮಿತಿಗಳನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂದರ್ಥ. ಇದು ವಿಕೇಂದ್ರೀಕರಣದಿಂದಲೇ ಸಾಧ್ಯವಾಗುತ್ತದೆ. ಕೇವಲ ರಾಜಕೀಯ ಕ್ಷೇತ್ರದಲ್ಲಿಯಷ್ಟೇ ಅಲ್ಲ, ಆರ್ಥಿಕ ಕ್ಷೇತ್ರದಲ್ಲಿಯೂ ವಿಕೇಂದ್ರೀಕರಣ ಆಗಬೇಕು.

### ಅರೆ ನಿರುದ್ಯೋಗ

ಬಿಟ್ಟಿ ನಮ್ಮ ದೃಷ್ಟಿಯಲ್ಲಿ ಕೆಲಸವಲ್ಲದ ಹಾಗೆಯೇ, ವ್ಯಕ್ತಿಯು ಕೆಲಸದಲ್ಲಿ ತೊಡಗಿಕೊಂಡಿರುತ್ತಲೂ, ತನ್ನ ಶಕ್ತಿಯಷ್ಟು ಉತ್ಪಾದನೆಯನ್ನು ಮಾಡಲು ಸಾಧ್ಯವಾಗದಿರುವುದೂ ಕೂಡ ಕೆಲಸವಲ್ಲ. ಅಂಡರ್‌ಎಂಪ್ಲಾಯ್‌ಮೆಂಟ್ ಕೂಡ ಒಂದು ಬಗೆಯ ನಿರುದ್ಯೋಗವೇ ಆಗಿದೆ. ಶ್ರಮವೇ ನಮ್ಮ ಬಹುದೊಡ್ಡ ಬಂಡವಾಳವಾಗಿರುವ ಭಾರತದಂತಹ ದೇಶದ ಸಾಮರ್ಥ್ಯಕ್ಕೆ ಅನುಗುಣವಾಗಿ ಶ್ರಮದ ಉಪಯೋಗ ಮಾಡದಿರುವುದು ಘಾತಕವಾಗಿದೆ. ಆದ್ದರಿಂದ ವಿಕೇಂದ್ರೀಕರಣದ ಜೊತೆಗೆ ಇನ್ನೂ ಒಂದು ವಿಷಯದ ಬಗೆಗೆ ಗಮನ ಕೊಡಬೇಕು. ರಾಷ್ಟ್ರದ ಉತ್ಪಾದನೆಯಲ್ಲಿ ವ್ಯಕ್ತಿಯು ತನ್ನ ಸಂಪೂರ್ಣ ಕೊಡುಗೆಯನ್ನು ಕೊಡುವಂತಾಗಬೇಕು. ಇದಿಲ್ಲದೆ ಕೆಳ ಸ್ತರದ, ಮತ್ತು ಸಾಮಾಜಿಕ ಸುರಕ್ಷಿತತೆಯ ಗ್ಯಾರಂಟಿಯ ಮೂಲಕ ಬಳಕೆಯ ಸ್ವಾತಂತ್ರ್ಯವು ಅಪ್ರಾಮಾಣಿಕವಾಗುತ್ತದೆ. ಈ ವ್ಯವಸ್ಥೆಗಳು ಕರೆನ್ಸಿ ಅಪಮೌಲ್ಯದ ಕಾರಣ ಮನುಷ್ಯನಿಗೆ ಬೇಕಾದ ಮಟ್ಟವನ್ನು ಕೊಡಲು ಸಾಧ್ಯವಾಗಲಾರವು.

### ವಿಕೇಂದ್ರೀಕರಣ

ಆರ್ಥಿಕ ಮತ್ತು ರಾಜಕೀಯ ಸಾಮರ್ಥ್ಯವು ಒಂದು ಸ್ಥಾನದಲ್ಲಿ ಕೇಂದ್ರೀಕೃತವಾಗುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿರುವಂತೆಯೇ, ಒಂದೇ ವ್ಯಕ್ತಿ ಅಥವಾ ಸಂಸ್ಥೆಯ ಬಳಿ ರಾಜಕೀಯ, ಸಾಮಾಜಿಕ, ಹಾಗೂ ಆರ್ಥಿಕ ಶಕ್ತಿಯ ಕೇಂದ್ರೀಕರಣವು ಪ್ರಜಾಪ್ರಭುತ್ವದ ಹಾದಿಯಲ್ಲಿ ಬಾಧಕವಾಗಿದೆ. ಸಾಧಾರಣವಾಗಿ, ಯಾವುದೇ ಒಂದು ಕ್ಷೇತ್ರದ ಶಕ್ತಿಯು ಕೇಂದ್ರಿತವಾದಾಗ, ಕೇಂದ್ರದಲ್ಲಿರುವ ವ್ಯಕ್ತಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷ ರೀತಿಯಿಂದ ಅನ್ಯ ಕ್ಷೇತ್ರಗಳ ಶಕ್ತಿಯನ್ನೂ ತನ್ನ ಹತೋಟಿಗೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಾನೆ. ಖಿಲಾಫತ್ ಮತ್ತು ಕಮ್ಯುನಿಸ್ಟರ ಸರ್ವಾಧಿಕಾರಿ ಸರಕಾರಗಳು ಹುಟ್ಟಿಕೊಂಡದ್ದು ಇದರಿಂದಲೆ. ಮನುಷ್ಯನ ಜೀವನವೆಂಬುದು ಒಂದಾದರೂ, ಮತ್ತು ಅದರ ವಿಭಿನ್ನ ಪ್ರವೃತ್ತಿಗಳು ಒಂದು ಇನ್ನೊಂದಕ್ಕೆ ಪೂರಕವಾಗಿದ್ದರೂ, ಆ ಪ್ರವೃತ್ತಿಗಳ ಪ್ರತಿನಿಧಿತ್ವ ಮಾಡುವ ನಿಕಾಯಗಳು ಬೇರೆ ಬೇರೆಯಾಗಿರಬೇಕು. ಸಾಮಾನ್ಯವಾಗಿ ರಾಜ್ಯದ ಬೇರೆ ಬೇರೆ ಘಟಕಗಳು ಆಡಳಿತ ಕ್ಷೇತ್ರದಿಂದ ಸರಿದು ಅರ್ಥದ ಕ್ಷೇತ್ರದಲ್ಲಿ ಪ್ರವೇಶ ಮಾಡಬಾರದು. ಬಂಡವಳಶಾಹಿ ಅರ್ಥವ್ಯವಸ್ಥೆಯು ಮೊದಲು ಆರ್ಥಿಕ ಕ್ಷೇತ್ರದ ಮೇಲೆ ಹಿಡಿತವನ್ನು ಸಾಧಿಸಿದ ನಂತರ ಪರೋಕ್ಷ ರೂಪದಿಂದ ರಾಜ್ಯದ ಮೇಲೆ ಅಧಿಕಾರ ಮಾಡುತ್ತದೆ. ಆದರೆ ಸಮಾಜವಾದವು ರಾಜ್ಯವನ್ನೇ ಸಂಪೂರ್ಣ ಉತ್ಪಾದನೆಯ ಸಾಧನಗಳ ಒಡೆಯನನ್ನಾಗಿ ಮಾಡುತ್ತದೆ. ಎರಡೂ ವ್ಯವಸ್ಥೆಗಳು ವ್ಯಕ್ತಿಯ ಪ್ರಜಾಪ್ರಭುತ್ವದ



ಅಧಿಕಾರ ಹಾಗೂ ಅದರ ಆರೋಗ್ಯಕಾರಿಯಾದ ವಿಕಾಸಕ್ಕೆ ಪ್ರತಿಕೂಲವಾಗಿವೆ. ಆದ್ದರಿಂದ ವಿಕೇಂದ್ರೀಕರಣದ ಜೊತೆ ಜೊತೆಗೆ ಶಕ್ತಿಗಳ ವಿಭಜನೆಯ ಬಗೆಗೂ ನಾವು ವಿಚಾರಮಾಡಬೇಕಾಗುತ್ತದೆ.

ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಇನ್ನೂ ಹೆಚ್ಚು ಇಲ್ಲಿ ವಿವೇಚನೆ ಮಾಡಬೇಕಾಗಿಲ್ಲ. ಇಷ್ಟನ್ನೇ ಹೇಳಬಹುದು, ಅದು ಆತ್ಮೀಯತೆಯನ್ನು ಮಾನವ ವ್ಯವಹಾರದ ತಳಹದಿ ಎಂದು ಭಾವಿಸಿದೆ. ಕುಟುಂಬದಿಂದ ಹಿಡಿದು ಸಂಪೂರ್ಣ ವಿಶ್ವದವರೆಗೆ ಈ ಸರ್ವ ಆತ್ಮ ಐಕ್ಯದ ಭಾವನೆಯ ವ್ಯಾವಹಾರಿಕ ಎಲ್ಲೆಗಳಿವೆ. ವ್ಯವಸ್ಥೆಯಲ್ಲಿ ಮನುಷ್ಯನ ನಡುವಣ ವ್ಯವಹಾರವು, ಅವನು ತನ್ನದೇ ಸ್ಥಿತಿಯ ಅನುಸಾರ, ಕೃತ್ರಿಮವಾಗದೆ ಆತ್ಮೀಯತೆಯ ಆಧಾರದ ಮೇಲೆ ಆಗಲು ಸಾಧ್ಯವಾದರೆ, ಅದೇ ನಮಗೆ ಉಪಯುಕ್ತವಾಗುತ್ತದೆ. ಅವುಗಳಲ್ಲಿ ಮಾನವನ ವಿವಿಧತೆಗಳು ಮತ್ತು ವಿಶೇಷತೆಗಳಿಗೆ ಯಾವ ಸ್ಥಾನವೂ ಇಲ್ಲ. ಕೇಂದ್ರಿತ ವ್ಯವಸ್ಥೆಗಳು ಮಾನವನನ್ನು ಮಾನವನೆಂದು ಭಾವಿಸದೆ ಅವನೊಡನೆ ಒಂದು ರೀತಿಯ ವ್ಯವಹಾರ ಮಾಡುತ್ತವೆ. ಪರಿಣಾಮವಾಗಿ ಅವು ಅವನನ್ನು ಮೇಲಕ್ಕೆತ್ತುವ ಬದಲು ಯಂತ್ರದ ಬಿಡಿಭಾಗವನ್ನಾಗಿ ಮಾತ್ರ ಮಾಡುತ್ತವೆ. ಅವನ ಸ್ವಂತದ ವ್ಯಕ್ತಿತ್ವವನ್ನು ಕೊಲ್ಲಲಾಗುತ್ತದೆ. ಹಾಗಾಗಿ ವಿಕೇಂದ್ರೀಕರಣವು ನಮ್ಮ ಸಂಸ್ಕೃತಿಗೂ ಅನುಕೂಲಕರವೇ ಆಗಿದೆ. ಈ ವ್ಯವಸ್ಥೆಯಲ್ಲಿ ವ್ಯಕ್ತಿಯು ವ್ಯವಹಾರ ಮಾಡುತ್ತಾನೆ. ನಿಶ್ಚಿತವಾಗಿಯೂ ಅದರಲ್ಲಿ ಮಾನವ ಸಂಬಂಧಗಳು ಮತ್ತು ಮಾನವನ ಸುಧಾರಣೆ ಹಾಗೂ ವಿಕಾಸಕ್ಕೆ ಬಹಳ ಅವಕಾಶ ಇದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಷ್ಟ್ರೀಯ ಸುರಕ್ಷತೆ, ಪೂರ್ಣ ಉದ್ಯೋಗ, ಅತಿಕಡಿಮೆ ಬಳಕೆಯ ಭರವಸೆ ಹಾಗೂ ವಿಕೇಂದ್ರೀಕರಣ ಇವು ನಮ್ಮ ಆರ್ಥಿಕ ಯೋಜನೆಯ ಮೂಲಭೂತ ಗುರಿ ಆಗಬಹುದಾಗಿದೆ.

# ೪. ಆದ್ಯತೆಗಳು

ನಾವು ಭಾರತದ ಆರ್ಥಿಕ ಪರಿಸ್ಥಿತಿಯನ್ನು ನೋಡಿದಾಗ, ನಮ್ಮೆದುರು ಅನೇಕ ತಥ್ಯಗಳು ತೆರೆದುಕೊಳ್ಳುತ್ತವೆ. ಭಾರತದ ರಾಷ್ಟ್ರೀಯ ಆದಾಯ ಪ್ರತಿವ್ಯಕ್ತಿಗೆ ೧೯೫೬–೫೭ರಲ್ಲಿ* ಸದ್ಯದ ಬೆಲೆಯಂತೆ ೨೯೪.೩ ರೂಪಾಯಿಗಳು ಎಂದು ಲೆಕ್ಕಹಾಕಲಾಗಿದೆ. ೧೯೪೮–೪೯[೧]ರಲ್ಲಿ ಅದು ಕೇವಲ ೨೮೪ ರೂಪಾಯಿಗಳಾಗಿದ್ದವು. ನಾವು ಈ ಅಂಕೆಯ ಹೋಲಿಕೆಯನ್ನು ವಿಶ್ವದ ಅನ್ಯದೇಶಗಳ ತಲಾ ಆದಾಯದೊಡನೆ, ರಾಷ್ಟ್ರೀಯ ಆದಾಯದೊಡನೆ ಮಾಡಿದರೆ ಆಗ ಭಾರೀ ಅಂತರ ಕಾಣಿಸುತ್ತದೆ. ಅಮೇರಿಕಾ ಸಂಯುಕ್ತ ಸಂಸ್ಥಾನ, ಬ್ರಿಟನ್ (U.K.), ಕೆನಡಾ, ಮತ್ತು ಜಪಾನ್‌ದಲ್ಲಿ ಈ ಅಂಕೆಗಳು[೨] ಕ್ರಮವಾಗಿ ೮೭೮೪ ರೂ., ೪೦೫೭ ರೂ., ೬೦೫೬ ರೂ. ಹಾಗೂ ೯೨೨ ರೂ. ಆಗಿವೆ. ಈ ಪಟ್ಟಿಯಲ್ಲಿ ಭಾರತವು ಎಲ್ಲರಿಗಿಂತ ಕೆಳಗಿದೆ. ಆದರೆ ನಾವು ಈ ಅಂಕೆಗಳಿಂದ ಯಾವುದೇ ಅನುಪಾತದ ನಿಷ್ಕರ್ಷೆಗೆ ತಲುಪಿದರೆ ತಪ್ಪು ಮಾಡಿದಂತಾಗುತ್ತದೆ. ರಾಷ್ಟ್ರೀಯ ಆದಾಯವನ್ನು ಯಾವ ಸಿದ್ಧಾಂತಗಳ ಮೇಲೆ ಊಹಿಸಲಾಗುವುದೋ ಅದು ಭಾರತಕ್ಕೆ ಸಂಪೂರ್ಣ ಅನ್ವಯ ಆಗುವುದಿಲ್ಲ. ಭಾರತದಲ್ಲಿನ ಬಹಳಷ್ಟು ಉತ್ಪಾದನೆಗಳು ಕರೆನ್ಸಿಯ ಕ್ಷೇತ್ರದ ಒಳಗಡೆ ಬರುವುದೇ ಇಲ್ಲ. ನಮ್ಮಲ್ಲಿ ವ್ಯಾಪಕ ಪ್ರಮಾಣದಲ್ಲಿ ಲೆಕ್ಕ–ಪತ್ರ ಇಡುವ ಮತ್ತು ಅದನ್ನು ರಾಷ್ಟ್ರೀಯ ಆದಾಯ ನಿಗದಿಪಡಿಸಲು ಉಪಯೋಗಿಸಿಕೊಳ್ಳುವ ಪದ್ಧತಿಯೇ ಇಲ್ಲ. ಅಂಕಿ–ಸಂಖ್ಯೆಗಳನ್ನು ಒಗ್ಗೂಡಿಸುವುದು ಮತ್ತು ಅವುಗಳನ್ನು ಸಾರ್ವದೇಶಿಕ ಆಧಾರದ ಮೇಲೆ ವಿವೇಚಿಸುವುದರಲ್ಲಿಯೂ ಅನೇಕ ತೊಂದರೆಗಳಿವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ದೇಶದಲ್ಲಿ ಬಡತನವು ವ್ಯಾಪಕ ಪ್ರಮಾಣದಲ್ಲಿದೆ, ಅದನ್ನು ದೂರ ಮಾಡಬೇಕು.

### ಉತ್ಪಾದನೆಯ ಬೆಳವಣಿಗೆ

ಬಡತನವನ್ನು ದೂರಮಾಡಲು ಮೊದಲ ಅವಶ್ಯಕತೆಯೆಂದರೆ, ದೇಶದ

* ೧೯೬೯–೭೦ : ೫೮೯೩
೧. ೧೯೬೦–೬೧ : ೩೩೯೪
೨. ೨೬೮೩೫, ೧೦೮೮೩, ೧೬೮೫೨, ೮೪೧೫



ಉತ್ಪಾದನೆಯನ್ನು ಹೆಚ್ಚಿಸುವುದು. ಜೊತೆಗೆ ನಾವು ಇನ್ನೊಂದು ಸಂಗತಿಯ ಕಡೆಗೂ ಗಮನಕೊಡಬೇಕು. ಉತ್ಪಾದನೆಯನ್ನು ಸಮಾಜದಲ್ಲಿ ಸಮಾನವಾಗಿ ವಿತರಣೆ ಮಾಡಲು ಸಾಧ್ಯವಾಗಬೇಕು, ಅದರಿಂದ ಇಂದಿನ ಬಡವರು ಹಣವಂತರೆನಿಸಲು ಸಾಧ್ಯವಾಗಬೇಕು. ಸಾಮಾನ್ಯವಾಗಿ ಆರ್ಥಿಕ ಉತ್ಪಾದನೆಯೆನ್ನುವುದು ಪ್ರಕೃತಿ ಹಾಗೂ ಮನುಷ್ಯನ ಜಂಟಿ ಪ್ರಯತ್ನದ ಪರಿಣಾಮವಾಗಿದೆ. ರಾಷ್ಟ್ರೀಯ ದೃಷ್ಟಿಯಿಂದ ಪ್ರಕೃತಿಯು ಕೊಡಮಾಡಿದ ಸಾಧನಗಳನ್ನು ನಮ್ಮ ಅವಶ್ಯಕತೆಗಳು ಪೂರ್ಣವಾಗುವ ರೀತಿಯಲ್ಲಿ ಸ್ಥೂಲವಾಗಿ ರಚನಾತ್ಮಕವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗಬೇಕು. ನಮ್ಮ ಅವಶ್ಯಕತೆಗಳು ಬದಲಾದರೆ ನಮ್ಮ ಉತ್ಪಾದನೆಗಳನ್ನೂ ನಾವು ಬದಲು ಮಾಡಿಕೊಳ್ಳಬೇಕಾಗುವುದು. ಆದ್ದರಿಂದ ಉತ್ಪಾದನೆಗೆ ಮುಂಚೆ ನಮ್ಮ ಅವಶ್ಯಕತೆಗಳ ಬಗೆಗೆ ವಿಚಾರ ಮಾಡಬೇಕು. ಭಾರತದ ಎಲ್ಲಕ್ಕಿಂತ ದೊಡ್ಡ ಸಮಸ್ಯೆಯೆಂದರೆ, ನಮ್ಮ ಅವಶ್ಯಕತೆಗಳು ತುಂಬ ವೇಗದಿಂದ ವೃದ್ಧಿಸುತ್ತಿವೆ ಮತ್ತು ಬದಲಾಗುತ್ತಿವೆ, ಉತ್ಪಾದನೆಯು ಅವುಗಳ ಜೊತೆಯಲ್ಲಿ ಹೆಜ್ಜೆಹಾಕಲು ಸಾಧ್ಯವಾಗುತ್ತಿಲ್ಲ. ಈ ವ್ಯತ್ಯಾಸಕ್ಕೆ ಕಾರಣವೆಂದರೆ, ಒಂದು ಕಡೆ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ತೀವ್ರಗತಿಯಲ್ಲಿ ಬದಲಾಗುತ್ತಿರುವ ಜೀವನ ಪದ್ಧತಿ, ಇನ್ನೊಂದು ಕಡೆ ಉತ್ಪಾದನಾ ಪ್ರಕ್ರಿಯೆ ಹಾಗೂ ಅರ್ಥವ್ಯವಸ್ಥೆಯ ಚಲನಶೂನ್ಯತೆಯೇ ಆಗಿದೆ. ನಾವು ಪರಂಪರಾಗತವಾಗಿ ಉತ್ಪಾದನೆ ಮಾಡುತ್ತಿರುವ ವಸ್ತುಗಳ ಅವಶ್ಯಕತೆಯು ನಮಗೆ ಇಂದು ಇಲ್ಲವಾಗಿರುವುದೊಂದಾದರೆ, ಇನ್ನೊಂದು ಇಂದು ನಮಗೆ ಅವಶ್ಯವಾಗಿರುವ ವಸ್ತುಗಳನ್ನು ನಾವು ಇಂದು ನಾವು ಉತ್ಪಾದನೆ ಮಾಡಲು ಆಗುತ್ತಿಲ್ಲದಿರುವುದು. ಭಾರತೀಯ ಜೀವನ ಪದ್ಧತಿಯ ಬಗ್ಗೆ ಹುಟ್ಟಿರುವ ನಿರಾಸಕ್ತಿ ಹಾಗೂ ಪರಾನುಕರಣಶೀಲ ಪ್ರವೃತ್ತಿ ಮತ್ತು ಸ್ವಾಭಿಮಾನ ಶೂನ್ಯತೆಯ ದೃಷ್ಟಿಕೋನಗಳ ಪರಿಣಾಮ ಇದಾಗಿದೆ. ದೇಶಭಕ್ತಿ ಹಾಗೂ ಸಂಸ್ಕೃತಿ ನಿಷ್ಠೆಯ ಈ ಆರ್ಥಿಕ ಆಯಾಮವನ್ನು ನಾವು ಕಡೆಗಣಿಸಲು ಸಾಧ್ಯವಿಲ್ಲ.

### ಜನಸಂಖ್ಯೆಯ ವೃದ್ಧಿ

ಜನಸಂಖ್ಯೆಯ ಬೆಳವಣಿಗೆಯ ವಿಚಾರವನ್ನು ಮಾಡಬೇಕಾಗಿದೆ. ಈ ಜನ ಸಂಖ್ಯಾ ವೃದ್ಧಿಯನ್ನು ತಡೆಯಬೇಕು, ಅದೂ ಸಂತಾನ ನಿಯಂತ್ರಣದ ಕೃತಕ ಉಪಾಯಗಳಿಂದ, ಅದೇ ಏಕಮಾತ್ರ ಉಪಾಯವೆಂದು ಪಶ್ಚಿಮದ ವಿದ್ವಾಂಸರು ಸಲಹೆ ಮಾಡುತ್ತಾರೆ. ಆಡಳಿತವೂ ಅದನ್ನೇ ಅವಲಂಬಿಸಿ ಕೆಲಸ ಮಾಡುತ್ತಿದೆ. ಇದು ಸಮಸ್ಯೆಗೆ ಪರಿಹಾರವಲ್ಲ. ಅಲ್ಲದೆ ಇದರಿಂದ ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಭವಿಷ್ಯದಲ್ಲಿ ಏನೇನು ಪರಿಣಾಮಗಳಾಗಬಹುದು ಎಂಬುದನ್ನೂ ನಾವು ಗಂಭೀರವಾಗಿ ವಿಚಾರ ಮಾಡಬೇಕು. ಜನಸಂಖ್ಯೆಯ ವೃದ್ಧಿಯ ಈ ವ್ಯಾಪಕವಾದ

ಭಯವು ನಮಗೆ ಜೀವನದಲ್ಲಿನ ಆಸ್ಥೆಯನ್ನೇ ಸಮಾಪ್ತಗೊಳಿಸುವುದಿಲ್ಲವೇ? ಜೀವನದಲ್ಲಿ ಒಂದು ಬಾರಿ ಆಸಕ್ತಿ ಹೊರಟುಹೋದರೆ, ಮತ್ತೆ ಮಾನವ ಪ್ರಯತ್ನಗಳ ಪ್ರೇರಣೆಯೇ ನಾಶವಾಗಿ ಬಿಡುತ್ತದೆ. ವ್ಯಾಪಕ ರೂಪದಿಂದ ಈ ಉಪಾಯವನ್ನು ಅವಲಂಬಿಸುವುದು ಸುಲಭವಲ್ಲ, ಸರಳವಲ್ಲ, ಮತ್ತು ವಂಚಿತರಾಗಿರುವ ವರ್ಗದಲ್ಲಿ ಅದರ ಸಫಲತೆಯೂ ಸಂದೇಹಾಸ್ಪದವೇ ಆಗಿದೆ. ಇದಕ್ಕೆ ವಿರುದ್ಧವಾಗಿ ಆರ್ಥಿಕ ಪ್ರಗತಿ ಹಾಗೂ ಸಾಮಾಜಿಕ ರಕ್ಷಣೆಯ ಆಧಾರದ ಮೇಲೆ ಮನುಷ್ಯನಿಗೆ ನಿಶ್ಚಿಂತೆಯನ್ನು ನೀಡುವಂತಾದರೆ ಅದೇ ಹೆಚ್ಚು ಫಲದಾಯಕವಾದೀತು.[೧]

### ಬಳಕೆಯ ವಸ್ತುಗಳ ಹೆಚ್ಚಳ

ಉತ್ಪಾದನೆಯೆಂಬುದು ಮುಖ್ಯವಾಗಿ ಎರಡು ರೀತಿಯ ವಸ್ತುಗಳದ್ದಾಗಿರುತ್ತದೆ: (೧) ಬಳಕೆಯ ವಸ್ತುಗಳು ಹಾಗೂ (೨) ಉತ್ಪಾದನೆಯ ವಸ್ತುಗಳು. ಅರ್ಥಾತ್ ಮನುಷ್ಯನು ಉಪಯೋಗ ಮಾಡದೇನೇ ಬಳಕೆಯ ವಸ್ತುಗಳ ಉತ್ಪಾದನೆಯಲ್ಲಿ ಕೆಲಸಕ್ಕೆ ಬರುವಂತಹ ಪದಾರ್ಥಗಳು ಅಥವಾ ವಸ್ತುಗಳು, ಯಾಕೆಂದರೆ ಮಾನವನ ಎಲ್ಲ ಆರ್ಥಿಕ ಕ್ರಿಯೆಗಳ ಗುರಿ ಬಳಕೆಯ ವಸ್ತುಗಳನ್ನು ಪಡೆಯುವುದು. ಇದನ್ನು ಕಡಿಮೆ ವೆಚ್ಚದಲ್ಲಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ಸಾಧ್ಯವಾದಷ್ಟೂ ಒಳ್ಳೆಯದು. ಯಾವುದೇ ಅರ್ಥ ವ್ಯವಸ್ಥೆಯಲ್ಲಿ ಬಳಕೆಯ ವಸ್ತುಗಳಿಗಾಗಿ ಅವಶ್ಯಕತೆಗಿಂತ ಹೆಚ್ಚು ಬಳಕೆಯ ವಸ್ತುಗಳ ಉತ್ಪಾದನೆಯಾದರೆ ಅದು ಮನುಷ್ಯನಿಗೆ ಸುಖವನ್ನು ಕೊಡಲಾರದು. ಪಶ್ಚಿಮವು ಈ ಉತ್ಪಾದನಾ ವಿಧಾನವನ್ನು ಅನುಸರಿಸಿದೆ, ಅದರಲ್ಲಿ ಬಳಕೆಯವಸ್ತುಗಳನ್ನು ಪಡೆಯಲು ಹಲವು ಉತ್ಪಾದನಾ ವಸ್ತುಗಳ ಅವಶ್ಯಕತೆಯುಂಟಾಗುತ್ತದೆ. ಒಂದು ಬಾರಿ ಈ ದೀರ್ಘ ವರ್ತುಲ ಪೂರ್ಣವಾದರೆ, ನಿರೀಕ್ಷೆಗಿಂತ ಕಡಿಮೆ ಪ್ರಯತ್ನದಿಂದ ಹೆಚ್ಚು ಬಳಕೆಯಾಗುವ ವಸ್ತುಗಳನ್ನು ಪಡೆಯಲು ಸಾಧ್ಯವೆಂಬುದು ನಿಜವೇ ಆಗಿದೆ. ಆದರೆ ಈ ದಾರಿಯನ್ನು ಕ್ರಮಿಸಲು ಪಶ್ಚಿಮಕ್ಕೆ ಶತಮಾನಗಳೇ ಹಿಡಿದವು ಮತ್ತು ಅದಕ್ಕೆ ಕೋಟ್ಯಂತರ ಮಾನವರ ಶ್ರಮ ಹಾಗೂ ಶಕ್ತಿಯ ಶೋಷಣೆ ಮಾಡುವ ಅವಕಾಶ ದೊರೆಯಿತು. ಇಷ್ಟಾಗಿಯೂ ಈ ವಿಧಾನವು

೧) ಪ್ರಾಚೀನ ಶಾಸ್ತ್ರಕಾರರು ಕೂಡ ಸಮಾಜದ ಅಸಾಮಾನ್ಯ ಹೆಚ್ಚಳದಿಂದ ಹುಟ್ಟಿದ ಸಮಸ್ಯೆಗಳ ಬಗ್ಗೆ ವಿಚಾರ ಮಾಡಿದ್ದಾರೆ. "ಜಾತಿರೂಪೀ ವೃಕ್ಷವು ಅಪೇಕ್ಷೆಯಿಲ್ಲದ ಅಂಶವನ್ನು ಉತ್ಪನ್ನ ಮಾಡಗೊಡದೆ ಮತ್ತು ಉತ್ಪನ್ನವಾದ ಅಪೇಕ್ಷೆಯಿಲ್ಲದ ಅಂಶವನ್ನು ತೆಗೆದುಹಾಕಿ ಅದನ್ನು ಪತನದಿಂದ ಉಳಿಸುವುದು ಜಾತೀಯ ಲವಣ ಎನ್ನಲಾಗಿದೆ". ಇದಕ್ಕಾಗಿ ಮೂರು ಮುಖ್ಯ ಅಂಗಗಗಳನ್ನು ಪರಿಗಣಿಸಲಾಗಿದೆ: (೧) ಬಾಲಬ್ರಹ್ಮಚರ್ಯ (೨) ವಾನಪ್ರಸ್ಥ ಪದ್ಧತಿ (೩) ಯುದ್ಧ.



ಸಂಪತ್ತಿನ ಉತ್ಪಾದನೆಯ ಹೊರತಾಗಿ ಮಾನವ ಸಂಬಂಧಗಳ ಹಾಗೂ ವಿತರಣೆಯ ಎಂಥ ಸಮಸ್ಯೆಗಳನ್ನು ಹುಟ್ಟುಹಾಕಿದೆಯೆಂದರೆ, ಅವುಗಳ ಪರಿಹಾರ ಮಾಡುವ ಪ್ರಯತ್ನದಲ್ಲಿ ಮಾನವನು ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡುಬಿಟ್ಟಿದ್ದಾನೆ. ನಮಗೆ ಸದಾ ಅವಶ್ಯಕವಾದಷ್ಟೇ ವಸ್ತುಗಳ ಉತ್ಪಾದನೆಯಾಗುವಂತೆ, ನಾವು ಈಗ ನಮ್ಮ Optimum level ಹುಡುಕಿಕೊಳ್ಳಬೇಕಾಗಿದೆ. ಅಡ್ಡಾದಿಡ್ಡಿ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು. ಭಾರತದಲ್ಲಿ ಈ ಪ್ರಕ್ರಿಯೆಯನ್ನು ಅನುಸರಿಸುತ್ತಿರುವುದರಿಂದ ಉತ್ಪಾದನೆ ಮತ್ತು ಬಳಕೆಯ ಅವಶ್ಯಕತೆಗಳಲ್ಲಿ ಮತ್ತಷ್ಟು ಅಂತರ ಹೆಚ್ಚಾಗಿದೆ.*

### ಉತ್ಪಾದನೆಯ ಮಿತಿ

ನಾವು ಸಮಾಜದ ಅವಶ್ಯಕತೆಗಳ ಬಗೆಗೆ ವಿಚಾರ ಮಾಡುವಾಗ, ಮುಂದೆ ಸಮಾಜದ ಇಚ್ಛೆಗಳು ಮತ್ತು ಅವಶ್ಯಕತೆಗಳು ಮುಂದುವರಿಯಬಾರದು, ಮತ್ತು ಆದ್ದರಿಂದ ಅನೇಕ ಪ್ರಕಾರದ ಹಾಗೂ ಯಾವುದೇ ಪ್ರಮಾಣದವರೆಗೆ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ ಎಂಬೀ ರೀತಿಯ ಯಾವುದೇ ಸೀಮಾರೇಖೆಯನ್ನು ಎಳೆಯಲು ಸಾಧ್ಯವಿಲ್ಲ. ಆದರೆ ನಾವು ಬೇರೆ ವಿಷಯಗಳ ಬಗೆಗೆ ಗಮನವಿಡಬೇಕಾಗುತ್ತದೆ :

(೧) ಪ್ರಕೃತಿಯ ಸಾಧನಗಳ ವ್ಯವಸ್ಥೆ ಮಾಡಿ ನಾವು ಹೊಸ ಹೊಸ ವಸ್ತುಗಳನ್ನು ನಿರ್ಮಾಣ ಮಾಡುತ್ತೇವಾದರೂ ಅವು ಸೀಮಿತವಾಗಿವೆ. ಮನುಷ್ಯನು ತನ್ನ ಬುದ್ಧಿಯಿಂದ ಒಂದೇ ವಸ್ತುವನ್ನು ಪಡೆಯಲು ಒಂದಕ್ಕಿಂತ ಹೆಚ್ಚು ಸಾಧನಗಳನ್ನು ಶೋಧಿಸುತ್ತ ಹೋಗುತ್ತಿದ್ದರೂ ನಾವು ಬಹಳ ಗಡಿಬಿಡಿಯಲ್ಲಿ ಮತ್ತು ವಿಚಾರ ಮಾಡದೆ ಅವುಗಳನ್ನು ಖರ್ಚು ಮಾಡುತ್ತ ಹೋಗುವುದು ಬುದ್ಧಿವಂತಿಕೆಯಾಗಲಾರದು.

(೨) ಪ್ರಕೃತಿಯಲ್ಲಿ ಒಂದು ಸಮತೋಲನ (ಇಕ್ವಿಲಿಬ್ರಿಯಮ್) ಇದೆ. ನಿತ್ಯ ಪರಿವರ್ತನಶೀಲವೂ ಚಲನಶೀಲವೂ ಆದ ಜಗತ್ತಿನಲ್ಲಿಯೂ ಇದೇ ಕಾರಣದಿಂದ ವಿಭಿನ್ನ ಶಕ್ತಿಗಳು, ಕ್ರಿಯೆಗಳು, ಪ್ರತಿಕ್ರಿಯೆಗಳ ನಡುವೆ ಸಮತೋಲನ ರೂಪಿತವಾಗಿದೆ. ಪ್ರಕೃತಿಯು ತನ್ನದೇ ಆದ ಪದ್ಧತಿಯ ಮೂಲಕ ಕ್ಷಯವಾದುದನ್ನು ತುಂಬಿಕೊಳ್ಳುತ್ತಿರುತ್ತದೆ. ಇಡೀ ಜಗತ್ತೇ ತನಗಾಗಿ ನಿರ್ಮಾಣವಾಗಿದೆ ಎಂದು

* ಅರ್ಥವನ್ನು ಮುಖ್ಯ ಮತ್ತು ಗೌಣವೆಂಬ ಎರಡು ರೂಪಗಳಲ್ಲಿ ಹಂಚಿ ಹಳೆಯ ಶಾಸ್ತ್ರಕಾರರು ಹೇಳಿದ್ದಾರೆ: ಗೌಣ ಅರ್ಥವು ಮುಖ್ಯ ಅರ್ಥಕ್ಕಿಂತ ಎಂದೂ ಪ್ರಬಲ ಮತ್ತು ಅಧಿಕ ಆಗಬಾರದು. ಇದು ಅರ್ಥದ ಪ್ರಭಾವದ ದ್ಯೋತಕವಾಗಿದೆ. ಕರೆನ್ಸಿ ಹಾಗೂ ಉತ್ಪಾದಕ ವಸ್ತುಗಳು ಗೌಣ ಅರ್ಥದ ಒಳಗಡೆ ಬರುತ್ತವೆ.

ಮನುಷ್ಯನು ಭಾವಿಸುತ್ತ ಎಷ್ಟೊಂದು ವೇಗವಾಗಿ ಅವುಗಳ ನಾಶ ಮಾಡುತ್ತಿದ್ದಾನೆಂದರೆ, ಪ್ರಕೃತಿಯು ಈ ಹಾನಿಯನ್ನು ಭರಿಸಲಾಗುತ್ತಿಲ್ಲ ಮತ್ತು ಅದರ ಸಮತೋಲನವೂ ಉಳಿಯಲು ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ಕಾರ್ಯದ ಎಲ್ಲ ಬಗೆಯ ಪರಿಣಾಮಗಳ ಬಗೆಗೆ ವಿಚಾರ ಮಾಡಬಲ್ಲ ಜ್ಞಾನವು ಇನ್ನೂ ಮಾನವನಲ್ಲಿ ಕಮ್ಮಿಯಿದೆ. ಜ್ಞಾನವೇನಾದರೂ ಇದ್ದರೂ ಅಲ್ಲಿ ಅದರ ಪರಿಣಾಮಗಳನ್ನು ತಡೆಯುವ ಸಾಮರ್ಥ್ಯವಂತೂ ಬಹಳ ಕಡಿಮೆಯಿದೆ. ವೇಗವಾಗಿ ಅಡವಿಯನ್ನು ಕತ್ತರಿಸಿ ಹಾಕುವುದರಿಂದ, ಕಾಲುವೆಗಳಿಂದ ಭೂಮಿಗೆ ನೀರುಣಿಸುವ (Water logging) ಕಾರಣದಿಂದ ಜವುಳಾಗಿ ಅನುತ್ಪಾದಕ ಆಗುವುದು ಇತ್ಯಾದಿ ಕೆಲವು ಉದಾಹರಣೆಗಳಾಗಿವೆ.

(೩) ಉತ್ಪಾದನೆಯ ಪ್ರಕಿಯೆ ಹೇಗಿರಬೇಕೆಂದರೆ, ಹುಟ್ಟುವಳಿಯಾದ ಸರಕಿಗೆ ಸಮಾನವಾಗಿ ಮಾರಾಟ ಆಗುತ್ತಿರಬೇಕು. ಅರ್ಥಾತ್ ಸಾಮಾನ್ಯ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದರ ಜೊತೆ ಜೊತೆಗೆ ಉತ್ಪಾದನೆಯೂ ಹೆಚ್ಚಿದರೆ ಅಗ್ಗವಾಗುವುದು ಹಾಗೂ ವ್ಯರ್ಥವಾಗುವುದರ ಸಮಸ್ಯೆಗಳು ಹುಟ್ಟುವುದೇ ಇಲ್ಲ. ಸಾಮಾಜಿಕ ರಕ್ಷಣೆಯ ನಿಯಮ, ಆಡಳಿತಾತ್ಮಕ ನಿಯಂತ್ರಣ ಮುಂತಾದವು ರೋಗದ ಉಪಚಾರಗಳಾಗಿವೆ. ಆರೋಗ್ಯಕಾರಿಯಾದ ಜೀವನದ ನಿಯಮಗಳಲ್ಲ.

## ಬಳಕೆಯ ಕನಿಷ್ಠ ಮಿತಿ

ಮೇಲೆ ಹೇಳಿದ ಮಿತಿಗಳೊಳಗೇ ಉತ್ತರೋತ್ತರ ಅಭಿವೃದ್ಧಿ ಹೊಂದುವುದರ ಜೊತೆಗೇ ನಾವು ಉತ್ಪಾದನೆಯ ಕನಿಷ್ಠತಮ ಅವಸ್ಥೆ ಹಾಗೂ ಭಾವೀಕಾರ್ಯಕ್ರಮಗಳಿಗಾಗಿ ಆದ್ಯತೆಯನ್ನೂ ನಿರ್ಣಯ ಮಾಡಬೇಕು. ಸ್ಥೂಲವಾಗಿ ಹೇಳುವುದಾದರೆ ಅನ್ನ, ಬಟ್ಟೆ, ವಸತಿ, ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯ ಇವೆಲ್ಲ ಅವಶ್ಯಕತೆಗಳು ಎಲ್ಲರಿಗೂ ದೊರೆಯಬೇಕು. ಯಾವುದೇ ದೇಶದ ಜೀವನಮಟ್ಟವನ್ನು ಭೌತಿಕ ನೆಲೆಯಲ್ಲಿ ಅಂದಾಜು ಮಾಡಬೇಕಾದರೆ, ಇವೆಲ್ಲವೂ ಪ್ರಾರಂಭದ ಬಿಂದುವೆಂದು ತಿಳಿದೇ ಮುಂದುವರಿಯಬೇಕಾಗುತ್ತದೆ. ಸಮಾಜದ ಯಾವುದೇ ವರ್ಗಕ್ಕೆ ಈ ಸೌಕರ್ಯಗಳು ದೊರೆಯದಿದ್ದರೆ ಆ ಸಮಾಜದ ಜೀವನ ಸ್ತರನಮ್ಮ ಮೇಲಿನ ಋಣ ಎಂದೇ ಭಾವಿಸಬೇಕಾಗುತ್ತದೆ.

## ಆಹಾರ

ಈ ಐದು ಅವಶ್ಯಕ ವಸ್ತುಗಳಲ್ಲಿಯೂ ಆಹಾರ ಅತ್ಯಂತ ಅವಶ್ಯಕವಾದದ್ದು. ಅದಿಲ್ಲದೆ ಜೀವ ಮಾತ್ರವು ಬದುಕಿ ಬಾಳಲಾರದು. “ಅನ್ನಂ ವೈ ಪ್ರಾಣಃ” ಅನ್ನವೇ ಜೀವನ. ಸಾಕಷ್ಟು ಆಹಾರ ವಸ್ತುಗಳು ದೊರೆಯದ ಯಾವ ಸಮಾಜದ ಅರ್ಥ



ವ್ಯವಸ್ಥೆಯೂ ನಿಲ್ಲಲಾರದು. ಆಹಾರ ಉತ್ಪಾದನೆಯಲ್ಲಿ ತೊಡಗಿಲ್ಲದೆ ಇರುವವರಿಗೂ ಆಹಾರವು ಬೇಕೇಬೇಕು. ಆಹಾರ ಧಾನ್ಯಗಳನ್ನು ಉತ್ಪಾದಿಸುವವನು ತನ್ನ ಅವಶ್ಯಕತೆಗೂ ಹೆಚ್ಚಿಗೆ ಉತ್ಪಾದನೆಯನ್ನು ಮಾಡಲು ಸಾಧ್ಯವಾದಾಗ ಮಾತ್ರ ಅವನು ಅನ್ಯರಿಗಾಗಿ ಆಹಾರವನ್ನು ಉಳಿಸಬಲ್ಲ. ಜೊತೆಗೆ, ಆಹಾರ ಉತ್ಪಾದನೆಗೆ ಹೊರತಾದ ಬೇರೆ ಕೆಲಸಗಳಲ್ಲಿ ತೊಡಗಿರುವವರ ಸೇವೆಗಳು ಆಹಾರ ಉತ್ಪಾದಕರ ಅವಶ್ಯಕತೆಗಳಿಗೆ ಹೊಂದುವ ರೀತಿಯಲ್ಲಿ ಇರಬೇಕು. ಈ ರೀತಿಯಲ್ಲಿ ಒಬ್ಬರು ಇನ್ನೊಬ್ಬರ ಬೇಡಿಕೆಗಳನ್ನು ಪೂರ್ಣ ಮಾಡುತ್ತ ಹೋದರೆ ವ್ಯವಸ್ಥೆಯು ಮುಂದುವರಿಯುತ್ತದೆ.

ಕೃಷಿ ಪದಾರ್ಥ, ಹೈನು ಉತ್ಪಾದನೆ, ಮಾಂಸ, ಮೀನು, ಮೊಟ್ಟೆ, ಇತ್ಯಾದಿಗಳು ಆಹಾರದ ಪರಿಧಿಯಲ್ಲಿ ಬರುತ್ತವೆ. ಇವೆಲ್ಲವುಗಳಲ್ಲಿ ಕೃಷಿಯೇ ಮಾನವನ ಆಹಾರದ ಮುಖ್ಯ ಆಧಾರವಾಗಿದೆ. ಭಾರತಕ್ಕಂತೂ ಇದು ವಿಶೇಷವಾಗಿ ಅನ್ವಯ ಆಗುತ್ತದೆ. ಆದ್ದರಿಂದ ಕೃಷಿಕನ ಉತ್ಪಾದನೆಯಿಂದ ಅವನ ಅವಶ್ಯಕತೆಗೆ ಮಿಕ್ಕಿದ ಹೆಚ್ಚಿನ ಆಹಾರವನ್ನು (surplus) ಹೇಗೆ ಪಡೆದುಕೊಳ್ಳುವುದು ಎಂಬುದೇ ನಮ್ಮ ಮುಂದಿರುವ ಮುಖ್ಯ ಪ್ರಶ್ನೆಯಾಗಿದೆ. ಇದಕ್ಕೆ ಇರಬಹುದಾದ ಮೂರು ದಾರಿಗಳೆಂದರೆ:

೧. ಒಕ್ಕಲುತನವನ್ನು ಅವಲಂಬಿಸಿದವರ ಸಂಖ್ಯೆಯನ್ನು ಕಡಿಮೆ ಮಾಡುವುದರ ಮೂಲಕ.
೨. ಸರಕಾರಿ ಆದೇಶ, ಗೇಣಿದಾರಿಕೆ, ಅಥವಾ ಮಾರುಕಟ್ಟೆಯ ಮತ್ತು ಕರೆನ್ಸಿಯ ಹಾಗೂ ಹಣಕಾಸಿನ ನೀತಿಯ ಮೂಲಕ ರೈತನನ್ನು ಅರೆಹೊಟ್ಟೆ ಇಟ್ಟು ಅತಿಹೆಚ್ಚನ್ನು ಪಡೆದುಕೊಳ್ಳುವುದರ ಮೂಲಕ.
೩. ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ.

## ಕೃಷಿಯ ಮೇಲೆ ಭಾರ

೧೯೫೧ರ ಜನಗಣತಿ ಪ್ರಕಾರ ೨೪.೯೦ ಕೋಟಿ ವ್ಯಕ್ತಿಗಳು ಅರ್ಥಾತ್ ಒಟ್ಟು ಜನಸಂಖ್ಯೆಯ ೬೯.೮ ಶೇಕಡಾ ವ್ಯಕ್ತಿಗಳು ಕೃಷಿಯ ಮೂಲಕವೇ ಜೀವನ ನಡೆಸುತ್ತಿದ್ದಾರೆ. ಇವರಲ್ಲಿ ಶೇಕಡ ೧೮ ಕೃಷಿ ಕೆಲಸಗಾರರು ಹಾಗೂ ಅವರ ಅವಲಂಬಿತರು ಇದ್ದಾರೆ. ಉಳಿದಂತೆ ಅವರಲ್ಲಿ ಅನುತ್ಪಾದಕ ಹಿಡುವಳಿ ಇರುವ ಕೃಷಿಕರ ಸಂಖ್ಯೆಯೂ ಸಾಕಷ್ಟಿದೆ. ಇವರೆಲ್ಲರ ಹುಟ್ಟುವಳಿಯಲ್ಲಿ ಅವರ ಅವಶ್ಯಕತೆಗಳ ಅನಂತರ ಬಹುಶಃ ಸ್ವಲ್ಪವೂ ಉಳಿಯುವುದಿಲ್ಲ. ಈ ದೃಷ್ಟಿಯಿಂದ ಬೇರೆ ದೇಶಗಳ ಜೊತೆಗೆ ತುಲನಾತ್ಮಕ ಅಂಕಿ ಅಂಶಗಳು ಬಹಳ ಪ್ರಯೋಜನಕಾರಿಯಾಗುತ್ತವೆ.

ಪ್ರತಿ ೧೦೦೦ ಜನರಲ್ಲಿ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳು

| | ಭಾರತ | ಸಂ.ರಾ. ಅಮೇರಿಕಾ (U.S.A) | ಬ್ರಿಟನ್ (U.K.) |
|---|---|---|---|
| ೧. ಕೃಷಿ, ಪಶುಪಾಲನೆ, ಅರಣ್ಯ ಹಾಗೂ ಮೀನು ಸಾಕಣೆ | ೭೦೬ | ೧೨೮ | ೫೦ |
| ೨. ಗಣಿಗಾರಿಕೆ, ವ್ಯವಸ್ಥಾಪನೆ, ಮತ್ತು ವ್ಯಾಪಾರ | ೧೫೩ | ೪೫೬ | ೫೫೫ |
| ೩. ಬೇರೆ ಉದ್ಯಮ ಹಾಗೂ ಸೇವೆಗಳು | ೧೪೧ | ೪೧೬ | ೩೯೫ |
| | ೧೦೦೦ | ೧೦೦೦ | ೧೦೦೦ |

ಅನುಪಾತದ ದೃಷ್ಟಿಯಿಂದ ಭಾರತದಲ್ಲಿ ಬಹುದೊಡ್ಡ ಸಂಖ್ಯೆಯ ಜನರು ಭೂಮಿಯನ್ನೇ ಅವಲಂಬಿಸಿದ್ದಾರೆ ಎಂಬುದು ನಿರ್ವಿವಾದ. ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ಸಂಖ್ಯೆ ಶೇಕಡ ೬೬ ರಿಂದ ಶೇಕಡ ೭೦ ಆಗಿದೆ. ನಾವು ಈ ಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವಾದರೆ ಸ್ವಾಭಾವಿಕವಾಗಿಯೇ ಆಹಾರಧಾನ್ಯದ ಮಾರುಕಟ್ಟೆಯ ಹೆಚ್ಚಳ ಅತಿಯಾಗುವುದು. (Market Surplus) ಈ ಸಂಖ್ಯೆ ಕಡಿಮೆಯಾದರೆ ಕೃಷಿಯನ್ನು ಅಲ್ಲಗಳೆಯುವುದು ನಿಂತುಹೋಗುವುದು ಹಾಗೂ ವಿಕಾಸಕ್ಕಾಗಿ ಹೆಚ್ಚಿನ ಸಾಧನಗಳನ್ನು ಒಗ್ಗೂಡಿಸಲು ಸಾಧ್ಯವಾಗಬಹುದು.

## ಔದ್ಯೋಗೀಕರಣ ಮತ್ತು ಕೃಷಿ

ಕೃಷಿಯನ್ನೇ ಅವಲಂಬಿಸಿದ ವ್ಯಕ್ತಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಏಕಮಾತ್ರ ಉಪಾಯವೆಂದರೆ ಜನರನ್ನು ಉದ್ಯೋಗಗಳಲ್ಲಿ ಹಾಗೂ ಬೇರೆಬೇರೆ ವ್ಯವಹಾರಗಳಲ್ಲಿ ತೊಡಗಿಸುವುದು. ಆದರೆ ಅವರನ್ನು ಬೇರೆ ಉದ್ಯೋಗದಲ್ಲಿ ತೊಡಗಿಸಿದರೆ ಆಗ ಉಳಿದ ರೈತರು ಇವರಿಗಾಗಿ ಉಳಿಸಿ ಅನ್ನವನ್ನು ಕೊಡಬೇಕಾಗುತ್ತದೆ. ಯಂತ್ರ–ಕಾರಖಾನೆಗಳಲ್ಲಿ ತೊಡಗಿಕೊಂಡ ವ್ಯಕ್ತಿಗಳಿಗೆ ಈ ಅವಶ್ಯಕತೆಗಳು ಪೂರ್ಣವಾಗದಿದ್ದರೆ ಮತ್ತೆ ಅವರು ಅಲ್ಲಿ ಕೆಲಸ ಮಾಡಲಾರರು. ಮೇಲಾಗಿ ಮರಳಿ ಬಂದು ಹೊಲದ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ಆದ್ದರಿಂದ ಕೆಲವು ಜನರ ಅಭಿಪ್ರಾಯವೆಂದರೆ ರೈತರು ಆರಂಭದಲ್ಲಿ ಭಾರವನ್ನು ಹೊರಲೇಬೇಕಾಗುತ್ತದೆ. ಬಲವಂತವಾಗಿ ಧಾನ್ಯ ವಸೂಲಿ, ಕಚ್ಚಾ ಮತ್ತು ಪಕ್ಕಾ ಸರಕುಗಳ ಬೆಲೆಗಳಲ್ಲಿ ಅಂತರ, ಹಾಗೂ ಗೇಣಿದಾರಿಕೆ (Tenancy) ಯಂತಹ ವ್ಯವಸ್ಥೆಯನ್ನು ಮಾಡುವುದು, ಅದರಿಂದ ರೈತನು ತನ್ನ ಜೀವನಮಟ್ಟವನ್ನು ಮೇಲಕ್ಕೆತ್ತುವುದರ ಬದಲು ಬೇರೆಯವರಿಗಾಗಿ ಕೃಷಿ ಸಾಮಗ್ರಿಯನ್ನು ಹೊಂದಿಸುವುದು ಮತ್ತು ಅವರಿಗೆ ಅವಶ್ಯಕ ಮಾರುಕಟ್ಟೆ ನೀಡುತ್ತ ಉಳಿಯುವುದು. ಉದ್ಯೋಗವು ಚೆನ್ನಾಗಿ ನೆಲೆಗೊಂಡ ಮೇಲೆ ಹೇಗೆ ಬೆಳೆಸಿಕೊಂಡು ಹೋಗಬೇಕೆಂಬ ದಿಕ್ಕು



ನಿಶ್ಚಿತವಾಗುವುದು ಮತ್ತು ಅನಂತರ ರೈತನ ಪರಿಸ್ಥಿತಿಯನ್ನೂ ಸುಧಾರಣೆ ಮಾಡಬಹುದು.

ಈ ಬಗೆಯ ತರ್ಕವು ಭ್ರಮಾತ್ಮಕವಾದದ್ದು. ಭಾರತ ಹಾಗೂ ಬೇರೆ ವಸಾಹತಿನ ರೈತರು ಇದೇ ವ್ಯವಸ್ಥೆಯ ಆಧಾರದಮೇಲೆ ಇಂಗ್ಲೆಂಡಿನ ಉದ್ಯೋಗ ವ್ಯವಹಾರಗಳನ್ನು ಸ್ಥಿರಗೊಳಿಸಿದರು. ಆದರೆ ಅದರ ಲಾಭ ಅವರಿಗೆ ಇಂದಿನವರೆಗೂ ಆಗಲಿಲ್ಲ. ಅಷ್ಟೇ ಅಲ್ಲ, ಸಂಯುಕ್ತ ರಾಷ್ಟ್ರ ಅಮೇರಿಕಾದಲ್ಲಿ ಕೂಡ ಅಲ್ಲಿನ ಸಾವಿರದಲ್ಲಿ ೧೨೭ ಜನ ಒಕ್ಕಲುತನದಲ್ಲಿ ತೊಡಗಿಕೊಂಡಿದ್ದರೂ ಅವರು ಕೇವಲ ತಮ್ಮ ದೇಶದ ಅವಶ್ಯಕತೆಯನ್ನು ಪೂರ್ಣಗೊಳಿಸುವುದಷ್ಟೇ ಅಲ್ಲ, ಮೇಲಾಗಿ ರಫ್ತು ಮಾಡಬಹುದಾದಷ್ಟು ಉತ್ಪಾದನೆಯನ್ನೂ ಮಾಡುತ್ತಾರೆ. ರೈತರು ತಮ್ಮ ಸಮೃದ್ಧಿಗಾಗಿ ಕಾನೂನಿನ, ಬೆಲೆ ಸ್ಥಿರೀಕರಣ ಮುಂತಾದ ನೀತಿಗಳ ಮೇಲೆ ಅವಲಂಬಿಸಬೇಕಾಗುತ್ತದೆ.

## ಕೃಷಿಯ ಆದಾಯ ಹೆಚ್ಚಳದ ಅವಶ್ಯಕತೆ

ಭಾರತದಲ್ಲಿ ಒಕ್ಕಲುತನವನ್ನು ಶೇಕಡ ೬೯.೮ ವ್ಯಕ್ತಿಗಳು ಅವಲಂಬಿಸಿದರೂ, ರಾಷ್ಟ್ರೀಯ ಆದಾಯಕ್ಕೆ ಅವರ ಕೊಡುಗೆ ಕೇವಲ ಶೇಕಡ ೫೧. ಪ್ರತಿ ವ್ಯಕ್ತಿಗೆ ಕೃಷಿ ಆದಾಯ ಕೇವಲ ೫೦೦ ರೂಪಾಯಿ ಬರುತ್ತದೆ. ಗಣಿ ಹಾಗೂ ಕಾರಖಾನೆಗಳಲ್ಲಿ ಅದು ೧೭೦೦ ರೂಪಾಯಿ ಆಗಿದೆ. ಈ ವ್ಯತ್ಯಾಸಕ್ಕೆ ಕಾರಣವೆಂದರೆ ನಿಶ್ಚಿತವಾಗಿಯೂ ಆ ಬೆಲೆನೀತಿಯು ರೈತನ ಹಿತವನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರಿತವಾಗುವುದಿಲ್ಲ.

ನಾವು ಸ್ವಲ್ಪ ಗಂಭೀರವಾಗಿ ಯೋಚಿಸಿದರೆ, ಕೃಷಿ ಆದಾಯವನ್ನು ಹೆಚ್ಚಿಸಿದ ಹೊರತು ಉದ್ಯೋಗಗಳನ್ನೂ ದೃಢವಾಗಿ ನಿಲ್ಲಿಸಲಾರೆವು. ರೈತನು ತನ್ನ ಉಳಿತಾಯದಲ್ಲಿ ಎಷ್ಟು ಪ್ರಮಾಣದಲ್ಲಿ ಹೆಚ್ಚು ಹೆಚ್ಚು ಔದ್ಯೋಗಿಕ ವಸ್ತುಗಳನ್ನು ಖರೀದಿಸಬಲ್ಲನೋ, ಅಷ್ಟೇ ಹೆಚ್ಚು ಜನರಿಗೆ ಕೃಷಿಯೇತರ ವೃತ್ತಿಗಳಲ್ಲಿ ಕೆಲಸ ದೊರೆಯಬಲ್ಲದು. ಭಾರತದಲ್ಲಿ ಕೃಷಿಯನ್ನೇ ಅವಲಂಬಿಸಿ ಬದುಕುವವರ ಸಂಖ್ಯೆಯು ಬಹುದೊಡ್ಡದಿರುವುದರಿಂದ ಅವರ ಸಾಮಾನ್ಯ ಹಾಗೂ ತೀರಾ ಅವಶ್ಯಕತೆಗಳನ್ನು ಪೂರೈಸಲು ಕೂಡ ಸಾಕಷ್ಟು ಜನರಿಗೆ ಕೆಲಸ ದೊರೆಯಬಹುದು ಎಂಬ ವಿಷಯ ಸತ್ಯವಂತೂ ಹೌದು. ಅವರು ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು, ಕೊಳ್ಳುವ ಶಕ್ತಿಯನ್ನು ಹೊಂದಿಸುವುದಕ್ಕಾಗಿ ಸಾಧ್ಯವಿರುವ ಎಲ್ಲ ಉಪಾಯ ಮಾಡಿ ಧಾನ್ಯವನ್ನು ಉಳಿಸುತ್ತಾರೆ. ಎಷ್ಟರಮಟ್ಟಿಗೆ ಅಂದರೆ, ಸ್ವಯಂ ಕಡಿಮೆ ಊಟ ಮಾಡಿ ಪೇಟೆಯಿಂದ ಬಟ್ಟೆ, ಎಣ್ಣೆ, ನೇಗಿಲು ಮುಂತಾದವನ್ನು ಖರೀದಿಸಲು ಧಾನ್ಯವನ್ನು ಮಾರುತ್ತಾರೆ. ಹಾಗಾಗಿ ಧಾನ್ಯ ತುಟ್ಟಿಯಾದರೆ ಕಡಿಮೆ ಧಾನ್ಯವನ್ನು ಮಾರಿದರೆ ಸಾಕು ಎಂದು ಉಳಿದ ಧಾನ್ಯವನ್ನು ತಮಗಾಗಿ ಊಟಕ್ಕೆ ಇಟ್ಟುಕೊಳ್ಳುತ್ತಾರೆ. ಮಾರುಕಟ್ಟೆಗೆ ಧಾನ್ಯ ಕಡಿಮೆ ಬಂದಾಗ ಅದು ತುಟ್ಟಿಯಾಗುತ್ತದೆ, ಆಗ ಉದ್ಯೋಗಗಳಲ್ಲಿ ಕೆಲಸ

ಮಾಡುವವರ ಕೂಲಿಯನ್ನು ಹೆಚ್ಚಿಸಬೇಕಾಗುತ್ತದೆ ಅಥವಾ ಅನುತ್ಪಾದಕ ಘಟಕವನ್ನು ಮುಚ್ಚಬೇಕಾಗುತ್ತದೆ. ಈ ರೀತಿಯಲ್ಲಿ ಒಂದು ವಿಷಚಕ್ರ ಸುತ್ತ ತೊಡಗುತ್ತದೆ. ಫಲವಾಗಿ ರೈತರಿಂದ ಹೆಚ್ಚು ಹೆಚ್ಚು ಧಾನ್ಯ ಪಡೆದು ಕಾರಖಾನೆಗಳನ್ನು ಚಾಲೂ ಇಡಬೇಕು ಎಂದು ಭಾವಿಸಿಕೊಂಡು ನಡೆಸಲಾಗುತ್ತದೆ. ಇಂಥ ಸ್ಥಿತಿಯಲ್ಲಿ ತನ್ನ ಜೀವನ ಮಟ್ಟವನ್ನು ಋಣಮುಕ್ತ ಸ್ಥಿತಿಗೆ ತರಲೂ ರೈತನಿಗೆ ಸಾಧ್ಯವಾಗುವುದಿಲ್ಲ, ಕೃಷಿಯಲ್ಲಿ ಸುಧಾರಣೆ ಮಾಡಲು ಏನಾದರೂ ಸ್ವಲ್ಪ ಉಳಿಸೋಣವೆಂದರೆ ಅದೂ ಸಾಧ್ಯವಾಗುವುದಿಲ್ಲ. ರೈತನ ಈ ಸ್ಥಿತಿಯ ಅನುಚಿತ ಲಾಭ ಪಡೆದು ಬಲವಂತವಾಗಿ ಅವನಿಂದ ಉಳಿತಾಯ ಮಾಡಿಸುವುದು ಸಮಸ್ಯೆಗೆ ಪರಿಹಾರವಲ್ಲ. ಬದಲಿಗೆ ಅವನ ಮನಸ್ಸಿನಲ್ಲಿಯೇ ತನ್ನ ವಿಕಾಸಕ್ಕಾಗಿ ಉಳಿತಾಯ ಮಾಡುವ ಇಚ್ಛೆಯನ್ನು ಹುಟ್ಟಿಸುವುದು. ಅವನು ವಿಕಾಸದ ಕಡೆ ಹೊರಳಿಕೊಳ್ಳುವವರೆಗೆ ನಾವು ಉತ್ತರೋತ್ತರ ಅಭಿವೃದ್ಧಿ ಹೊಂದುವ ಮಾರುಕಟ್ಟೆಯನ್ನು ರೂಪಿಸಲಾರೆವು. ಪೇಟೆಯನ್ನು ಬೆಳೆಸದೆ ಉದ್ಯೋಗ–ದಂಧೆಗಳು ವಿಕಾಸದ ದಿಕ್ಕಿನತ್ತ ನಿರಂತರವಾಗಿ ಮುಂದುವರಿಯಲಾರವು.

### ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ

ಒಕ್ಕಲುತನದ ಹುಟ್ಟುವಳಿ ಮಾರಾಟದ ಹೆಚ್ಚಳ (Marketable Surplus) ವನ್ನು ಹೊಂದಲು ಎಲ್ಲಕ್ಕಿಂತ ಉತ್ತಮ ಉಪಾಯವೆಂದರೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು. ಕೃಷಿಕನಾದವನು ತನ್ನ ಅವಶ್ಯಕತೆಗಿಂತ ಹೆಚ್ಚಿಗೆ ಉತ್ಪಾದನೆಯನ್ನು ಮಾಡಿದಾಗ, ಅವನಿಗೆ ತನ್ನ ಜೀವನಮಟ್ಟವನ್ನು ಎತ್ತರಿಸಲು ಬೇಕಾದ ಔದ್ಯೋಗಿಕ ವಸ್ತುಗಳನ್ನು ಖರೀದಿಸುವ ಅವಶ್ಯಕತೆ ಉಂಟಾಗುತ್ತದೆ ಮತ್ತು ಕೃಷಿ ಹಾಗೂ ಉದ್ಯೋಗಗಳೆರಡೂ ಒಂದು ಇನ್ನೊಂದಕ್ಕೆ ಪೂರಕವಾಗುತ್ತದೆ. ರಾಷ್ಟ್ರೀಯ ಅಭಿವೃದ್ಧಿಯ ಬಗ್ಗೆ ನಾವು ವಿಚಾರ ಮಾಡಿದಾಗ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ತೀರಾ ಅವಶ್ಯಕವಾಗಿದೆ. ವಿಭಜನೆಯನಂತರದ ದಿನಗಳಲ್ಲಿ ಭಾರತವು ಆಹಾರ ಸಾಮಗ್ರಿ ಉತ್ಪಾದನೆಯ ದೃಷ್ಟಿಯಿಂದ ಸ್ವಾವಲಂಬಿಯಾಗಿ ಉಳಿಯಲಿಲ್ಲ. ಕಳೆದ ಹನ್ನೊಂದು ವರ್ಷಗಳಿಂದ ಅದು ಬಹುದೊಡ್ಡ ಪ್ರಮಾಣದಲ್ಲಿ ಹೊರಗಿನಿಂದ ಆಹಾರಧಾನ್ಯಗಳನ್ನು ತರಿಸಬೇಕಾಗುತ್ತಿದೆ.

### ಆಹಾರ ಧಾನ್ಯದ ಉತ್ಪಾದನೆಯಲ್ಲಿ ಸ್ವಾವಲಂಬನೆ

ಆಹಾರಧಾನ್ಯದಂತಹ ಮಹತ್ವದ ವಿಷಯದಲ್ಲಿ ಅನ್ಯರನ್ನು ಅವಲಂಬಿಸುವುದು ನಮಗೆ ಯಾವ ಸಮಯಕ್ಕಾದರೂ ಸಂಕಟವನ್ನು ಹುಟ್ಟಿಸಬಹುದಾಗಿದೆ. ರಾಜಕೀಯ ಹಾಗೂ ಅನ್ಯ ಮಗ್ಗಲುಗಳನ್ನು ಬಿಟ್ಟರೂ, ಆರ್ಥಿಕ ದೃಷ್ಟಿಯಿಂದಲೂ ನಾವು ಈ ಪ್ರಶ್ನೆಯನ್ನು ಬಿಡಿಸಲೇಬೇಕಾಗಿದೆ. ಕಾರಣ, ಆಹಾರಧಾನ್ಯಗಳನ್ನು ನಾವು ಬೇರೆ



ದೇಶಗಳಿಂದ ಕೊಳ್ಳುತ್ತೇವಲ್ಲ, ಮರಳಿ ಅವರಿಗೆ ಕೊಡಲು ನಮ್ಮ ಬಳಿ ಏನೂ ಇಲ್ಲ. ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ಹಾಗೂ ಅರ್ಜೆಂಟೈನಾದಂತಹ ಮುಖ್ಯದೇಶಗಳು ನಮಗೆ ಗೋಧಿಯನ್ನು ಕೊಡಬಲ್ಲವು ಹಾಗೂ ಕೊಡುತ್ತಲೂ ಇವೆ. ಆದರೆ ನಮ್ಮ ಹಾಗೂ ಅವರ ವ್ಯವಹಾರ ಪೂರಕವಾಗಿಲ್ಲ. ನಾವು ಔದ್ಯೋಗೀಕರಣದತ್ತ ಮುಂದುವರಿಯುತ್ತಿರುವುದು ನಿಜ, ಆದರೆ ನಮ್ಮಲ್ಲಿನ ಸರಕುಗಳನ್ನು ನಾವು ಈ ದೇಶಗಳಲ್ಲಿ ಮಾರಾಟ ಮಾಡಲಾರೆವು. ಈವರೆಗೆ ನಾವು ಯುದ್ಧದ ಸಮಯದಲ್ಲಿ ಉಳಿದ ಪೌಂಡ್ ಅಥವಾ ಬೇರೆ ರೂಪದಲ್ಲಿ ಪಡೆದ ವಿದೇಶೀ ಸಾಲ ಹಾಗೂ ನೆರವಿನ ಅನುಕೂಲದಿಂದ ಈ ಆಹಾರಧಾನ್ಯವನ್ನು ಪಡೆದಿದ್ದೇವೆ. ನಮ್ಮ ಪೌಂಡು ಪಡೆದ ಹಣವೆಲ್ಲ ಸುಮಾರಾಗಿ ಮುಗಿದುಹೋಗಿದೆ, ಹಾಗೂ ವಿದೇಶೀ ನೆರವನ್ನು ಯಾವಾಗಲೂ ನೆಚ್ಚಿಕೊಳ್ಳುವಂತಿಲ್ಲ. ಅದು ಸಂದಿಗ್ಧವೇ ಆಗಿದೆ, ಹಾಗಾಗಿ ನಾವು ಗಟ್ಟಿಯಾದ ನೆಲಗಟ್ಟಿನ ಮೇಲೆ ನಿಂತುಕೊಳ್ಳಬೇಕಾದ ಅವಶ್ಯಕತೆಯಿದೆ.

ವಿದೇಶಗಳಿಂದ ನಾವು ನಿರಂತರ ಆಹಾರಧಾನ್ಯವನ್ನು ಹೇಗಾದರೂ ಮಾಡಿ ಪಡೆಯುತ್ತಿರುತ್ತೇವೆ ಎಂತಲೇ ಇಟ್ಟುಕೊಳ್ಳೋಣ, ಮತ್ತು ಅದರಿಂದ ನಮ್ಮ ಕಾರಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಜೀವನ ನಿರ್ವಹಣೆಯ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು ಎಂದೇ ಇಟ್ಟುಕೊಂಡರೂ ಭಾರತವನ್ನು ಸಮೃದ್ಧವಾಗಿಸಬೇಕೆಂಬ ನಮ್ಮ ಉದ್ದೇಶ ಇದರಿಂದ ಪೂರ್ಣವಾಗದು. ಭಾರತವು ಹೊರಗಿನ ಮಾರುಕಟ್ಟೆಯನ್ನು ಹುಡುಕಿಕೊಳ್ಳುವ ಮುಂಚೆ, ತನ್ನದೇ ದೇಶದೊಳಗಿನ ವಿಶಾಲ ಮಾರುಕಟ್ಟೆಯ ವಿಕಾಸವನ್ನು ಸಾಧಿಸಿಕೊಳ್ಳಬೇಕಾಗಿದೆ. ಕೃಷಿ ಉತ್ಪನ್ನದ ಹೆಚ್ಚಳದಿಂದ ಮಾತ್ರವೇ ಇದು ಸಾಧ್ಯವಾಗಬಹುದು.

ಈ ರೀತಿಯಲ್ಲಿ ನಾವು (೧) ಕೃಷಿ (೨) ಉದ್ಯೋಗ (೩) ವಾಣಿಜ್ಯ ಹಾಗೂ (೪) ಸಾಮಾಜಿಕ ಸೇವೆಗಳು ಹೀಗೆ ನಮ್ಮ ಆದ್ಯತೆಗಳನ್ನು ನಿಶ್ಚಿತಗೊಳಿಸಿಕೊಳ್ಳಬಹುದು. ಆದರೆ ನಾವು ಗಮನದಲ್ಲಿಡಬೇಕಾದ ಸಂಗತಿಯೆಂದರೆ, ಈ ನಾಲ್ಕೂ ಒಂದರೊಡನೊಂದು ನಿಕಟವಾದ ಒಳಸಂಬಂಧವನ್ನು ಹೊಂದಿವೆ. ನಾವು ಇವುಗಳಲ್ಲಿ ಒಂದನ್ನು ಉಪೇಕ್ಷಿಸಿ ಇನ್ನೊಂದರ ವಿಕಾಸ ಮಾಡಲಾರೆವು. ನಮ್ಮ ವಿಚಾರಗಳು ತೌಲನಿಕವಾಗಿಯೇ ಇರಬೇಕಾಗುತ್ತದೆ.*

* 'ಉತ್ತಮ ಕೃಷಿ, ಮಧ್ಯಮ ವ್ಯಾಪಾರ, ನಿಕೃಷ್ಟ ನೌಕರಿ, ಭಿಕ್ಷೆ ಅವಸಾನ' ಎಂಬ ಗಾದೆಮಾತಿನಲ್ಲಿ ಅರ್ಥಶಾಸ್ತ್ರದ ಅನುಭವಪೂರ್ಣ ತತ್ತ್ವ ಅಡಗಿದೆಯೆಂದು ತೋರುತ್ತದೆ.

# ೫. ಕೃಷಿ

## ಒಕ್ಕಲುತನಕ್ಕೆ ಒತ್ತು

ಕೃಷಿಯ ಉತ್ಪನ್ನವನ್ನು ಹೆಚ್ಚಿಸುವ ಪ್ರಶ್ನೆ ನಮ್ಮೆದುರು ಬಂದಾಗ, ಕೃಷಿಯ ಇವತ್ತಿನ ಸ್ಥಿತಿ ಹಾಗೂ ಅದರ ಸಮಸ್ಯೆಗಳ ಕಡೆಗೆ ನಮ್ಮ ಗಮನ ಹೋಗುತ್ತದೆ. ಉತ್ಪಾದನೆ ಹಾಗೂ ಪ್ರತಿ ಎಕರೆಗೆ ಪಡೆಯುವ ಉತ್ಪನ್ನ ಈ ಎರಡೂ ದೃಷ್ಟಿಯಿಂದ ಭಾರತವು ಬಹಳ ಹಿಂದಿದೆ. ೧೯೫೧ರ ಜನಗಣತಿಯ ಪ್ರಕಾರ ಪ್ರತಿವ್ಯಕ್ತಿ ಕೃಷಿ ಕರ್ಷಿತ ಕ್ಷೇತ್ರವು ಕೇವಲ ೮೪ ಸೆಂಟ್ಸ್ ಆಗಿದೆ. ಕಳೆದ ಮೂವತ್ತು ವರ್ಷಗಳಿಂದ ಈ ದೃಷ್ಟಿಯಿಂದ ನಿರಂತರ ಹ್ರಾಸವಾಗುತ್ತಿದೆ.

ಪ್ರತಿ ವ್ಯಕ್ತಿಯ ಉಳುಮೆ ಭೂಮಿ ಅಥವಾ ಹಿಡುವಳಿ

| ವರ್ಷ | ಕ್ಷೇತ್ರ (ಸೆಂಟ್ಸ್‌ನಲ್ಲಿ) |
|---|---|
| ೧೮೯೧ | ೧೦೯ |
| ೧೯೦೧ | ೧೦೩ |
| ೧೯೧೧ | ೧೦೯ |
| ೧೯೨೧ | ೧೧೧ |
| ೧೯೩೧ | ೧೦೪ |
| ೧೯೪೧ | ೯೪ |
| ೧೯೫೧ | ೮೪ |
| * ೧೯೬೧ | ೨.೬ ಹೆಕ್ಟೇರ್ |

ಹೆಚ್ಚುತ್ತಿರುವ ಜನಸಂಖ್ಯೆಯ ಅತಿಹೆಚ್ಚಿನ ಭಾರವು ಭೂಮಿಯ ಮೇಲೆಯೇ ಬೀಳುತ್ತಲಿದೆ. ಈ ಭಾರವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಎಲ್ಲಕ್ಕಿಂತ ಮೊದಲು ನಮ್ಮ ದೃಷ್ಟಿ ಬೀಳುವುದು ಈವರೆಗೆ ಇನ್ನೂ ಕೃಷಿ ಆಗದ ಭೂಮಿಯ ಕಡೆಗೆ. ಭಾರತದ ಒಟ್ಟು ಭೌಗೋಲಿಕ ಕ್ಷೇತ್ರಫಲ ೮೦.೬೩ ಕೋಟಿ ಎಕರೆಗಳು. ಇದರಲ್ಲಿ ಕೇವಲ ೭೧.೯೫ ಕೋಟಿ ಎಕರೆ ಭೂಮಿಯ ಉಪಯೋಗಕ್ಕೆ ಸಂಬಂಧಿಸಿದಂತೆ



ಮಾಹಿತಿ ಲಭ್ಯವಾಗಿದೆ. ೧೯೫೫–೫೬ ರಲ್ಲಿ ೧೨.೫೪ ಕೋಟಿ ಎಕರೆ ಭೂಮಿಯಲ್ಲಿ ಅಡವಿ, ೯.೬೪ ಕೋಟಿ ಎಕರೆ ಭೂಮಿಯಲ್ಲಿ ಮೇವಿನ ಹುಲ್ಲುಗಾವಲು, ಪೊದೆ, ಹಾಗೂ ಮರ ಇತ್ಯಾದಿ; ೫.೯೭ ಕೋಟಿ ಎಕರೆ ಭೂಮಿಯಲ್ಲಿ ಬಂಜರು ಹಾಗೂ ೩೧.೯೮ ಕೋಟಿ ಎಕರೆ ಭೂಮಿಯಲ್ಲಿ ಕೃಷಿ ನಡೆಯುತ್ತಿತ್ತು. ೧೧.೮೨ ಕೋಟಿ ಎಕರೆ ಭೂಮಿ ಕೃಷಿಗೆ ಲಭ್ಯವಿರಲಿಲ್ಲ. ಬಂಜರು ಬಿದ್ದ ಭೂಮಿಯನ್ನು ಒಕ್ಕಲುತನದ ಉಪಯೋಗಕ್ಕೆ ತರಬಹುದಾಗಿತ್ತು. ಆದರೆ ಈ ಅಂಕಿ ಸಂಖ್ಯೆಗಳನ್ನು ವ್ಯಾವಹಾರಿಕ ದೃಷ್ಟಿಯಿಂದ ವಿಶ್ಲೇಷಣೆ ಮಾಡಿದಾಗ ಅನೇಕ ಕಷ್ಟಗಳು ಎದುರಿಗೆ ಬರುತ್ತವೆ. ಜಮೀನಿನ ಅವಶ್ಯಕತೆ ಹೆಚ್ಚಿಗೆ ಇರುವ ಕ್ಷೇತ್ರದಲ್ಲಿ ಭೂಮಿ ಕಡಿಮೆ ಲಭ್ಯವಿದೆ. ಇಂಥ ಸ್ಥಳಗಳಲ್ಲಿ ಬಂಜರುಭೂಮಿ ದೊರೆಯುವುದೂ ಇಲ್ಲ. ಕೇರಳದಲ್ಲಿ ಪ್ರತಿವ್ಯಕ್ತಿಯ ಹಿಡುವಳಿ ಭೂಮಿ ಕೇವಲ ೫೯ ಸೆಂಟ್ಸ್ ಇದೆ. ಅಲ್ಲಿ ಕೃಷಿಗೆ ಯೋಗ್ಯವಾದ ಬಂಜರು ಭೂಮಿ ೪೭೩ ಸಾವಿರ ಎಕರೆ ಇದೆ. ಅದೇ ರಾಜಸ್ಥಾನದಲ್ಲಿ ಪ್ರತಿ ವ್ಯಕ್ತಿಯ ಕೃಷಿಭೂಮಿ ೨.೦೭ ಎಕರೆ ಆಗಿರುತ್ತಲೂ, ೧,೯೪,೬೯,೦೦೦ ಎಕರೆ ಬಂಜರುಭೂಮಿ ಇದ್ದು ಅದು ಕೃಷಿಗೆ ಲಭ್ಯವಾಗಬಹುದು. ಬೇರೆ ಪ್ರದೇಶಗಳ ಸ್ಥಿತಿಯೂ ಇದೇ ತೆರನಾಗಿದೆ. ಇಷ್ಟಾಗಿ, ಬಂಜರು ಭೂಮಿಯನ್ನು ಮುರಿದು ಒಕ್ಕಲುತನ ಮಾಡುವ ಪರಿಶ್ರಮ ಹಾಗೂ ಹಣದ ವೆಚ್ಚ ಎರಡನ್ನೂ ವಿಚಾರ ಮಾಡಿದರೆ, ಪ್ರಸ್ತಾವನೆಯನ್ನು ಕಾರ್ಯರೂಪಕ್ಕೆ ತರುವುದು ಅಷ್ಟೊಂದು ಸರಳ ಅನಿಸುವುದಿಲ್ಲ. ಹೆಚ್ಚುತ್ತಿರುವ ಜನಸಂಖ್ಯೆ, ಹಾಗೂ ಬೇರೆ ಬೇರೆ ಬಗೆಯ ಅನ್ಯ ಕೆಲಸಗಳಿಗೆ ಅವಶ್ಯಕ ಭೂಮಿಯನ್ನು ಕುರಿತು ವಿಚಾರ ಮಾಡಿದಾಗ ನಮ್ಮ ದೇಶದ ಕೃಷಿ ಭೂಮಿಯನ್ನು ಪ್ರತಿವ್ಯಕ್ತಿಗೆ ಅಭಿವೃದ್ಧಿ ಪಡಿಸುವ ಸಾಧ್ಯತೆಗಳು ಮತ್ತಷ್ಟು ಸೀಮಿತವಾಗುತ್ತವೆ. ಇಂಥ ಪರಿಸ್ಥಿತಿಯಲ್ಲಿ ನಮ್ಮೆದುರು ಇರುವ ಒಂದೇ ದಾರಿಯೆಂದರೆ, ತೀವ್ರ ಒಕ್ಕಲುತನದ ಮೂಲಕ ಪ್ರತಿ ಎಕರೆಯ ಉತ್ಪನ್ನವನ್ನು ಹೆಚ್ಚಿಸಿ, ಒಟ್ಟೂ ಉತ್ಪಾದನೆಯಲ್ಲಿ ವೃದ್ಧಿ ಮಾಡುವುದು. ಕೃಷಿ ಅಭಿವೃದ್ಧಿಯ ಕಾರ್ಯಕ್ರಮ ಮುಖ್ಯವಾಗಿ ಇದೇ ದೃಷ್ಟಿಯಿಂದ ನಡೆಯಬೇಕು.

## ಎರಡು ಬಗೆಯ ಕಾರ್ಯಕ್ರಮ

ಕೃಷಿ ವಿಕಾಸದ ಕಾರ್ಯಕ್ರಮ ಎರಡು ಪ್ರಕಾರದಲ್ಲಿ ಆಗಲು ಸಾಧ್ಯ. (೧) ತಾಂತ್ರಿಕ (Technical), ಹಾಗೂ (೨) ಸಂಸ್ಥಾಗತ (Institutional). ಮೊದಲನೆಯ ಕಾರ್ಯಕ್ರಮವು ಒಕ್ಕಲುತನದ ಪದ್ಧತಿಗೆ ಸಂಬಂಧಿಸಿದ್ದು. ಯಾವ ಸಾಧನಗಳನ್ನು ಯಾವ ಪ್ರಮಾಣದಲ್ಲಿ ಉಪಯೋಗ ಮಾಡಬೇಕು ಎಂಬ ಬಗ್ಗೆ ವಿಚಾರ ಮಾಡಬೇಕು. ಎರಡನೆಯದರಲ್ಲಿ ಟೆನನ್ಸಿ ನಿಯಮಗಳಲ್ಲಿ ಸುಧಾರಣೆ ಆಗಬೇಕು. ಹಾಗೂ ಕೃಷಿಗಾಗಿ ಅವಶ್ಯಕ ಸಾಧನಗಳನ್ನು ಹೊಂದಿಸಿಕೊಳ್ಳಲು ಹಾಗೂ ಮಾರುಕಟ್ಟೆ ವ್ಯವಸ್ಥೆಗಾಗಿ

ಸಂಸ್ಥೆಗಳನ್ನು ಕಟ್ಟಿಕೊಳ್ಳಬೇಕು. ನಾವು ಈ ದೃಷ್ಟಿಯಿಂದ ಸಮನ್ವಯದ ಹಾಗೂ ಪೂರ್ವನಿರ್ಧಾರಿತವಾದ ರೀತಿಯಲ್ಲಿ (Integrated) ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕು. ಕೃಷಿಯಷ್ಟೇ ಅಲ್ಲ, ಉದ್ಯಮ–ವ್ಯಾಪಾರಗಳ ಬಗೆಗೂ ಇದರೊಂದಿಗೆ ವಿಚಾರ ಮಾಡಬೇಕು.

**ಕೃಷಿ ಪದ್ಧತಿಯಲ್ಲಿ ಸುಧಾರಣೆ**

ಕೃಷಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಭಾರತದ ರೈತರು ಪರಿಸ್ಥಿತಿಗೆ ಅನುಗುಣವಾಗಿ ಉಪಯುಕ್ತವಾದ ಕೃಷಿ ಪದ್ಧತಿಯನ್ನು ವಿಕಾಸಗೊಳಿಸಿಕೊಂಡು ಬಂದಿದ್ದಾರೆ. ಹಲವು ಕಾಲದಿಂದ ಈ ಪದ್ಧತಿಗಳು ನಡೆದುಕೊಂಡು ಬಂದಿವೆ. ಆದರೆ ಇಂದಿನ ಪ್ರಕ್ರಿಯೆಯ ಸಂಬಂಧದಲ್ಲಿ ಹೇಳುವುದಾದರೆ, ಅವುಗಳ ಬಗೆಗೆ ಪೂರ್ಣಪ್ರಮಾಣದ ಪ್ರಯೋಗಗಳು ಇನ್ನೂ ನಡೆದಿಲ್ಲ ಹಾಗೂ ಭಾರತದ ಸಮಸಮಾನ ಪರಿಸ್ಥಿತಿಗಳಲ್ಲಿ ಆ ಪ್ರಯೋಗಗಳೂ ನಡೆದಿಲ್ಲವಾದ್ದರಿಂದ, ಹಳೆಯ ಪದ್ಧತಿಗಳನ್ನು ಒಮ್ಮೆಲೇ ಬಿಡಬಾರದು. ಬೆಳೆಗಳನ್ನು ಪರ್ಯಾಯವಾಗಿ ಬಿತ್ತುವುದು, ಹಸಿರುಗೊಬ್ಬರ ಬಳಕೆ, ಮಲ–ಮೂತ್ರಗಳನ್ನು ಕೊಳೆಸಿ ಗೊಬ್ಬರವಾಗಿ ಉಪಯೋಗಿಸುವುದು, ಭೂಮಿಯ ಸವಕಳಿಯನ್ನು ತಡೆಯಲು ಒಡ್ಡು ಕಟ್ಟುವುದು, ಗಿಡ–ಮರಗಳನ್ನು ಬೆಳೆಸುವುದು ಇತ್ಯಾದಿ ಹಲವು ವಿಧಾನಗಳನ್ನು ಭಾರತದ ಒಕ್ಕಲಿಗನು ಚೆನ್ನಾಗಿ ತಿಳಿದುಕೊಂಡಿದ್ದಾನೆ. ಅವನು ಯುಗಯುಗಗಳಿಂದ ಭೂಮಿಯ ಫಲವತ್ತತೆಯನ್ನು ಕಾಯ್ದುಕೊಂಡು ಬಂದಿದ್ದಾನೆ. ನಿಜ, ಕಳೆದ ಕೆಲಸಮಯದಿಂದ ಬೇರೆ ಬೇರೆ ಕಾರಣದಿಂದ ಅವನು ತನ್ನ ಜ್ಞಾನದ ಪೂರ್ಣ ಉಪಯೋಗವನ್ನು ಮಾಡುವುದು ಅವನಿಗೆ ಸಾಧ್ಯವಾಗುತ್ತಿಲ್ಲ.

**ಮಳೆರಹಿತ ಕೃಷಿ**

ಭಾರತದ ಕೃಷಿಯು ಮುಖ್ಯವಾಗಿ ವರುಣದೇವನ ಕೃಪೆಯನ್ನು ಅವಲಂಬಿಸಿದೆ. ಮಳೆಯ ಚಾರ್ಟ್ ಭಾರತದ ರೈತನ ಕಾರ್ಡಿಯೋಗ್ರಾಫ್ ಆಗಿದೆ. ಇಲ್ಲಿ ಮಳೆಯ ತಿಂಗಳುಗಳು ನಿಶ್ಚಿತವಾಗಿದ್ದರೂ ಎಲ್ಲಿ ಯಾವಾಗ ಎಷ್ಟು ಮಳೆಯಾಗುತ್ತದೆಯೆಂಬ ಬಗೆಗೆ ನಿಶ್ಚಿತವಾಗಿ ಹೇಳುವುದು ಕಷ್ಟ. ಮತ್ತು ಇದು ಗೊತ್ತಾದರೂ ಮಳೆಯ ಕೊರತೆಯನ್ನು ತುಂಬಿಕೊಳ್ಳುವುದಾಗಲಿ, ಹಾಗೂ ಮಳೆ ಹೆಚ್ಚಾದರೆ ಅದನ್ನು ನಿರಾಕರಿಸುವುದಾಗಲಿ ಕಠಿಣ. ಹಾಗಾಗಿಯೇ ಮೊದಲಿನಿಂದಲೇ ನಮ್ಮ ಭಾರತೀಯ ಸರಕಾರದ ಧ್ಯೇಯವೆಂದರೆ ನೀರಾವರಿಯ ಯೋಗ್ಯವ್ಯವಸ್ಥೆ ಮಾಡಬೇಕೆಂಬುದೇ ಆಗಿದೆ. ಕೃಷಿಯನ್ನು 'ಅದೇವ ಮಾತ್ರಿಕಾ' ಮಾಡುವುದು ಶಾಸ್ತ್ರಗಳ ಆದೇಶ.



**ಕಿರು ಯೋಜನೆಗಳು**

ಭಾರತದಲ್ಲಿ ಅಮೇರಿಕವನ್ನು ನಕಲುಮಾಡಿ ನೀರಾವರಿಗಾಗಿ ದೊಡ್ಡ ದೊಡ್ಡ ಅಣೆಕಟ್ಟು ನಿರ್ಮಿಸುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡರೂ, ಎಲ್ಲ ಮಗ್ಗುಲುಗಳಿಂದ ವಿಚಾರ ಮಾಡಿದಾಗ ನಮಗೆ ಚಿಕ್ಕ ಚಿಕ್ಕ ನೀರಾವರಿಯ ಸಾಧನಗಳೇ ಹೆಚ್ಚು ಉಪಯುಕ್ತವಾಗಿವೆ.

ದೊಡ್ಡ ಅಣೆಕಟ್ಟುಗಳ ಯೋಜನೆಗಳು ಬಂಡವಾಳ ಪ್ರಧಾನವಾಗಿವೆ. ಭಾಕ್ರಾ–ನಂಗಲ, ದಾಮೋದರ ಘಾಟ ಯೋಜನೆಗಳು, ಮತ್ತು ಹೀರಾಕುಡ್ ಈ ಮೂರನ್ನು ತೆಗೆದುಕೊಂಡರೆ ಅವುಗಳ ಅಂದಾಜು ಹೆಚ್ಚುತ್ತಲೇ ಹೋಗುತ್ತದೆ. ಇನ್ನೊಂದು ರೀತಿಯಿಂದ ನೋಡುವುದಾದರೆ ಇವುಗಳಿಂದ ಆಹಾರಧಾನ್ಯಗಳ ಉತ್ಪಾದನೆ ಕೂಡ ಚಿಕ್ಕಯೋಜನೆಗಳಿಗೆ ಹೋಲಿಸಿದಲ್ಲಿ ಕಡಿಮೆ ಲಾಭದಾಯಕವೇ ಆಗಿವೆ. ಈ ಕೆಳಗಿನ ಕೋಷ್ಟಕದಿಂದ ಈ ಸಂಗತಿ ಸ್ಪಷ್ಟವಾಗುತ್ತದೆ.

ವಿಭಿನ್ನ ಯೋಜನೆಗಳಿಂದ ಕೃಷಿ ಉತ್ಪಾದನೆಯಲ್ಲಿ ವೃದ್ಧಿ ೧೯೫೧–೫೬

| ಯೋಜನೆ | ಗುರಿಯ ಪ್ರತಿಶತ ಉತ್ಪಾದನೆ | ಖರ್ಚು |
|---|---|---|
| ೧) ದೊಡ್ಡ ನೀರಾವರಿ ಯೋಜನೆಗಳು | ೪೭ | ೯೨ |
| ೨) ಚಿಕ್ಕ ನೀರಾವರಿ ಯೋಜನೆಗಳು | ೯೧ | ೬೩ |
| ೩) ಭೂಮಿ ಪುನರುದ್ಧಾರ ಹಾಗೂ ವಿಕಾಸ | ೭೭ | ೭೫ |
| ೪) ಗೊಬ್ಬರ ಹಾಗೂ ಫಲವತ್ತತೆ | ೫೦ | ೫೯ |
| ೫) ಉತ್ತಮ ಬೀಜ | ೫೫ | ೫೬ |

ದೊಡ್ಡ ಯೋಜನೆಗಳ ಎಲ್ಲಕ್ಕಿಂತ ಹೆಚ್ಚಿನ ಕೆಡುಕು ಅಂದರೆ ಅವು ಕೆಲವೇ ದಿನಗಳಲ್ಲಿ ಅಂತರ್ಜಲವನ್ನು ಮೇಲಕ್ಕೆ ತಂದು ಹೊಲಕ್ಕೆ ಹಾಗೂ ಜನವಸತಿಗೆ ಹಾನಿಯನ್ನುಂಟುಮಾಡುತ್ತದೆ. ಭೂಮಿಯ ಕ್ಷಾರವೂ ತಳದಮೇಲೆಯೇ ಬಂದು ಬಿಡುವುದರಿಂದ ಜಮೀನು ಬಂಜರಾಗಿ ಅನುಪಯುಕ್ತ ಆಗಿಬಿಡುತ್ತದೆ. ಕುಡಿಯುವ ನೀರು ಕೂಡ ಅನಾರೋಗ್ಯಕರ ಆಗಿಬಿಡುತ್ತದೆ. ಹರಿಯುವ ನೀರಿನ ಪ್ರಾಕೃತಿಕ ದಾರಿಯಲ್ಲಿ ಅಡ್ಡಿಯನ್ನು ಉಂಟುಮಾಡಿ ಜಮೀನಿನ ಹೀರುವ ಶಕ್ತಿಯನ್ನು ಹಾಳುಮಾಡುತ್ತ ತುಸು ಮಳೆ ಬಂದರೂ ಅಕ್ಕಪಕ್ಕದ ಕ್ಷೇತ್ರಗಳಲ್ಲಿ ನೆರೆಹಾವಳಿಯ ಸ್ಥಿತಿಯನ್ನು ಉಂಟುಮಾಡಿಬಿಡುತ್ತದೆ. ಪಂಜಾಬಿನ ಭತಿಂಡಾ, ಫಿರೋಜಪುರ, ಅಮೃತಸರ, ಗುರುದಾಸಪುರ ಮುಂತಾದ ಕಡೆ ಹಾಗೂ ಉತ್ತರ ಪ್ರದೇಶದ ಮುಜಪ್ಫರ ನಗರ, ಮಿರ್ಜಾಪುರ ಹಾಗೂ ಗಾಜಿಪುರ ಜಿಲ್ಲೆಗಳಲ್ಲಿ ನೀರು ನಿಲ್ಲುವ (Waterlogging) ಸಮಸ್ಯೆ ವಿಷಯ ಪರಿಸ್ಥಿತಿಯನ್ನುಂಟು ಮಾಡಿದೆ. ಕೆಲವು

ಕ್ಷೇತ್ರಗಳಲ್ಲಿಯಂತೂ ಪಂಪ್ ಹಾಕಿ ನೀರನ್ನು ಮತ್ತೆ ಕಾಲುವೆಗೆ ಹರಿಬಿಡಲಾಗುತ್ತಿದೆ. ಕಾಲುವೆಯ ತಳವನ್ನು ಕಾಂಕ್ರಿಟ್‌ನಿಂದ ಮಾಡಬೇಕೆಂಬ ಸಲಹೆಯೂ ಇದೆ. ಎರಡೂ ವೆಚ್ಚದ ಯೋಜನೆಗಳೇ ಆಗಿವೆ. ಆದ್ದರಿಂದ ನಮ್ಮ ದೇಶಕ್ಕೆ ಚಿಕ್ಕ ಯೋಜನೆಗಳೇ ಉಪಯೋಗಿಯೆಂದು ಸಿದ್ಧವಾಗುತ್ತವೆ. ಯಾಕೆಂದರೆ :

೧) ಕಡಿಮೆ ಖರ್ಚಿನದಾಗಿರುವುದರಿಂದ ಅವು ನಮ್ಮ ಆರ್ಥಿಕ ಸಾಮರ್ಥ್ಯದ ಒಳಗಿನದಾಗಿದೆ.

೨) ಇವುಗಳ ಆಮದು ಅವಲಂಬನೆ ಕಡಿಮೆಯದಾಗಿದೆ. ಹೊರಗಿನಿಂದ ಬರುವ ಯಂತ್ರಗಳಿಗಾಗಿ ಮತ್ತು ವಿಶೇಷ ತಜ್ಞರಿಗಾಗಿ ಯೋಜನೆಗಳನ್ನು ನಿಲ್ಲಿಸಬೇಕಾದ ಅವಶ್ಯಕತೆಯಿಲ್ಲ.

೩) ಇವುಗಳನ್ನು ಪೂರ್ಣಗೊಳಿಸಲು ಸಮಯ ಕಡಿಮೆ ಸಾಕಾಗುತ್ತದೆ. ಆದ್ದರಿಂದ ತಕ್ಷಣ ಫಲದಾಯಕವಾಗಿವೆ.

೪) ದೊಡ್ಡ ದೊಡ್ಡ ಅಣೆಕಟ್ಟಿನ ಹಾಗೆ, ಮೊದಲಿನ ಕೃಷಿ ಭೂಮಿಯ ದೊಡ್ಡ ದೊಡ್ಡ ಕ್ಷೇತ್ರಗಳನ್ನು ನೀರಿನಲ್ಲಿ ಮುಳುಗಿಸುವುದಿಲ್ಲ.

೫) ದೊಡ್ಡ ಯೋಜನೆಗಳಲ್ಲಿ ಕೇವಲ ಶೇಕಡ ೫೫ ನೀರಷ್ಟೇ ನೀರಾವರಿಯ ಕೆಲಸಕ್ಕೆ ದೊರೆಯುತ್ತದೆ. ಚಿಕ್ಕದರಲ್ಲಿ ಶೇಕಡ ೯೫ರ ವರೆಗೆ ಬಳಕೆಗೆ ತರಬಹುದಾಗಿದೆ.

೬) ಸ್ಥಳೀಯ ಸಹಕಾರ ಹಾಗೂ ಪ್ರಯತ್ನಗಳ ಅತಿಹೆಚ್ಚು ಉಪಯೋಗ ಇದರಲ್ಲಿ ದೊರೆಯುತ್ತದೆ.

ಈ ಎಲ್ಲ ಅನುಭವಗಳು ಸರಕಾರದ ಗಮನವನ್ನು ಚಿಕ್ಕ ಯೋಜನೆಗಳತ್ತ ಸೆಳೆಯುವಂತೆ ಮಾಡಿವೆ. ಆದರೆ ಈವರೆಗೂ ಅದರ ಯಾವುದೇ ವ್ಯಾಪಕ ಹಾಗೂ ಸಮನ್ವಯದ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿಲ್ಲ. ಇನ್ನೊಂದು ಕಡೆ ಹೊಸ ಬಾವಿ ಮತ್ತು ಕೆರೆ ಮಾಡಿಸುವುದರ ಜೊತೆಗೆ ಹಳೆಯದನ್ನು ಸರಿಯಾಗಿಟ್ಟುಕೊಳ್ಳುವ ಹಾಗೂ ದುರಸ್ತಿ ಮಾಡುವ ವಿಚಾರವನ್ನೂ ಮಾಡಬೇಕಾಗಿದೆ. ಹೆಚ್ಚಾಗಿ ಒಂದು ಕಡೆ ಹೊಸ ಬಾವಿ ನಿರ್ಮಾಣ ನಡೆಯುತ್ತದೆ, ಮತ್ತು ಹಳೆಯದು ಕುಸಿಯುತ್ತ ಹೋಗುತ್ತವೆ. ಹಳೆಯದಾದ ಸರೋವರ ಹಾಗೂ ಕೆರೆಗಳ ಹೂಳೆತ್ತುವ ಕೆಲಸ ಒಂದೆರಡು ವರ್ಷ ಪ್ರಚಾರಕ್ಕಾಗಿ ನಡೆದು ಅನಂತರ ನಿಂತುಹೋಗಿದೆ. ಈಗ ಭಾರತದಲ್ಲಿ ಸುಮಾರು ೨೫ ಲಕ್ಷ ಬಾವಿಗಳಿವೆ. ನಾವು ಪ್ರಯತ್ನ ಮಾಡಿದರೆ ಈ ಸಂಖ್ಯೆಯನ್ನು ಕನಿಷ್ಠಪಕ್ಷ ಒಂದು ಕೋಟಿಯವರೆಗೂ ಸಹಜವಾಗಿಯೇ ಒಯ್ಯಬಹುದು. ಕೊಳವೆ ಬಾವಿಗಳು ಕೂಡ ಸಾಕಷ್ಟು ಉಪಯೋಗಿಯೆಂದು ಸಿದ್ಧವಾಗಿವೆ. ಗುಡ್ಡಗಾಡಿನ ಪ್ರದೇಶದಲ್ಲಿ ಚಿಕ್ಕ ಚಿಕ್ಕ ಕಾಲುವೆಗಳು ಮತ್ತು ಹಳ್ಳಗಳತ್ತ ಗಮನಕೊಡುವುದು ಉಪಯುಕ್ತವಾಗಬಹುದು.



## ನೇಗಿಲು ಅಥವಾ ಟ್ರ್ಯಾಕ್ಟರ್

ನೀರಾವರಿಯ ಹೊರತಾಗಿ ಒಕ್ಕಲಿಗನಿಗೆ ಒಳ್ಳೆಯ ಉಪಕರಣಗಳು, ಎತ್ತು, ಗೊಬ್ಬರ, ಹಾಗೂ ಫಲವತ್ತತೆ, ಉತ್ತಮ ಬೀಜಗಳದ್ದೂ ಅವಶ್ಯಕತೆಯಿದೆ. ಕೆಲವು ಜನರು ಯಂತ್ರಗಳಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡ ಕಾರಣ ಭಾರತದ ಹೊಲಗಳಲ್ಲಿಯೂ ಪಶ್ಚಿಮದ ವಿಧಾನದಿಂದ ಟ್ರ್ಯಾಕ್ಟರುಗಳ ಮೂಲಕ ಕೃಷಿ ಮಾಡುವ ಪರವಾಗಿದ್ದಾರೆ. ಆದರೆ ಭಾರತಕ್ಕೆ ಅವು ಅನುಪಯುಕ್ತವಾಗಿವೆ. ಮೊದಲನೆಯದಾಗಿ, ನಮ್ಮಲ್ಲಿನ ಹೊಲಗಳು ಚಿಕ್ಕವು. ಒಬ್ಬೊಬ್ಬ ರೈತನ ಹೊಲವೂ ಟ್ರ್ಯಾಕ್ಟರ್ ಬಳಸಲಾರದಷ್ಟು ಚಿಕ್ಕವಾಗಿವೆ. ಉಳುವ ಕ್ಷೇತ್ರವೇ ಕಡಿಮೆ. ಟ್ರ್ಯಾಕ್ಟರ್‌ಗಾಗಿ ಹೊಲವನ್ನು ಅಗಲಗೊಳಿಸಬೇಕು ಹಾಗೂ ಅದರಲ್ಲಿ ಸಾಮೂಹಿಕ ಒಕ್ಕಲುತನವನ್ನು ಅವಲಂಬಿಸಬೇಕು ಎಂಬ ಸಲಹೆಗಳೂ ಬಂದಿವೆ. ಸಾಮೂಹಿಕ ಒಕ್ಕಲುತನ ಭಾರತದ ಭೂಮಿ, ಜನರ ಸರಾಸರಿ, ಪ್ರಜಾಪ್ರಭುತ್ವ ಪದ್ಧತಿ, ನಿರುದ್ಯೋಗ ನಿವಾರಣೆ, ಪ್ರತಿ ಎಕರೆಗೆ ಅತ್ಯಧಿಕ ಉತ್ಪಾದನೆ, ಕೃಷಿಯಲ್ಲಿ ಅಳತೆಯನ್ನು ನಿರ್ಧರಿಸುವುದರ ಅಸಂಭವನೀಯತೆ, ರೈತನಲ್ಲಿರುವ ಭೂಮಿಯ ಪ್ರೇಮ ಮತ್ತು ನಮ್ಮ ಜೀವನ ಮೌಲ್ಯಗಳು ಈ ಎಲ್ಲ ದೃಷ್ಟಿಯಿಂದಲೂ ನಮಗೆ ಅನುಪಯುಕ್ತವಾಗಿವೆ. ಆದರೆ ಸಾಮೂಹಿಕ ಕೃಷಿಯನ್ನು ಬಿಟ್ಟರೂ ಕೂಡ, ಭಾರತದ ವಾತಾವರಣ, ಹಾಗೂ ಅದರಲ್ಲಿ ಆಗುವ ಭೂ ಸವೆತದ ಕಾರಣದಿಂದ ಟ್ರ್ಯಾಕ್ಟರ್ ಬಳಸಬಹುದಾದ ದೊಡ್ಡ ದೊಡ್ಡ ಹೊಲದವರೂ ಅದನ್ನು ಇಟ್ಟುಕೊಳ್ಳಲಾರರು. ಅಲ್ಲದೆ, ಟ್ರ್ಯಾಕ್ಟರ್‌ಗಳು ಇನ್ನೂ ನಮ್ಮ ದೇಶದಲ್ಲಿ ತಯಾರಾಗುತ್ತಿಲ್ಲ, ಮತ್ತು ಅದನ್ನು ನಡೆಸುವ ಎಂಜಿನ್‌ಗಳೂ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಅದರ ಡ್ರೈವರ್ ಹಾಗೂ ದುರಸ್ತಿ ಮಾಡುವವರು ಬೇಗನೇ ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ತರಬೇತಿ ಹೊಂದಲೂ ಸಾಧ್ಯವಾಗುತ್ತಿಲ್ಲ. ಹೆಚ್ಚಿನ ಬಿಡಿಭಾಗಗಳ ಲಭ್ಯತೆ ಹಾಗೂ ರಿಪೇರಿ ಮಾಡುವ ಕಾರಖಾನೆಗಳು ಹಳ್ಳಿ ಹಳ್ಳಿಯಲ್ಲಿ ಅಥವಾ ಕನಿಷ್ಠಪಕ್ಷ ಕೇಂದ್ರ ಸ್ಥಾನಗಳಲ್ಲಿ ತೆರೆಯುವುದು ಕೂಡ ಬಹುದೊಡ್ಡ ಕೆಲಸವೇ ಆಗಿದೆ. ಇವೆಲ್ಲ ಸಾಧ್ಯವಾದರೂ ಕೂಡ ನಮ್ಮಲ್ಲಿರುವ ಪಶುಸಂಪತ್ತಿನ ಉಪಯೋಗ ನಮ್ಮೆದುರಿಗೆ ಒಂದು ಬಹುದೊಡ್ಡ ಸಮಸ್ಯೆಯನ್ನೇ ಹುಟ್ಟುಹಾಕುತ್ತದೆ. ಇಂದು ಭಾರತದಲ್ಲಿ ೧೫ ಕೋಟಿ ೮೯ ಲಕ್ಷ ಗೋವುಗಳು, ಹಾಗೂ ೩ ಕೋಟಿ ೫೧ ಲಕ್ಷ ಎಮ್ಮೆಗಳು ಇವೆ. ಎತ್ತುಗಳು ಹಾಗೂ ಕೋಣಗಳ ಸಂಖ್ಯೆಯು ಕ್ರಮವಾಗಿ ೬.೪೨ ಕೋಟಿ ಹಾಗೂ ೬೩ ಲಕ್ಷ ಇವೆ. ಹಸು ಹಾಗೂ ಎಮ್ಮೆಗಳ ಉಪಯೋಗ ಹಾಲಿಗಾಗಿ ಆಗಬಹುದು, ಆದರೆ ಎತ್ತುಗಳು ನಮ್ಮ ಕೃಷಿಯ ಬಳಕೆಗೆ ಬರುವುದಿಲ್ಲವಾದರೆ ಜನರಿಗೆ ಭಾರವಾಗುತ್ತವೆ. ಪಶ್ಚಿಮದ ದೇಶಗಳಲ್ಲಿ ಗೋಮಾಂಸ ಭಕ್ಷಣೆ ಮಾಡುವವರು ಇದ್ದಾರೆ. ಹಾಗಾಗಿ ಅವರು ಎತ್ತುಗಳನ್ನು ತಿಂದುಬಿಡುತ್ತಾರೆ. ಆದರೆ ಭಾರತದಲ್ಲಿ ಇದರ ಕಲ್ಪನೆ

ಮಾಡುವುದು ಅದರ ಪರಂಪರೆ ಹಾಗೂ ರಾಷ್ಟ್ರಭಾವನೆಯ ಬಗೆಗೆ ಅಜ್ಞಾನ ಮೂಲವೂ ಅವ್ಯಾವಹಾರಿಕವೂ ಆಗುತ್ತದೆ. ಪಶುಸಂಪತ್ತನ್ನು ಅನುತ್ಪಾದಕವೆಂದು (uneconomic) ಹೇಳಿ ಕತ್ತರಿಸಿ ಹಾಕಲಾಗುವುದಿಲ್ಲ. ಬದಲಿಗೆ ಅವುಗಳನ್ನು ಉತ್ಪಾದಕಗಳನ್ನಾಗಿಸಿ ನಮ್ಮ ಆರ್ಥಿಕ (economic) ನೆಲಗಟ್ಟನ್ನು ಸುದೃಢಗೊಳಿಸಬಹುದಾಗಿದೆ. ಎತ್ತು ನಮ್ಮ ಹೊಲದ ಆಧಾರಗಳಾಗಿವೆ. ಟ್ರ್ಯಾಕ್ಟರನ್ನು ತಂದು ನಾವು ನಮ್ಮ ಎಲ್ಲ ಮಹಲುಗಳನ್ನು ಕೆಡವಿ ಹಾಕುತ್ತಿದ್ದೇವೆ.

ನೇಗಿಲು ಹಾಗೂ ಹೊಲದ ಅನ್ಯ ಉಪಕರಣಗಳು ನಮಗೆ ತುಂಬ ಉಪಯುಕ್ತವಾಗಿದ್ದರೂ, ಅವುಗಳಲ್ಲಿ ಚಿಕ್ಕಪುಟ್ಟ ಸುಧಾರಣೆಗಳನ್ನು ಮಾಡಬಹುದಾಗಿದೆ. ಕೃಷಿ ಆಯೋಗವು ಇವುಗಳ ಬಗೆಗೆ ಹೀಗೆ ಬರೆದಿತ್ತು: ಭಾರತದಲ್ಲಿ ಕೃಷಿ ಉಪಕರಣಗಳು ಸಾಮಾನ್ಯವಾಗಿ ಸ್ಥಳೀಯ ಅವಶ್ಯಕತೆಗಳಿಗೆ ಅನುಕೂಲವಾಗಿವೆ. ಅವು ಎತ್ತುಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಹಗುರವಾಗಿ, ಎಳೆಯಲು ಅನುಕೂಲವಾಗಿ, ಅಗ್ಗವಾಗಿ ಹಾಗೂ ಸರಳವಾಗಿ ನಿರ್ಮಾಣವಾಗಿದೆ. ಅಲ್ಲದೆ ಅವು ಸುಲಭವಾಗಿ ದೊರಕುವುದು ಕೂಡ ಅತ್ಯಂತ ಮಹತ್ವಪೂರ್ಣ ಸಂಗತಿಯೇ ಆಗಿದೆ, ಕಬ್ಬಿಣದ ಬೆಲೆ ಹೆಚ್ಚಾದ ಮೇಲೆ, ಮತ್ತು ಕೃಷಿ ಉಪಕರಣಗಳನ್ನು ತಯಾರಿಸುವ ಕೆಲಸವು ಹಳ್ಳಿಯ ಬಡಗಿ ಮತ್ತು ಕಮ್ಮಾರನ ಕೈಯಿಂದ ಕಳಚಿಕೊಂಡು ಕಾರಖಾನೆಯ ಜನರ ಕೈಗಳಿಗೆ ಬಂದ ಮೇಲೆ ಅವು ಸುಲಭವೂ ಅಗ್ಗವೂ ಆಗಿ ಉಳಿದಿಲ್ಲ. ನಾವು ಈ ವಿಷಯದ ಬಗೆಗೆ ವ್ಯವಸ್ಥೆ ಮಾಡಬೇಕಾಗಿದೆ.

## ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರ

ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಹಾಗೂ ಭೂಮಿಯನ್ನು ಉತ್ಪಾದಕ ಶಕ್ತಿಯಾಗಿ ಕಾಯಂ ಆಗಿ ಉಳಿಸಿಕೊಂಡು ಬರಲು ಗೊಬ್ಬರದ ಅವಶ್ಯಕತೆಯಿದೆ. ಆದರೆ ಜಮೀನಿನ ಸರಿಯಾದ ಮಾಪನ, ಉತ್ಪಾದನೆಯ ಪದ್ಧತಿ, ಬೆಳೆ, ನೀರುಣ್ಣಿಸುವ ಸಾಧನಗಳ ವಿಚಾರವನ್ನು ಮಾಡಿದನಂತರವೇ ಅದಕ್ಕೆ ಉಪಯುಕ್ತವಾದ ಯೊಗ್ಯ ಪ್ರಮಾಣದ ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರಗಳ ಬಳಕೆ ಮಾಡಬೇಕು. ಕಳೆದ ಹತ್ತು ವರ್ಷಗಳಲ್ಲಿ ರಸಗೊಬ್ಬರದ ಬಗೆಗೆ ಸಾಕಷ್ಟು ಪ್ರಚಾರ ಮಾಡಲಾಗಿದೆ ಹಾಗೂ ಅಮೋನಿಯಂ ಸಲ್ಫೇಟ್‌ನ ಪ್ರಯೋಗದಲ್ಲಿ ಕೂಡಾ ತುಂಬಾ ಹೆಚ್ಚಳ ಆಗಿದೆ. ನಿರಂತರವಾಗಿ ರಸಗೊಬ್ಬರಗಳ ಬಳಕೆಯನ್ನು ಮಾಡಿದರೆ, ಹೊಲದ ಫಲವತ್ತತೆ ಹೆಚ್ಚಾಗುವುದರ ಬದಲು ಕಡಿಮೆಯಾಗುತ್ತದೆ. ಆದ್ದರಿಂದ ಅದರ ಉಪಯೋಗವನ್ನು ಸಗಣಿ ಗೊಬ್ಬರದ ಜೊತೆ ಬೆರೆಸಿ ಸೀಮಿತ ಪ್ರಮಾಣದಲ್ಲಿಯೇ ಮಾಡಬೇಕು. ಸರಕಾರದ ಮೂಲಕ ವಿತರಿಸಲಾದ ಹಾಗೂ ಹಲವು ರೈತರಿಗೆ ಒತ್ತಾಯಪೂರ್ವಕವಾಗಿ ಕೊಡಲಾದ ಅಮೋನಿಯಂ ಸಲ್ಫೇಟ್‌ನ್ನು



ಹೊಲದಲ್ಲಿ ಎಷ್ಟು ಹಾಕಲಾಗಿದೆ ಎಂಬುದನ್ನು ಖಚಿತವಾಗಿ ಹೇಳಲಾರೆವು. ಮದ್ಯ ನಿಷೇಧದ ಕಾರಣ ಕೆಲವು ಸ್ಥಳಗಳಲ್ಲಿ ಅದರ ಉಪಯೋಗವು ಕಾನೂನುಬಾಹಿರವಾಗಿ ಹೆಂಡ ತೆಗೆಯಲೂ ಬಳಕೆಯಾಗತೊಡಗಿದೆ.

ಸಗಣಿ ಗೊಬ್ಬರ, ಮಲ–ಮೂತ್ರಗಳು ಮುಂತಾದವು ಭಾರತಕ್ಕೆ ಅತ್ಯಂತ ಉತ್ತಮ ಗೊಬ್ಬರದ ಸಾಧನಗಳಾಗಿದೆ. ಒಂದು ಊಹೆಯ ಪ್ರಕಾರ ದೇಶದಲ್ಲಿ ೮೦೦೦ ಲಕ್ಷ ಟನ್ ಸಗಣಿಯ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಕನಿಷ್ಠ ಪಕ್ಷ ಶೇಕಡ ೫೦ರಷ್ಟು ಉರುವಲು ತಯಾರಿಸಿ ಉರಿಸಲಾಗುತ್ತಿದೆ. ಇಂಧನಕ್ಕಾಗಿ ಬೇರೆ ವ್ಯವಸ್ಥೆ ಮಾಡಿ ಸಗಣಿಯನ್ನು ಗೊಬ್ಬರದ ರೂಪದಲ್ಲಿಯೇ ಬಳಕೆ ಮಾಡಬೇಕೆಂಬ ಅಭಿಪ್ರಾಯ ಅನೇಕ ಬಾರಿ ವ್ಯಕ್ತವಾಗಿದೆ. ಆದರೆ ಈ ಬಗ್ಗೆ ಏನೂ ಕೆಲಸ ನಡೆದಿಲ್ಲ. ಮರಗಳೂ ಬಹಳ ಕಡಿಮೆಯಾಗುತ್ತಿವೆ. ಅರಣ್ಯ ಕಾನೂನಿನ ಹೊಸ ನಿಯಮದ ಪ್ರಕರ ರೈತರು ಒಲೆ ಉರಿಸಲು ಒಣಗಿದ ಹಾಗೂ ಮುರಿದ ಕಟ್ಟಿಗೆಗಳನ್ನು ಬಳಕೆ ಮಾಡುತ್ತಿದ್ದರು. ಆದರೆ ಈಗ ಅದೂ ಸಾಧ್ಯವಿಲ್ಲ. ಸಗಣಿಯಿಂದಲೇ ಗ್ಯಾಸ್ ತಯಾರಿಸುವ ಕೆಲವು ಪ್ರಯೋಗಗಳು ಈಗ ನಡೆದಿವೆ. ಇಂಧನ ಹಾಗೂ ವಿದ್ಯುತ್ತಿಗಾಗಿ ಅದನ್ನು ಬಳಸಿಕೊಂಡ ಅನಂತರ ಉಳಿದ ಸಗಣಿಯನ್ನು ಬಳಕೆ ಮಾಡಬಹುದಾಗಿದೆ, ಎಷ್ಟರಮಟ್ಟಿಗೆ ಈ ಯಂತ್ರವನ್ನು ವ್ಯಾಪಕವಾಗಿ ಹಾಗೂ ಉತ್ಪಾದಕ ಆಧಾರದ ಮೇಲೆ ಜಾರಿಯಲ್ಲಿ ತರಬಹುದು ಎಂಬ ಬಗ್ಗೆ ಸರಕಾರವು ಪರೀಕ್ಷೆ ನಡೆಸಬೇಕು. ಪರ್ಯಾಯ ಬೆಳೆಗಳನ್ನು ಬೆಳೆಯುವುದರಿಂದಲೂ ಜಮೀನಿನಲ್ಲಿ ನಷ್ಟವಾದ ಉತ್ಪಾದಕ ತತ್ವಗಳನ್ನು ಮರುಪೂರಣ ಮಾಡಿಕೊಳ್ಳಬಹುದಾಗಿದೆ. ಇತ್ತೀಚೆಗೆ ಬೆಳೆಯುತ್ತಿರುವ ಹೊಸ ಬೆಳೆಗಳನ್ನು ಅನ್ಯ ಬೆಳೆಗಳ ಜೊತೆಗೆ ಅದಲಾಬದಲಿ ಮಾಡಿಕೊಳ್ಳಬಹುದೆಂಬ ಜ್ಞಾನವನ್ನು ರೈತರಿಗೆ ಒದಗಿಸಬೇಕಾದ ಅವಶ್ಯಕತೆಯಿದೆ.

## ಭಾರತೀಯ ಹಿನ್ನೆಲೆಯ ವಿಚಾರ

ಉತ್ಕೃಷ್ಟವಾದ ಬೀಜಗಳ ಬಗ್ಗೆ ಸರಕಾರವು ಕಾರ್ಯಕ್ರಮಗಳನ್ನೇನೋ ಸಿದ್ಧಪಡಿಸಿದೆ, ಆದರೆ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಆಡಳಿತಾತ್ಮಕ ಅವ್ಯವಸ್ಥೆ ಹಾಗೂ ಕೆಂಪುಪಟ್ಟಿಯ ಪರಿಣಾಮವಾಗಿ ಸಮಯಕ್ಕೆ ಸರಿಯಾಗಿ ಬೀಜಗಳು ಲಭ್ಯವಾಗುತ್ತಿಲ್ಲ. ಬೆಳೆಗಳನ್ನು ರೋಗದಿಂದ ಉಳಿಸಲು ಕೂಡ ಕಾರ್ಯಕ್ರಮ ರೂಪಿಸಬೇಕಾದ ಜರೂರಿದೆ. ಭಿನ್ನಾಭಿಪ್ರಾಯಕ್ಕೆ ಲೇಶಮಾತ್ರವೂ ಅವಕಾಶವಿಲ್ಲದ ಕಾರ್ಯಕ್ರಮಗಳು ಇವು. ವಿದೇಶಗಳಲ್ಲಿ ನಡೆದ ಪರೀಕ್ಷಾ ಪ್ರಯೋಗಗಳಿಂದ ನಾವು ಅವಶ್ಯ ಲಾಭ ಪಡೆಯಬಹುದು, ಆದರೆ ಅನುಕರಣೆ ಮಾಡಲು ಸಾಧ್ಯವಿಲ್ಲ. ಹೊರಗಡೆಯಿಂದ ನಾವು ಪಡೆದುಕೊಂಡ ಜ್ಞಾನದ ಆಧಾರದ ಮೇಲೆ ನಮ್ಮಲ್ಲಿನ ಸಂಶೋಧನ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಿ, ನಮ್ಮ ಹಳ್ಳಿಗಳ ಪರಿಸ್ಥಿತಿಯ ಹಿನ್ನೆಲೆಯಲ್ಲಿಯೇ ಅದರ ಉಪಯೋಗ ಮಾಡಬೇಕು.

**ಗೇಣಿದಾರಿಕೆ**

ಕೃಷಿಯ ಉತ್ಪಾದನೆಯ ಸಂಬಂಧವು ಕೃಷಿಕನಿಗೇ ಸೇರಿದ್ದು, ಹೊಲ ಹಾಗೂ ಒಕ್ಕಲಿಗ ಇವೆರಡಕ್ಕೂ ಅವಿಭಾವ ಸಂಬಂಧವಿದೆ. ಜಮೀನಿನಲ್ಲಿ ಸುಧಾರಣೆ ಮಾಡಲು ಹಾಗೂ ಹೆಚ್ಚು ಹೆಚ್ಚು ಶ್ರಮದಿಂದ ಹೆಚ್ಚಿನ ಉತ್ಪಾದನೆ ಮಾಡಲು ಈ ಅದನನ್ನೂ ಬಿಡಿಸುವುದಿಲ್ಲ ಮತ್ತು ಉತ್ಪಾದನೆ ಮಾಡಿದ ಬೆಳೆಯ ಬಹುಭಾಗವು ಅವನದೇ ಆಗಿರುತ್ತದೆ ಎಂಬ ವಿಷಯ ಅವನಿಗೆ ಸ್ಪಷ್ಟವಾಗಬೇಕಾಗುತ್ತದೆ. ನಿಶ್ಚಿತವಾಗಿರಬೇಕಾಗುತ್ತದೆ. ಬೇರೆ ಬೇರೆ ಐತಿಹಾಸಿಕ ಕಾರಣಗಳಿಂದ ಭಾರತದ ಭೂಮಿ ವ್ಯವಸ್ಥೆಯಲ್ಲಿ ಬಹಳಷ್ಟು ಮಧ್ಯಸ್ಥರು ಸೇರಿಕೊಂಡಿದ್ದಾರೆ. ಜಮೀನ್ದಾರಿಗಳು, ಜಹಗೀರುದಾರಿಗಳು ಈಗ ಬಹುತೇಕವಾಗಿ ಮುಗಿದು ಹೋದ ಸಂಗತಿ. ಆದರೆ ರೈತವಾರಿ ಪದ್ಧತಿಯಲ್ಲಿಯೂ ಬಹಳಷ್ಟು ಜನರು ಸ್ವಯಂ ಒಕ್ಕಲುತನ ಮಾಡುತ್ತಿರಲಿಲ್ಲ. ಜಮೀನನ್ನು ಇನ್ನೊಬ್ಬರಿಗೆ ಪಟ್ಟಾ ಕೊಟ್ಟು ಅವರಿಂದ ಬದಲಿಗೆ ಅರ್ಧಭಾಗದಿಂದ ಹಿಡಿದು ಆರರಲ್ಲಿ ಒಂದು ಭಾಗದವರೆಗೆ ಉತ್ಪನ್ನವನ್ನು ಪಡೆಯುತ್ತಿದ್ದರು. ಸೈದ್ಧಾಂತಿಕ ದೃಷ್ಟಿಯಿಂದ ಹೇಳುವುದಾದರೆ ಆಗೀಗ ಬೇರೆ ಬೇರೆ ಬಗೆಯ ಸಂಪತ್ತನ್ನು ಬಾಡಿಗೆ ಮೇಲೆ ಕೊಡುವ ಅಧಿಕಾರ ಇದೆಯಾದ್ದರಿಂದ ಲ್ಯಾಂಡ್‌ಹೋಲ್ಡರ್ ತನ್ನ ಜಮೀನನ್ನು ಬಾಡಿಗೆಗೆ ಕೊಡುವುದನ್ನು ತಡೆಯುವುದು ಅನ್ಯಾಯವಾಗುತ್ತದೆ. ಆದರೆ ಭೂಮಿ ಹಾಗೂ ಇತರ ಸಂಪತ್ತುಗಳ ಮಧ್ಯೆ ನಾವು ಭೇದಮಾಡಲೇಬೇಕಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಇವತ್ತಿನ ದಿನಗಳಲ್ಲಿ ಭೂಮಿಯಲ್ಲಿ ವ್ಯಾಪಕ ಸುಧಾರಣೆ ಮಾಡಿ ಉತ್ಪಾದನೆಯನ್ನು ಹೆಚ್ಚಿಸುವ ಅವಶ್ಯಕತೆ ತುಂಬಾ ಇದೆ. ದೇಶದಲ್ಲಿ ಚಿಕ್ಕ ಚಿಕ್ಕ ಹಿಡುವಳಿದಾರರ ಸಂಖ್ಯೆ ಬಹಳ ಇದೆ ಅನ್ನುವುದು ಗೊತ್ತು. ಸ್ವಲ್ಪ ಹೆಚ್ಚು ಶ್ರಮವಹಿಸಿ ಕೃಷಿಕನಾದವನು ತನ್ನ ಹೊಲದ ಬೆಳೆಯನ್ನು ವೃದ್ಧಿಪಡಿಸಿದರೆ ಅವನ ಬಳಿ ಉಳಿತಾಯವಾಗಿ, ಅದನ್ನೇ ಅವನು ಮುಂದೆ ಬಂಡವಾಳದ ರೂಪದಲ್ಲಿ ಹೂಡಬಲ್ಲ. ಎಷ್ಟೋಬಾರಿ ಅವನು ಹೊಲದಿಂದ ಹೆಚ್ಚಿನ ಬೆಳೆ ತೆಗೆಯಲು ಇಷ್ಟಪಡುವುದೇ ಇಲ್ಲ, ಯಾಕೆಂದರೆ ಹೆಚ್ಚಿಗೆ ಬೆಳೆ ಬೆಳೆದರೆ ಹೊಲದ ಬೆಲೆ ಹೆಚ್ಚುತ್ತದೆಯೆಂಬ ಭಯ ಅವನಿಗಿರುತ್ತದೆ. ಆಗ ಹೊಲದ ಮಾಲೀಕನು ಅವನನ್ನು ಬಿಡಿಸಿ ತಾನೇ ಸ್ವಯಂ ಜಮೀನು ಸಾಗುವಳಿ ಮಾಡಲು ಪ್ರಾರಂಭಿಸಿಬಿಡಬಹುದು, ಅಥವಾ ಅದನ್ನು ಹೆಚ್ಚಿನ ಗೇಣಿಗೆ ಬೇರೆಯವರಿಗೆ ಕೊಟ್ಟುಬಿಡಬಹುದು. ಆದ್ದರಿಂದ ಎಲ್ಲ ಬಗೆಯ ಅಧಿಕಾರಚ್ಯುತಿಯನ್ನು ನಿಲ್ಲಿಸಬೇಕಾದ ಅವಶ್ಯಕತೆಯಿದೆ. ಪ್ರತಿಯೊಬ್ಬರಿಗೆ ಕೆಲಸ ಕೊಡುವ ಜವಾಬ್ದಾರಿಯನ್ನು ಹೊರುವುದು ತನ್ನ ಅವಶ್ಯಕ ಕರ್ತವ್ಯವೆಂದು ತಿಳಿದಿರುವ ಸಮಾಜವು ಅದು ಅಧಿಕಾರಚ್ಯುತಗೊಳಿಸಿ ರೈತನನ್ನು ಅವನ ಜೀವನ ನಿರ್ವಹಣೆಯ ಸಾಧನದಿಂದ ಹೇಗೆ ವಂಚಿತಗೊಳಿಸಬಲ್ಲದು? ನಿಜ, ಅವನು ಸ್ವಯಂ ಜಮೀನನ್ನು ಉಳುಮೆ ಮಾಡದೆ ತನ್ನ ಜೀವನ ನಿರ್ವಹಣೆಯನ್ನು ಬೇರೆ



ರೀತಿಯಿಂದ ನಿರ್ವಹಿಸುತ್ತಿದ್ದರೆ, ಅವನಿಗೆ ಭೂಮಿಯ ಮೇಲೆ ಸ್ವಾಮಿತ್ವದ ಯಾವುದೇ ಅಧಿಕಾರವಿರಬಾರದೆಂಬುದು ಸರಿಯಾದದ್ದು.

ವ್ಯಾವಹಾರಿಕ ದೃಷ್ಟಿಯಿಂದ ನಾವು ಈ ಸಿದ್ಧಾಂತದ ಮಿತಿಯನ್ನು ಅರಿತುಕೊಳ್ಳಬೇಕು. ಇಂದು ಮಧ್ಯಮವರ್ಗದ ಬಹಳಷ್ಟು ಜನರ ಆದಾಯದ ಪ್ರಮುಖ ಸಾಧನ ಭೂಮಿಯ ಬಾಡಿಗೆಯೇ ಆಗಿದೆ. ಅವನು ಇವರನ್ನು ತನ್ನ ಆದಾಯದ ಸಾಧನಗಳಿಂದ ವಂಚಿತಗೊಳಿಸಿದ ಹಾಗೆ, ಸಮಾಜ ಸೇವೆಗಳ ಯೋಗ್ಯ ವಿಸ್ತಾರದಿಂದ ಅವರ ಜೀವನ ಸ್ತರವನ್ನು ಪತನಗೊಳಿಸಬಾರದು ಎಂಬ ಬಗ್ಗೆ ಸರಕಾರ ಎಚ್ಚರದಿಂದಿರಬೇಕು. ಯಾಕೆಂದರೆ ಸಮಾಜದ ಮಧ್ಯಮ ವರ್ಗಕ್ಕೆ ಸಮಾಜಕ್ಕೆ ಇಂದಿನ ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡಲು, ಮುಂದುವರಿಯಲು, ಮತ್ತು ವಿಕಾಸಗೊಳ್ಳಲು ಯೋಗ್ಯ ಭೂಮಿಯನ್ನು ಮತ್ತು ಪ್ರೇರಣೆಯನ್ನು ನೀಡುತ್ತದೆ, ಸಂಕಟದಲ್ಲಿರುವ ಎಚ್ಚರಗೊಂಡು ವ್ಯವಸ್ಥೆಗೆ ಚಲನೆಯನ್ನು ಕೊಡಬಲ್ಲ ಮಧ್ಯಮವರ್ಗವು ಎಲ್ಲ ವಿಕಾಸ ಯೋಜನೆಗಳ ದಾರಿಯಲ್ಲಿ ಅಡ್ಡಿಯಾಗಿಬಿಡಬಹುದು. ಆದ್ದರಿಂದ ಎಲ್ಲಿ ಅಡಗಿದ ಸ್ವಾರ್ಥವನ್ನು ಇಟ್ಟುಕೊಳ್ಳುವುದು ಒಳ್ಳೆಯದಲ್ಲವೋ ಅಲ್ಲಿ ಅದಕ್ಕೆ ಮಂಗಳಹಾಡಿ ಅವರಿಗೆ ಯೋಗ್ಯದಿಕ್ಕನ್ನು ತೋರಿಸುವ ವ್ಯವಸ್ಥೆ ಆಗಬೇಕು.

**ಉಳುವವನದೇ ಭೂಮಿ : ವ್ಯಾಖ್ಯೆ**

ನೇಗಿಲ ಮೇಳಿ ಹಿಡಿದವನೇ ಭೂಮಿಯ ಒಡೆಯನಾಗುತ್ತಾನೆ ಎಂಬುದು 'ಉಳುವವನದೇ ಭೂಮಿ' ಎಂಬರ್ಥ ಎಂದಿಗೂ ಅಲ್ಲ ಹಾಗೂ ತನ್ನ ಶ್ರಮವನ್ನು ಬಿಟ್ಟು ರೈತನು ಬೇರೆ ಯಾರದಾದರೂ ಸೇವೆಯ ಲಾಭವನ್ನು ಪಡೆಯಲಾರ. ಅವನಿಗೆ ತನ್ನ ಅವಶ್ಯಕತೆಗೆ ತಕ್ಕ ಕೂಲಿಗಳನ್ನು ನೇಮಿಸಿಕೊಳ್ಳಬಹುದಾದ ಅಧಿಕಾರ ಇರಬೇಕು, ಇಲ್ಲವಾದರೆ ಹೊಲದ ವ್ಯವಸ್ಥೆ ತಲೆಕೆಳಗಾಗುತ್ತದೆ. ಉಳುವವನು ಎಂಬುದರ ಸಾಮಾನ್ಯ ಅರ್ಥವೇನೆಂದರೆ ಹೊಲದ ಲಾಭ-ಹಾನಿಗೆ ಜವಾಬ್ದಾರನಾಗಿರುವವನು, ಅದರಲ್ಲಿ ಬಂಡವಾಳ ತೊಡಗಿಸುವವನು ಹಾಗೂ ಅದರ ಮೇಲ್ವಿಚಾರಣೆ ನಡೆಸುವವನು. ಕೃಷಿಯ ಬೇರೆ ಬೇರೆ ಕೆಲಸಗಳಲ್ಲಿ ಎಷ್ಟನ್ನು ಅವನು ಸ್ವಯಂ ಮಾಡುತ್ತಾನೆ, ಎಷ್ಟನ್ನು ಬೇರೆಯವರಿಂದ ಕೂಲಿ ಕೊಟ್ಟು ಮಾಡಿಸುತ್ತಾನೆ ಎಂಬುದು ಇಲ್ಲಿ ವಿಚಾರಣೀಯವಲ್ಲ.

ಯಾವುದೋ ಕಾರಣದಿಂದ ಒಂದೆರಡು ವರ್ಷದ ಮಟ್ಟಿಗೆ ರೈತನು ತನ್ನ ಹೊಲವನ್ನು ಮಾಡಲು ಸಾಧ್ಯವಾಗದ ಪರಿಸ್ಥಿತಿ ಕೂಡ ಇದ್ದೀತು. ಇಂಥ ಪರಿಸ್ಥಿತಿಯಲ್ಲಿ ಕೂಡ ಅವನು ತನ್ನ ಜಮೀನನ್ನು ಕೆಲಸಮಯದ ಮಟ್ಟಿಗೆ ಬೇರೆಯವರಿಗೆ ಉಳುಮೆ ಮಾಡಲು ಕೊಡಲಾರನಾದರೆ, ಅವನು ಹೊಲದಲ್ಲಿ ಬೀಜ ಬಿತ್ತದೆ ಹಾಗೆಯೇ

ಬಿಟ್ಟುಬಿಡಬಹುದು, ಅಥವಾ ಕೇವಲ ಲೆಕ್ಕಪತ್ರಕ್ಕೆಷ್ಟು ಬೇಕೋ ಅಷ್ಟುಮಾತ್ರವೇ ಅವನು ಹೊಲವನ್ನು ಉಳಿಸಬಹುದು. ಇದರ ಪರಿಣಾಮ ಕೃಷಿ ಉತ್ಪಾದನೆಯ ಮೇಲೆ ಆಗುತ್ತದೆ. ಆದ್ದರಿಂದ ಕೆಲವು ಬದಲಿನ ವ್ಯವಸ್ಥೆಯನ್ನಂತೂ ಖಂಡಿತ ಅವಶ್ಯವಾಗಿ ಮಾಡಲೇಬೇಕಾಗುವುದು.

**ಹೆಚ್ಚಿಗೆ ಹಿಡುವಳಿ**

ಟೆನೆನ್ಸಿಯ ಜೊತೆಗೆ ಭೂಮಿಯ ಅತಿಹೆಚ್ಚು ಹಿಡುವಳಿಯ ಪ್ರಶ್ನೆ ಕೂಡ ಎಲ್ಲರ ಎದುರು ಇದೆ. ಹೆಚ್ಚಿನವರು ಈ ಪ್ರಶ್ನೆಯನ್ನು ಕೇವಲ ಸಾಮಾಜಿಕ ನ್ಯಾಯದ ದೃಷ್ಟಿಯಿಂದಷ್ಟೇ ನೋಡುತ್ತಾರೆ. ಹೆಚ್ಚಿನವರಲ್ಲಿ ಜೀವನ ನಿರ್ವಹಣೆಗೆ ಜಮೀನೇ ಇಲ್ಲದಿರುವಾಗ, ಕೆಲವೇ ಜನರು ಭಾರೀ ಪ್ರಮಾಣದ ಜಮೀನನ್ನು ಇಟ್ಟುಕೊಂಡು ಕುಳಿತುಕೊಳ್ಳುವುದು ಅನುಚಿತವೆಂದು ಅವರು ಭಾವಿಸುತ್ತಾರೆ. ಸಮಾಜದ ಅಸಮಾನತೆಯನ್ನು ಕಡಿಮೆ ಮಾಡಲು ಜಮೀನಿನ ಗರಿಷ್ಠ ಹಿಡುವಳಿಯನ್ನು ನಿಶ್ಚಿತಗೊಳಿಸಬೇಕಾಗುತ್ತದೆ. ಅಂತರವನ್ನು ಕಡಿಮೆ ಮಾಡುವುದು ಸರ್ವಸಾಮಾನ್ಯ ಉದ್ದೇಶವಾಗಿದೆ. ಆದರೆ ರೈತನಾದವನು ಸ್ವಾಭಾವಿಕವಾಗಿಯೇ ಕೇಳಬಹುದು, ಬೇರೆ ಕ್ಷೇತ್ರಗಳಲ್ಲಿ ಈ ದಿಕ್ಕಿನಲ್ಲಿ ಯಾವುದೇ ಹೆಜ್ಜೆಯನ್ನು ಇಡದಿರುವಾಗ, ಒಕ್ಕಲುತನವನ್ನಷ್ಟೇ ಯಾಕೆ ಇದಕ್ಕಾಗಿ ಆಯ್ಕೆ ಮಾಡಲಾಗುತ್ತಿದೆ ಎಂದು? ತನ್ನನ್ನು ಉತ್ಪಾದನೆಗಾಗಿ ಸ್ವತಂತ್ರವಾಗಿ ಬಿಡಬೇಕು, ಹಾಗೂ ಅಂತರವನ್ನು ಕಡಿಮೆ ಮಾಡಲು ಬೇರೆ ಬೇರೆ ಬಗೆಯ ಕರವನ್ನು ಹಾಕಿ ನಿಭಾಯಿಸಬೇಕು ಎಂದು ದಿಕ್ಕಿನಲ್ಲಿ ಅವನು ಹೇಳಬಹುದು. ಸಾಮಾಜಿಕ ನ್ಯಾಯದ ಉದ್ದೇಶ ಅದರಿಂದ ಪೂರ್ಣವಾಗುತ್ತದೆ.

**ಭೂಮಿಯ ವಿತರಣೆ**

ಭೂಮಿಯ ಗರಿಷ್ಠ ಹಿಡುವಳಿಯ ಅವಶ್ಯಕತೆಯನ್ನು ಯಾಕೆ ಪ್ರತಿಪಾದಿಸಲಾಗುತ್ತಿದೆಯೆಂದರೆ ಅವನಿಂದ ಹೆಚ್ಚಿಗೆ ಇರುವ ಜಮೀನನ್ನು ತೆಗೆದುಕೊಂಡು ಭೂಮಿಹೀನರಿಗೆ ಕೊಡಲು ಸಾಧ್ಯವಾಗಬೇಕು. ಭೂಮಿಹೀನರಲ್ಲಿ ಹೆಚ್ಚಿನವರು ಹರಿಜನ ವರ್ಗದವರೇ ಇರುವ ಕಾರಣ ಸಮಸ್ಯೆಗೆ ಆರ್ಥಿಕ ಸ್ವರೂಪದೊಂದಿಗೆ ಸಾಮಾಜಿಕ ಹಾಗೂ ರಾಜಕೀಯ ಸ್ವರೂಪವೂ ದೊರೆಯುತ್ತದೆ. ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡುವುದು ಸಾಧ್ಯವಿದೆಯೋ ಇಲ್ಲವೋ ಇದು ವಿವಾದದ ವಿಷಯವಾಗಿದೆ. ಇದಕ್ಕಾಗಿ ಕೊಡುವ ಅಂಕಿ ಸಂಖ್ಯೆಗಳೆಲ್ಲ ಸರ್ವಸಾಮಾನ್ಯವಲ್ಲ, ಹಾಗೂ ತಮ್ಮ ತಮ್ಮದೇ ನಿಷ್ಕರ್ಷೆಯನ್ನು ಹೊರಡಿಸಲು ಬೇರೆ ಬೇರೆ ಪ್ರಕಾರದ ಅಂಕಿಸಂಖ್ಯೆಗಳನ್ನು ನೀಡಲಾಗುತ್ತಿದೆ. ಯೋಜನಾ ಆಯೋಗವು ಕೊಟ್ಟ ಅಂಕಿಗಳಲ್ಲಿ ಉಳುಮೆದಾರರ ಸಂಖ್ಯೆಯನ್ನು ನಿರ್ದಿಷ್ಟ ಪಡಿಸುವಾಗ ಬೇರೆ



ಬೇರೆ ಬಗೆಯ ಮಧ್ಯವರ್ತಿ ಅಧಿಕಾರಗಳ ಬಗ್ಗೆ ಯಾವುದೇ ಗಮನ ಹರಿಸಿಲ್ಲ. ಆದ್ದರಿಂದ ಅದರಿಂದ ಯಾವುದೇ ನಿಶ್ಚಿತ ನಿಷ್ಕರ್ಷೆಯನ್ನು ಹೊಂದುವುದು ಸಾಧ್ಯವಿಲ್ಲ. ಕೃಷಿ ಕಾರ್ಮಿಕ ಪರಿಶೀಲನಾ ಸಮಿತಿಯು ಈ ದಿಸೆಯಲ್ಲಿ ಮಹತ್ವಪೂರ್ಣ ಕೆಲಸ ಮಾಡಿದೆ ಹಾಗೂ ಜಮೀನು ಇರುವವರು ಹಾಗೂ ಜಮೀನು ಇಲ್ಲದ ಕೃಷಿ ಕಾರ್ಮಿಕರ ಅಂದಾಜು ಮಾಡಿದೆ. ಆದರೆ ಅಲ್ಲಿಯೂ ಪ್ರತಿಯೊಬ್ಬರಿಗೆ ಎಷ್ಟು ಜಮೀನು ಹಾಗೂ ಅದನ್ನು ಹೇಗೆ ಕೊಡಬೇಕು ಇದರ ವಿಚಾರ ಮಾಡಲಾಗಿಲ್ಲ. ವಾಸ್ತವಿಕತೆಯೆಂದರೆ ಜಮೀನು ಹಂಚುವ ಪರಿಕಲ್ಪನೆಗಳೆಲ್ಲವೂ ಒಂದು ಸ್ಥಿರ ಅರ್ಥವ್ಯವಸ್ಥೆಯನ್ನು ಆಧರಿಸಿ ನಾವು ನಮ್ಮ ಅರ್ಥವ್ಯವಸ್ಥೆಯಲ್ಲಿ ಚಲನಶೀಲತೆಯನ್ನು ಬಯಸಿದರೆ, ಹಾಗೂ ಸಮಾಜದ ಎಲ್ಲ ವರ್ಗದವರಿಗೆ ಉದ್ಯೋಗದ ಬಾಗಿಲುಗಳನ್ನು ತೆರೆಯಲು ಬಯಸಿದರೆ, ಇಷ್ಟೊಂದು ಭೂಮಿಯ ಹಸಿವು ಉಳಿಯಲಾರದು. ಅಲ್ಲದೆ ಸಮಾಜ ಸುಧಾರಣೆಯಿಂದ ನಾವು ಸಮಾನತೆಯನ್ನು ತಂದರೂ, ಕೃಷಿ ಕಾರ್ಮಿಕರಿಗೆ ಯೋಗ್ಯ ಕೂಲಿಯ ವ್ಯವಸ್ಥೆಯನ್ನು ಮಾಡಿದರೂ, ಎಲ್ಲರ ಬಳಿಯೂ ಭೂಮಿ ಇರಲೇಬೇಕು ಎಂಬುದೇನೂ ಅವಶ್ಯಕವಿಲ್ಲ. ಅಲ್ಲದೆ ವರ್ಷದಲ್ಲಿ ಕೆಲವೇ ದಿನ ಮಾತ್ರ ಹೊಲದಲ್ಲಿ ಕೆಲಸ ಮಾಡುವ ಕೂಲಿಗಾರರ ವರ್ಗ ಬಹು ದೊಡ್ಡದಿದೆ. ಒಕ್ಕಲುತನದಲ್ಲಿ ಬೀಜ ಬಿತ್ತುವಾಗ ಮತ್ತು ಕಟಾವು ಮಾಡುವಾಗ ಸಾಕಷ್ಟು ಜನರ ಅವಶ್ಯಕತೆ ಬೀಳುತ್ತದೆ. ಅಂಥ ಸಮಯದಲ್ಲಿ ಪ್ರಮುಖವಾಗಿ ಕೃಷಿಯೇತರ ಅನ್ಯ ಉದ್ಯೋಗ–ವ್ಯಾಪಾರಗಳಲ್ಲಿ ತೊಡಗಿದ ಕಾರ್ಮಿಕರ ಸಹಾಯವನ್ನು ನಾವು ಆಗ ಪಡೆಯಬೇಕಾಗುತ್ತದೆ. ನಾವು ಹೆಸರಿಗೆ ಮಾತ್ರ ಜಮೀನನ್ನು ಕೊಟ್ಟರೂ ನಾವು ಅದರ ಅವಶ್ಯಕತೆಗಳನ್ನು ಪೂರ್ಣ ಮಾಡಲಾರೆವು. ಬದಲಿಗೆ ಜಮೀನಿಗೆ ಅಂಟಿಕೊಂಡಿರುವುದರ ಕಾರಣದಿಂದ ಬೇರೆ ಉದ್ಯೋಗಗಳ ಕಡೆ ಅವರು ಗಮನ ಹರಿಸಲಾರರು. ಅವಶ್ಯಕತೆಯಿದ್ದಾಗ ಅನ್ಯರ ಹೊಲದಲ್ಲಿ ಕೆಲಸವನ್ನೂ ಮಾಡಲಾರರು. ಆದ್ದರಿಂದ ಭೂ ವಿತರಣೆಯಲ್ಲಿ ನಾವು ಏನೆಲ್ಲ ಗಮನ ಕೊಡಬೇಕೆಂದರೆ, ಜಮೀನು ಸಿಕ್ಕವರು ಅದನ್ನು ಆರ್ಥಿಕ ಉಳುಮೆದಾರರ ರೂಪದಲ್ಲಿ ಉಪಯೋಗಮಾಡಲು ಸಾಧ್ಯವಾಗಬೇಕು. ಈ ದೃಷ್ಟಿಯಿಂದ ಭೂಮಿ ಇಲ್ಲದವರಿಗಿಂತ ಯಾರ ಬಳಿ ಇನ್ನೂ ಆರ್ಥಿಕವಾಗಿ ಉಪಯುಕ್ತವಲ್ಲದ ಭೂಮಿ ಇದೆಯೋ ಹಾಗೂ ಸಾಕಷ್ಟು ಭೂಮಿ ಇಲ್ಲದ ಹಿಡುವಳಿದಾರರಿದ್ದಾರೊ ಅವರ ಬಗ್ಗೆ ಆದ್ಯತೆ ನೀಡಬೇಕು.

**ಹೆಚ್ಚಿಗೆ ಹಿಡುವಳಿ ಭೂಮಿ ಯಾಕೆ?**

ಹೆಚ್ಚಿಗೆ ಹಿಡುವಳಿ ಭೂಮಿಯ ಪ್ರಶ್ನೆಯನ್ನು ನಾವು ಮುಖ್ಯವಾಗಿ ಆರ್ಥಿಕ ದೃಷ್ಟಿಯಿಂದ ವಿಚಾರ ಮಾಡೋಣ. ನಾವು ಪ್ರತಿ ಎಕರೆ ಭೂಮಿಯಿಂದ ಅಧಿಕ

ಉತ್ಪಾದನೆಯನ್ನು ಬಯಸಿದಾಗ, ನಮಗೆ ರೈತನ ದೃಷ್ಟಿಯಿಂದ ಉತ್ಪಾದನೆಯ ಅನ್ಯ ಸಾಧನಗಳಿಗಿಂತ ಪ್ರತಿ ಎಕರೆ ಭೂಮಿಯ ಬೆಲೆಯನ್ನು ಹೊರಡಿಸಬೇಕಾಗುತ್ತದೆ. ಉತ್ಪಾದನೆಯ ಜ್ಞಾನ ದುರ್ಲಭವಾದಾಗ ಅವುಗಳನ್ನೇ ಹೆಚ್ಚಿಗೆ ಬಳಸಬೇಕಾಗುತ್ತದೆ. ಪಶ್ಚಿಮದಲ್ಲಿ ಶ್ರಮ ಕಡಿಮೆ ಇರುವದರಿಂದ ಅವರು ಪ್ರತಿ ವ್ಯಕ್ತಿಗೆ ಅತಿಹೆಚ್ಚಿನ ಉತ್ಪಾದನೆಯ ಚಿಂತೆ ಮಾಡುತ್ತಾರೆ. ನಮ್ಮ ಬಳಿ ಭೂಮಿಯ ಕೊರತೆಯಿದೆ, ಆದ್ದರಿಂದ ನಾವು ಪ್ರತಿ ಎಕರೆ ಭೂಮಿಯನ್ನು ಅದರ ಎಲ್ಲೆಯ ಕೊನೆಯವರೆಗೂ ಉಪಯೋಗ ಮಾಡಬೇಕಾಗುತ್ತದೆ. ಭೂಮಿಯ ಯಾವುದೇ ಭಾಗವನ್ನು ಅಕಾರಣ ಪಡಬಿಡುವಷ್ಟು ಇರಲು ಕೊಡುವುದು, ಅಥವಾ ಕಡಿಮೆ ಮನುಷ್ಯರನ್ನು ತೊಡಗಿಸಿ ಹೆಚ್ಚು ಉತ್ಪಾದನೆಯ ಪ್ರೇರಣೆಯಿರುವುದು, ಆದರೆ ಆಗ ಅರ್ಥವ್ಯವಸ್ಥೆಗೆ ಚಲನೆಯನ್ನು ಕೊಡಲಾರೆವು. ಕೆಲವು ಜನರ ಹೇಳಿಕೆಯೆಂದರೆ, ಸ್ವಲ್ಪ ಜನರ ಕೈಯಲ್ಲಿ ದೊಡ್ಡ ದೊಡ್ಡ ಫಾರ್ಮ್‌ನ್ನು ಇಟ್ಟರೆ, ಸ್ವಾಭಾವಿಕವಾಗಿ ಮಾರುಕಟ್ಟೆಗೆ ಧಾನ್ಯ ಹೆಚ್ಚಿಗೆ ಬರುತ್ತದೆ, ಹೆಚ್ಚು ಜನರ ಕೈಯಲ್ಲಿ ಕಡಿಮೆ ಹಿಡುವಳಿ ಭೂಮಿ ಇದ್ದ ಪರಿಸ್ಥಿತಿಗಿಂತ ಇದು ಭಿನ್ನ. ನಗರದಲ್ಲಿ ವಾಸಿಸುವ ಮಧ್ಯಮ ವರ್ಗದವರ ಪ್ರಶ್ನೆಯೇನೆಂದರೆ, ಈ ಪರಿಸ್ಥಿತಿ ಅಲ್ಪಕಾಲಿಕ ದೃಷ್ಟಿಯಿಂದ ಉಪಯುಕ್ತವಾಗುತ್ತದೆ. ಆದರೆ ಇವರ ಅರ್ಥವ್ಯವಸ್ಥೆಗೆ ಲಾಭವಾಗುವುದಿಲ್ಲ. ಮೊದಲನೆಯದಾಗಿ, ದೇಶದಲ್ಲಿನ ಎಲ್ಲ ಜನರ ಹೊಟ್ಟೆ ತುಂಬಿಸುವಷ್ಟು ಧಾನ್ಯವನ್ನು ಬೆಳೆಯಬೇಕು. ಇದರಲ್ಲಿ ಚಿಕ್ಕ ರೈತರು ಅದೇ ಹಸಿವಿನಲ್ಲಿಯೇ ಇರುತ್ತಾರೆ. ಎರಡನೆಯದಾಗಿ, ಕೆಲವು ಜನರ ಬಳಿ ಧಾನ್ಯವು ಹೆಚ್ಚಿಗೆ ಉಳಿದಾಗ, ಧಾನ್ಯದ ಬೆಲೆ ಕೆಳಗೆ ಇಳಿಯುವುದು. ಇದರಿಂದ ಸಣ್ಣ ರೈತರು ಅಲ್ಪಸ್ವಲ್ಪ ಉಳಿಸಲು ಸಾಧ್ಯವಾದರೂ, ಅದರಿಂದ ಅವಶ್ಯಕ ವಸ್ತುಗಳನ್ನೂ ಕೊಳ್ಳಲಾರರು. ಅಲ್ಲದೆ ಅದರಿಂದ ಅವರ ಜೀವನ ನಿರ್ವಹಣೆಯೂ ಆಗುವುದಿಲ್ಲ, ತಮ್ಮ ಹೊಲವನ್ನು ಸುಧಾರಿಸಲೂ ಆಗುವುದಿಲ್ಲ. ಸಿದ್ಧವಸ್ತುಗಳ ಬೆಲೆಯ ಪ್ರಶ್ನೆ ಬಂದಾಗ, ಧಾನ್ಯದ ಬೆಲೆಯ ಅನುಪಾತದ ದೃಷ್ಟಿಯಲ್ಲಿ ಕಡಿಮೆಯಾಗುವುದಿಲ್ಲ. ಕೂಲಿಕಾರನ ಗಳಿಕೆಯ ಬಹುದೊಡ್ಡ ಭಾಗ ಆಹಾರಧಾನ್ಯ ಖರೀದಿಸಲೇ ವೆಚ್ಚವಾದರೆ, ಇಂದಿನ ಪರಿಸ್ಥಿತಿಯಲ್ಲಿ ಬೆಲೆಗಳು ಕುಸಿದರೂ ಅವನ ಕೂಲಿದರ ಮಾತ್ರ ಕಡಿಮೆಯಾಗುವುದಿಲ್ಲ. ಅಲ್ಲದೆ ಲಾಭಾಂಶ, ಯಂತ್ರಗಳ ಬೆಲೆ, ಹಾಗೂ ವಿದೇಶಗಳ ಮೂಲ್ಯಗಳೆಲ್ಲದರ ಪರಿಣಾಮ ಕೂಡ ಕಾರ್ಖಾನೆಯ ವಸ್ತುಗಳ ಬೆಲೆಯ ಮೇಲೆ ಬೀಳುತ್ತದೆ, ನಮ್ಮ ಕಚ್ಚಾ ವಸ್ತು ಹಾಗೂ ಆಹಾರ ಧಾನ್ಯದ ಬೆಲೆಯನ್ನು ಇದು ಅವಲಂಬಿಸಿರುವುದಿಲ್ಲ. ಕಳೆದ ಹತ್ತುವರ್ಷಗಳ ಅನುಭವ ಕೂಡ ಇದೇ ಆಗಿದೆ. ಕಚ್ಚಾಮಾಲು ಹಾಗೂ ಆಹಾರ ಧಾನ್ಯಗಳ ಬೆಲೆಯಲ್ಲಿ ಭಾರಿಕುಸಿತ ಉಂಟಾಗಿದ್ದರೂ ಪಕ್ಕಾ ಮಾಲಿನ ಬೆಲೆಯಲ್ಲಿ ವಿಶೇಷವಾದ ಪರಿವರ್ತನೆಯೇನೂ ಆಗಲೇ ಇಲ್ಲ. ಬದಲಾಗಿ ನಿಯಂತ್ರಣವಿದ್ದ ಅಥವಾ ಏಕಾಸ್ವಾಮ್ಯವಿದ್ದ ವಸ್ತುಗಳ ಬೆಲೆ ಮಾತ್ರ



ಏರಿಕೆಯಾಯಿತು. ಅಗ್ಗದ ಧಾನ್ಯದ ಕಾರಣದಿಂದ ನೌಕರ ವೃತ್ತಿಯಲ್ಲಿರುವ ನಗರದ ಮಧ್ಯಮ ವರ್ಗದವರ ವಸ್ತುಗಳ ಕೊಂಡುಕೊಳ್ಳುವ ಶಕ್ತಿಯಲ್ಲಿ ಕೆಲಮಟ್ಟಿಗೆ ಹೆಚ್ಚಳ ಅವಶ್ಯವಾಗಿ ಉಂಟಾಯಿತು ಹಾಗೂ ಅವರು ಕೆಲವು ಯಂತ್ರ–ಕಾರ್ಖಾನೆಗಳನ್ನು ಚಾಲೂ ಇಡಬಹುದು. ಆದರೆ ಭಾರತದಲ್ಲಿ ಈ ವರ್ಗವು ಅತ್ಯಂತ ಸೀಮಿತವಾಗಿರುವದರಿಂದ ವ್ಯಾಪಕವಾದ ಔದ್ಯೋಗೀಕರಣಕ್ಕೆ ಬುನಾದಿ ಹಾಕಬಲ್ಲ ಮಾರುಕಟ್ಟೆಯನ್ನು ಅವರು ಸೃಷ್ಟಿಸಲಾರರು. ಇದಕ್ಕಾಗಿ ನಾವು ಸರ್ವಸಾಮಾನ್ಯ ರೈತನ ಉತ್ಪಾದನೆಯನ್ನು ಹೆಚ್ಚಿಸಿ, ಅವನ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕಾಗುವುದು. ಬೆಲೆಗಳ ಸ್ಥಿರೀಕರಣದಲ್ಲಿ, ಹಿಡುವಳಿದಾರರ ಅಂತರವನ್ನು ಕಡಿಮೆ ಮಾಡುವುದರಿಂದ ಸಹಾಯವಾಗುತ್ತದೆ.

ಉಳುವವನೇ ಹೊಲದ ಒಡೆಯನಾಗುವನೆಂಬುದನ್ನು ನಿಶ್ಚಿತಗೊಳಿಸಿದ್ದೇವೆ. ಜೊತೆಗೆ ಯಾಂತ್ರೀಕರಣವನ್ನೂ ಅನುಪಯುಕ್ತವೆಂದು ಭಾವಿಸಿದ್ದೇವೆ. ಈ ಪರಿಸ್ಥಿತಿಯಲ್ಲಿ ಒಬ್ಬ ವ್ಯಕ್ತಿ ಒಂದು ಹಂತದವರೆಗೆ ಮಾತ್ರ ಹೊಲವನ್ನು ಉಳುವ, ಬೀಜ ಬಿತ್ತುವ ಮತ್ತು ಅದರ ಯೋಗಕ್ಷೇಮ ನೋಡಿಕೊಳ್ಳುವ ಕೆಲಸ ಮಾಡಬಲ್ಲ. ನಾವು ಅವನ ಬಳಿ ಮಿತಿಗಿಂತ ಜಾಸ್ತಿ ಹೊಲವನ್ನು ಇರಗೊಟ್ಟರೆ, ಅಂಥವರಲ್ಲಿ ದೂರವಾಗಿರುವ ಜಮೀನ್ದಾರಿ ಪದ್ಧತಿ ಹಾಗೂ ಮಧ್ಯವರ್ತಿಗಳ ಉತ್ಪತ್ತಿಗಳು ನಿಶ್ಚಿತವಾಗಿಯೂ ಹುಟ್ಟಿಕೊಳ್ಳುತ್ತವೆ. ಈ ಎಲ್ಲ ಕೆಡುಕುಗಳನ್ನು ನಾವು ದೂರವಿಡದೇ ಹೋದರೆ ಆಗ ಒಕ್ಕಲುತನದ ಅಧಿಕ ಉತ್ಪಾದನೆಯ ದೃಷ್ಟಿಯಿಂದ ಏನೂ ಉಪಯೋಗುವುದಿಲ್ಲ.

ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮವನ್ನು, ಯಾರ ಬಳಿ ಕೆಲವು ಸಾಧನಗಳಿವೆಯೋ ಅಂಥವರ ಕೈಗೇ ಕೊಡಬೇಕು ಎಂಬುದೂ ಕೆಲವ ಹೇಳಿಕೆಯಾಗಿದೆ. ಈ ಬಗೆಯ ಸಾಧನ ಸಂಪನ್ನ ವ್ಯಕ್ತಿಗಳೆಂದರೆ ಸಾಮಾನ್ಯವಾಗಿ ದೊಡ್ಡ ದೊಡ್ಡ ಹಿಡುವಳಿದಾರ ರೈತರು. ನಾವು ಅವರ ಗರಿಷ್ಠ ಮಿತಿಯನ್ನು ನಿಶ್ಚಿತಗೊಳಿಸಿದರೆ ಒಂದು ಕಡೆ ಅವರು ತಮ್ಮ ಸಾಧನಗಳ ಬಳಕೆಯನ್ನು ಮಾಡಲಾರರು. ಮತ್ತು ಇನ್ನೊಂದು ಕಡೆ ಸಾಧನಗಳಿಲ್ಲದ ಹೊಲದ ಮಾಲಿಕರು ಸರಿಯಾದ ರೀತಿಯಲ್ಲಿ ಭೂಮಿಯ ವಿಕಾಸ ಮತ್ತು ಹೈನು ಉದ್ಯಮವನ್ನು ಮಾಡಲಾರರು. ಇದರಲ್ಲಿ ಒಂದಿಷ್ಟು ಸತ್ಯವು ಇರುವುದೇನೋ ನಿಜ. ಆದರೆ, ಹೆಚ್ಚಿನ ಭೂಮಿಯ ವಿತರಣೆಯನ್ನು ಆರ್ಥಿಕವಾಗಿ ದುರ್ಬಲರಾದ ಹಿಡುವಳಿದಾರರಿಗೆ ಆರ್ಥಿಕವಾಗಿ ಬಲಿಷ್ಠಗೊಳಿಸಲು ಮಾಡಿದ್ದೇ ಆದರೆ, ಹೆಚ್ಚಿನ ಜನರ ವ್ಯರ್ಥವಾಗಿ ಬಿದ್ದುಕೊಂಡಿರುವ ಅಥವಾ ಬಳಕೆಯಾಗದಿರುವ ಸಾಧನಗಳ ಸಂಪೂರ್ಣ ಉಪಯೋಗ ಆಗುವುದು. ನಾವು ಹಣವಂತರಲ್ಲದ ಹಿಡುವಳಿದಾರರ ಸಂಖ್ಯೆಯನ್ನಷ್ಟೇ ಹೆಚ್ಚಿಸಿದೆವು. ಅದರಿಂದ ನಮಗೆ ವಿಶೇಷ ಲಾಭ ಆಗುವುದಿಲ್ಲ. ಹೆಚ್ಚಿನ ರೈತರ

ಕೆಲಸವನ್ನು ಸಹಜ–ಸುಲಭಗೊಳಿಸಬಹುದಾದ ಸಾಧನಗಳಿಂದ ನಾವು ಒಕ್ಕಲುತನ ಮಾಡುವ ವಿಚಾರ ಮಾಡುತ್ತಿದ್ದೇವೆ. ಇನ್ನು ವ್ಯವಸಾಯವನ್ನು ಪಶ್ಚಿಮದ ರೀತಿಯಿಂದಲೇ ಮಾಡಬೇಕಾಗಿದ್ದರೆ, ನಮ್ಮ ಇಡೀ ದೃಷ್ಟಿಕೋನವನ್ನೇ ಬದಲಿಸ ಬೇಕಾಗುತ್ತದೆ.

**ಹಿಡುವಳಿದಾರರ ಮಿತಿಗಳು**

ಹಿಡುವಳಿದಾರರು ಹೆಚ್ಚಿಗೆ ಆಗಬೇಕು, ಈ ಸಂಬಂಧದಲ್ಲಿ ಹೆಚ್ಚಿನ ವಿರೋಧ ಏನೂ ಇಲ್ಲ. ಆದರೆ ಅದು ಏನಾಗಬೇಕು ಎಂಬ ವಿಷಯದಲ್ಲಿ ಮಾತ್ರ ಭಾರೀ ಭಿನ್ನಾಭಿಪ್ರಾಯಗಳಿವೆ. ಈ ಬಗ್ಗೆ ಸೂಕ್ತ ಅಂಕಿ ಸಂಖ್ಯೆಗಳಿಲ್ಲವಾದ್ದರಿಂದ ಯಾವುದೇ ವೈಜ್ಞಾನಿಕ ಆಧಾರದ ಮೇಲೆ ಮಾಡುವುದು ಶಕ್ಯವಲ್ಲ. ದೇಶದಲ್ಲಿ ಬೇರೆ ಬೇರೆ ಬಗೆಯ ಜಮೀನುಗಳಿವೆ. ಹಲವು ಪ್ರಕಾರದ ಬೆಳೆಗಳು, ಹಾಗೂ ಅವುಗಳ ವಿಭಿನ್ನ ಬೆಲೆಗಳು, ನೀರಾವರಿ ಸಾಧನಗಳ ವೈವಿಧ್ಯ, ಗೇಣಿದಾರಿಕೆಯ ನಿಯಮಗಳು, ತೋಟಗಳು ಹಾಗೂ ಯಂತ್ರಬಳಕೆಯ ಫಾರ್ಮಗಳ ಅಸ್ತಿತ್ವವು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿಬಿಟ್ಟಿದೆ. ವರ್ತಮಾನದ ಅವಶ್ಯಕತೆಗಳು ಹಾಗೂ ದೀರ್ಘಕಾಲೀನ ಉಪಾಯಗಳು ಎರಡರಲ್ಲಿಯೂ ಅನೇಕ ಬಾರಿ ವಿರೋಧ ಬಂದುಬಿಡುತ್ತದೆ. ಸಂವಿಧಾನದ ಅನುಸಾರವಾಗಿ ಹಾನಿಯನ್ನು ತುಂಬಿಕೊಳ್ಳುವ ಅನಿವಾರ್ಯತೆ ಎದುರಿಗೆ ಬಂದಾಗ, ಇಂದಿನ ಆರ್ಥಿಕ ಸಂಕಟದ ಪರಿಸ್ಥಿತಿಯಲ್ಲಿ ವ್ಯಾವಹಾರಿಕ ಸಂಕಷ್ಟಗಳೂ ಎದುರಾಗುತ್ತವೆ. ಎಲ್ಲದಕ್ಕೂ ಸಂಪೂರ್ಣ ನ್ಯಾಯ ಒದಗಿಸಬಲ್ಲ ಯಾವುದಾದರೊಂದು ಪರಿಹಾರ ಹೇಳುವುದು, ಹಾಗೂ ಪ್ರತಿಯೊಂದು ಪರಿಸ್ಥಿತಿಯಲ್ಲಿ ಆರ್ಥಿಕ–ಸಾಮಾಜಿಕ ಹಾಗೂ ಪ್ರಾಕೃತಿಕ ನ್ಯಾಯದ ಮಾನದಂಡವನ್ನು ಸ್ಪಷ್ಟವಾಗಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಅಲ್ಲದೆ ಚಲನಶೀಲವಾದ ಅರ್ಥನೀತಿಯಲ್ಲಿ ಇದು ಇನ್ನಷ್ಟು ಕಠಿಣವಾಗುತ್ತದೆ. ಆದ್ದರಿಂದ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಸಂದರ್ಭದಲ್ಲಿ ನ್ಯಾಯವೇತ್ತನ ಭೂಮಿಕೆಯನ್ನು ಬಿಟ್ಟೇ ಮುಂದುವರಿಯಬೇಕಾಗುತ್ತದೆ.

ಮೊದಲು ಒಂದು ಕುಟುಂಬದ ಉಳುಮೆಯ ಕ್ಷೇತ್ರದ ನಿರ್ಣಯ ಮಾಡಬೇಕು. ಐದು ಜನರ ಒಂದು ಸಾಧಾರಣ ಕುಟುಂಬದ ಸಾಮಾನ್ಯ ಜೀವನಮಟ್ಟ ಯಾವ ಹಿಡುವಳಿಯ ಸಹಾಯದಿಂದ ಸಾಗಬಲ್ಲದೋ, ಅದನ್ನು ನಾವು ಒಂದು ಆರ್ಥಿಕ ಘಟಕ ಎನ್ನಬೇಕಾಗುತ್ತದೆ. ಇದು ಭೂಮಿಯ ಪರಿಸ್ಥಿತಿ, ನೀರಾವರಿಯ ಸಾಧನ, ಅನ್ಯ ಕೊಡುಗೆಗಳ ಲಭ್ಯತೆ, ಇತ್ಯಾದಿಗಳ ಮೇಲೆ ಅವಲಂಬಿಸಿರುತ್ತದೆ. ಯೋಜನಾ ಆಯೋಗವು ಈ ವಿಷಯವನ್ನು ಗಮನದಲ್ಲಿರಿಸಿಕೊಂಡು, ಖರ್ಚುವೆಚ್ಚ ಕಳೆದು ಪ್ರತಿವರ್ಷಕ್ಕೆ ೧೨೦೦ ರೂಪಾಯಿ ಆದಾಯ ಬರುವಂಥ ಭೂಮಿಯನ್ನು ಒಂದು ಕುಟುಂಬದ ಘಟಕವೆಂದು ಸ್ವೀಕರಿಸಿತ್ತು. ಆದರೆ ರೈತನ ಶ್ರಮವನ್ನು ಸೇರಿಸಿಯೇ



ಇದು ನಿರ್ಧಾರಿತವಾಗುತ್ತಿತ್ತು. ಐದು ಎಕರೆಯಷ್ಟು ಒಳ್ಳೆಯ ನೀರಾವರಿಯ ಭೂಮಿಯನ್ನು ಈ ರೀತಿಯ ಕನಿಷ್ಠತಮ ಘಟಕವೆಂದು ಜನಸಂಘ ಭಾವಿಸಿದೆ. ಈ ಆಧಾರದ ಮೇಲೆ ಅತಿ ಹೆಚ್ಚೆಂದರೆ ಮೂವತ್ತು ಎಕರೆಗಳನ್ನು ಒಪ್ಪಿಕೊಳ್ಳಲಾಗಿದೆ. ಅರ್ಥಾತ್ ಯೋಜನಾ ಆಯೋಗವು ನಿಶ್ಚಯಿಸಿದ ೧೨೦೦ ರೂಪಾಯಿಯ ಆದಾಯ ಐದು ಎಕರೆಯಿಂದ ಎಂದು ಭಾವಿಸಿದರೆ, ಮೂವತ್ತು ಎಕರೆಗೆ ೭೨೦೦ ರೂಪಾಯಿ ಕನಿಷ್ಠ ಆದಾಯವನ್ನು ಲೆಕ್ಕ ಹಾಕಬೇಕಾಗುತ್ತದೆ. ಪ್ರಾರಂಭಿಕ ಪರಿಸ್ಥಿತಿಯಲ್ಲಿ ಈ ಆದಾಯವು ವೃದ್ಧಿಯಾಗುವ ಸಂಭವ ಇದೆ. ಆದರೆ ಯೋಜನಾ ಆಯೋಗವು ಕೇವಲ ಮೂರು ಕುಟುಂಬದಷ್ಟು ಹೊಲವನ್ನು ಅಧಿಕತಮ ಹಿಡುವಳಿ ಕ್ಷೇತ್ರದ ರೂಪದಲ್ಲಿ ಸ್ವೀಕರಿಸಿದೆ. ಇದರ ಪ್ರಕಾರ, ರಾಜಸ್ಥಾನದಲ್ಲಿ ೨೪೦೦ ರೂಪಾಯಿ, ತೆಲಂಗಾಣದಲ್ಲಿ ೩೬೦೦ ರೂಪಾಯಿ, ಹಾಗೂ ಉಳಿದ ಆಂಧ್ರದಲ್ಲಿ ೫೪೦೦ ರೂಪಾಯಿ ಮಿತಿಯನ್ನು ನಿಶ್ಚಿತಗೊಳಿಸುವ ಪ್ರಸ್ತಾಪವನ್ನು ಮಾಡಿದೆ.

ಇಷ್ಟೊಂದು ಕಡಿಮೆ ಕೃಷಿ ಭೂಮಿಯನ್ನು ನಿರ್ಧಾರಿತಗೊಳಿಸುವುದು ಆರ್ಥಿಕ ದೃಷ್ಟಿಯಿಂದಷ್ಟೇ ಅಲ್ಲ, ಬೇರೆ ಕಾರಣಗಳಿಂದಲೂ ಯೋಗ್ಯವಾದದ್ದೆಂದು ಹೇಳಲಾಗದು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅಧಿಕಾರ ಪ್ರಾಪ್ತವಾಗಿದ್ದರೂ, ಅದರ ವ್ಯಾವಹಾರಿಕ ಸ್ವರೂಪವು ಪ್ರಾತಿನಿಧಿಕವಾಗಿರುವುದರಿಂದ, ಸಮಾಜದ ಪ್ರತಿಯೊಂದು ವರ್ಗದೊಡನೆ ಪ್ರತ್ಯಕ್ಷ ಸಂಪರ್ಕವಿಟ್ಟುಕೊಳ್ಳುತ್ತ, ಅವರ ಜೀವನವನ್ನು ನಡೆಸುತ್ತಲೂ ಜನ ಸಮುದಾಯದಲ್ಲಿ ವಿಧಾಯಕ ಕೆಲಸಕ್ಕಾಗಿ ಸಮಯ ಮತ್ತು ಸಾಮರ್ಥ್ಯವನ್ನು ಒಗ್ಗೂಡಿಸಿಕೊಳ್ಳಬಲ್ಲ ವರ್ಗದ ಅವಶ್ಯಕತೆ ನಮಗೆ ಅನಿಸುತ್ತದೆ. ಈ ಕೆಲಸವನ್ನು ಯಾವಾಗಲೂ ಮಧ್ಯಮ ವರ್ಗವೇ ಮಾಡುತ್ತ ಬಂದಿದೆ. ನಾವು ರೈತರಲ್ಲಿನ ಈ ವರ್ಗವನ್ನು ನಾಶಮಾಡಿದರೆ ರೈತರದೇ ಬಹುಮತವಿರುವ ಭಾರತದಂತಹ ದೇಶದಲ್ಲಿ, ಪ್ರಜಾಪ್ರಭುತ್ವ ಸರಿಯಾದ ರೀತಿಯಲ್ಲಿ ನಡೆಯಲಾರದು. ನಗರ ಹಾಗೂ ಹಳ್ಳಿಗಳಲ್ಲಿನ ಖರ್ಚಿನ ಭಿನ್ನತೆಯಿಂದಾಗಿ ಆದಾಯದಲ್ಲಿ ತುಸು ಅಂತರ ಅರಿವಿಗೆ ಬರಬಲ್ಲದು, ಆದರೆ ಇಷ್ಟೊಂದು ಭಾರೀ ಅಂತರವನ್ನು ಎಂದೂ ನ್ಯಾಯವೆಂದು ನಿರ್ಣಯಿಸಲು ಸಾಧ್ಯವಿಲ್ಲ. ಕೃಷಿಯಲ್ಲಿ ಸುಧಾರಣೆಯನ್ನು ತರುವ ದೃಷ್ಟಿಯಿಂದಲೂ ಅವಶ್ಯಕವಾದ ಒಂದು ಸಂಗತಿಯೆಂದರೆ, ಸ್ವಲ್ಪ ಸಾಹಸ ಮಾಡಿ ಹೊಸ ಹೊಸ ಪ್ರಯೋಗ ಮಾಡಬಲ್ಲ ವರ್ಗವೊಂದು ಹಳ್ಳಿಯಲ್ಲಿ ಇರಬೇಕಾಗುತ್ತದೆ. ಬಹುದೊಡ್ಡ ಸಾಗುವಳಿದಾರರು ನಿಶ್ಚಿಂತತೆಯ ಕಾರಣದಿಂದ ಪ್ರಯೋಗ ಮತ್ತು ಸಂಶೋಧನೆಯ ಪ್ರವೃತ್ತಿಯನ್ನೇ ಕಳೆದುಕೊಂಡು ಬಿಡುತ್ತಾರೆ ಹಾಗೇ. ಅಲ್ಲಿ ಚಿಕ್ಕ ಹಿಡುವಳಿದಾರರು ಈ ವಿಷಯದಲ್ಲಿ ಸಾಹಸವನ್ನೇ ಮಾಡಲಾರರು. ಆದ್ದರಿಂದ ಒಂದು ಒಳ್ಳೆಯ ಮಧ್ಯಮವರ್ಗ ಇದ್ದರೆ, ಅದು ಪ್ರತಿಯೊಂದು ರೈತನಿಗಾಗಿ ಒಂದು 'ಮಾಡೆಲ್‌ಫಾರ್ಮ್' ತಯಾರಿಸಿ ತೋರಿಸುವ ಸಾಮರ್ಥ್ಯವನ್ನು

ಹೊಂದಬಹುದು. ಕೃಷಿಕ ಸಮಾಜವು ಅದರ ಅನುಕರಣೆ ಮಾಡಿಯೇ ಅನೇಕ ಹೊಸ ವಿಧಾನಗಳನ್ನು ತನ್ನದನ್ನಾಗಿ ಮಾಡಿಕೊಳ್ಳಬಲ್ಲದು, ಸರಕಾರಿ ಪ್ರಚಾರ ಹಾಗೂ ನೌಕರಶಾಹಿಯಿಂದ ಈ ಕಾರ್ಯವು ಸಾಧ್ಯವಿಲ್ಲ.

ಅತಿ ಹೆಚ್ಚಿನ ಹಿಡುವಳಿ ಮತ್ತು ಅದನ್ನು ನಿರ್ಧರಿಸುವ ಸಿದ್ಧಾಂತವನ್ನು ನಿಶ್ಚಿತಗೊಳಿಸಿ, ಅದರ ವ್ಯವಹಾರವನ್ನೂ ಕುಶಲತೆಯಿಂದ ಮಾಡಬೇಕು. ಅನಿಶ್ಚಿತತೆ ವಿಕಾಸದ ಮಾರ್ಗದಲ್ಲಿ ಬಹುದೊಡ್ಡ ಅಡ್ಡಿಯಾಗಿದೆ. ಯೋಜನಾ ಆಯೋಗವು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿಯೇ ಗರಿಷ್ಠ ಹಿಡುವಳಿಯನ್ನು ನಿರ್ಧರಿಸುವ ಅವಶ್ಯಕತೆಯನ್ನು ನಿರ್ದೇಶಿಸಿತ್ತಾದರೂ, ಆಗಿನಿಂದ ಈಗಿನವರೆಗೆ ಪ್ರಚಾರವನ್ನು ಬಿಟ್ಟರೆ ಮತ್ತೇನೂ ಕೆಲಸವಾಗಲೇ ಇಲ್ಲ. ಪರಿಣಾಮವಾಗಿ ಕೇವಲ ಇಚ್ಛೆಯಿಂದ ಮುಂದೆ ಬರುವ ಕೃಷಿಕರಷ್ಟೇ ಅಲ್ಲ, ಭೂಮಿಯ ಒಡೆಯನಾದ ರೈತರೂ ತನ್ನ ಭವಿಷ್ಯದ ಬಗ್ಗೆ ಅನಿಶ್ಚಿತರಾಗಿದ್ದಾರೆ. ಅವರು ಒಕ್ಕಲುತನದ ವಿಕಾಸಕ್ಕೆಂದು ಬಂಡವಾಳ ತೊಡಗಿಸಲು ಹಿಂಜರಿಯುತ್ತಿದ್ದಾರೆ. ಈ ಕಾರ್ಯಕ್ರಮವನ್ನು ತಕ್ಷಣವೇ ಜಾರಿಗೊಳಿಸಬೇಕಾದದ್ದು ಅಗತ್ಯ.

**ಗರಿಷ್ಠ ಹಿಡುವಳಿ ನಿರ್ಧರಿಸುವಲ್ಲಿ ಮೂರು ಮುಖ್ಯ ಅಂಶಗಳು**

೧) ಭವಿಷ್ಯದಲ್ಲಿ ಖರೀದಿ ಹಾಗೂ ವ್ಯಾಪ್ತಿ ಮೀರದಿರುವುದು.
೨) ಸದ್ಯದ ಹಿಡುವಳಿ.
೩) ಗೇಣಿದಾರನಿಂದ ಸ್ವಯಂ ಉಳುಮೆಗಾಗಿ ಭೂಮಿಯನ್ನು ಪಡೆಯುವುದು.

**ಅಪವಾದ**

ವರ್ತಮಾನದ ಹಿಡುವಳಿಗೆ ಸಂಬಂಧಿಸಿದಂತೆ ಮುಂದಿಡಲಾದ ವಿಧೇಯಕದಲ್ಲಿ ಬಹಳಷ್ಟು ಅಪವಾದಗಳನ್ನು–ಪರ್ಯಾಯಗಳನ್ನು ಇಡಲಾಗಿದೆ. ತೋಟಗಾರನಿಗೆ ಹಾಗೂ ದೊಡ್ಡ ದೊಡ್ಡ ಮತ್ತಷ್ಟು ಯಂತ್ರಗಳನ್ನು ಕೆಲಸಕ್ಕಾಗಿ ಬಳಸುವ ಫಾರ್ಮ್‌ಗಳು ಹಾಗೂ ಸುವ್ಯವಸ್ಥಿತ ಫಾರ್ಮ್‌ಗಳನ್ನು ಮತ್ತು ಸಹಕಾರಿ ಸಮಿತಿಗಳನ್ನು ಗರಿಷ್ಠತಮ ಹಿಡುವಳಿಯ ಪ್ರೊವಿಜನ್‌ಗಳಿಂದ ಮುಕ್ತಗೊಳಿಸಲಾಗಿದೆ. ತೋಟಗಾರನ ಕೃಷಿಗೆ ತನ್ನದೇ ಆದ ವಿಶೇಷತೆಯಿರುವುದರಿಂದ ಅವರನ್ನು ಮುಕ್ತಗೊಳಿಸುವುದು ಸಕಾರಣವಾಗಬಹುದಾಗಿದೆ. ಆದರೆ ಬೇರೆ ಅಪವಾದಗಳು ಸಕಾರಣವಾಗಿಲ್ಲ. ಸರಕಾರವು ತನ್ನ ಕೈಯಲ್ಲಿ ಈ ರೀತಿ ಪಕ್ಷಪಾತದ ಅಧಿಕಾರಯನ್ನು ತೆಗೆದುಕೊಂಡಿದೆ, ಮತ್ತು ಜನರಿಗೆ ಟ್ರ್ಯಾಕ್ಟರ್ ಖರೀದಿಸಿ ಅಥವಾ ಸಹಕಾರಿ ಸಮಿತಿ ರೂಪಿಸಿ ಕಾನೂನನ್ನು ಅಸಡ್ಡೆ ಮಾಡುವ ವ್ಯವಸ್ಥೆಯನ್ನು ಮಾಡಿದೆ. ಯಾಂತ್ರಿಕ ಕೃಷಿಯನ್ನು ನಾವು ಭಾರತಕ್ಕೆ ಅನುಪಯುಕ್ತವೆಂದು ತಿಳಿಯುತ್ತೇವೆ. ಅಂದ ಮೇಲೆ ವಿಶೇಷ ಸೌಲಭ್ಯಗಳನ್ನು ಕೊಟ್ಟು ಯಾಕೆ ಪ್ರೋತ್ಸಾಹಿಸಬೇಕು?



**ಸಹಕಾರಿ ಕೃಷಿ**

ಯೋಜನಾ ಆಯೋಗ ಹಾಗೂ ಕಾಂಗ್ರೆಸ್ ಸಹಕಾರಿ ಕೃಷಿಯ ಬಗ್ಗೆ ಬಹಳ ಒತ್ತು ಕೊಡುತ್ತ ಬಂದಿವೆ. ಚೀನದಿಂದ ಪ್ರೇರಣೆ ಪಡೆದು ಅದನ್ನು ಭಾರತದ ಕೃಷಿ ಸಮಸ್ಯೆಯ ಏಕಮಾತ್ರ ಪರಿಹಾರವೆಂದು ತಿಳಿಯಲಾಗುತ್ತಿದೆ. ಒಂದು ಅಧ್ಯಯನ ತಂಡವನ್ನು ಕಳಿಸಿ ಚೀನದ ಪದ್ಧತಿಗಳನ್ನು ಅಧ್ಯಯನ ಮಾಡಿಸಲಾಗಿದೆ. ಅಧ್ಯಯನ ತಂಡದ ವರದಿಯಲ್ಲಿ ಸ್ವಾಭಾವಿಕವಾಗಿಯೇ ಸಹಕಾರಿ ಕೃಷಿಯನ್ನು ಸಮರ್ಥಿಸಲಾಗಿದೆ. ಆದರೆ ಅದರ ಇಬ್ಬರು ಸದಸ್ಯರು ಈ ವರಗೆ ತಮ್ಮ ಭಿನ್ನ ಮತವನ್ನೂ ಜೊತೆಗಿರಿಸಿದ್ದಾರೆ.

ಸಹಕಾರಿ ಕೃಷಿಯ ಲಾಭವನ್ನು ಹೇಗೆ ಸಮರ್ಥಿಸಲಾಗಿದೆಯೆಂದರೆ, ಅದರಲ್ಲಿ ಹಲವು ಚಿಕ್ಕ ಚಿಕ್ಕ ತುಣುಕುಗಳು ಒಂದು ಕಡೆ ಬಂದು ದೊಡ್ಡ ಪ್ರಮಾಣದಲ್ಲಿ ಕೃಷಿ ಆಗಬಲ್ಲದು ಹಾಗೂ ಎಲ್ಲ ಬಗೆಯ ಸೌಲಭ್ಯಗಳನ್ನೂ ಪಡೆಯಬಹುದು. ದೊಡ್ಡ ಪ್ರಮಾಣದಲ್ಲಿ ಕೃಷಿ ಮಾಡುವುದರ ಅನುಪಯುಕ್ತತೆಯ ಬಗ್ಗೆ ನಾವು ಆಗಲೇ ವಿಚಾರಮಾಡಿದ್ದೇವೆ. ಸಹಕಾರಿ ಕೃಷಿಯ ಅಂತಿಮ ಸ್ವರೂಪ ಏನಾಗಬಹುದು, ಹಾಗೂ ಅದು ಎಷ್ಟರಮಟ್ಟಿಗೆ ಸ್ವತಂತ್ರವಾಗಿರಬಹುದು, ಈ ಸಂಬಂಧವಾಗಿ ಯಾವುದೇ ನಿಶ್ಚಿತ ನೀತಿಯಿಲ್ಲ. ವ್ಯಾಖ್ಯಾನಗಳನ್ನು ಗಮನಿಸುವುದಾದರೆ, ಸಹಕಾರಿ ಸಮಿತಿಗಳು ಸ್ವೇಚ್ಛೆಯಿಂದ ರೂಪುಗೊಳ್ಳಬೇಕು ಎಂದು ಯಾವಾಗಲೂ ಹೇಳಲಾಗುತ್ತಿದೆ. ಆದರೆ ಇದು ಎಷ್ಟರ ಮಟ್ಟಿಗೆ ವ್ಯಾವಹಾರಿಕ? ಸರಕಾರದ ವತಿಯಿಂದ ದೊರೆಯುವ ಎಲ್ಲ ಸೌಲಭ್ಯಗಳೂ ಸಹಕಾರಿ ಸಮಿತಿಗೆ ದೊರೆಯಬೇಕು ಎಂದು ಯೋಜನಾ ಆಯೋಗವು ಹೇಳಿದೆ. ಇದು ಕೃಷಿಕರನ್ನು ಸ್ವತಂತ್ರವಾಗಿ ತಮ್ಮ ಸಾಗುವಳಿ ಮಾಡುವ ಹಾಗೂ ಅದರ ವಿಕಾಸಕ್ಕಾಗಿ ಎಲ್ಲ ಸಾಧನಗಳನ್ನು ಪಡೆದುಕೊಳ್ಳುವ ಸೌಲಭ್ಯದಿಂದ ವಂಚಿತಗೊಳಿಸುವ ಇನ್ನೊಂದು ದಾರಿಯಲ್ಲವೇನು? ಇಷ್ಟೇ ಅಲ್ಲ, ಕಾಂಗ್ರೆಸ್ಸಿನ ಭೂಮಿ ಸುಧಾರಣಾ ಸಮಿತಿಯು ತನ್ನ ವರದಿಯಲ್ಲಿ ಹೀಗೆ ಸ್ಪಷ್ಟವಾಗಿ ಬರೆದಿದೆ. “ಸ್ವಯಂಸ್ಫೂರ್ತಿಯ ಪ್ರಯತ್ನದ ಪರಿಣಾಮವು ಕಣ್ಣಿಗೆ ಕಾಣುವಂತೆ ದೊರಕದಿದ್ದರೆ ಅನಿವಾರ್ಯತೆಯ ದಾರಿಯನ್ನು ಹಿಡಿಯಬೇಕಾಗುತ್ತದೆ.” ಅಂದರೆ ಸಹಕಾರಿ ಕೃಷಿಯ ಹೆಸರಿನಲ್ಲಿ ಚೀನಾದಂತೆ ಸಾಮೂಹಿಕ ಸಾಗುವಳಿಯನ್ನು ನಡೆಸಲಾಗುವುದು.

ಸಹಕಾರಿ ಕೃಷಿಯ ವಿಷಯವಾಗಿ ಜನಾಭಿಪ್ರಾಯ ಎಷ್ಟೊಂದು ವಿರುದ್ಧವಾಗಿದೆ ಮತ್ತು ಅದರ ಕಾರಣ ಏನು ಎಂಬುದರ ಉಲ್ಲೇಖವನ್ನು ಚೀನಾಕ್ಕೆ ಹೋಗಿದ್ದ

ಅಧ್ಯಯನ ತನ್ನ ವರದಿಯಲ್ಲಿ ಸ್ವಯಂ ಮಾಡಿದೆ. ಅದು ಹೀಗೆ ಬರೆದಿದೆ: "ಭಾರತೀಯ ಬುದ್ಧಿಜೀವಿಗಳು, ಆಡಳಿತಗಾರರು, ಹಾಗೂ ಜನರ ಮುಂದಾಳುಗಳು ಸಹಕಾರಿ ಕೃಷಿಯ ಉಪಯುಕ್ತತೆ ಹಾಗೂ ವ್ಯಾವಹಾರಿಕತೆಯ ಸಂಬಂಧವಾಗಿ ತೀವ್ರವಾದ ಸಂದೇಹಗಳನ್ನು ಪ್ರಕಟಿಸಿದ್ದಾರೆ. ಮತ್ತೆ ಕೆಲವರು ರಾಷ್ಟ್ರ ಜೀವನದ ಮಹತ್ವಪೂರ್ಣ ಅಂಗವಾಗಿರುವವರು, ಸಹಕಾರಿ ಕೃಷಿಯು ನಮ್ಮ ಪ್ರಕೃತಿ ಹಾಗೂ ಪ್ರತಿಭೆಗೆ ಪ್ರತಿಕೂಲವಾಗಿದೆ ಎಂದು ಭಾವಿಸುತ್ತಾರೆ. ಭೂಮಿಯ ಬಗ್ಗೆ ರೈತನಿಗೆ ತೀವ್ರವಾದ ವ್ಯಾಮೋಹವಿದೆ. ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಅವಕಾಶವಿಲ್ಲವಾದರೂ, ಜೋರು–ಬಲವಂತ ಮಾಡದೆ – ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದಿಲ್ಲ ಎಂದು ಅವರು ಒಪ್ಪುತ್ತಾರೆ. ಸಾಮಾಜಿಕ ಕೃಷಿಯ ಸ್ವಾಭಾವಿಕ ಪರಿಣಾಮವು ಒಂದು ಕಾನೂನುಬದ್ಧ ಹಾಗೂ ಪ್ರತಿಷ್ಠಾನ ಪ್ರಧಾನ ಸಮಾಜದ ರಚನೆಯಾಗಿದ್ದು, ಕೃಷಿಕನ ವ್ಯಕ್ತಿತ್ವ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಎರಡರ ವಿಕಾಸದ ದಾರಿಯಲ್ಲಿ ಅಡ್ಡಿಯಾಗುತ್ತದೆ. ಸಹಕಾರಿ ಒಕ್ಕಲುತನದಲ್ಲಿ ರೈತನ ಉದ್ಯೋಗ ಪ್ರೇರಣೆಯೇ ನಾಶವಾಗುತ್ತದೆ ಹಾಗೂ ಉತ್ಪಾದನೆ ಕುಸಿಯುತ್ತದೆ ಮತ್ತು ಖರ್ಚು ಹೆಚ್ಚಾಗುತ್ತದೆಯೆಂಬ ಭಯ ಕೂಡ ಅವರಿಗಿದೆ." ಆದರೆ ದೌರ್ಭಾಗ್ಯದ ಸಂಗತಿಯೆಂದರೆ ಸರಕಾರವು ಈ ಮಹತ್ವಪೂರ್ಣ ವಿಚಾರದ ಕಡೆ ಯಾವುದೇ ಗಮನಹರಿಸಿಲ್ಲ.

ಸಹಕಾರಿ ಕೃಷಿಯಿಂದ ದೇಶದ ನಿರುದ್ಯೋಗದ ಸಮಸ್ಯೆ ಮತ್ತಷ್ಟು ಭೀಕರವಾಗುತ್ತದೆ. ಚೀನವು ಸರ್ವಾಧಿಕಾರಿ ಪದ್ಧತಿಯಿಂದ ಅವರನ್ನು ಬೇರೆ ಬೇರೆ ಕೆಲಸದಲ್ಲಿ ಹಾಗೂ ದೂರ ದೂರ ತೊಡಗಿಸಿದೆ. ಆದರೆ ನಾವು ಹಾಗೆ ಮಾಡಲಾರೆವು. ಕೃಷಿಯಲ್ಲಿ ನಿರ್ಜೀವ ವಸ್ತುವಿನ ಉತ್ಪಾದನೆ ಅಥವಾ ಬಳಕೆ ಆಗುವುದಿಲ್ಲ. ಮೇಲಾಗಿ ಒಂದು ಜೀವನಮಾನದ ಸೃಷ್ಟಿಯ ರಚನೆಯಾಗುತ್ತದೆ. ನಾವು ಅದರ ಕಾರ್ಯವನ್ನು ಬೇರೆ ಬೇರೆ ನಿಶ್ಚಿತ ಹಾಗೂ ಅಳತೆ ಮಾಡಿದ ಪ್ರಕ್ರಿಯೆಗಳಲ್ಲಿ ಹಂಚಲಾರೆವು. ಭಾರತದಲ್ಲಿ ಪಶುಧನವೇ ಬಹುದೊಡ್ಡ ಬಂಡವಾಳವಾಗಿದ್ದು ಅದರ ಸಂರಕ್ಷಣೆ ಹಾಗೂ ಸಂವರ್ಧನೆಗಾಗಿ ಮಾನವ ಹೃದಯ ಹಾಗೂ ಸಂಬಂಧಗಳ ಅವಶ್ಯಕತೆ ಇದೆ. ನಾವು ಒಂದು ಸಹಕಾರಿ ಪದ್ಧತಿಯ ಕೇವಲ ಕೆಲಸದಲ್ಲಿ ಕೆಲಸವೆಂಬಂತಹ ವ್ಯವಸ್ಥೆಯನ್ನು ಮಾಡಿಕೊಳ್ಳಲಾರೆವು.

ಸಹಕಾರಿ ಕೃಷಿಯ ಅಂತಿಮ ಉದ್ದೇಶ ಗ್ರಾಮದ ಸಾಮೂಹಿಕ ವ್ಯವಸ್ಥೆ ಆಗಿದೆ. ವಿನೋಬಾ ಅವರ ಗ್ರಾಮದಾನದ ಉದ್ದೇಶ ಕೂಡ ಇದೇ ಆಗಿದೆ. ಇದರಲ್ಲಿ ಗ್ರಾಮದ ಸ್ತರದಲ್ಲಿ ಒಂದು ಕೇಂದ್ರೀಕೃತ ವ್ಯವಸ್ಥೆಯನ್ನು ಹುಟ್ಟು ಹಾಕುತ್ತೇವೆಯೆಂಬುದು ನಿಶ್ಚಿತವಾಗಿದೆ. ಗ್ರಾಮ ಪಂಚಾಯತಿ ಅಥವಾ ವ್ಯವಸ್ಥಾಪನಾ ಸಮಿತಿಯ ಕೈಯಲ್ಲಿ ಬಹಳ ಅಧಿಕಾರ ಬಂದುಬಿಡುತ್ತದೆ ಮತ್ತು ಉಳಿದ ಕೃಷಿಕರು



ಕೇವಲ ಕೃಷಿ ಕೂಲಿಕಾರರು ಮಾತ್ರವೇ ಆಗಿ ಉಳಿಯುತ್ತಾರೆ. ಪ್ರಸ್ತಾವನೆಯಲ್ಲಿ ಇರುವಂತೆ ಚುನಾವಣೆ ಕೂಡ ಅಪ್ರತ್ಯಕ್ಷ ರೂಪದಿಂದ ಗ್ರಾಮ ಪಂಚಾಯತದ ಮೂಲಕವೇ ಆದರೆ, ಸಾಮಾನ್ಯ ಜನರು ಅವರನ್ನು ಎಂದೂ ಬದಲಿಸಲು ಸಾಧ್ಯವಾಗದಷ್ಟು ಶಕ್ತಿಯು ಅವರ ಕೈಗೆ ಬಂದುಬಿಡುತ್ತದೆ.

ಹಾಗಾದರೆ ಇದಕ್ಕೆ ಸರಿಯಾದ ದಾರಿಯೇನು? ರೈತನಿಗೆ ಅವಶ್ಯಕವಾದ ವಸ್ತುಗಳನ್ನು ಕೊಂಡುಕೊಳ್ಳಲು ಹಾಗೂ ಅವನ ಜಿನಸುಗಳನ್ನು ಮಾರಾಟ ಮಾಡಲು ಸಹಕಾರಿ ಸಮಿತಿಗಳನ್ನು ಸ್ಥಾಪಿಸಬೇಕು ಮತ್ತು ಕುಟುಂಬವನ್ನು ಒಂದು ಘಟಕವೆಂದು ಭಾವಿಸಿ ಅದರ ಆಧಾರದ ಮೇಲೆ ಅವನಿಗೆ ಸ್ವತಂತ್ರವಾಗಿ ಒಕ್ಕಲುತನ ಮಾಡಲು ಅವಕಾಶ ನೀಡಬೇಕು. ಜೊತೆಯಾಗಿ ಒಕ್ಕಲುತನ ಮಾಡಲು ಬಯಸುವವರು ಹಾಗೇ ಮಾಡಲಿ. ಆದರೆ ಜಮೀನಿನ ಒಡೆತನ ಕೇವಲ ಕಾಗದದ ಮೇಲಿನದಾಗಿರದೆ ನೇರವಾಗಿದ್ದು ವ್ಯಾವಹಾರಿಕವಾಗಿರಬೇಕು.

**ಒಳವಿಭಜನೆ ಹಾಗೂ ತಪ್ಪಾಗಿ ಒಡೆಯುವಿಕೆ**

ಭೂಮಿಯ ಒಳವಿಭಜನೆ ಹಾಗೂ ತುಂಡು ಮಾಡುವಿಕೆ ಭಾರತೀಯ ಕೃಷಿಯ ಒಂದು ಸಮಸ್ಯೆಯಾಗಿದೆ. ಇದನ್ನು ಭೂ–ಚಕಬಂದಿ ಮೂಲಕ ತಡೆಯುವ ಪ್ರಯತ್ನವನ್ನೂ ಮಾಡಲಾಗಿದೆ. ಭೂಮಿಯನ್ನು ತುಣುಕು ತುಣುಕಾಗಿ ಭಾಗ ಮಾಡುವುದರ ಪರವಾಗಿಯೂ ತರ್ಕ–ವಾದಗಳನ್ನು ಮಂಡಿಸಬಹುದು. ಕಾನೂನಿನ ಪ್ರಕಾರ ಭೂ ಚಕಬಂದಿ ಮಾಡಲಾಗುತ್ತದೆ. ಅದರಲ್ಲಿ ಪಕ್ಷಪಾತ ಹಾಗೂ ಅಂತರಕ್ಕೆ ಬಹಳ ಅವಕಾಶವಿದೆ. ಅದರಿಂದಾಗಿ ಚಿಕ್ಕ ಚಿಕ್ಕ ರೈತರಿಗೆ ಅಸಂತೋಷವೂ ಇದೆ. ಜೊತೆಗೆ ಭೂಮಿಯ ವಿತರಣೆ ಹಾಗೂ ಭೂ ಚಕಬಂದಿ ಕಾರ್ಯವನ್ನು ಒಂದೇ ಬಾರಿಗೆ ಮಾಡಿದರೆ ಬಹಳ ಲಾಭವಾಗುತ್ತದೆ. ಪ್ರತಿಯೊಂದು ಗ್ರಾಮಕ್ಕೆ ಒಂದು ಸರ್ವಾಂಗೀಣ ವಿಕಾಸ ಯೋಜನೆಯನ್ನು (ಮಾಸ್ಟರ್‌ಪ್ಲಾನ್) ತಯಾರಿಸಬೇಕು. ನಂತರ ಬೇಕಾದರೆ ಅದನ್ನು ನಿಧಾನವಾಗಿ ಕಾರ್ಯರೂಪಕ್ಕೆ ತರಲಿ, ಆದರೆ ಪ್ರತಿಯೊಂದು ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ. ಸಾಮುದಾಯಿಕ ಯೋಜನೆಗಳನ್ನು ಈ ದೃಷ್ಟಿಯಿಂದ ಉಪಯೋಗ ಮಾಡಿಕೊಳ್ಳಬಹುದು.

ಇತ್ತೀಚೆಗಷ್ಟೇ ರೂಪಿಸಲಾದ ಹಿಂದೂ ಉತ್ತರಾಧಿಕಾರ ಕಾನೂನು ಕೆಟ್ಟ ರೀತಿಯಲ್ಲಿ ಭೂಮಿಯನ್ನು ಒಡೆಯುವ ಪ್ರವೃತ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಮಗಳಿಗೆ ಅಪ್ಪನ ಆಸ್ತಿಯಲ್ಲಿ ಹಿಸ್ಸೆ ಇರುವ ಕಾರಣದಿಂದ ಜಮೀನಿನ ಹಂಚಿಕೆಯಾಗುತ್ತದೆ. ಅದು ಕೂಡ ಅವಳು ಎಲ್ಲಿಯೋ ವಾಸ ಮಾಡುತ್ತಾಳೆ, ಜಮೀನು ಇಲ್ಲೇ ಇರುತ್ತದೆ. ಅವಳಿಗೆ ಮಾವನ ಆಸ್ತಿಯಲ್ಲಿ ಪಾಲು ಸಿಗಬೇಕಾದ್ದು ಒಳ್ಳೆಯದು. ಕನಿಷ್ಠ ಪಕ್ಷ

ಇನ್ನೊಂದು ವ್ಯವಸ್ಥೆಯನ್ನಾದರೂ ಮಾಡಬಹುದು, ಅವಳು ತಂದೆಯ ಆಸ್ತಿಯಲ್ಲಿ ಪಾಲು ಕೇಳುವ ಬದಲು ಅದರ ನಗದು ಮೌಲ್ಯವನ್ನು ಅಣ್ಣ–ತಮ್ಮಂದಿರಿಂದ ಪಡೆಯುವ ಅಧಿಕಾರಿಣಿಯಾಗಲಿ.

**ಭೂಸವೆತ**

ಭೂಸವೆತವನ್ನು ತಡೆಯುವ ಕಾರ್ಯಕ್ರಮವನ್ನು ತಯಾರಿಸಬೇಕು. ಅಡವಿಯನ್ನು ಹಾಗೂ ಮರಗಳನ್ನು ಕಡಿಯುವುದು, ನೀರಾವರಿ ಹೊಸ ಜಮೀನನ್ನು ಒಡೆಯುವ ಪ್ರಯತ್ನ, ಭೂ ಚಕಬಂದಿ, ವಿಶೇಷವಾಗಿ ಕುರಿಗಳನ್ನು ಯದ್ವಾತದ್ವಾ ಮೇಯಿಸುವುದು, ಹಾಗೂ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಕೃಷಿ ಮಾಡುವುದು, ಇತ್ಯಾದಿ ಅಂಶಗಳು ಭೂಸವೆತಕ್ಕೆ ಕಾರಣಗಳಾಗಿವೆ. ಜಮೀನನ್ನು ನಾವು ನೇಗಿಲಿನಿಂದ ಉಳುಮೆ ಮಾಡಿದ್ದಕ್ಕಿಂತ ಹೆಚ್ಚಿಗೆ ಭೂಮಿಯ ಸವೆತವೇ ಜಾಸ್ತಿ ಆಗಿರುತ್ತದೆ. ದೊಡ್ಡ ದೊಡ್ಡ ಅಣೆಕಟ್ಟುಗಳಿಂದ ನದಿಯ ತಳದಲ್ಲಿ ಹೂಳು ತುಂಬಿದೆ. ಅದರಿಂದ ಅವು ಮಳೆಯ ನೀರನ್ನು ಪೂರ್ಣವಾಗಿ ಹಿಡಿದಿಟ್ಟುಕೊಳ್ಳಲಾರವು. ಮಹಾಪೂರದೊಂದಿಗೇ ಅವು ಮರಳನ್ನು ಕೂಡ ಅಕ್ಕ ಪಕ್ಕದ ಜಮೀನಿನಲ್ಲಿ ಹರಡಿ ಅದನ್ನು ಕೃಷಿಗೆ ಅಯೋಗ್ಯವನ್ನಾಗಿ ಮಾಡುತ್ತವೆ. ರಾಜಸ್ತಾನದ ಮರುಭೂಮಿಯು ನಿದಾನಕ್ಕೆ ಪೂರ್ವದ ಕಡೆ ಮುಂದುವರಿಯುತ್ತಿದೆ. ಜವುಳಿನ ಸಮಸ್ಯೆಯನ್ನಂತೂ ಮೊದಲೇ ವಿವರಿಸಲಾಗಿದೆ. ಅಡವಿ ಬೆಳೆಸುವುದು, ಅಡವಿ ಸಂರಕ್ಷಿಸುವುದು, ಚಿಕ್ಕ ಚಿಕ್ಕ ಪೊದೆ ಹಾಗೂ ಗಿಡಗಳ ರಕ್ಷಣೆ, ಒಡ್ಡುಗಳನ್ನು ಹಾಕುವುದು, ನೀರಿನ ಹರಿವಿನ ವೇಗವನ್ನು ತಡೆಯುವುದು, ಬೇಕಾಬಿಟ್ಟಿ ಮೇಯಿಸುವುದನ್ನು ತಡೆಯುವುದು ಇತ್ಯಾದಿ ಕಾರ್ಯಕ್ರಮಗಳಿಂದ ರಕ್ಷಣಾತ್ಮಕ ಉಪಾಯ ಯೋಜನೆಗಳನ್ನು ಮಾಡಬಹುದು.

**ಮಾರುಕಟ್ಟೆ**

ಉತ್ಪಾದನೆಯ ಹೆಚ್ಚಳದ ಜೊತೆಗೆ ಕೃಷಿಜನ್ಯ ವಸ್ತುಗಳ ಮಾರುಕಟ್ಟೆ ಹಾಗೂ ಸಾಲದ ವ್ಯವಸ್ಥೆಯನ್ನೂ ಮಾಡಬೇಕಾಗುವುದು. ಈವರೆಗೆ ಹಳ್ಳಿಯ ಸಾಹುಕಾರನೇ ಈ ಎರಡನ್ನೂ ಅಥವಾ ಈ ಪೈಕಿ ಒಂದನ್ನು ಕೆಲಮಟ್ಟಿಗೆ ಮಾಡುತ್ತಿದ್ದ. ಆದರೆ ಮಾರುಕಟ್ಟೆಯ ವ್ಯವಸ್ಥೆ ಸರಿಯಾಗಿಲ್ಲದ ಕಾರಣ ರೈತನಿಗೆ ಎಂದೂ ಯೋಗ್ಯ ಬೆಲೆ ಸಿಕ್ಕದು. ಕಚ್ಚಾ ಮಾಲಿನ ಬೆಲೆ ಕಡಿಮೆಯಾಗಲು ಸಾಧಾರಣವಾಗಿ ದಲ್ಲಾಳಿಗಳನ್ನು ಹಾಗೂ ವ್ಯಾಪಾರಿಗಳನ್ನು ದೋಷಿಗಳನ್ನಾಗಿ ಮಾಡಲಾಗುತ್ತಿದೆ. ಅವರು ಆಗಾಗ ರೈತನ ತುರ್ತು ಹಾಗೂ ಅನಿವಾರ್ಯತೆಯ ಅನುಚಿತ ಲಾಭವನ್ನು ಪಡೆಯುತ್ತಿದ್ದಿರಬಹುದು. ಆದರೆ ಇದಕ್ಕೆ ಸಂಪೂರ್ಣವಾಗಿ ಅರ್ಥವ್ಯವಸ್ಥೆಯೇ



ಮೂಲ ದೋಷಿಯಾಗಿದೆ. ಇದರಲ್ಲಿ ಕಚ್ಚಾ ಮಾಲು ಹಾಗೂ ಪಕ್ಕಾ ಮಾಲುಗಳ ಬೆಲೆಗಳ ನಡುವೆ ಯಾವುದೇ ಹೊಂದಾಣಿಕೆ ಇಲ್ಲ. ಪಕ್ಕಾ ಮಾಲಿನ ಅವಶ್ಯಕತೆಗಿಂತ ಕಚ್ಚಾ ಮಾಲಿನ ಅವಶ್ಯಕತೆಯು ಹೆಚ್ಚಾಗಿದ್ದರೂ, ಪಕ್ಕಾ ಮಾಲಿನ ಹೋಲಿಕೆಯಲ್ಲಿ ಕಚ್ಚಾಮಾಲನ್ನು ಬಹಳ ಸಮಯದವರೆಗೆ ಸಂಗ್ರಹಿಸಿ ಇಡಲಾಗುವುದಿಲ್ಲ. ಪಕ್ಕಾ ಮಾಲು ಹೆಚ್ಚು ದಿನಗಳ ಕಾಲ ತಾಳಿಕೆ ಬರಬಲ್ಲದು ಹಾಗೂ ಮಾಲನ್ನು ತಯಾರಿಸುವವರು ತಾವು ಅನುಸರಿಸುವ ಪದ್ಧತಿಯಿಂದಲೇ ಮಾಲನ್ನು ಹೆಚ್ಚು ಕಾಲ ತಡೆದಿಟ್ಟುಕೊಳ್ಳಬಲ್ಲ ಸಾಮರ್ಥ್ಯವಿರುವಂತೆ ಮಾಡುತ್ತಾರೆ. ರೈತನ ಜಿನಸು ಸ್ವಲ್ಪವೇ ಸಮಯದಲ್ಲಿ ಎಲ್ಲವೂ ಮಾರುಕಟ್ಟೆಗೆ ಬಂದು ಬಿಡುತ್ತದೆ. ಆದರೆ ಮಾಲಿನ ಬೇಡಿಕೆಯು ವರ್ಷದುದ್ದಕ್ಕೂ ಹರಡಿಕೊಂಡಿರುತ್ತದೆ. ಮಾರುಕಟ್ಟೆಯ ವ್ಯವಸ್ಥೆಗೆ ಅನುಗುಣವಾಗಿ ವಾಸ್ತವಿಕ ಬೇಡಿಕೆಗಿಂತ ವ್ಯಾಪಾರಿಯ ಮೂಲಕ ಅಂದಾಜು ಮಾಡಲಾದ ಬೇಡಿಕೆಯಿಂದ ಬೆಲೆ ನಿರ್ಧಾರ ಮಾಡಲಾಗುತ್ತದೆ. ಆದ್ದರಿಂದ, ರೈತನಿಗೆ ನ್ಯಾಯ ದೊರಕುವಂತೆ ಮಾಡಲು ಹಳ್ಳಿಗಳಲ್ಲಿ ಭಂಡಾರಗಳನ್ನು–ಗೋದಾಮುಗಳನ್ನು ನಿರ್ಮಾಣ ಮಾಡಿಸಬೇಕು, ಹಾಗೂ ರೈತನಿಗೆ ತನ್ನ ಬೆಳೆಯ ಸ್ಟಾಕಿನ ಮೇಲೆ ಯೋಗ್ಯ ಸಾಲ ದೊರೆಯಬೇಕು. ಸಹಕಾರಿ ಸಮಿತಿಗಳು ಈ ಕೆಲಸವನ್ನು ಚೆನ್ನಾಗಿ ಮಾಡಬಲ್ಲವು.

ಉತ್ಪಾದಕ ಹಾಗೂ ಬಳಕೆದಾರನ ನಡುವಣ ಅಂತರವನ್ನು ಕಡಿಮೆ ಮಾಡಲು ಸಾಧ್ಯವಾದರೆ, ಹಾಗೂ ಮಧ್ಯವರ್ತಿಗಳನ್ನು ಬದಿಗಿಡಲು ಸಾಧ್ಯವಾದರೆ ಬೆಲೆಯ ಈ ಭಾರೀ ಅಂತರವನ್ನು ಹಾಗೂ ಬೆಲೆಯ ಏರಿಳಿತವನ್ನು ಬಹಳಷ್ಟು ಕಡಿಮೆ ಮಾಡಬಹುದು. ಶುಕ್ರನೀತಿಯಲ್ಲಿ ವೈಶ್ಯನ ವ್ಯಾಖ್ಯೆಯನ್ನು ಹೀಗೆ ಕೊಡಲಾಗಿದೆ.

ಕ್ರಯ ವಿಕ್ರಯ ಕುಶಲಾಯೇ ನಿತ್ಯಪಣ್ಯ ಜೀವಿನಃ ।
ಪಶು ರಕ್ಷಾ ಕೃಷಿ ಕರಾಸ್ತೇ ವೈಶ್ಯಾಃ ಕೀರ್ತಿತಾ ಭುವಿ ॥

ಅಂದರೆ, 'ಕ್ರಯ ವಿಕ್ರಯದಲ್ಲಿ ಕುಶಲನಾಗಿರುವವನು, ಪಣ್ಯಜೀವಿ, (ಮಾರುಕಟ್ಟೆಯಿಂದ ಜೀವಿಸುವವರು) ಪಶುರಕ್ಷಣೆ ಹಾಗೂ ಕೃಷಿ ಮಾಡುವವರು ವಿಶ್ವದಲ್ಲಿ ವೈಶ್ಯರೆಂಬ ಹೆಸರಿನಿಂದ ಕೀರ್ತಿಯನ್ನು ಪಡೆಯುತ್ತಾರೆ.' ಈ ವರ್ಣನೆಯಿಂದ ಸ್ಪಷ್ಟವಾಗುವುದೇನೆಂದರೆ, ಕೃಷಿ ಮತ್ತು ವ್ಯಾಪಾರ ಎರಡೂ ಕೆಲಸವನ್ನು ಒಟ್ಟೊಟ್ಟಿಗೇ ಇಟ್ಟುಕೊಂಡು ಬಂದವರು. ತನ್ನ ಬಳಿ ವೈಶ್ಯನು ವ್ಯಾಪಾರವೊಂದನ್ನೇ ಇಟ್ಟುಕೊಳ್ಳಲು ಪ್ರಾರಂಭಿಸಿದಾಗ, ತನ್ನ ಇನ್ನೊಂದು ಕೆಲಸವನ್ನು ಬಿಟ್ಟುಬಿಟ್ಟಾಗಿನಿಂದ ಈ ವಿಷಮತೆ ಹುಟ್ಟಿಕೊಂಡಿದೆ ಹಾಗೂ ವಾಣಿಜ್ಯವನ್ನು ಅವಲಂಬಿಸಿರುವವರ ಸಂಖ್ಯೆ ಹೆಚ್ಚಾಗಿದೆ. ಕೇವಲ ವಿನಿಮಯದ ಮಾಧ್ಯಮದ ರೂಪದಲ್ಲಿಯೇ ಜೀವಿತ ಇರುವವನು ಹಣದ

ಪ್ರಭಾವವನ್ನು ಸೃಷ್ಟಿಸುತ್ತಾನೆ. ನಾವು ಈ ಸಂಖ್ಯೆಯನ್ನು ಕಡಿಮೆ ಮಾಡಬೇಕು. ವ್ಯಾಪಾರಿ, ಉದ್ಯಮಿ ಅಥವಾ ಕೃಷಿಕನಾಗಿ ಉತ್ಪಾದಕನಾಗುವುದು ಅವಶ್ಯಕ. ಸಹಕಾರಿ ಸಮಿತಿಗಳು ಅವರ ಜಾಗವನ್ನು ತುಂಬಬೇಕು.

**ಬೆಲೆ ನಿರ್ಧಾರ**

ಬೆಳೆಯ ಮಾರಾಟ ವ್ಯವಸ್ಥೆ ಸರಿಯಾಗಿ ಆಗದಿದ್ದರೆ, ಸರಕಾರವು ಯೋಗ್ಯವಾದ ಬೆಲೆಯನ್ನು ನಿರ್ಧರಿಸಿ ಅದನ್ನು ಖರೀದಿಸುವ ಸಿದ್ಧತೆ ಮಾಡಿಕೊಳ್ಳಬೇಕು. ಜೊತೆಗೆ ಅದು ಕಡಿಮೆ ಆದಾಯದ ವ್ಯಕ್ತಿಗಳಿಗೆ ಅಗ್ಗದ ದರದಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನೂ ಮಾಡಬೇಕು.

ರೈತನ ಎಲ್ಲ ಕೆಲಸ ಕಾರ್ಯಗಳು ಹಣದ ಮಾಧ್ಯಮದಿಂದ ನಡೆಯತೊಡಗಿದಾಗ, ಅವನಿಗೆ ತನ್ನ ಬೆಳೆಯನ್ನು ಮಾರುವುದು ಅವಶ್ಯಕವಾಗುತ್ತದೆ. ಹಣದ ಹೆಚ್ಚಳ ಯಾವಾಗಲೂ ಹಣದುಬ್ಬರಕ್ಕೆ ಕಾರಣವಾಗುತ್ತದೆ, ಅದರ ಲಾಭ ಕೃಷಿಕನಿಗೆ ದೊರೆಯದೆ ಮಧ್ಯವರ್ತಿಗಳಿಗೆ ದೊರೆಯುತ್ತದೆ. ಪ್ರಾಚೀನ ಶಾಸ್ತ್ರಗಳಲ್ಲಿ ಹಣದ ಪ್ರಭಾವವನ್ನು ತಡೆಯುವ ಸಲುವಾಗಿ ಹಣವನ್ನು ಸೀಮಿತವಾಗಿ ಇಡುವ ಹಾಗೂ ವಿನಿಮಯ ಪದ್ಧತಿಯನ್ನು ರಕ್ಷಣೆ ಮಾಡುವ ಅವಶ್ಯಕತೆಯನ್ನು ಹೇಳಲಾಗಿದೆ. ವಿನಿಮಯವು ಇತ್ತೀಚೆಗೆ ಒಂದು ಅವಿಕಸಿತ ಅರ್ಥವ್ಯವಸ್ಥೆಯ ಚಿಹ್ನೆಯೆಂದೇ ತಿಳಿಯಲಾಗುತ್ತಿದೆ. ನಾವು ಈ ಸಿದ್ಧಾಂತದ ಬಗೆಗೆ ವಿಚಾರ ಮಾಡಬೇಕು, ಹಾಗೂ ಕನಿಷ್ಠಪಕ್ಷ ಕೆಲವು ವಿಷಯಗಳಲ್ಲಿಯಾದರೂ ಇದರ ವ್ಯವಸ್ಥೆಯನ್ನು ಮಾಡಬೇಕು. ಉದಾಹರಣೆಗಾಗಿ ಬೀಜವನ್ನು ಒಂದಕ್ಕೆ ಒಂದೂಕಾಲು ಪದ್ಧತಿಯಲ್ಲಿ ಕೊಡಬೇಕು. ಬೇರೆ ಸಾಲವನ್ನೂ ಧಾನ್ಯದ ರೂಪದಲ್ಲಿ ವಸೂಲು ಮಾಡಬಹುದು. ವಿಶೇಷವಾಗಿ ವಿವಿಧೋದ್ದೇಶ ಸಹಕಾರಿ ಸಂಘದ ಮೂಲಕ ಕೊಡಲಾದ ಸಾಲ, ರೈತನ ಇತರ ಅವಶ್ಯಕ ವಸ್ತುಗಳನ್ನೂ ಕೂಡ ಬೆಳೆಯ ಬದಲಿಗೆ ಕೊಡಬೇಕು, ಕೃಷಿ ಕಾರ್ಮಿಕರ ಕೂಲಿಯನ್ನು ರೂಪಾಯಿಯ ರೂಪದಲ್ಲಿ ಕೊಡದೆ, ಧಾನ್ಯದ ರೂಪದಲ್ಲಿ ತೀರಿಸಬೇಕು. ಇಂಥ ಕೆಲವು ವ್ಯವಸ್ಥೆಗಳಿಂದ ರೈತರಿಗೆ ಹಿತವಾಗುವ ರೀತಿಯಲ್ಲಿ ಬೆಲೆಗಳನ್ನು ಬಹಳಷ್ಟು ನಿಯಂತ್ರಣ ಮಾಡಬಹುದು.



# ೬. ಉದ್ಯಮ-ಕೈಗಾರಿಕೆ

**ಔದ್ಯೋಗೀಕರಣದ ಅವಶ್ಯಕತೆ**

ಕೃಷಿಯ ನಂತರ ನಾವು ಉದ್ಯಮಗಳ ವಿಚಾರ ಮಾಡಬೇಕು. ಭಾರತದ ಔದ್ಯೋಗೀಕರಣವು ಎಲ್ಲ ದೃಷ್ಟಿಯಿಂದಲೂ ಅವಶ್ಯಕವಾದದ್ದು. ಅದಿಲ್ಲದೆ ಕೃಷಿಯನ್ನೇ ಅವಲಂಬಿಸಿದವರ ಸಂಖ್ಯೆಯನ್ನು ಕಡಿಮೆ ಮಾಡುವುದು ಸಾಧ್ಯವಾಗಲಾರದು. ಕೃಷಿಯ ಮೇಲೆ ಹೆಚ್ಚಿನ ಭಾರ ಇರುವುದರಿಂದಷ್ಟೇ ಅಲ್ಲ, ಮೇಲಾಗಿ ಅದರ ಯೋಗ್ಯ ವಿಕಾಸ ಮಾಡಲು ಹಾಗೂ ಎಲ್ಲ ವ್ಯಕ್ತಿಗಳಿಗೂ ಸಂಪೂರ್ಣ ಕೆಲಸ ಕೊಡಲು ಜನರನ್ನು ಉದ್ಯಮ-ವ್ಯಾಪಾರಗಳಲ್ಲಿ ತೊಡಗಿಸುವುದು ಅತ್ಯಂತ ಅವಶ್ಯಕ. ಈವರೆಗೆ ಭಾರತವು ಕಚ್ಚಾ ಮಾಲನ್ನು ತಯಾರಿಸುತ್ತ ಬಂದಿದೆ, ಮತ್ತು ಪಕ್ಕಾ ಮಾಲಿನ ಬಗ್ಗೆ ವಿದೇಶವನ್ನೇ ಅವಲಂಬಿಸಿದೆ. ಪರಿಣಾಮವಾಗಿ ಅದು ಸ್ವಾವಲಂಬಿಯಾಗಲು ಸಾಧ್ಯವಾಗಲೇ ಇಲ್ಲ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ, ವಿಶೇಷವಾಗಿ ಮುಂದಿನ ದಿನಗಳಲ್ಲಿ ಭಾರತವು ಭಾರೀ ಸಂಕಟವನ್ನು ಎದುರಿಸಬೇಕಾಯಿತು. ಪ್ರಾಚೀನ ಶಾಸ್ತ್ರಕಾರರು ವಾಣಿಜ್ಯ, ಕೈಗಾರಿಕೆ, ಹಾಗೂ ಉದ್ಯೋಗಕ್ಕೆ ಸಂಬಂಧಿಸಿದಂತೆ ಹೀಗೆ ಬರೆದಿದ್ದಾರೆ. ಅದು ಸ್ವಾವಲಂಬಿಯಾಗಬೇಕು. ಅಂದರೆ ಯಾವುದೇ ಅವಶ್ಯಕ ವಸ್ತುವಿಗಾಗಿ ಅದು ಅನ್ಯದೇಶಗಳ ಮೇಲೆ ಅವಲಂಬನೆ ಮಾಡಬಾರದು. ದೇಶದ ವ್ಯವಹಾರ ಮಾಡಬಹುದಾದ ಮಾಲನ್ನು ಹೊರಗೆ ಕಳಿಸಲು ಅಂತಾರಾಷ್ಟ್ರೀಯ ವ್ಯಾಪಾರದ ಉಪಯೋಗ ಆಗಬೇಕು. ಅಂಥ ಸ್ಥಿತಿಯಲ್ಲಿ ತನ್ನ ದೇಶದ ವಸ್ತುಗಳನ್ನು ಅತ್ಯುತ್ತಮವಾಗಿ ತಯಾರಿಸುವ ಪ್ರಯತ್ನ ನಡೆಯಬೇಕು, ಆಗ ಹೊರದೇಶಗಳಲ್ಲಿ ಅದು ಖರ್ಚಾಗುತ್ತದೆ. ತನ್ನಲ್ಲಿನ ಉದ್ಯಮವನ್ನು ಉಳಿಸಿಕೊಳ್ಳಲು, ಉದಾಹರಣೆಗೆ ಭಾರತದ ಬಟ್ಟೆ ಮಿಲ್‌ನ್ನು ನಡೆಸುವುದನ್ನು ಉಳಿಸಿಕೊಳ್ಳಲು ಈಜಿಪ್ಟಿನಿಂದ ಹತ್ತಿಯನ್ನು ತರಿಸಿದ ಹಾಗೆ ಆಗಬಾರದು. ಅಥವಾ ದೇಶದ ಜನರನ್ನು ಬಳಕೆಯಿಂದ ವಂಚಿತಗೊಳಿಸಿ ಇತ್ತೀಚೆಗೆ ಸಕ್ಕರೆ, ಜೋಳ, ಹಿಂಡಿ ಮುಂತಾದವುಗಳನ್ನು ಭಾರತದಿಂದ ನಿರ್ಯಾತ ಮಾಡುವುದು, ಅಂತಾರಾಷ್ಟ್ರೀಯ ವ್ಯಾಪಾರದ ಅವಶ್ಯಕ ಅಂಗವಾದರೆ, ಆಗ ದೇಶ ಎಂದೂ ಸ್ವಾವಲಂಬಿ ಆಗುವುದಿಲ್ಲ. ಹಾಗಾದಲ್ಲಿ ಅದರ ಅರ್ಥವ್ಯವಸ್ಥೆಯು ಸರಿಯಾಗಿ ನಡೆಯುವುದಿಲ್ಲ. ರಕ್ಷಣೆಯ ದೃಷ್ಟಿಯಿಂದಲೂ ಅನೇಕ ಬಗೆಯ ಶಸ್ತ್ರಾಸ್ತ್ರ ಹಾಗೂ

ಯುದ್ಧಸಾಮಗ್ರಿ ತಯಾರುಮಾಡಲು ನಾವು ಮೊದಲು ಉದ್ಯಮವನ್ನು ವಿಕಾಸ ಮಾಡಬೇಕು.

## ವಿಚಾರಯೋಗ್ಯವಾದ ಜ್ಞಾನ

ಔದ್ಯೋಗಿಕ ನೀತಿಯನ್ನು ಕುರಿತು ವಿಚಾರ ಮಾಡುವಾಗ ನಾವು ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರು ಹೇಳಿದ ಪ್ರಕಾರ ಈ ಏಳು ಅಂಶಗಳ ಬಗ್ಗೆ ವಿಚಾರ ಮಾಡಬೇಕು: (1) Men (2) Material (3) Money (4) Machinery (5) Management (6) Motive Power (7) Market ಅರ್ಥಾತ್, (೧) ಮನುಷ್ಯ (೨) ಸರಕು (೩) ಹಣ (೪) ಯಂತ್ರೋಪಕರಣ (೫) ವ್ಯವಸ್ಥಾಪನೆ (೬) ಇಚ್ಛಾಶಕ್ತಿ ಮತ್ತು (೭) ಮಾರುಕಟ್ಟೆ– ಈ ಏಳನ್ನೂ ಸರಿಯಾದ ರೀತಿಯಲ್ಲಿ ಹೊಂದಿಸಿಕೊಂಡ ಹೊರತು ನಾವು ಉದ್ದಿಮೆ–ಕೈಗಾರಿಕೆ ಶುರು ಮಾಡಿದರೆ ಅದು ನಡೆಯಲಾರದು. ಈ ಏಳು ಕೂಡ ಒಂದು ಇನ್ನೊಂದಕ್ಕೆ ಪೂರಕವಾದವುಗಳು. ಇವುಗಳಲ್ಲಿ ಒಂದನ್ನು ಬದಲಾಯಿಸಿದರೂ, ಆಗ ಮತ್ತೊಂದರಲ್ಲಿ ಪರಿವರ್ತನೆ ಅವಶ್ಯವಾಗುತ್ತದೆ. ಒಬ್ಬ ಮನುಷ್ಯ ಸಾಧಾರಣ ಮುದ್ರಣಯಂತ್ರದಲ್ಲಿ ಕೆಲಸ ಮಾಡಬಲ್ಲ. ಆದರೆ ಅವನು 'ರೋಟರಿ'ಯಲ್ಲಿ ಉಪಯೋಗಿಯಾಗುತ್ತಾನೆಂದು ಹೇಳಲಾಗದು. ಎತ್ತಿನಿಂದ ನಡೆಸುವ ಗಾಡಿಯನ್ನು ಪೆಟ್ರೋಲಿನಿಂದ ನಡೆಸಲಾಗುವುದಿಲ್ಲ. ಧೋತರಕ್ಕೆ ಮಾರುಕಟ್ಟೆಯಿದ್ದಾಗ ಫ್ರಾಕ್ ತಯಾರಿಸುವುದು ಬುದ್ಧಿವಂತಿಕೆಯಲ್ಲ. ಹತ್ತು ಸಾವಿರ ರೂಪಾಯಿಗಳು ಮಾತ್ರ ಇರುವವನು ಒಂದು ಲಕ್ಷದ ಮಶಿನ್ ಹಾಕುವ ಉದ್ಯಮ ಪ್ರಾರಂಭ ಮಾಡಲಾರ. ಹತ್ತು ಜನರ ಚಿಕ್ಕ ಕಾರಖಾನೆಯ ವ್ಯವಸ್ಥೆ ನೋಡಿಕೊಳ್ಳಬಲ್ಲವನು ಹತ್ತು ಸಾವಿರ ಕಾರ್ಮಿಕರ ಮಿಲ್‌ನ್ನು ವ್ಯವಸ್ಥೆ ಮಾಡಲಾರ. ಕಲ್ಲು ದೊರೆಯದೇ ಇರುವಲ್ಲಿ ಕಲ್ಲು ಅರೆಯುವ ಯಂತ್ರ ಹಾಕುವುದು ಶುದ್ಧ ಮೂರ್ಖತನ ಆದೀತು.

## ಸಾಮಾಜಿಕ ಉದ್ದೇಶ

ಮೇಲೆ ಹೇಳಿದ ಏಳು ಅಂಶಗಳನ್ನು ಹೊಂದಾಣಿಕೆ ಮಾಡುವ ಸಮಯದಲ್ಲಿ ಹಲವು ಬಾರಿ ಅವುಗಳಲ್ಲಿ ಒಂದು ಅಥವಾ ಎರಡನ್ನು ಆಧಾರವಾಗಿಟ್ಟುಕೊಂಡು ಉಳಿದವುಗಳನ್ನು ಅವುಗಳಿಗೆ ತಕ್ಕಂತೆ ಬದಲಾಯಿಸಬೇಕಾಗುತ್ತದೆ. ಹಲವು ಬಾರಿ ನಮ್ಮ ಅಂತಿಮ ಗುರಿ ಏನು ಎಂಬುದನ್ನು ವಿಚಾರ ಮಾಡಿದರೂ ಅವುಗಳಲ್ಲಿ ಒಂದಕ್ಕಿಂತ ಹೆಚ್ಚಿನದಕ್ಕೆ ಪ್ರಾಮುಖ್ಯವನ್ನು ಕೊಡಬೇಕಾಗುತ್ತದೆ. ಉದಾಹರಣೆಗಾಗಿ, ಯಾವುದಾದರೊಂದು ರೀತಿಯಿಂದ ನಾವು ಬಹುದೊಡ್ಡ ಪ್ರಮಾಣದಲ್ಲಿ ಏನಾದರೊಂದು ಮಾಲನ್ನು ತಯಾರು ಮಾಡಬೇಕಾಗಿದೆ ಎಂದಿಟ್ಟುಕೊಳ್ಳಿ. ಯುದ್ಧದ



ಸಮಯದಲ್ಲಿ ಅಧಿಕ ಉತ್ಪಾದನೆ ಮಾಡುವ ಒಂದು ಯಂತ್ರವನ್ನು ಹಾಕುತ್ತೇವೆ. ಪ್ರತಿಯೊಬ್ಬ ವ್ಯಕ್ತಿಗೂ ನಾವು ಕೆಲಸ ಕೊಡಲು ಗುರಿ ಇಟ್ಟುಕೊಂಡರೆ, ಶ್ರಮ ಉಳಿಸುವ ಯಂತ್ರಗಳ ಅವಶ್ಯಕತೆ ನಮಗೆ ಇಲ್ಲ.

ಒಬ್ಬ ವ್ಯಕ್ತಿಯು ಯಾವುದಾದರೊಂದು ಉದ್ಯಮದ ಸ್ವರೂಪದ ಬಗ್ಗೆ ವಿಚಾರ ಮಾಡುತ್ತಾನಾದರೆ, ಅವನು ಏನನ್ನು ಯೋಚಿಸುತ್ತಾನೆ? ಉತ್ಪಾದನೆಯಾದ ಸರಕು ಮಾರುಕಟ್ಟೆಯಲ್ಲಿ ಅಗ್ಗ ಹಾಗೂ ಉತ್ತಮಗುಣ ಮಟ್ಟದ್ದಾಗಿದ್ದು ಪ್ರತಿಸ್ಪರ್ಧೆಯಲ್ಲಿ ಗಟ್ಟಿಯಾಗಿ ನಿಲ್ಲುವಂತಿರಬೇಕು, ಹಾಗೆ ನಮ್ಮ ಜ್ಞಾನವನ್ನು ನಾವು ಬಳಸಿಕೊಳ್ಳಬೇಕು. ಅವನ ಈ ಪ್ರಯತ್ನದಲ್ಲಿ ಇತರ ವ್ಯಕ್ತಿಗಳು ಹಾಗೂ ಉದ್ಯಮಗಳ ಮೇಲೆ ಯಾವ ಬಗೆಯ ಪರಿಣಾಮ ಆಗುತ್ತದೆ, ಇದರ ಚಿಂತೆಯನ್ನು ಅವನು ಮಾಡುವುದಿಲ್ಲ. ಆದರೆ ಮೊದಲ ಬಾರಿಗೆ ಈ ದಿಸೆಯಲ್ಲಿ ಪ್ರಯತ್ನ ಮಾಡುವವರು, ಮೊದಲೇ ಈ ಕ್ಷೇತ್ರದಲ್ಲಿ ಪ್ರಭುತ್ವವನ್ನು ಸ್ಥಾಪಿಸಿ ಸ್ಥಾನ ಭದ್ರಪಡಿಸಿಕೊಂಡವರ ಜೊತೆಗೆ ಯಾವಾಗಲೂ ಕಠಿಣ ಸಂಘರ್ಷ ಮಾಡಬೇಕಾಗುತ್ತದೆ. ಅಂಥ ಹೋರಾಟದಲ್ಲಿ ಅವರ ಶಕ್ತಿ ಕಡಿಮೆಯಾದಾಗ ಅವರು ಸಮಾಜದಿಂದ ಸಹಾಯವನ್ನು ಯಾಚಿಸಬೇಕಾಗುತ್ತದೆ. ಬೇರೆ ಬೇರೆ ದೇಶಗಳಲ್ಲಿನ ಸಂರಕ್ಷಣ ನೀತಿಯ ಹುಟ್ಟು ಈ ಬಗೆಯಿಂದಲೇ ಆಗಿದೆ. ಇಲ್ಲಿ ಆಶ್ಚರ್ಯದ ವಿಷಯವೆಂದರೆ, ಸಂರಕ್ಷಣೆಯ ಸಹಾಯ ಪಡೆದು ಮುಂದುವರಿದ ವ್ಯಕ್ತಿಗಳು, ಅವರನ್ನು ಎದುರಿಸಲು ಬೇರೆಯವರಿಗೆ ರಕ್ಷಣೆಯನ್ನು ನೀಡಿದರೆ ವಿರೋಧಿಸುತ್ತಾರೆ. ಆದ್ದರಿಂದ ಸಮಾಜವು ತನ್ನ ಕೈಗಾರಿಕಾ ನೀತಿಯನ್ನು ನಿರ್ಧಾರ ಮಾಡುವಾಗ, ವ್ಯಾಪಕವಾದ ಸಾಮಾಜಿಕ ಉದ್ದೇಶ ಹಾಗೂ ಗುರಿಗಳ ಹಿತವನ್ನು ಹಿನ್ನೆಲೆಯಲ್ಲಿ ಇಟ್ಟುಕೊಂಡು ಮಾಡಬೇಕು. ನಮ್ಮ ಸಾಮಾಜಿಕ ಗುರಿ ರಾಷ್ಟ್ರದ ರಕ್ಷಣೆ–ಸಾಮರ್ಥ್ಯವನ್ನು ಹೆಚ್ಚಿಸುವುದು, ಬಳಕೆಯ ಹಾಗೂ ಉತ್ಪಾದಕ ವಸ್ತುಗಳ ವೃದ್ಧಿ, ಪ್ರತಿಯೊಬ್ಬರಿಗೆ ಕೆಲಸ, ಕನಿಷ್ಠತಮ ಜೀವನದ ಸೌಕರ್ಯ, ಅಂತರವನ್ನು ಕಡಿಮೆ ಮಾಡುವುದು, ಹಾಗೂ ವಿಕೇಂದ್ರೀಕರಣ – ಇವುಗಳನ್ನು ನಾವು ಈ ಮೊದಲೇ ನಿರ್ಧರಿಸಿದ್ದೇವೆ. ಮುಕ್ತ ವ್ಯಾಪಾರ ಹಾಗೂ ಮುಕ್ತ ಪ್ರತಿಸ್ಪರ್ಧೆಯ ಆಧಾರದ ಮೇಲೆ ದೇಶದ ಉದ್ಯಮ–ವ್ಯಾಪಾರಗಳನ್ನು ಬೆಳೆಸುವುದು ನಮಗೆ ಸಾಧ್ಯವಾಗಿಲ್ಲ. ರಾಜ್ಯದ ಸಂರಕ್ಷಣೆ ಹಾಗೂ ಸ್ವದೇಶಿ ಭಾವನೆಗಳ ಸಹಾಯದಿಂದ, ಜನಬಲದ ರಕ್ಷಣೆ ಪಡೆದುಕೊಂಡೇ ದೇಶದ ಕೆಲವು ಉದ್ಯಮ–ವ್ಯಾಪಾರಗಳು ಬೆಳೆದಿವೆ. ಇಂದು ನಾವು ಸರ್ವಾಂಗೀಣ ವಿಕಾಸದ ವಿಚಾರ ಮಾಡಿದರೆ ರಕ್ಷಣೆಯ ಅನಿವಾರ್ಯತೆಯನ್ನು ಒಪ್ಪಿಕೊಂಡೇ ಮುಂದುವರಿಯಬೇಕಾಗುತ್ತದೆ. ಈ ರಕ್ಷಣೆಯೆಂದರೆ ಯಾವ ಬಗೆಯದು? ವಿದೇಶೀ ಉದ್ಯಮಗಳ ಪ್ರತಿಸ್ಪರ್ಧೆಯಲ್ಲಿ ದೇಶೀ ಉದ್ಯಮಗಳಿಗೆ, ಹಾಗೂ ದೇಶದ ದೊಡ್ಡ ದೊಡ್ಡ ಉದ್ಯೋಗದ ಪ್ರತಿಸ್ಪರ್ಧೆಯ ಎದುರಿನಲ್ಲಿ ಚಿಕ್ಕ ಚಿಕ್ಕ ಉದ್ಯೋಗಗಳಿಗೆ ರಕ್ಷಣೆಯನ್ನು ಒದಗಿಸಿ ಹಿತ ಕಾಯಬೇಕಾಗುತ್ತದೆ.

## ಸದ್ಯ ಇರುವ ಉದ್ಯಮ–ಕೈಗಾರಿಕೆಗಳು

ಔದ್ಯೋಗಿಕ ನೀತಿಯ ಬಗೆಗೆ ವಿಚಾರ ಮಾಡುವಾಗ ನಾವು ಒಂದು ವಿಷಯವನ್ನು ಗಮನದಲ್ಲಿಡಬೇಕು. ನಾವು ಇಂದು ಬರಿದಾದ ಸ್ಲೇಟಿನ ಮೇಲೆ ಬರೆಯುತ್ತಿಲ್ಲ. ದೇಶದಲ್ಲಿ ಮೊದಲಿನಿಂದಲೂ ಕೆಲವು ಉದ್ಯಮ–ವ್ಯಾಪಾರಗಳು ನಡೆದುಕೊಂಡು ಬಂದಿವೆ. ಅವುಗಳಲ್ಲಿ ಒಂದು ಕಡೆ ಸಂಪೂರ್ಣ ಸಂಘಟಿತವಾದ ಹಾಗೂ ಈವರೆಗಿನ ಪ್ರಯೋಗ ತಾಂತ್ರಿಕತೆಗಳನ್ನು ಬಳಕೆ ಮಾಡಿಕೊಂಡ ಉದ್ಯಮಗಳು ಇದ್ದರೆ, ಇನ್ನೊಂದು ಕಡೆ ಹಿಂದಿನಿಂದ ನಡೆದುಕೊಂಡು ಬಂದ ಅಸಂಘಟಿತ ಹಾಗೂ ಅರೆವಿಕಸಿತ ಉದ್ಯಮಗಳಿವೆ. ಈ ಎಲ್ಲವನ್ನೂ ವಿಚಾರ ಮಾಡಿಯೇ ನಾವು ನಮ್ಮ ನೀತಿಯನ್ನು ನಿರ್ಧರಿಸಬೇಕು. ವಿಶೇಷವಾಗಿ ನಾವು ಯಾವುದಾದರೂ ತಾಂತ್ರಿಕತೆಯನ್ನು ಅನುಸರಿಸಿದರೆ, ಅವುಗಳ ಪರಿಣಾಮವು ಹಳೆಯ ಘಟಕಗಳ ಮೇಲೆಯೂ ಆಗುತ್ತದೆ. ಒಂದು ಕಡೆ ಹೊಸ ಯಂತ್ರಗಳಿಗಾಗಿ ಎಲ್ಲ ಪ್ರಕಾರದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆಯಾದರೆ, ಹಳೆಯ ಕೈಗಾರಿಕೆಯಲ್ಲಿ ತೊಡಗಿಸಿದ ಬಂಡವಾಳವು ವ್ಯರ್ಥವಾಗಿಬಿಡುತ್ತದೆ. ಹೊಸ ಕಾರ್ಖಾನೆಗಳಿಗೆ ತರಬೇತಾದ ವ್ಯಕ್ತಿಗಳ ಕೊರತೆಯುಂಟಾಗುತ್ತದೆ. ಮತ್ತೊಂದು ಕಡೆ ಹಳೆಯ ಕುಶಲ ಕೆಲಸಗಾರರಿಗೆ ಉದ್ಯೋಗವೇ ದೊರೆಯುವುದಿಲ್ಲ. ಒಂದು ಕಡೆ ಕಾರಖಾನೆಗಳನ್ನು ನಡೆಸಲು ಹೊರಗಿನ ಕಚ್ಚಾ ಮಾಲು ಹಾಗೂ ಉತ್ಪಾದನೆ ಮಾಡುವ ವಸ್ತುಗಳನ್ನು ತರಿಸಬೇಕಾಗುತ್ತದೆ, ಮತ್ತೊಂದು ಕಡೆ ದೇಶದ ಕಚ್ಚಾ ಸಾಮಗ್ರಿಗಳಿಗೆ ಮಾರುಕಟ್ಟೆಯೇ ಇರುವುದಿಲ್ಲ. ಇವೆಲ್ಲವೂ ವಿಚಾರ ಮಾಡದೆ ಕೈಗೊಂಡ ಉದ್ಯಮ ನೀತಿಯ ಫಲವಾಗಿವೆ. ಪಶ್ಚಿಮದ ತಂತ್ರಜ್ಞಾನದ ಪ್ರಕ್ರಿಯೆಯನ್ನು ಕಣ್ಣುಮುಚ್ಚಿಕೊಂಡು ನಾವು ಅನುಸರಿಸಿದ್ದೇವೆ. ನಮ್ಮ ಉದ್ಯಮಗಳ ಸ್ವಾಭಾವಿಕ ವಿಕಾಸ ಆಗುತ್ತಿಲ್ಲ. ಅವು ನಮ್ಮ ಅರ್ಥವ್ಯವಸ್ಥೆಯ ಅಭಿನ್ನವಾದ ಹಾಗೂ ಅನ್ಯೋನ್ಯಾಶ್ರಿತವಾದ ಅಂಗಗಳಾಗಿರದೇ ಮೇಲಿನಿಂದ ಹೇರಿದವುಗಳಾಗಿವೆ. ಅವುಗಳ ವಿಕಾಸವಾಗಿದ್ದು ವಿದೇಶೀ ಉದ್ಯಮಿಗಳ ಮೂಲಕ. ವಿದೇಶೀ ಮಾಲುಗಳನ್ನು ದೇಶದಲ್ಲಿ ತಯಾರಿಸುವ ಉದ್ದೇಶದಿಂದ ಶಾಖೆಗಳನ್ನು ತೆರೆಯಲು, ಅಥವಾ ದೇಶದ ಕಚ್ಚಾವಸ್ತುಗಳನ್ನು ವಿದೇಶೀ ಹಿತಕ್ಕಾಗಿ ಮತ್ತು ವಿದೇಶಿ ಪದ್ಧತಿಗಳಿಂದ ತಯಾರಿಸಲು, ಅಥವಾ ವಿದೇಶಿಗಳ ಅನುಕರಣಶೀಲ ಸಹಕಾರಿಗಳು ಅಥವಾ ಏಜಂಟರಾದ ಕೆಲವು ದೇಶೀ ವ್ಯಾಪಾರಿಗಳ ಮೂಲಕ ಬಂದವರು. ಇದೇ ಕಾರಣದಿಂದ ಭಾರತದ ಉದ್ಯಮಿಗಳಲ್ಲಿ ಎಲ್ಲ ವ್ಯಾಪಾರಿಗಳು ದಲಾಲಿ ಅಥವಾ ಸಗಟು ಕ್ಷೇತ್ರದಿಂದ ಬಂದವರು. ಉದ್ಯಮ ಹಾಗೂ ಕೈಗಾರಿಕೆಗಳಲ್ಲಿ ತೊಡಗಿಕೊಂಡ ಕುಶಲ ಕೆಲಸಗಾರರ ವಿಕಾಸವಾಗಲೇ ಇಲ್ಲ.



## ಹೊಸ ಉದ್ಯಮ ಕೈಗಾರಿಕೆಗಳ ಉನ್ನತೀಕರಣದ ಅವಶ್ಯಕತೆ

ದೇಶದಲ್ಲಿ ಲಭ್ಯವಿರುವ ಜ್ಞಾನಕ್ಕೆ ಅನುಗುಣವಾಗಿ ಉತ್ಪಾದನಾ ಪ್ರಕ್ರಿಯೆಯ ನಿರ್ಧಾರ ಹಾಗೂ ವಿಕಾಸ ಮಾಡುವುದು ನಮ್ಮ ಬಹುದೊಡ್ಡ ಸಮಸ್ಯೆಯಾಗಿದೆ. ಶ್ರೀ ಎಂ.ಎಸ್. ಠಕ್ಕರ್ ಅವರು ಮದ್ರಾಸಿನಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ಸಭಾಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಹೇಳಿದ್ದರು. "ಈವರೆಗೆ ನಾವು ಹೊರ ದೇಶಗಳಿಂದ ಸ್ಫೂರ್ತಿ ಪಡೆದಿದ್ದೇವೆ! ಯಂತ್ರಗಳು, ಕಾರಖಾನೆಗಳು, ತಜ್ಞರು, ಹಾಗೂ ಕುಶಲ ಕೆಲಸಗಾರರನ್ನು ನಾವು ಆಯಾತ ಮಾಡಿಕೊಂಡಿದ್ದೇವೆ. ಬಹುಶಃ ಅದು ಆಗಿನ ಪರಿಸ್ಥಿತಿಯಲ್ಲಿ ಅವಶ್ಯಕವಾಗಿತ್ತು. ಪರಿಣಾಮ ಏನಾಗಿದೆಯೆಂದರೆ, ಭಾರತದಲ್ಲಿ ಇಂದು ಸ್ಥಾಪಿತವಾಗಿರುವ ದೊಡ್ಡ ಯಾಂತ್ರಿಕ ಉದ್ಯಮಗಳು ಅನ್ಯ ದೇಶಗಳ ನಕಲು ಮಾತ್ರ ಆಗಿವೆ. ದೇಶೀಯ ಆವಿಷ್ಕಾರಗಳ ಮೇಲೆ ವಿಕಾಸಗೊಳಿಸಿದ ಉದ್ಯಮಗಳು ಎಲ್ಲೋ ಕೆಲವು ಮಾತ್ರ ದೊರೆಯುತ್ತವೆ. ನಮಗೆ ಪಶ್ಚಿಮದಿಂದ ಬಹಳ ಉದಾರವಾಗಿ ನೆರವು ಸಿಗುತ್ತದೆ. ನಾವು ಜ್ಞಾನ, ವಿಜ್ಞಾನ, ಸೌಹಾರ್ದಗಳನ್ನು ಎಲ್ಲಿಂದ ದೊರೆತರೂ ತೆಗೆದುಕೊಳ್ಳುತ್ತೇವೆ. ಆದರೆ ಬೇರೆ ಬೇರೆ ಹೂವುಗಳಿಂದ ಮಧುವನ್ನು ಸಂಗ್ರಹಿಸಿ ಜೇನಾಗಿ ಪರಿವರ್ತಿಸುವ ಜೇನ್ನೊಣದ ಹಾಗೆ, ನಾವು ಪಡೆದ ಸಂಪೂರ್ಣ ಸಹಾಯವನ್ನು ನಮ್ಮ ಅವಶ್ಯಕತೆ ಹಾಗೂ ಗುರಿಗಳಿಗೆ ಅನುಗುಣವಾಗಿ ಎರಕ ಹೊಯ್ದು ದೇಶದಲ್ಲಿ ಔದ್ಯೋಗೀಕರಣದ ಎಂಥ ಅಚ್ಚನ್ನು ತಯಾರಿಸಬೇಕಾಗಿದೆಯೆಂದರೆ, ಅದನ್ನು ನಾವು ನಮ್ಮದು ಎಂದು ಹೇಳಿಕೊಳ್ಳುವಂತಾಗಬೇಕು. ಇದು ಭಾರತದ ವಿಜ್ಞಾನಿಗಳು ಹಾಗೂ ತಂತ್ರಜ್ಞರ ಮೇಲಿನ ಜವಾಬ್ದಾರಿಯಾಗಿದೆ." ಇದು ನಾವು ಸ್ವೀಕಾರ ಮಾಡಲೇಬೇಕಾದ ಸವಾಲಾಗಿದೆ.

ಭಾರತದಲ್ಲಿ ದೊರೆಯುವ ಸಾಧನಗಳ ಬಗ್ಗೆ ವಿಚಾರ ಮಾಡಿದಾಗ, ನಮ್ಮ ಉತ್ಪಾದನೆಯ ಪ್ರಕ್ರಿಯೆ ಶ್ರಮಪ್ರಧಾನವಾಗಬೇಕು ಎಂಬ ನಿಷ್ಕರ್ಷೆಗೆ ನಾವು ನಿಶ್ಚಿತವಾಗಿಯೂ ತಲುಪುತ್ತೇವೆ. ಮೊದಲನೆಯದಾಗಿ ನಮ್ಮ ಬಳಿ ಬಂಡವಾಳದ ಕೊರತೆಯಿದೆ, ಮತ್ತು ನಾವು ಉಳಿಸಲು ಸಾಧ್ಯವಾದುದನ್ನು, ನಾವು ಶ್ರಮ ಉಳಿಸುವ ಯೋಜನೆಗಳ ಆಧಾರದ ಮೇಲೆ ಶಾಶ್ವತ ಬಂಡವಾಳದ ರೂಪದಲ್ಲಿ ಪರಿವರ್ತಿತಗೊಳಿಸಿದರೆ, ಅದು ವಿದೇಶಗಳಿಗೆ ಹೋಗಿಬಿಡುತ್ತದೆ, ಹಾಗೂ ಅದರ ವಾಸ್ತವಿಕ ಲಾಭವೂ ನಮಗೆ ಕಡಿಮೆ ಆಗುತ್ತದೆ. ಇದರ ಹೊರತಾಗಿ ನಮ್ಮ ಹಳೆಯ ಉಪಕರಣಗಳು ಮತ್ತು ಯಂತ್ರಗಳು ವ್ಯರ್ಥವಾಗುತ್ತವೆ, ಅದರಿಂದ ಬಂಡವಾಳ ನಾಶ (Decapitalization) ಹಾಗೂ ನಿರುದ್ಯೋಗ (Disemployment) ಗಳು ವೇಗವಾಗಿ ಹೆಚ್ಚುತ್ತ ಹೋಗುತ್ತವೆ. ಹೀಗೆ ಹೆಚ್ಚಿದ ನಿರುದ್ಯೋಗದ ಕಾರಣದಿಂದ, ದೇಶದಲ್ಲಿ ಹೆಚ್ಚಿನ ಜನರ ಜೀವನಮಟ್ಟ

ಉನ್ನತವಾಗುವುದರ ಬದಲು ಕುಸಿಯುತ್ತದೆ. ಪಶ್ಚಿಮದ ರೀತಿಯ ಹಾಗೂ ತುಂಬ ಸಂಕೀರ್ಣವಾದ (Complex) ಉತ್ಪಾದನಾ ಪದ್ಧತಿಯಿಂದ ಅಲ್ಪಸ್ವಲ್ಪ ಜನರಿಗೆ ಕೆಲಸ ಅವಶ್ಯವಾಗಿ ದೊರೆಯುತ್ತದೆ. ಆದರೆ ದೇಶದಲ್ಲಿ ಅರ್ಥವ್ಯವಸ್ಥೆಯನ್ನು ಬದಲಿಸಿ ಸಮಾಜದಲ್ಲಿ ಆಳವಾದ ಮತ್ತು ಕ್ರಾಂತಿಕಾರಿ ಪರಿವರ್ತನೆಯನ್ನು ತರಬಲ್ಲ ಚಲನಶೀಲ ಪ್ರಕ್ರಿಯೆ ಉತ್ಪನ್ನವಾಗುವುದೇ ಇಲ್ಲ. ಕೃಷಿಯೊಂದಿಗೆ ಚೆನ್ನಾಗಿ ಹೊಂದಿಕೊಳ್ಳಬಲ್ಲ, ಹಾಗೂ ಕೃಷಿಯಿಂದ ಭಾರವನ್ನು ಕಡಿಮೆ ಮಾಡಬಲ್ಲಂಥ ಉದ್ಯಮ ವ್ಯವಸ್ಥೆಯನ್ನು ನಾವು ಖಾಯಂಗೊಳಿಸಬೇಕಾದರೆ, ಅದಕ್ಕಾಗಿ ನಾವು ದೊಡ್ಡ ಉದ್ಯಮಗಳ ಜಾಗದಲ್ಲಿ ಚಿಕ್ಕ ಉದ್ಯಮಗಳಿಗೆ ಪ್ರಾಮುಖ್ಯವನ್ನು ನೀಡಬೇಕು. ಕಡಿಮೆ ಜನ ಹಾಗೂ ಸರಳ ಉಪಕರಣಗಳೊಂದಿನ ಚಿಕ್ಕ ಚಿಕ್ಕ ಘಟಕಗಳೇ ಇಂದಿನ ನಮ್ಮ ಪರಿಸ್ಥಿತಿಯಲ್ಲಿ ನಮಗೆ ಸರ್ವೋತ್ತಮವಾಗಿವೆ. ದೇಶದ ಹಾಗೂ ಸಮಾಜದ ಸಂಪೂರ್ಣ ಪರಿಸ್ಥಿತಿಯು ಆರ್ಥಿಕ ಕ್ಷೇತ್ರದಲ್ಲಿ ಇದೇ ರೂಪದಲ್ಲಿ ಅಭಿವ್ಯಕ್ತವಾಗಬಲ್ಲುದು. ಅರ್ಥಾತ್ ನಮ್ಮಲ್ಲಿ ಗುಡಿಕೈಗಾರಿಕೆಗಳು, ಚಿಕ್ಕ ಚಿಕ್ಕ ಕೈಗಾರಿಕೆಗಳು ನಡೆಯುತ್ತಿವೆ, ಹಾಗೂ ಕುಶಲ ಕೆಲಸಗಾರರು ಅವುಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರನ್ನು ಆಧಾರವಾಗಿಟ್ಟುಕೊಂಡು ಅವುಗಳ ವಿಕಾಸಕ್ಕಾಗಿ ವ್ಯವಸ್ಥೆ ಮಾಡಬೇಕು. ಚಿಕ್ಕ ಉದ್ಯೋಗಗಳಿಗೆ ಸಹಾಯ ನೀಡುವ ಹೆಸರಿನಲ್ಲಿ ಕೆಲವು ಗ್ರಾಮೋದ್ಯೋಗಗಳಿಗೆ (ಕಾಂಗ್ರೆಸ್ ತನ್ನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅವುಗಳನ್ನು ಸೇರಿಸಿತ್ತು) ಸಹಾಯವನ್ನು ನೀಡಲಾಗುತ್ತಿರುವುದು ಸಾಮಾನ್ಯವಾಗಿ ಕಾಣುತ್ತದೆ. ಅವು ಅನುದಾನವನ್ನವಲಂಬಿಸಿಕೊಂಡು ಹೇಗೋ ಉಸಿರಾಡುತ್ತಿವೆ. ಅವುಗಳನ್ನು ಔದ್ಯೋಗಿಕ ಕಾರ್ಯಕ್ರಮದ ಆಧಾರ ಮಾಡಿಕೊಂಡು ಅವುಗಳನ್ನು ವಿಕಾಸಗೊಳಿಸುವ ಅವಶ್ಯಕತೆಯಿದೆ. ಅವುಗಳಲ್ಲಿ ಸ್ವಯಂ ಶಕ್ತಿಯನ್ನು ಹುಟ್ಟಿಸುವ ಕೆಲಸಮಾಡಬೇಕು. ಹಲವು ಬಾರಿ ಅವರಿಗೆ ಏನೂ ಸಂಬಂಧವೇ ಇರದಿದ್ದಂತಹ ಜನರಿಗೂ ಗ್ರಾಮೋದ್ಯೋಗಗಳಲ್ಲಿ ತರಬೇತುಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದು ಹಣದ ಅಪವ್ಯಯವಷ್ಟೇ ಆಗಿದೆ.

ಭಾರೀ ಉದ್ದಿಮೆಗಳ ವಿರೋಧವನ್ನು ನಾವು ಮಾಡಿದರೂ, ಯಂತ್ರವನ್ನು ವಿರೋಧ ಮಾಡುವುದಿಲ್ಲ. ನಿಜ, ಅದರ ಮಿತಿಗಳು ನಮ್ಮ ಅನುಭವಕ್ಕೆ ಬರುತ್ತವೆ. ಇಂದು ಸರಕಾರದ ಉದ್ಯೋಗ ನೀತಿಯಲ್ಲಿ ಬೃಹತ್‌ಪ್ರಮಾಣದ ದೊಡ್ಡ ಉದ್ದಿಮೆ ಹಾಗೂ ಚರಖಾದಂತಹ ಚಿಕ್ಕ ಗ್ರಾಮೋದ್ಯೋಗಗಳು ಬರುತ್ತವೆ. ಈ ವರೆಗೆ ಉಪೇಕ್ಷಿತವಾದ ಆ ಚಿಕ್ಕ ಚಿಕ್ಕ ಕೈಗಾರಿಕೆಗಳು ಇವತ್ತಿನ ಜೀವನದ ಹಲವು ಅವಶ್ಯಕತೆಗಳನ್ನು ಆಧುನಿಕ ಉತ್ಪಾದನ ಪದ್ಧತಿಯಿಂದ ಪೂರೈಸುತ್ತವೆ ಮತ್ತು ಪೂರೈಸಬಹುದು.

* * * *



# ೭. ಮನುಷ್ಯ ಮತ್ತು ಯಂತ್ರ

## ನಿರುದ್ಯೋಗ

ಎಲ್ಲ ಸಮಯದಲ್ಲಿಯೂ ಆರೋಗ್ಯವಂತನಾದ ವ್ಯಕ್ತಿಗೆ ಲಾಭಕಾರಿಯಾದ ಕೆಲಸವನ್ನು ಕೊಡಬೇಕಾದದ್ದು ಔದ್ಯೋಗಿಕ ನೀತಿಯ ಉದ್ದೇಶ. ಈ ದೃಷ್ಟಿಯಿಂದ ನಮಗೆ ಅವುಗಳ ಸಂಖ್ಯೆ, ಯೋಗ್ಯತೆ, ಉತ್ಪಾದಕತೆ, ಕೆಲಸ ಮತ್ತು ನಿರುದ್ಯೋಗದ ಪ್ರಕೃತಿ, ಮತ್ತು ಪರಿವರ್ತನಶೀಲತೆ ಬಗೆಗೆ ವಿಚಾರ ಮಾಡಬೇಕು. ದಿನನಿತ್ಯದ ಕೆಲಸ ಹಾಗೂ ನಿರುದ್ಯೋಗದ ಬಗೆಗಿನ ಅಂಕೆ–ಸಂಖ್ಯೆಗಳು ಸರಿಯಾಗಿ ದೊರಕುತ್ತಿಲ್ಲ. ಇತ್ತೀಚೆಗಷ್ಟೇ ಭಾರತ ಸರಕಾರವು ಈ ಬಗ್ಗೆ ಸಮಿತಿಯೊಂದನ್ನು ರಚಿಸಿದೆ. ಸ್ಥೂಲವಾಗಿ ಹೇಳುವುದಾದರೆ, ಹದಿನೈದರಿಂದ ಐವತ್ತೈದು ವಯಸ್ಸಿನ ವ್ಯಕ್ತಿಗಳಿಗೆ ಸಂಪೂರ್ಣ ಕೆಲಸ ದೊರೆಯಬೇಕು ಎಂದು ನಾವು ಭಾವಿಸಿದರೆ, ಅಂಥವರ ಸಂಖ್ಯೆಯು ೧೯೫೧ ರ ಜನಗಣತಿಯ ಪ್ರಕಾರ ಶೇಕಾಡ ೫೩.೪ ಅಂದರೆ ೧೯ ಕೋಟಿಯಷ್ಟಿದೆ. ಸ್ವಾವಲಂಬಿಗಳಾದ ಹಾಗೂ ಗಳಿಸುವ ಆಶ್ರಿತರ ಸಂಖ್ಯೆ ಕ್ರಮವಾಗಿ ೧೦.೪ ಕೋಟಿ, ಹಾಗೂ ೩.೭೯ ಕೋಟಿ ಇದ್ದಿತ್ತು. ಆಶ್ರಿತರಾಗಿದ್ದರೂ ಬೇರೆ ರೀತಿಯಲ್ಲಿ ಕುಟುಂಬಕ್ಕೆ ಸಹಾಯಕರಾಗಿರುವ ಮತ್ತು ಜೀವನ ನಿರ್ವಹಣೆಗೆ ನೌಕರಿ ಮುಂತಾದವುಗಳ ಚಿಂತೆ ಮಾಡದ ಸುಮಾರು ಒಂದು ಕೋಟಿಯಷ್ಟು ಮಧ್ಯಮ ವರ್ಗದ ಮಹಿಳೆಯರನ್ನೂ ಸೇರಿಸಿದರೆ, ಕೆಲಸ ದೊರೆಯದ ಮಹಿಳೆಯರ ಸಂಖ್ಯೆ ಸುಮಾರು ೩.೬೭ ಕೋಟಿ.* ಅಂದರೆ ಅವಿಭಕ್ತ ಕುಟುಂಬ ಪದ್ಧತಿಯ ಕಾರಣದಿಂದ ಇವರಲ್ಲಿ ಹೆಚ್ಚಿನವರು ಆಶ್ರಿತರಾಗಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ, ಹಾಗೂ ಬಹುಶಃ ಕೆಲಸವನ್ನು ಬಯಸುವ ನಿರುದ್ಯೋಗಿಗಳ ಸಂಖ್ಯೆಯಲ್ಲಿ ಇವರು ಬಂದಿರಲಿಕ್ಕಿಲ್ಲ. ಈ ಪದ್ಧತಿಯು ನಾಶವಾಗುತ್ತ ಹೋದ ಹಾಗೆ, ಅದರ ಕಾರಣದಿಂದ ಪ್ರಾಪ್ತವಾದ ಸಾಮಾಜಿಕ ರಕ್ಷಣೆಯಿಂದ ವ್ಯಕ್ತಿಯು ವಂಚಿತನಾಗುತ್ತ ಹೋಗುತ್ತಿದ್ದಾನೆ, ಆಗ ಮರೆಯಲ್ಲಿರುವ ಈ ನಿರುದ್ಯೋಗವು ಎದುರಿಗೆ ಬರುತ್ತದೆ.

---

* ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಅಂದಾಜನ್ನು ಹಳ್ಳಿಯಲ್ಲಿ ೨೮ ಲಕ್ಷ ಹಾಗೂ ನಗರಗಳಲ್ಲಿ ೨೫ ಲಕ್ಷ ಈ ರೀತಿಯಲ್ಲಿ ಒಟ್ಟು ೫೩ ಲಕ್ಷ ಎಂದು ಲೆಕ್ಕ ಹಾಕಲಾಗಿದೆ.

### ಪೂರ್ಣ ಉದ್ಯೋಗ

ನಿರುದ್ಯೋಗ ನಿವಾರಣೆಗಾಗಿ ಕೊರತೆಯ ಪ್ರಶ್ನೆಯ ಬದಲು ಸಂಪೂರ್ಣ ದಿನಗೂಲಿಯ ಕಾರ್ಯಕ್ರಮವನ್ನು ನಾವು ಕೈಗೆತ್ತಿಕೊಂಡರೆ ನಮ್ಮ ಬಹುದೊಡ್ಡ ಸಂಪನ್ಮೂಲವಾಗಿರುವ ಜನಶಕ್ತಿಯ ಗರಿಷ್ಠ ಉಪಯೋಗವನ್ನು ನಾವು ಪಡೆದುಕೊಳ್ಳಬಹುದು. ಒಂದು ಅಂದಾಜಿನ ಪ್ರಕಾರ ನಮ್ಮ ಸುಮಾರು ಶೇಕಾಡ ೬೪ ಜನಶಕ್ತಿಯ ಉಪಯೋಗವನ್ನು ನಾವು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಕೃಷಿ ಕಾರ್ಮಿಕರ ಪರಿಶೀಲನಾ ಸಮಿತಿಯ ಪ್ರಕಾರ, ಹಳ್ಳಿಯ ಕೂಲಿಕಾರನು ಒಂದು ವರ್ಷದಲ್ಲಿ ೨೧೮ ದಿನ ಕೆಲಸವನ್ನು ಪಡೆಯುತ್ತಾನೆ. ಉಳಿದ ೪೯ ದಿನ ಅವನು ತನ್ನದೇ ಕೆಲಸಗಳಲ್ಲಿ ತೊಡಗಿಕೊಂಡು ೯೮ ದಿನ ನಿರುದ್ಯೋಗಿಯಾಗಿರುತ್ತಾನೆ. ಒಕ್ಕಲಿಗನೂ ಕೂಡ ಹೀಗೆಯೇ ವರ್ಷದಲ್ಲಿ ಮೂರು ತಿಂಗಳು ಸುಮಾರು ಕೆಲಸವಿಲ್ಲದೆ ಕಳೆಯುತ್ತಾನೆ. ಕೆಲಸಗಳಲ್ಲಿ ತೊಡಗಿರುವ ದಿನಗಳಂದೂ ಸಂಪೂರ್ಣವಾಗಿ ಕಾರ್ಯನಿರತ(Fully Employed) ನಾಗಿರುತ್ತಾನೆಂದು ಹೇಳಲಾಗದು. ಸಕ್ಕರೆ ಮುಂತಾದ ಉದ್ಯಮಗಳಲ್ಲಿ ಕೆಲಸವು ಆಯಾ ಶ್ರಾಯಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಅವನಿಗೆ ಎಲ್ಲ ದಿನಗಳೂ ಕೆಲಸ ದೊರೆಯುವ ಹಾಗೆ ನಾವು ಮಾಡಬೇಕಾಗಿದೆ.

ಸಂಘಟಿತ ಉದ್ಯಮಗಳಲ್ಲಿ ಕೈಗಾರಿಕಾ ವಿವಾದಗಳ ಕಾರಣ ನಮ್ಮ ಬಹಳಷ್ಟು ಶ್ರಮ ವ್ಯರ್ಥವಾಗುತ್ತಿದೆ. ಈ ಬಗೆಯ ತಕರಾರುಗಳು ಹಾಗೂ ಅದರಿಂದ ಉಂಟಾಗುವ ಮಾನವಶಕ್ತಿಯ ಹಾನಿಯ ಕೆಲವು ಅಂಕಿ–ಸಂಖ್ಯೆಗಳು:

| ವರ್ಷ | ಕೆಲಸನಿಲ್ಲಿಸಿದ್ದು | ಕೂಲಿಕಾರರಿಗೆ ಸಂಬಂಧಿಸಿದ್ದು | ಮಾನವದಿನ ನಷ್ಟ |
|---|---|---|---|
| ೧೯೫೧ | ೧೦೭೯ | ೬೯೧೩೨೯ | ೩೮೧೮೯೨೮ |
| ೧೯೫೨ | ೯೬೩ | ೭೦೯೨೪೨ | ೩೩೩೬೯೬೧ |
| ೧೯೫೩ | ೭೭೨ | ೪೬೬೬೯೭ | ೩೩೮೨೬೦೮ |
| ೧೯೫೪ | ೮೪೦ | ೪೭೭೧೩೮ | ೩೩೭೨೬೩೦ |
| ೧೯೫೫ | ೧೧೬೬ | ೫೨೭೭೬೭ | ೫೬೯೭೮೪೮ |
| ೧೯೫೬ | ೧೨೫೮ | ೭೨೨೩೩೪ | ೭೦೯೫೬೦ |

೧೯೫೭ರಲ್ಲಿ ಈ ವಿವಾದಗಳಿಂದಾಗಿ ೫೪ ಲಕ್ಷ ೬೬ ಸಾವಿರ ಮಾನವದಿನಗಳ ಕೆಲಸ ನಷ್ಟವಾಗಿದೆ. ಹತ್ತಕ್ಕಿಂತ ಹೆಚ್ಚು ಜನರು ಭಾಗವಹಿಸಿ ಕೆಲಸ ನಷ್ಟವಾದ ವಿವಾದಕ್ಕೆ ಮಾತ್ರ ಇದು ಸಂಬಂಧಿಸಿದ್ದು. ಇದು ನಮ್ಮ ಶ್ರಮಶಕ್ತಿಯ ದುರುಪಯೋಗ, ಇದೇ ರೀತಿಯಲ್ಲಿ ಗೈರುಹಾಜರಾಗುವವರ ಸರಾಸರಿ ಪ್ರಮಾಣ ೨೪ ಪ್ರತಿಶತದವರೆಗೆ



ಹೋಗುತ್ತದೆ. ನಿಶ್ಚಿತವಾಗಿಯೂ ನಾವು ಪ್ರತಿ ಘಟಕದ ಬಂಡವಾಳದ ಗರಿಷ್ಠ ಉಪಯೋಗವನ್ನು ಮಾಡಲಾಗುತ್ತಿಲ್ಲ.

### ಗ್ರಾಮೀಣ ನಿರುದ್ಯೋಗದ ವಿಶೇಷತೆ

ಭಾರತದ ಉದ್ಯೋಗದ ಸ್ಥಿತಿಯನ್ನು ಮತ್ತಷ್ಟು ವಿಶ್ಲೇಷಣೆ ಮಾಡಿದಾಗ ಹಳ್ಳಿಗಳಲ್ಲಿ ಕೆಲವು ದಿನ ನಿರುದ್ಯೋಗ ಇರುವುದಿಲ್ಲವಷ್ಟೇ ಅಲ್ಲ, ಕೆಲಸ ಮಾಡುವ ಜನರು ಕಡಿಮೆ ಬೀಳುತ್ತಾರೆ. ಆದರೆ ಎಷ್ಟೋ ದಿನ ಕೆಲಸದ ಕೊರತೆ ಇರುತ್ತದೆ. ನಾವು ಕೆಲವು ಜನರನ್ನು ಖಾಯಂ ಆಗಿ ಹಳ್ಳಿಯಿಂದ ಹೊರಗೆ ಕಳಿಸಿದರೆ, ಕೊಯ್ಲು ಹಾಗೂ ಬೀಜಬಿತ್ತನೆಯ ದಿನಗಳಲ್ಲಿ ಕೂಲಿಕಾರರ ಕೊರತೆಯುಂಟಾಗಿ ನಮ್ಮ ಹೊಲದ ಕೆಲಸಕ್ಕೆ ಭಾರೀ ಪೆಟ್ಟು ಬೀಳುತ್ತದೆ. ಭಾರತದ ಹವಾಮಾನ ಹಾಗೂ ಮಳೆಯ ಸ್ಥಿತಿಯ ಕಾರಣದಿಂದ, ನಾವು ಈ ಕೆಲಸವನ್ನು ಸುದೀರ್ಘ ಅವಧಿಯವರೆಗೆ ನಿಧಾನವಾಗಿ ಮಾಡಲಾರೆವು ಅಥವಾ ನಾವು ಯಂತ್ರಗಳ ಸಹಾಯವನ್ನೂ ಪಡೆಯಲಾರೆವು. ಆದ್ದರಿಂದ ನಾವು ಹಳ್ಳಿಗಳಲ್ಲಿಯೇ ಉದ್ಯಮ–ಕಾರಖಾನೆಗಳನ್ನು ತೆರೆದು ಜನರಿಗೆ ಪೂರ್ಣ ಸಮಯ ಉದ್ಯೋಗ ಕೊಡುವಂತಾಗಬೇಕು.

### ಕೆಲಸಕ್ಕಾಗಿ ವಲಸೆ

ಭಾರತದ ಕೂಲಿಕಾರರು ಸಾಮಾನ್ಯವಾಗಿ ಯಾವಾಗಲೂ ವಲಸಿಗರಲ್ಲ. ಹಾಗೆಂದು ವ್ಯವಸಾಯ ವೃತ್ತಿಗೆ ಸಂಬಂಧಿಸಿದಂತೆ ಅವರ ಈ ಗುಣವು ಸಮಾಜ ವ್ಯವಸ್ಥೆಗೆ ಭಾರೀ ಬಲವನ್ನು ತಂದುಕೊಟ್ಟಿದೆ. ವ್ಯವಸಾಯವನ್ನು ಧರ್ಮವೆಂದು ತಿಳಿದು ನಡೆದುಕೊಳ್ಳುತ್ತ ಅವರು ಅನೇಕ ಪ್ರಕಾರದ ಪರಂಪರೆಯಿಂದ ಪ್ರಾಪ್ತವಾದ ಕೌಶಲವನ್ನು ಜ್ಞಾನವನ್ನು ಜೀವಿತವಾಗಿಟ್ಟಿದ್ದಾರೆ. ಯುದ್ಧ, ತೇಜಿ, ಮಂದಿಯ ಕಠಿಣದಿನಗಳಲ್ಲಿ ಇವೇ ಉದ್ಯಮ ದಂಧೆಗಳು ರಾಷ್ಟ್ರ ಹಾಗೂ ವ್ಯಕ್ತಿಯ ಅವಶ್ಯಕತೆಗಳನ್ನು ಪೂರ್ಣ ಮಾಡುತ್ತ ಬಂದಿವೆ. ನಾವು ರಾಷ್ಟ್ರೀಯ ವಿಕಾಸದ ಬಗ್ಗೆ ವಿಚಾರ ಮಾಡುವಾಗ ಈ ಹಳೆಯ ಅಚ್ಚುಗಳನ್ನು ಮುರಿದು ವ್ಯಕ್ತಿಯನ್ನು ಅಸಹಾಯಕ ಅನಿಶ್ಚಿತಗೊಳಿಸುವುದರ ಬದಲು, ಈ ಅಚ್ಚನ್ನು ಮತ್ತಷ್ಟು ಬಲಿಷ್ಠ, ಆರ್ಥಿಕ ದೃಷ್ಟಿಯಿಂದ ಲಾಭಕಾರಿ, ಹಾಗೂ ಅನ್ಯ ಕಾಲಕ್ರಮಕ್ಕೆ ಅನುಸಾರವಾಗಿ ಅಂಟಿಕೊಳ್ಳುವ ಕೆಡುಕಿನಿಂದ ಮುಕ್ತಗೊಳಿಸಬೇಕಾಗಿದೆ. ಹಳ್ಳಿಗಳ ಚಿಕ್ಕ ಉದ್ಯಮಗಳು ಈ ದೃಷ್ಟಿಯಿಂದ ಪ್ರಯೋಜನಕಾರಿಯಾಗಬಲ್ಲವು.

ಪ್ರಾದೇಶಿಕ ಸಂಕ್ರಮಣಶೀಲತೆಯ ಆರೋಪವನ್ನು ಭಾರತೀಯ ಕೂಲಿಕಾರರ ಮೇಲೆ ತಪ್ಪಾಗಿ ಹೊರಿಸಲಾಗುತ್ತಿದೆ. ಭಾಕರಾ, ಭಿಲಾಯಿ, ಕೋಯ್ನಾ, ನಯಿವೇಲಿ,

ಚಂಬಲ್, ಯೋಕಾಮಾ ಇತ್ಯಾದಿಗಳಲ್ಲಿ ಬೇರೆ ಬೇರೆ ಯೋಜನೆಗಳಲ್ಲಿ ಕೆಲಸವಾಗುತ್ತಿದ್ದು, ಇಡೀ ಭಾರತದ ಶ್ರಮಿಕ ವರ್ಗ ಅಲ್ಲಿ ಕೆಲಸ ಮಾಡುತ್ತಿರುವುದು ಕಾಣುತ್ತಿದೆ. ಇದಕ್ಕಿಂತ ಮೊದಲೂ ಕೂಡ ಭಾರತದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಕಾರ್ಮಿಕರು ಒಪ್ಪಂದದ ಕಾನೂನುರೀತ್ಯಾ ವಿದೇಶಗಳವರೆಗೆ ಕೆಲಸಕ್ಕೆಂದು ಹೋದದ್ದಿದೆ. ಜಮಶೇಡಪುರ, ಅಹಮದಾಬಾದ್, ಮುಂಬಯಿ ಹಾಗೂ ಮದ್ರಾಸ್‌ಗಳ ಕಾರಖಾನೆಗಳಲ್ಲಿ ದೂರದೂರದಿಂದ ಜನರು ಬಂದು ನೌಕರಿ ಮಾಡಿದರು. ನಿಜ, ಸಮಾಜ ವ್ಯವಸ್ಥೆ, ಹಾಗೂ ಭೂಮಿ ಮತ್ತು ಕೃಷಿಯ ಪರಿಸ್ಥಿತಿಯು ಅವರನ್ನು ಎಂದೆಂದಿಗೂ ಹಳ್ಳಿಯ ಬಂಧನವನ್ನು ಕತ್ತರಿಸಿಕೊಳ್ಳಲು ಬಿಡಲಿಲ್ಲ ಎಂಬ ಮಾತೂ ಸತ್ಯವೇ ಆಗಿದೆ. ಹಳ್ಳಿಯ ಜೀವನ ನೀರಸವಾಗಬಾರದು, ಮತ್ತು ಅಲ್ಲಿನ ರಾಜಕೀಯ ಮತ್ತು ಆರ್ಥಿಕ ಸಾಮರ್ಥ್ಯದ ವಿಕಾಸವಾಗಬೇಕು ಎಂದು ನಾವು ಇಂದು ಕೂಡ ಬಯಸುವುದಾದರೆ, ಯೋಗ್ಯರಾದ ಜನರನ್ನು ನಾವು ನಗರದ ಕಡೆಗೆ ಹೋಗದಂತೆ ತಡೆಯಬೇಕು.

ಪಾಶ್ಚಾತ್ಯ ಅರ್ಥಶಾಸ್ತ್ರದ ಪ್ರಕಾರ ನಗರೀಕರಣದ ಸ್ತರವನ್ನು ವಿಕಾಸಗೊಳಿಸುವುದನ್ನೇ ಆಧಾರವೆಂದು ತಿಳಿದುಕೊಳ್ಳಲಾಗುತ್ತದೆ. ಭಾರತದಲ್ಲಿ ನಿಧಾನವಾಗಿ ನಗರಗಳ ಸಂಖ್ಯೆ ಹಾಗೂ ಜನವಸತಿ ಹೆಚ್ಚಾಗುತ್ತ ಹೋಗುತ್ತಿದೆ. ನಗರಗಳು ಪಶ್ಚಿಮದ ಜೀವನದಲ್ಲಿ ಅನೇಕ ಸಾಮಾಜಿಕ, ನೈತಿಕ, ಆರೋಗ್ಯ ಸಂಬಂಧಿಯಾದ, ಹಾಗೂ ರಾಜನೈತಿಕ ಸಮಸ್ಯೆಗಳನ್ನು ಹುಟ್ಟುಹಾಕಿವೆ. ಅವರು ಜೀವನಕ್ಕಾಗಿ ಮಾಡುವ ವೆಚ್ಚ ಬಹಳ ಹೆಚ್ಚಾಗುತ್ತಿದೆ. ಭಾರತದ ಉಷ್ಣ ಹವಾಮಾನದ ಕಾರಣದಿಂದ ಜನದಟ್ಟಣೆಯಿಂದ ಕೂಡಿದ ಇರುವಿಕೆ ನಮಗೆ ಬಹಳ ಹಾನಿದಾಯಕ. ಕ್ಷಯ ಇತ್ಯಾದಿ ಭಯಂಕರ ರೋಗಗಳು ಹೆಚ್ಚಾಗಲು ಇದು ಬಹುದೊಡ್ಡ ಕಾರಣ. ನಮ್ಮ ನಗರಗಳಲ್ಲಿ ಕೊಳೆಗೇರಿಗಳು (Slums) ಹೆಚ್ಚಾಗುತ್ತಿವೆ. ಇಂದು ಅವಶ್ಯಕತೆಯಿರುವುದು ಹೊಸ ನಗರಗಳದ್ದಲ್ಲ, ಬದಲಿಗೆ ಹಳ್ಳಿಗಳಲ್ಲಿ ಔದ್ಯೋಗೀಕರಣ ರೂಪಿಸುವುದು.

### ಕುಶಲ ಕೈಗಾರಿಕೆ

ಮನುಷ್ಯನು ಕೇವಲ ಎರಡು ಕೈ ಎರಡು ಕಾಲುಗಳಿದ್ದ ಮಾತ್ರಕ್ಕೆ ಉತ್ಪಾದಕನಾಗುವುದಿಲ್ಲ. ಯಂತ್ರಗಳು ಉಪಕರಣಗಳ ಸಹಾಯದಿಂದ ಉತ್ಪಾದನೆಯೇನೋ ಆಗಬಲ್ಲುದು, ಆದರೆ ಅವನ ಬಳಿ ಅದರ ಪ್ರಯೋಗದ ಯೋಗ್ಯತೆ ಬೇಕು. ಆ ಕಾರಣದಿಂದ ಶಿಕ್ಷಣ ಹಾಗೂ ತಜ್ಞತೆಯ ಅವಶ್ಯಕತೆ ಇರುತ್ತದೆ. ದೊಡ್ಡ ದೊಡ್ಡ ಉದ್ಯಮ-ಕೈಗಾರಿಕೆಗಳಲ್ಲಿ ಯಾವಾಗಲೂ ಯೋಗ್ಯರಾದ ಎಂಜಿನಿಯರುಗಳ ಕೊರತೆ ಉಂಟಾಗುತ್ತದೆ. ಶಿಕ್ಷಣ ಪಡೆಯಲು ಸಮಯವಿದ್ದರಷ್ಟೇ



ಸಾಲದು, ಬದಲಿಗೆ ಅವನಲ್ಲಿ ಸಹಜ ಕುಶಲತೆ ಹಾಗೂ ವಿಶೇಷತೆಗಳಿಗೆ ಸುತ್ತುಮುತ್ತಲಿನ ವಾತಾವರಣವೂ ಸಹಾಯಕವಾಗಬೇಕು. ಆದ್ದರಿಂದ ದೇಶದ ತಾಂತ್ರಿಕತೆಯಸ್ತರ (Technological level) ಸಮಾಜಕ್ಕೆ ಒಮ್ಮೆಲೇ ಅಸಂಬದ್ಧ ಆಗಬಾರದು. ಇವತ್ತಿನ ಭಾರತೀಯ ಪರಿಸ್ಥಿತಿಯಲ್ಲಿ ಚಿಕ್ಕ, ಸರಳ ಹಾಗೂ ಕೆಲವು ಅಂಶಗಳಲ್ಲಿ ಸ್ವಯಂಚಾಲಿತವೂ ಆಗಿರುವ ಯಂತ್ರಗಳೇ ನಮಗೆ ತುಂಬ ಉಪಯುಕ್ತ. ಇವುಗಳನ್ನು, ಇಂದು ಕೆಲಸಕ್ಕೆ ಒದಗಿ ಬಂದಿರುವ ಉಪಕರಣಗಳು ಹಾಗೂ ಯಂತ್ರಗಳೊಂದಿಗೆ ಜೋಡಿಸಿಕೊಂಡರೆ ಹಾಗೂ ಅವುಗಳ ಆಧಾರದ ಮೇಲೆ ವಿಕಾಸಗೊಳಿಸಿದರೆ ತರಬೇತಿಯ ಕೊರತೆಯ ಅನುಭವವೂ ಆಗುವುದಿಲ್ಲ. ಇಂದು ದೊಡ್ಡ ದೊಡ್ಡ ಟೆಕ್ನಿಷಿಯನ್ನಗಳದ್ದಷ್ಟೇ ಅಲ್ಲ, ಸಾಧಾರಣ ತರಬೇತಾದ ಯಂತ್ರಜ್ಞರ ಕೊರತೆಯೂ ಕಾಡುತ್ತದೆ. ಕೆಲಸ ನೀಡುವ ಆಫೀಸುಗಳ ಒಂದು ವೃತ್ತದ ಪ್ರಕಾರ ೧೯೫೬ ರಲ್ಲಿ ಸಬ್ ಓವರ್‌ಸಿಯರ್‌ಗಳಲ್ಲಿ ಶೇ. ೬೦.೩ ಪ್ರತಿಶತ, ಓವರ್‌ಸಿಯರ್‌ಗಳಲ್ಲಿ ಶೇ. ೪೬.೧ ಡ್ರಾಫ್ಟ್ಸ್‌ಮೆನ್‌ಗಳಲ್ಲಿ ೪೨.೮ ಶೇಕಡ, ಹಾಗೂ ಮೆಕ್ಯಾನಿಕ್‌ಗಳಲ್ಲಿ ಶೇ. ೪೧.೨ ಸ್ಥಾನಗಳನ್ನು ಅವಶ್ಯಕ ತರಬೇತಾದವರ ಕೊರತೆಯಿಂದಾಗಿ ತುಂಬಲು ಸಾಧ್ಯವಾಗಲಿಲ್ಲ. ದೊಡ್ಡ ದೊಡ್ಡ ವಿಶೇಷಜ್ಞರನ್ನು ಭಾರೀ ಭಾರೀ ಸಂಬಳದ ಮೇಲೆ ನಾವು ವಿದೇಶಗಳಿಂದಲೇ ಕರೆಸಬೇಕಾಗುತ್ತದೆ. ನಿಶ್ಚಿತವಾಗಿಯೂ ನಾವು ನಮ್ಮ ತಂತ್ರಜ್ಞರನ್ನು ನಮಗೆ ಅನುಕೂಲಕರವಾದ ರೀತಿಯಲ್ಲಿ ರೂಪಿಸಬೇಕು. ಇಲ್ಲವಾದರೆ ನಾವು ಹಣವನ್ನು ವ್ಯಯಮಾಡಿಯೂ ಅವರ ಮೂಲಕ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲಾರೆವು.

### ಯಂತ್ರಗಳು

ತಾಂತ್ರಿಕತೆಯ ಸಂಬಂಧ ಯಂತ್ರಗಳೊಂದಿಗೆ ಇರುತ್ತದೆ. ಅವುಗಳನ್ನು ನಾವು ಚೆನ್ನಾಗಿ ವಿಚಾರ ಮಾಡಿ ಮಾಡಬೇಕಾಗುತ್ತದೆ. ವಾಸ್ತವವಾಗಿ ಈ ಆಯ್ಕೆಯ ಪರಿಣಾಮವು ಇತರ ಉಪಕರಣಗಳ ಮೇಲೆಯೂ ಆಗುತ್ತದೆ. ಸರಿಯಾದ ಯಂತ್ರವಾಗಿ ಆಗಿದ್ದರೆ ನಾವು ಕಾರ್ಮಿಕರನ್ನು ಕಾರ್ಮಿಕರೆಂದೇ ಹೆಸರು ಕೊಟ್ಟು ಉತ್ಪಾದಕರನ್ನಾಗಿ ಮಾಡಬಹುದು. ಅಥವಾ ಅವರು ಕೇವಲ ಬಳಕೆದಾರರಾಗಿ ಮಾತ್ರ ಉಳಿದು ಬಿಡುತ್ತಾರೆ. ನೇಗಿಲಿಗೆ ಉಪಯುಕ್ತವಾದ ಎತ್ತುಗಳು, ಟ್ರ್ಯಾಕ್ಟರ್‌ನ ಪ್ರಯೋಗ ಮಾಡಲಿಕ್ಕೆ ನಿರರ್ಥಕವಾಗುತ್ತವೆ. ಸಾಧಾರಣ ಪ್ರಗತಿಯು ನಮಗೆ ಹೇಳುವುದೆಂದರೆ ನಾವು ನಮಗೆ ಲಭ್ಯವಾದ ಉತ್ಪಾದನಾ ಉಪಕರಣಗಳ ಜೊತೆ ಹೋಲಿಕೆ-ಹೊಂದಾಣಿಕೆಯಾಗುವ ಯಂತ್ರಗಳನ್ನೇ ಪ್ರಯೋಗಿಸಬೇಕು. ಶ್ರಮ ಮತ್ತು ಶಕ್ತಿ, ಬಂಡವಾಳ ಹಾಗೂ ವ್ಯವಸ್ಥೆ, ಸರಕು ಹಾಗೂ ಬೇಡಿಕೆ ಇವೆಲ್ಲವೂ ಯಂತ್ರದ ಸ್ವರೂಪವನ್ನು ನಿಶ್ಚಿತಗೊಳಿಸುವಂತಹದಾಗಿರಬೇಕು. ಬದಲಾಗುತ್ತಿರುವ ಇವುಗಳ

ಸ್ವರೂಪಕ್ಕೆ ತಕ್ಕಂತೆ ಮನುಷ್ಯನು ಯಂತ್ರಗಳ ಆವಿಷ್ಕಾರ ಮಾಡಿದ. ಆದರೆ ನಾವು ಇಂದು ಯಂತ್ರಗಳನ್ನು ಸ್ಥಿರವೆಂದು ಭಾವಿಸುತ್ತ ಅವುಗಳ ಅನುಸಾರವಾಗಿ ಉಳಿದೆಲ್ಲವನ್ನೂ ಬದಲಿಸುವ ವಿಚಾರ ಮಾಡುತ್ತೇವೆ. ಯಂತ್ರಗಳಿಗಾಗಿ ಮನುಷ್ಯನನ್ನು ಬದಲಿಸಲು ಅನಿವಾರ್ಯಗೊಳಿಸುತ್ತಿದ್ದೇವೆ. ಸಂಪೂರ್ಣ ಉತ್ಪಾದನಾ ಪದ್ಧತಿ ಒಂದು ಯಂತ್ರದ ಮೇಲೆ ಕೇಂದ್ರಿತವಾಗುತ್ತಿದೆ. ಆವಿಷ್ಕಾರಗಳು ಅವಶ್ಯಕತೆಗಳನ್ನು ನಿರ್ಮಾಣ ಮಾಡುತ್ತಿವೆ.

**ಪಶ್ಚಿಮದ ಯಂತ್ರಗಳ ಅನುಕೂಲತೆ**

ಪಶ್ಚಿಮದಿಂದ ನಮಗೆ ದೊರೆಯುವ ಯಂತ್ರಗಳು ಆ ದೇಶಗಳಲ್ಲಿ ಕಳೆದ ಹಲವು ಶತಮಾನಗಳಲ್ಲಿ ವಿಕಸಿತಗೊಂಡಂಥವು. ಅವುಗಳ ಸ್ಟ್ಯಾಂಡರ್ಡೈಜೇಶನ್‌ಗೊಳಿಸಿ ಅವರು ಇಂದು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ನಾವು ಅವುಗಳನ್ನು ಕೊಳ್ಳುತ್ತೇವೆ. ಅವು ಒಂದು ದೀರ್ಘ ಆರ್ಥಿಕ ವಿಕಾಸದ ಕಾರಣವಷ್ಟೇ ಅಲ್ಲ, ಪರಿಣಾಮಗಳೂ ಆಗಿವೆ ಎಂಬುದನ್ನು ನಾವು ಮರೆತುಬಿಡುತ್ತೇವೆ. ಅವು ಯಾವ ಜನರಿಂದ ಆವಿಷ್ಕೃತಗೊಂಡಿವೆಯೋ, ಹಾಗೂ ಇಂದು ಕೆಲಸದಲ್ಲಿವೆಯೋ ಅವುಗಳ ಹಿನ್ನೆಲೆ ಮತ್ತು ಪರಂಪರೆ ನಮಗಿಂತ ಭಿನ್ನವಾಗಿವೆ. ಎಲ್ಲಕ್ಕಿಂತ ಮುಖ್ಯ ವಿಷಯವೆಂದರೆ ಅವುಗಳ ಎದುರು ಕೆಲಸ ಮಾಡುವ ಮನುಷ್ಯರ ಕೊರತೆಯಿತ್ತು ಹಾಗೂ ದೊಡ್ಡ ಮಾರುಕಟ್ಟೆ ಇತ್ತು. ಇಂದು ನಮ್ಮ ಎದುರಿಗೆ ಮನುಷ್ಯರ ಹೆಚ್ಚಳ ಹಾಗೂ ಮಾರುಕಟ್ಟೆ ಕಡಿಮೆ ಇದೆ. ನಮ್ಮಲ್ಲಿನ ಹವಾಮಾನ ಕೂಡ ಈ ಶೀತೋಷ್ಣ ದೇಶಗಳ ಹವಾಮಾನಕ್ಕಿಂತ ಭಿನ್ನವಾಗಿದೆ. ನಮ್ಮಲ್ಲಿ ಇನ್ನೂ ತಾಂತ್ರಿಕ ಶಿಕ್ಷಣದ ಕೊರತೆಯಿಂದೆ. ಆದ್ದರಿಂದ ಸರಳವಾಗಿರುವ ಹಾಗೂ ಎಲ್ಲರೂ ಕೆಲಸ ಮಾಡಬಹುದಾದ ರೀತಿಯ ಯಂತ್ರಗಳೇ ಇಂದು ನಮಗೆ ಬೇಕಾಗಿವೆ. ನಾವು ದೊಡ್ಡ ದೊಡ್ಡ ಯಂತ್ರಗಳನ್ನು ಕೊಂಡರೆ ನಮ್ಮೆದುರು ಅನೇಕ ಸಮಸ್ಯೆಗಳು ನಿಲ್ಲುತ್ತವೆ. ಮೊದಲನೆಯದಾಗಿ. ಇವು ತುಂಬ ದುಬಾರಿ ಹಾಗೂ ನಮ್ಮ ಹಣಕಾಸಿನ ಸಾಮರ್ಥ್ಯವನ್ನು ಮೀರಿದವು. ಇವುಗಳನ್ನು ಒಂದು ಸಲ ಕೊಂಡ ಮೇಲೆ ಅವುಗಳ ಬಿಡಿಭಾಗಗಳ ಬಗ್ಗೆ ವಿದೇಶಗಳನ್ನೇ ಅವಲಂಬಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಅವುಗಳ ಸಂಕೀರ್ಣತೆಯಿಂದಾಗಿ ನಾವು ಅವುಗಳನ್ನು ಬೇಗನೇ ನಮ್ಮ ದೇಶದಲ್ಲಿ ತಯಾರಿಸಲಾರೆವು. ಉದಾಹರಣೆಗೆ, ಇಂದು ನಾವು ಬಟ್ಟೆ ನೇಯುವ ಹಾಗೂ ಅನ್ಯಪ್ರಕಾರದ ಕೆಲವು ಯಂತ್ರಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಆದರೆ ಸ್ವಯಂಚಾಲಿತ ಮಗ್ಗಗಳನ್ನು ಹಾಕಬೇಕೆಂಬುದು ನಮ್ಮ ವಸ್ತ್ರ ಉದ್ಯಮದವರ ಒತ್ತಾಯವಾಗಿದೆ. ಇಂಥ ಮಗ್ಗಗಳನ್ನು ನಮ್ಮ ದೇಶದಲ್ಲಿಯೇ ಸಿದ್ಧಪಡಿಸಬಲ್ಲೆವೇ ಎಂಬುದೇ ಪ್ರಶ್ನೆ. ನಾವು ಒಂದೇ ಸವನೆ ನಮ್ಮ



ಔದ್ಯೋಗೀಕರಣಕ್ಕಾಗಿ ವಿದೇಶದ ಈಗಿನ ಯಂತ್ರಗಳನ್ನು ಅವಲಂಬಿಸಿದರೆ, ನಾವು ಎಂದೂ ಸ್ವಾವಲಂಬಿಗಳಾಗಲು ಸಾಧ್ಯವಿಲ್ಲ. ನಮಗೆ ಮಶಿನ್‌ಗಳನ್ನು ಜೋಡಿಸಲು ಸರಿಪಡಿಸಲು ಹೊರಗಿನಿಂದ ಜನರನ್ನು ಕರೆಸಬೇಕಾಗುವುದು. ಉತ್ಪಾದನೆಯೆಂಬುದು ಕೇವಲ ಯಂತ್ರಗಳಿಂದಷ್ಟೇ ಆಗುವಂತಹದಲ್ಲ, ಅದು ಸರಿಯಾಗಿ ಕೆಲಸ ಮಾಡಲು, ಮತ್ತು ಅದು ಕೆಟ್ಟರೆ ಬೇಗನೆ ಅದನ್ನು ದುರಸ್ತಿಪಡಿಸಲು ಸೌಲಭ್ಯವಿದ್ದರೆ ಮಾತ್ರ ಆಗುತ್ತದೆ ಎಂಬುದನ್ನು ನಾವು ಮರೆತುಬಿಡುತ್ತೇವೆ. ವಿದೇಶಗಳಲ್ಲಿ ಈ ಎಲ್ಲ ಸೌಕರ್ಯಗಳಿವೆ, ಆದರೆ ಭಾರತದಲ್ಲಿ ಈ ಪರಿಸ್ಥಿತಿ ಭಿನ್ನವಾಗಿದೆ. ಆದ್ದರಿಂದ ನಾವು ಯಂತ್ರಗಳ ಮೇಲೆ ಹೆಚ್ಚು ಹಣ ಹಾಕುವಾಗ ಸಾಕಷ್ಟು ತುಲನಾತ್ಮಕ ದೃಷ್ಟಿಯಿಂದ ನೋಡಬೇಕಾಗುತ್ತದೆ. ನಂತರ ಈ ಯಂತ್ರಗಳನ್ನು ಕೆಲಸಕ್ಕೆ ಹಚ್ಚಲು ನಾವು ಮತ್ತಷ್ಟು ಕೆಲಸ ಮಾಡಬೇಕಾಗುತ್ತದೆ. ದೊಡ್ಡ ಯಂತ್ರವನ್ನು ಹಾಕಲು ನಾವು ಬಯಸುತ್ತೇವೆ ನಿಜ, ಅದರ ಕಾರಖಾನೆ ಸ್ಥಾಪಿಸುವಲ್ಲಿಗೆ ಸರಕುಗಳನ್ನು ಒಯ್ಯುವುದು ಹಾಗೂ ಅನ್ಯ ಸೌಲಭ್ಯಗಳ ಬಗ್ಗೆ ನಾವೆಷ್ಟು ವೆಚ್ಚ ಮಾಡಬೇಕಾಗುತ್ತದೆ, ಇದರ ಬಗ್ಗೆ ನಾವು ವಿಚಾರ ಮಾಡುವುದೇ ಇಲ್ಲ. ನಮ್ಮ ಬಳಿ ಇರುವ ಹಣದ ಗರಿಷ್ಠ ಉಪಯೋಗವನ್ನು ನಾವು ಇದರಿಂದ ಮಾಡಲಾರೆವು. ಯಂತ್ರಗಳ ಉತ್ಪಾದನಾ ಸಾಮರ್ಥ್ಯದ ಘಟಕ ದೊಡ್ಡದಿರುತ್ತದೆ ಹಾಗೂ ಅದು ಅವಿಭಾಜ್ಯವಾಗಿರುತ್ತದೆ. ಪರಿಣಾಮವಾಗಿ ಅವಶ್ಯಕತೆಗಿಂತ ಹೆಚ್ಚಿನ ಸಾಮರ್ಥ್ಯವನ್ನು ತೊಡಗಿಸಬೇಕಾಗುತ್ತದೆ. ಇದು ರಾಷ್ಟ್ರೀಯ ದೃಷ್ಟಿಯಿಂದ ಹಣದ ಅಪವ್ಯಯ. ಈ ಯಂತ್ರಗಳು ಶ್ರಮ ಉಳಿಸುವ ಯೋಜನೆಯ ಪ್ರಕಾರ ತಯಾರಾಗಿದ್ದರಿಂದ ಕೆಲವು ಜನರನ್ನು ಕೆಲಸದಿಂದ ತೆಗೆದುಹಾಕಬೇಕಾಗುತ್ತದೆ. ವ್ಯಕ್ತಿಗತ ವಿಚಾರದ ದೃಷ್ಟಿಯಿಂದ ಉದ್ದಿಮೆದಾರನು ಅವರ ಜವಾಬ್ದಾರಿ ತನ್ನದಲ್ಲವೆಂದು ಭಾವಿಸಿದರೂ, ರಾಷ್ಟ್ರೀಯ ದೃಷ್ಟಿಯಿಂದ ಅವರ ಹೊಟ್ಟೆ–ಬಟ್ಟೆಯ ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಹಾಗಾಗಿ ಬೇರೆ ಕಡೆ ಕೆಲಸ ಕೊಡಲಾರೆವಾದರೆ ಸಾಮಾಜಿಕ ದೃಷ್ಟಿಯಿಂದ ಯಂತ್ರಗಳ ಮೇಲೆ ನಾವು ಮಾಡಿದ ವೆಚ್ಚ ಅಪವ್ಯಯವೆಂದೇ ಸಿದ್ಧವಾಗುತ್ತದೆ. ಸಮಾಜವು ಎರಡು ಪಟ್ಟು ವೆಚ್ಚ ಮಾಡಬೇಕಾಗುತ್ತದೆ. ನಿಜ, ತೆಗೆದು ಹಾಕಿದ ಕೆಲಸಗಾರರಿಗೆ ಬೇರೆ ಕಡೆ ಕೆಲಸ ದೊರೆಯುವ ಅವಕಾಶ ಹಾಗೂ ಬೇಡಿಕೆ ಇದ್ದರೆ, ಯಂತ್ರಗಳಿಗೆ ವೆಚ್ಚ ಮಾಡಿದ್ದು ಸರಿಯೆಂದೇ ಹೇಳಬೇಕಾಗುತ್ತದೆ.

**ಉಪಯುಕ್ತ ಯಂತ್ರ**

ನಮಗೆ ಬೇಕಾದ ಯಂತ್ರದ ಸ್ವರೂಪ ನಿರ್ಧಾರಕ್ಕೆ ಕಾರಣಗಳು ಹಲವು, ಅದು ನಿಶ್ಚಿತವಾಗಿಯೂ ಚಿಕ್ಕದು, ಸರಳವಾದದ್ದು, ಹಗುರವಾದದ್ದು, ಮತ್ತು ಅಗ್ಗವಾದದ್ದು ಆಗಿರಬೇಕು. ಈ ರೀತಿಯ ಯಂತ್ರಗಳನ್ನು ನಾವು ವಿಕಾಸಗೊಳಿಸಬೇಕು.

ನಾವು ಬೇರೆ ದೇಶಗಳ ಕಡೆ ನೋಡಿದಾಗ ಅಲ್ಲಿಯೂ ಇಂಥ ಚಿಕ್ಕಯಂತ್ರಗಳು ದೊರೆಯಬಹುದು. ವಾಸ್ತವವೆಂದರೆ, ವಿದ್ಯುತ್ತಿನ ಆವಿಷ್ಕಾರ ಆದ ನಂತರ, ಅದನ್ನು ಸುಲಭವಾಗಿ ವಿತರಿಸಬಹುದಾದ್ದರಿಂದ, ದೊಡ್ಡ ದೊಡ್ಡ ಕಾರಖಾನೆಗಳು, ಯಂತ್ರಗಳ ಅವಶ್ಯಕತೆ ಇಲ್ಲವೇ ಇಲ್ಲ. ಪಶ್ಚಿಮದಲ್ಲಿ ಅವು ನಡೆಯುತ್ತಿರುವುದಕ್ಕೆ ಐತಿಹಾಸಿಕ ಕಾರಣಗಳಿವೆ. ಉಗಿಎಂಜಿನ್‌ಗಳ ಯುಗದಲ್ಲಿ ಸ್ಥಾಪಿತವಾದವುಗಳಾಗಿದ್ದವು, ಚಿಕ್ಕ ಚಿಕ್ಕ ಕೈಗಾರಿಕೆದಾರರು ಸ್ವತಂತ್ರ ಕೆಲಸಗಳನ್ನು ನಿಲ್ಲಿಸಿ ಕಾರ್ಮಿಕರಾಗಿದ್ದರು, ಹಾಗಾಗಿ ಅವರು ವಿದ್ಯುತ್ ಆವಿಷ್ಕಾರದ ನಂತರವೂ ಹಿಂದಕ್ಕೆ ನಡೆಯುವುದು ಸಾಧ್ಯವಿರಲಿಲ್ಲ. ಆದರೂ ಅಮೇರಿಕಾದಲ್ಲಿ ಇತ್ತೀಚೆಗೆ ನಡೆದ ಒಂದು ಪರಿಶೀಲನೆಯಿಂದ ಗೊತ್ತಾದ ಅಂಶವೆಂದರೆ, ಅಲ್ಲಿ ಚಿಕ್ಕ ಯಂತ್ರಗಳು ಮತ್ತು ಕಾರಖಾನೆಗಳ ಕಡೆಗೆ ಪ್ರವೃತ್ತಿ ಹೊರಳಿಕೊಳ್ಳುತ್ತಿದೆ. ಭಾರತವು ಔದ್ಯೋಗೀಕರಣದ ಪ್ರಾರಂಭವನ್ನಷ್ಟೇ ಮಾಡುತ್ತಿದೆ, ಅದು ಈಗ ಯಾಕೆ ಅತ್ಯಾಧುನಿಕ ಆವಿಷ್ಕಾರಗಳ ಲಾಭವನ್ನು ಪಡೆಯಬಾರದು? ಇದಕ್ಕಾಗಿ ಭಾರತವು ೧೮ ಅಥವಾ ೧೯ನೇ ಶತಮಾನದ ಶಕ್ತಿಗಳಿಗೇ ಜೋತುಬೀಳಬೇಕಾದ ಅವಶ್ಯಕತೆ ಏನೂ ಇಲ್ಲ.*

### ಯಂತ್ರಗಳಿಂದ ಉತ್ಪಾದನಾ ಸಾಮರ್ಥ್ಯದ ವೃದ್ಧಿ

ಆಧುನಿಕ ಯಂತ್ರಗಳು ಒಂದುಕಡೆ ಶ್ರಮ ಉಳಿಸುವ ಮಾಧ್ಯಮವಾಗಿ ಮನುಷ್ಯನನ್ನು ನಿರುದ್ಯೋಗಿಯಾಗಿಸುತ್ತಿವೆಯಾದರೆ, ಇನ್ನೊಂದು ಕಡೆ ಶ್ರಮದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ಅದನ್ನು ವಾಸ್ತವದಲ್ಲಿ ಕಡಿಮೆ ಮಾಡುತ್ತವೆ. ಯಂತ್ರವಿಲ್ಲದೆ ಮನುಷ್ಯ ನಿರುದ್ಯೋಗಿಯಾದರೆ, ಅವನು ಕೆಲವು ಯಂತ್ರಗಳ ಸಹಾಯದಿಂದ ಅರೆನಿರುದ್ಯೋಗಿಯೂ ಆಗಿರುತ್ತಾನೆ. ದುಡಿಮೆಯ ಅಂಕಿಶಾಸ್ತ್ರಜ್ಞರ ಒಂಬತ್ತನೆಯ ಅಂತಾರಾಷ್ಟ್ರೀಯ ಪರಿಷತ್ತು ಅರೆ ನಿರುದ್ಯೋಗಿಯ ವ್ಯಾಖ್ಯೆಯನ್ನು ಹೀಗೆ ಸ್ವೀಕರಿಸಿದೆ. “ಅರೆ ನಿರುದ್ಯೋಗಿ ಸ್ಥಿತಿಯೆಂದು ಯಾವುದಕ್ಕೆ ಹೇಳುತ್ತಾರೆಂದರೆ:

೧) ಪೂರ್ಣ ಸಮಯದವರೆಗೆ ಕೆಲಸ ಮಾಡದ ವ್ಯಕ್ತಿ ಹಾಗೂ ಅವನಿಗೆ ಅವಕಾಶವಿದ್ದರೆ, ಅವನು ಹೆಚ್ಚಿನ ಕೆಲಸ ಮಾಡುವ ಇಚ್ಛೆ ಹಾಗೂ ಸಾಮರ್ಥ್ಯವನ್ನು ಹೊಂದಿದ್ದವನು.

* “A strong case for a small industries has been made out by the fact that new technological developments like automatic machinery, synthetic alloys, die-casting, small scale precision instruments and the developments in power distribution have reduced the technological disadvantages of small scale productions.”
B. Dutt : *The Economics of Industrialisation.*



೨) ವ್ಯಕ್ತಿಯ ಗಳಿಕೆ ಅಥವಾ ಉತ್ಪಾದಕತೆಯನ್ನು ಹೆಚ್ಚಿಸಲು ಸಾಧ್ಯವಾಗುವುದು, ಅವನು ಕೆಲಸ ಮಾಡುವ ಪದ್ಧತಿ ಹಾಗೂ ಪರಿಸ್ಥಿತಿಯನ್ನು, ಅವನ ವ್ಯವಸಾಯದ ಕೌಶಲವನ್ನು ಗಮನದಲ್ಲಿಟ್ಟುಕೊಂಡು ಸುಧಾರಣೆ ಮಾಡಿದಾಗ.”

ಮೊದಲ ರೀತಿಯ ಕಾಣುವ ಅರೆ ನಿರುದ್ಯೋಗವೆಂದು ಹೇಳಲಾಗುತ್ತದೆ, ಎರಡನೆಯದು ಅದೃಶ್ಯ. ಮರೆಮಾಚಿದ ಅರೆನಿರುದ್ಯೋಗವನ್ನು ದೂರ ಮಾಡಲು ಉತ್ಪಾದನೆಯ ಪದ್ಧತಿಯಲ್ಲಿ ಪರಿವರ್ತನೆ ಮಾಡುವುದು ಅವಶ್ಯಕವಾಗಿದೆ. ಅರೆ ನಿರುದ್ಯೋಗಿಗೆ ಪೂರ್ಣ ಕೆಲಸ ನೀಡಿ ಅವನ ಗಳಿಕೆಯಲ್ಲಿ ಪರಿವರ್ತನೆ ತಂದರೆ, ಹೆಚ್ಚಿನ ಗಳಿಕೆಯಿಂದ ಅವನು ಅವನು ಬೇರೆಯವರಿಗೂ ಕೆಲಸಕೊಡಬಲ್ಲ. ಇದಕ್ಕೆ ವಿರುದ್ಧವಾಗಿ ಅವನ ಆದಾಯವನ್ನು ಸೀಮಿತಗೊಳಿಸಿದರೆ, ಅವನು ಹೇಗೋ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಿರುತ್ತಾನೆ. ಅನ್ನ, ಬಟ್ಟೆ ಮುಂತಾದ ಪ್ರಾಥಮಿಕ ಅವಶ್ಯಕತೆಗಳನ್ನು ಪೂರ್ಣ ಮಾಡುವುದರಲ್ಲಿಯೇ ಅವನ ಗಳಿಕೆಯೆಲ್ಲ ವೆಚ್ಚವಾಗಿಬಿಡುತ್ತದೆ. ಉಳಿತಾಯವಿರದ ಅವನು ಬೇರೆ ವಸ್ತುಗಳನ್ನು ಕೊಳ್ಳಲಾರ ಮತ್ತು ಅವನ ಉತ್ಪಾದನೆಗಳಿಗೆ ಯಾವ ಕೆಲಸವನ್ನೂ ಕೊಡಲಾರ. ಆದ್ದರಿಂದ ಒಂದು ವಿಕಾಸಶೀಲ ಅರ್ಥವ್ಯವಸ್ಥೆಗೆ ವೇಗವನ್ನು ಕೊಡಲು ಯಂತ್ರಗಳನ್ನು ಪ್ರಯೋಗ ಮಾಡಿ, ಮನುಷ್ಯನ ಉತ್ಪಾದಕತೆಯನ್ನು ಹೆಚ್ಚಿಸಬೇಕಾದ್ದು ಅವಶ್ಯಕವಾಗಿದೆ.

### ಯಂತ್ರಗಳು ಮತ್ತು ನಿರುದ್ಯೋಗ

ಯಂತ್ರಗಳನ್ನು ಬಳಸುವುದರಿಂದ ಕಾರ್ಮಿಕರು ಅರೆದುಹೋಗುತ್ತಾರೆ ಹಾಗೂ ಅವರು ನಿರರ್ಥಕರೆನಿಸಿ ಸಮಾಜಕ್ಕೆ ಭಾರವಾಗುತ್ತಾರೆ. ಮತ್ತೆ ಕೃಷಿಯಲ್ಲಿ ತೊಡಗಿಕೊಂಡು ಒಕ್ಕಲುತನದ ಮಾರುಕಟ್ಟೆ ಅತಿರೇಕಗಳಿಗೆ ಕಾರಣವಾಗುತ್ತಾರೆ. ಒಂದು ಕಡೆ ಧಾನ್ಯದ ಬೆಲೆ ಹೆಚ್ಚುತ್ತದೆ. ಇನ್ನೊಂದು ಕಡೆ ರೈತನ ಯಂತ್ರಗಳಿಂದ ತಯಾರಾದ ಮಾಲುಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ಕೆಲಸಗಾರರ ಈ ರೀತಿಯ ಆದಾಯ ಪ್ರಾರಂಭದಲ್ಲಿ ಹೆಚ್ಚಿದರೆ, ಅವರು ಧಾನ್ಯಕ್ಕಾಗಿ ಹೆಚ್ಚಿಗೆ ಕೊಡಬೇಕಾದ ಕಾರಣ, ಅವರ ಬಳಿ ಬೇರೆ ವಸ್ತುಗಳನ್ನು ಖರೀದಿಸಲು ಮೊದಲಿನಷ್ಟೇ ಅಥವಾ ಅದಕ್ಕಿಂತ ಕಡಿಮೆ ಹಣ ಉಳಿಯುತ್ತದೆ. ಎರಡನೆಯದಾಗಿ, ಬೇಡಿಕೆ ಕಡಿಮೆಯಾಗುವುದರಿಂದ, ಹೆಚ್ಚಿನ ಉತ್ಪಾದನೆಯಾದರೂ, ಅವರು ಉತ್ಪಾದನೆ ಮಾಡಿದ ವಸ್ತುಗಳು ಕಡಿಮೆ ಖರ್ಚಾಗುವುದರಿಂದ ತಮ್ಮ ಉತ್ಪಾದನೆಯನ್ನೇ ಅವರು ಕಡಿಮೆ ಮಾಡಬೇಕಾಗುತ್ತದೆ. ಈ ರೀತಿಯಿಂದ ಅವರು ಕೂಡ ಒಂದು ಪ್ರಕಾರದ ರಚನಾತ್ಮಕ ಅರೆ ನಿರುದ್ಯೋಗಿಗಳಾಗುತ್ತಾರೆ. ಕೆಲಸದ ಅವಧಿ ಕಡಿಮೆ ಆಗುತ್ತದೆ. ಕೆಲಸದ ಪಾಳಿಯನ್ನು ಕಡಿಮೆ ಮಾಡಬೇಕಾಗುತ್ತದೆ. ಆದ್ದರಿಂದ ಯಂತ್ರದ ಸುಧಾರಣೆಯ ಕಾರಣ, ಅರ್ಥವ್ಯವಸ್ಥೆಯಲ್ಲಿ ಪ್ರತಿಕ್ರಿಯೆ ಹುಟ್ಟಿಕೊಳ್ಳುತ್ತದೆ.

**ಯಂತ್ರದ ಮಿತಿಗಳು**

ಈ ಎಲ್ಲ ಕಾರಣಗಳಿಂದ ದೇಶದಲ್ಲಿ ಒಂದು ಕಡೆ ಯಂತ್ರದ ಭಕ್ತರಿದ್ದಾರೆ, ಇನ್ನೊಂದು ಕಡೆ ಅದರ ಶತ್ರುಗಳೂ ಇದ್ದಾರೆ. ಒಬ್ಬರು ಯಂತ್ರಗಳ ಆಧುನೀಕರಣದ ಅಭಾವದಿಂದಲೇ ಭಾರತವು ಬಡತನದಲ್ಲಿ ನರಳಬೇಕಾಗಿದೆ ಎಂದರೆ, ಇನ್ನೊಬ್ಬರು ಆಧುನೀಕರಣ ಮತ್ತು ಯಾಂತ್ರೀಕರಣಗಳೇ ದೇಶದ ವಿನಾಶಕ್ಕೆ ಕಾರಣ ಎಂದು ಪ್ರತಿಪಾದಿಸುತ್ತಾರೆ. ವಾಸ್ತವದಲ್ಲಿ ಯಂತ್ರಗಳು ಮನುಷ್ಯನ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ. ಅದೊಂದು ಸಾಧನ ಹಾಗೂ ಅದರ ಕೊಡುಗೆ ಸಮಾಜದ ಅನೇಕ ಶಕ್ತಿಗಳ ಕ್ರಿಯೆ ಪ್ರತಿಕ್ರಿಯೆಗಳ ಮೇಲೆ ಅವಲಂಬಿತವಾಗಿದೆ.

ಯಾವುದೇ ಹೊಸ ಯಂತ್ರದ ಕಾರಣದಿಂದ ಅರ್ಥ ವ್ಯವಸ್ಥೆಗೆ ಚಲನೆ ದೊರೆಯಬಹುದು.

೧) ಹೆಚ್ಚಿದ ಉತ್ಪಾದಕತೆಯಿಂದ ಪಡೆದ ಆದಾಯದ ಹಂಚಿಕೆಯು ಕಾರ್ಮಿಕರು ಹಾಗೂ ಬಂಡವಾಳ ಹಾಕಿದವರಲ್ಲಿ ಸರಿಯಾಗಿ ಹಂಚಿಕೆಯಾಗಲು ಸಾಧ್ಯವಾದಾಗ;

೨) ಈ ಆದಾಯದ ತುಸು ಭಾಗವಾದರೂ ಸಂಪತ್ತಿನ ಸಂಗ್ರಹ ಹಾಗೂ ಬಳಕೆ ಎರಡೂ ಕೆಲಸಕ್ಕೆ ಬಂದಲ್ಲಿ.

೩) ದೇಶದ ಬಂಡವಾಳ ನಿರ್ಮಾಣದ ವೇಗ ಎಷ್ಟು ಹೆಚ್ಚಬೇಕೆಂದರೆ, ಹೊಸಯಂತ್ರಗಳ ಖರೀದಿಗೆ ಹಣ ಖರ್ಚು ಮಾಡಿದ ಅನಂತರವೂ, ಕೇವಲ ಅರೆದುಹೋದ ಕಾರ್ಮಿಕರಿಗಷ್ಟೇ ಅಲ್ಲ, ಬೇರೆಯವರಿಗೂ ಕೆಲಸ ನೀಡಲು ಉದ್ಯಮ–ಕಾರಖಾನೆ ಪ್ರಾರಂಭ ಮಾಡಬಲ್ಲಷ್ಟು ಉಳಿತಾಯವಾದಾಗ.*

**ಪೂರ್ಣ ಉದ್ಯೋಗದಿಂದ ಕೊಳ್ಳುವ ಶಕ್ತಿಯಲ್ಲಿ ಹೆಚ್ಚಳ**

ನಾವು ಕೆಲವೊಂದು ವಿಷಯಗಳ ಬಗ್ಗೆ ಗಮನ ಕೊಟ್ಟರೆ, ದೇಶದಲ್ಲಿ ಬೇರೆ ಬೇರೆ ಬಗೆಯ ಮಾಲುಗಳಿಗೆ ಬೇಡಿಕೆ ಕಡಿಮೆಯಾಗಲಾರದು. ಅದು ನಿರಂತರವಾಗಿ ಮುಂದುವರಿಯುತ್ತ ಹೋದರೆ ಉದ್ಯೋಗೀಕರಣವೂ ವೇಗವಾಗಿ ಮುಂದುವರಿಯುವುದು. ಪ್ರಭಾವೀ ಬೇಡಿಕೆಯನ್ನು ಮುಂದುವರಿಸುವ ಮೊದಲ ಹಾಗೂ ಆವಶ್ಯಕ ದಾರಿಯೆಂದರೆ ಕ್ರಯ ಶಕ್ತಿಯನ್ನು ಹೆಚ್ಚಿಸುವುದು. ಉತ್ಪಾದನಾ

* "The workers have good logic behind them when they oppose measures of rationalisation and technical changes. It is not proper to delude them with the thesis of self -compensation. The latter does not function except in the context of a vigorously growing economy in which the maximum rate of accumulation that is possible is being abstained." C.N. Vakil : *Planning for an Expanding Economy.*



ವೆಚ್ಚವನ್ನು ಕಡಿಮೆ ಮಾಡುವುದು ಇನ್ನೊಂದು ವಿಧಾನ. ದೇಶದ ಕೊಳ್ಳುವ ಶಕ್ತಿ ಹೆಚ್ಚಾಗದೆಯೇ ಉತ್ಪಾದನಾ ವೆಚ್ಚ ಕಡಿಮೆಯಾದರೆ, ಅದರ ಲಾಭವು ವ್ಯಕ್ತಿಗತ ಉತ್ಪಾದಕನಿಗೆ ಇನ್ನೊಬ್ಬರ ಪ್ರತಿಸ್ಪರ್ಧೆಯಲ್ಲಿ ಸಮಯ–ವಿಶೇಷಕ್ಕಾಗಿ ಆಗಬಲ್ಲುದು, ಆದರೆ ದೇಶಕ್ಕೆ ಆಗಲಾರದು. ಕೊಳ್ಳುವ ಶಕ್ತಿಯನ್ನು ಖಾಯಂ ಆಗಿ ಇಟ್ಟುಕೊಳ್ಳಲು ಸಂಪೂರ್ಣ ಉದ್ಯೋಗ (Full Employment) ವ್ಯವಸ್ಥೆಯು ಅವಶ್ಯಕವಾಗುತ್ತದೆ. ಸರ್. ವಿಲಿಯಂ ವೀವರಿಜ್ ಎಷ್ಟರ ಮಟ್ಟಿಗೆ ಹೇಳಿದ್ದಾರೆಂದರೆ "ಜನರನ್ನು ನಿರುದ್ಯೋಗಿಗಳನ್ನಾಗಿ ಇಡುವ ಬದಲು ಅವರಿಗೆ ಹೊಂಡ ತೋಡುವ ಮತ್ತು ಪುನಃ ಅದನ್ನು ಮುಚ್ಚುವ ಕೆಲಸವನ್ನು ಕೊಟ್ಟು ಇಟ್ಟುಕೊಳ್ಳುವುದು ಒಳ್ಳೆಯದು. ಈ ರೀತಿಯ ನಿರರ್ಥಕ ಕೆಲಸ ಮಾಡುವವರು ಕನಿಷ್ಠಪಕ್ಷ ಗಳಿಸಿದ ಹಣದ ವೆಚ್ಚಮಾಡಿ ಇನ್ನೊಬ್ಬರನ್ನು ಕೆಲಸದಲ್ಲಿ ತೊಡಗಿಸುತ್ತಾರೆ." ಇದೇ ರೀತಿ ವಿಚಾರ ಮಾಡಿ ಹಿಂದಿನ ಕಾಲದಲ್ಲಿ ಬರಗಾಲ ಬಿದ್ದಾಗ ಸರಕಾರವು ಕಟ್ಟಡ ನಿರ್ಮಾಣ ಮುಂತಾದ ಕೆಲಸ ಪ್ರಾರಂಭ ಮಾಡಿ ಜನರಿಗೆ ಕೆಲಸ ಕೊಡುತ್ತಿತ್ತು. ಲಖನೌದ ಇಮಾಮ ವಾಡೆ ನಿರ್ಮಾಣ ಮಾಡುವಾಗ ಇದೇ ರೀತಿ ವ್ಯವಸ್ಥೆಯಿತ್ತು, ಹಗಲೆಲ್ಲ ಗೋಡೆ ಕಟ್ಟುತ್ತಿದ್ದರು, ರಾತ್ರಿ ಅವುಗಳನ್ನು ಕೆಡವುತ್ತಿದ್ದರು ಎಂದು ಹೇಳಲಾಗುತ್ತದೆ. ನಾಚಿಕೆಯಿಂದಾಗಿ ಹಗಲು ಕೆಲಸ ಮಾಡಲಾರದವರು, ರಾತ್ರಿ ಇಟ್ಟಿಗೆ ಕೀಳುವ ಕೆಲಸವನ್ನು ಮಾಡುತ್ತಿದ್ದರು. ವ್ಯಾಪಕವಾದ ಸಾರ್ವದೇಶಿಕ ದೃಷ್ಟಿಯಿಂದ ನವೀಕರಣದ ಯೋಜನೆ ಪೂರ್ಣ ಕೆಲಸದ ವ್ಯವಸ್ಥೆಯ ವಿರುದ್ಧವಾದರೆ ಯೋಗ್ಯವೆಂದು ಹೇಳಲು ಸಾಧ್ಯವಿಲ್ಲ. ಆದರೆ ನಿರುದ್ಯೋಗದ ಭಯದ ಕಾರಣದಿಂದ ನಾವು ಹಳೆಯ ಯಂತ್ರಗಳಿಗೇ ಅಂಟಿಕೊಂಡಿರಲಾಗದು ಎಂಬುದೂ ನಿಜವೇ ಆಗಿದೆ. ವಿಶೇಷವಾಗಿ ಚಿಕ್ಕ ಮತ್ತು ಸ್ವತಂತ್ರ ಉದ್ಯಮಗಳಲ್ಲಿ ಹೊಸಯಂತ್ರದ ಪ್ರವೇಶಕ್ಕೆ ಹೆಚ್ಚು ಅವಕಾಶವಿದೆ. ಅಲ್ಲಿ ನಿರುದ್ಯೋಗದ ಭಯವಿಲ್ಲ. ಮೇಲಾಗಿ ಈ ಪ್ರಕಾರ ಉತ್ಪಾದಕರ ಸಾಮರ್ಥ್ಯ ಹಾಗೂ ಆದಾಯಗಳಲ್ಲಿ ವೃದ್ಧಿ ಆಗಬಲ್ಲದು.

**ಸಮಗ್ರದೃಷ್ಟಿಯ ವೈಜ್ಞಾನಿಕತೆ**

ಕಾಣದ ಅರೆನಿರುದ್ಯೋಗವನ್ನು ದೂರ ಮಾಡುವುದು ಒಳ್ಳೆಯದು, ಆದರೆ ಅದು ಎಷ್ಟು ಪ್ರಮಾಣದಲ್ಲಿ ಇದೆ ಎಂಬುದನ್ನು ಅಂದಾಜು ಮಾಡುವುದು ಕಷ್ಟ. ಸಾಮಾನ್ಯವಾಗಿ ಭಾರತದ ಯಾವುದೇ ಕಾರ್ಮಿಕನ ಉತ್ಪಾದನೆಯ ಆದಾಯವನ್ನು ಪಶ್ಚಿಮದ ದೇಶಗಳ ಜೊತೆ ತುಲನೆಮಾಡಿ ಇಂದು ಎಷ್ಟು ಅಂತರವಿದೆ ಎಂಬ ಆಧಾರದ ಮೇಲೆ ಅರೆ ನಿರುದ್ಯೋಗವನ್ನು ನಿರ್ಧರಿಸಲಾಗುತ್ತಿದೆ. ವಾಸ್ತವವಾಗಿ ಇಂಥ ತುಲನೆಯನ್ನು ಸಮಾನ ಪರಿಸ್ಥಿತಿಗಳಲ್ಲಿ ಕೆಲಸ ಮಾಡುವ ವ್ಯಕ್ತಿಯ ಸರಾಸರಿ ಮತ್ತು ಉತ್ಪಾದನೆಯೊಡನೆ ಮಾಡಬೇಕು. ಪಶ್ಚಿಮದಲ್ಲಿ ಶ್ರಮ ಮಾಡುವುದು

ಕಡಿಮೆಯಾದ್ದರಿಂದ ಪ್ರತಿವ್ಯಕ್ತಿಯ ಗರಿಷ್ಠ ಉತ್ಪಾದನೆಯೇ ಅವರ ಏಕಮೇವ ಗುರಿಯಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಯಾವುದೇ ದೇಶದಲ್ಲಿಯೂ ದುರ್ಲಭವಾದ ಜ್ಞಾನದ ಗರಿಷ್ಠ ಬಳಕೆಯೇ ಅರ್ಥ ಉತ್ಪಾದನಾ ವಿಧಾನದ ಆಧಾರವಾಗಿರುತ್ತದೆ. ನಮ್ಮಲ್ಲಿ ಬಂಡವಾಳದ ಕೊರತೆಯಿದೆ. ಹಾಗಾಗಿ ಬಂಡವಾಳದ ಪ್ರತಿಯೊಂದು ಘಟಕದ ಗರಿಷ್ಠ ಉತ್ಪಾದನೆಯನ್ನು ಪಡೆಯಬೇಕಾಗಿದೆ. ನಾವು ಸರ್ವಾಂಗೀಣ ದೃಷ್ಟಿಯಿಂದ ವಿಚಾರವಮಾಡಿ ಒಂದು ಸ್ತರವನ್ನು ಹುಡುಕಿಕೊಳ್ಳಬೇಕಾಗಿದೆ. ಅದು ಎಲ್ಲ ಉತ್ಪಾದನಾ ಉಪಕರಣಗಳ ಸಮುಚ್ಚಯದ ಗರಿಷ್ಠ ಉಪಯೋಗ. ಈ ವಿಚಾರದಿಂದ ಕೇವಲ ಯಂತ್ರ ಸಾಮಗ್ರಿಗಳಲ್ಲಷ್ಟೇ ಅಲ್ಲ, ಉತ್ಪಾದನಾ ಪದ್ಧತಿಯಲ್ಲಿಯೂ ಬೇರೆ ಪ್ರಕಾರದ ಬದಲಾವಣೆ ಮಾಡಿಯೂ ನಾವು ಉತ್ಪಾದಕತೆಯನ್ನು ಹೆಚ್ಚಿಸಬಹುದು. ನಿರ್ವಹಣೆ ಹಾಗೂ ವ್ಯವಸ್ಥೆ, ಬಂಡವಾಳ ಹಾಗೂ ಮಾರುಕಟ್ಟೆಯನ್ನೂ ವೈಜ್ಞಾನಿಕಗೊಳಿಸಬೇಕಾಗಿದೆ. ಕೆಲಸ ಮಾಡುವ ಸ್ಥಾನ ಹಾಗೂ ಸಮಯ, ಪದ್ಧತಿ ಮತ್ತು ಪ್ರಕ್ರಿಯೆ ಇವುಗಳಲ್ಲಿ ಸುಧಾರಣೆಗೆ ಬಹಳ ಅವಕಾಶವಿದೆ. ಜಪಾನ್ ಈ ರೀತಿಯಿಂದಲೇ ಉತ್ಪಾದನೆಯಲ್ಲಿ ಭಾರೀ ವೃದ್ಧಿಸಾಧಿಸಿತು. ಯಾವುದೋ ಒಂದು ಅಣೆಕಟ್ಟು ನಿರ್ಮಾಣದಲ್ಲಿ ಒಂದು ಸಾವಿರ ಕೆಲಸಗಾರರ ಬದಲಿಗೆ ಯಂತ್ರಗಳನ್ನು ಬಳಸಿ ಖರ್ಚು ಕಡಿಮೆ ಮಾಡುವುದರ ಬದಲು, ಅತಿಯಾದ ಖರ್ಚಿನ ನಿರ್ವಹಣೆಯಲ್ಲಿಯೂ ಉಳಿತಾಯ ಮಾಡಬಹುದು. ಯೋಜನಾ ಆಯೋಗದ ಅಂದಾಜಿನಂತೆ ಎರಡನೆಯ ಪಂಚವಾರ್ಷಿಕ ಯೋಜನೆಯ ಒಳಗಡೆ ೧೫೦೦ ಕೋಟಿ ರೂಪಾಯಿಗಳ ಕಟ್ಟಡ ನಿರ್ಮಾಣ ಕಾರ್ಯಕ್ರಮದಲ್ಲಿ ಕನಿಷ್ಠಪಕ್ಷ ೧೦೦ ಕೋಟಿ ರೂಪಾಯಿಗಳ ಉಳಿತಾಯವನ್ನು ಸಹಜವಾಗಿ ಮಾಡಬಹುದಾಗಿದೆ. ಉದ್ಯೋಗಗಳಲ್ಲಿ ಈ ತೆರನ ಉಪಾಯಗಳಿಂದ ಕೊಂಡುಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡದೆ ಉತ್ಪಾದನೆಯ ಖರ್ಚನ್ನು ಕಡಿಮೆ ಮಾಡಬಹುದು.

**ಶಕ್ತಿ**

ಈಗ ಅಣುಶಕ್ತಿ ಹಾಗೂ ಸೌರಶಕ್ತಿಯ ಚರ್ಚೆಯನ್ನು ಮಾಡುತ್ತಿದ್ದರೂ, ಮನುಷ್ಯ, ಪ್ರಾಣಿ, ಉಗಿ, ಎಣ್ಣೆ, ಹಾಗೂ ವಿದ್ಯುತ್ ಇವೇ ಯಂತ್ರಗಳನ್ನು ಚಲಾಯಿಸುವ ಪ್ರಮುಖ ಶಕ್ತಿಗಳಾಗಿವೆ. ನೀರು ಮತ್ತು ಗಾಳಿಯ ಉಪಯೋಗ ಕೂಡ ಅಷ್ಟೊಂದಿಲ್ಲ. ನಿಜ, ನೀರಿನಿಂದ ವಿದ್ಯುತ್ ತಯಾರಿಸಿ ಅದರ ಬಳಕೆಯನ್ನು ಖಂಡಿತವಾಗಿ ಮಾಡಬಹುದು. ಭಾರತದಲ್ಲಿ ಇನ್ನೂ ಪೆಟ್ರೋಲಿನ ಶೋಧ ನಡೆದಿದೆ. ಆದರೆ ಉಳಿದ ಶಕ್ತಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ದೊರಕಿಸಿಕೊಳ್ಳಬಹುದು. ಯಾವುದನ್ನು ಎಲ್ಲಿ ಬಳಸಬೇಕು ಎಂಬ ಪ್ರತಿಯೊಂದು ವಿಷಯದ ಬಗ್ಗೆ ನಾವು ಬೇರೆಯಾಗಿ



ನಿರ್ಣಯಿಸಬೇಕು. ಯಾವುದಾದರೊಂದು ನಿಯಮ ತಯಾರಿಸಿ ಅದರ ಪರವಾಗಿ ನಿರ್ಣಯ ಕೊಡುವುದು ಒಳ್ಳೆಯದಲ್ಲ. ಇಂದಿಗೂ ಮನುಷ್ಯ ಶಕ್ತಿಯ ಉಪಯೋಗವಾಗುವಂಥ ಬಹಳಷ್ಟು ಉದ್ಯೋಗಗಳಿವೆ. ಕರಕುಶಲ ಕಲೆಗಳ ವಲಯದಲ್ಲಿ, ಉಪಕರಣಗಳನ್ನು ಚಲಾಯಿಸುವಲ್ಲಿ ವಿದ್ಯುತ್ತನ್ನು ಉಪಯೋಗಿಸಲಾಗುವುದಿಲ್ಲ. ಆದರೂ ಕೂಡ ಸಾಕಷ್ಟು ದೊಡ್ಡ ಕ್ಷೇತ್ರ ಇದ್ದರೆ, ಅದು ಕೈಮಗ್ಗದ ಸಹಾಯವನ್ನು ಪಡೆಯುವುದರಲ್ಲಿದೆ. ಮನುಷ್ಯ ಶಕ್ತಿಯೊಂದಿಗೆ ಇಂದು ವಿದ್ಯುತ್ ಹಾಗೂ ಉಗಿಯಿಂದ ನಡೆಸುವ ಯಂತ್ರಗಳನ್ನು ನಡೆಸಲಾಗುತ್ತಿದೆ. ಉದಾಹರಣೆಗೆ ಭತ್ತ ಒಕ್ಕುವುದು, ಹಿಟ್ಟುಮಾಡುವುದು, ಔಷಧಗಳನ್ನು ತಯಾರಿಸುವುದು, ಎಣ್ಣೆ ತೆಗೆಯುವುದು ಮುಂತಾದವು. ಆದರೆ ಈ ಯಂತ್ರಗಳ ಪ್ರಯೋಗದಲ್ಲಿ ನಾವು ಎಷ್ಟೊಂದು ಉಪಯೋಗಿ ತತ್ವಗಳನ್ನು ನಷ್ಟಗೊಳಿಸುತ್ತಿದ್ದೇವೆಯೆಂಬುದನ್ನು ನಾವು ವಿಚಾರಮಾಡಬೇಕು. ಭಾರ ಹೊರಲು, ಧಾನ್ಯ ತುಳಿಸಲು, ಗಾಣ ತಿರುಗಿಸಲು ಪ್ರಾಣಿಶಕ್ತಿಯ ಸ್ಥಾನದಲ್ಲಿ ಯಂತ್ರಶಕ್ತಿಯನ್ನು ಕೆಲಸಕ್ಕೆ ತರಬಹುದಾಗಿದೆ. ಆದರೆ ನಾವು ಅವುಗಳ ಮಿತಿಯನ್ನು ಅರಿತಿರಬೇಕು. ನಮ್ಮ ಪಶುಸಂಪತ್ತಿನ ಗರಿಷ್ಠ ಬಳಕೆ ಮಾಡಿದ ನಂತರವೇ ನಾವು ಪರ್ಯಾಯಗಳ ಕಡೆಗೆ ಸಾಗಬೇಕು.

ಈ ಮೇಲೆ ಹೇಳಿದ ಮಿತಿಗಳೊಳಗೆ ನಮ್ಮ ಉದ್ಯೋಗೀಕರಣವು ವಿಶೇಷವಾಗಿ ವಿದ್ಯುತ್ ಶಕ್ತಿಯನ್ನು ಆಧಾರವಾಗಿಟ್ಟುಕೊಂಡು ನಡೆಯಬಹುದಾಗಿದೆ. ಜಲವಿದ್ಯುತ್ ಉತ್ಪಾದನೆಯ ಅನೇಕ ಯೋಜನೆಗಳನ್ನು ಸರಕಾರ ಕೈಗೆತ್ತಿಕೊಂಡಿದೆ. ಅವುಗಳನ್ನು ಮತ್ತಷ್ಟು ಮುಂದುವರಿಸಬಹುದು. ಸಗಣಿಯಿಂದ ಗ್ಯಾಸ್ ಹಾಗೂ ಎತ್ತುಗಳ ಶ್ರಮದಿಂದ ವಿದ್ಯುತ್ ತಯಾರಿಸುವ ಪ್ರಯೋಗಗಳೂ ನಡೆದಿವೆ. ಅವುಗಳ ವಿಕಾಸದ ಸಾಧ್ಯತೆಗಳ ಹುಡುಕಾಟ ನಡೆಸಬಹುದು. ಆದರೆ ಹಳ್ಳಿ ಹಳ್ಳಿಗಳಲ್ಲಿ, ಚಿಕ್ಕ ಚಿಕ್ಕ ಕಸಬಾಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡಲು ಹೆಚ್ಚಿನ ಒತ್ತನ್ನು ನಾವು ಕೊಡಬೇಕು. ಮುಖ್ಯವಾಗಿ ಇವನ್ನೆಲ್ಲ ಔದ್ಯೋಗಿಕ ಕ್ಷೇತ್ರಗಳಲ್ಲಿ ಬಳಕೆ ಮಾಡುವಂತಾಗಬೇಕು. ಇಂದು ವಿದ್ಯುತ್ತಿನಿಂದ ರೈಲು ನಡೆಸುವ ಯೋಜನೆಗಳನ್ನು ತಯಾರಿಸಲಾಗುತ್ತಿದೆ. ದೇಶದಲ್ಲಿ ಕಲ್ಲಿದ್ದಲನ್ನು ಉಳಿಸುವ ದೃಷ್ಟಿಯಿಂದ ಇದು ಅವಶ್ಯಕವಾದದ್ದೇ ಆಗಿದೆ. ಆದರೆ ಉದ್ಯೋಗಕ್ಕೆ ಬೇಕಾಗುವ ವಿದ್ಯುತ್ತಿನ ಬೇಡಿಕೆಯನ್ನು ಪೂರ್ಣ ಮಾಡದೆಯೇ ಅದನ್ನು ರೈಲು ಓಡಿಸಲು ಬಳಸಿದರೆ ಅದು ತಪ್ಪು ಆರ್ಥಿಕ ನೀತಿಯಾಗುತ್ತದೆ.

# ೮. ಬಂಡವಾಳ ಹಾಗೂ ವ್ಯವಸ್ಥಾಪನೆ

## ಉಳಿತಾಯ ಯೋಜನೆ

ಆರ್ಥಿಕ ವಿಕಾಸ ಹಾಗೂ ಉದ್ಯೋಗೀಕರಣದಲ್ಲಿ ಬಂಡವಾಳದ ಪ್ರಶ್ನೆಯು ತುಂಬಾ ಮಹತ್ವದ್ದಾಗಿದೆ. ಬಂಡವಾಳಕ್ಕಾಗಿ ಉಳಿತಾಯ ಬೇಕಾಗಿದೆ. ಇದು ಒಂದು ರೀತಿಯಲ್ಲಿ ಉತ್ಪಾದನೆ ಹಾಗೂ ಬಳಕೆಯ ನಡುವೆ ಅಂತರವಿದ್ದ ಹಾಗೆ. ರಾಷ್ಟ್ರೀಯ ದೃಷ್ಟಿಯಿಂದ ನೋಡಿದರೆ, ಉಪಭೋಗದ ಸ್ತರವು ಬಹಳ ಕೆಳಗೆ ಇರುವ ದೇಶದಲ್ಲಿ ಉಳಿತಾಯವು ಸಾಧ್ಯವಿಲ್ಲ. ಉಳಿತಾಯವಿಲ್ಲದೆ ಉತ್ಪಾದನೆ ಮುಂದುವರಿಯುವುದಿಲ್ಲ. ಕಡಿಮೆ ಉತ್ಪಾದನೆಯಿಂದ ಹೆಚ್ಚಿನ ಉಪಭೋಗ ಸಾಧ್ಯವಾಗುವುದಾದರೂ ಹೇಗೆ? ಇದೊಂದು ಬಗೆಯ ಸರಪಳಿಯಾಗಿ ನಡೆಯುತ್ತಿರುತ್ತದೆ. ಇದರಿಂದ ಬಿಡುಗಡೆ ಹೊಂದುವ ಎರಡು ದಾರಿಗಳನ್ನು ಸಾಮಾನ್ಯವಾಗಿ ಸಲಹೆ ಮಾಡಲಾಗುತ್ತಿದೆ. (೧) ರಾಷ್ಟ್ರೀಯ ಆದಾಯದ ಅಸಮಾನ ವಿತರಣೆಯ ಮೂಲಕ ಕೆಲವು ಜನರಲ್ಲಿ ಉಳಿಸುವ ಸಾಮರ್ಥ್ಯವನ್ನು ಹುಟ್ಟಿಸುವುದು. (೨) ವಿದೇಶಗಳಿಂದ ಬಂಡವಾಳವನ್ನು ಆಮದು ಮಾಡಿಕೊಳ್ಳುವುದು. ಅಸಮಾನ ವಿತರಣೆಯಿಂದ ಸಮಾಜದಲ್ಲಿ ಅಂತರ ಉತ್ಪನ್ನವಾಗದಿರಲು ರಾಜ್ಯದ ಕೈಯಲ್ಲೇ ಬಂಡವಾಳದ ನಿರ್ಮಾಣ ಹಾಗೂ ಬಳಕೆಯ ಅಧಿಕಾರವನ್ನು ಒಪ್ಪಿಸಲಾಯಿತು. ಅದು ಕರ ಆಕರಣೆ ಬೆಲೆ ಹಾಗೂ ಹಣಕಾಸು ನೀತಿಯ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಆದಾಯದಲ್ಲಿ ಅವರ ನ್ಯಾಯೋಚಿತ ಅಂಶದಿಂದ ವಂಚಿತರಾಗಿಸುವುದು. ನ್ಯಾಯೋಚಿತವಾದ ಬಂಡವಾಳಶಾಹಿ ಪದ್ಧತಿಯಲ್ಲಿ ಕೆಲವು ವ್ಯಕ್ತಿಗಳು ಬೆಲೆ, ಕೂಲಿ, ಕ್ರೆಡಿಟ್‌ಗೆ ಸಂಬಂಧಿಸಿದ ನೀತಿಗಳು ಮತ್ತು ಶುಲ್ಕ ಹಾಗೂ ಸಂಸ್ಥೆಗಳ ನಿಯಂತ್ರಣದ ಮೂಲಕ ಸಾಮಾನ್ಯ ಜನರ ಗಳಿಕೆಯ ಒಂದು ಭಾಗವನ್ನು ತಮ್ಮ ಬಳಿ ಇಟ್ಟುಕೊಂಡು ಅದನ್ನು ಬಂಡವಾಳದ ರೀತಿಯಲ್ಲಿ ತೊಡಗಿಸುತ್ತಾರೆ. ಎರಡೂ ಪದ್ಧತಿಗಳ ಮೂಲಕ ದೇಶದ ವಿಕಾಸವಾದರೂ, ಬಂಡವಾಳದ ಒಡೆತನದ ಕಾರಣದಿಂದ ಆರ್ಥಿಕ ಸಾಮರ್ಥ್ಯವು ರಾಜ್ಯ ಅಥವಾ ಉದ್ಯಮಿಗಳ ಕೈಯಲ್ಲಿ ಕೇಂದ್ರೀಕೃತವಾಗುತ್ತದೆ. ಜೊತೆಗೆ ವ್ಯಕ್ತಿಯು ಬಳಕೆಯನ್ನು ಅನಿವಾರ್ಯವಾಗಿ ಕಡಿಮೆ ಮಾಡಬೇಕಾಗುವುದರಿಂದ ಅವನು ಒಳಗೊಳಗೇ ಕುದಿಯುತ್ತಿರುತ್ತಾನೆ. ಅವನ ಮನಸ್ಸು ಒಂದು ಬಗೆಯ ಒತ್ತಡವನ್ನು ಅನುಭವಿಸುತ್ತದೆ. ಈ ಕಷ್ಟದಿಂದ ಬಚಾವಾಗುವ



ಏಕೈಕ ಮಾರ್ಗವೆಂದರೆ ಸಾಮಾನ್ಯ ನಾಗರಿಕನಲ್ಲಿ ಉಳಿತಾಯದ ಸಾಮರ್ಥ್ಯ ಹಾಗೂ ಇಚ್ಛೆಯನ್ನು ಹುಟ್ಟಿಸುವುದು. ರಾಷ್ಟ್ರೀಯ ಆದಾಯದ ಅಭಿವೃದ್ಧಿಯಲ್ಲಿ ಅವನನ್ನು ಸಹಭಾಗಿಯನ್ನಾಗಿ ಮಾಡಬೇಕು. ಈ ದಿಸೆಯಲ್ಲಿ ಸಂಯಮದ ಭಾವವು ಭಾರೀ ಕೆಲಸ ಮಾಡುತ್ತದೆ. ಭಾರತೀಯ ಸಂಸ್ಕೃತಿ ಇದರಲ್ಲಿ ವಿಶೇಷರೂಪದಲ್ಲಿ ಸಹಾಯ ಮಾಡುತ್ತದೆ. ಆದರೆ ನಾವು ರಾಜಕೀಯ ಕಾರಣಗಳನ್ನು ಹಾಗೂ ಪಶ್ಚಿಮದ ಪರಿಕಲ್ಪನೆಗಳನ್ನು ಅನುಕರಣ ಮಾಡಿ ಬಳಕೆಯ ಸೆಳೆತವನ್ನು ನಾವು ಬಹಳ ವೇಗವಾಗಿ ಹುಟ್ಟಿಸಿದ್ದೇವೆ. ಪಶ್ಚಿಮದ ಸಮಸ್ಯೆಯು ಬಂಡವಾಳ ಹಾಗೂ ಉತ್ಪಾದನೆಯ ಸಾಧನಗಳ ಶೋಧದ್ದಲ್ಲ, ಬದಲಿಗೆ ಅವುಗಳ ಸಂಪೂರ್ಣ ಉಪಯೋಗ ಆಗುತ್ತಿರಬೇಕೆಂಬುದು. ನಮ್ಮೆದುರಿಗಿರುವ ಮೊದಲ ಪ್ರಶ್ನೆಯೆಂದರೆ ಬಂಡವಾಳ ಹಾಗೂ ಸಾಧನಗಳನ್ನು ಒಗ್ಗೂಡಿಸುವುದು, ಅದರಿಂದ ತನ್ನ ಬೇಡಿಕೆಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯವನ್ನು ಒಗ್ಗೂಡಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಇಲ್ಲಿ ಕೀನ್ಸನ ಅರ್ಥಶಾಸ್ತ್ರವು ಪರಿಣಾಮಕಾರಿ ಆಗಲಾರದು.

## ಬಂಡವಾಳದ ದಾರಿ

ಸಂಯಮದಿಂದ ಉಳಿಸಿದ್ದು ಅದರ ಮುಂದಿನ ಉತ್ಪಾದನೆಗೆ ಬಳಕೆಯಾಗದಿದ್ದರೆ ಅದು ಬಂಡವಾಳವಾಗುವುದಿಲ್ಲ. ಬಂಡವಾಳ ಹೂಡಿಕೆಯ ಹಲವು ದಾರಿಗಳು ಉಳಿತಾಯ ಮಾಡುವವನ ಎದುರು ತೆರೆದುಕೊಂಡಿದ್ದರೆ, ಅವನು ಹೆಚ್ಚಿಗೆ ಉಳಿಸಲು ಪ್ರಯತ್ನಮಾಡುತ್ತಾನೆ. ಇದಕ್ಕೆ ಅವಶ್ಯಕವಾದದ್ದು ವ್ಯಾಪಾರ ಮತ್ತು ಕೈಗಾರಿಕೆಗಳ ವ್ಯಾಪಕ ಪ್ರಸಾರ. ಸಾಲದ ಉತ್ತಮ ವ್ಯವಸ್ಥೆಯದು. ಕೃಷಿಕನ ಆದಾಯವನ್ನು ನಾವು ಹೆಚ್ಚಿಸಬಯಸಿದರೆ, ಅದರ ಸದುಪಯೋಗದ ವ್ಯವಸ್ಥೆಯನ್ನೂ ಜೊತೆಯಲ್ಲೇ ಮಾಡಬೇಕು. ಇಲ್ಲವಾದರೆ ಅವನು ಮೊಕದ್ದಮೆಗಳು, ಔತಣಗಳು, ಹಾಗೂ ಪ್ರತಿಷ್ಠೆಗೆ ಸಂಬಂಧಿಸಿದ ಅನವಶ್ಯಕ ಕೆಲಸಗಳಲ್ಲಿ ಖರ್ಚು ಮಾಡಿಬಿಡುತ್ತಾನೆ. ಅಥವಾ ಬಂಗಾರ, ಜಮೀನು ಆಸ್ತಿ ಖರೀದಿಸುವ ಕೆಲಸ ಮಾಡುತ್ತಾನೆ. ದೇಶದಲ್ಲಿ ಬಂಗಾರದ ಬೇಡಿಕೆ ಹಾಗೂ ಅದರ ಕಳ್ಳವ್ಯಾಪಾರದಿಂದ ಸಿದ್ಧವಾಗುವುದೇನೆಂದರೆ, ಹಣ ಇರುವವರು ಅದರ ಹೂಡಿಕೆಯನ್ನು ಸರಿಯಾದ ದಾರಿಯಲ್ಲಿ ಮಾಡುವುದಿಲ್ಲ. ಚಿಕ್ಕ ಉದ್ಯೋಗಗಳು ಸ್ವಯಂ ಸಂಪನ್ಮೂಲ ಸಂಗ್ರಹದಲ್ಲಿ ಬಹುದೊಡ್ಡ ಕೊಡುಗೆ ನೀಡುತ್ತವೆ. ಸರಕಾರದ ಯಾವುದೇ ಹೇಳಬಹುದಾದ ಸಹಾಯ ಇಲ್ಲದೆ ಹೋದರೂ ದೇಶದಲ್ಲಿನ ಚಿಕ್ಕ ಚಿಕ್ಕ ಉದ್ಯಮ ವ್ಯಾಪಾರಗಳು ರಾಷ್ಟ್ರೀಯ ಆದಾಯಕ್ಕೆ ನೀಡುತ್ತಿರುವ ಕೊಡುಗೆ ಯಾವಾಗಲೂ ದೊಡ್ಡದು. ಕೃಷಿಯ ಆದಾಯದ ಜೊತೆಯಲ್ಲಿನ ಅವುಗಳ ಸಂಬಂಧವು ಈ ಮುಂದಿನ ಪಟ್ಟಿಯಿಂದ ಸ್ಪಷ್ಟವಾಗುತ್ತದೆ.

**ಕೆಲವು ಔದ್ಯೋಗಿಕ ಮೂಲಗಳಿಂದ ಭಾರತದ ರಾಷ್ಟ್ರೀಯ ಆದಾಯ**
**(ರೂ. ಕೋಟಿಗಳಲ್ಲಿ)**

| ವರ್ಷ | ಕೃಷಿ–ಪಶುಪಾಲನೆ ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸ | ಕಾರಖಾನೆ | ಚಿಕ್ಕ ಉಪಕ್ರಮ |
|---|---|---|---|
| ೧೯೫೫–೫೬ | ೪೪೧೦ | ೭೮೦ | ೯೭೦ |
| ೧೯೫೪–೫೫ | ೪೨೩೦ | ೭೫೦ | ೯೬೦ |
| ೧೯೫೩–೫೪ | ೫೨೦೦ | ೬೯೦ | ೯೮೦ |
| ೧೯೫೨–೫೩ | ೪೭೧೦ | ೬೪೦ | ೯೭೦ |
| ೧೯೫೧–೫೨ | ೪೯೧೦ | ೬೪೦ | ೯೫೦ |
| ೧೯೫೦–೫೧ | ೪೭೮೦ | ೫೫೦ | ೯೧೦ |

ನಮಗೆ ಗೊತ್ತು, ಚಿಕ್ಕ ಕ್ರಮಗಳಿಂದ ವಾಸ್ತವಿಕ ಆದಾಯ ಸಂಗ್ರಹಿಸುವುದು ಕಷ್ಟದಾಯಕ. ಅವುಗಳಲ್ಲಿ ಹಲವು ಅಂಕಿಸಂಖ್ಯಾತಜ್ಞರು ತಲುಪಲಾರದ ಕ್ಷೇತ್ರಗಳಾಗಿವೆ.

**ಬಂಡವಾಳದ ಸರಿಯಾದ ಉಪಯೋಗ**

ಇಂದು ನಾವು ದೊಡ್ಡ ದೊಡ್ಡ ಉದ್ಯಮ–ಕೈಗಾರಿಕೆಗಳ ಪರವಾಗಿ ನಿರ್ಣಯ ತೆಗೆದುಕೊಂಡು ಈ ಚಿಕ್ಕ ಉದ್ಯೋಗಗಳನ್ನು ನಮ್ಮ ಭಾಗ್ಯದ ಮೇಲೋ, ಹಿಂದುಳಿದದ್ದು ಎಂದು ಹೇಳಿ ನಾಶಮಾಡಲು ಯೋಗ್ಯವಾದದ್ದು ಎಂದು ತಿಳಿದು ಬಿಟ್ಟು ಬಿಟ್ಟರೆ ನಿಶ್ಚಯವಾಗಿಯೂ ದೇಶದ ಬಹುದೊಡ್ಡ ಬಂಡವಾಳ ವ್ಯರ್ಥವಾಗಿ ಹೊರಟುಹೋಗುತ್ತದೆ. ಮತ್ತೆ ಮರುಸ್ಥಾಪನೆ (Replacement), ಹೊಸದುಗೊಳಿಸುವುದು (Rationalisation) ಇವುಗಳ ಹೆಸರಿನಲ್ಲಿ ಸ್ಥಾನಪಲ್ಲಟಗೊಳಿಸುವುದು (Displacement) ಹಾಗೂ ಬಂಡವಾಳ ಹಿಂತೆಗೆತ (Decapitalisation) ಯೋಗ್ಯವಾಗುವುದಿಲ್ಲ.

ಭಾರತದಲ್ಲಿ ಬಂಡವಾಳದ ಕೊರತೆ ಇರುವುದರಿಂದ ಬಂಡವಾಳ ಪ್ರಧಾನವಲ್ಲದಿರುವಂಥ ಹಾಗೂ ಶ್ರಮ ಪ್ರಧಾನವಾಗಿರುವ ಉದ್ಯಮಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಶ್ರೀ ಪಿ.ಎಸ್. ಲೋಕನಾಥನ್ ಅವರು ೧೯೪೩ ರಲ್ಲಿ ಒಂದು ನಿಷ್ಕರ್ಷೆಯನ್ನು ಪ್ರಕಟಿಸಿದ್ದರು. ೧೦೦ ರೂಪಾಯಿಯ ಬೆಲೆಯ ಬಟ್ಟೆ ಉತ್ಪಾದನೆ ಮಾಡಲು ದೊಡ್ಡ ಮಿಲ್‌ಗಳಲ್ಲಿ ೧೮೪೬ ರೂ ಹಾಗೂ ೧.೫೪ ಕಾರ್ಮಿಕ, ಸ್ವಯಂ ಚಾಲಿತ ಮಗ್ಗದಲ್ಲಿ ೧೧೨೫ ರೂ. ಹಾಗೂ ೧೨.೫ ಕಾರ್ಮಿಕರು. ಹಾಗೂ ಕೈಮಗ್ಗದಲ್ಲಿ ೭೭೮ ರೂ. ಹಾಗೂ ೨೨.೨ ಕಾರ್ಮಿಕರು ತಗಲುತ್ತಾರೆ. ನಿಶ್ಚಯವಾಗಿಯೂ ಕೈಮಗ್ಗ ಹಾಗೂ ಸ್ವಯಂಚಾಲಿತ ಮಗ್ಗ ನಮಗೆ ಹೆಚ್ಚು



ಉಪಯುಕ್ತವಾಗಿವೆ. ಸ್ವಯಂಚಾಲಿತ ಮಗ್ಗವನ್ನು ಲಕ್ಷ್ಯವಿಟ್ಟು ನಡೆಸಿದರೆ ನಿಧಾನವಾಗಿ ಕೈಮಗ್ಗದಿಂದ ಅದಕ್ಕೆ ಬದಲಾಯಿಸಬಲ್ಲೆವು. ಬೇರೆ ಉದ್ಯೋಗಗಳಿಗೆ ಸಂಬಂಧಿಸಿದಂತೆ ಕೂಡ ದೇಶದ ಹಣಕಾಸು ಪರಿಸ್ಥಿತಿಯನ್ನು ನೋಡಿದರೆ ಇದೇ ನೀತಿಯನ್ನು ಅನುಸರಿಸಬೇಕಾಗುವುದು.

**ವಿದೇಶೀ ಬಂಡವಾಳ**

ದೇಶದಲ್ಲಿನ ಬಂಡವಾಳದ ಕೊರತೆಯನ್ನು ವಿದೇಶೀ ಬಂಡವಾಳದಿಂದ ನೀಗಿಸುವ ಸಲಹೆ ಕೂಡ ಕೇಳಿಬರುತ್ತಿದೆ ಮತ್ತು ನಾವು ಇಂದು ಭಾರೀ ಪ್ರಮಾಣದಲ್ಲಿ ಹೊರಗಿನಿಂದ ವಿಭಿನ್ನ ರೂಪದಲ್ಲಿ ಬಂಡವಾಳವನ್ನು ತರಿಸಿಕೊಳ್ಳುತ್ತಿದ್ದೇವೆ. ವಿದೇಶೀ ಬಂಡವಾಳದ ರಾಜನೈತಿಕ ಮಗ್ಗುಲನ್ನು ಬಿಟ್ಟರೂ, ಆರ್ಥಿಕ ದೃಷ್ಟಿಯಿಂದಲೂ ಅದು ಒಂದು ಹಂತದವರೆಗೆ ಪ್ರಯೋಜನಕಾರಿ ಆಗಬಹುದು. 'ಬಂಡವಾಳ' ಶಬ್ದದಿಂದ ಸಾಮಾನ್ಯ ಜನರಿಗೆ ನಮಗೆ ಹಣ ಸಿಗುತ್ತದೆ, ನಾವು ನಮಗೆ ಬೇಕಾದಂತೆ ಬಳಸಬಹುದು ಎಂದಷ್ಟೇ ಕಲ್ಪನೆಯಾಗುತ್ತದೆ. ವಾಸ್ತವಿಕವಾಗಿ ಅದು ಹಾಗಲ್ಲ. ವಿದೇಶೀ ಬಂಡವಾಳವನ್ನು ನಾವು ವಿದೇಶದಲ್ಲಿಯೇ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಅದು ಮನೆಯ ಉಳಿತಾಯದ ಪರ್ಯಾಯವಾಗಲಾರದು. ಮನೆಯಲ್ಲಿನ ಉಳಿತಾಯವನ್ನು ನಾವು ಬಂಡವಾಳದ ರೂಪದಲ್ಲಿ ಬಳಸಿದರೆ ಕೇವಲ ಬಂಡವಾಳ ತೊಡಗಿಸಿದ ಉದ್ಯಮಗಳಲ್ಲಷ್ಟೇ ಜನರಿಗೆ ಉದ್ಯೋಗವನ್ನು ಕೊಡುವುದಿಲ್ಲ, ಬದಲಿಗೆ ನಾವು ಬಳಸುವ ಯಂತ್ರಗಳು ಸಾಧನಗಳ ಮೇಲೂ ಬಂಡವಾಳವನ್ನು ಖರ್ಚು ಮಾಡುತ್ತೇವೆ, ಅದನ್ನು ತಯಾರಿಸುವವರಿಗೂ ಉದ್ಯೋಗವನ್ನು ಕೊಡುತ್ತೇವೆ.

**ಔದ್ಯೋಗೀಕರಣದ ಮೇಲೆ ಪ್ರಭಾವ**

ವಿದೇಶೀ ಬಂಡವಾಳ ಮೂರು ರೀತಿಯಿಂದ ದೊರೆಯಬಹುದಾಗಿದೆ: (೧) ಸ್ವತಂತ್ರ ಉದ್ಯಮಿಗಳಿಂದ (೨) ಅಂತಾರಾಷ್ಟ್ರೀಯ ಸಂಸ್ಥೆಗಳಿಂದ (೩) ವಿದೇಶೀ ಸರಕಾರಗಳಿಂದ. ಅವರ ಈ ಸಹಯೋಗ ಸಾಲನೀಡಿಕೆಯಿಂದ ಅಥವಾ ಭಾಗೀದಾರನಾಗುವುದರಿಂದ ಆಗಬಹುದು. ದೇಶದಲ್ಲಿ ಅವರು ಸ್ವತಂತ್ರರೂಪದಲ್ಲಿ ಯಾವುದಾದರೂ ಉದ್ಯಮ ಪ್ರಾರಂಭ ಮಾಡಬಹುದು. ಅಥವಾ ಸರಕಾರಿ ಹಾಗೂ ಖಾಸಗಿ ಕ್ಷೇತ್ರಗಳ ಉದ್ಯಮಿಗಳ ಜೊತೆ ಸಹಯೋಗದಲ್ಲಿ ಕೆಲಸ ಮಾಡಬಹುದು. ಈ ಎಲ್ಲ ಸಂಭವನೀಯ ವಿಕಲ್ಪದಲ್ಲಿ ಆಧಾರಭೂತವಾದ ಸಂಗತಿಯೆಂದರೆ ಯಾವ ಯಂತ್ರಗಳು ಹಾಗೂ ಸಾಧನಗಳ ಮೇಲೆ ನಾವು ಆ ಹಣವನ್ನು ಹೊರಗೆ ಖರ್ಚು ಮಾಡುತ್ತೇವಲ್ಲ, ಅವು ನಮ್ಮ ದೇಶಕ್ಕೆ ಉಪಯೋಗಿಯಾಗಿವೆಯೇ ಇಲ್ಲವೇ ಎಂಬ ನಿರ್ಣಯವನ್ನು ನಾವು ಮಾಡಲಾರೆವು.

ಇಷ್ಟೇ ಅಲ್ಲ, ನಾವು ವಿದೇಶಗಳ ತಾಂತ್ರಿಕತೆಯನ್ನು ಸ್ವೀಕಾರ ಮಾಡಬೇಕಾಗುತ್ತದೆ. ವಿದೇಶೀ ತಜ್ಞ ಹಾಗೂ ಉದ್ಯಮಿ ತನ್ನ ದೇಶದಲ್ಲಿ ಪ್ರಚಲಿತವಿರುವ ಹಾಗೂ ಲಭ್ಯವಿರುವ ತಾಂತ್ರಿಕತೆ ಮತ್ತು ಯಂತ್ರಗಳನ್ನು ಬಳಸಿಕೊಂಡೇ ಇಲ್ಲಿ ಉತ್ಪಾದನೆ ಮಾಡುತ್ತಾರೆ. ಇದು ದೇಶದ ಇಂದಿನವರೆಗಿನ ಔದ್ಯೋಗೀಕರಣವನ್ನು ಕೆಲವು ಹೆಜ್ಜೆ ಮುಂದೆ ನಡೆಸುತ್ತದೆ. ಆದರೆ ಆಳವಾಗಿ ಭದ್ರವಾಗಿರುವ ನೆಲಗಟ್ಟಿನಂಥ ವಿಕಾಸಶೀಲ ಉದ್ಯಮದ ನೆಲಗಟ್ಟನ್ನು ಇಡಲು ಸಾಧ್ಯವಾಗದು. ನಾವು ಚಿಕ್ಕ ಉದ್ಯಮಗಳನ್ನು ನಮ್ಮ ಆಧಾರವನ್ನಾಗಿ ಬಳಸಲು ಬಯಸಿದರೆ ಅದಕ್ಕೆ ವಿದೇಶೀ ಬಂಡವಾಳವೂ ದೊರೆಯಲಾರದು ಮತ್ತು ಅಂಥದಕ್ಕಾಗಿ ಯಾವ ವಿದೇಶೀ ಉದ್ಯಮಿಯೂ ಇಲ್ಲಿಗೆ ಬರಲಾರನು. ಇಲ್ಲಾದರೆ ದೊಡ್ಡ ದೊಡ್ಡ ಉದ್ಯಮಿಗಳ ಗುಂಪೇ ಬರಬಲ್ಲದು, ಯಾಕೆಂದರೆ ಅವರಾಗಲೇ ತಮ್ಮ ಔದ್ಯೋಗಿಕ ಸಾಮ್ರಾಜ್ಯವನ್ನು ಇಲ್ಲಿ ಕಟ್ಟಿ ನಿಲ್ಲಿಸಿದ್ದಾರೆ. ನಾವು ಅವರ ದೇಶದ ಕೆಲವು ಉದ್ದಿಮೆದಾರರು ಅಥವಾ ಸರಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು, ಬಿರ್ಲಾ–ನಫೀಲ್ಡ, ಟಾಟಾ–ಇಂಪೀರಿಯಲ್ ಕೆಮಿಕಲ್, ಟಾಟಾ–ಬೆಂಜ್, ಸೆನ್–ರೆಲೆ ಇತ್ಯಾದಿಗಳು ಖಾಸಗಿ ಕ್ಷೇತ್ರದಲ್ಲಿ ಹಾಗೂ ಸರಕಾರದೊಂದಿಗೆ ಬೇರೆ ಬೇರೆ ಸಹಯೋಗ ಮತ್ತು ಸರಕಾರಗಳ ಉಕ್ಕು ಹಾಗೂ ಅನ್ಯ ಉದ್ಯಮಗಳಲ್ಲಿ ಆಗುತ್ತಿದೆ. ಆದರೆ ಒಂದು ಕಡೆ ಈ ಭಾರೀ ಆಧುನಿಕ ತಂತ್ರಜ್ಞಾನದಿಂದ ಕೂಡಿದ ಹಾಗೂ ಸರ್ವಸಾಧನ ಸಂಪನ್ನ ಉದ್ಯಮ ಮತ್ತು ಇನ್ನೊಂದು ಕಡೆ ಅಂಚಿಗೆ ಬಂದಿರುವ ಘಟಕಗಳು ಹೇಗೆ ಒಟ್ಟೊಟ್ಟಿಗೆ ನಡೆಯಬಲ್ಲವು? ಅಲ್ಲದೆ ಈ ಕ್ಷೇತ್ರಗಳಲ್ಲಿ ಅಷ್ಟೇ ಅಲ್ಲ, ವಿದೇಶೀ ಬಂಡವಾಳವು ಉಪಭೋಗ–ಕ್ಷೇತ್ರಗಳಲ್ಲಿಯೂ ಪ್ರವೇಶ ಮಾಡುತ್ತವೆ. ಇಂದು ಕೂಡ ಸೆಣಬು ಹಾಗೂ ಎಸ್ಟೇಟಗಳ ಮೇಲೆ ಅವುಗಳ ಪ್ರಭುತ್ವ ಇದೆ. ಸಾಬೂನು ಹಾಗೂ ಬೆಂಕಿಪೆಟ್ಟಿಗೆ, ಸಿಗರೇಟ್, ವಿದ್ಯುತ್ ಸಾಮಗ್ರಿಗಳು, ಪೆಟ್ರೋಲಿಯಂ, ರಬ್ಬರ್ ಸಾಮಾನುಗಳು ಇತ್ಯಾದಿಗಳಲ್ಲಿ ಅವರು ಎಷ್ಟೊಂದು ಪ್ರಭಾವವನ್ನು ಸ್ಥಾಪಿಸಿದ್ದಾರೆಂದರೆ, ಚಿಕ್ಕ ಪುಟ್ಟ ಉದ್ಯಮಗಳು ಹಾಗಿರಲಿ, ದೊಡ್ಡ ದೊಡ್ಡ ಉದ್ಯಮಿಗಳೇ ಅವರ ಎದುರು ನಿಲ್ಲಲಾರರು. ಉದ್ಯಮ ರಕ್ಷಣಾ ಆಯೋಗವು (೧೯೪೯–೫೦) ಈ ರೀತಿ ಉಲ್ಲೇಖಿಸಿತ್ತು: ದೊಡ್ಡ ಉದ್ದಿಮಗಳ ಸ್ವರೂಪದ ಕಲ್ಪನೆಯನ್ನು ನಾವು ಮಾಡುತ್ತೇವಲ್ಲ, ಅದು ಅಮೆರಿಕಾ ಮತ್ತು ಇಂಗ್ಲೆಂಡಿನ ಅಧಿಕ ಬಂಡವಾಳ ವಿಸ್ತಾರ ಹಾಗೂ ಭಾರತದ, ಪ್ರಮುಖವಾಗಿ ಗ್ರಾಮೀಣ ಅರ್ಥವ್ಯವಸ್ಥೆಯ ನಡುವೆ ಇರಬಲ್ಲುದು. ಆದರೆ ವಿದೇಶೀ ಬಂಡವಾಳದಿಂದ ತಯಾರಾಗುವ ಔದ್ಯೋಗಿಕ ಸ್ವರೂಪ ಈ ಕಲ್ಪನೆಯನ್ನು ಸಾಕಾರಗೊಳಿಸಬಲ್ಲದೇ?



## ವಿದೇಶೀ ಬಂಡವಾಳದ ಪ್ರಕಾರಗಳು ಹಾಗೂ ಅವುಗಳ ತೌಲನಿಕ ಮಹತ್ವ

ವಿದೇಶೀ ಬಂಡವಾಳವು ಸಾಲ ಹಾಗೂ ಸ್ವಾಮಿತ್ವ ಎರಡೂ ರೂಪದಿಂದ ಬರಬಲ್ಲುದು. ಮೊದಲ ಪ್ರಕಾರದಲ್ಲಿ ಒಂದು ತೊಂದರೆ ಏನಿದೆಯೆಂದರೆ ಅದನ್ನು (೧) ಬಡ್ಡಿಸಹಿತವಾಗಿ ಹಿಂತಿರುಗಿಸಬೇಕಾಗುತ್ತದೆ, ವಿಶೇಷವಾಗಿ ಮಂದಿಯ ಹಾಗೂ ಪ್ರತಿಕೂಲ ಲಿಕ್ವಿಡೇಶನ್ ಆಫ್ ಡೆಟ್ಸ್‌ನ ಸಮತೋಲ ಕಾಯ್ದುಕೊಳ್ಳುವ ದಿನಗಳಲ್ಲಿ ಭಾರೀ ಸಂಕಟವನ್ನು ಹುಟ್ಟು ಹಾಕುತ್ತದೆ. (೨) ಅದರ ಉಪಯೋಗವನ್ನು ಆವಶ್ಯಕ ಸ್ಥಿರ ಬಂಡವಾಳ ಅಥವಾ ಉಪಭೋಗವಸ್ತುಗಳನ್ನು ಪಡೆಯುವಲ್ಲಿ ಮಾಡಿಕೊಳ್ಳದಿದ್ದರೆ ಕೇಂದ್ರೀಯ ಬ್ಯಾಂಕ್‌ನ ವಿದೇಶೀ ನಿಧಿಯಲ್ಲಿ ಹೆಚ್ಚಳ ಮಾಡಿ ಆಂತರಿಕ ಹಣದುಬ್ಬರದ ಪರಿಸ್ಥಿತಿ ಉಂಟಾಗುತ್ತದೆ. (೩) ಇದರೊಂದಿಗೆ ಉದ್ಯೋಗಗಳ ವ್ಯವಸ್ಥೆ ಹಾಗೂ ತಾಂತ್ರಿಕ ಜ್ಞಾನ ದೇಶದಲ್ಲಿ ಬರುವ ಅವಶ್ಯಕತೆಯಿಲ್ಲ.

## ಪ್ರತ್ಯಕ್ಷ ಬಂಡವಾಳ

ಪ್ರತ್ಯಕ್ಷ ಬಂಡವಾಳದ ಜೊತೆಗೆ ಆವಶ್ಯಕ ವ್ಯವಸ್ಥಾಪನೆ, ಹೂಡಿಕೆ ತಜ್ಞತೆ ಹಾಗೂ ಶಾಶ್ವತ ಸಾಧನಗಳೂ ದೊರೆಯುತ್ತವೆ. ಆದರೆ ಇದರ ಬಹುದೊಡ್ಡ ದೋಷವೆಂದರೆ, ದೇಶಕ್ಕೆ ಘಾತಕವೆಂದು ಸಿದ್ಧವಾಗುವ ಗುಪ್ತ ಸ್ವಾರ್ಥದ ವಿಕಾಸ. ಪೆಟ್ರೋಲಿನ ಉತ್ಪಾದನೆ ಹಾಗೂ ಶೋಧದಲ್ಲಿ ತೊಡಗಿಸಿದ ಬಂಡವಾಳವು ಪಶ್ಚಿಮ ಏಶಿಯಾದ ದೇಶಗಳ ರಾಜಕೀಯವನ್ನು ಸ್ಥಿರಗೊಳಿಸಲು ಬಿಡುವುದೇ ಇಲ್ಲ. ದೇಶದ ಪ್ರಾಕೃತಿಕ ಸಾಧನಗಳ ಬಳಕೆಯನ್ನು ಕೂಡ ಈ ಬಂಡವಾಳ ಮಿತವ್ಯಯತೆಯೊಂದಿಗೆ ಮಾಡದೆ ತನ್ನ ಹಿತದ ಪರವಾಗಿಯೇ ಮಾಡುತ್ತದೆ. ವ್ಯವಸ್ಥಾಪನೆ ಹಾಗೂ ನಿಯಂತ್ರಣ ಮತ್ತು ಉನ್ನತ ಹಾಗೂ ಮಹತ್ವದ ಎಲ್ಲ ಸ್ಥಾನಗಳು ವಿದೇಶೀಯರ ಕೈಯಲ್ಲಿ ಇರುತ್ತವೆ. ಲಾಭದ ಪುನರ್ವಿನಿಯೋಜನೆಯ ಕಾರಣದಿಂದ ವಿದೇಶಗಳ ಸಂಪತ್ತು ಹೆಚ್ಚುತ್ತಲೇ ಹೋಗುತ್ತದೆ. ಆದರೆ ವಾಸ್ತವಿಕ ಬಂಡವಾಳ ಆಯಾತ ಕಡಿಮೆಯೇ ಇರುತ್ತದೆ. ರಿಸರ್ವ್‌ಬ್ಯಾಂಕ್‌ನ ಪ್ರಕಾರ ೧೯೫೬ರಲ್ಲಿ ಒಟ್ಟೂ ಖಾಸಗಿ ವಿದೇಶೀ ಬಂಡವಾಳದ ಆಯಾತ ೨೪.೩ ಕೋಟಿ ರೂಪಾಯಿಗಳಾಗಿದ್ದವು. ಇದರಲ್ಲಿ ೧೭.೯ ಕೋಟಿ ರೂಪಾಯಿ ಲಾಭದಲ್ಲಿಂದ ಪುನರ್ನಿಯೋಜನೆ, ೩.೨ ಕೋಟಿ ರೂಪಾಯಿ ನಗದು ಮತ್ತು ೯.೬ ಕೋಟಿ ರೂಪಾಯಿ ವಸ್ತುಗಳ ರೂಪದಲ್ಲಿ ಇದ್ದವು. ೧೮೪೦ ರಿಂದ ೧೯೧೪ರ ವರೆಗೆ ಅಮೇರಿಕಾವು ೩೦೦ ಕೋಟಿ ಡಾಲರ್ ವಿದೇಶಗಳಿಂದ ಸಾಲ ಪಡೆಯಿತು. ಈ ಮಧ್ಯೆ ಅದು ಬಡ್ಡಿ ಹಾಗೂ ಲಾಭಾಂಶದ ರೂಪದಲ್ಲಿ ೫೮೦ ಕೋಟಿ ಡಾಲರ್‌ನ್ನು ಚುಕ್ತಾ ಮಾಡಿತು.* ೧೮೭೦ ರಿಂದ ೧೯೧೩ ಬ್ರಿಟನ್ ವಿದೇಶಗಳಲ್ಲಿ

* John Knapp : *Capital Export and Growth,* The Economic Journal, Vol LK VII Sept 57

ಮಾಡಿದ ವಿನಿಯೋಜನೆಯ ಆದಾಯ ಹಾಗೂ ಬಂಡವಾಳದ ನಿರ್ಯಾತದ ವಾರ್ಷಿಕ ಸರಾಸರಿ ಪ್ರಮಾಣ ಈ ಪ್ರಕಾರ ಇದೆ.

**ಕೋಟಿ ಪೌಂಡ್‌ಗಳಲ್ಲಿ**

| ಇಸವಿ | ಆದಾಯ | ನಿರ್ಯಾತ |
|---|---|---|
| ೧೮೭೦–೭೫ | ೪.೮ | ೫.೫ |
| ೧೮೭೬–೮೦ | ೪.೮ | .೧ |
| ೧೮೮೧–೯೩ | ೭.೫ | ೪.೮ |
| ೧೮೯೪–೧೯೦೪ | ೧೦.೦ | ೨.೪ |
| ೧೯೦೫–೧೯೧೩ | ೧೫.೫ | ೧೪.೩ |

ಇದೇ ಆಧಾರದ ಮೇಲೆ ಜೆವನ್ಸ ಬರೆದದ್ದೇನೆಂದರೆ– "ಬಂಡವಾಳ ನಿರ್ಯಾತ ಮಾಡುವ ದೇಶವು ಕೆಲವೇ ದಿನಗಳಲ್ಲಿ ತನ್ನ ವಿನಿಯೋಜನೆಯನ್ನು ಆದಾಯದ ಪುನರ್ವಿನಿಯೋಜನೆಯಿಂದಲೇ ಕಾಯಂ ಆಗಿಟ್ಟುಕೊಳ್ಳಬಲ್ಲುದು ಎಂಬುದನ್ನು ಬ್ರಿಟನ್ನಿನ ಅನುಭವ ಸ್ಪಷ್ಟಗೊಳಿಸುತ್ತದೆ." ಯಾವುದಾದರೊಂದು ವಿಶೇಷ ಸ್ಥಿತಿ ಉತ್ಪನ್ನವಾಗುವವರೆಗೂ, ಹೊರಗಿನ ಬಂಡವಾಳದಿಂದ ಮುಕ್ತಿಯ ಆಸೆಯನ್ನು ಮಾಡಬಾರದು. ಅಮೇರಿಕಾ ಕೂಡ ತನ್ನ ವಿಕಾಸವನ್ನು ಮಾಡಲು ಸಾಧ್ಯವಾದದ್ದು ಹೊರಗಿನಿಂದ ಬಂಡವಾಳ ಬರುವಿಕೆಯು ೧೯೧೪ ರ ನಂತರ ನಿಂತಮೇಲೆಯೇ. ಭಾರತ ಕೂಡ ಯುದ್ಧದ ದಿನಗಳಲ್ಲಿ ಹೊರಗಿನಿಂದ ಹಣ ಮತ್ತು ಯಂತ್ರಗಳು ಹಾಗೂ ಔದ್ಯೋಗಿಕ ಕಚ್ಚಾ ಸರಕು ಬಹುತೇಕವಾಗಿ ಬರಲು ಸಾಧ್ಯವಾಗದಿದ್ದಾಗ, ಒಂದು ಸಾಲಗಾರನಂತಹ ಸಾಹುಕಾರ ದೇಶವಾಯಿತು. ನಾವು ಸಂಗ್ರಹಿಸಿದ ಪೌಂಡ್ ಪಡೆದುಕೊಂಡಿದ್ದರಲ್ಲಿಂದ ಯುದ್ಧದ ಖರ್ಚನ್ನು ತೆಗೆದರೂ ಕೂಡ, ನಾವು ಬಹಳಷ್ಟು ನಮ್ಮ ಉದ್ಯಮದ ವಿಕಾಸ ಹಾಗೂ ಉತ್ಪಾದನೆಯ ವೃದ್ಧಿ ಹಾಗೂ ನಿರ್ಯಾತದಿಂದ ಗಳಿಸಿದ್ದೆವು.

**ಭಾರತದಲ್ಲಿ ವಿದೇಶೀ ಬಂಡವಾಳ**

ವಿದೇಶೀ ಬಂಡವಾಳವನ್ನೇ ಆಧಾರವಾಗಿಸಿಕೊಂಡು ನಾವು ಎಂದೂ ಉದ್ಯಮ ಮಾಡುವ ವಿಚಾರ ಮಾಡಬಾರದು. ರಾಷ್ಟ್ರೀಯ ಯೋಜನಾ ಸಮಿತಿಯು ಈ ಸಂಬಂಧವಾಗಿ ಇದೇ ಪ್ರಸ್ತಾವನೆಯನ್ನು ಮುಂದಿಟ್ಟಿತ್ತು.

೧) ನಮ್ಮ ಕೃಷಿ, ಗಣಿ, ಹಾಗೂ ಉದ್ದಿಮೆಗಳಲ್ಲಿ ವಿದೇಶೀ ಬಂಡವಾಳದ ವಿನಿಯೋಜನೆಯ ಪರಿಣಾಮವು ದೇಶದ ಆರ್ಥಿಕ ಮತ್ತು ರಾಜಕೀಯ



ಜೀವನದ ಮೇಲೆ ಪ್ರಭುತ್ವವನ್ನು ಹೇರುವುದು ಹಾಗೂ ರಾಷ್ಟ್ರೀಯ ವಿಕಾಸವನ್ನು ಕುಂಠಿತಗೊಳಿಸುವುದರಲ್ಲಿ ಆಯಿತು.

೨) ಇದರ ನಂತರ ವಿದೇಶೀ ಬಂಡವಾಳಕ್ಕೆ ರಾಷ್ಟ್ರಿಯ ಮಹತ್ವದ ಉದ್ಯಮಗಳಲ್ಲಿ ವ್ಯವಸ್ಥಾಪನೆ ಹಾಗೂ ಸ್ವಾಮಿತ್ವದ ಅಧಿಕಾರವನ್ನು ಕೊಡಬಾರದು.

೩) ದೇಶದ ಬಂಡವಾಳದ ಅವಶ್ಯಕತೆಗಾಗಿ ಕೇವಲ ರಾಜ್ಯದ ಮೂಲಕ ಸಾಲದ ರೂಪದಲ್ಲಿ ವಿದೇಶೀ ಬಂಡವಾಳವನ್ನು ಸ್ವೀಕರಿಸಬೇಕು.

೪) ಕಾನೂನಿನ, ವ್ಯಾಪಾರಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ನಿಲ್ಲಿಸಬೇಕು, ಮತ್ತು

೫) ಭಾರತದಲ್ಲಿ ಕೆಲವು ಮಹತ್ವಪೂರ್ಣ ಉದ್ದಿಮೆಗಳ ಮೇಲೆ ವಿದೇಶೀ ಹಿತಾಸಕ್ತಿಗೆ ಯೋಗ್ಯವಾದ ಹಾನಿ ತುಂಬಲು ಕೊಟ್ಟು ರಾಜ್ಯವು ಪಡೆದುಕೊಳ್ಳಬೇಕು.

೧೯೨೨ರ ಕೋಶೀಯ ಆಯೋಗದಿಂದ ಕೂಡ ಅಲ್ಪಮತದಿಂದ ವಿರೋಧಾಭಿಪ್ರಾಯದ ಪತ್ರವನ್ನು ಕೊಡುತ್ತ ಭಾರತದ ಪ್ರತಿನಿಧಿಗಳು ವಿದೇಶೀ ಬಂಡವಾಳಕ್ಕೆ ಸೌಲಭ್ಯ ಒದಗಿಸುವುದನ್ನು ವಿರೋಧ ಮಾಡಿದ್ದರು.

ಭಾರತದ ಸದ್ಯದ ನೀತಿಯು ಈ ಎಲ್ಲ ಭಾವನೆಗಳ ವಿರುದ್ಧವಾಗಿದೆ. ಈಗ ಸರಕಾರವು ವಿದೇಶೀ ಬಂಡವಾಳದ ಸ್ವಾಗತ ಮಾಡಲು ಎಲ್ಲ ಬಗೆಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಸರಕಾರದ ಈ ನೀತಿಯ ಪರಿಣಾಮ ಏನಾಗಿದೆಯೆಂದರೆ, ಭಾರತವು ಈಗ ಪುನಃ ಸಾಲಗಾರ ದೇಶವಾಗಿಬಿಟ್ಟಿದೆ. ಭಾರತದ ಕೊಡ – ತಕ್ಕೊಳ್ಳುವ ಸ್ಥಿತಿಯು ಡಿಸೆಂಬರ್ ೧೯೫೭ ಕೊನೆಯವರೆಗೆ ಈ ರೀತಿ ಇತ್ತು :

**ಭಾರತದ ಒಟ್ಟಾರೆ ವಿನಿಯೋಜನೆಯ ಸ್ಥಿತಿ**

ಕೋಟಿ ರೂಪಾಯಿಗಳಲ್ಲಿ

| | ಬಾಧ್ಯತೆ ೧೯೫೬–೧೯೫೭ | | ಸ್ವತ್ತು ೧೯೫೬–೧೯೫೭ | | ನಿವ್ವಳ ೧೯೫೬ | ಸ್ಥಿತಿ ೧೯೫೬ |
|---|---|---|---|---|---|---|
| ಖಾಸಗಿ | ೫೦೬* | ೫೫೫ | –– | | (–)೫೦೬ | (–)೫೫೫ |
| ಬ್ಯಾಂಕ್ | ೬೧ | ೪೮ | ೫೨ | ೬೨ | (–)೯ | ೧೪ |
| ಸರಕಾರಿ | ೨೨೦ | ೪೫೫ | ೯೫೫ | ೭೨೫ | ೭೩೫ | ೨೭೦ |
| **ಒಟ್ಟು** | **೭೮೭** | **೧೦೫೮** | **೧೦೦೭** | **೭೮೭** | **೨೨೦** | **(–)೨೭೧** |

* ಅಂದಾಜು ಮೂಲ : ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬುಲೆಟಿನ್, ಸೆಪ್ಟೆಂಬರ್ ೧೯೫೮

ಡಿಸೆಂಬರ್ ೧೯೫೭ ರ ಕೊನೆಯಲ್ಲಿ ಭಾರತವು ೨೭೧ ಕೋಟಿ ರೂಪಾಯಿ ಕೊಡುವುದಿತ್ತು. ಸರಕಾರಿ ಸ್ವತ್ತಿನಲ್ಲಿ ಪಾಕಿಸ್ತಾನದ ವಿಭಜನೆಯ ಪರಿಸ್ಥಿತಿಗನುಗುಣವಾಗಿ ಭಾರತದ ಮೂಲಕ ಅವಿಭಜಿತ ಭಾರತದ ಸಂಪೂರ್ಣ ಬಾಧ್ಯತೆಯನ್ನು ಒಪ್ಪಿಕೊಂಡ ಕಾರಣ ತೆಗೆದುಕೊಳ್ಳಬೇಕಾದ ೩೦೦ ಕೋಟಿ ರೂಪಾಯಿಗಳು ಕೂಡ ಸೇರಿವೆ. ಪಾಕಿಸ್ತಾನದ ವರ್ತಮಾನ ನೀತಿಯಲ್ಲಿ ಅದೊಂದು ಸಂದೇಹಾಸ್ಪದ ಸ್ವತ್ತೇ ಆಗಿದೆ. ಜುಲೈ ೧೯೪೭ ರಿಂದ ಡಿಸೆಂಬರ್ ೧೯೫೭ರ ವರೆಗೆ ನಮ್ಮ ಪಡೆದುಕೊಳ್ಳುವಿಕೆಯಲ್ಲಿ ೧೮೦೦ ಕೋಟಿ ರೂಪಾಯಿಯಷ್ಟು ಕಡಿಮೆಯಾಯಿತು. ಖಾಸಗಿ ಕ್ಷೇತ್ರದಲ್ಲಿ ಬಾಧ್ಯತೆ ೩೦ ಜೂನ್ ೧೯೪೭ ಕ್ಕೆ ೨೬೦ ಕೋಟಿ ರೂಪಾಯಿಗಳಿಂದ ಹೆಚ್ಚಾಗಿ ೧೯೫೭ರ ಕೊನೆಯಲ್ಲಿ ೫೫೦ ಕೋಟಿ ರೂಪಾಯಿ ಆಯಿತು. ಸರಕಾರಿ ಕ್ಷೇತ್ರದಲ್ಲಿ ನಾವು ೧೫೦೦ ಕೋಟಿ ರೂಪಾಯಿ ಅಸೆಟ್ಸ್‌ನ್ನು ಮುಗಿತಾಯ ಮಾಡಿದೆವು.

ವಿದೇಶೀ ಬಂಡವಾಳದ ಅವಶ್ಯಕತೆಯ ಪ್ರತಿಪಾದನೆಯನ್ನು ಕೆಲವು ಭಾರೀ ಉದ್ಯಮಗಳು, ಜನೋಪಯೋಗಿ ಸೇವೆಗಳು, ಹಾಗೂ ಉದ್ಯಮಗಳ ವಿಕಾಸದ ಕಾರಣಕ್ಕಾಗಿ ಮಾಡಲಾಗುತ್ತದೆ. ಆದರೆ ಯಾವುದೇ ಸ್ವತಂತ್ರ ದೇಶದಲ್ಲಿ ಖಾಸಗಿ ಕ್ಷೇತ್ರಕ್ಕೆ ಇವುಗಳಲ್ಲಿ ಪ್ರವೇಶಿಸಲು ಅನುಮತಿ ನೀಡಲಾಗುವುದಿಲ್ಲ. ಮತ್ತು ಯಾವುದೇ ವಿದೇಶಿಯು ಅವುಗಳಲ್ಲಿ ಸಹಜ ಪ್ರವೇಶವನ್ನೂ ಬಯಸಲಾರ, ಕಾರಣವೆಂದರೆ ಅವು ತಕ್ಷಣ ಫಲದಾಯಕವಾಗುವುದಿಲ್ಲ. ವಾಸ್ತವವಾಗಿ ಅನೇಕಬಾರಿ ವಿದೇಶೀ ಬಂಡವಾಳವು ಈ ಪ್ರಾಥಮಿಕ ಸೇವೆಗಳ ವಿಕಾಸದ ದಾರಿ ಕಾಯುತ್ತ ತಣ್ಣಗೆ ಕೂತಿರುತ್ತದೆ. ಬಹುತೇಕವಾಗಿ ಸರಕಾರವೇ ತನ್ನ ಜವಾಬ್ದಾರಿಯ ಮೇಲೆ ಈ ಕಡೆ ಮುಂದುವರಿಯಬೇಕಾಗುತ್ತದೆ. ೧೯೪೮ರಿಂದ ೧೯೫೬ರ ವರೆಗೆ ವಿದೇಶೀ ಬಂಡವಾಳದ ವಿನಿಯೋಗ ಯಾವ ರೀತಿಯಲ್ಲಿ ಆಯಿತು ಎಂಬುದನ್ನು ಈ ಕೆಳಗಿನ ಕೋಷ್ಟಕ ಸ್ಪಷ್ಟಪಡಿಸುತ್ತದೆ.

**ಉದ್ದಿಮೆಗನುಗುಣವಾಗಿ ವಿದೇಶೀ ಬಂಡವಾಳ ಹೂಡಿಕೆ (ಕೋಟಿ ರೂಪಾಯಿಗಳಲ್ಲಿ)**

| ಕೊನೆಯಲ್ಲಿ | ಜೂನ್ ೧೯೪೮ | ೧೯೫೩ | ೧೯೫೫ | ೧೯೫೬ |
|---|---|---|---|---|
| ನಿರ್ಮಾಣ | | | | |
| ಖನಿಜ ತೈಲ ಹಾಗೂ ಉತ್ಪಾದನೆ | ೧,೦೯ | ೯.೬೯ | ೨೮.೪೧ | ೩೫.೪೬ |
| ವಿದ್ಯುತ್ತಿನ ಸಾಮಾನು | ೪.೭೭ | ೧೨.೦೧ | ೧೪.೬೩ | ೧೫.೭೮ |
| ಬೆಂಕಿಪೆಟ್ಟಿಗೆ | ೧.೭೩ | ೩.೨೨ | ೨.೨೯ | ೨.೩೪ |
| ಸಿಗರೇಟ್ ಮತ್ತು ತಂಬಾಕು | ೬.೧೭ | ೨೫.೬೫ | ೨೪.೯೪ | ೨೫.೩ |
| ಔಷಧಿಗಳು | .೪೫ | ೫.೫೩ | ೭.೬೫ | ೮.೨೯ |
| ಕಬ್ಬಿಣ ಮತ್ತು ಉಕ್ಕಿನ ಸಾಮಗ್ರಿ | ೫.೪೮ | ೬.೬೮ | ೯.೪೩ | ೧೮.೫೩ |
| ಖಾದ್ಯವಸ್ತುಗಳು ಹಾಗೂ ವನಸ್ಪತಿ | ೧.೮೨ | ೩.೯೮ | ೩.೨೨ | ೩.೨೨ |
| ಇತರೆ | ೫೦.೫೨ | ೬೮.೯೭ | ೭೨.೭೫ | ೭೭.೩೭ |
| ವ್ಯಾಪಾರ | | | | |
| ಖನಿಜತೈಲ ಮತ್ತು ಉತ್ಪಾದನೆ | ೨೧.೩೨ | ೬೭.೪೦ | ೭೫.೫೦ | ೮೦.೫೩ |
| ಕಬ್ಬಿಣ ಮತ್ತು ಉಕ್ಕು ಉತ್ಪಾದನೆ | ೩.೬೨ | .೬೯ | .೮೯ | ೧.೦೨ |
| ಸಣಬು ಮತ್ತು ತೆಂಗಿನ ನಾರಿನ | | | | |
| ಸಾಮಾನು | ೨.೬೪ | .೮೨ | .೪೮ | .೫೯ |
| ಖಾದ್ಯ ಹಾಗೂ ವನಸ್ಪತಿ | ೩.೪೯ | .೫೮ | ೧.೧೯ | ೧.೨೦ |
| ಇತರೆ | ೩೩.೨೮ | ೨೫.೨೯ | ೧೪.೨೪ | ೨೬.೨೫ |
| ಜನೋಪಯೋಗಿ ಸೇವೆಗಳು ಹಾಗೂ | | | | |
| ಸಾರಿಗೆ | ೫೦.೫೪ | ೫೩.೦೫ | ೫೯.೫೧ | |
| ಉತ್ಖನನ | ೧೧.೪೬ | ೮.೩೮ | ೯.೬೨ | ೧೦.೮೩ |
| ಹಣಕಾಸು | ೬.೮೭ | ೧೦.೭೦ | ೨೮.೫೩ | ೨೮.೧೪ |
| ತೋಟಗಾರಿಕೆ | | | | |
| ಚಹಾ | ೫೦.೩೧ | ೭೦.೧೭ | ೮೬.೨೬ | ೮೭.೫೮ |
| ಇತರೆ | ೧.೯೪ | ೧.೩೩ | .೯೪ | .೬೪ |
| ವಿವಿಧ | | | | |
| ವ್ಯವಸ್ಥೆ ಏಜನ್ಸಿ | ೧೪.೪೦ | ೨೬.೨೦ | ೨೪.೬೨ | ೨೨.೯೨ |
| ಇತರೆ | ೩.೩೨ | ೧.೫೨ | ೧.೨೭ | ೧.೦೭ |
| **ಒಟ್ಟೊ** | **೧೭.೭೨** | **೨೭.೭೨** | **೨೫.೮೯** | **೨೩.೯** |



**ವಿದೇಶೀ ಬಂಡವಾಳ ಮತ್ತು ಭಾರತೀಕರಣ**

ವಿದೇಶೀ ಬಂಡವಾಳದ ಏಕಾಧಿಪತ್ಯ ಹಾಗೂ ದುಷ್ಪ್ರಭಾವಗಳಿಂದ ಬಚಾವಾಗಲು ಹಾಗೂ ಜೊತೆಗೇ ಅದರ ಉಪಯೋಗ ಮಾಡುವ ದೃಷ್ಟಿಯಿಂದ ದೇಶೀ ಮತ್ತು ವಿದೇಶೀ ಬಂಡವಾಳದ ಸಹಯೋಗ ಹಾಗೂ ದೇಶೀ ವ್ಯವಸ್ಥಾಪನೆ ಹಾಗೂ ತಜ್ಞರ ತರಬೇತಿಯ ಷರತ್ತಿನೊಂದಿಗೆ ವಿದೇಶೀ ಬಂಡವಾಳದ ಪ್ರವೇಶದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಇದರಲ್ಲಿ ಅದು ಒಂದು ಕೆಟೆಲಿಟಿಕ್ ಏಜೆಂಟನ ಕೆಲಸಮಾಡಿ ದೇಶೀ ಬಂಡವಾಳವನ್ನು ಸಕ್ರಿಯಗೊಳಿಸುತ್ತದೆ. ಆದರೆ ಭಾರತದಲ್ಲಿ ಈ ಕಡೆಗೂ ಯಾವುದೇ ಪ್ರಗತಿ ಆಗಿಲ್ಲ. ಕೆಲವು ವಿದೇಶೀ ಮಾಲಿಕರು ರಾಷ್ಟ್ರೀಯ ಭಾವನೆಗಳ ಲಾಭ ಪಡೆಯಲು ಹಾಗೂ ಭಾರತೀಯ ಬಂಡವಾಳಕ್ಕೆ ಕೊಡಲಾಗುವ

ಸಾಮಾನ್ಯ ಸೌಲಭ್ಯಗಳ ಲಾಭ ಪಡೆಯಲು ತನ್ನೊಂದಿಗೆ ಕೆಲವು ಭಾರತೀಯ ಉದ್ದಿಮೆದಾರರನ್ನು ಭಾಗೀದಾರರನ್ನಾಗಿ ಅವಶ್ಯ ಮಾಡಿಕೊಂಡಿದ್ದಾರೆ, ಆದರೆ ನಿಯಂತ್ರಣ ಹಾಗೂ ವ್ಯವಸ್ಥಾಪನೆ ಎಲ್ಲದರಲ್ಲಿಯೂ ಈವರೆಗೆ ವಿದೇಶಗಳದ್ದೇ ಪ್ರಭುತ್ವವಿದೆ. ತರಬೇತಿಯದೂ ಯಾವುದೇ ವ್ಯವಸ್ಥೆ ಮಾಡಲಾಗಿಲ್ಲ. ಕೆಲದಿನಗಳಿಂದ ವಿದೇಶೀ ಬಂಡವಾಳದ ಸಂಬಂಧದಲ್ಲಿ ತೋರಲಾಗುತ್ತಿರುವ ಉತ್ಸುಕತೆ ಹಾಗೂ ಪ್ರೇಮದಿಂದಾಗಿ ಭಾರತೀಕರಣದ ಅಲ್ಪಸ್ವಲ್ಪ ಪ್ರಕ್ರಿಯೆ ಪ್ರಾರಂಭವಾಗಿದ್ದು ಅದೂ ಕೂಡ ತಲೆಕೆಳಗಾಗಿದೆ. ೧ ಜನವರಿ ೧೯೫೬ಕ್ಕೆ ವಿದೇಶೀ ಫರ್ಮ್‌ಗಳು ಮತ್ತು ಕಾರ್ಖಾನೆಗಳಲ್ಲಿ ಕೆಲಸಮಾಡುವ ಭಾರತೀಯರು ಹಾಗೂ ಭಾರತೀಯೇತರರದು ಯಾವ ಪರಿಸ್ಥಿತಿ ಇತ್ತು ಎಂಬುದರ ಅಂದಾಜನ್ನು ಈ ಕೆಳಗಿನ ಕೋಷ್ಟಕದಿಂದ ಪಡೆಯಬಹುದು.

**ವಿದೇಶೀ ವ್ಯಾಪಾರ ಉದ್ಯಮಗಳಲ್ಲಿನ ಕೆಲಸಗಾರರ ಸಂಖ್ಯೆ ೧-೨-೧೯೫೬ಕ್ಕೆ**

| ವ್ಯಾಪಾರ-ವ್ಯವಹಾರ | ಆಡಳಿತಾತ್ಮಕ/ತಾಂತ್ರಿಕ | | ವ್ಯವಸ್ಥಾಪನಸಂಬಂಧೀ | |
|---|---|---|---|---|
| | ಭಾರತೀಯ | ಅ.ಭಾರತೀಯ | ಭಾರತೀಯ | ಅ.ಭಾರತೀಯ |
| ಅಟೋಮೊಬೈಲ್ | ೭ | ೧೪ | ೧೭ | ೧೦ |
| ರಸಾಯನ ಹಾಗೂ ತತ್ಸಂಬಂಧೀ | ೧೭೪ | ೧೬೪ | ೩೨೯ | ೧೭೬ |
| ಯಂತ್ರ ಹಾಗೂ ತಂತ್ರಜ್ಞಾನ | ೪೭೮ | ೬೪೯ | ೩೬೬ | ೨೪೭ |
| ಚರ್ಮ ಹಾಗೂ ರಬ್ಬರ್ | ೯೯ | ೭೯ | ೧೪೪ | ೪೨ |
| ಜನೋಪಯೋಗಿ ಸೇವೆಗಳು | ೮೫ | ೪೪ | ೨೫ | ೧೧ |
| ಮ್ಯಾನೇಜಿಂಗ್ ಏಜನ್ಸಿ ಕಂ | ೬೨ | ೧೪೧ | ೩೮೬ | ೫೧೨ |
| ತೋಟಗಾರಿಕೆ, ಇತರೆ | ೩೬ | ೨೭೧ | ೧೬೪ | ೯೬೬ |
| ಬಟ್ಟೆ ಮಿಲ್‌ಗಳು-ಪ್ರೆಸ್‌ಗಳು | ೭೯ | ೯೫ | ೩೬ | ೪೦ |
| ಸಣಬಿನ ಮಿಲ್‌ಗಳು-ಪ್ರೆಸ್‌ಗಳು | ೬೮ | ೩೬೪ | ೨೫ | ೧೫೩ |
| ಎಣ್ಣೆ ಕಂಪನಿಗಳು | ೨೨೩ | ೨೬೬ | ೨೮೬ | ೨೧೫ |
| ಖನಿಜ | ೬೬ | ೧೨೩ | ೩೮ | ೩೦ |
| **ಒಟ್ಟು ಇತರೆ ಸೇರಿಸಿ** | **೧೯೦೮** | **೨೮೫೫** | **೨೭೭೭** | **೩೭೧೧** |

ಭಾರತೀಯರನ್ನು ಮಹತ್ವದ ಸ್ಥಾನಗಳಲ್ಲಿ ಇಡಲಾಗುವುದೂ ಇಲ್ಲ, ಮತ್ತು ಅವರಿಗೆ ತರಬೇತಿ ಒದಗಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿಲ್ಲವೆಂಬುದು ಸ್ಪಷ್ಟ. ಮ್ಯಾನೇಜಿಂಗ್ ಏಜನ್ಸಿಗಳಲ್ಲಿ ಭಾರತೀಯೇತರರ ಭಾರೀ ಸಂಖ್ಯೆಯು ಈ ಮಾತಿನ



ದ್ಯೋತಕವಾಗಿದೆ. ಎಲ್ಲ ಬಗೆಯ ನಿಯಂತ್ರಣ ಅವರ ಕೈಯಲ್ಲಿಯೇ ಇದೆ. ಸಣಬು ಮತ್ತು ತೋಟಗಾರಿಕೆಯ ಮೇಲೆ ಅವರದೇ ಏಕಾಧಿಕಾರ. ಭಾರತೀಯರು ಎಸ್ಟೇಟಗಳನ್ನು ಖರೀದಿಸಿದ್ದರೂ, ಅಲ್ಲಿನ ವ್ಯವಸ್ಥೆ, ತಾಂತ್ರಿಕತೆ, ಕಾರ್ಯಸಂಚಾಲನೆ, ಮತ್ತು ವ್ಯಾಪಾರ ಎಲ್ಲವೂ ವಿದೇಶೀಯರ ಕೈಯಲ್ಲಿವೆ. ವೇತನದ ವಿಚಾರ ಮಾಡಿದರೆ ೧೫೦೦ರೂ. ಯಿಂದ ೩೦೦೦ ರೂ. ವರೆಗಿನ ಗ್ರೇಡ್‌ನಲ್ಲಿ ತಾಂತ್ರಿಕ ಕೆಲಸಗಾರರಲ್ಲಿ ೩೧.೨ ಪ್ರತಿಶತ ಭಾರತೀಯ ೬೮.೮ ಪ್ರತಿಶತ ಭಾರತೀಯೇತರರು ಹಾಗೂ ಮ್ಯಾನೇಜಮೆಂಟ ವಿಭಾಗದಲ್ಲಿ ೩೬.೧ ಪ್ರತಿಶತ ಭಾರತೀಯರು ಹಾಗೂ ೬೩.೯ ಪ್ರತಿಶತ ಅಭಾರತೀಯರು ಇದ್ದಾರೆ. ಆದರೆ ೩೦೦೦ ರೂಗಳಿಗಿಂತ ಹೆಚ್ಚು ಸಂಬಳ ಪಡೆಯುವವರಲ್ಲಿ ಭಾರತೀಯರು ಪ್ರತಿಶತ ಕೇವಲ ತಾಂತ್ರಿಕ ವಿಭಾಗದಲ್ಲಿ ೭.೨ ಹಾಗೂ ವ್ಯವಸ್ಥಾಪನಾ ವಿಭಾಗದಲ್ಲಿ ೧೧.೪ ಪ್ರತಿಶತ ಇದ್ದಾರೆ. ವ್ಯಕ್ತಿಗಳವರೆಗೆ ಮಾತ್ರವಲ್ಲ. ಈ ಉದ್ಯೋಗಗಳ ಕಾರ್ಯಕ್ರಮಗಳ ನಿರ್ಧಾರದಲ್ಲಿಯೂ ಭಾರತದ ಯೋಜನೆ ಹಾಗೂ ಅವಶ್ಯಕತೆಗನುಸಾರವಾಗಿ ಅಲ್ಲ, ಬದಲಿಗೆ ಹೊರಗಿನ ಹಿತಾಸಕ್ತಿಗೆ ಅನುಗುಣವಾಗಿ ಆಗುತ್ತದೆ. ಆಫ್ರಿಕಾದಲ್ಲಿ ಚಹಾ ತೋಟ ಪ್ರಾರಂಭ ಮಾಡಿದ್ದರಿಂದಾಗಿ ಚಹಾ ತೋಟದ ಮಾಲಿಕರು ಭಾರತದಲ್ಲಿ ಪುನಃ ಸ್ಥಾಪಿಸುವ ಬಗ್ಗೆ ನಿರ್ಲಕ್ಷ್ಯ ಪ್ರಾರಂಭ ಮಾಡಿದರು. ಬಿರ್ಲಾ-ನಫೀಲ್ಡ ಹಾಗೂ ಇತರ ಕೆಲವರು ಸದ್ಯದಲ್ಲಷ್ಟೇ ಸಹಯೋಗ ಪ್ರಾರಂಭ ಮಾಡಿದ್ದಾರೆ. ಅವರಲ್ಲಿ ಜಂಟಿತನದ ಹೊರತಾಗಿ ಉತ್ಪಾದನೆಯ, ಅದರಲ್ಲೂ ಟೆಕ್ನಿಕಲ್ ಭಾಗೀದಾರಿಕೆಯ ಯಾವ ಅವಶ್ಯಕತೆಯೂ ಇಲ್ಲ. ಅವರ ಕಾರ್ಯಕ್ರಮಗಳೆಲ್ಲ ವಿದೇಶೀ ಸಹಯೋಗಿಗಳ ಕೈಯಲ್ಲೇ ಇದೆ. ಔದ್ಯೋಗೀಕರಣದ ಈ ಕಾರ್ಯಕ್ರಮ ಸರಕಾರವನ್ನು ಬಂದರು ಕರದಿಂದ ವಂಚಿತಗೊಳಿಸಿ ಅದರ ಕೆಲವು ಭಾಗವನ್ನು ದೇಶದ ಉದ್ಯಮಿಗಳು ಹಾಗು ಕಾರ್ಮಿಕರಿಗೆ ಹಂಚುವುದರ ಹೊರತಾಗಿ ಬೇರೆ ದೂರಗಾಮೀ ಮಹತ್ವದ್ದೇನೂ ಅಲ್ಲ. ದೇಶದಲ್ಲಿ ಹೆಚ್ಚುತ್ತಿರುವ ಆಯಾತದ ನಂತರವೂ ಆಯಾತಕರದಲ್ಲಿ ಸಮಾನ ಅನುಪಾತದ ವೃದ್ಧಿಯ ಅಭಾವ ಇದೇ ತಥ್ಯದ ದ್ಯೋತಕವಾಗಿದೆ. ಕಳೆದ ಆರು ವರ್ಷಗಳ ಅಂಕೆಗಳು ಹೀಗಿವೆ.

**(ಕೋಟಿ ರೂ. ಗಳಲ್ಲಿ)**

| | **೧೯೫೩-೫೪** | **೧೯೫೪-೫೫** | **೧೯೫೫-೫೬** | **೧೯೫೬-೫೭** | **೧೯೫೭-೫೮** |
|---|---|---|---|---|---|
| ಆಯಾತ | ೫೯೧.೮ | ೬೮೩.೮ | ೭೬೧.೪ | ೧೦೯೫.೬ | ೧೧೭೪.೮* |
| ಆಯಾತ ಕರ | ೧೧೯.೬೦ | ೧೪೧.೦೬ | ೧೨೭.೯೮ | ೧೪೦.೫೨ | ೧೫೩.೭ •* |
| ಶೇಕಡಾವಾರು | ೨೦.೨ | ೨೦.೬ | ೧೬.೮ | ೧೨.೮ | ೧೩.೧ |

• ಪ್ರಾರಂಭಿಕ ** ಪರಿಷ್ಕೃತ ಬಜೆಟ್ ಅಂದಾಜು.

ಭಾರತೀಯ ಉದ್ಯಮಿಗಳ ವಿದೇಶೀ ಬಂಡವಾಳದಿಂದ ನಡೆಯುವ ಉದ್ಯಮಗಳಲ್ಲಿ ಅವರ ಕೈವಾಡ ಎಷ್ಟಿದೆ ಎಂಬುದರ ಅಂದಾಜನ್ನು ಈ ತಥ್ಯದಿಂದ ತಿಳಿಯಬಹುದು. ೧೯೫೬ರ ಡಿಸೆಂಬರ್ ಅಂತ್ಯದಲ್ಲಿ ೫೦೬.೩೦ ಕೋಟಿ ರೂಪಾಯಿಗಳ ವಿದೇಶೀ ಬಂಡವಾಳ ಭಾರತದಲ್ಲಿ ಹೂಡಿಕೆಯಾಗಿತ್ತು. ಅದರಲ್ಲಿಂದ ೪೨೮.೯೯ ಕೋಟಿ ರೂಪಾಯಿ ನೇರ ಹೂಡಿಕೆ (direct investment) ಹಾಗೂ ೭೭.೩೧ ಕೋಟಿ ರೂಪಾಯಿ ಪೋರ್ಟ್‌ಫೋಲಿಯೋ ವಿನಿಯೋಜನದ ರೂಪದಲ್ಲಿತ್ತು. ವಿದೇಶೀ ಕಂಪನಿಗಳ ಶಾಖೆಗಳಲ್ಲಿ ೨೭೬.೪೯ ಕೋಟಿ ರೂಪಾಯಿ ಹಾಗೂ ನಿಯಂತ್ರಿತ ಭಾರತೀಯ ಕಂಪನಿಗಳಲ್ಲಿ ೧೫೨.೬೦ ಕೋಟಿ ರೂಪಾಯಿ ಹೂಡಿಕೆಯಾಗಿತ್ತು. ೧೯೫೬ ರಲ್ಲಿ ವಿದೇಶೀ ಬಂಡವಾಳ ಬಂದಿತು. ಅದರಲ್ಲಿ ನೇರ ಹೂಡಿಕೆ ೨೩.೭ ಕೋಟಿ ರೂ ಹಾಗೂ ಇತರೇ ೧೨.೭ ಕೋಟಿ ರೂ ಇದ್ದಿತ್ತು. ಇತರದಲ್ಲಿ ೧೨.೧ ಕೋಟಿ ರೂಪಾಯಿಗಳ ಅಂತಾರಾಷ್ಟ್ರೀಯ ಬ್ಯಾಂಕ್‌ನ ಸಾಲ ಸೇರಿದೆ. ಅದನ್ನು ತೆಗೆದು ಹಾಕಿದರೆ ಕೇವಲ ಆರು ಕೋಟಿ ರೂಪಾಯಿಯಷ್ಟೇ ಈ ವಿಭಾಗದಲ್ಲಿ ಬರುತ್ತದೆ.

## ವಿದೇಶೀ ಬಂಡವಾಳ ಬಳಕೆಯ ಸಾಮರ್ಥ್ಯ

ಇದೆಲ್ಲವೂ ದೇಶದ ಔದ್ಯೋಗೀಕರಣದ ಕ್ರಾಂತಿಕಾರಿ ಕಾರ್ಯಕ್ರಮವನ್ನು ಪ್ರಸ್ತುತಗೊಳಿಸಲಾರರದು, ನಿಜ. ಕೆಲವು ಹಳೆಯ ಕ್ಷೇತ್ರಗಳಲ್ಲಿ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡು ಅಥವಾ ಕೆಲವು ಹೊಸ ಕ್ಷೇತ್ರಗಳಲ್ಲಿ ಕಾರ್ಯ ಸಂಚಾಲನದ ಸಾಧಾರಣ ಚಟುವಟಿಕೆಗಳಿಂದ ದೇಶದ ಸ್ವದೇಶೀ ಭಾವನೆಯ ದುರುಪಯೋಗ, ಹಾಗೂ ವಿಕಾಸಶೀಲ ಚಿಕ್ಕ ಉದ್ಯಮಗಳ ದಾರಿಯಲ್ಲಿ ಅವಶ್ಯವಾಗಿ ತೊಂದರೆಯನ್ನು ಹುಟ್ಟುಹಾಕಬಹುದು. ವಾಸ್ತವಿಕತೆಯೆಂದರೆ, ಯಾವ ಯೋಜನೆಗಳಿಗಾಗಿ ನಮಗೆ ವಿದೇಶೀ ಬಂಡವಾಳ ಬೇಕಾಗಿದೆಯೋ ಅವುಗಳಿಗಾಗಿ ಅನ್ಯ ಉಪಕರಣವನ್ನೂ ಕೂಡ ದೇಶದಲ್ಲಿ ಸಹಜವಾಗಿ ಒಗ್ಗೂಡಿಸಲು ಸಾಧ್ಯವಾಗದು. ಉಪ ವಿತ್ತ ಮಂತ್ರಿಗಳು ರಾಜ್ಯಸಭೆಯಲ್ಲಿ ೧ ಡಿಸೆಂಬರ್ ೧೯೫೮ ರಂದು ನೀಡಿದ ಒಂದು ಹೇಳಿಕೆಯ ಪ್ರಕಾರ, ವಿದೇಶಗಳಿಂದ ಸ್ವೀಕೃತವಾದ ೯೮೮.೦೩ ಕೋಟಿ ರೂಪಾಯಿಗಳ ಸಾಲದ ಮೊತ್ತದಿಂದ ಸರಕಾರವು ಕೇವಲ ೩೭೨.೫೩ ಕೋಟಿ ರೂಪಾಯಿಗಳ ಉಪಯೋಗವನ್ನು ಮಾಡಲು ಸಾಧ್ಯವಾಗಿದೆ, ೬೧೫.೫೦ ಕೋಟಿ ರೂಪಾಯಿ ಇನ್ನೂ ಬಾಕಿ ಬಿದ್ದುಕೊಂಡಿದೆ. ಅವುಗಳ ಯೋಜನೆಯನ್ನು ಸಿದ್ಧಪಡಿಸುವ ಮತ್ತು ಸಮಾಚಾರ ವಿಮರ್ಶೆಯ ಕಾರ್ಯವಷ್ಟೇ ನಡೆದಿದೆ. ನಮಗೆ ದೊರೆತ ಸಾಲವು ಹಣಕಾಸಿನಿಂದಷ್ಟೇ ಅಲ್ಲ, ಹೆಚ್ಚಿನ ಷರತ್ತುಗಳ ನಿಬಂಧನೆಯಿಂದಲೂ ಕೂಡಿದೆ. ಸಾಲವನ್ನು ಖರ್ಚು ಮಾಡಲು ನಮಗೆ ಸ್ವಾತಂತ್ರ್ಯವಿದ್ದರೆ, ನಾವು ನಮ್ಮದೇ ಆದ



ರೀತಿಯಲ್ಲಿ ಅದರ ಯೋಜನೆಯನ್ನು ತಯಾರಿಸಬಹುದಾಗಿತ್ತು. ವಾಸ್ತವದಲ್ಲಿ ಇಂದಿನ ಸ್ಥಿತಿ ಅಂತಾರಾಷ್ಟ್ರೀಯ ಮಾನದಲ್ಲಿ ವಿನಿಮಯ (ಬಾರ್ಟರ್) ದ್ದಾಗಿದೆ. ಇದರಲ್ಲಿ ಸಾಲದ ಉಪಯೋಗವಷ್ಟೇ ಅಲ್ಲ, ಸಾಲ ತೀರಿಸುವುದೂ ಒಂದು ಸಮಸ್ಯೆಯೇ ಆಗಿದೆ. ಸಾಲ ತೀರಿಸಲು ಕೇವಲ ನಮ್ಮ ನಿರ್ಯಾತ ಹೆಚ್ಚಿಸುವ ಅಥವಾ ಆಯಾತ ಕಡಿಮೆಗೊಳಿಸುವ ಮತ್ತು ಈ ಬಗೆಯ ಮರುಪಾವತಿ ಸಮತೋಲನಕ್ಕೆ ಅನುಕೂಲ ಮಾಡುವುದರಿಂದ ಕೆಲಸ ನಡೆಯದು. ಮೇಲಾಗಿ ನಾವು ಆ ವಿದೇಶೀ ಕರೆನ್ಸಿಯನ್ನೂ ಪಡೆಯಬೇಕಾಗಿದೆ. ಅದರಿಂದ ಸಾಲವನ್ನೂ ತೀರಿಸಬೇಕಾಗಿದೆ.

ಅರೆವಿಕಸಿತ ದೇಶಗಳಲ್ಲಿ ಬಹುಬೇಗನೇ ಜೀವನ ಸ್ತರವನ್ನು ಮೇಲಕ್ಕೆತ್ತುವ ಅವಶ್ಯಕತೆಗಳು ಹಾಗೂ ವಿದೇಶೀ ಬಂಡವಾಳದ ಪಾವತಿ ಎರಡರಲ್ಲಿಯೂ ವಿರೋಧ ಉತ್ಪನ್ನವಾಗುತ್ತದೆ. ಬಂಡವಾಳದ ಬರುವಿಕೆ ಹಾಗೂ ಅದರ ಮರುಪಾವತಿಯಲ್ಲಿ ದೀರ್ಘಾವಧಿಯ ಅಂತರ ಇರದೆ ಹೋದರೆ, ಹಾಗೂ ಬಂಡವಾಳದ ವಿನಿಯೋಗವು ಉಪಭೋಗದ ವಸ್ತುಗಳ ಉತ್ಪಾದನೆಗಿಂತ ಭಾರೀ ಉದ್ದಿಮೆಗಳ ಸ್ಥಾಪನೆಗೇ ಆಗಬೇಕು ಎಂದರೆ ಕಷ್ಟ. ಒಂದು ಕಡೆ ಔದ್ಯೋಗೀಕರಣದ ಕಾರಣದಿಂದ, ದೇಶದಲ್ಲಿ ಹಣದ ವಿನಿಯೋಗ ಆಗುವ ಕಾರಣದಿಂದ, ಬಳಕೆಯ ವಸ್ತುಗಳ ಬೇಡಿಕೆ ಹೆಚ್ಚುತ್ತದೆ. ಇನ್ನೊಂದು ಕಡೆ ವಿದೇಶೀ ಕರೆನ್ಸಿಯನ್ನು ಪಡೆಯುವ ಉದ್ದೇಶದಿಂದ ಅವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಯಾತ ಮಾಡಬೇಕಾಗುತ್ತದೆ. ಪರಿಣಾಮವಾಗಿ ದೇಶವು ತಾನು ಉತ್ಪಾದಿಸುವ ವಸ್ತುಗಳ ಕೊರತೆಯನ್ನೇ ಅನುಭವಿಸಬೇಕಾಗುತ್ತದೆ. ಭಾರತದಲ್ಲಿ ಇಂದು ಬಟ್ಟೆ, ಸಕ್ಕರೆ, ಜೋಳ, ಎಣ್ಣೆಕಾಳು, ಹಿಂಡಿ ಇತ್ಯಾದಿಗಳ ಅವಶ್ಯಕತೆ ಇದ್ದರೂ ಅವುಗಳನ್ನು ನಿರ್ಯಾತ ಮಾಡಬೇಕಾಗುತ್ತದೆ. ನಮ್ಮ ಈ ದೌರ್ಬಲ್ಯದ ಕಾರಣದಿಂದ ನಮ್ಮ ಏಕಾಧಿಪತ್ಯವಿರುವ ವಸ್ತುಗಳಿಗೇ ನಾವು ಷರತ್ತುಗಳನ್ನು ವಿಧಿಸಲು ಸಾಧ್ಯವಾಗುತ್ತಿಲ್ಲ.

## ಉದ್ಯಮಿ

ಬಂಡವಾಳ ಹೂಡುವವ ಅರ್ಥಾತ್ ಉದ್ಯಮಿಯೊಡನೆ ಬಂಡವಾಳದ ಸಂಬಂಧ ಬರುತ್ತದೆ. ಈ ದೃಷ್ಟಿಯಿಂದ ಭಾರತದ ಬಳಿ ತಂತ್ರಜ್ಞರು ಹಾಗೂ ವ್ಯಾಪಾರಿಗಳ ಪರಂಪರೆಯೇ ಇದೆ. ತಂತ್ರಜ್ಞನು ಬಹುಮಟ್ಟಿಗೆ ಕಾರ್ಮಿಕ, ಬಂಡವಾಳಿಗ, ವ್ಯವಸ್ಥಾಪಕ, ಸಾಹಸಿ ಎಲ್ಲವೂ ಸ್ವಯಂ ಆಗಿರುತ್ತಾನೆ. ಅವನು ಕೆಲಸಗಾರನಾಗಿ ಸಂಬಳದ ಮೇಲೆ ಕೆಲಸ ಮಾಡುವುದಿಲ್ಲ, ದಲ್ಲಾಳಿಗಳು ಹಾಗೂ ವ್ಯಾಪಾರಿಗಳಿಂದ ಕಚ್ಚಾಮಾಲನ್ನು ಮುಂಗಡ ತರಿಸಿ, ಅದನ್ನೇ ಪಕ್ಕಾ ಸರಕನ್ನಾಗಿ ಅವರಿಗೇ ಕೊಟ್ಟು, ಸಪೋರ್ಟಿವ್ ಆದ ಕೆಲಸವನ್ನು ಅವಶ್ಯ ಮಾಡುತ್ತಾನೆ. ನಾವು ಒಂದು ಕಡೆ

ತಂತ್ರಜ್ಞರ ಸಹಯೋಗೀ ಸಮಿತಿಯನ್ನು ಸಂಘಟಿಸಬಹುದು, ಇನ್ನೊಂದು ಕಡೆ ವ್ಯಾಪಾರಿಗಳನ್ನು ಕೂಡ ಆಧುನಿಕ ರೀತಿಯಲ್ಲಿ ಉತ್ಪಾದಕರನ್ನಾಗಿ ಮಾಡಬಲ್ಲೆವು. ಪಂಜಾಬು, ಬಂಗಾಲ ಮುಂತಾದ ಕಡೆ ಉದ್ಯಮ–ಕೈಗಾರಿಕೆ ಈ ರೀತಿಯಲ್ಲಿಯೇ ವಿಕಾಸಗೊಂಡಿವೆ. ಈ ಚಿಕ್ಕ ಬಂಡವಾಳಿಗರ ಎದುರು ಉತ್ಪಾದನೆಯ ದೊಡ್ಡ ಯೋಜನೆಯನ್ನು ಇಡುವುದು ಅಂದರೆ ಅದರ ಉತ್ಸಾಹ ಕುಂದಿಸುವುದು ಅಥವಾ ಅವರನ್ನು ಸಗಟು ವ್ಯಾಪಾರಿಗಳನ್ನಾಗಿ ಮಾಡುವುದು.

ನಾವು ಯಾವ ಮಗ್ಗುಲಿನಿಂದಲೇ ನೋಡಲಿ, ಬಂಡವಾಳದ ದೃಷ್ಟಿಯಿಂದ ಭಾರತಕ್ಕೆ ಉಪಯೋಗಿಯಾಗಿರುವುದು ಸಣ್ಣ ಹಾಗೂ ಮಧ್ಯಮ ದರ್ಜೆಯ ಉದ್ಯಮವೆ.

**ವ್ಯವಸ್ಥೆ ಅಥವಾ ಸಂಘಟನೆ**

ವ್ಯವಸ್ಥೆ ಮತ್ತು ಸಂಘಟನೆಯ ಕೌಶಲ ಕೂಡ ಉದ್ಯಮಗಳ ಸ್ವರೂಪ ಮತ್ತು ಅಂದಾಜಿನೊಡನೆ ಆಳವಾದ ಸಂಬಂಧ ಹೊಂದಿವೆ. ಕೌಶಲವೆನ್ನುವುದು ವ್ಯಕ್ತಿಗತವಾದ ಗುಣವಾದರೂ, ಅದಕ್ಕೆ ಸಂಬಂಧಿಸಿದಂತೆ ಯಾವುದೇ ನಿಯಮವನ್ನು ನಾವು ಮಾಡಲಾರೆವು. ಆದರೂ ಕೂಡ ಸರ್ವಸಾಮಾನ್ಯ ಮಿತಿಗಳನ್ನು ಅವಶ್ಯವಾಗಿ ನಿಶ್ಚಿತಗೊಳಿಸಬಹುದು. ದೊಡ್ಡ ದೊಡ್ಡ ಉದ್ಯಮಗಳ ನಿಯಮಬದ್ಧತೆ ಮತ್ತು ಸಂಘಟನೆಯಲ್ಲಿ ಅವಶ್ಯಕವಾದ ಕುಶಲತೆಯೆನ್ನುವುದು ವಿರಳವಾಗಿರುತ್ತದೆ. ನಾವು ದೊಡ್ಡ ಉದ್ಯಮಗಳನ್ನೇ ಆಧಾರವನ್ನಾಗಿ ಮಾಡಿಕೊಂಡರೆ ಎರಡು ಪರಿಣಾಮಗಳು ಆಗಬಹುದು. ಸಾಮಾನ್ಯ ವ್ಯಕ್ತಿಯು ಅವುಗಳ ಸಂಘಟನೆಯ ವಿಚಾರವನ್ನೇ ಮಾಡದಿರುವುದು, ಅಥವಾ ಬಹಳಷ್ಟು ಉದ್ಯಮಗಳನ್ನು ಹುಟ್ಟಿದ ಕೆಲವೇ ದಿನಗಳ ನಂತರ ಅವಸಾನ ಹೊಂದುವುದನ್ನು ನೋಡುವುದು. ಭಾರತದಲ್ಲಷ್ಟೇ ಅಲ್ಲ ಅಮೇರಿಕದಂತಹ ದೇಶದಲ್ಲಿ ಕೂಡ ಈ ಬೃಹತ್ ಉದ್ಯಮಗಳ ಶಿಶುಮರಣದ ಪ್ರಮಾಣ ಬಹಳ ಹೆಚ್ಚಾಗಿದೆ. ಒಂದು ಅಂದಾಜಿನ ಪ್ರಕಾರ, ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಪ್ರಾರಂಭವಾಗುವ ಕಾರ್ಖಾನೆಗಳಲ್ಲಿ ಶೇ. ೬೬ ಒಂದು ವರ್ಷಕ್ಕಿಂತ ಮುಂದೆ ನಡೆಯುವುದೇ ಇಲ್ಲ, ಹಾಗೂ ೫ ವರ್ಷಕ್ಕಿಂತ ಮುಂದೆ ನಡೆಯುವವುಗಳ ಸಂಖ್ಯೆ ಕೇವಲ ಶೇ. ೨೦ ಆಗಿದೆ. ಈ ಅಂಕಿ ಸಂಖ್ಯೆಗಳು ನಮ್ಮನ್ನು ಬೆಚ್ಚಿ ಬೀಳಿಸುತ್ತವೆ. ಆದರೆ ಯಾವ ಪ್ರತಿಸ್ಪರ್ಧಿಯು ಮತ್ಸ್ಯನ್ಯಾಯದ ಅರ್ಥವ್ಯವಸ್ಥೆಯನ್ನು ಆಧಾರವನ್ನಾಗಿಟ್ಟುಕೊಂಡು ನಡೆಯುತ್ತಾನೋ, ಅವನಿಗೆ ಅಸಂಭವವಾದುದೇನೂ ಇಲ್ಲ. ಭಾರತದ ಎಷ್ಟೊಂದು ದೊಡ್ಡ ಉದ್ಯಮಗಳು ನಡೆಯುತ್ತವೆ, ಅವುಗಳಲ್ಲಿ ಯೋಗ್ಯ ಮ್ಯಾನೇಜರ್ ಹಾಗೂ ವ್ಯವಸ್ಥಾಪಕರ ಕೊರತೆ ಇದ್ದೇ ಇದೆ. ಸರಕಾರದ ಎದುರೂ ಇದೇ ಸಮಸ್ಯೆಯಿದೆ. ಉದ್ಯಮಗಳ ವ್ಯವಸ್ಥೆ ಮತ್ತು ಅದೂ ಇಂದಿನ ಗೂಢ ಅರ್ಥ–ತಂತ್ರದಲ್ಲಿ ಸಾಕಷ್ಟು ಶಿಕ್ಷಣ, ಜ್ಞಾನ, ಪರಿಶ್ರಮ, ಕಲ್ಪಕತೆ, ಶತಾವಧಾನತೆ, ಹಾಗೂ ಬುದ್ಧಿಮತ್ತೆಯನ್ನು ಬೇಡುತ್ತದೆ. ಇದಕ್ಕಾಗಿ ಯೋಗ್ಯವರ್ಗದ ವಿಕಾಸಕ್ಕೆ ಸಮಯ ಹಿಡಿದೀತು. ಇಲ್ಲವಾದರೆ ನಾವು ಸ್ವಲ್ಪವಲ್ಲ ಸ್ವಲ್ಪ ಲಪಟಾಯಿಸುವ ಅಥವಾ ಅಪರಾ ತಪರಾ ಮಾಡುವವರನ್ನೇ ಸೃಷ್ಟಿಸುತ್ತೇವೆ.



**ವ್ಯಕ್ತಿಯ ಮಿತಿಗಳು**

ದೊಡ್ಡ ಉದ್ಯಮಗಳಲ್ಲಿ ನಿಧಾನವಾಗಿ ವ್ಯಕ್ತಿಯ ಸಂಬಂಧ ದೂರದ್ದಾಗುತ್ತ ಹೋಗುತ್ತದೆ. ಒಂದು ಎಲ್ಲೆಯ ನಂತರ ಯಾವುದೇ ವ್ಯಕ್ತಿ ಅವರ ಕಡೆ ಪ್ರಾಮಾಣಿಕತೆಯಿಂದ ಗಮನ ಕೊಡಲಾರನು. ಶ್ರೀ ಓವನ್, ಡಿ. ಯಂಗ್ ಅವರು ಅಮೇರಿಕಾ ಸಂಯುಕ್ತ ಸಂಸ್ಥಾನದ ಒಂದು ಸಮಿತಿಯ ಎದುರು ಸಾಕ್ಷಿ ನೀಡುತ್ತ ಹೇಳಿದ್ದರು. “ಇವತ್ತಿನ ಔದ್ಯೋಗಿಕ ಸಾಮ್ರಾಜ್ಯಗಳ ಆಕಾರ, ಪ್ರಕಾರ ಮತ್ತು ನ್ಯಾಯದ ಕಾರಣ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿ ಸಮೂಹಕ್ಕೆ, ಅವನೆಷ್ಟೇ ತೀಕ್ಷ್ಣ ಬುದ್ಧಿಮತ್ತೆಯವನಾಗಿರಲಿ, ಈ ಜಟಿಲ ಅಂಕುಡೊಂಕು ಸ್ತೂಪಸದೃಶವಾದ ಸಂಘದ ಕಾರ್ಯ ಚಟುವಟಿಕೆಯನ್ನು ಕುಶಲತೆಯಿಂದ ಸಂಚಾಲನವಂತೂ ದೂರವೇ ಆಗಿದೆ, ತಿಳಿಯುವುದಂತೂ ಮತ್ತೂ ಅಸಂಭವ.” ದೊಡ್ಡ ಉದ್ಯಮ–ಕೈಗಾರಿಕೆ ನಡೆಯುತ್ತವೆ ಮತ್ತು ಲಾಭವನ್ನೂ ಕೊಡುತ್ತಿರುತ್ತವೆಯೆಂದರೆ ಆರ್ಥಿಕದ ಹೊರತಾಗಿ ಅನ್ಯಕಾರಣಗಳಿಂದ ಹಲವು ಅನುಚಿತ ಸೌಲಭ್ಯಗಳು ದೊರೆಯುವ ಕಾರಣದಿಂದ ಭಾರತದಲ್ಲಿ ಮ್ಯಾನೇಜಿಂಗ್ ಏಜನ್ಸಿ ಪದ್ಧತಿಯ ಕೆಡುಕಿನ ಮೂಲ ಕಾರಣವೆಂದರೆ ಉದ್ಯೋಗಗಳ ಆಕಾರ ಮತ್ತು ಅಂತರ್ ಸಂಬಂಧವಾಗಿದೆ. ಜೊತೆಗೆ ಈ ಉದ್ಯೋಗಗಳ ಪರಿಸ್ಥಿತಿ ಪ್ರಕ್ರಿಯೆಯ ವಿಷಯದಲ್ಲಿ ಜ್ಞಾನವಿರುವ ವ್ಯಕ್ತಿಗಳ ಕೊರತೆ ಇರುವುದರಿಂದ ಈ ವಿಕೇಂದ್ರೀಕರಣದ ಪ್ರವೃತ್ತಿ ಮತ್ತಷ್ಟು ಮುಂದುವರಿಯುತ್ತಿದೆ.

**ಮಾನವಸಂಬಂಧ**

ಭಾರತದಲ್ಲಿ ವಿಶೇಷವಾಗಿ ಹಾಗೂ ಎಲ್ಲೆಡೆ ಪ್ರಾರಂಭಿಕ ಅವಸ್ಥೆಯಲ್ಲಿ ಯಾವುದೇ ಕಾರ್ಯದ ಸಫಲತೆಗಾಗಿ ಮಾನವೀಯ ಸಂಬಂಧಗಳ ಆಧಾರದ ಮೇಲೆ ಪ್ರೇರಣೆ, ಮಾರ್ಗದರ್ಶನ, ಹಾಗೂ ನಿಯಂತ್ರಣ ಅವಶ್ಯವಾಗಿದೆ. ದೊಡ್ಡ ಉದ್ಯಮಗಳಲ್ಲಿ ಮಾನವನು ಒಂದು ಬಹುದೊಡ್ಡ ಯಂತ್ರದ, ಒಂದು ಹೃದಯಹೀನ ಸಮಷ್ಟಿಯ ಭಾಗ ಮಾತ್ರ ಆಗುತ್ತಾನೆ. ಇದು ಮನುಷ್ಯನಿಗೆ ಉಪಯುಕ್ತವಾಗಲಾರದು. ಭಾರತದ ಸಂಸ್ಕೃತಿಯು ಎಂದೂ ಮಾನವನನ್ನು ಬದಿಗೆ ತಳ್ಳಿ ವಿಚಾರ ಮಾಡಲೇ ಇಲ್ಲ. ನಮಗೆ ಇಂಥ ಯಂತ್ರದಲ್ಲಿ ಕೆಲಸ ಮಾಡುವುದು ಕಷ್ಟ. ಹಾಗೊಮ್ಮೆ ನಾವು

ಮಾಡಿದರೂ ಅದರಲ್ಲಿ ನಾವು ನಮ್ಮ ವ್ಯಕ್ತಿತ್ವದ ಉಜ್ವಲ ಸ್ವರೂಪವನ್ನು ಪ್ರಕಟಗೊಳಿಸಲಾರೆವು. ಈ ವಿಚಾರದಿಂದಲೂ ಕೂಡ, ಕುಟುಂಬದ ಆಧಾರದ ಮೇಲೆ ಕೆಲಸವನ್ನು ಜೀವನದ ಅಂಗ ಮಾಡಿಕೊಂಡು ನಡೆಯುವ ನಮ್ಮ ಉದ್ಯಮದ ಪದ್ಧತಿಯೇ ಉಪಯುಕ್ತವಾದದ್ದು. ಇದರಲ್ಲಿ ಮಾಲಿಕ–ಕಾರ್ಮಿಕ, ಉತ್ಪಾದಕ–ಬಳಕೆದಾರ ಇತ್ಯಾದಿ ಸಂಬಂಧಗಳ ಸರಿಯಾದ ನಿರ್ಧಾರ ಆಗಬಹುದು. ನಾವು ಈ ಸಂಬಂಧಗಳ ನಿಯಂತ್ರಣವನ್ನು ಪಶ್ಚಿಮದ ಮೌಲ್ಯಗಳಿಂದ ಮಾಡಲಾರೆವು. ಅವರು ಕಟುತನವನ್ನು ಸೃಷ್ಟಿಸಿದ್ದಾರೆ. ನಮ್ಮ ಫ್ಯಾಕ್ಟರಿ ಆ್ಯಕ್ಟ್, ಇತ್ಯಾದಿ ಎಲ್ಲ ಕಾನೂನುಗಳು ಪಶ್ಚಿಮದ ನಕಲು ಮಾಡಿಕೊಂಡು ಸಿದ್ಧವಾಗಿವೆ. ಅವರು ಹದಿನೆಂಟು ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟನ್ ಹಾಗೂ ಯೂರೋಪ್‌ನ ಅನ್ಯದೇಶಗಳಲ್ಲಿ ಕಾಣಿಸಿಕೊಂಡ, ಹಾಗೂ ಕಾರ್ಲ್‌ಮಾರ್ಕ್ಸ್‌ನು ಚಿತ್ರಿಸಿದ ಆ ಉದ್ಯಮಿಗಳ ಅದೇ ರೂಪದಲ್ಲಿ ನೋಡುತ್ತಾರೆ. ಭಾರತದ ಕೆಲವು ಉದ್ಯಮಿಗಳು ಕೂಡ ಪಶ್ಚಿಮದ ಉದ್ಯಮಗಳ ಪರಂಪರೆಯನ್ನು ಭಾರತದಲ್ಲಿ ಮುಂದುವರೆಸಲು ಅವರದೇ ವೇಷವನ್ನು ಧರಿಸಿರಬಹುದು. ಆದರೆ ದೇಶದ ವ್ಯಾಪಕ ಔದ್ಯೋಗೀಕರಣದಲ್ಲಿ ಮಾನವ ಸಂಬಂಧಗಳ ನಿರ್ಮಾಣವನ್ನು ನಾವು ನಮ್ಮದೇ ಮೌಲ್ಯಗಳ ಆಧಾರದ ಮೇಲೆ ಮಾಡಬೇಕಾಗುತ್ತದೆ. ಚಿಕ್ಕ ಉದ್ಯಮಗಳಿಂದ ನಾವು ಅದರ ಸ್ವರೂಪವನ್ನು ನಿಶ್ಚಿತಗೊಳಿಸಬಲ್ಲೆವು.

# ೯. ಸರಕು, ಬೇಡಿಕೆ, ಹಾಗೂ ಔದ್ಯೋಗಿಕ ಆದ್ಯತೆಗಳು

**ಆಯಾತ–ಅವಲಂಬನೆ**

ಔದ್ಯೋಗೀಕರಣದ ಅರ್ಥವೆಂದರೆ ಕಚ್ಚಾ ಸರಕನ್ನು ಪ್ರಕ್ರಿಯೆಗೆ ಒಳಪಡಿಸಿ ಅದನ್ನು ಬಳಕೆಯ ವಸ್ತುವನ್ನಾಗಿ ತಯಾರಿಸುವುದು. ಕಚ್ಚಾಮಾಲು ಹಾಗೂ ಪಕ್ಕಾ ಮಾಲಿನ ಬೇಡಿಕೆಯೇ ಔದ್ಯೋಗೀಕರಣದ ಸ್ವರೂಪ ಮತ್ತು ಪ್ರಮಾಣವನ್ನು ನಿಶ್ಚಿತಗೊಳಿಸುತ್ತವೆ. ಕಚ್ಚಾಮಾಲು ಅಂದಾಗ ವ್ಯಕ್ತಿಯ ದೃಷ್ಟಿಯು ಸ್ವಾಭಾವಿಕವಾಗಿಯೇ ತನ್ನ ಅಕ್ಕ ಪಕ್ಕದ ಪ್ರಕೃತಿ ಸಂಪತ್ತು ಹಾಗೂ ಕೃಷಿ ಉತ್ಪಾದನೆಗಳ ಕಡೆ ಹರಿಯಬೇಕು. ಆದರೆ ನಿರ್ಮಿತ ವಸ್ತುವಿನ ಸ್ವರೂಪ ಪಶ್ಚಿಮದಲ್ಲಿಯೇ ನಿಶ್ಚಿತವಾಗುವುದರಿಂದ, ಅವರೊಡನೆಯೇ ನಾವು ನಮ್ಮನ್ನು ಕಟ್ಟಿ ಹಾಕಿಕೊಂಡಿರುವುದರಿಂದ ಹಾಗೂ ನಿರ್ಮಾಣ ವಿಧಾನದ ಪೂರ್ಣ ಜ್ಞಾನ ಇಲ್ಲದಿರುವುದರಿಂದ, ನಾವು ನಮ್ಮ ಸಂಪೂರ್ಣ ಸಂಪತ್ತನ್ನು ಈವರೆಗೂ ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಇಂದಿನ ನಮ್ಮ ಔದ್ಯೋಗೀಕರಣ ತನ್ನ ಕಚ್ಚಾಮಾಲಿನ ಬಳಕೆ ಮಾಡದೆ ವಿದೇಶಗಳಿಂದ ಆಮದು ಮಾಡಿಕೊಂಡ ಕಚ್ಚಾ ಅಥವಾ ಅರ್ಧ ತಯಾರಾದ ಮಾಲುಗಳನ್ನೇ ಆಧರಿಸಿಕೊಂಡು ನಡೆಯುವಂಥ ಕೆಲವೇ ಉದ್ದಿಮೆಗಳು ದೊರೆಯುತ್ತವೆ. ಆದರೆ ಯಾವುದೇ ಉದ್ಯಮವು ಭಾರತದಲ್ಲಿ ಸೃಷ್ಟಿಯಾದ ಮಾಲಿಗೆ ಪರ್ಯಾಯ ಅಥವಾ ಪೂರಕದ ರೂಪದಲ್ಲಿ ಉತ್ಪಾದನೆ ಮಾಡುವ ಉದ್ದೇಶದಿಂದ ಆಗಿದ್ದರೆ, ಅವುಗಳ ಪರಾವಲಂಬನೆ ಬಹಳ ಕೆಡುಕೆನಿಸುತ್ತದೆ. ಪ್ಲಾಸ್ಟಿಕ್ ಮತ್ತು ರೇಯಾನ್ ಅಂಥ ಉದ್ದಿಮೆಗಳಾಗಿವೆ. ಇವುಗಳಲ್ಲಿ ಬಹಳಷ್ಟು ಈವರೆಗೂ ಯಂತ್ರಗಳಿಗಾಗಿ ಮಾತ್ರವಲ್ಲ ಕಚ್ಚಾ ಮಾಲಿಗಾಗಿಯೂ ವಿದೇಶಗಳ ಮೇಲೆ ಅವಲಂಬಿಸಬೇಕಾಗುತ್ತದೆ. ಭಾರತದಲ್ಲಿ ಸಾಕಷ್ಟು ಎಣ್ಣೆಯನ್ನು ಉತ್ಪಾದನೆ ಮಾಡಬಹುದಾಗಿದ್ದರೂ, ನಾವು ಸಾಬೂನಿಗಾಗಿ ಎಣ್ಣೆಯನ್ನು ಬೇರೆ ದೇಶಗಳಿಂದಲೇ ತರಿಸಬೇಕಾಗುತ್ತದೆ. ಉದ್ದನೆಯ ನೂಲಿನ ರೇಶ್ಮೆ ಹಾಗೂ ಹತ್ತಿಗಾಗಿ ಮತ್ತು ಸೆಣಬಿಗಾಗಿ ಕೂಡ ದೇಶವು ವಿಭಜನೆಯಾದ ಮೇಲೆ ನಾವು ಸ್ವಾವಲಂಬಿಯಾಗಿ ಉಳಿಯಲೇ ಇಲ್ಲ. ನಾವು ರೇಡಿಯೋಗಳನ್ನು ಚನ್ನಾಗಿ ತಯಾರಿಸುತ್ತೇವೆ. ಆದರೆ ಅದರ ಶೇ. ೯೦ ಭಾಗವನ್ನು ಹೊರಗಿನಿಂದಲೇ ಆಮದು ಮಾಡಿಕೊಂಡು ಜೋಡಿಸುತ್ತೇವೆ. ಡ್ರೈಬ್ಯಾಟರಿಗಳಲ್ಲಿ ಶೇ. ೭೮ ಮತ್ತು ವಿದ್ಯುತ್ ಬಲ್ಬ್ ತಯಾರಿಕೆಯಲ್ಲಿ

ಶೇ. ೯೦ ಆಮದಿನ ಮೇಲಿನ ಅವಲಂಬನೆಯೇ ಆಗಿದೆ. ೧೯೫೬–೫೭ ರಲ್ಲಿ ನಾವು ೧೩೮.೭೩ ಕೋಟಿ ರೂಪಾಯಿಗಳ ಕಚ್ಚಾ ಮಾಲನ್ನು ಹೊರಗಿನಿಂದ ತರಿಸಬೇಕಾಯಿತು. ಇದರ ಹೊರತಾಗಿ ಸುಮಾರು ೨೦೦ ಕೋಟಿ ರೂಪಾಯಿಗಳಷ್ಟು ಅರ್ಧ ತಯಾರಾದ ವಸ್ತುಗಳನ್ನು ಹೊರಗಿನಿಂದ ತರಿಸುತ್ತೇವೆ.

ನಮ್ಮ ಈ ಅತ್ಯಧಿಕ ಆಮದಿನ ಅವಲಂಬನೆಯ ಕಾರಣದಿಂದ ಉದ್ಯಮ–ಕೈಗಾರಿಕೆಗಳಲ್ಲಿ ಸಂಪೂರ್ಣ ವಿದೇಶೀ ಅನುಕರಣೆಯೇ ಆಗಿದೆ. ಭಾರತದಲ್ಲಿ ತೆರೆದ ವಿದೇಶೀ ಕಂಪನಿಗಳು ಹಲವು ಉದ್ದಿಮೆಗಳಿಗಾಗಿ ಬಹಳಷ್ಟು ಕಚ್ಚಾ ಮಾಲನ್ನು ಹೊರಗಿನಿಂದ ತರಿಸುತ್ತವೆ. ಉದಾಹರಣೆಗೆ ಸಾಬೂನು ಹಾಗೂ ಬಣ್ಣದ ಉದ್ದಿಮೆಗಳು. ಇತ್ತೀಚಿನ ಕೆಲವು ಉದ್ಯಮಗಳು ಕೇವಲ ಹೊರಗಿನಿಂದ ಮಾಲನ್ನು ತರಿಸಿ ಅವುಗಳ ಪ್ಯಾಕಿಂಗ್ ಅಥವಾ ಜೋಡಣೆಯನ್ನು ಮಾತ್ರ ಮಾಡುತ್ತವೆ. ಇನ್ನೊಂದು ಕಡೆ ದೇಶಕ್ಕಾಗಿ ಎಣ್ಣೆ ಹಾಗೂ ಹಿಂಡಿ ಅಗತ್ಯವಾಗಿದ್ದರೂ, ಅವುಗಳನ್ನು ಒಂದೇ ಸವನೆ ವಿದೇಶಗಳಿಗೆ ರಫ್ತು ಮಾಡುತ್ತಿರುತ್ತೇವೆ. ಚರ್ಮವನ್ನು ಹದಗೊಳಿಸಲು ಈವರೆಗೆ ವಾಟಲ್ ತೊಗಟೆಯನ್ನು ದಕ್ಷಿಣ ಆಫ್ರಿಕಾದಿಂದ ತರಿಸುತ್ತಿದ್ದೆವು. ನಮ್ಮ ಹಳೆಯ ಉದ್ಯಮವನ್ನು ಆಧಾರವನ್ನಾಗಿ ಮಾಡಿಕೊಂಡು ವಿಕಾಸದ ಹಾದಿಯನ್ನು ನಿಶ್ಚಿತಗೊಳಿಸಿಕೊಂಡರೆ, ನಾವು ಯಶಸ್ವಿಯಾಗಲು ಸಾಧ್ಯ. ನಾವು ಹೆಚ್ಚು ತಯಾರಿಸುವ ವಸ್ತುಗಳನ್ನು ತಂತ್ರಜ್ಞಾನಕ್ಕೆ ಒಳಪಡಿಸಿದರೆ ನಾವು ಒಂದು ಪ್ರಭಾವೀ ಸ್ಥಿತಿಯನ್ನು ಪಡೆಯಬಹುದು. ಎರಡನೆಯದಾಗಿ ನಾವು ಯಾವ ಸಾಧನಗಳಿಂದ ಅನೇಕ ವಸ್ತುಗಳನ್ನು ನಿರ್ಮಾಣ ಮಾಡುತ್ತ ಬಂದಿದ್ದೇವೋ ಅದನ್ನೇ ವಿಕಸಿತಗೊಳಿಸಬೇಕು. ಅಥವಾ ಅವುಗಳ ಉಪಯುಕ್ತ ಪರ್ಯಾಯವನ್ನು ದೇಶದಲ್ಲಿಯೇ ಹುಡುಕಿ ತೆಗೆಯಬೇಕು. ವಿದೇಶಗಳಿಂದ ಸರಕುಗಳನ್ನು ತರಿಸಿ ಅವುಗಳ ಅಲ್ಪಸ್ವಲ್ಪ ತಂತ್ರಜ್ಞಾನ ಬಳಸಿ ನಮ್ಮ ದೇಶದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾರೆವು.

## ಹೊಲ ಮತ್ತು ಕಾರಖಾನೆಗಳ ನಡುವಿನ ಅಂತರ

ದೇಶದ ಒಳಗೇನೇ ದೊರೆಯುವ ಕಚ್ಚಾ ವಸ್ತುಗಳು ಹಾಗೂ ಅವುಗಳ ಕಾರಖಾನೆಗಳನ್ನು ನಾವು ಸರಿಯಾದ ರೀತಿಯಲ್ಲಿ ಹೊಂದಿಸಲಿಲ್ಲ. ಬಹಳಷ್ಟು ಕಾರಖಾನೆಗಳು ಬೇರೆ ಬೇರೆ ಐತಿಹಾಸಿಕ ಕಾರಣಗಳಿಂದ ಮುಂಬಯಿ ಮತ್ತು ಕಲಕತ್ತಾದ ಸುತ್ತ ಮುತ್ತ ತೆರೆದಿವೆ. ಅರ್ಥಾತ್ ಕಚ್ಚಾವಸ್ತುಗಳಿರುವಲ್ಲಿ ಕಾರಖಾನೆ ತೆರೆಯುವುದರ ಬದಲು, ಕಾರಖಾನೆಗಳಿರುವಲ್ಲಿ ವಸ್ತುಗಳನ್ನು ಹೊತ್ತೊಯ್ಯುವ ನೀತಿಯನ್ನು ಅನುಸರಿಸಿದ್ದೇವೆ. ಇದರ ಪರಿಣಾಮ ದೇಶದ ಔದ್ಯೋಗೀಕರಣದ ಅತ್ಯಂತ ಅಸಮತೋಲನ. ಕಚ್ಚಾ ಮತ್ತು ಪಕ್ಕಾ ಮಾಲುಗಳ ನಡುವೆ ಬೆಲೆಯಲ್ಲಿ ಅಂತರವೂ ಈ ಕಾರಣದಿಂದಲೇ ಆಗಿದೆ. ಈ ಎಲ್ಲ ದೃಷ್ಟಿಯಿಂದ ವಿಚಾರ ಮಾಡಿದಾಗ



ಔದ್ಯೋಗೀಕರಣದ ಜಾಲ ವಿಕೇಂದ್ರೀಕೃತಗೊಳ್ಳಬೇಕು. ಅದರ ಆಧಾರದ ಮೇಲೆ ಎಲ್ಲ ಪ್ರದೇಶಗಳು, ಎಲ್ಲ ಗ್ರಾಮಗಳಲ್ಲೂ ಹರಡಬೇಕು.

## ಬೇಡಿಕೆ : ವಿದೇಶಗಳಲ್ಲಿ ಹೊಸ ಮಾರುಕಟ್ಟೆಯ ಶೋಧ

ಬೇಡಿಕೆ ಮತ್ತು ಉದ್ಯಮಗಳ ಸರಿಯಾದ ಸಂಬಂಧ ಉಂಟಾದಲ್ಲಿ, ಒಂದು ಸಂತುಲಿತ ಅರ್ಥ ವ್ಯವಸ್ಥೆ ಇರುತ್ತದೆ. ಸಾಧಾರಣವಾಗಿ ಬೇಡಿಕೆಯಿರುವ ವಸ್ತುಗಳನ್ನು ಉತ್ಪಾದನೆ ಮಾಡಬೇಕು. ಆದರೆ ಇತ್ತೀಚೆಗೆ ಮಾರುಕಟ್ಟೆಯನ್ನು ಹುಡುಕಲು, ಹಾಗೂ ಜನರ ಅಭಿರುಚಿಯನ್ನು ತಿಳಿಯಲು–ಪರೀಕ್ಷಿಸಲು ಹೆಚ್ಚಿನ ಜಾಹೀರಾತು ಹಾಗೂ ಪ್ರಚಾರತಂತ್ರದ ಸಹಾಯದಿಂದ ಮಾರುಕಟ್ಟೆಯನ್ನು ರೂಢಿಸಿಕೊಳ್ಳಲು, ಜನರಲ್ಲಿ ಅಭಿರುಚಿಯನ್ನು ನಿರ್ಮಾಣ ಮಾಡಲು ಮತ್ತು ಬದಲಿಸಲು ಕೂಡ ಒತ್ತು ಕೊಡಲಾಗುತ್ತಿದೆ. ಆದ್ದರಿಂದ ದೇಶದಲ್ಲಿ ಯಾವ ವಸ್ತುಗಳಿಗೆ ಬೇಡಿಕೆಯಿದೆಯೋ, ಅವುಗಳಿಗಾಗಿ ಉದ್ಯಮವನ್ನು ಸ್ಥಾಪಿಸುವುದರ ಜೊತೆಗೆ ನಾವು ತಯಾರಿಸುವ ವಸ್ತುಗಳಿಗಾಗಿ ಹೊಸ ಹೊಸ ಪೇಟೆಗಳನ್ನು ಹುಡುಕುವ ಬಗೆಗೂ ಚಿಂತಿಸಬೇಕಾಗಿದೆ. ನಾವು ಪಶ್ಚಿಮದ ಪ್ರಜಾಪ್ರಭುತ್ವದಿಂದಾಗಿ ಅಭಿರುಚಿಯನ್ನೇನೋ ಬದಲಿಸಿಕೊಂಡೆವು, ಮತ್ತು ಈ ರೀತಿ ನಮ್ಮ ಉದ್ದಿಮೆ–ವ್ಯಾಪಾರಗಳಿಗಾಗಿ ದೇಶದ ಪೇಟೆಯನ್ನೂ ಮುಗಿಸಿಬಿಟ್ಟೆವು. ಆದರೆ ಈ ಉದ್ದಿಮೆಗಳಿಗಾಗಿ ಬೇರೆ ಮಾರುಕಟ್ಟೆಯನ್ನು ಹುಡುಕೋಣ ಎಂಬ ಯೋಚನೆಯನ್ನಾಗಲಿ ಪ್ರಯತ್ನವನ್ನಾಗಲಿ ಮಾಡಲೇ ಇಲ್ಲ. ಪ್ರಯತ್ನ ಮಾಡಿದರೆ ಪಶ್ಚಿಮದ ದೇಶಗಳಲ್ಲಿ ನಮ್ಮ ವಸ್ತುಗಳಿಗೆ ಬಹುದೊಡ್ಡ ಬೇಡಿಕೆಯನ್ನು ಉಂಟು ಮಾಡಿಕೊಳ್ಳಬಹುದು. ಮನುಷ್ಯನು ಸ್ವಭಾವತಃ ಒಂದೇ ಬಗೆಯ ವಸ್ತುಗಳನ್ನು ಅಪೇಕ್ಷಿಸುವುದಿಲ್ಲ, ಇಷ್ಟಪಡುವುದೂ ಇಲ್ಲ. ನಾವಿಂದು ಮನುಷ್ಯನ ಹಸ್ತಕೌಶಲ ಹಾಗೂ ದಕ್ಷತೆಯ ಪರಿಣಾಮವಾಗಿ ಕಲಾಪೂರ್ಣವಾದ, ವೈವಿಧ್ಯಮಯವಾದ, ಕೃತಿಗಳ ಸೌಂದರ್ಯದಿಂದ ಆಕರ್ಷಿತರಾದ ಹಾಗೂ ಯಂತ್ರಗಳ ಏಕರೂಪ ಉತ್ಪಾದನೆಯಿಂದ ವಿಮುಖರಾದ ಪಶ್ಚಿಮದ ಜನರಲ್ಲಿ ನಿಶ್ಚಿತವಾಗಿಯೂ ಅದರ ಪ್ರತಿಕ್ರಿಯೆಯನ್ನು ಉತ್ಪನ್ನ ಮಾಡಿ, ಯಂತ್ರಕ್ಕಿಂತ ಮನುಷ್ಯ ಸೃಷ್ಟಿಯಲ್ಲಿ ಪ್ರೀತಿಯನ್ನು ಹುಟ್ಟಿಸಬಹುದು. ನಾವು ನಮ್ಮ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಬೇಕು. ಅಂದರೆ ಮಾರುಕಟ್ಟೆಯಲ್ಲಿ ನಮ್ಮ ವಸ್ತುಗಳಿಗೆ ಬೇಡಿಕೆಯನ್ನು ಹೆಚ್ಚಿಸಬೇಕು.

## ದೇಶದಲ್ಲಿ ವ್ಯಾಪಕವಾದ ಮಾರುಕಟ್ಟೆ

ವಿದೇಶಗಳಲ್ಲಿ ನಾವು ಹೊಸ ಹೊಸ ಪೇಟೆಗಳನ್ನು ಹುಡುಕುತ್ತ ವೃದ್ಧಿಪಡಿಸುತ್ತ ಇರಬಹುದು. ಆದರೆ ಅಲ್ಲಿನ ಬೇಡಿಕೆಯ ಆಧಾರದ ಮೇಲೆ ನಮ್ಮ ದೇಶವನ್ನು

ಸುದೃಢ ಬಾಳಿಕೆಯ ಔದ್ಯೋಗಿಕ ನೆಲೆಯನ್ನು ಕಟ್ಟಿ ನಿಲ್ಲಿಸಲಾರೆವು. ನಮ್ಮ ಕಾರ್ಯಕ್ರಮದ ಮುಖ್ಯ ಆಧಾರ ನಮ್ಮ ದೇಶದ ಪೇಟೆಯೇ ಆಗಿರಬಲ್ಲುದು. ಭಾರತವು ಇಷ್ಟೊಂದು ವಿಶಾಲವಾದ ದೇಶ, ಹಾಗೂ ಅದರ ಜನಸಂಖ್ಯೆ ಎಷ್ಟೊಂದು ಹೆಚ್ಚಾಗಿದೆಯೆಂದರೆ ಅದು ಸ್ವಯಂ ಸ್ವಾವಲಂಬಿಯಾದ ಅರ್ಥವ್ಯವಸ್ಥೆಗೆ ಆಧಾರವಾಗಿರಬಲ್ಲುದು. ನಮ್ಮ ಬೇಡಿಕೆಯೇನೂ ಕಡಿಮೆಯದಲ್ಲ.

**ಬೇಡಿಕೆ ಹಾಗೂ ಉತ್ಪಾದನೆಯ ಹೊಂದಾಣಿಕೆ**

ನಾವು ನಮ್ಮ ದೇಶದ ಬೇಡಿಕೆಯ ಬಗೆಗೆ ವಿಚಾರ ಮಾಡಿದಾಗ ನಮಗೆ ಮನುಷ್ಯನ (೧) ಪ್ರಾಥಮಿಕವಾದ ಹಾಗೂ ಅದರಿಂದಾಗಿ ಮುಖ್ಯವಾಗಿ ಆದಾಯ ನಿರಪೇಕ್ಷವಾದ (income inelastic) ಹಾಗೂ (೨) ಹೆಚ್ಚುತ್ತಿರುವ ಆದಾಯದೊಂದಿಗೆ ಹುಟ್ಟಿಕೊಳ್ಳುತ್ತಿರುವ ಬೇಡಿಕೆಗಳ ಬಗೆಗೆ ವಿಚಾರ ಮಾಡಬೇಕು. ಉತ್ಪಾದನೆಯ ಪದ್ಧತಿ, ಸಂಪತ್ತಿನ ಸಂಗ್ರಹ, ಮತ್ತು ಕರಾಕರಣೆ, ವಿತರಣ ವ್ಯವಸ್ಥೆ, ಸಾಮಾಜಿಕ ವಿಧಾನ, ಮತ್ತು ರೀತಿ–ನೀತಿಯಲ್ಲಿ ಪರಿವರ್ತನೆ ಈ ಕಾರಣಗಳಿಂದಲೂ ಕೆಲವು ಬೇಡಿಕೆಗಳಲ್ಲಿ ಬದಲಾವಣೆ ಉಂಟಾಗುತ್ತದೆ. ನಾವು ಇದನ್ನು ಗಮನದಲ್ಲಿಟ್ಟುಕೊಂಡೇ ನಮ್ಮ ಕಾರ್ಯಕ್ರಮವನ್ನು ತಯಾರಿಸಬೇಕು. ಜನರಿಗೆ ಅನ್ನ ಮತ್ತು ಬಟ್ಟೆಯ ಬೇಡಿಕೆಯಿದ್ದಾಗ, ನಾವು ರೇಡಿಯೋ ಸೆಟ್, ಕೃತಕ ಮುತ್ತು ತಯಾರಿಸುವ ಉದ್ಯೋಗವನ್ನು ಪ್ರಾರಂಭಮಾಡಿದರೆ ಯೋಗ್ಯವೆನಿಸಲಾರದು. ಆದಾಯ ಹೆಚ್ಚಾಗಿರುವ ಕಾರಣ ದಪ್ಪನೆಯ ಬಟ್ಟೆಯ ಬದಲು ಉತ್ಕೃಷ್ಟ ಬಟ್ಟೆಯನ್ನು ಬಯಸಿದರೆ, ನಾವು ಅದನ್ನು ತಯಾರಿಸಬೇಕಾಗುವುದು. ನಗರಪ್ರಧಾನವಾದ ಉತ್ಪಾದನಾ ಪದ್ಧತಿಯನ್ನು ಕೈಗೆತ್ತಿಕೊಂಡು, ನಗರದ ಬೇಡಿಕೆಯ ವಸ್ತುಗಳನ್ನು ಉತ್ಪಾದನೆ ಮಾಡಬೇಕು. ಅರ್ಥವ್ಯವಸ್ಥೆಯ ಸಂಪೂರ್ಣ ಸ್ತರದ ಅಭಿನ್ನ ಹಾಗೂ ಅಂತಃಸಂಬಂಧವಿರುವ ಕಾರಣ ನಮಗೆ ನಮ್ಮ ಪ್ರತಿಯೊಂದು ಯೋಜನೆಯ ಬೇಡಿಕೆಯ ಮೇಲೆ ಆಗುವ ಪರಿಣಾಮವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುವುದು. ಅದರ ಏರು ಇಳಿವಿನ ಅನುಸಾರವೇ ನಾವು ಉಪಾಯ ಮತ್ತು ಯೋಜನೆಯನ್ನು ಮಾಡಬೇಕು. ಆದ್ದರಿಂದ ಉದ್ಯಮದ ಸ್ವರೂಪವನ್ನು ನಿರ್ಧರಿಸುವಲ್ಲಿ ಶ್ರಮ, ಶಕ್ತಿ, ಬಂಡವಾಳ, ಮತ್ತು ವ್ಯವಸ್ಥಾಪನೆ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಲ್ಲದೆ ಅಲ್ಲಿಯೇ ಮಾರುಕಟ್ಟೆಯ ಬಗೆಗೂ ವಿಚಾರ ಮಾಡಬೇಕಾಗುತ್ತದೆ. ವಾಸ್ತವವಾಗಿ ಬೇಡಿಕೆಯೊಂದಿದ್ದರೆ ಎಲ್ಲವನ್ನೂ ಹೊಂದಿಸಬಹುದು, ಅದೇ ಇಲ್ಲವಾದರೆ ಉದ್ದಿಮೆಗಾಗಿ ಉದ್ದಿಮೆಯನ್ನು ಸ್ಥಾಪಿಸಲಾಗುವುದಿಲ್ಲ. ಔದ್ಯೋಗೀಕರಣದ ಕಾರ್ಯಕ್ರಮದ ಸಫಲತೆಯನ್ನು ಈ ರೀತಿಯಿಂದಲೂ ಗುರುತಿಸಬಹುದು. ಯಾವುದೇ ಸ್ತರದಮೇಲೆ, ಯಾವುದೇ



ಕ್ಷೇತ್ರದಲ್ಲಿ ಬೇಡಿಕೆಯ ಪೂರ್ತಿಯನ್ನು ಮಾಡಲಾಗದ ಕಾರಣ ಸಂಕಟ (Bottle-neck) ಹಾಗೂ ಬೇಡಿಕೆಯಿಲ್ಲದ ಉತ್ಪಾದನೆಯ ಕಾರಣ ಮಂದಿ ಮಾನವ ಸಂಪನ್ಮೂಲದ ಕೊರತೆಯ ಸ್ಥಿತಿಯನ್ನು ಉಂಟು ಮಾಡಬಾರದು. ಇದಕ್ಕಾಗಿ ನಾವು ಔದ್ಯೋಗಿಕ ಯೋಜನೆಗಳ ಆದ್ಯತೆಗಳನ್ನು ಕುರಿತು ವಿಚಾರ ಮಾಡಬೇಕು.

**ಉದ್ಯಮಗಳ ಪ್ರಸಾರ**

ಉದ್ಯಮ–ಕೈಗಾರಿಕೆಗಳನ್ನು ನಾವು ಈ ಮೂರು ವರ್ಗಗಳಲ್ಲಿ ಹಂಚಬಹುದಾಗಿದೆ. (೧) ಬಳಕೆಯ ವಸ್ತುಗಳ ಉದ್ಯಮ. (೨) ಉತ್ಪಾದನ ವಸ್ತುಗಳ ಉದ್ಯಮ. (೩) ಮೂಲ ಉದ್ಯೋಗ. ಮೊದಲನೆಯ ಶ್ರೇಣಿಯಲ್ಲಿ ಮನುಷ್ಯನ ಉಪಭೋಗದ ವಸ್ತುಗಳನ್ನು ತಯಾರಿಸುವ ಉದ್ದಿಮೆಗಳು ಬರುತ್ತವೆ. ಬಟ್ಟೆ, ಸಾಬೂನು, ಕಡ್ಡಿಪೆಟ್ಟಿಗೆ ಮುಂತಾದವುಗಳು. ಎರಡನೆಯ ಶ್ರೇಣಿಯಲ್ಲಿ ಉತ್ಪಾದಕ ವಸ್ತುಗಳನ್ನು ತಯಾರಿಸುವ ವಸ್ತುಗಳು ಬರುತ್ತವೆ. ಸಣಬು, ಟೈರ್–ಟ್ಯೂಬ್, ಪೆನ್ಸಿಲ್‌ನ ಲೆಡ್, ಯಂತ್ರಗಳು ಇತ್ಯಾದಿ. ಮೂಲಭೂತ ಉದ್ಯಮಗಳೆಂದರೆ ಅವುಗಳ ಸಹಾಯದಿಂದ ಉಪಭೋಗದ ಉತ್ಪಾದಕ ವಸ್ತುಗಳು ತಯಾರಾಗುತ್ತವೆ. ವಿದ್ಯುತ್, ಕಬ್ಬಿಣ, ಉಕ್ಕು, ಭಾರೀರಾಸಾಯನಿಕ, ಇತ್ಯಾದಿಗಳು ಇದರಲ್ಲಿ ಸೇರುತ್ತವೆ. ರೈಲು ಮುಂತಾದ ಜನೋಪಯೋಗಿ ಸೇವೆಗಳೂ ಇದರಲ್ಲಿ ಸೇರುತ್ತವೆ. ಈ ವರ್ಗೀಕರಣವು ಸ್ಥೂಲವಾದದ್ದು. ಒಂದೇ ವಸ್ತು ಒಂದು ಕಡೆ ಉಪಭೋಗದ ವಸ್ತುವಾಗಿದ್ದರೆ ಅದೇ ವಸ್ತು ಇನ್ನೊಂದು ಕಡೆ ಉತ್ಪಾದಕ ವಸ್ತುವಾಗಿರುತ್ತದೆ. ಸಾಧಾರಣವಾಗಿ ವಿಚಾರ ಮಾಡಿದಾಗ ಮೂಲಭೂತ ಉದ್ಯಮಗಳು ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ. ಯಾಕೆಂದರೆ ಅವು ಇಲ್ಲದೆ ಹೋದರೆ ಬಾಕಿ ಉದ್ಯಮಗಳು ನಡೆಯಲಾರವು. ಇವುಗಳಾಚೆ ಉತ್ಪಾದಕ ವಸ್ತುಗಳು ಮತ್ತು ಎಲ್ಲಕ್ಕೂ ಕೊನೆಯಲ್ಲಿ ಉಪಭೋಗ ವಸ್ತುಗಳು– ಈ ಕ್ರಮದಲ್ಲಿ ಬರುತ್ತವೆ. ಆದರೆ ನಾವು ಬೇಡಿಕೆಯ ವಿಚಾರ ಮಾಡಿದಾಗ, ಎಲ್ಲಕ್ಕಿಂತ ಹೆಚ್ಚಿನ ಬೇಡಿಕೆ ಉಪಭೋಗ ವಸ್ತುಗಳದ್ದು. ಅಷ್ಟೇ ಅಲ್ಲ, ಅವು ಒಂದೇ ಸವನೆ ಮುಂದುವರಿಯುತ್ತ ಹೋಗುತ್ತವೆ. ಮೂಲ ಭೂತ ಮತ್ತು ಉತ್ಪಾದಕ ಉದ್ಯಮಗಳು ಉಪಯುಕ್ತವಾದ್ದರಿಂದ ಅವುಗಳ ಆದಾಯದಲ್ಲಿ ಹೆಚ್ಚಳ ಆಗುತ್ತ ಹೋಗುವುದರಿಂದ ಬೇಡಿಕೆ ಮತ್ತಷ್ಟು ಹೆಚ್ಚುತ್ತದೆ. ಹೀಗೆ ಹೆಚ್ಚಿದ ಬೇಡಿಕೆಯನ್ನು ಪೂರ್ಣಮಾಡಿಯೂ ಯೋಗ್ಯ ಉಪಭೋಗ ವಸ್ತುಗಳ ಕೊರತೆ ಉಂಟಾದಾಗ ಬೆಲೆ ಹೆಚ್ಚಾಗುತ್ತದೆ. ಇದರ ಪರಿಣಾಮ ಉತ್ಪಾದಕ ಹಾಗೂ ಮೂಲಭೂತ ಉದ್ಯಮಗಳ ಉತ್ಪಾದನೆಯ ಖರ್ಚಿನ ಮೇಲೆ ಬೀಳುತ್ತದೆ. ಅನಂತರ ಅದೇ ಮುಂದುವರೆದು ಉಪಭೋಗ ವಸ್ತುಗಳ ಉತ್ಪಾದನ ವೆಚ್ಚದ ಮೇಲೆ ಕೂಡ ಪರಿಣಾಮ ಬೀರುತ್ತದೆ. ಈ ರೀತಿ ಬಳಕೆಯ ವಸ್ತುಗಳು ಮಾರುಕಟ್ಟೆಗೆ

ಬರುವ ಹೊತ್ತಿಗೆ ಬೆಲೆಯಮಟ್ಟ ಏರಿಕೆಯಾಗುತ್ತಿದೆ. ಸಾಮಾನ್ಯ ಜನರಿಗೆ ಸಮಸ್ಯೆಯಾಗುವಷ್ಟು ಏರಿಬಿಡಬಹುದು. ಮೂಲಭೂತ ಉತ್ಪಾದನೆಗಳ ಬೆಲೆಯಂತೂ ಉಪಭೋಗ–ಪ್ರಕಾರ–ನಿರಪೇಕ್ಷವಾಗುತ್ತದೆ. ಆದರೆ ಉತ್ಪಾದಕ ವಸ್ತುಗಳು ಸದಾ ಚಲನಶೀಲವಾಗಿರುವ ಅಭಿರುಚಿ ಹಾಗೂ ಫ್ಯಾಶನ್ ಜೊತೆಗೆ ಸಾಪೇಕ್ಷ ಸಂಬಂಧವನ್ನು ಇಟ್ಟುಕೊಳ್ಳುತ್ತವೆ. ನಾವು ಅಸ್ಪೃಶ್ಯತೆಯ ಕಾರಣದಿಂದ ಗಾಜಿನ ಮತ್ತು ಪಿಂಗಾಣಿ ಪಾತ್ರೆಗಳನ್ನು ಬಳಸುತ್ತಿರಲಿಲ್ಲ. ಹಾಗಾಗಿ ಆ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ಗಾಜಿನ ಕಾರಖಾನೆಗಳನ್ನು ತೆರೆಯುವುದು ಒಳ್ಳೆಯದಾಗುವುದಿಲ್ಲ. ಆದ್ದರಿಂದ ಮೇಲಿನಿಂದ ಸಾಮಾನ್ಯವಾಗಿ ಕಾಣುವ ಈ ಆದ್ಯತೆಯಲ್ಲಿ ನಾವು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

### ಉಪಭೋಗ ವಸ್ತುಗಳ ಆದ್ಯತೆ

ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ ಹಾಗೂ ಕೃಷಿಯ ಮೇಲಿನ ಭಾರವನ್ನು ಕಡಿಮೆಮಾಡುವ ಆವಶ್ಯಕತೆಯು ನಮ್ಮ ಅನುಭವಕ್ಕೆ ಆಗಲೇ ಬಂದಿದೆ. ರೈತನು ನಮ್ಮ ಆದ್ಯ ಉತ್ಪಾದಕನಷ್ಟೇ ಅಲ್ಲ, ಅವನು ನಮ್ಮ ಪೇಟೆಯ ವಸ್ತುಗಳ ಮುಖ್ಯ ಮಾರಾಟಗಾರನೂ ಆಗಿದ್ದಾನೆ ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ನಾವು ಅವನಿಂದ ಮಾರುಕಟ್ಟೆಯ ಹೆಚ್ಚಳವನ್ನು ಬಯಸುವುದಾದರೆ ಅವನ ಬೇಡಿಕೆಯನ್ನೂ ನಾವು ಪೂರ್ಣಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಕೃಷಿಗಾಗಿ ಉತ್ಪಾದಕ ವಸ್ತುಗಳನ್ನು ಹಾಗೂ ರೈತನ ಉಪಭೋಗ ವಸ್ತುಗಳನ್ನು ಉತ್ಪಾದಿಸುವುದು ನಮ್ಮ ಮೊದಲ ಆವಶ್ಯಕತೆ ಆಗಿದೆ. ಈ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದ ಜನರು ಹಾಗೂ ಉಳಿದವರಿಗಾಗಿಯೂ ನಾವು ಬಳಕೆಯ ವಸ್ತುಗಳ ಉತ್ಪಾದನೆ ಮಾಡಬೇಕಾಗುತ್ತದೆ. ಯಾಕೆಂದರೆ ಇಡೀ ಮಾರುಕಟ್ಟೆಯನ್ನು ಕೃಷಿಕ ಮತ್ತು ಕೃಷಿಕೇತರ ಎಂಬ ಆಧಾರದ ಮೇಲೆ ವಿಭಾಗಿಸಬಾರದು. ಇಷ್ಟೊಂದು ವ್ಯಾಪಕ ಪ್ರಮಾಣದ ಮಾರುಕಟ್ಟೆಯ ಬೇಡಿಕೆಯನ್ನು ಪೂರ್ಣ ಮಾಡುವ ಉದ್ದಿಮೆಗಳನ್ನು ನಾವು ಕಟ್ಟಿ ನಿಲ್ಲಿಸಿದ್ದೇ ಆದರೆ, ಹೆಚ್ಚಿನ ಜನರಿಗೆ ಕೆಲಸವನ್ನೂ ಕೊಡಬಲ್ಲೆವು. ಈ ಉದ್ಯಮಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಉತ್ಪಾದಕ ಯಂತ್ರಗಳನ್ನು ತರಿಸುವುದು ಎಲ್ಲಿಂದ ಎಂಬ ಪ್ರಶ್ನೆಯು ಎದುರು ನಿಲ್ಲುತ್ತದೆ. ಖಾಲೀ ಸ್ಲೇಟಿನ ಮೇಲೆ ಬರೆಯುತ್ತ ಹೋಗಿದ್ದರೆ ನಮಗೆ ಬಹಳ ಕಷ್ಟವೇ ಆಗುತ್ತಿತ್ತು. ಆದರೆ ನಮ್ಮ ದೇಶದಲ್ಲಿ ಮೊದಲಿನಿಂದಲೂ ಉಪಭೋಗ ವಸ್ತುಗಳನ್ನು ನಿರ್ಮಾಣ ಮಾಡುವ ಬಹಳಷ್ಟು ಉದ್ದಿಮೆಗಳಿವೆ. ಸರಕಾರವು ತನ್ನ ವಿಭಿನ್ನ ನೀತಿಗಳಿಂದ ಅವುಗಳಿಗೆ ಯೋಗ್ಯವಾದ ಪ್ರೋತ್ಸಾಹವನ್ನು ಕೊಡಬಹುದು. ಕೆಲವು ಅಂಶಗಳವರೆಗೆ ಅದರ ಆವಶ್ಯಕತೆಗಳ ಪೂರ್ತಿಗಾಗಿ ನಾವು ಆಮದನ್ನು ಅವಲಂಬಿಸಬಹುದು. ಯಾಕೆಂದರೆ ನಾವು



ಅಂತಾರಾಷ್ಟ್ರಿಯ ವ್ಯಾಪಾರದೊಡನೆ ನಮ್ಮ ಯಾವ ಸಂಬಂಧವೂ ಇಲ್ಲ ಎಂಬ ಪರಿಕಲ್ಪನೆಯ ಆರ್ಥಿಕ ನೀತಿಯನ್ನು ಅನುಸರಿಸಿಕೊಂಡು ನಡೆದವರೇ ಅಲ್ಲ.

### ಉತ್ಪಾದಕ ಹಾಗೂ ಮೂಲ ಉದ್ಯೋಗ

ಉಪಭೋಗದ ವಸ್ತುಗಳ ಉದ್ಯಮದ ವ್ಯಾಪಕ ಪ್ರಸಾರದೊಂದಿಗೆ ಉತ್ಪಾದಕ ವಸ್ತುಗಳ ಉದ್ಯಮ ಸ್ವಯಂ ವಿಕಸಿತಗೊಳ್ಳುತ್ತ ಹೋಗುತ್ತಿವೆ. ಆವಶ್ಯಕತೆಗನುಗುಣವಾಗಿ ಅವುಗಳಿಗೆ ಸಂರಕ್ಷಣೆ ಮುಂತಾದ ಸೌಲಭ್ಯಗಳನ್ನು ನೀಡಬಹುದಾಗಿದೆ. ನಿಜ, ಆಧಾರಭೂತ ಉದ್ಯಮಗಳಲ್ಲಿ ಕೆಲವನ್ನು ನಾವು ಆದಷ್ಟು ಬೇಗನೇ ಪೂರ್ಣಗೊಳಿಸಬೇಕು ಹಾಗೂ ಕೆಲವಕ್ಕೆ ದೀರ್ಘಾವಧಿಯ ಕಾರ್ಯಕ್ರಮ ತಯಾರಿಸಿಕೊಂಡು ಮುಂದೆ ಸಾಗಬಹುದು. ಈ ಉದ್ಯಮಗಳು ಬಂಡವಾಳ ಪ್ರಧಾನ ಆಗಿರುವ ಕಾರಣ ಒಂದೇ ಬಾರಿಗೆ ಇವುಗಳನ್ನು ಪ್ರಾರಂಭ ಮಾಡುವುದು ಸಾಧ್ಯವಾಗುತ್ತಿಲ್ಲ. ವಿದ್ಯುತ್ತು ಮೊದಲ ವರ್ಗದಲ್ಲಿ ಬರುತ್ತದೆ ಹಾಗೂ ಉಕ್ಕು, ಭಾರೀ ರಸಾಯನ ಇತ್ಯಾದಿ ಎರಡನೆಯ ವರ್ಗದಲ್ಲಿ. ಈಗ ನಾವು ಇದನ್ನು ಬದಿಗಿಟ್ಟು ಯಾವುದಾದರೂ ಒಂದೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣ ಮಾಡಿದರಾಯಿತು ಎಂದು ಭಾವಿಸಬಾರದು. ಯಾವುದೋ ಒಂದು ನಿರ್ದಿಷ್ಟ ಸಮಯಮಿತಿಯಲ್ಲಿ ಪೂರ್ಣಗೊಳಿಸ ಹೊರಟರೆ ಒಮ್ಮೆಲೇ ಅಧಿಕ ಭಾರ ಹೊರುವ ಕಷ್ಟ ಎದುರಾಗುತ್ತದೆ. ನಿಜ, ಉಪಭೋಗ ವಸ್ತುಗಳ ಉದ್ಯಮಗಳನ್ನು ಹೆಚ್ಚು ವಿಸ್ತಾರಗೊಳಿಸುವುದರಿಂದ ಹಾಗೂ ದೇಶದ ತಾಂತ್ರಿಕ ಕೌಶಲವನ್ನು ಅಭಿವೃದ್ಧಿ ಪಡಿಸುವ ಕಾರಣ ಆಗ ಅದು ಸಹನೀಯವಾಗುತ್ತದೆ. ಈ ಸಂಬಂಧದಲ್ಲಿ ನಲವತ್ತು ವರ್ಷಗಳ ಕಾರ್ಯಕ್ರಮ ತಯಾರಿಸಿ, ಸ್ವಲ್ಪ ಪ್ರಾರಂಭಮಾಡಿ ಮುಂದುಮುಂದಕ್ಕೆ ಅಭಿವೃದ್ಧಿಪಡಿಸುತ್ತ ಹೋಗಬೇಕು ಎಂಬುದು ಅಪೇಕ್ಷಣೀಯ. ಪ್ರತಿಯೊಂದು ಕಾಲದಲ್ಲಿ ಉಪಭೋಗ ವಸ್ತುಗಳ ಮೇಲೆ ಒತ್ತು ಹೆಚ್ಚಿಗೆ ಇರಲಿ. ಎಲ್ಲ ಜನರಿಗೂ ಕೆಲಸ ದೊರೆಯುವುದರಿಂದ, ಮತ್ತು ಅವರ ಆದಾಯದ ಸಾಮರ್ಥ್ಯದ ಒಳಗೇ ಉಪಭೋಗ ವಸ್ತುಗಳು ಸುಲಭವಾಗಿ ದೊರೆಯುವ ಕಾರಣದಿಂದ ಅವರು ತಮ್ಮ ಜೀವನ ಸ್ತರವನ್ನು ಮೇಲೆತ್ತಿಕೊಳ್ಳಬಲ್ಲರು. ಅವರ ಬಳಿ ಅಲ್ಪಸ್ವಲ್ಪ ಉಳಿತಾಯವಾದರೆ, ಅದರ ಪೋಷಣೆಯ ವ್ಯವಸ್ಥೆಯೊಂದು ಉಳಿದರೆ ಸಂಪತ್ತಿನ ಸಂಗ್ರಹ ಹೆಚ್ಚುತ್ತ ಹೋಗುತ್ತದೆ. ಚಿಕ್ಕ ಚಿಕ್ಕ ಉದ್ಯಮಗಳಲ್ಲಿ ಬಂಡವಾಳ ಹೂಡುವುದಕ್ಕೆ ಅವರಿಗೆ ಸ್ವಯಂ ಸೌಲಭ್ಯ ದೊರೆತಂತಾಗುತ್ತದೆ. ಸಂಪತ್ತಿನ ಹೆಚ್ಚಳದೊಂದಿಗೆ ನಾವು ಹೆಚ್ಚು ಬಂಡವಾಳ ಬೇಡುವ ಉದ್ಯಮಗಳ ಸ್ಥಾಪನೆಯನ್ನು ಮಾಡಬಹುದಾಗಿದೆ. ತಾಂತ್ರಿಕ ಹಾಗೂ ವ್ಯವಸ್ಥಾಪನಕ್ಕೆ ಸಂಬಂಧಿಸಿದ ಯೋಗ್ಯತೆ ಕೂಡ ಹೆಚ್ಚುತ್ತ ಹೋಗುತ್ತದೆ. ಹಾಗೂ ಉತ್ಪಾದಿತ ವಸ್ತುವಿಗೆ ಮಾರುಕಟ್ಟೆ ಸಿಗುವದಿಲ್ಲವೆಂಬ

ಸಂದರ್ಭವೇ ಬರುವುದಿಲ್ಲ. ಯಾಕೆಂದರೆ ಇದು ಹೆಚ್ಚುತ್ತಿರುವ ಆದಾಯ ಮತ್ತು ಉದ್ಯೋಗದೊಂದಿಗೆ ಬೆಳೆಯುತ್ತಲೇ ಹೋಗುತ್ತದೆ. ಇಂದು ಒಂದು ಬಂಡವಾಳ ಪ್ರಧಾನ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಅದರ ಪರಿಣಾಮವಾಗಿ ಒಂದು ಕಡೆ ಹಣದುಬ್ಬರದ ದರ ಏರುತ್ತ ಹೋಗುತ್ತಿದೆ. ಆಗ ಇನ್ನೊಂದು ಕಡೆ ಜನರು ಬೆತ್ತಲೆಯಾಗಿ ಮನೆಯಿಲ್ಲದೆ ತಿರುಗುತ್ತಿದ್ದರೂ ಬಟ್ಟೆ ಮತ್ತು ಸಿಮೆಂಟಿನ ಸಂಗ್ರಹ ಜಮಾ ಆಗತೊಡಗುತ್ತದೆ.

ಬಂಡವಾಳಪ್ರಧಾನ ಭಾರೀ ಉದ್ಯಮಗಳನ್ನು ನಡೆಸಲು ಸಾಗಾಣಿಕೆಯ ವ್ಯವಸ್ಥೆಯನ್ನೂ ದೊಡ್ಡ ಪ್ರಮಾಣದಲ್ಲಿ ಮಾಡಬೇಕಾಗುತ್ತದೆ. ಪರಿಣಾಮ ಏನಾಗುತ್ತದೆಯೆಂದರೆ ಬಂಡವಾಳ ದೊರೆಯದೆ ಇರುವುದು ಮತ್ತಷ್ಟು ಹೆಚ್ಚುತ್ತದೆ. ಬಂಡವಾಳ ಮತ್ತು ದೇಶದ ಅನ್ಯ ಸಾಧನಗಳು ಈ ಕೆಲವು ಭಾರೀ ಉದ್ಯಮಗಳಿಗೇ ಸಾಕಾಗದಿದ್ದರೆ, ಉಳಿದ ಉದ್ಯಮಗಳಿಗೆ ಸಾಧನಗಳ ಕೊರತೆ ನಿರಂತರ ಕಾಡುತ್ತದೆ. ಅದರಿಂದಾಗಿ ಅವುಗಳ ವಿಕಾಸವೂ ನಿಂತುಹೋಗುತ್ತದೆ. ಸಮಾಜವು ಈ ರೀತಿಯಲ್ಲಿ ಭಾರೀ ಬೆಲೆ ತೆರಬೇಕಾಗುತ್ತದೆ.

**ರಕ್ಷಣೆ ಮತ್ತು ಬೃಹತ್ ಉದ್ದಿಮೆ**

ಬೃಹತ್ತಾದ ಮತ್ತು ಆಧಾರಭೂತವಾದ ಉದ್ದಿಮೆಗಳು ಸುರಕ್ಷಿತತೆಯ ದೃಷ್ಟಿಯಿಂದ ಬಹಳ ಮಹತ್ವ ಪಡೆದಿವೆ. ಆಧುನಿಕ ಶಸ್ತ್ರಾಸ್ತ್ರಗಳ ಮಟ್ಟಿಗಂತೂ ಅವು ಅಪರಿಹಾರ್ಯವಾಗಿದೆ. ಆದರೆ ಯಾವುದೇ ದೇಶದ ರಕ್ಷಣೆಯು ಕೇವಲ ಶಸ್ತ್ರಾಸ್ತ್ರಗಳಿಂದ ಆಗುವುದಿಲ್ಲ. ಆಹಾರ, ಬಟ್ಟೆ ಮುಂತಾದ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವತ್ತ ನಿರ್ಲಕ್ಷ್ಯ ಮಾಡಿ ಶಸ್ತ್ರಾಸ್ತ್ರಗಳನ್ನು ಸಿದ್ಧಪಡಿಸಲಾಗುವುದಿಲ್ಲ. ಈ ಉದ್ದಿಮೆಗಳನ್ನು ಕಟ್ಟಿ ನಿಲ್ಲಿಸುವಲ್ಲಿಯೇ ನಾವು ನಮ್ಮ ಸಾಧನಗಳನ್ನು ತೊಡಗಿಸಿದರೆ, ಯುದ್ಧದ ಸಮಯದಲ್ಲಿ ನಮ್ಮ ಸ್ಥಿತಿ ಮತ್ತಷ್ಟು ಕಠಿಣವಾಗುತ್ತದೆ. ಆದ್ದರಿಂದ ರಕ್ಷಣೆಯ ವಿಚಾರವನ್ನು ನಾವು ವಾಸ್ತವವಾದಿ ಮತ್ತು ಸರ್ವತೋಮುಖ ದೃಷ್ಟಿಯಿಂದಲೇ ಮಾಡಬೇಕಾಗುತ್ತದೆ.

**ಬೃಹತ್ ಉದ್ದಿಮೆಗಳಿಗಾಗಿ ಭಾರೀ ಬಲಿದಾನ**

ಎಷ್ಟೋ ಬಾರಿ ಪ್ರತಿಷ್ಠೆಯ ಭಾವನೆಯಿಂದಲೇ ರಕ್ಷಣಾ ಸಾಮಗ್ರಿಗಳ ಭಾರೀ ಉದ್ದಿಮೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಭಾರೀ ಉತ್ಪಾದಕ ಮತ್ತು ಆಧಾರಭೂತ ಉತ್ಪಾದನೆಯ ಸಾಮರ್ಥ್ಯ ನಮ್ಮನ್ನು ವಿಶ್ವದ ಕಣ್ಣಿನಲ್ಲಿ ಮೇಲೆತ್ತುತ್ತದೆ ಎಂದು ವಿಶ್ವಾಸ ತಾಳಲಾಗುತ್ತದೆ. ಆದರೆ ಈ ಎಲ್ಲ ಕಾರಣಗಳು ಅರ್ಥಶಾಸ್ತ್ರದ ಒರೆಗಲ್ಲಿನಲ್ಲಿ ಯಶಸ್ವಿಯಾಗುವುದಿಲ್ಲ. ಅವುಗಳನ್ನು ಪೂರ್ಣ ಮಾಡಲು



ಬಹಳ ದಿನಗಳವರೆಗೆ ನಮ್ಮ ಬದುಕಿನ ಸ್ತರವನ್ನು ಕುಸಿತಕ್ಕೆ ಒಳಗಾಗಿಸಿಕೊಳ್ಳಬೇಕಾಗುವುದಲ್ಲದೆ, ರಾಜಕೀಯ ಕ್ಷೇತ್ರದಲ್ಲಿ ಕೂಡ ಪ್ರಜಾಸತ್ತೆಯ ಸಿದ್ಧಾಂತಗಳನ್ನು ಬಲಿ ಕೊಡಬೇಕಾಗುತ್ತದೆ. "ಈ ಕಾರ್ಯಕ್ರಮದ ಸಫಲತೆ ಕೇವಲ ಸೋವಿಯತ್ ಮೌಲ್ಯಗಳ ಸ್ಥಾಪನೆ ಮತ್ತು ಅಲ್ಲಿನ ಆಗಿನ ಮುಂದಾಳುತನದ ಪ್ರಾದುರ್ಭಾವ ಮತ್ತು ಮಾನ್ಯತೆಯ ಮೇಲಷ್ಟೇ ಅಲ್ಲ, ಮೇಲಾಗಿ ಉತ್ಪಾದನೆ ಹಾಗೂ ಉಪಯೋಗದ ವ್ಯಾಪಕ ನಿಯಂತ್ರಣದ ಯಶಸ್ವೀ ವ್ಯವಹಾರದ ಸಾಧ್ಯತೆಗಳ ಮೇಲೆ ಅವಲಂಬಿಸಿದೆ. ಇದಾಗದಿದ್ದರೆ, ಖಾಸಗಿ ಕ್ಷೇತ್ರದಲ್ಲಿ ಉತ್ಪಾದನೆಯ ಕ್ಷೇತ್ರದಲ್ಲಿ ಭಾರೀ ವೃದ್ಧಿಯ ಪರಿಣಾಮವಾಗಿ ಹಣದುಬ್ಬರ ಮತ್ತು ಕೊನೆಯಲ್ಲಿ ಸಂಪೂರ್ಣ ಯೋಜನೆಯು ಸ್ಫೋಟವಾಗುವುದು."*

---

* ಭವತೋಷ ದತ್ತ : ದಿ ಇಕನಾಮಿಕ್ಸ್ ಆಫ್ ಇಂಡಸ್ಟ್ರಿಯಲೈಜೇಶನ್, ಪುಟ ೧೭೦

# ೧೦. ಚಿಕ್ಕ ಮತ್ತು ದೊಡ್ಡ ಉದ್ಯಮ

**ದೊಡ್ಡ ಉದ್ಯಮಗಳ ಅನುಪಯುಕ್ತತೆ**

ಔದ್ಯೋಗೀಕರಣಕ್ಕಾಗಿ ಅವಶ್ಯಕ ಉತ್ಪಾದನೆ ಹಾಗೂ ಅದರ ಫಲಿತ ಹಾಗೂ ಆದ್ಯತೆಗಳ ಬಗೆಗೆ ವಿಚಾರ ಮಾಡುತ್ತ ಭಾರತಕ್ಕೆ ಸಣ್ಣ ಸಣ್ಣ ಉದ್ಯಮಗಳೇ ತುಂಬ ಉಪಯುಕ್ತ ಎಂಬ ನಿಷ್ಕರ್ಷೆಗೆ ಸಹಜವಾಗಿಯೇ ತಲುಪುತ್ತೇವೆ. ನಾವು ಯಾವ ದೃಷ್ಟಿಕೋನದಿಂದ ನೋಡಿದರೂ, ಭಾರೀ ಮತ್ತು ದೊಡ್ಡ ಉದ್ಯಮಗಳು, ನಮ್ಮ ಎದುರಿನಲ್ಲಿರುವ ಸಮಸ್ಯೆಗಳನ್ನು ಬಿಡಿಸುವ ಬದಲು ಇನ್ನಷ್ಟು ಹೆಚ್ಚನ್ನು ಹುಟ್ಟಿಸುತ್ತವೆ. ಸಂಕ್ಷಿಪ್ತವಾಗಿ ಹೇಳಬಹುದಾದುದೆಂದರೆ :

(೧) ಭಾರತೀಯ ಪರಂಪರೆಯಿಂದ ಬಂದ ಅರ್ಥವ್ಯವಸ್ಥೆಯೊಡನೆ ಸಂಬಂಧ ಹೊಂದಿರದ ಕಾರಣ, ಎಂದೂ ಜೀವಂತ ಸಮಾಜದೊಂದಿಗೆ ಸಮರಸವಾಗಲಾರವು.

(೨) ಇವುಗಳ ಪ್ರತಿಷ್ಠಾಪನೆಯೆಂದರೆ, ಬಹುಮಟ್ಟಿಗೆ ಉದ್ಯಮಗಳ ವಿಕಾಸ ಅಥವಾ ಮರುಸ್ಥಾಪನೆಯಾಗಿ ವಿನಾಶ ಮತ್ತು ನಿರ್ವಸಿತವೇ ಆಗುತ್ತದೆ. ಅವು ಪ್ರಚಲಿತದ ಪೂರಕಗಳಲ್ಲ, ಬದಲಾಗಿ ಅವುಗಳನ್ನು ಮೇಲಕ್ಕೆತ್ತಿ ನಿಲ್ಲಿಸಿ ಅವುಗಳ ಜಾಗದಲ್ಲಿ ನಿಲ್ಲುತ್ತವೆ.

(೩) ಅವುಗಳ ಮೂಲಕವಾಗಿ ಭಾರತದ ಪ್ರತಿಯೊಬ್ಬರಿಗೂ ಕೆಲಸ ನೀಡುವ ವ್ಯವಸ್ಥೆಯೇನೂ ಆಗುವುದಿಲ್ಲ. ಬದಲಿಗೆ ಅವು ತಾಂತ್ರಿಕವಾಗಿ ನಿರುದ್ಯೋಗವನ್ನು ಮುಂದುವರಿಸುತ್ತವೆ.

(೪) ಅವು ಬಂಡವಾಳಪ್ರಧಾನವಾಗಿವೆ. ಆದ್ದರಿಂದ ಭಾರತದ ಸಾಮರ್ಥ್ಯದ ಹೊರಗಿವೆ.

(೫) ಅವುಗಳ ಆಯಾತ ಅವಲಂಬನೆಯೇ ಹೆಚ್ಚು. ಫಲವಾಗಿ ಅವು ನಮ್ಮ ಮರುಪಾವತಿ ಸಮತೋಲನದ ಮೇಲೆ ಹೆಚ್ಚು ಭಾರ ಹಾಕುತ್ತವೆ.

(೬) ಭಾರತದಲ್ಲಿ ದೊರೆಯುವ ವ್ಯವಸ್ಥಾಪನೆ ಮತ್ತು ಕಾರ್ಮಿಕ ತರಬೇತಿ ಅವುಗಳಿಗೆ ಹೊಂದಾಣಿಕೆಯಾಗುವುದಿಲ್ಲ.

(೭) ಅವು ಕಾರ್ಮಿಕರನ್ನು ಅವರ ಕುಟುಂಬ, ಕುಲ, ಜಾತಿ, ಮತ್ತು ಗ್ರಾಮ ಸಮಾಜದಿಂದ ಬೇರ್ಪಡಿಸಿ ಒಂದು ಹೊಸ, ಕೃತ್ರಿಮ, ಭಾರವಾದ, ಮಾನವೀಯ ಮೌಲ್ಯರಹಿತ ವಾತಾವರಣದಲ್ಲಿ ನಿಲ್ಲಿಸುತ್ತವೆ. ಈ ವಾತಾವರಣದಲ್ಲಿ ಮನುಷ್ಯನು



ಕಾರ್ಮಿಕನಾಗಿ ಮಾತ್ರ ಉಳಿಯುತ್ತಾನೆ. ಅವನ ಉಳಿದೆಲ್ಲ ಮೌಲ್ಯ ವಿನಾಶವಾಗಿ ಅವನು ತನ್ನ ವ್ಯಕ್ತಿತ್ವ ವಿಕಾಸಗೊಳಿಸಿಕೊಳ್ಳುವ ಬದಲು ವಿಕೃತಿಗಳಿಗೆ ಬಲಿಯಾಗುತ್ತಾನೆ. ಭಾರತದ ಸಂಸ್ಕೃತಿಯು ಅದರೊಂದಿಗೆ ಹೊಂದಿಕೆಯಾಗುವುದಿಲ್ಲ.

(೮) ಈ ಉದ್ಯಮಗಳು ಸಾಮಾಜಿಕ ಮೌಲ್ಯವನ್ನು ಹೆಚ್ಚು ತೆರಬೇಕಾಗುತ್ತದೆ. ನಗರೀಕರಣದ ಪರಿಣಾಮವಾಗಿ ಆರೋಗ್ಯ, ವಸತಿ, ಮುಂತಾದವುಗಳ ವ್ಯವಸ್ಥೆಯು ಅತ್ಯಧಿಕ ವೆಚ್ಚ ಮಾಡಿದರೂ ಸಂಭವವಾಗುವುದಿಲ್ಲ.

(೯) ಭಾರೀ ಉದ್ಯಮದ ಉತ್ಪಾದನ ಪದ್ಧತಿ ಜಟಿಲವಾದದ್ದು ಹಾಗೂ ವಿವಿಧ ಪ್ರಕಾರದ ಸಂಸ್ಥಾಗತ ವ್ಯವಸ್ಥೆಗಳ ಮೇಲೆ (institutional mangements) ಅವಲಂಬಿಸಿರುವುದರಿಂದ ಒಂದೇ ಬಾರಿಗೆ ನಮ್ಮ ದುರ್ಲಭ ಸಾಧನಗಳ ಮೇಲೆ ಭಾರೀ ಭಾರವನ್ನು ಹಾಕುತ್ತದೆ. ಅದರಿಂದಾಗಿ ಅಲ್ಲಲ್ಲಿ ಕೊರತೆಯಿಂದುಂಟಾದ ಸಂಕಟ (bottlenecks) ಗಳು ಹುಟ್ಟಿಕೊಳ್ಳುತ್ತವೆ.

(೧೦) ಭಾರೀ ಉದ್ಯಮಗಳು ತಕ್ಷಣ ಫಲದಾಯವಾಗಿರುವುದಿಲ್ಲ. ಆದ್ದರಿಂದ ಭಾರವನ್ನು ಸಹಿಸಿಕೊಳ್ಳುವ ಸಾಮರ್ಥ್ಯವು ಕಡಿಮೆ ಇರುವಲ್ಲಿ ಅವು ಉಪಯುಕ್ತವಾಗುವುದಿಲ್ಲ. ಅವುಗಳಲ್ಲಿ ತೊಡಗಿಸಿದ ಬಂಡವಾಳದ ಗುಣಕ ಪ್ರಭಾವ (multiple effect) ಕೂಡ ಕಡಿಮೆ ಇರುತ್ತದೆ.

(೧೧) ಭಾರೀ ಉದ್ಯಮಗಳು ಹಾಗೂ ಕೃಷಿಯ ನಡುವೆ ನಿಕಟ ಸಂಬಂಧವಿರುವುದಿಲ್ಲ. ಈ ಎರಡರ ನಡುವಣ ಅಂತರವೆನ್ನುವುದು ಅನೇಕ ಮಧ್ಯಮವರ್ಗದವರನ್ನು ಹುಟ್ಟುಹಾಕುತ್ತದೆ.

(೧೨) ಔದ್ಯೋಗಿಕ ಶ್ರಮ–ಸಂಘಟನೆಗಳು ಮತ್ತು ನಿಯಮಗಳ ಇಂದಿನ ಸ್ಥಿತಿಯು ಭಾರತದಲ್ಲಿ ಶ್ರಮವನ್ನು ತುಟ್ಟಿಗೊಳಿಸಿದೆ ಹಾಗೂ ಹೊಣೆಗಾರವನ್ನಾಗಿ ಮಾಡಿವೆ. ಸಂಬಳ ಹೆಚ್ಚಳದ ಔಚಿತ್ಯವನ್ನು ಒಪ್ಪಬಹುದಾಗಿದೆ. ಆದರೆ ಉತ್ಪಾದಕತೆಯಲ್ಲಿನ ಹೆಚ್ಚಳದ ಕೊರತೆಯ ಭಾರವನ್ನು ಬಳಕೆದಾರನ ಮೇಲೆ ಜಾರಿಸಿ ಬಿಡಲಾಗುತ್ತದೆ. ವಾಸ್ತವವಾಗಿ ನಿಧಾನವಾಗಿ ಎಂಥ ಸ್ಥಿತಿ ನಿರ್ಮಾಣವಾಗಿದೆ ಅಂದರೆ ಉದ್ಯಮಕ್ಕೆ ಸಂಬಂಧಿಸಿದ ಬಂಡವಾಳ ಮತ್ತು ಕೂಲಿ ಎರಡೂ ಸೇರಿ ಬಳಕೆದಾರನ ಶೋಷಣೆ ಮಾಡಬಹುದಾಗಿದೆ.

(೧೩) ಭಾರತದಲ್ಲಿ ಕೃಷಿಯು ಶ್ರಮ ಪ್ರಧಾನವಾಗಿರುವುದರಿಂದ ಹಾಗೂ ಒಕ್ಕಲುತನದ ಕೆಲವು ಕೆಲಸಗಳಿಗೆ ಹೆಚ್ಚಿನ ಸಂಖ್ಯೆಯ ಕೂಲಿಕಾರರ ಅವಶ್ಯಕತೆ ಇರುವ ಕಾರಣದಿಂದ ಹಳ್ಳಿಯ ಕೂಲಿಕಾರ ವರ್ಗವನ್ನು ತೆಗೆದು ನಗರಕ್ಕೆ ಕರೆದುಕೊಂಡು ಹೋಗುವುದರಿಂದ ಕೃಷಿಯ ಮೇಲೆ ಪರಿಣಾಮವಾಗುತ್ತದೆ. ನಗರದಲ್ಲಿ ಉದ್ಯಮ–ಕೈಗಾರಿಕೆಗಳಿಗಾಗಿ ಬರುವ ಕೂಲಿಕಾರ ವರ್ಗವು ಹಳ್ಳಿಯಲ್ಲಿನ ಎಲ್ಲಕ್ಕಿಂತ ಆರೋಗ್ಯವಂತ ವರ್ಗವಾಗಿದೆ. ಹಳ್ಳಿಯಲ್ಲಿ ಸಂಖ್ಯೆ ಮತ್ತು ಗುಣ

ಎರಡರಲ್ಲಿಯೂ ಹಿಂದೆ ಉಳಿದ ಸಮಾಜದಿಂದ ಕೃಷಿ ಉತ್ಪಾದನೆಯಲ್ಲಿ ತ್ವರಿತಗತಿಯ ಅಭಿವೃದ್ಧಿಯ ಆಸೆಯನ್ನು ಮಾಡುವುದು ಗಗನ ಕುಸುಮದಂತೆಯೇ ಆಗುವುದು.

(೧೪) ಪಶ್ಚಿಮದ ದೇಶಗಳು ದೊಡ್ಡ ಉದ್ದಿಮೆಗಳನ್ನು ಸ್ಥಾಪಿಸಿದ ಪರಿಸ್ಥಿತಿಯು ಇಂದು ನಮ್ಮಲ್ಲಿ ಇಲ್ಲವಾಗಿದೆ. ಅವರ ಬಳಿ ವಸಾಹತುಗಳ ವಿಸ್ತಾರವಾದ ಮಾರುಕಟ್ಟೆಯಿತ್ತು. ಅಲ್ಲಿ ಅವರು ಪಕ್ಕಾ ಸರಕುಗಳನ್ನು ಯಾವುದೇ ಸ್ಪರ್ಧೆಯಲ್ಲದೆ ಮಾರಾಟ ಮಾಡಬಹುದಾಗಿತ್ತು. ಹಾಗೂ ಕಚ್ಚಾ ಸರಕು ಮತ್ತು ಆಹಾರಧಾನ್ಯವನ್ನು ಅಗ್ಗದ ದರದಲ್ಲಿ ಕೊಳ್ಳಬಲ್ಲವರಾಗಿದ್ದರು. ಕೂಲಿಕಾರರನ್ನು ಕಡಿಮೆ ಸಂಬಳದಲ್ಲಿ ಇಟ್ಟುಕೊಂಡು ಬಹುದೊಡ್ಡ ಪ್ರಮಾಣದಲ್ಲಿ ಬಂಡವಾಳವನ್ನು ಸಂಗ್ರಹ ಮಾಡಬಲ್ಲರಾಗಿದ್ದರು. ಈ ರೀತಿಯ ವಿಕಾಸಕ್ಕೂ ಅವರಿಗೆ ನೂರೈವತ್ತು ವರ್ಷ ಹಿಡಿಯಿತು. ಈ ಚಲನಶೀಲ ವಿಕಾಸದಲ್ಲಿ ಹತ್ತಿರದ ಗತಕಾಲ ಹಾಗೂ ಬರಲಿರುವ ಭವಿಷ್ಯದ ಆರ್ಥಿಕ ಸ್ತರದ ಉತ್ಪಾದನೆ, ವಿತರಣೆ ಹಾಗೂ ಬಳಕೆಯಲ್ಲಿ ಸಾಕಷ್ಟು ಮೌಲಿಕವಾದ ಅಂತರ ಉಂಟಾಗುವಂತಹ ಯಾವುದೇ ಸಂದರ್ಭವೂ ಬರಲಿಲ್ಲ. ಯುರೋಪಿನ ಔದ್ಯೋಗಿಕ ಕ್ರಾಂತಿಯನ್ನು ನಾವು ಮಾಡಲು ಹೊರಟಿದ್ದೇವೆ. ಅವರ ಹೋಲಿಕೆಯಲ್ಲಿ ಇದು ಭೋಜರಾಜನ ಎದುರು ಗಂಗೂ ಗಾಣಿಗನ ಹಾಗೆಯೇ ಇದೆ.

(೧೫) ದೊಡ್ಡ ಉದ್ದಿಮೆಗಳಲ್ಲಿ ಯಾವಾಗಲೂ ಒಂದು ಸ್ಥಾನದಲ್ಲಿ ಕೇಂದ್ರೀಕರಣದ ಪ್ರವೃತ್ತಿ ಇರುತ್ತದೆ. ಭಾರತದಲ್ಲಿ ಇಂದು ಸಂಘಟಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಶೇ. ೭೭ ಬಂಗಾಲ, ಮುಂಬೈ, ಮದ್ರಾಸನಲ್ಲಿ ಇದೆ. ಈ ಪ್ರದೇಶಗಳಲ್ಲಿಯೂ ಸಂಪೂರ್ಣ ಜನಸಂದಣಿ ಇರುವುದು ಕಲಕತ್ತಾ, ಮುಂಬಯಿ, ಅಹಮದಾಬಾದ ಹಾಗೂ ಮದ್ರಾಸ ನಗರಗಳಲ್ಲಿ. ಕಳೆದ ಏಳು ವರ್ಷಗಳಲ್ಲಿ ನೋಂದಣಿಯಾದ ಕಂಪನಿಗಳಲ್ಲಿ ಹೆಚ್ಚಿನವು ಇದೇ ರಾಜ್ಯಗಳಲ್ಲಿವೆ. ಇದರಿಂದ ಇಡೀ ದೇಶದ ಹಾಗೂ ವಿಶಾಲ ವಿಕಾಸದ ಮಾರ್ಗದಲ್ಲಿ ಯಾವಾಗಲೂ ಅಡ್ಡಿಯುಂಟಾಗುತ್ತದೆ. ಹೆಚ್ಚಿನದಾಗಿ ಐತಿಹಾಸಿಕ ಕಾರಣಗಳಿಂದ ಇದು ಸ್ಥಳೀಯತೆ (localisation) ಹೊಂದಿರುವ ಕಾರಣ ಇದರಲ್ಲಿ ಆರ್ಥಿಕ ಲಾಭದ ವಿಚಾರವನ್ನು ಮಾಡಲಾಗುವುದಿಲ್ಲ. ಭೂಮಿಯ ಮೇಲೆ ಹೆಚ್ಚಿನ ಭಾರ ಇರುವಲ್ಲಿ ಉದ್ದಿಮೆಗಳು ಪ್ರಾರಂಭವಾಗದೆ, ಔದ್ಯೋಗೀಕರಣದ ವಿಶಾಲ ಕಾರ್ಯಕ್ರಮಕ್ಕಾಗಿ ಸಾಕಷ್ಟು ಭೂಮಿ ದೊರೆಯುವಲ್ಲಿ, ಅಥವಾ ದೊಡ್ಡ ದೊಡ್ಡ ನಗರಗಳ ಬಳಿ ಎಲ್ಲ ಆಧುನಿಕ ಸೌಲಭ್ಯಗಳೂ ದೊರೆಯುವಲ್ಲಿ ಇಂತಹ ಸ್ಥಳಗಳಲ್ಲಿಯೇ ಇವು ಪ್ರಾರಂಭವಾಗುತ್ತವೆ. ರಾಜಸ್ಥಾನ, ಓರಿಸ್ಸಾ, ಆಸಾಮ್, ಬಿಹಾರ್, ಉತ್ತರಪ್ರದೇಶ, ಪಂಜಾಬ, ಆಂಧ್ರ (ತೆಲಂಗಾಣಾ), ಮೈಸೂರು, ಹಾಗೂ ಸೌರಾಷ್ಟ್ರ ಮುಂತಾದ ಕಡೆಗಳಲ್ಲಿ, ದೇಶದ ಕೂಲಿಕಾರ ವರ್ಗದಲ್ಲಿನ ಎರಡು ಮೂರಾಂಶಕ್ಕಿಂತ ಹೆಚ್ಚಿನ ಜನರೆಲ್ಲ ಉಪೇಕ್ಷಿತರೇ



ಆಗಿದ್ದಾರೆ.

(೧೬) ಸ್ಥಳೀಯತೆಯು ರಕ್ಷಣೆಯ ದೃಷ್ಟಿಯಿಂದ ಬಹಳ ಹಾನಿಕಾರಕವೆಂದೇ ಸಿದ್ಧವಾಗಿದೆ. ಅದಕ್ಕೆ ವಿಕೇಂದ್ರೀಕರಣ ಅವಶ್ಯಕವಾಗಿದೆ. ರಾಜಕೀಯ ದೃಷ್ಟಿಯಿಂದ ಕೂಡ ದೇಶದ ಕೆಲವು ಭಾಗಗಳ ವಿಕಾಸವು ಉಳಿದವರಲ್ಲಿ ಅಸಂತೋಷವನ್ನು ಉಂಟು ಮಾಡಿ, ಏಕತೆಗೆ ಮತ್ತು ರಾಷ್ಟ್ರೀಯತೆಗೆ ಅಪಾಯವನ್ನುಂಟು ಮಾಡಬಹುದಾಗಿದೆ.

(೧೭) ಸ್ಥಳೀಯತೆಯಿಂದ ದೇಶದಲ್ಲಿನ ಸಾರಿಗೆ ಸಾಧನಗಳ ಮೇಲೆ ಬಹಳ ಭಾರ ಬೀಳುತ್ತದೆ. ಅವು ಶಾಂತಿಯ ಸಮಯದಲ್ಲಿಯೇ ಸರಕನ್ನು ಒಂದಡೆಯಿಂದ ಮತ್ತೊಂದೆಡೆಗೆ ಸಂಪೂರ್ಣವಾಗಿ ಸಾಗಿಸಲಾರವು, ಯುದ್ಧಕಾಲದಲ್ಲಿಯಂತೂ ಸಮಸ್ಯೆ ಇಮ್ಮಡಿಯಾಗುತ್ತದೆ.

ಈ ಆರ್ಥಿಕ ಹಾಗೂ ಇತರೇ ಕಾರಣಗಳ ಹೊರತಾಗಿ ನಾವು ನಮ್ಮ ಮೂಲಭೂತ ಗುರಿಯತ್ತ ಕೂಡ ವಿಚಾರ ಮಾಡಬೇಕಾಗಿದೆ. ವಿಕೇಂದ್ರೀಕರಣ ಹಾಗೂ ಸಮಾನ ವಿತರಣೆ ಎರಡನ್ನೂ ನಾವು ಸಿದ್ಧಾಂತದ ರೂಪದಲ್ಲಿ ಸ್ವೀಕಾರ ಮಾಡಿದ್ದೇವೆ. ದೊಡ್ಡ ದೊಡ್ಡ ಉದ್ದಿಮೆಗಳು ಈ ಎರಡನ್ನೂ ವಿರೋಧಿಸುತ್ತವೆ. ಇವುಗಳಿಂದ ಸಮಾಜದಲ್ಲಿ ಶಕ್ತಿಯ ವಿಕೇಂದ್ರೀಕರಣ ಹಾಗೂ ಅಸಮಾನತೆಯ ಪ್ರವೃತ್ತಿ ಹೆಚ್ಚುತ್ತದೆ.

**ಅಸಮಾನತೆ**

ದೊಡ್ಡ ಉದ್ದಿಮೆಗಳ ಪರಿಣಾಮವಾಗಿ, ಅನೇಕ ದೇಶಗಳಲ್ಲಿ ರಾಜಕೀಯವನ್ನು ಹಿಡಿತದಲ್ಲಿಟ್ಟುಕೊಂಡಿರುವ ಶಕ್ತಿಶಾಲಿ ಆರ್ಥಿಕ ಗುಂಪುಗಳು ಉಂಟಾಗಿವೆ. ಪ್ರೆಸಿಡೆಂಟ್ ರೂಸ್‌ವೆಲ್ಟರು, "ಸಂಯುಕ್ತ ರಾಜ್ಯ ಅಮೇರಿಕೆಯ ೧೨.೪ ಕೋಟಿ ಜನಸಂಖ್ಯೆಯಲ್ಲಿ ಕೇವಲ ೬೦೦ ನಿಗಮಗಳು ದೇಶದ ಎರಡು ಮೂರಾಂಶ ಆರ್ಥಿಕ ಜೀವನದ ಮೇಲೆ ನಿಯಂತ್ರಣ ಮಾಡುತ್ತವೆ. ಹಾಗೂ ಉಳಿದ ಒಂದು ಕೋಟಿ ಚಿಕ್ಕ ವ್ಯಾಪಾರಿಗಳು ಉಳಿದ ಒಂದು ಮೂರಾಂಶದ ಪಾಲುದಾರರಾಗಿವೆ" ಎಂದು ೧೯೩೩ರಲ್ಲಿ ಹೇಳಿದ್ದರು. ಭಾರತದಲ್ಲಿಯೂ ಪರಿಸ್ಥಿತಿಯು ಇದಕ್ಕಿಂತ ಭಿನ್ನವೇನೂ ಆಗಿಲ್ಲ. ೧೯೨೪ ರಲ್ಲಿ ಪ್ರೊ॥ ಶಾಹ ಮತ್ತು ಖಂಬಾಗಾ ಅವರ ಅಂದಾಜಿನ ಪ್ರಕಾರ ಭಾರತದ ಆದಾಯದಿಂದ ೧೦೦ ರೂಪಾಯಿಗಳನ್ನು ಹಂಚಿದರೆ ೩೩ ರೂಪಾಯಿ ಶ್ರೀಮಂತ ವರ್ಗದ ಒಬ್ಬ ವ್ಯಕ್ತಿಯ ಬಳಿ ಹೋಗುತ್ತದೆ, ೩೩ ರೂಪಾಯಿ ಮಧ್ಯಮ ವರ್ಗದ ಒಬ್ಬ ವ್ಯಕ್ತಿಯ ಬಳಿ ಹಾಗೂ ಉಳಿದ ೩೪ ರೂಪಾಯಿ ಕೆಲಸ ಮಾಡುವ ೬೬ ಜನರ ಬಳಿ ತಲುಪುತ್ತದೆ. ಅರ್ಥಾತ್ ಕೂಲಿಕಾರ ಹಾಗೂ ಮಧ್ಯಮ ವರ್ಗದ ಆದಾಯದಲ್ಲಿ ೧:೨ ರ ಅನುಪಾತ ಇದೆ. ಶ್ರಮ ಮಾಡುವವರ ಮತ್ತು

ಶ್ರೀಮಂತವರ್ಗದ ಆದಾಯದಲ್ಲಿ ೧:೬೬ರ ಅಂತರವಿದೆ. ಆಗಿನಿಂದ ಇದ್ದ ಈ ಸ್ಥಿತಿ ಸುಧಾರಿಸಿಲ್ಲ, ಬದಲಿಗೆ ಮತ್ತಷ್ಟು ಬಿಗಡಾಯಿಸಿದೆ. ೧೯೫೧–೫೨ರಲ್ಲಿ ಆದಾಯಕರ ನೀಡುವ ಆರೂವರೆ ಲಕ್ಷ ವ್ಯಕ್ತಿಗಳ ಆದಾಯ ೫೮೨ ಕೋಟಿ ಸಂಗ್ರಹವಾಗಿತ್ತು. ದೇಶದ ಒಟ್ಟೂ ಆದಾಯದ ಅಂದಾಜು ೯೫೫೦ ಕೋಟಿ ಇದ್ದಿತು. ಈ ರೀತಿಯಲ್ಲಿ ದೇಶದ ಶೇ. ೬ ಆದಾಯ ಕೇವಲ ಶೇ. ೪೫ ಜನರ ಜೇಬಿಗೆ ಹೋಗಿದೆ. ೧೯೫೫–೫೬ ರಲ್ಲಿ ಆದಾಯಕರ ಕೊಡುವವರ ಒಟ್ಟೂ ಆದಾಯ ೭೮೪.೯೧ ಕೋಟಿ ರೂಪಾಯಿಯೆಂದು ಅಂದಾಜು ಮಾಡಲಾಗಿದ್ದು ಅವರ ಸಂಖ್ಯೆ ೫ ಲಕ್ಷ ೨೯ ಸಾವಿರದ ೭೩೭ ಇದ್ದಿತ್ತು. ಅರ್ಥಾತ್ ಆದಾಯದಲ್ಲಿ ವೃದ್ಧಿ ಆಗಿದ್ದರೂ ಆದಾಯಕರ ಕೊಡುವವರ ಸಂಖ್ಯೆ ಕಡಿಮೆಯಾಗಿದೆ. ಐದು ಲಕ್ಷಕ್ಕಿಂತ ಹೆಚ್ಚು ಆದಾಯದವರ ಸಂಖ್ಯೆ ಕೇವಲ ೮೭೭ ಇದೆ. ಹಾಗೂ ಅವರ ಆದಾಯ ೧೬೧.೭೮ ಕೋಟಿಗಳಷ್ಟಿತ್ತು. ಆದಾಯಕರ, ಸುಪರ್‌ಕರ ಮುಂತಾದವನ್ನು ಕೊಟ್ಟೂ ಈ ಆದಾಯ ೮೫.೭೪ ಕೋಟಿ ರೂಪಾಯಿ ಉಳಿಯುತ್ತದೆ. ಅದರ ಪ್ರತಿವ್ಯಕ್ತಿಯ ಪ್ರಮಾಣ ೯ ಲಕ್ಷ ೬೦ ಸಾವಿರ ಬರುತ್ತದೆ, ಆದರೆ ರಾಷ್ಟ್ರೀಯ ಆದಾಯದ ಪ್ರಮಾಣ ಕೇವಲ ೨೫೨ ರೂಪಾಯಿ ಆಗಿದೆ. ಆದಾಯಕರದಲ್ಲಿ ಅದರಲ್ಲೂ ಉನ್ನತ ಶ್ರೇಣಿಯಲ್ಲಿರುವವರಲ್ಲಿ ಬಾರೀ ಕಳ್ಳತನದ ವ್ಯವಹಾರ ನಡೆಯುತ್ತದೆಯೆಂಬುದು ನಮಗೆ ಚೆನ್ನಾಗಿ ಗೊತ್ತು. ಮೊದಲ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಆದಾಯಕ್ಕಾಗಿಯೇ ನಿರ್ಧಾರಿತವಾದ ಆದಾಯ ಒಟ್ಟೂ ರಾಷ್ಟ್ರೀಯ ಆದಾಯದ ಶೇ. ೬ ರಿಂದ ಶೇ. ೭ ಆಯಿತು. ಅರ್ಥಾತ್ ಈ ಬೆಳವಣಿಗೆ ಶೇ. ೩೬.೫ ರಷ್ಟಿದೆ. ನಿರ್ಧಾರಿತ ಕರ ಕೇವಲ ೧೭.೪ ರಷ್ಟೇ ಹೆಚ್ಚಳವಾಯಿತು, ಅಂದರೆ ವಸೂಲಿಯಲ್ಲಿ ೩ ಪ್ರತಿಶತ ಕಡಿಮೆ ಆಯಿತು. ಮೇಲೆ ಹೇಳಿದ ಆದಾಯವನ್ನು ನಾವು ವ್ಯವಸಾಯವಾರು ವರ್ಗೀಕರಣ ಮಾಡಿದಾಗ, ವ್ಯಾಪಾರ ಸಾರಿಗೆ, ಸಾಗಾಣಿಕೆಗಳಲ್ಲಿ ಕರ ನಿರ್ಧಾರಿತದ ಸಂಖ್ಯೆ ಶೇ. ೫೯. ಹಾಗೂ ಕರನಿರ್ಧಾರ ಶೇ. ೪೪. ೧೯೫೨–೫೩ ರಲ್ಲಿ ಈ ವರ್ಗದ ಆದಾಯದಲ್ಲಿ ಶೇ. ೧೪ ಹೆಚ್ಚಳವಾಯಿತು. ಆದರೆ ವ್ಯಕ್ತಿಗಳ ಸಂಖ್ಯೆಯಲ್ಲಿ ಕಡಿಮೆ ಆಯಿತು. ಇದರಿಂದ ಸ್ಪಷ್ಟವಾಗುವುದೆಂದರೆ ಆದಾಯದ ಕೇಂದ್ರೀಕರಣ ಆಗುತ್ತಿದೆ.

**ಕೇಂದ್ರೀಕರಣ**

ಈ ಅಸಮಾನತೆಯ ಅಂದಾಜನ್ನು ನಾವು ಯಾವಾಗ ಮಾಡಬಹುದು ಅಂದರೆ, ಈ ಆದಾಯವನ್ನು ಪಡೆಯುವವರ ಸಾಧನಗಳನ್ನು ಪತ್ತೆ ಹಚ್ಚಿದಾಗ. ಒಬ್ಬೊಬ್ಬ ವ್ಯಕ್ತಿ ಅಥವಾ ಮ್ಯಾನೇಜಿಂಗ್ ಏಜನ್ಸಿ ಒಂದಕ್ಕಿಂತ ಹೆಚ್ಚು ಕಾರಖಾನೆಗಳ ಮೇಲೆ ನಿಯಂತ್ರಣ ಹೊಂದಿವೆ. ಬ್ರಿಟನ್ನಿನ ಯೂನಿಲಿವರ್ ಕಂಪನಿಯ ಪ್ರಭಾವ



ಕ್ಷೇತ್ರ ೪೩ ದೇಶಗಳಲ್ಲಿ ೫೦೦ ಕಂಪನಿಗಳ ಮೇಲೆ ಹರಡಿದೆ. ಭಾರತದಲ್ಲಿ ಇಂದು ಇಷ್ಟೊಂದು ದೊಡ್ಡ ಉದ್ಯಮಿಗಳು ಇಲ್ಲದಿದ್ದರೂ, ನಿಧಾನವಾಗಿ ಅತ್ತಕಡೆಗೆ ಪ್ರಗತಿಯಾಗುತ್ತಿದೆ. ಶ್ರೀ ಎಂ.ಎಂ. ಮೆಹತಾ ಅವರು ದೇಶದಲ್ಲಿ ನಡೆಯುವ ಈ ಕೇಂದ್ರೀಕರಣದ ಅಧ್ಯಯನ ಮಾಡಿ ತಮ್ಮ ಪುಸ್ತಕ 'ಸ್ಟ್ರಕ್ಚರ್ ಆಫ್ ಇಂಡಿಯನ್ ಇಂಡಸ್ಟ್ರಿಸ್' ನಲ್ಲಿ ಆಧಾರಸಹಿತವಾಗಿ ಪ್ರತಿಪಾದನೆ ಮಾಡಿರುವುದೇನೆಂದರೆ, ದೇಶದಲ್ಲಿ ಚಿಕ್ಕ ಘಟಕಗಳನ್ನು ಸಮಾಪ್ತಗೊಳಿಸಿ ಉದ್ಯಮಗಳನ್ನು ಕೆಲವೇ ಕೈಗಳಲ್ಲಿ ಕೇಂದ್ರೀಕರಣ ಮಾಡುವ ಹಾಗೂ ಬೃಹದಾಕಾರದಲ್ಲಿ ಬೆಳೆಸುವ ಕೆಲಸ ಆಗುತ್ತಿದೆ. ಇಷ್ಟೇ ಅಲ್ಲ, ಉತ್ಪಾದನೆಯ ಕ್ಷೇತ್ರದಲ್ಲಿ ಅನೇಕ ಉದ್ದಿಮೆಗಳು ಅತ್ಯಧಿಕ ಕೇಂದ್ರಿತ ಸಾಮರ್ಥ್ಯ ಹೊಂದಿ ಏಕಪ್ರಕಾರವಾದ ಏಕಾಧಿಪತ್ಯವನ್ನು ಹೊಂದಿವೆ. ಇದರ ಅಂದಾಜಾಗಬೇಕೆಂದರೆ, ಈ ಮುಂದಿನ ಪಟ್ಟಿಯನ್ನು ನೋಡಬಹುದು.

**ಭಾರತದಲ್ಲಿ ಉತ್ಪಾದನಾಸಾಮರ್ಥ್ಯದ ಕೇಂದ್ರೀಕರಣ**

| ಉದ್ದಿಮೆ | ಒಟ್ಟೂ ಘಟಕ | ಕೇಂದ್ರೀಕೃತ ಘಟಕಗಳು | ಉತ್ಪಾದನೆ ಒಟ್ಟೂ ಪ್ರತಿಶತ |
|---|---|---|---|
| ೧) ಬಾಲ್ ಬೇರಿಂಗ್ | ೧ | | |
| ೨) ಸೆಣಬಿನ ಮಿಲ್‌ಗಳು | ೨೨ | ೧೦ | ೭೧.೬೯ |
| ೩) ಯಂತ್ರಗಳ ಸ್ಕ್ರೂ | ೯ | ೩ | ೯೩.೧೫ |
| ೪) ಆಯಿಲ್ ಪ್ರಶರ್ ಲ್ಯಾಂಪ್ಸ | ೧೦ | ೩ | ೮೫.೪೭ |
| ೫) ಚಾಕಲೇಟ್ ಕವ್ಹರ್ | ೩ | ೧ | ೯೯.೧೮ |
| ೬) ಆಲ್ಯೂಮೀನಿಯಂ ಶೀಟ್ಸ್ | ೩ | ೧ | ೮೮.೭೮ |
| ೭) ಬೈಸಿಕಲ್ | ೧೨ | ೪ | ೭೬.೯೧ |
| ೮) ಮೋಟರಿಗೆ ಹವಾತುಂಬುವ ಪಂಪ್ | ೫ | ೧ | ೭೫.೮೫ |
| ೯) ಪ್ಲ್ಯಾವುಡ್ | ೬೬ | ೧೩ | ೫೨.೪೬ |

ಉದ್ಯಮಗಳು ಹಾಗೂ ಆರ್ಥಿಕ ಸಾಮರ್ಥ್ಯದ ಕೇಂದ್ರೀಕರಣ ಪಾಶ್ಚಾತ್ಯ ಉತ್ಪಾದನ ಪದ್ಧತಿಯ ಪ್ರಕೃತಿಗೆ ಅನುಗುಣವಾಗಿಯೇ ಇದೆ. ಇದನ್ನು ಆಧಾರವಾಗಿಟ್ಟುಕೊಂಡೇ ನಾವು ಹೋದರೆ ನಾವು ಸಮಾನತೆಯ ಹಾಗೂ ನ್ಯಾಯದ ಮಾತನ್ನು ಬಿಡಬೇಕಾಗುತ್ತದೆ. ಅಸಮಾನತೆಯನ್ನು ಒಪ್ಪಿಕೊಂಡು, ಕರಾಕರಣೆ ಮುಂತಾದವುಗಳಿಂದ ಸಾಮಾಜಿಕ ಸೇವೆಗಳ ಮೂಲಕ ಎಷ್ಟರ ಮಟ್ಟಿಗೆ ನಾವು ಅದನ್ನು ಕಡಿಮೆ ಮಾಡಬಲ್ಲೆವೋ ಅದನ್ನೇ ಸಂತೋಷವೆಂದು ಭಾವಿಸಬೇಕಾಗುತ್ತದೆ.

ಅದು ಹೇಗೆ ಅಂದರೆ, ಇಟಲಿಯ ಅರ್ಥಶಾಸ್ತ್ರಜ್ಞ ಲೋರಿಯಾ ಅವರು ಒಂದು ಬಾರಿ ಚುಚ್ಚುವ ಶಬ್ದಗಳಲ್ಲಿ ಹೇಳಿದ್ದರು. "ಕೆಲವು ಜನರು ಕೆಲಸವಿಲ್ಲದೆ ಬದುಕುತ್ತಾರೆ, ಮತ್ತೆ ಕೆಲವರು ಕೆಲಸ ಮಾಡುತ್ತಲೂ ಜೀವಿಸಿರುವುದಿಲ್ಲ."[೧] ಇದನ್ನು ನಾವು ನಮ್ಮ ದೇಶದಲ್ಲಿಯೇ ಅನುಭವ ಪಡೆದರೂ ಅಚ್ಚರಿಯೇನಿಲ್ಲ.

**ಕರ ಆಕರಣೆ ಹಾಗೂ ಅಸಮಾನತೆ**

ಸರಕಾರವು ಇಂದು ಬೇರೆ ಬೇರೆ ಬಗೆಯ ಕರವನ್ನು ಹಾಕಿ ಈ ಅಸಮಾನತೆಯನ್ನು ತೊಡೆದು ಹಾಕುವ ಪ್ರಯತ್ನ ಮಾಡುತ್ತಿದೆ. ಆದರೆ ಭಾರೀ ಔದ್ಯೋಗೀಕರಣ ಹಾಗೂ ಸರಕಾರದ ಈ ಬದ್ಧತೆ ಒಟ್ಟೊಟ್ಟಿಗೆ ಸಾಗಲಾರದು. ವಾಸ್ತವಿಕತೆಯೇನೆಂದರೆ, ಬಂಡವಾಳ ಪ್ರಧಾನ ಯೋಜನೆಗಳಿಗೆ ಹಣಬೇಕಾದರೆ ಅದು ದೊಡ್ಡ ದೊಡ್ಡ ಉದ್ದಿಮೆದಾರರ ಸಾಮೀಪ್ಯವನ್ನು ಬಿಡಲೇಬೇಕಾಗುತ್ತದೆ. ಕಳೆದ ವರ್ಷಗಳಲ್ಲಿ ಸರಕಾರವು ಭಿನ್ನ ಭಿನ್ನ ಬಗೆಯ ತೆರಿಗೆಗಳನ್ನು ಹಾಕಿದೆ, ಅವುಗಳಿಂದಾಗಿ ಬಂಡವಾಳದಾರರ ಕಷ್ಟಗಳು ಹೆಚ್ಚಾಗಿವೆ ಎಂಬುದು ನಿಜವೇ ಆಗಿದೆ. ಆದರೆ ಅವುಗಳಿಂದ ಅವರ ಆದಾಯದಲ್ಲಿ ವಿಶೇಷ ವ್ಯತ್ಯಾಸವೇನೂ ಆಗಲಿಲ್ಲ. ಸನ್ ೧೯೫೨–೫೩ರಲ್ಲಿ ಪ್ರತ್ಯಕ್ಷ ಕರಗಳ ಗಳಿಕೆ ೧೮೬.೯ ಕೋಟಿ ರೂಪಾಯಿಗಳಾಗಿತ್ತು. ೧೯೫೬–೫೭ರಲ್ಲಿ ಇದರ ಹೆಚ್ಚಳವಾಗಿ ೨೦೭.೪೪ ಕೋಟಿ ರೂಪಾಯಿ ಆಯಿತು. ಶ್ರೀ ಟಿ. ಟಿ. ಕೃಷ್ಣಮಾಚಾರಿ ಅವರ ಕರ ಮುರಿಯುವ ಬಜೆಟ್ (೧೯೫೭–೫೮)ನ ಪರಿಷ್ಕೃತ ಅಂಕಿ ಅಂಶಗಳ ಪ್ರಕಾರ ಈ ಆದಾಯವು ೨೨೪.೫೦ ಕೋಟಿ ರೂಪಾಯಿ ಆಗುತ್ತದೆ. ಆದರೆ ಅವುಗಳ ಹೋಲಿಕೆಯನ್ನು ಜನತೆಯ ಮೇಲೆ ಅಧಿಕ ಭಾರ ಬೀಳುವ ಅಪ್ರತ್ಯಕ್ಷ ತೆರಿಗೆಯೊಂದಿಗೆ ಮಾಡಿದರೆ, ಕೇಂದ್ರದಲ್ಲಿ ಈ ಆದಾಯ ೧೯೫೨–೫೩ ರಲ್ಲಿ ೨೫೭.೦೫ ಕೋಟಿ ರೂಪಾಯಿ, ೧೯೫೬–೫೭ರಲ್ಲಿ ೩೬೫.೪೦ ಕೋಟಿ ರೂಪಾಯಿ, ಹಾಗೂ ೧೯೫೭–೫೮ರ ಪರಿಷ್ಕೃತ ಅಂಕಿ ಅಂಶಗಳ ಪ್ರಕಾರ ೪೫೭.೧೨ ಕೋಟಿ ರೂಪಾಯಿ ಇದೆ. ಇವುಗಳಲ್ಲಿ ನಾವು ರಾಜ್ಯ ಸರಕಾರದ ಅಂಕಿಅಂಶಗಳನ್ನೂ ಜೋಡಿಸಿದರೆ ೧೯೫೭–೫೮ರಲ್ಲಿ ೨೪೬.೮೭ ಅಪ್ರತ್ಯಕ್ಷ ತೆರಿಗೆಯಿಂದ, ಹಾಗೂ ೮೭.೯ ಕೋಟಿ ರೂಪಾಯಿ ಭೂ–ರಾಜಸ್ವದಿಂದ ಪಡೆದುಕೊಂಡದ್ದರ ಪರಿಷ್ಕೃತ ಅಂದಾಜಿದೆ. ಅರ್ಥಾತ್ ಒಟ್ಟು ೨೩೧.೨೭ ಕೋಟಿ ರೂಪಾಯಿ ಆಗಿತ್ತು. ನಾವು ಎರಡೂ ವರ್ಗಗಳ ಆದಾಯದಲ್ಲಿ ಅಂತರವನ್ನು ನೋಡಿದ್ದೇವೆ. ಅದರ ಲೆಕ್ಕದ ಪ್ರಕಾರ ಶ್ರೀಮಂತ ವರ್ಗದ ಆದಾಯ ನಿಶ್ಚಿತವಾಗಿಯೂ ಹೆಚ್ಚಾಗುತ್ತಿದೆ. ಇದರಮೇಲೆ ಪ್ರತಿಶತ ಕರಗಳ ಭಾರ

೧. "Some live without working, and others work without living."



ಕಡಿಮೆಯಾಗುತ್ತಿದೆ. ಪ್ರತ್ಯಕ್ಷ ಕರಗಳ ಹೆಚ್ಚಿನ ಭಾರವನ್ನು ಮಧ್ಯಮ ವರ್ಗದ ಜನರು ಭರಿಸಬೇಕಾಗುತ್ತದೆಯೆಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಆದ್ದರಿಂದ ನಾವು ಅಸಮಾನತೆಯನ್ನು ಕಡಿಮೆ ಮಾಡಬಯಸಿದರೆ ಕೆಲವು ಬೇರೆ ಉಪಾಯಗಳನ್ನು ಅವಲಂಬಿಸಬೇಕಾಗುತ್ತದೆ.

ಔದ್ಯೋಗೀಕರಣದ ಈ ಬಂಡವಾಳ ಪ್ರಧಾನ ಪದ್ಧತಿಯ ಕಾರಣವಾಗಿ ಸರಕಾರವು ಪ್ರಥಮ ಯೋಜನೆಯ ಅವಧಿಯಲ್ಲಿ ಮತ್ತು ಅನಂತರ ಕೂಡ ಉದ್ದಿಮೆದಾರರಿಗೆ ಹಲವು ಸೌಲಭ್ಯಗಳನ್ನು ಕೊಟ್ಟಿದೆ. ಬೇರೆ ಬೇರೆ ವಿತ್ತ ನಿಗಮಗಳು ಹಾಗೂ ಬ್ಯಾಂಕ್‌ಗಳಿಂದ ಮಾತ್ರವೇ ಅವರಿಗೆ ಹಣವನ್ನು ಸಾಲವಾಗಿ ಕೊಡಲಿಲ್ಲ, ಮೇಲಾಗಿ ಸರಕಾರ ಕೂಡ ಸ್ವಯಂ ಅತುಲ್ ಪ್ರೊಡಕ್ಟ್ಸ್‌ಗೆ ನೀಡಿದ ಹಾಗೆ ಪ್ರತ್ಯಕ್ಷ ಸಹಾಯ ಕೊಟ್ಟಿತು. ವಿಶ್ವಬ್ಯಾಂಕ್‌ನಿಂದಲೂ ಧನಸಹಾಯ ಕೊಡಿಸುವ ವ್ಯವಸ್ಥೆ ಮಾಡಲಾಯಿತು. ವಿಶ್ವಬ್ಯಾಂಕ್‌ನ ಅಂದಾಜಿನ ಪ್ರಕಾರ ಮೊದಲ ಯೋಜನೆಯ ಅವಧಿಯಲ್ಲಿ ಸರಕಾರವು ಖಾಸಗಿಕ್ಷೇತ್ರಕ್ಕೆ ಒಟ್ಟೂ ೫೫ ಕೋಟಿ ರೂಪಾಯಿಗಳ ಸಹಾಯ ನೀಡಿತು. ಇದರ ಪ್ರಮಾಣವು ಹೊಸ ಬಂಡವಾಳವನ್ನು ಅದು ಸಂಗ್ರಹ ಮಾಡಿದ್ದಕ್ಕಿಂತ ಹೆಚ್ಚಾಗಿದೆ. ಈ ಕ್ಷೇತ್ರವು ದೇಶದ ಉತ್ಪಾದನೆಯಲ್ಲಿ ಕೇವಲ ಶೇಕಡ ೮ ಪ್ರತಿಶತ ಕೊಡುಗೆಯನ್ನಷ್ಟೇ ಕೊಡುತ್ತದೆಯೆಂಬುದನ್ನು ನಾವು ನೆನಪಿಡಬೇಕು.

ಕಾನೂನು ಹಾಗೂ ಕರ ಆಕರಣೆಯನ್ನು ನಾವು ಸಾಕಷ್ಟು ಬಿಗಿ ಮಾಡಿದೆವು ಎಂದಿಟ್ಟುಕೊಂಡರೂ ನಮ್ಮ ಆಶಯ ಸಿದ್ಧವಾದಂತಾಗುವುದಿಲ್ಲ, ಮೇಲಾಗಿ ಅದರಲ್ಲಿಂದ ಉಳಿದ ಕೆಲವು ಕೆಡುಕುಗಳು ಹುಟ್ಟಿಕೊಳ್ಳುತ್ತವೆ. ಎಲ್ಲವನ್ನೂ ಗೆದ್ದ ಮಹಾತ್ಮರ ವಿಷಯವನ್ನು ಬಿಟ್ಟುಬಿಡೋಣ, ಸಾಧಾರಣ ಶಕ್ತಿ ಹಾಗೂ ಜೀವನವನ್ನು ಅನುಭವಿಸುವ ಸ್ತರಗಳಲ್ಲಿ ಕೆಲವು ವಿವೇಕವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಅಲ್ಲಿ ಭ್ರಷ್ಟಾಚಾರಕ್ಕೆ ಸಾಕಷ್ಟು ಅವಕಾಶವಾಗಿಬಿಡುತ್ತದೆ. ಆದ್ದರಿಂದ ಸರಕಾರವು ರಾಷ್ಟ್ರೀಕರಣದ ಮೂಲಕ ದೊಡ್ಡ ದೊಡ್ಡ ಕಾರಖಾನೆಗಳ ಮೇಲೆ ಹಿಡಿತವನ್ನು ಸಾಧಿಸುತ್ತದೆಯಾದರೂ, ದೊಡ್ಡ ದೊಡ್ಡ ವೇತನದ ವ್ಯವಸ್ಥೆಯನ್ನೂ ಮಾಡಬೇಕಾಗುತ್ತದೆ. ಇಂದಂತೂ ಒಂದು ಕಡೆ ಖಾಸಗಿ ಕ್ಷೇತ್ರದಲ್ಲಿನ ಜನರಿಗೆ ಹಾಗೂ ವಿದೇಶೀತಜ್ಞರಿಗೆ ಭಾರೀ ಗೌರವಧನ ಸಿಗುತ್ತಿದ್ದರೂ ಸರಕಾರವೂ ಒಮ್ಮೆಲೇ ತನ್ನ ಕ್ಷೇತ್ರದಲ್ಲಿ ಇದನ್ನು ಎಂದೂ ಮಾಡಲಾರದು. ಆದ್ದರಿಂದ ಅಸಮಾನತೆಯನ್ನು ಕಡಿಮೆ ಮಾಡಲು ನಾವು ಉತ್ಪಾದನ ವಿಧಾನವನ್ನೇ ವಿಕೇಂದ್ರೀಕರಣ ಮಾಡಬೇಕಾಗುತ್ತದೆ.

**ಖಾಸಗಿ ಸಂಪತ್ತಿನ ಪ್ರಶ್ನೆ**

ಸಾಧಾರಣವಾಗಿ ಕೆಲಸ ಮತ್ತು ಅದಕ್ಕಾಗಿ ದೊರೆಯುವ ಸಂಭಾವನೆಯಿಂದ ಬಹಳ ಅಸಮಾನತೆಗಳೇನೂ ಸೃಷ್ಟಿಯಾಗುವುದಿಲ್ಲ. ಅದರಲ್ಲಿಯೂ ಖಾಸಗಿ ಸಂಪತ್ತಿನ

ಮೇಲೆ ಮನುಷ್ಯನ ಅಧಿಕಾರ ಹಾಗೂ ಅದರ ಉಪಭೋಗದ ಮೂಲಕ ಗಳಿಸಿದ ಆದಾಯದ ಪಡೆಯುವಿಕೆಯಿಂದ ಹೆಚ್ಚುತ್ತದೆ. ಈ ಆಧಾರದ ಮೇಲೆ ಸಮಾಜವಾದಿ ಖಾಸಗಿ ಸ್ವತ್ತನ್ನೇ ಕೊನೆಗೊಳಿಸುವ ಮಾತನ್ನಾಡುತ್ತಾರೆ. ಆದರೆ ಅವರ ಸಿದ್ಧಾಂತ ಮತ್ತು ವ್ಯವಹಾರವನ್ನು ಎರಡೂ ದೃಷ್ಟಿಗಳಿಂದ ಸಮರ್ಥನೆ ಮಾಡುವುದು ಕಷ್ಟ. ಸೃಷ್ಟಿಯ ಆರಂಭದಿಂದಲೇ ಅಪರಿಗ್ರಹ ಹಾಗೂ 'ಮಾ ಗೃಧಃ ಕಸ್ಯ ಸ್ವಿದ್ಧನಮ್'ದ ಉಪದೇಶ ಸಿಕ್ಕಿದೆ. ಆದರೆ ಈ ಜಗತ್ತಿನಲ್ಲಿ ಎಲ್ಲವೂ ನಮ್ಮದೇ ಆಗಿದೆ. ಖಾಸಗಿ ಸಂಪತ್ತನ್ನು ಬೇರುಸಹಿತ ಕಿತ್ತುಹಾಕಬಯಸುತ್ತಿದ್ದ ಸೌಮ್ಯವಾದಿಗಳು ಮೊದಲು ವ್ಯಕ್ತಿಗತ ಮತ್ತು ನಂತರ ಕೆಲವು ಅಂಶದ ಹಂತದವರೆಗೆ ಖಾಸಗಿ ಸಂಪತ್ತನ್ನೂ ಸ್ವೀಕಾರ ಮಾಡತೊಡಗಿದರು. ಸ್ವಂತದ ಸಂಪತ್ತಿನ ಕಾರಣದಿಂದ ಕೆಡುಕುಗಳು ಹುಟ್ಟಿಕೊಂಡರೂ ನಾವು ಅದನ್ನು ಬಹಿಷ್ಕಾರ ಮಾಡಲಾರೆವು. ನಿಜ, ನಾವು ನಮ್ಮ ಖಾಸಗಿ ಸಂಪತ್ತಿನ ಮಿತಿಯನ್ನು ಖಂಡಿತವಾಗಿಯೂ ನಿರ್ಧರಿಸಿಕೊಳ್ಳಬೇಕು. ವಿಕೇಂದ್ರೀಕರಣವು ಈ ಮಿತಿಗಳ ಸ್ಥಾಪನೆಯ ಯೋಜನೆಯಾಗಿದೆ.

### ವಿಕೇಂದ್ರೀಕರಣದ ವಿಭಿನ್ನ ಸ್ವರೂಪ

ಪಶ್ಚಿಮವನ್ನು ಹೆಚ್ಚಾಗಿ ಆಧರಿಸಿದ ತಂತ್ರಜ್ಞಾನ ಮತ್ತು ವಿಕೇಂದ್ರೀಕರಣ ಒಟ್ಟೊಟ್ಟಿಗೆ ನಡೆಯಲಾರವು. ಬಹಳಷ್ಟು ಜನರು ವಿಕೇಂದ್ರೀಕರಣದ ಅರ್ಥವನ್ನು ಪ್ರಾದೇಶಿಕತೆಯೊಂದಿಗೆ ಜೋಡಿಸುತ್ತಾರೆ. ಅವರು ವಿಕೇಂದ್ರೀಕರಣದ ಹೆಸರಿನಲ್ಲಿ ಮುಂಬಯಿ ಮತ್ತು ಅಹಮದಾಬಾದ್‌ದಂತಹ ಕಾರಖಾನೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಿ ಸಮಾಧಾನ ಪಡುತ್ತಾರೆ. ಸಮಾಜವಾದೀ ರಾಜಕೀಯವು ಶಕ್ತಿಯ ಹಂಚಿಕೆ ಮಾಡಿ ಸಂತುಷ್ಟವಾಗುತ್ತದೆ. ಹಾಗೂ ಹಳ್ಳಿ, ಜಿಲ್ಲೆ, ಪ್ರಾಂತ ಹಾಗೂ ಕೇಂದ್ರದ ನಾಲ್ಕು ಕಂಬಗಳ ರಾಜ್ಯದ ರೂಪದಲ್ಲಿ ಅದರ ಸಮಾಜವಾದ ಚಿಗುರುತ್ತದೆ. ಆದರೆ ಪ್ರತಿಯೊಂದು ಸ್ಥಳದಲ್ಲಿ ಆರ್ಥಿಕ ಶಕ್ತಿಯು ರಾಜ್ಯದ ಘಟಕಗಳ ಕೈಯಲ್ಲಿ ಇರುತ್ತದೆ. ಹಾಗೂ ತಂತ್ರಜ್ಞಾನವನ್ನು ಬಳಸಿಕೊಂಡು ಬೇರೆ ಬೇರೆ ಸ್ಥಳಗಳಲ್ಲಿ ಉತ್ಪಾದನೆ ಮಾಡುವುದು ಪಶ್ಚಿಮದ ರೀತಿಯದೇ ಆಗಿರುತ್ತದೆ. ಅವುಗಳ ಜಗಳ ಸ್ವಾಮಿತ್ವದ ಹಂಚಿಕೆಯದು, ಮೌಲಿಕವಾದದ್ದಲ್ಲ. ಸರ್ವೋದಯವಾದಿಯು ವರ್ತಮಾನ ತಂತ್ರಜ್ಞಾನವನ್ನು ವಿರೋಧ ಮಾಡುತ್ತಾನೆ, ಆದರೆ ಅವನ ಗ್ರಾಮರಾಜ್ಯದಲ್ಲಿ ಇಡಿಯ ಹಳ್ಳಿಯ ವೃತ್ತದ ಕೃಷಿಯು ಒಂದು ರೂಪದಲ್ಲಿ ಗ್ರಾಮ ಪಂಚಾಯತಿಯ ಮೇಲ್ವಿಚಾರಣೆಯಲ್ಲಿ ಆಗುತ್ತದೆ. ಹಳ್ಳಿಯ ಉಳಿದ ಆರ್ಥಿಕ ವ್ಯವಸ್ಥೆಯು ಕೂಡ ಪಂಚಾಯತದ ಅಧೀನದಲ್ಲಿಯೇ ಇರುತ್ತದೆ. ವ್ಯವಹಾರದಲ್ಲಿ ಈ ಸ್ಥಿತಿಯು ರಷ್ಯಾದ ಸಾಮೂಹಿಕ ಕೃಷಿಗಿಂತ ಕೆಟ್ಟದ್ದಾಗಿರುತ್ತದೆ. ಇದರಲ್ಲಿ ಆಧುನಿಕ ಯಂತ್ರಗಳೂ ಲಭ್ಯವಾಗುವುದಿಲ್ಲ. ಮತ್ತು ವ್ಯಕ್ತಿಗೆ ಉತ್ಪಾದನೆಯ ಸ್ವಾತಂತ್ರ್ಯವೂ ಇರುವುದಿಲ್ಲ.



ಸಮಾಜವಾದಿಗಳು ಯಾವ ರೂಪ-ಬಣ್ಣಗಳೇ ಇರಲೊಲ್ಲದೇಕೆ, ಪಶ್ಚಿಮದ ತಾಂತ್ರಿಕತೆಯಲ್ಲಿ ಅಚಲ ಶ್ರದ್ಧೆಯನ್ನಿಟ್ಟುಕೊಂಡು ಸಾಗುತ್ತಾರೆ. ಅವರ ಯುದ್ಧವು ಯಂತ್ರಗಳೊಡನೆ ಅಲ್ಲ, ಬದಲಿಗೆ ಯಂತ್ರದ ಮಾಲೀಕರೊಡನೆ ಇರುತ್ತದೆ. ಪರಿಣಾಮವಾಗಿ ಅವರು ಅದರ ಒಡೆತನವನ್ನು ರಾಜ್ಯಕ್ಕೆ ಒಪ್ಪಿಸಿ ಸಮಾಧಾನ ತಾಳುತ್ತಾರೆ. ಸರ್ವೋದಯವಾದಿಗಳು ಯಂತ್ರಗಳ ಕೆಡುಕನ್ನು ಅರಿತುಕೊಂಡು ಅದಕ್ಕಾಗಿ ಅದನ್ನು ಬಹಿಷ್ಕರಿಸಿದರು, ಖಾಸಗಿ ಸಂಪತ್ತಿನ ಕೆಡುಕನ್ನೂ ಕಂಡು ಅದನ್ನು ಮುಕ್ತಾಯಗೊಳಿಸುವ ಪಣವನ್ನು ಸ್ವೀಕರಿಸಿದರು. ಸಮಾಜವಾದಿ ರಾಜ್ಯದ ಭಾರೀ ನಿರಂಕುಶ ಶಕ್ತಿಯನ್ನು ನೋಡಿ ಅದನ್ನೂ ತ್ಯಾಜ್ಯವೆಂದೇ ನಿರ್ಧರಿಸಿದರು ಮತ್ತು ಹಳ್ಳಿಯ ಪಂಚಾಯತಕ್ಕೆ ಎಲ್ಲ ಶಕ್ತಿಯನ್ನೂ ವಹಿಸಿದರು. ಇವೆಲ್ಲ ಅವ್ಯಾವಹಾರಿಕವೇನೋ ನಿಜ, ಆದರೆ ಯಾವ ಕೆಡುಕಿನಿಂದ ನಾವು ಪಾರಾಗುವ ಪ್ರಯತ್ನ ಮಾಡುತ್ತೇವೋ ಅವೇ ಬೇರೆ ರೂಪದಿಂದ ಹುಟ್ಟಿಕೊಳ್ಳುತ್ತವೆ. ವಿಕೇಂದ್ರೀಕರಣದ ವಿಡಂಬನೆ ಇದು.

ಈ ಎಲ್ಲ ವಿಚಾರಧಾರೆಗಳು ಮನುಷ್ಯನನ್ನು ರಕ್ತ ಮಾಂಸದಿಂದ ತುಂಬಿದ, ತ್ರಿವಿಧಗುಣ ಸಂಪನ್ನ, ಆಸೆ-ಆಕಾಂಕ್ಷೆಗಳು ಹಾಗೂ ಭಾವನಾಯುಕ್ತ ಜೀವಂತ ಪ್ರಾಣಿ ಎಂದು ಭಾವಿಸದೆ ಅವನ ಯಾವುದೋ ಭಾವಸ್ವರೂಪದ ಕಲ್ಪನೆ ತೆಗೆದುಕೊಂಡೇ ತನ್ನ ರಚನೆಯನ್ನು ಮಾಡುತ್ತವೆ. ವ್ಯಕ್ತಿಗತ ಸ್ವಾತಂತ್ರ್ಯದ ವಿಚಾರಧಾರೆಯನ್ನು ತೆಗೆದುಕೊಂಡು ನಡೆಯುವ ಪ್ರಜಾಪ್ರಭುತ್ವವು 'ಆರ್ಥಿಕ ಮಾನವ'ನ ಸೃಷ್ಟಿ ಮಾಡಿದರೆ, ಸಾಮ್ಯವಾದವು 'ಸಮೂಹಜನ'(Mass man)ವನ್ನು ಹುಟ್ಟುಹಾಕಿತು. ಈ ಸಾಮಾನ್ಯ ಜನವು ಭಗವಂತನ ಸೃಷ್ಟಿಯಲ್ಲ, ಬದಲಾಗಿ ರಾಜ್ಯದ ಮೂಲಕ ರಚಿಸಲಾದದ್ದು, "ರಾಜ್ಯವೇ ಅವನ ಸಂಪೂರ್ಣ ವಿಚಾರಗಳು, ಭಾವನೆಗಳು, ಕ್ರಿಯೆಗಳು ಮತ್ತು ಆದರ್ಶಗಳ ವಿಧಾನವನ್ನು ಮಾಡುತ್ತದೆ, ಅವನಿಗೆ ವಿಚಾರ ವ್ಯಕ್ತಿಗತ ನಿರ್ಣಯ, ಮತ್ತು ನಿಶ್ಚಯದಿಂದ ಸ್ವಾತಂತ್ರ್ಯದೊರಕುತ್ತದೆ. ಬದಲಿಗೆ ಅವನನ್ನು ಯಂತ್ರ ಮಾನವನ ರಕ್ಷಣೆ ದೊರೆಯುತ್ತದೆ".* ಸರ್ವೋದಯವಾದಿಯು ಸರ್ವಸಮರ್ಪಣ ಭಾವದಿಂದ ಸರ್ವೋದಯವಾದೀ ಮನೋಭಾವದಿಂದ ಕೆಲಸ ಮಾಡುತ್ತ ಹೋಗುವ ಇಂಥದೇ ಭಾವ-ಜನದ ಕಲ್ಪನೆ ಹಿಡಿದು ಮುಂದುವರಿಯುತ್ತಾನೆ.

### ಸಾಮ್ಯವಾದ ಹಾಗೂ ಬಂಡವಾಳವಾದದಲ್ಲಿ ಸಮಾನತೆ

ಇಂದಿನ ಸಾಮ್ಯವಾದ ಹಾಗೂ ಬಂಡವಾಳವಾದ ಎರಡರಲ್ಲಿಯೂ ಸ್ವಾಮಿತ್ವದ ಸ್ವರೂಪದ ಅಂತರವೊಂದನ್ನು ಬಿಟ್ಟರೆ ಮತ್ತೇನೂ ಅಂತರವಿಲ್ಲ. ಆದ್ದರಿಂದ

---

* Rene Fulop : *Dehumanization in Modern Society.*

ಎರಡರಲ್ಲಿಯೂ ವ್ಯಕ್ತಿಯ ವಿಕಾಸದ ಯಾವುದೇ ಸೌಲಭ್ಯವಿಲ್ಲ ಹಾಗೂ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳು ಹೆಸರಿಗೆ ಮಾತ್ರ ದೊರಕಿವೆ. ಸಾಮ್ಯವಾದದ ಸಂಬಂಧವಾಗಿ ಪ್ರಿನ್ಸ್ ಕ್ರೊಪಾಟಕಿನ್ ೧೯೦೪ ರಲ್ಲಿಯೇ ಬರೆದಿದ್ದರು. "ಅವರು ಈ ಶತಾಬ್ದಿಯ ಪ್ರಭಾವೀ ಪ್ರವೃತ್ತಿಗಳು, ವಿಕೇಂದ್ರೀಕರಣ, ಸ್ವರಾಜ್ಯ ಹಾಗೂ ಸ್ವತಂತ್ರ ಒಪ್ಪಂದಗಳ ಅನುಕರಣೆ ಮಾಡುತ್ತಾರೋ, ಅಥವಾ ವಿರುದ್ಧವಾಗಿ ಕಳೆದುಕೊಂಡ ಅಧಿಕಾರವನ್ನು ಪುನಃ ಪ್ರತಿಷ್ಠಾಪನೆ ಮಾಡುತ್ತಾರೋ ನೋಡಬೇಕಾಗಿದೆ." ರಷ್ಯಾದಲ್ಲಿ ಕಮ್ಯುನಿಸಂನ ಕ್ರಾಂತಿಯ ನಂತರ ಅವರು ಪಶ್ಚಿಮಯುರೋಪ್‌ನಲ್ಲಿ ಕಾರ್ಮಿಕರಿಗೆ ಒಂದು ಪತ್ರದಲ್ಲಿ ಬರೆದಿದ್ದರು. "ನಿಮಗೆ ಒಂದು ವಿಷಯವನ್ನು ತಿಳಿಸಬೇಕಾದ್ದು ನನ್ನ ಕರ್ತವ್ಯ. ನನ್ನ ಸಂಪತ್ತಿಯಲ್ಲಿ ಒಂದು ಕೇಂದ್ರಿತರಾಜ್ಯ ಮತ್ತು ಅತ್ಯಧಿಕ ಕಠೋರ ಪಾರ್ಟಿ ಡಿಕ್ಟೇಟರ್‌ಶಿಪ್‌ನ ಸಹಾಯದಿಂದ ರಷ್ಯಾದಲ್ಲಿ ಕಮ್ಯುನಿಸಂನನ್ನು ಸ್ಥಾಪಿತಗೊಳಿಸುವ ಪ್ರಯತ್ನ ನಿಶ್ಚಯವಾಗಿಯೂ ವಿಫಲವಾಗುತ್ತದೆ. ಕಮ್ಯುನಿಸಂ ಅನ್ನು ಹೇಗೆ ತರಬಾರದು ಎಂಬುದನ್ನು ನಾವು ರಷ್ಯಾ ನೋಡಿ ಕಲಿಯುತ್ತಿದ್ದೇವೆ. ದೇಶದಲ್ಲಿ ಒಂದೇ ಪಕ್ಷದ ಸರ್ವಾಧಿಕಾರಿ ಆಡಳಿತವಾದರೆ ಕಾರ್ಮಿಕರು ಹಾಗೂ ಕೃಷಿಕರ ಪರಿಷತ್ತು ಅಪ್ರಾಮಾಣಿಕ ಹಾಗೂ ಅಪ್ರಭಾವಿ ಆಗುತ್ತದೆ. ಫ್ರಾನ್ಸನ್ನೂ ಕೂಡ ಸೋಲಿಸುವಂಥ ನೌಕರಶಾಹಿ ವಿಕಸಿತವಾಗುತ್ತದೆ. ಬಿರುಗಾಳಿಗೆ ರಸ್ತೆಯಮೇಲೆ ಬಿದ್ದ ಮರವನ್ನು ತೆಗೆದುಹಾಕಲು ಆದೇಶ ಕೊಡುವ ಸಲುವಾಗಿ ಕನಿಷ್ಠಪಕ್ಷ ನಲವತ್ತು ಆಫೀಸರುಗಳ ಅವಶ್ಯಕತೆ ಬೀಳುತ್ತದೆ." ಪ್ರಿನ್ಸ್ ಕ್ರೊಪಾಟಕಿನ್ ಯಾವ ಕಮ್ಯುನಿಸಂನ ಕಲ್ಪನೆಯನ್ನು ಮಾಡುತ್ತಿದ್ದರೋ ಮತ್ತು ಇಂದು ರಶಿಯದಲ್ಲಿ ನಡೆಯುತ್ತಿದೆಯೋ, ಅದೇ ನಿಜವಾದ ಕಮ್ಯುನಿಸಂ ಎಂದು ಹೇಳುವುದು ಕಷ್ಟ. ಆದರೆ ಸಮಾಜವಾದದ ಇನ್ನೊಂದು ಹೆಸರೇ ಆಫೀಸರೀಕರಣ ಎಂಬುದು ಸತ್ಯ.

## ವಿಕೇಂದ್ರೀಕರಣದ ಘಟಕ, ವ್ಯಕ್ತಿ ಮತ್ತು ಕುಟುಂಬ

ವಿಕೇಂದ್ರೀಕರಣದ ಮೌಲಿಕ ಘಟಕವೆಂದರೆ ವ್ಯಕ್ತಿ ಮತ್ತು ಕುಟುಂಬ. ವ್ಯಕ್ತಿಯ ಪ್ರಯತ್ನ ಮತ್ತು ಕುಟುಂಬದ ಸಹಾಯದಿಂದ ಹಾಗೂ ಸ್ವಾಮಿತ್ವದಿಂದ ಎಂದೂ ವ್ಯಾಪಕ ರೂಪದಲ್ಲಿ ಅಸಮಾನತೆ ಹಾಗೂ ಶೋಷಣೆಯ ಸಾಧ್ಯತೆಗಳು ಹುಟ್ಟಿಕೊಳ್ಳುವುದಿಲ್ಲ. ವ್ಯಕ್ತಿಯು ಈ ಮಿತಿಗಳನ್ನು ದಾಟಿ ಮುಂದುವರಿದು ಸಾಮೂಹಿಕ ಸಂಸ್ಥೆಗಳು ಮತ್ತು ನಿಗಮಗಳ ಮೂಲಕ ಹೆಚ್ಚು ಹೆಚ್ಚು ಶಕ್ತಿಗಳ ಒಡೆಯನಾಗುತ್ತ ಹೋದಂತೆ ಈ ಪ್ರವೃತ್ತಿಗಳೂ ಬಲವಾಗುತ್ತಾ ಹೋದವು. ಆದ್ದರಿಂದ ಸಾಧಾರಣವಾಗಿ ಉತ್ಪಾದನೆಯ ಆಧಾರವು ವ್ಯಕ್ತಿ–ಕುಟುಂಬ ಆಗಬೇಕು. ನಾವು ಕುಟುಂಬದ ಘಟಕವನ್ನೇ ಉತ್ಪಾದನೆಯ ಘಟಕವೆಂದೂ ಮಾಡಿಕೊಳ್ಳಲು ಸಾಧ್ಯವಾಗುವ ವಿಧಾನವನ್ನು



ಅನುಸರಿಸಬೇಕಾಗುತ್ತದೆ. ಕೃಷಿಯಲ್ಲಿ ಈ ರೀತಿ ನಾವು ಭೂಮಿಯ ಒಡೆತನದ ಕೃಷಿ (Peasant proprietor farming) ಯನ್ನು ಉಪಯುಕ್ತವೆಂದು ಭಾವಿಸುತ್ತೇವೆ. ಉದ್ದಿಮೆಗಳಲ್ಲಿಯೂ ಕೂಡ ಮನೆಯಲ್ಲಿಯೇ ನಡೆಸಲು ಸಾಧ್ಯವಾಗುವ ಕುಟೀರ ಹಾಗೂ ಚಿಕ್ಕ ಚಿಕ್ಕ ಉದ್ಯಮಗಳೇ ನಮ್ಮ ವ್ಯಾಪಕ ಔದ್ಯೋಗೀಕರಣದ ಕಾರ್ಯಕ್ರಮಗಳಾಗುತ್ತವೆ. ನಿಜ, ನಾವು ಇದರಲ್ಲಿ ಅತ್ಯಂತ ಉತ್ತಮವಾದ ಯಂತ್ರಗಳನ್ನು ಮತ್ತು ವಿದ್ಯುತ್ತಿನ ಬಳಕೆಯನ್ನು ಮಾಡಬಲ್ಲೆವು.


## ಸಣ್ಣ ಕಾರ್ಖಾನೆಗಳು

ಸಾಮಾನ್ಯವಾಗಿ ಚಿಕ್ಕ ಉದ್ಯಮಗಳನ್ನೇ ಆಧಾರವಾಗಿ ಭಾವಿಸಿಕೊಂಡು ಮುನ್ನಡೆದರೂ, ಕೇವಲ ಮನೆಯಲ್ಲಿಯೇ ಕುಳಿತು ಉತ್ಪಾದಿಸಲು ಸಾಧ್ಯವಾಗದಂತಹ ಕೆಲವು ವಸ್ತುಗಳೂ ಇರುತ್ತವೆ. ಇವುಗಳಿಗಾಗಿ ಚಿಕ್ಕ ಚಿಕ್ಕ ಕಾರಖಾನೆಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಚಿಕ್ಕ ಕಾರಖಾನೆಗಳ ವ್ಯಾಖ್ಯಾನವು ಕಷ್ಟವಾಗಿದ್ದರೂ, ಐದು ಲಕ್ಷದವರೆಗೆ ಬಂಡವಾಳ ತೊಡಗಿಸಿದ, ೫೦ ಜನ ಕಾರ್ಮಿಕರು ಕೆಲಸ ಮಾಡುವ ಕಾರಖಾನೆಗಳನ್ನು ಚಿಕ್ಕ ಉದ್ದಿಮೆಗಳೆಂದು ಇತ್ತೀಚೆಗೆ ಸರಕಾರವು ಹೇಳಿದೆ. ನಾವು ಇದನ್ನು ಒಪ್ಪಿ ಮುಂದರಿಯುತ್ತೇವೆ. ಸಾಧಾರಣವಾಗಿ ೯೦ ಪ್ರತಿಶತಕ್ಕಿಂತ ಹೆಚ್ಚಿನ ವಸ್ತುಗಳನ್ನು ಈ ಸ್ಕೇಲಿನಲ್ಲಿಯೇ ಸಿದ್ಧಗೊಳಿಸಲಾಗುತ್ತದೆ. ಉಳಿದ ವಸ್ತುಗಳನ್ನು ದೊಡ್ಡ ಕಾರಖಾನೆಗಳಲ್ಲಿ ತಯಾರಿಸಬಹುದಾಗಿದೆ. ಆದರೆ ಸಾಧಾರಣವಾಗಿ ಈ ಕಾರಖಾನೆಗಳಲ್ಲಿ, ಚಿಕ್ಕ ಕಾರಖಾನೆಗಳಲ್ಲಿ ತಯಾರಾದ ವಸ್ತುಗಳ ಸಂಗ್ರಹ ಹಾಗೂ ಜೋಡಣೆಯ ಅವಶ್ಯಕತೆಯುಂಟಾಗುತ್ತದೆ.

## ಸಣ್ಣ ಹಾಗೂ ಕುಟೀರ ಉದ್ಯಮಗಳ ಪ್ರಕಾರಗಳು

ದೇಶ–ಕಾಲ ಅನುಸಾರವಾಗಿ ಸಾಮಾನ್ಯವಾಗಿ ಸಣ್ಣ ಹಾಗೂ ಕುಟೀರ ಉದ್ಯೋಗಗಳಲ್ಲಿ ವ್ಯತ್ಯಾಸವನ್ನು ಮಾಡಲಾಗುತ್ತದೆ. ವಿದ್ಯುತ್ತು ಅಥವಾ ಯಂತ್ರಗಳ ಶಕ್ತಿಯ ಉಪಯೋಗವನ್ನು ಮಾಡದಿರುವ ಉದ್ಯಮಗಳನ್ನು ಕುಟೀರ ಉದ್ಯೋಗ ಎಂದು ಕರೆಯುವ ರೂಢಿಯಿದೆ. ಹಲವುಬಾರಿ ನಮ್ಮ ಹಳೆಯ ಗ್ರಾಮೋದ್ಯೋಗಗಳೂ ಈ ಪರಿಭಾಷೆಯ ಒಳಗಡೆ ಬರುತ್ತವೆ. ಆದರೆ ಸಾಧಾರಣವಾಗಿ ಚಿಕ್ಕ ಉದ್ಯಮಗಳೆಂದು ಕರೆದು ಅವುಗಳಿಗೆ ಒತ್ತುಕೊಟ್ಟರೂ, ವಿದ್ಯುತ್ತಿನ ಬಳಕೆ ಹೆಚ್ಚುತ್ತ ಹೋದಹಾಗೆ ಎರಡರ ನಡುವೆ ಭೇದ ಕಲ್ಪಿಸುವುದು ಕಠಿಣವಾಗುತ್ತಿದೆ. ೧೯೪೫–೫೦ರ ಉದ್ಯೋಗ ರಕ್ಷಣಾ ಆಯೋಗ (Fiscal commission) ಅದನ್ನು ಹೀಗೆ ವರ್ಗೀಕರಣ ಮಾಡಿದೆ.

**ಕುಟೀರ ಹಾಗೂ ಸಣ್ಣ ಉದ್ಯಮಗಳು**




೧) ಅಲ್ಪಾವಧಿ ಗ್ರಾಮೀಣ ಕುಟೀರ ಉದ್ಯೋಗಗಳ ಒಳಗಡೆ, ಕೃಷಿಕನು ತನ್ನ ಬಿಡುವಿನ ಸಮಯವನ್ನು ಬಳಸಿ ನಿರ್ಮಿಸುವ ಹಗ್ಗ ಹೊಸೆಯುವುದು, ಕೈ ಮಗ್ಗ, ಬುಟ್ಟಿ ಹೆಣೆಯುವುದು ಮುಂತಾದವುಗಳೆಲ್ಲ ಬರುತ್ತವೆ.

೨) ಪೂರ್ಣಾವಧಿ ಗ್ರಾಮೀಣ ಕುಟೀರ ಉದ್ಯೋಗಗಳಲ್ಲಿ ಬಡಗಿ ಕಮ್ಮಾರ, ಕುಂಬಾರ, ಗಾಣಿಗ, ಮುಂತಾದ ಕೆಲಸಗಳು ಬರುತ್ತವೆ.

೩) ಅಂಶಕಾಲಿಕ ನಾಗರಿಕ ಕುಟೀರ ಉದ್ಯೋಗಗಳಲ್ಲಿ ಆಟಿಗೆಗಳು, ಉಪ್ಪಿನಕಾಯಿ, ಮುರಬ್ಬಾ, ಕಾಗದದ ಲಕೋಟೆಗಳು, ಇತ್ಯಾದಿಗಳನ್ನು ತಯಾರಿಸುವ ಕೆಲವು ಉದ್ಯೋಗ, ಆದರೆ ಈ ಕ್ಷೇತ್ರದಲ್ಲಿ ಇನ್ನೂ ಹಲವು ಉದ್ಯೋಗಗಳನ್ನು ಪ್ರಾರಂಭಿಸಬಹುದು.

೪) ಪೂರ್ಣಕಾಲದ ನಾಗರಿಕ ಕುಟೀರ ಉದ್ಯೋಗಗಳಲ್ಲಿ ಸೊನಗಾರ, ಸಿಂಪಿಗ, ಬಡಗಿ, ಆನೆದಂತದ ಕೆತ್ತನೆ, ಪಾತ್ರೆ ತಯಾರಿಸುವವನು, ಬಣ್ಣಗಾರ, ಮುದ್ರಕ ಇತ್ಯಾದಿ ಕೆಲಸ.

೫) ಅಂಶಕಾಲಿಕ ನಾಗರಿಕ ಉದ್ಯೋಗಗಳು ಸಾಮಾನ್ಯವಾಗಿ ಶ್ರಾಯದ ಕೆಲಸಕ್ಕೆ ಸಂಬಂಧಿಸಿದವುಗಳಾಗಿದ್ದು, ಇಟ್ಟಿಗೆ ತಯಾರಿಸುವುದು ಮುಂತಾದವು ಸೇರಿವೆ.

೬) ಪೂರ್ಣಕಾಲೀನ ನಾಗರಿಕ ಉದ್ಯಮಗಳ ವಿಕಾಸವು ಸಾಕಷ್ಟಾಗುತ್ತಿದೆ. ಇವುಗಳಲ್ಲಿ ಹೊಸ್ಯೆರಿ ಕಾರ್ಖಾನೆಗಳು, ಸೈಕಲ್ ಬಿಡಿಭಾಗಗಳು, ರೇಷ್ಮೆ ಮತ್ತು ಹತ್ತಿದಾರದ ತಯಾರಿಕೆ, ಟೇಲರಿಂಗ್ ಯಂತ್ರಗಳು, ಚಿಕ್ಕ ಯಂತ್ರಗಳು ಇತ್ಯಾದಿ ಅನೇಕ ವಸ್ತುಗಳು ಸೇರಿವೆ. ಇವು ನಗರದ ಚಿಕ್ಕ ಫ್ಯಾಕ್ಟರಿಗಳು, ಅವುಗಳ ಮೇಲೆ ಫ್ಯಾಕ್ಟರಿ ಆಕ್ಟ್ ಅನ್ವಯಿಸುವುದಿಲ್ಲ.

೭) ಅಂಶಕಾಲದ ಗ್ರಾಮೀಣ ಲಘು ಉದ್ಯೋಗಗಳಲ್ಲಿ ಧಾನ್ಯ ಒಕ್ಕುವುದು, ಖಂಡಸಾರಿ, ಬೆಲ್ಲ ಇತ್ಯಾದಿಗಳು ಬರುತ್ತವೆ.

೮) ಪೂರ್ಣಾವಧಿ ಗ್ರಾಮೀಣ ಲಘು ಉದ್ಯೋಗಗಳ ಕೊರತೆ ಪ್ರಾಯಶಃ ಇದೆ. ಮೋತಿಹಾರಿ ಬಳಿಯ ಚಿಪ್ಪಿನಿಂದ ಬಟನ್ ತಯಾರಿಕೆ, ಫಿರೋಜಾಬಾದ್ ಬಳಿಯ ಬಳೆಗಳು, ರೂಡಕಿ ಬಳಿಯ ಡ್ರಾಯಿಂಗ್ ಮತ್ತು ಎಂಜಿನಿಯರಿಂಗ್ ಸಾಮಾನು, ಇತ್ಯಾದಿಗಳು ಹೀಗೆ ತಯಾರಾಗುತ್ತವೆ. ನಾವು ವಾಸ್ತವವಾಗಿ ದೇಶದ ಔದ್ಯೋಗಿಕ ಸ್ತರವನ್ನು ಬದಲಿಸಲು ಬಯಸಿದರೆ, ನಾವು ಈ ಬಗೆಯ ಉದ್ಯೋಗಗಳನ್ನು ಸ್ಥಾಪಿಸಬಹುದಾಗಿದೆ. ಇದರಿಂದ ನಾವು ಗ್ರಾಮಗಳನ್ನು ಪುನರುಜ್ಜೀವನಗೊಳಿಸಬಹುದು, ಹಾಗೂ ನಗರದ ಅನೇಕ ಕೆಡುಕುಗಳಿಂದ ಬಚಾವಾಗಬಹುದು.



**ಚಿಕ್ಕ ಉದ್ದಿಮೆಗಳು–ಸಾಪೇಕ್ಷ ಸ್ಥಾನ**

ನಾವು ಚಿಕ್ಕ ಉದ್ಯಮಗಳ ಬಗ್ಗೆ ಮಾತನಾಡುವಾಗ, ಹಲವು ಅರ್ಥಶಾಸ್ತ್ರಜ್ಞರು ಹೀಗೆ ನಿರ್ದಿಷ್ಟಪಡಿಸಿದ ವರ್ಗಗಳಲ್ಲಿಂದ ಹಲವು ಚಿಕ್ಕ ಚಿಕ್ಕ ಕಾರ್ಯಗಳನ್ನು ತೆಗೆದುಕೊಂಡು ಅವುಗಳ ವ್ಯಾಪಕತೆ ಮತ್ತು ಅಜೇಯತೆಯ ಪ್ರತಿಪಾದನೆ ಮಾಡಿ ಸಮಾಧಾನಪಟ್ಟುಕೊಳ್ಳುತ್ತಾರೆ. ನಿಜ, ಬಹಳಷ್ಟು ಉದ್ಯೋಗಗಳಿಗೆ ಕುಟೀರ ಮತ್ತು ಚಿಕ್ಕ ಉದ್ಯೋಗಗಳಿಗೆ ಯಾವಾಗಲೂ ಸ್ಥಾನವಿರುತ್ತದೆ. ವ್ಯಕ್ತಿಗತ ಅಭಿರುಚಿ ಹಾಗೂ ಕಲೆಗೇ ಮಹತ್ವ ಇರುವಲ್ಲಿ, ಯಂತ್ರಗಳು ಹಾಗೂ ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಜಾಗವಿಲ್ಲ. ಆದರೆ ನಾವು ಅವುಗಳನ್ನು ಔದ್ಯೋಗೀಕರಣದ ಅಭಿನ್ನ ಹಾಗೂ ಆಧಾರಭೂತ ಅಂಗವನ್ನಾಗಿ ಮಾಡಿಕೊಳ್ಳುವ ಮಾತನ್ನಾಡುತ್ತೇವೆ, ನಾವು ವ್ಯಾಪಕ ದೃಷ್ಟಿಯಿಂದ ವಿಚಾರ ಮಾಡುತ್ತೇವೆ. ಇಂದು ನಡೆಯುವ ದೊಡ್ಡ ಉದ್ದಿಮೆಗಳ ಜೊತೆ ಸಾಪೇಕ್ಷ ದೃಷ್ಟಿಯಿಂದ ನೋಡಿದಾಗ, ಈ ಉದ್ಯೋಗಗಳನ್ನು ಮೂರು ಶ್ರೇಣಿಗಳಲ್ಲಿ ವಿಂಗಡಿಸಬಹುದು:

೧) ದೊಡ್ಡ ಉದ್ಯಮಗಳು ಸಹಜವಾಗಿ ತಳ್ಳಿಹಾಕಲಾಗದ, ಚಿಕ್ಕ ಆಧಾರದ ಮೇಲೆ ಕೆಲಸ ಮಾಡುವ ವಿಶೇಷ ಸೌಲಭ್ಯಗಳು ದೊರೆತಿರುವ ಸ್ವತಂತ್ರ ಅಸ್ತಿತ್ವದ ಉದ್ಯಮಗಳು. ಉದಾ: ಬೀಗಗಳು, ಮೇಣದಬತ್ತಿ, ಕತ್ತರಿ, ನಿಪ್ಪಲ್, ಬಟನ್ ಇತ್ಯಾದಿಗಳನ್ನು ತಯಾರಿಸುವುದು.

೨) ದೊಡ್ಡ ಉದ್ಯೋಗಗಳೊಂದಿಗೆ ಸಂಬಂಧವಿರಿಸಿಕೊಂಡು, ವಸ್ತುವಿನ ಯಾವುದಾದರೂ ಅಂಗವನ್ನು ಉತ್ಪಾದನೆ ಮಾಡುವುದರಲ್ಲಿ ಭಾಗವಹಿಸುವಂತಹವು. ಉದಾ: ವಿದ್ಯುತ್ತಿನ ಸಾಮಾನುಗಳು, ಸೈಕಲ್ ಇತ್ಯಾದಿ.

೩) ದೊಡ್ಡ ಉದ್ದಿಮೆಗಳ ಜೊತೆ ಸ್ಪರ್ಧೆಮಾಡಬೇಕಾಗಿ ಬರುವ ಕೆಲವು ಉದ್ಯೋಗಗಳು. ಉದಾ: ಬಟ್ಟೆ.

ಮೊದಲ ವರ್ಗದ ಉದ್ಯಮಗಳಿಗೆ ಸಂಬಂಧಿಸಿದಂತೆ, ನಾವು ಅವುಗಳಿಗೆ ಉದ್ಯಮಗಳ ಸಾಮಾನ್ಯ ಸೌಲಭ್ಯಗಳು, ಸಾಲ, ಮಾರುಕಟ್ಟೆ, ತರಬೇತಿ, ಮುಂತಾದವುಗಳನ್ನು ಕೊಡುವ ವ್ಯವಸ್ಥೆ ಮಾಡಿ, ಅವುಗಳ ಸ್ವತಂತ್ರ ವಿಕಾಸಕ್ಕೆ ಅವಕಾಶ ಮಾಡಿಕೊಡಬಹುದು.

**ಸಣ್ಣ ಮತ್ತು ದೊಡ್ಡ ಉದ್ಯಮಗಳ ಸಹಭಾಗಿತ್ವ**

ಎರಡನೆಯ ವರ್ಗದಲ್ಲಿ ನಾವು ಸ್ವಲ್ಪ ಗಮನ ಕೊಟ್ಟರೂ ಬಹಳ ಪ್ರಗತಿ ಸಾಧಿಸಬಹುದಾದ ಬಹಳ ಕ್ಷೇತ್ರಗಳಿವೆ. ದೊಡ್ಡ ಉದ್ಯಮಗಳು ಹಾಗೂ ಚಿಕ್ಕ ಉದ್ಯಮಗಳ ಸಂಬಂಧಗಳು ಎರಡು ಪ್ರಕಾರ ಇರಬಹುದು: ಉತ್ಪಾದಕ ವಸ್ತುಗಳನ್ನು ದೊಡ್ಡ ಉದ್ಯಮಗಳು ತಯಾರು ಮಾಡಬೇಕು, ಹಾಗೂ ಉಪಭೋಗದ ವಸ್ತುಗಳನ್ನು ಚಿಕ್ಕ ಉದ್ಯಮಗಳ ಮೂಲಕ ತಯಾರಿಸಬೇಕು. ಉದಾ: ಪ್ಲಾಸ್ಟಿಕ್‌ನ ಪೌಡರ್, ರೇಯಾನ್ ಪಲ್ಪ್, ಉಕ್ಕಿನ ಸರಳು, ಕಬ್ಬಿಣದ ತಂತಿ, ಇತ್ಯಾದಿ ಸಾಮಾನು ದೊಡ್ಡ ಪ್ರಮಾಣದಲ್ಲಿ ಸಿದ್ಧಪಡಿಸಿ ಇವುಗಳ ಮೂಲಕ ಉಪಭೋಗದ ಸಾವಿರಾರು ರೀತಿಯ ವಸ್ತುಗಳನ್ನು ಚಿಕ್ಕ ಪ್ರಮಾಣದಲ್ಲಿ ತಯಾರಿಸಬೇಕು. ಎರಡನೆಯ ಪದ್ಧತಿಯಲ್ಲಿ ಉಪಭೋಗದ ವಸ್ತುಗಳ ಉತ್ಪಾದನೆಯಲ್ಲಿ ಕೆಲಸಕ್ಕೆ ಬರುವ ವಸ್ತುಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ಸಿದ್ಧಗೊಳಿಸಬೇಕು ಹಾಗೂ ಅವುಗಳ ಜೋಡಣೆಯನ್ನು ದೊಡ್ಡ ಕಾರಖಾನೆಗಳಲ್ಲಿ ಮಾಡಬೇಕು. ಉದಾ: ಸ್ವಿಜರ್‌ಲ್ಯಾಂಡ್‌ನಲ್ಲಿ ಗಡಿಯಾರಗಳ ಚಿಕ್ಕ ಚಿಕ್ಕ ಬಿಡಿಭಾಗಗಳು ತಂತ್ರಜ್ಞರಿಂದ ತಯಾರಾಗಿ, ಅವುಗಳನ್ನು ಕೂಡಿಸಿ ಗಡಿಯಾರ ತಯಾರಿಸುವ ಕೆಲಸ ದೊಡ್ಡ ಕಾರಖಾನೆಗಳಲ್ಲಿ ನಡೆಯುತ್ತದೆ. ಮೋಟರ್ ಮುಂತಾದ ದೊಡ್ಡ ದೊಡ್ಡ ವಸ್ತುಗಳಿವೆಯಲ್ಲ, ಅವುಗಳ ಬಹಳಷ್ಟು ಭಾಗಗಳನ್ನು ಇದೇ ರೀತಿಯಲ್ಲಿ ಉತ್ಪಾದಿಸಬಹುದು. ಜಪಾನ್‌ನಲ್ಲಿ ಈ ದೃಷ್ಟಿಯಿಂದ ಬಹಳ ಕೆಲಸ ಆಗಿದೆ. ಅಲ್ಲಿ ರೈಲುಗಳನ್ನು ತಯಾರಿಸಲು ಶೇ. ೭೭, ಹಡಗುಗಳನ್ನು ತಯಾರಿಸಲು ಶೇ. ೭೦ ಹಾಗೂ ಮೋಟರ್ ನಿರ್ಮಾಣದಲ್ಲಿ ಶೇ. ೬೨ ಸಾಮಾನುಗಳು ಚಿಕ್ಕ ಉದ್ದಿಮೆಗಳಲ್ಲಿ ತಯಾರಾದದ್ದೇ ಬಳಕೆಯಾಗುತ್ತದೆ. ಭಾರತದಲ್ಲಿ ದೊಡ್ಡ ದೊಡ್ಡ ಕಾರಖಾನೆಗಳನ್ನು ತೆರೆಯಲಾಗುತ್ತದೆ, ಅವುಗಳಲ್ಲಿ ವಿದೇಶೀ ಪ್ರಭಾವ ಹಾಗೂ ಅನುಕರಣೆ ಇರುವುದರಿಂದ, ಈ ಬಿಡಿಭಾಗಗಳನ್ನು ವಿದೇಶಗಳಿಂದಲೇ ತರಿಸಲಾಗುತ್ತದೆ. ಸಣ್ಣ ಉತ್ಪಾದಕರಿಗೆ ಅವುಗಳ ಪೇಟೆಯ ಜ್ಞಾನವಾಗಲಿ, ಉತ್ಪಾದನೆಯ ವಿಧಾನವಾಗಲಿ ಗೊತ್ತಿಲ್ಲ.

ಹೀಗೆ ಹೇಳಿದ ಎರಡು ವರ್ಗದ ಉದ್ಯಮಗಳನ್ನು ಚೆನ್ನಾಗಿ ಸ್ಥಾಪಿಸಿದರೆ, ಪ್ರತಿಸ್ಪರ್ಧಿಯಾದ ಉದ್ಯೋಗಗಳ ಕ್ಷೇತ್ರ ಬಹಳ ಸೀಮಿತವಾಗುವುದು. ಈ ಕ್ಷೇತ್ರದಲ್ಲಿ ಎಲ್ಲಕ್ಕಿಂತ ಮುಖ್ಯ ಉದ್ಯಮವೆಂದರೆ ಕೈಮಗ್ಗದ್ದು. ಸರಕಾರವು ಅವುಗಳಿಗೆ ನೆರವು ನೀಡಲು ಅವಶ್ಯವಾಗಿ ಕೆಲವು ಹೆಜ್ಜೆಗಳನ್ನು ಇಟ್ಟಿದೆ, ಆದರೆ ಈ ಉದ್ಯಮಗಳನ್ನು ಆರ್ಥಿಕವಾಗಿ ಸದೃಢಗೊಳಿಸದಿದ್ದರೆ, ಆಡಳಿತಾತ್ಮಕ ರಕ್ಷಣೆಯಿಂದ ಅದು ಬಳಕೆದಾರರ ಮೇಲೆ ಭಾರವಾಗಿಯೇ ಉಳಿದುಕೊಳ್ಳುತ್ತದೆ. ನೂಲಿನ ಅಗ್ಗದ ವ್ಯವಸ್ಥೆಯನ್ನು ಮಾಡಲು ಸಾಧ್ಯವಾದರೆ ಈ ಕೆಲಸ ಕಷ್ಟದ್ದೇನೂ ಅಲ್ಲ. ಖಾದೀ ಮತ್ತು ಚರಖಾ (ಅಂಬರ ಚರಖಾ ಸಹಿತ) ದ ಗುಂಗನ್ನು ಬಿಟ್ಟು, ಕೈಮಗ್ಗದ ಉದ್ಯಮದ ಮೇಲೆಯೇ ಸರಕಾರವು ತನ್ನ ಶಕ್ತಿ ಹಾಗೂ ಸಂಪತ್ತನ್ನು ವಿನಿಯೋಗಿಸಿದರೆ, ಅದು ಸದ್ಯದ ಭವಿಷ್ಯದಲ್ಲೇ ತನ್ನ ಕಾಲಮೇಲೆ ತಾನು ನಿಂತುಕೊಂಡು, ದೇಶದ ಬಟ್ಟೆ ಉದ್ಯೋಗದ ಒಂದು ಪ್ರಬಲ ಸಹಕಾರಿಯಾಗುವ ಎಲ್ಲ ಸಾಧ್ಯತೆ ಇದೆ.



**ಲಘು ಉದ್ಯಮಗಳಲ್ಲಿ ಮಿತವ್ಯಯ**

ಲಘು ಉದ್ಯಮಗಳಿಗೆ ಸಂಬಂಧಿಸಿದಂತೆ, ಅವು ಎಂದೂ ಆರ್ಥಿಕ (economic) ವಾಗಲಾರವು ಹಾಗೂ ಅವುಗಳ ಉತ್ಪಾದನೆಯು ಪೇಟೆಯಲ್ಲಿ ದೊಡ್ಡ ಉದ್ಯಮಗಳ ವಸ್ತುಗಳ ಹೋಲಿಕೆಯಲ್ಲಿ ಗಟ್ಟಿಯಾಗಿ ನಿಲ್ಲಲಾರವು ಎಂಬ ಭಾರೀ ಭ್ರಮೆ ನಮ್ಮಲ್ಲಿ ಮನೆಮಾಡಿದೆ. ವಿದೇಶಗಳ ಜೊತೆ ಪ್ರತಿಸ್ಪರ್ಧೆಯ ಪ್ರಶ್ನೆ ಬಂದಾಗ, ಚಿಕ್ಕ ಉದ್ಯಮಗಳ ದೊಡ್ಡ ದೊಡ್ಡ ಸಮರ್ಥಕರ ಕಾಲ ಕೆಳಗಿನ ನೆಲವೂ ಜಾರಿ ಹೋಗುತ್ತದೆ. ಅವರು ಈ ಉದ್ಯಮಗಳನ್ನು ರಾಜಕೀಯ, ಸಾಮಾಜಿಕ ಹಾಗೂ ನೈತಿಕ ಆಧಾರದ ಮೇಲೆ ಸಮರ್ಥನೆ ಮಾಡುತ್ತಾರೆ, ಹಾಗೂ ಹಣವೇ ಎಲ್ಲವೂ ಅಲ್ಲ ಎಂದು ಭಾವಿಸಿ ಸಂತೋಷಪಟ್ಟುಕೊಳ್ಳುತ್ತಾರೆ. ನಾವು ಅವರ ಈ ಕಾರಣಗಳನ್ನು ಒಪ್ಪಿಕೊಂಡರೂ, ಭಾರತದಲ್ಲಿ ಆರ್ಥಿಕ ದೃಷ್ಟಿಯಿಂದ ಚಿಕ್ಕ ಉದ್ಯಮಗಳೇ ನಮಗೆ ಬೇಕಾಗಿರುವಂಥವು ಎಂಬುದನ್ನು ಅದರ ಜೊತೆಗೇ ಒಪ್ಪಬೇಕು.

ನಾವು ಗಂಭೀರವಾಗಿ ವಿಚಾರ ಮಾಡಿದರೆ, ಅರ್ಥಶಾಸ್ತ್ರದಲ್ಲಿ ದೊಡ್ಡ ಪ್ರಮಾಣದ ಮೇಲೆ ಉತ್ಪಾದನೆಯಲ್ಲಿ ಮಿತವ್ಯಯದ ಬಗ್ಗೆ ಮಾಡಲಾಗುತ್ತಿರುವ ವರ್ಣನೆಯಲ್ಲಿ ಇಂದು ಬಹಳ ಬದಲಾವಣೆಯಾಗಿದೆ.

ಆದರೆ ಸತ್ಯವೇ ಬೇರೆ. ಮಿತವ್ಯಯವು ದೊಡ್ಡ ಪ್ರಮಾಣದ ಉತ್ಪಾದನೆಯಿಂದಲ್ಲ, ಉತ್ಪಾದನೆಯ ಹೆಚ್ಚಳದ ಕಾರಣದಿಂದ ಆಗುತ್ತದೆ.* ನಾವು ಇತಿಹಾಸವನ್ನು ನೋಡಿದರೆ, ಬ್ರಿಟನ್ನಿನಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಬಟ್ಟೆ ತಯಾರಾಗುತ್ತಿದ್ದರೂ ಭಾರತದ ಬಟ್ಟೆಯು ಅಲ್ಲಿಗೆ ಹೋದರೆ ಬಹು ಅಗ್ಗವಾಗಿಯೇ ಇರುತ್ತಿತ್ತು. ಜಪಾನದನಿನ ವಸ್ತುಗಳು ಬಹಳ ಅಗ್ಗವಾಗಿ ದೊರಕಿ ಪೇಟೆಯಲ್ಲಿನ ಇತರ ಎಲ್ಲ ಸಾಮಾನುಗಳನ್ನು ಮೀರಿಸುತ್ತಿದ್ದವು. ಯಾಕೆಂದರೆ ಅವು ದೊಡ್ಡ ಕಾರಖಾನೆಗಳಲ್ಲಲ್ಲ, ಮನೆಗಳಲ್ಲಿ ತಯಾರಾಗುತ್ತಿದ್ದವು. ಹೆಚ್ಚಿನ ಉತ್ಪಾದನೆ ಆಗದಿದ್ದರೆ, ದೊಡ್ಡ ಪ್ರಮಾಣದ ಉದ್ಯಮಗಳ ಮೇಲುವ್ಯವಸ್ಥೆಯ ಖರ್ಚು ಎಷ್ಟೊಂದು ಬರುತ್ತದೆಯೆಂದರೆ, ಉತ್ಪಾದನಾ ವೆಚ್ಚವು

---

* It is large production and not large scale production, which gives both to increasing return and to a progressive downward shift in the Cost Curves.
- C. N. Vakil : *Planning for an Expanding Economy.*

ವೃದ್ಧಿಯಾಗದೆ ಇರಲು ಸಾಧ್ಯವೇ ಇರುವುದಿಲ್ಲ. ಇಂದು ದೇಶದಲ್ಲಿ ಚಿಕ್ಕ ಆಧಾರದ ಮೇಲೆ ಹೊಸ ಉದ್ಯಮಗಳು ಕಾಲೂರಿ ನಿಲ್ಲುತ್ತಿದ್ದು, ಅವು ಪ್ರತಿಸ್ಪರ್ಧೆಗೆ ಪ್ರಬಲ ಮುಖಾಮುಖಿ ಆಗಿವೆ. ಅವುಗಳಿಗಿರುವ ಸೌಲಭ್ಯದ ಕೊರತೆಯನ್ನು ದೂರಮಾಡಿದರೆ, ಹಾಗೂ ದೊಡ್ಡ ಉದ್ದಿಮೆಗಳಿಗೆ ಆರ್ಥಿಕಕ್ಕೆ ಹೊರತಾದ ವಿಶೇಷ ಸೌಲಭ್ಯ ದೊರಕುವುದನ್ನು ನಿಲ್ಲಿಸಿದರೆ, ನಿಶ್ಚಿತವಾಗಿಯೂ ಚಿಕ್ಕ ಉದ್ಯಮಗಳು ಗೆಲ್ಲುತ್ತವೆ. ನಮಗೆಲ್ಲ ಗೊತ್ತಿರುವ ಹಾಗೆ ೧೯೩೦–೩೭ ರ ಕಾಲದಲ್ಲಿ ಚಿಕ್ಕ ಚಿಕ್ಕ ಬಸ್ಸುಗಳನ್ನು ನಡೆಸುವವರು ಸ್ಪರ್ಧೆಯಲ್ಲಿ ರೈಲನ್ನೇ ಹಿಂದಿಕ್ಕಿದ್ದರು. ಸರಕಾರ ಹಾಗೂ ಯುದ್ಧ ಅದರ ನೆರವಿಗೆ ಬರದೇ ಇದ್ದರೆ ಅವುಗಳಿಗೆ ಜೀವಿತವಿರುವುದು ಕಷ್ಟವಾಗುತ್ತಿತ್ತು.

## ದೊಡ್ಡ ಉದ್ಯಮಗಳ 'ಮಿತವ್ಯಯ'ದ ಅಸಲಿತನ

ಶ್ರೀ ಎಂ. ಎಂ. ಮೆಹತಾ ಅವರು ತಮ್ಮ ಪುಸ್ತಕ Structure of Indian Industries (ಭಾರತೀಯ ಉದ್ಯಮಗಳ ಸ್ವರೂಪ)ದಲ್ಲಿ ದೊಡ್ಡ ಉದ್ಯಮಗಳ ಬೆಳವಣಿಗೆಯ ವಿಶದವಾದ ವಿಶ್ಲೇಷಣೆ ಮಾಡಿದ್ದಾರೆ. ಅವರು ತಲುಪಿದ ನಿಷ್ಕರ್ಷೆಯೆಂದರೆ :

೧) ದೊಡ್ಡ ಉದ್ಯಮಗಳ 'ಮಿತವ್ಯಯ'ಗಳು ಮುಕ್ತ ಹಾಗೂ ಯೋಗ್ಯ ಸ್ಪರ್ಧೆಯ ಕಾರಣದಿಂದಲ್ಲ, ಬದಲಿಗೆ ಅದನ್ನು ಹತ್ತಿಕ್ಕಿ ಕೊಳ್ಳೆ ಹೊಡೆಯುವ ವ್ಯಾಪಾರೀ ಕ್ರಿಯೆಗಳಿಂದ ಪಡೆದದ್ದು.

೨) ದೊಡ್ಡ ಉದ್ಯಮಗಳದ್ದು ಇನ್ನೊಂದು ಪಾರ್ಟಿಯನ್ನು ತಮಗೆ ಹಿತವಾಗುವ ಮತ್ತು ಒಳ್ಳೆಯ ಷರತ್ತುಗಳಿಗೆ ಒಪ್ಪಿಸುವ ಸಾಮರ್ಥ್ಯದ ಕಾರ್ಯಕುಶಲತೆಯ ಫಲವಲ್ಲ, ಬದಲಿಗೆ ಆರ್ಥಿಕ ಮತ್ತು ಸಂಪತ್ತಿನ ಸಾಮರ್ಥ್ಯದ ಪರಿಣಾಮ ಸ್ವರೂಪವಾಗಿದೆ.

೩) ದೊಡ್ಡ ಉದ್ಯಮ ಬಹುತೇಕವಾಗಿ ಕಾರ್ಮಿಕರ ಶೋಷಣೆ ಮಾಡುತ್ತವೆ, ಹೆಚ್ಚಿನ ಬೆಲೆ ತೆಗೆದುಕೊಳ್ಳುತ್ತವೆ, ತಮ್ಮ ಅಡಗಿದ ಸ್ವಾರ್ಥದ ರಕ್ಷಣೆಗಾಗಿ ವೈಜ್ಞಾನಿಕ ಸುಧಾರಣೆಗಳನ್ನು ಹತ್ತಿಕ್ಕುತ್ತವೆ.

೪) ಒಂದು ಬಾರಿ ಪೇಟೆಯ ಮೇಲೆ ಹಿಡಿತ ಸಾಧಿಸಿದ ಅನಂತರ ಅವುಗಳ ಔದ್ಯೋಗಿಕ ಕುಶಲತೆಯ ಪ್ರೇರಣೆ ನಾಶವಾಗುತ್ತದೆ.

೫) ಹೆಚ್ಚಿನ ದೊಡ್ಡ ಉದ್ಯಮಗಳು ನಿದಾನವಾದ ವಿಕಾಸದ ಆಧಾರದ ಮೇಲಲ್ಲ, ಸಾಂಪತ್ತಿಕ ಹಾಗೂ ಆಡಳಿತಾತ್ಮಕ ಒಗ್ಗೂಡುವಿಕೆಯ ಕಾರಣದಿಂದ ಬೆಳೆದಿವೆ. ಈ ಬೃಹತ್ ಬೆಳವಣಿಗೆಯ ಹಿಂದೆ ವಾಸ್ತವಿಕ ಉದ್ದೇಶ ಔದ್ಯೋಗಿಕ ಕೌಶಲವನ್ನು ಹೆಚ್ಚಿಸುವುದಲ್ಲ, ಪ್ರತಿಸ್ಪರ್ಧೆಯನ್ನೇ ಮುಗಿಸಿಬಿಡುವುದಾಗಿದೆ.

೬) ಈ ಉದ್ಯಮಗಳು ಮಂದಿಯ ಸಮಯದಲ್ಲಿ, ತನ್ನ ಹೆಚ್ಚಿನ ಯೋಗ್ಯತೆ,



ಹಾಗೂ ಹೆಚ್ಚಿನ ಸಾಮರ್ಥ್ಯವನ್ನು ತೋರಿಸುವ ಸಂದರ್ಭದಲ್ಲಿ ಬೆಳೆಯಲಿಲ್ಲ, ಬದಲಿಗೆ, ತೇಜಿಯ ಕಾಲದಲ್ಲಿ, ಸೆಕ್ಯುರಿಟಿಗಳು ಹಾಗೂ ಸ್ಟಾಕ್‌ಗಿಂತ ಹೆಚ್ಚಿಗೆ ಗಳಿಸುವ ಅವಕಾಶವಿದ್ದಾಗ ಅವು ಬೆಳೆದವು.

೭) ಆರ್ಥಿಕ ದೃಷ್ಟಿಯಿಂದ ನಡೆಸುವುದು ಸಾಧ್ಯವಾಗಲಾರದಷ್ಟು ಅವು ದೊಡ್ಡವುಗಳಾಗಿವೆ.

ನಮಗೆ ಗೊತ್ತಿರುವ ಹಾಗೆ, ಬ್ಯಾಂಕುಗಳು, ರೈಲುಗಳು, ದಲ್ಲಾಳಿಗಳು ಮುಂತಾದ ಎಲ್ಲ ಬಗೆಯ ಸೌಲಭ್ಯಗಳು ಈ ದೊಡ್ಡ ಉದ್ಯಮಗಳಿಗೆ ಸಹಜವಾಗಿಯೇ ದೊರೆಯುತ್ತವೆ. ಉದ್ಯೋಗಗಳು ಹಾಗೂ ಬ್ಯಾಂಕುಗಳ ನಡುವೆ ಪರಸ್ಪರ ಸಂಬಂಧವಿರುವುದರಿಂದ ಅವು ಯಾವಾಗಲೂ ಕಡಿಮೆ ಬಡ್ಡಿಯಮೇಲೆ ಹಣವನ್ನು ಪಡೆಯುವುದು ಸಾಧ್ಯವಾಗುತ್ತದೆ. ಸರಕಾರವೂ ಯಾವಾಗಲೂ ದೊಡ್ಡ ದೊಡ್ಡ ಉದ್ಯಮಗಳಿಗೇ ಸಹಾಯಮಾಡುತ್ತದೆ. ಚಿಕ್ಕ ಉದ್ಯಮಗಳು ಅಸಂಘಟಿತವಾಗಿರುವುದರಿಂದ ಇವತ್ತಿನ ಮಾರುಕಟ್ಟೆಯ ಅರ್ಥವ್ಯವಸ್ಥೆಯಲ್ಲಿ ಕಚ್ಚಾಮಾಲನ್ನು ಪಡೆದುಕೊಳ್ಳುವುದರಿಂದ ಹಿಡಿದು ಸರಕನ್ನು ಮಾರುವವರೆಗಿನ ಸರಪಳಿಯ ವ್ಯವಸ್ಥೆಯನ್ನು ಅವು ಮಾಡಲಾರವು. ಒಂದು ಬಾರಿ ಈ ಸರಪಳಿ ಪೂರ್ಣವಾದರೆ ಅನಂತರ ಅವರನ್ನು ಎದುರಿಸುವುದು ಕಷ್ಟ. ಈ ಸಂಘಟನೆಯನ್ನು ಕಟ್ಟಿ ನಿಲ್ಲಿಸುವಲ್ಲಿ ಸಹಾಯಕವಾಗಬೇಕಾದ್ದು ಸರಕಾರದ ಕರ್ತವ್ಯವೇ ಆಗಿದೆ.

## ದೊಡ್ಡ ಉದ್ಯಮಗಳ ಕ್ಷೇತ್ರ

ಚಿಕ್ಕ ಉದ್ಯಮಗಳ ಹಲವು ಗುಣಗಳು ಹಾಗೂ ದೊಡ್ಡ ಉದ್ಯಮಗಳಿಂದ ಆಗುವ ಕೆಡುಕುಗಳ ನಂತರವೂ ದೊಡ್ಡ ಉದ್ಯಮಗಳನ್ನು ಅಪರಿಹಾರ್ಯವಾಗಿ ಸ್ಥಾಪಿಸಲೇಬೇಕಾದಂಥ ಕೆಲವು ಕ್ಷೇತ್ರಗಳಿವೆ. ಆದರೆ ಈ 'ಅಪರಿಹಾರ್ಯತೆ' ಅಥವಾ ಅನಿವಾರ್ಯತೆಯ ವಿಚಾರವನ್ನು ಸಂಪೂರ್ಣ ಪೂರ್ವಗ್ರಹ ಹಾಗೂ ಪಶ್ಚಿಮದ ಅರ್ಥಶಾಸ್ತ್ರದ ಮಾನ್ಯತೆಗಳಿಂದ ಮುಕ್ತ ಮಾಡಬೇಕಾಗುತ್ತದೆ. ಏಕೆಂದರೆ ಹಿಂದೆ ಸಾಕಷ್ಟು ಸಂಕುಚಿತವಾಗಿ ಬಿಟ್ಟಿದ್ದ ಸಣ್ಣ ಉದ್ಯಮಗಳ ಕ್ಷೇತ್ರವು ವಿಸ್ತಾರವಾಗುತ್ತಿದೆ. ಸಣ್ಣ ಉದ್ಯಮದಲ್ಲಿ ಯಾವ ವಸ್ತುಗಳನ್ನು ಉತ್ಪಾದಿಸಬಹುದೆಂದು ನಾವು ಕಲ್ಪನೆಯನ್ನು ಕೂಡ ಮಾಡಲು ಸಾಧ್ಯವಿಲ್ಲವೊ, ಅಂಥವು ಬಹಳ ಉತ್ತಮವಾಗಿ ಮತ್ತು ಆರ್ಥಿಕ ಆಧಾರದ ಮೇಲೆ ನಿರ್ಮಾಣಗೊಳ್ಳಲು ತೊಡಗಿವೆ. ಇತ್ತೀಚೆಗಷ್ಟೇ ಚೀನಾದಲ್ಲಿ ಉಕ್ಕು ಕೂಡ, ಚಿಕ್ಕ ಆಧಾರದ ಮೇಲೆಯೇ ಉತ್ಪಾದನೆಯಾಗುತ್ತಿದೆಯೆಂಬ ಸುದ್ದಿಯಿದ್ದು, ಔದ್ಯೋಗಿಕ ಕ್ಷೇತ್ರದಲ್ಲಿ ಚಿಕ್ಕ ಉದ್ಯಮಗಳ ವಿಕಾಸದ ಸಾಧ್ಯತೆಗಳನ್ನು ಮತ್ತಷ್ಟು ವಿಸ್ತರಿಸಿದೆ. ಸಾಧಾರಣವಾಗಿ ಕೈಗಾರಿಕೆ, ಕೌಶಲ, ಹಾಗೂ ಬಂಡವಾಳ ಮತ್ತು ಸಾಧನಗಳ ಅವಶ್ಯಕ ಪ್ರಮಾಣದ ಆಧಾರದ ಮೇಲೆ ಉದ್ಯಮಗಳನ್ನು

ನಾವು ಈ ರೀತಿ ವರ್ಗೀಕರಣ ಮಾಡಬಹುದಾಗಿದೆ:

೧) ಕಡಿಮೆ ತರಬೇತಿಯಲ್ಲಿ ಹಾಗೂ ಹಗುರವಾದ ವಸ್ತ್ರ, ಚಪ್ಪಲಿ, ರಬ್ಬರ್, ಗ್ಲಾಸ್ ಇತ್ಯಾದಿ.

೨) ಹೆಚ್ಚು ತರಬೇತಿಯಿಂದ ಕೂಡಿದ ಆದರೆ ಹಗುರವಾದ: ಎಂಜಿನಿಯರಿಂಗ್, ಜೋಡಣೆಯ ಕಲೆ, ಇತ್ಯಾದಿ.

೩) ಕಡಿಮೆ ತರಬೇತಿಯಿಂದ ಮತ್ತು ಭಾರೀ : ಸಿಮೆಂಟ್, ರಾಸಾಯನಿಕ ಗೊಬ್ಬರ ಇತ್ಯಾದಿ.

೪) ಹೆಚ್ಚಿನ ತರಬೇತಿಯ ಮೇಲೆ ಮತ್ತು ಭಾರೀ : ಖನಿಜ ತೈಲ, ಉಕ್ಕು ಇತ್ಯಾದಿ.

ಮೂರು ಮತ್ತು ನಾಲ್ಕನೆಯ ಬಗೆಯ ಕೆಲವು ಉದ್ಯಮಗಳಿದ್ದು ಅವುಗಳನ್ನು ನಾವು ದೊಡ್ಡ ಪ್ರಮಾಣದಲ್ಲಿ ಪ್ರಾರಂಭ ಮಾಡಬೇಕಾಗುವುದು. ಆದರೆ ಅವುಗಳ ಕ್ಷೇತ್ರ ಸೀಮಿತವಾಗಿದೆ. ಹಾಗೂ ದೇಶದ ಉದ್ಯಮ–ಕೈಗಾರಿಕೆಗಳಿಗೆ ಆಧಾರ ಭೂತವಾದ ವಸ್ತುಗಳನ್ನು ಒದಗಿಸಿಕೊಡುತ್ತಲೂ ದೇಶದ ಔದ್ಯೋಗಿಕ ನಕಾಶೆಯಲ್ಲಿ ಅದರ ಸ್ಥಾನ ಚಿಕ್ಕದಾಗಿಯೇ ಉಳಿಯುತ್ತದೆ. ಈ ಉದ್ಯಮಗಳ ಸ್ಥಾಪನೆಯಲ್ಲಿ ನಮಗೆ ದೊರೆತ ಉತ್ಪಾದನೆಗಳ ವಿವೇಚನೆಯನ್ನು ಈ ಮೊದಲೇ ಮಾಡಿದ್ದರೂ, ಮತ್ತೆ ಮತ್ತೆ ವಿಚಾರ ಮಾಡಲೇಬೇಕಾಗುತ್ತದೆ.

### ಉದ್ಯಮಗಳ ಒಡೆತನ

ಉದ್ಯಮಗಳ ಒಡೆತನದ ಪ್ರಶ್ನೆಗೆ ಬಂಡವಾಳವಾದೀ ಆರ್ಥಿಕ ವ್ಯವಸ್ಥೆಯ ಉಗಮ ಹಾಗೂ ಅದರ ಪ್ರತಿಕ್ರಿಯೆಯ ರೂಪದಲ್ಲಿ, ಸಮಾಜವಾದೀ ವಿಚಾರಧಾರೆಯ ಹುಟ್ಟಿನ ನಂತರದಿಂದ ಸಾಕಷ್ಟು ಮಹತ್ವ ಪ್ರಾಪ್ತವಾಗುತ್ತಿದೆ. ಬಂಡವಾಳವಾದಿಗಳು ವ್ಯಕ್ತಿಗೆ ಸ್ವಾಮಿತ್ವದ ಪ್ರಾಧಾನ್ಯವನ್ನು ಹಾಗೂ ಏಕಮೇವ ಅಧಿಕಾರವನ್ನು ನೀಡಿದರೆ, ಸಮಾಜವಾದಿಗಳು ಆ ಅಧಿಕಾರವನ್ನು ರಾಜ್ಯಕ್ಕೆ ಕೊಡುತ್ತಾರೆ. ಒಡೆತನದ ಜೊತೆಗೆ ಅನಿರ್ಬಂಧ ನಿಯಂತ್ರಣ, ಹಾಗೂ ಯಥೇಚ್ಛ ಉಪಭೋಗದ ಪ್ರವೃತ್ತಿಗಳು ಈ ವಿಷಯವನ್ನು ತಪ್ಪು ಹಿನ್ನೆಲೆಯಲ್ಲಿ ಮುಂದಿಡುವ ಕೆಲಸ ಮಾಡಿವೆ. ಯಾವುದೇ ವಸ್ತುವಿನ ಮೇಲೆ ನನ್ನ ಒಡೆತನವಿರುವ ನಂತರವೂ ನಾನು ಅದನ್ನು ಬೇಕಾಬಿಟ್ಟಿ ಉಪಭೋಗ ಮಾಡಲು ನನಗೆ ಅಧಿಕಾರ ದೊರೆತಿರುವುದಿಲ್ಲ. ಒಡೆತನ ಹಾಗೂ ಬಳಕೆ ಈ ಎರಡೂ ಭಾವನೆಗಳನ್ನು ನಾವು ಬೇರೆ ಬೇರೆಯಾಗಿ ಮಾಡುವವರೆಗೆ ಆಗಲಿರುವ ಕೆಡುಕುಗಳನ್ನು ನಾವು ತಡೆಯಲಾರೆವು. ಒಂದು ವಸ್ತುವಿನ ಒಡೆಯನಾಗಿ ನನಗೆ ಅದರ ಉಪಭೋಗವನ್ನು ಸಮಾಜ ಹಿತಕ್ಕಾಗಿ ಮಾಡಲು ಮಾತ್ರ ಅಧಿಕಾರವಿದೆ. ಈ ವಿಚಾರವು ಪ್ರತಿಯೊಬ್ಬ ವ್ಯಕ್ತಿಯ ಎದುರಿಗೆ ಇರಬೇಕಾಗುತ್ತದೆ. ಇಂಥ ವಿಚಾರ



ಇಲ್ಲದಿದ್ದರೆ, ಅವನ ಕೈಯಿಂದ ಸ್ವಾಮಿತ್ವವನ್ನು ಕಸಿದುಕೊಳ್ಳುವುದರಲ್ಲಿಯೂ ಯಾವ ಅರ್ಥವಿಲ್ಲ. ರಾಜ್ಯವೂ ಸ್ವಾಮಿತ್ವವನ್ನು ಹಿಡಿದಾಗ ಅದು ವ್ಯಕ್ತಿಯ ಮೂಲಕವೇ ವ್ಯವಸ್ಥೆಯನ್ನು ಮಾಡುತ್ತದೆ. ಸಮಾಜಹಿತದ ಬಗ್ಗೆ ವಿಚಾರ ಮಾಡುವ ವ್ಯಕ್ತಿಗಳ ಕೊರತೆಯಿದ್ದಾಗ, ಅಂಥ ಪರಿಸ್ಥಿತಿಯಲ್ಲಿಯೂ ಸರಿಯಾದ ವ್ಯವಸ್ಥೆ ಆಗಲಾರದು. ಇಂದು ವ್ಯಕ್ತಿಯು ತನಗೆ ದೊರೆತ ವಸ್ತುವನ್ನು ಮನಸ್ಸಿಗೆ ಬಂದ ರೀತಿಯಲ್ಲಿ ಉಪಭೋಗ ಮಾಡಲು ಹೆದರದಿದ್ದರೆ, ಅವನು ಸಮಾಜದ ವಸ್ತುವನ್ನೂ ಹಾಗೆ ಬಳಕೆ ಮಾಡಲಾರನೆಂಬ ಯಾವ ಖಾತ್ರಿಯನ್ನೂ ಕೊಡಲಾಗುವುದಿಲ್ಲ. ಈ ರೀತಿಯ ದುರುಪಯೋಗವನ್ನು ತಡೆಯಲು ದಂಡನೀತಿಯನ್ನು ಬಳಸುವುದು ಅವಶ್ಯಕವೆಂದು ತಿಳಿದರೂ, ಅವನ ಬಳಿ ಒಡೆತನದ ಅಧಿಕಾರ ಇರುವವರೆಗೂ ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ. ಯಾವುದೇ ದೇಶದ ಉದ್ಯಮಿಗಳು ಯಾವಾಗಲೂ ಸಮಾಜ ಹಿತದ ವಿರುದ್ಧವಾಗಿ ಹಾಗೂ ಅಧಿಕಾರಿಗಳು ಸಮಾಜ ಹಿತಕ್ಕಾಗಿ ಕೆಲಸಮಾಡುತ್ತಾರೆ ಎಂಬ ಧೋರಣೆಯನ್ನಿಟ್ಟುಕೊಂಡು ಸಮಾಜವಾದಿಯು ಮುಂದುವರಿಯುತ್ತಾನೆ.[೧] ವಾಸ್ತವಿಕತೆಯೇನೆಂದರೆ, ಒಂದುಬಾರಿ ಸಮಾಜದ ಸ್ವಾಮಿತ್ವ ಬಂದಮೇಲೆ ದಂಡನೀತಿ ಮತ್ತು ಅರ್ಥನೀತಿ ಎರಡೂ ಒಂದೇ ಸ್ಥಳದಲ್ಲಿ ಕೇಂದ್ರೀಕೃತವಾಗುತ್ತದೆ. ಮತ್ತು ಅದಕ್ಕಾಗಿ ಸಮಯೋಚಿತ ಪ್ರಯೋಗ ಮಾಡಿ ವ್ಯವಸ್ಥೆಯ ಉಲ್ಲಂಘನೆಯನ್ನು ತಡೆಯುವ ಸಂಭವವೇ ಇರುವುದಿಲ್ಲ.

ಗಂಭೀರವಾಗಿ ವಿಚಾರ ಮಾಡಿದಾಗ ಒಡೆತನದ ಅಧಿಕಾರವು ವಾಸ್ತವದಲ್ಲಿ ನಿಶ್ಚಿತ ಮಿತಿಗಳ ಮತ್ತು ನಿಶ್ಚಿತ ಉದ್ದೇಶಗಳ ಸಲುವಾಗಿ ಯಾವುದೇ ವಸ್ತುವಿನ ಉಪಯೋಗದ ಅಧಿಕಾರವೆ ಆಗಿದೆ.[೨] ಸಮಯದೊಂದಿಗೆ ಈ ಅಧಿಕಾರದಲ್ಲಿ ಪರಿವರ್ತನೆಯೂ ಆಗುತ್ತಲಿರುತ್ತದೆ. ಆದ್ದರಿಂದ ನಾವು ಸೈದ್ಧಾಂತಿಕ ದೃಷ್ಟಿಯಿಂದ ವ್ಯಕ್ತಿ ಮತ್ತು ಸಮಾಜದ ಅಧಿಕಾರಗಳ ಜಗಳದಲ್ಲಿ ಸಿಲುಕುವುದಿಲ್ಲ. ನಮ್ಮಲ್ಲಿಯಂತೂ ಸಮಾಜದ ಕೇವಲ ಒಂದೇ ಸ್ವರೂಪವೆಂದರೆ ರಾಜ್ಯವೆಂದು ನಾವು ಸ್ವೀಕರಿಸಿಲ್ಲ. ವ್ಯಕ್ತಿ, ಕುಟುಂಬ, ಕುಲ, ಜಾತಿ, ರಾಜ್ಯ ಆದಿಯಾಗಿ ಹಲವು ರೂಪಗಳಲ್ಲಿ ಸಮಾಜವು ತನ್ನನ್ನು ತಾನು ಅಭಿವ್ಯಕ್ತಗೊಳಿಸುವುದು ಹಾಗೂ ಅವುಗಳ ಮಾಧ್ಯಮದಿಂದ ತನ್ನ ಮನಸ್ಸಿನ ಇಚ್ಛೆಯನ್ನು ನೆರವೇರಿಸಿಕೊಳ್ಳುತ್ತದೆ. ವ್ಯಕ್ತಿಯಲ್ಲಿ ಸಮಾಜಹಿತದ ಭಾವನೆ

---

೧. ಉಪಯೋಗದ ಒಳಗಡೆ ಬಳಕೆ, ಗುತ್ತಿಗೆ (Contract), ದಾನ, ಮೃತ್ಯುಪತ್ರ, ಹಾಗೂ ಉತ್ತರಾಧಿಕಾರ ಬರುತ್ತದೆ.

೨. "The contention that the 'private sector' acts in self interst and the 'public sector' in general interest is 'crude and misleading.'

P.T. Baner & B.S. Yamey : *The Economics of Underdveloped Countries.*

ಕಾಯಂ ಆಗಿ ನೆಲೆಸಲಿ, ಅದಕ್ಕಾಗಿ ನಮ್ಮಲ್ಲಿ ಎಲ್ಲರೂ ಸೇರಿಕೊಂಡು ಬದುಕುವ ಕುಟುಂಬದ ಒಂದು ವ್ಯಾವಹಾರಿಕ ಘಟಕವನ್ನು ಇಡಲಾಗಿದ್ದು, ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಗಳಿಸುವ ಅಧಿಕಾರಿಯಾಗಿದ್ದಾನೆ ಹಾಗೂ ಸಂಪತ್ತಿನ ಸ್ವಾಮಿಯಾಗಿ ಕುಟುಂಬ ಇರುತ್ತದೆ. ಸಂಪತ್ತಿನ ಬಳಕೆ ಕುಟುಂಬದ ಹಿತಕ್ಕಾಗಿ ಆಗುತ್ತದೆ, ಮನಸ್ಸಿಗೆ ಬಂದ ರೀತಿಯಲ್ಲಿ ಅಲ್ಲ. ಟ್ರಸ್ಟಿಶಿಪ್‌ನ ಇದೇ ಭಾರತೀಯ ಸಿದ್ಧಾಂತವನ್ನು ಗಾಂಧೀಜಿ, ಗುರೂಜಿ, ಮುಂತಾದ ವಿಚಾರಕರು ಸಮಾಜದ ಎದುರು ಇಟ್ಟಿದ್ದಾರೆ.

ಚಿಕ್ಕ ಚಿಕ್ಕ ಉದ್ಯಮಗಳ ಸಂಬಂಧವಾಗಿ ಹೇಳುವುದಾದರೆ, ಅವುಗಳನ್ನು ನಾವು ನಮ್ಮ ಔದ್ಯೋಗಿಕ ಕಾರ್ಯಕ್ರಮವದ ಆಧಾರವಾಗಿ ಮಾಡಿದ್ದೇವೆ. ನಿಶ್ಚಿತವಾಗಿಯೂ ವ್ಯಕ್ತಿಗತ ಸ್ವಾಮಿತ್ವದಲ್ಲಿಯೇ ಇರುತ್ತೇವೆ. ಅವು ರಾಜ್ಯದ ಅಧೀನವಾಗುವ ಪ್ರಶ್ನೆಯೇ ಏಳುವುದಿಲ್ಲ. ಪೂರ್ವ ಯೂರೋಪ್‌ನ ಅನೇಕ ಸಾಮ್ಯವಾದಿ ದೇಶಗಳು ಬಗೆ ಬಗೆಯ ಪ್ರಯತ್ನ ಮಾಡಿದ ಅನಂತರವೂ ಅವುಗಳ ರಾಷ್ಟ್ರೀಕರಣ ಮಾಡಲು ಸಾಧ್ಯವಾಗಿಲ್ಲ. ಹಂಗೇರಿಯಲ್ಲಿ ಕಳೆದಬಾರಿ ಬಹುದೊಡ್ಡ ಕ್ರಾಂತಿಯಾಯಿತು. ಅದನ್ನೂ ಈ ರೀತಿಯ ಚಿಕ್ಕ ಚಿಕ್ಕ ವ್ಯಾಪಾರಿಗಳು ಹಾಗೂ ತಂತ್ರಜ್ಞರ ಮೂಲಕವೇ ಎಬ್ಬಿಸಲಾಗಿತ್ತು.

### ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರ

ಈಗ ದೊಡ್ಡ ಉದ್ಯಮಗಳ ಪ್ರಶ್ನೆ ಬರುತ್ತದೆ. ಈ ಸಂಬಂಧವಾಗಿ ನಾವು ಇಂದು ನಮ್ಮ ದೇಶದ ಅಭಿವೃದ್ಧಿಯನ್ನು ಮಾಡುತ್ತಿದ್ದರೂ ಯಾವುದೇ ದೊಡ್ಡ ರೂಢಿವಾದೀ ಮತ್ತು ಸೈದ್ಧಾಂತಿಕ (Theoretical) ದೃಷ್ಟಿಕೋನವನ್ನು ಅವಲಂಬಿಸುವುದು ಸರಿಯಲ್ಲ. ವಿಶ್ವಬ್ಯಾಂಕ್‌ನ ಅಧ್ಯಕ್ಷ ಶ್ರೀ ಬ್ಲೇಕ್ ಅವರು ೧೯೫೭ರ ಅಕ್ಟೋಬರಲ್ಲಿ ವಿಶ್ವದ ಪ್ರಮುಖ ಉದ್ಯಮಪತಿಗಳ ಒಂದು ಸಮ್ಮೇಲನದಲ್ಲಿ ಹೇಳಿದ್ದರು: "ನಾನು ಪ್ರಚಾರ ಮಾಡುವ ಬಂಡವಾಳವಾದ ಉಪಾಸಕರ ಬಗೆಗೆ ಹಾಗೆಯೇ ಸಾರ್ವಜನಿಕ ಉದ್ಯಮವೇ ಸಂಪೂರ್ಣ ಬೇಡಿಕೆಯನ್ನು ಪೂರೈಸಬಲ್ಲುದು ಎಂದು ವಾದಿಸುವ ಸಮಾಜವಾದಿಗಳ ಬಗೆಗೆ ನಾನು ತುಂಬ ಚಿಂತಿತನಾಗಿದ್ದೇನೆ." ಅವಿಕಸಿತ ದೇಶಗಳಲ್ಲಿ ವ್ಯಾವಹಾರಿಕ ದೃಷ್ಟಿಯಿಂದ ಖಾಸಗಿ ಉದ್ಯೋಗ ಹಾಗೂ ಸರಕಾರ ಎರಡಕ್ಕೂ ತನ್ನ ತನ್ನದೇ ಆದ ಮಿತಿಗಳು ಇರುತ್ತವೆ. ಒಂದು ಕಡೆ ಸರಕಾರದ ಬಳಿ ಉದ್ಯೋಗ ವ್ಯಾಪಾರಗಳು ಹಾಗೂ ವ್ಯವಸಾಯಗಳ ಜ್ಞಾನವನ್ನಿಟ್ಟುಕೊಳ್ಳುವ ಯೋಗ್ಯವಾದ, ಕಾರ್ಯಕುಶಲ, ಹಾಗೂ ಪ್ರಾಮಾಣಿಕ ಕೆಲಸಗಾರರ ಕೊರತೆಯಿರುತ್ತದೆ. ಹಾಗೆಯೇ ಖಾಸಗಿ ಕ್ಷೇತ್ರದ ಬಳಿ ಬಂಡವಾಳ ಹಾಗೂ ಇತರ ಸಾಧನಗಳ ಕೊರತೆಯಿರುತ್ತದೆ. ಭಾರೀ ಉದ್ಯಮಗಳಲ್ಲಿ ಬಂಡವಾಳವನ್ನು ಬಹಳ ತೊಡಗಿಸಬೇಕಾಗುತ್ತದೆ. ಈ ಅಪಾಯವನ್ನು ಎದುರಿಸಬಲ್ಲಂಥ ಜನರು ಪ್ರಾಯಶಃ



ಖಾಸಗಿ ಕ್ಷೇತ್ರದಲ್ಲಿ ದೊರೆಯುವುದಿಲ್ಲ. ಆದ್ದರಿಂದಲೇ ಅವಿಕಸಿತದೇಶಗಳಲ್ಲಿ ಎಲ್ಲಕ್ಕಿಂತ ದುರ್ಲಭವಾದ ಉತ್ಪಾದನೆ ಯಾವುದಾದರೂ ಇದ್ದರೆ ಅದು 'ಅಪಾಯವನ್ನು ಎದುರಿಸುವ' ಉದ್ಯಮಿ (entreprenure) ಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ರಾಜ್ಯವು ಸ್ವಾಭಾವಿಕವಾಗಿಯೇ ಮುಂದೆ ಬರಬೇಕಾಗುತ್ತದೆ. ಸಮಾಜದಿಂದ ಹರದಾರಿ ದೂರ ಓಡಿ ಹೋಗುವ ಅನೇಕ ದೇಶೀ ರಾಜ್ಯಗಳು ಇದೇ ಕಾರಣದಿಂದ ತಾವೇ ಉದ್ಯೋಗ ವ್ಯಾಪಾರಗಳನ್ನು ಸ್ಥಾಪಿಸಿದವು. ಹಾಗಾಗಿ, ಖಾಸಗಿ ಕ್ಷೇತ್ರವು ಪ್ರವೇಶ ಮಾಡಲು ಸಾಧ್ಯವಾಗದ ಕಡೆಗಳಲ್ಲಿ, ಸರಕಾರವೇ ಪ್ರವೇಶ ಮಾಡಲಿ ಎಂಬ ವ್ಯಾವಹಾರಿಕ ನಿಯಮವನ್ನು ಮಾಡಬಹುದಾಗಿದೆ. ಸರಕಾರದ ಕಾರ್ಯವು ಸಾಮಾನ್ಯವಾಗಿ ಹಣ ಮಾಡುವುದಾಗಿರುವುದಿಲ್ಲ. ಹೀಗೆ ವ್ಯಾವಹಾರಿಕ ಮಿತಿಗಳ ಒಳಗೆ ಇಂದು ನಾವು ಹೇಳಬಹುದಾದರೆ, ರಕ್ಷಣೆ ಮತ್ತು ಆಧಾರಭೂತ ಉದ್ಯಮಗಳು ರಾಜ್ಯದ ಒಡೆತನದಲ್ಲೇ ಇರಬೇಕು. ಇವುಗಳ ಅಭಿವೃದ್ಧಿಯ ಹೊಣೆಗಾರಿಕೆಯನ್ನು ಇಂದು ಸರಕಾರವು ವಹಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಈ ಕ್ಷೇತ್ರಗಳಲ್ಲಿಯೂ (ರಾಜ್ಯದ ಅಧೀನದಲ್ಲಿಯೇ ಇರಬೇಕಾದ ರಕ್ಷಣಾ ಉದ್ಯಮಗಳನ್ನು ಬಿಟ್ಟು) ಖಾಸಗಿ ಪ್ರಯತ್ನಗಳಿಂದ ಕೆಲವು ಉದ್ಯಮಗಳು ಸ್ಥಾಪಿತವಾಗಿದ್ದರೂ ಅವುಗಳ ರಾಷ್ಟ್ರೀಕರಣ ಮಾಡಬೇಕಾದ ಅವಶ್ಯಕತೆ ಇಲ್ಲ. ನಾವು ಯಾವುದೇ ವಾದ ವಿಶೇಷದ ಕಟ್ಟುಪಾಡಿಗೆ ಸಿಲುಕದಿದ್ದರೆ, ರಾಜ್ಯದ ಸಾಧನಗಳ ಉಪಯೋಗ, ಹಳೆಯ ಉದ್ಯಮಗಳ ರಾಷ್ಟ್ರೀಕರಣ ಮಾಡುವುದಕ್ಕಿಂತ ರಾಷ್ಟ್ರಕ್ಕಾಗಿ ಅವಶ್ಯಕವಾದ ಹೊಸ ಉದ್ಯಮ–ಕೈಗಾರಿಕೆಗಳ ಸ್ಥಾಪನೆ ಮಾಡುವುದು ಹೆಚ್ಚು ಒಳ್ಳೆಯದು.

### ಖಾಸಗಿ ಉದ್ಯಮಗಳ ಒಡೆತನ

ಸಾಮಾನ್ಯವಾಗಿ ಒಡೆತನದ ಸಂಬಂಧವನ್ನು ಹಣದೊಡನೆ ಜೋಡಿಸುವುದು ವಾಡಿಕೆ. ಇದು ನಮ್ಮ ಮಾರುಕಟ್ಟೆ ವ್ಯವಸ್ಥೆಯ ಕೊಡುಗೆ. ಉದ್ಯಮಗಳಲ್ಲಿ ಹಣ ತೊಡಗಿಸುವವನು ಮಾಲಿಕನಾಗುತ್ತಾನೆ. ಹಣತೊಡಗಿಸಿದವನು ತಾನೇ ಪಡೆದುಕೊಂಡ ಉಪಕರಣಗಳು ಮತ್ತು ಸಾಧನಗಳ ಪ್ರಯೋಗ ಮಾಡಿ ನಿರ್ಮಾಣ ಮಾಡುತ್ತಾನಾದರೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಯಾಕೆಂದರೆ ಅವನು ಸಂಪೂರ್ಣ ಸಂಪತ್ತಿನ ಒಡೆಯನಾಗುತ್ತಾನೆ. ಆದರೆ ಆ ಉಪಕರಣಗಳನ್ನು ಬಳಸಿ ಬೇರೆ ಯಾವುದಾದರೂ ಉತ್ಪಾದನೆಯನ್ನು ಮಾಡಿದರೆ, ಇಬ್ಬರಲ್ಲಿಯೂ ಉತ್ಪಾದಿತ ಮೂಲ್ಯಗಳ ಹಂಚಿಕೆಯ ಸಮಸ್ಯೆಯೊಂದಿಗೆ, ಆ ಉಪಕರಣಗಳ ಸ್ವಾಮಿತ್ವದ ಪ್ರಶ್ನೆಯೂ ಎದುರಾಗುತ್ತದೆ. ಕಾರಣ, ಕಾರ್ಮಿಕನಿಗೆ ಉಪಕರಣಗಳು ಹಾಗೂ ಯಂತ್ರಗಳ ಜೊತೆ ಗಾಢವಾದ ಸಂಬಂಧವಿರುತ್ತದೆ. ಅದರ ಸರಿಯಾದ ಉಪಯೋಗದ ಮೇಲೆಯೇ ಅವನ ಜೀವನ ನಿರ್ವಹಣೆ ಅವಲಂಬಿಸಿರುತ್ತದೆ.

ಆ ಯಂತ್ರಗಳನ್ನು ಮಾರಾಟ ಮಾಡಿದರೆ, ಅಥವಾ ಬೇರೆ ಯಾವುದಾದರೂ ಪ್ರಕಾರದಿಂದ ಹಸ್ತಾಂತರವನ್ನೇನಾದರೂ ಮಾಡಿದರೆ, ಅದರ ಪರಿಣಾಮವು ಕಾರ್ಮಿಕನ ಮೇಲೆಯೂ ಆಗುತ್ತದೆ. ಅಚಲ ಉತ್ಪಾದನೆಯ ಸಾಧನವಾಗಿರುವ ಭೂಮಿಯಲ್ಲಿ ಶ್ರಮಮಾಡುವ ಉತ್ಪಾದಕನ ಸ್ವಾಮಿತ್ವದ ಅಧಿಕಾರವನ್ನು ಸ್ವೀಕಾರ ಮಾಡಲಾಗಿದೆ. ಅಂದಮೇಲೆ ಉದ್ಯಮಗಳಲ್ಲಿ ಕೂಡ ಕೆಲಸಗಾರನ ಸ್ವಾಮಿತ್ವದ ಸ್ವೀಕಾರವನ್ನು ಯಾಕೆ ಮಾಡಬಾರದು? ಇವತ್ತಿನ ಸಂಯುಕ್ತ ಬಂಡವಾಳದ ಕಂಪನಿಗಳಲ್ಲಿ ಒಬ್ಬ ಶೇರ್‌ಹೋಲ್ಡರನಂತೂ ಬಹುತೇಕವಾಗಿ ಯಾವುದೇ ಉದ್ಯಮದೊಡನೆ ಲಾಭಾಂಶದ ಹೊರತಾಗಿ ಮತ್ತೆ ಯಾವ ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ, ಅವನು ಸ್ವಾಮಿತ್ವದ ಅಧಿಕಾರದ ಉಪಯೋಗ ಮಾಡುತ್ತಾನೆ, ಮತ್ತು ಕೆಲಸಗಾರನು ಆ ಕಾರಖಾನೆಯಲ್ಲಿ ಅವಿರತವಾಗಿ ಕೆಲಸ ಮಾಡುತ್ತಾನೆ, ವಾಸ್ತವಿಕರೂಪದಲ್ಲಿ ಯಂತ್ರಗಳನ್ನು ನಡೆಸುತ್ತಾನೆ, ಹಾಗೂ ಅವನ ಜೀವನ ನಿರ್ವಹಣೆಯು ಆ ಉದ್ಯಮದ ಒಳಿತು ಕೆಡಕಿನ ಮೇಲೆ ಅವಲಂಬಿತವಾಗಿದೆ, ಇಷ್ಟಾದರೂ ಯಾವಾಗಲೂ ಅವನು ಪರಕೀಯತೆಯನ್ನು ಅನುಭವಿಸಬೇಕು. ಇದು ಅಚ್ಚರಿಯ ವಿಷಯ. ನಿಸ್ಪೃಹತೆಯ ಈ ಭೂಮಿಕೆ ಒಳ್ಳೆಯದಲ್ಲ. ಆದ್ದರಿಂದ, ಆಂಶಿಕ ಒಡೆಯ ಜೊತೆಗೆ ಕೆಲಸಗಾರನಿಗೂ ಒಡೆತನದ ಅಧಿಕಾರ ದೊರೆಯವುದು ಹಾಗೂ ಅವನನ್ನು ಲಾಭ ಹಾಗೂ ವ್ಯವಸ್ಥಾಪನೆಯಲ್ಲಿ ಭಾಗಿದಾರನನ್ನಾಗಿ ಮಾಡುವುದು ಅಗತ್ಯ. ಇದರ ಪ್ರಕಾರ ಕಾರ್ಮಿಕರ ಪ್ರತಿನಿಧಿ ಸಂಚಾಲಕ ಮಂಡಲಿಯಲ್ಲಿ ಇರುತ್ತಾರೆ.

ಭಾರತ ಸರಕಾರವು ೧೯೪೮ರಲ್ಲಿ ಲಾಭದಲ್ಲಿ ಹಂಚಿಕೆಯ ಪ್ರಶ್ನೆಯ ಬಗ್ಗೆ ವಿಚಾರ ಮಾಡಲು ಒಂದು ಸಮಿತಿಯನ್ನು ಕರೆದಿತ್ತು. ಇದರಿಂದ ಔದ್ಯೋಗಿಕ ಶಾಂತಿಯನ್ನು ನೆಲೆಗೊಳಿಸಲು ಸಹಾಯಕವಾಗುತ್ತದೆ, ಮತ್ತು ಶ್ರಮದ ವ್ಯವಸ್ಥಾಪನೆಯಲ್ಲಿ ನಿರಂತರವಾಗಿ ಪಾಲುಗೊಳ್ಳಬಹುದು ಎಂಬುದು ಸಮಿತಿಯ ಅಭಿಪ್ರಾಯವಾಗಿತ್ತು. ಅದು ಇನ್ನೂ ಒಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಯಾವುದೇ ಉದ್ಯಮದ ತೀರಿಸುವ ಬಂಡವಾಳದ ಮೇಲೆ ಶೇ. ೬ ಲಾಭ ಹಾಗೂ ಇತರ ಸಂಚಿತ ನಿಧಿಯಿಂದ ಪಾಲುಗಾರಿಕೆಯ ಭಾಗವನ್ನು ತಗೆದು ಉಳಿದದ್ದರ ಶೇ. ೫೦ನ್ನು ಕಾರ್ಮಿಕರಿಗೆ ಹಂಚಿಬಿಡಬೇಕು. ಪ್ರತಿಯೊಬ್ಬ ಕಾರ್ಮಿಕನ ಭಾಗವು ಅವನ ಕಳೆದ ೧೨ ತಿಂಗಳ ವೇತನದ ಅನುಪಾತದಲ್ಲಿರಬೇಕು. ಕನಿಷ್ಠ ಪಕ್ಷ ಆರು ಉದ್ಯಮಗಳು, ನೂಲಿನ ಬಟ್ಟೆ, ಸಣಬು, ಉಕ್ಕು, ಸಿಮೆಂಟ, ಸಿಗರೇಟ ಹಾಗೂ ಟೈರ್ ನಿರ್ಮಾಣದಲ್ಲಿ ಇದನ್ನು ಪ್ರಯೋಗದ ರೂಪದಲ್ಲಿ ತಕ್ಷಣದಿಂದ ಜಾರಿಗೊಳಿಸಬೇಕು ಎಂದೂ ಸಮಿತಿಯ ಶಿಫಾರಸು ಮಾಡಿತ್ತು. ಆದರೆ ಸರಕಾರವು ಇನ್ನೂ ಈವರೆಗೆ ಯಾವುದೇ ಸಕ್ರಿಯ ಹೆಜ್ಜೆಯನ್ನು ಇಟ್ಟಿಲ್ಲ.



**ಸಾರ್ವಜನಿಕ ಉದ್ಯಮಗಳ ವ್ಯವಸ್ಥಾಪನೆ**

ಸಾರ್ವಜನಿಕ ಉದ್ಯಮಗಳ ಕಾರಣದಿಂದ ಹೆಚ್ಚಿನ ಶಕ್ತಿಯು ರಾಜ್ಯದ ಕೈಗೆ ಬಂದುಬಿಡುತ್ತದೆ. ಪ್ರಜಾಪ್ರಭುತ್ವದಲ್ಲಿ ರಾಜ್ಯಗಳಿಗೆ ವ್ಯಾವಹಾರಿಕ ಅರ್ಥವಿರುತ್ತದೆ. ಯಾವ ಪಕ್ಷಗಳ ಕೈಯಲ್ಲಿ ಆಡಳಿತದ ಸೂತ್ರಗಳಿದ್ದರೂ ಸರಿ. ಈ ರೀತಿ ಆಡಳಿತ ಪಕ್ಷದ ಕೈಯಲ್ಲಿ ಹೆಚ್ಚಿನ ಶಕ್ತಿ ಬಂದುಬಿಡುತ್ತದೆ. ಈ ಬಗೆಯ ಕೇಂದ್ರೀಕರಣವು ಯಾವಾಗಲೂ ಪ್ರಜಾಪ್ರಭುತ್ವಕ್ಕೆ ಘಾತಕ.

ಉದ್ಯಮ–ವ್ಯಾಪಾರಗಳನ್ನು ಯಶಸ್ವಿಯಾಗಿ ನಡೆಸಬೇಕಾಗಿದ್ದರೆ, ಅವುಗಳಿಗೆ ಪೂರ್ಣವಾಗಿ ಆರ್ಥಿಕ ಆಧಾರದ ಮೇಲೆ, ಸಾರ್ವಜನಿಕ ಹಿತಾಸಕ್ತಿಗೆ ಅಧೀನವಾಗಿ ನಡೆಸಬೇಕಾದ್ದು ಅವಶ್ಯಕವಾಗಿದೆ. ಆದ್ದರಿಂದ ಅವರಿಗೆ ದಿನದಿನವೂ ಬದಲಾಗುವ ವ್ಯವಹಾರದಲ್ಲಿ ಸ್ವಾತಂತ್ರ್ಯ ದೊರಕಬೇಕಾಗಿದೆ. ಆದರೆ ಅವುಗಳ ಮೇಲೆ ಸಂಸದೀಯ ನಿಯಂತ್ರಣವೂ ಇರುವಂಥ ವ್ಯವಸ್ಥೆಯನ್ನು ಮಾಡಬೇಕು. ಕಾರ್ಮಿಕರನ್ನು ವ್ಯವಸ್ಥೆಯಲ್ಲಿ ಸಹಭಾಗಿಗಳನ್ನಾಗಿ ಮಾಡುವ ದೃಷ್ಟಿಯಿಂದ ಸಾರ್ವಜನಿಕ ಉದ್ಯಮಗಳಿಗೆ ಮಾರ್ಗದರ್ಶನ ಬೇಕು.

**ಕಾರ್ಯಕರ್ತರ ದನಿ**

ಸಾರ್ವಜನಿಕ ಉದ್ಯಮಗಳ ಸಫಲತೆಯು ಕೆಲಸಗಾರರ ಕುಶಲತೆ, ಮತ್ತು ಪ್ರಾಮಾಣಿಕತೆಯ ಮೇಲೆ ಬಹಳವಾಗಿ ಅವಲಂಬಿತವಾಗಿದೆ. ಈವರೆಗೆ ನಮಗೆ ಆಡಳಿತವು ಇಂಗ್ಲಿಷರಿಂದ ಬಳುವಳಿಯಾಗಿ ದೊರೆತಿದೆ. ಅದು ಆಡಳಿತದ ದೃಷ್ಟಿಯಿಂದ ಜನತೆಯಿಂದ ಬೇರೆಯಾಗಿ, ತನ್ನದೇ ಆದ ಕೆಲವು ಪ್ರತಿಷ್ಠೆಯ ಭಾವನೆಯಿಂದ ಬಹು ಉದ್ದೇಶಿತ ಐ.ಸಿ.ಎಸ್. ಅವರ ಬಲದ ಮೇಲೆ ನಡೆಯುತ್ತಬಂದಿದೆ. ಸರಕಾರವು ಈಗಷ್ಟೇ ತನ್ನ ಕೈ–ಕಾಲುಗಳನ್ನು ಚಾಚಿಕೊಂಡಿದೆ. ಆದರೆ ವಿಶೇಷ ಹೊಣೆಗಾರಿಕೆಯ ನಿರ್ವಹಣೆ ಮಾಡಲು ವಿಶೇಷ ತರಬೇತಿ ಪಡೆದ ಹಾಗೂ ಯೋಗ್ಯತೆಯುಳ್ಳ ಕೆಲಸಗಾರರ ನೇಮಕ ಹಾಗೂ ವ್ಯವಸ್ಥಾಪನೆಯತ್ತ ಯಾವುದೇ ಗಮನ ಹರಿಸಿಲ್ಲ. ಈಗಷ್ಟೇ ೬೦೦ ಹೊಸ ಐ.ಎ.ಎಸ್. ಆಫೀಸರುಗಳ ಅವಶ್ಯಕ ಹೆಚ್ಚಳ ಮಾಡಲಾಗಿದೆ. ಉತ್ಪಾದನೆ, ಸಾರಿಗೆ, ಸಂಚಾರ, ಕಬ್ಬಿಣ ಹಾಗೂ ಉಕ್ಕು ಮತ್ತು ವ್ಯಾಪಾರ–ಉದ್ಯಮಗಳ ಸಚಿವಾಲಯಗಳ ಅಧೀನದಲ್ಲಿ ಒಂದು ಔದ್ಯೋಗಿಕ ವ್ಯವಸ್ಥಾಪನಾ ಸೇವೆಯನ್ನು ನೆಲೆಗೊಳಿಸಬೇಕೆಂದು ನಿಶ್ಚಯ ಮಾಡಲಾಗಿದೆ. ಆದರೆ ಇವುಗಳೆಲ್ಲ ಮುಖ್ಯವಾಗಿ ಸರಕಾರಿ ಪದಾಧಿಕಾರಿಗಳಿಂದಲೇ ಭರ್ತಿ ಆಗಲಿಕ್ಕಿದೆ. ಅವರು ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಲಾರರು. ಭ್ರಷ್ಟಾಚಾರದ ವ್ಯಾಪಕತೆಯಂತೂ ಸುಪರಿಚಿತವಾಗಿದೆ. ಇದನ್ನು ದೂರಮಾಡಲು ನಾವು ಕಠೋರ ಹೆಜ್ಜೆಯನ್ನು ಇಡಬೇಕಾಗಿದೆ. ಸಾರ್ವಜನಿಕ ಉದ್ದಿಮೆಗಳ ಸರಿಯಾದ

ವ್ಯವಸ್ಥಾಪನೆ ಆಗದಿದ್ದರೆ ಸ್ವಯಂ ಪ್ರೇರಣೆಯಿಂದ ನಡೆಯುವ ಅವು ಭಾರತದ ಭವಿಷ್ಯದ ಔದ್ಯೋಗೀಕರಣದ ಅಡಿಪಾಯ ಹಾಕುವ ದಾರಿಯಲ್ಲಿ ಅಡ್ಡಿಯನ್ನುಂಟು ಮಾಡಬಹುದು.



# ೧೧. ಸಾರಿಗೆ ಮತ್ತು ವ್ಯಾಪಾರ

ಕೃಷಿ ಮತ್ತು ಉದ್ಯೋಗದ ಹೊರತಾಗಿ ಸಾಗಣೆ, ವಾಣಿಜ್ಯ, ಹಾಗೂ ಸಮಾಜಸೇವೆಗಳ ಹಾಗೂ ಹಣಕಾಸು, ತೆರಿಗೆ ಮತ್ತು ಬೆಲೆ ನೀತಿಯ ಜೊತೆಗೆ ಸಂಬಂಧ ಬರುತ್ತದೆ. ವಿಕಾಸಶೀಲ ಅರ್ಥವ್ಯವಸ್ಥೆಯಲ್ಲಿ ಸಾಧಕ–ಬಾಧಕಗಳೆರಡೂ ಸಿದ್ಧವಾಗಬಹುದು. ಇವುಗಳ ಪ್ರಕಾರ ಹಾಗೂ ಪ್ರಮಾಣ ಎರಡೂ ಪರಿಣಾಮಕಾರಿ ಆಗಿರುತ್ತವೆ.

**ಸಾಗಾಣಿಕೆ**

ಯುದ್ಧ ಮುಂತಾದ ಬಾಹ್ಯ ಕಾರಣಗಳನ್ನು ಬಿಟ್ಟರೆ, ಸಾಗಾಣಿಕೆಯ ವಿಕಾಸವು ಮುಖ್ಯವಾಗಿ ಮಾರುಕಟ್ಟೆಯ ವ್ಯವಸ್ಥೆಯ ಜೊತೆ ಜೊತೆಗೇ ಆಯಿತು. ಸಾಗಾಣಿಕೆ ಸೌಲಭ್ಯಗಳು ಬೆಳೆಯುತ್ತ ಹೋದಂತೆ, ಯಾವುದೇ ವಸ್ತುವಿನ ಮಾರುಕಟ್ಟೆಯ ಕ್ಷೇತ್ರ ಹಿಗ್ಗುತ್ತ ಹೋಗುತ್ತಿದೆ. ರಚನಾತ್ಮಕತೆ ಹಾಗೂ ನಿರ್ಮಾಣಕ್ಕಾಗಿ ಸರಕುಗಳನ್ನು ಅತ್ತಿಂದಿತ್ತ ಹೊತ್ತು ಸಾಗಿಸುವ ಅವಶ್ಯಕತೆ ಬೀಳುತ್ತದೆ. ಪಶ್ಚಿಮದ ವಿಧಾನದ ಕೇಂದ್ರೀಕೃತ ಉತ್ಪಾದನಾ ಪದ್ಧತಿಯನ್ನು ಅನುಸರಿಸಿದರೆ ಇಂಥ ಅವಶ್ಯಕತೆ ಮತ್ತಷ್ಟು ಹೆಚ್ಚುತ್ತದೆ. ಇಂದು ಸಿಂದರಿಯ ರಾಸಾಯನಿಕ ಗೊಬ್ಬರ ಕಾರಖಾನೆಗಾಗಿ ಪ್ರತಿದಿನ ಒಂದು ಗೂಡ್ಸ್‌ಗಾಡಿ ಪೂರ್ಣವಾಗಿ, ದೂರದ ರಾಜಸ್ಥಾನದಿಂದ ಜಿಪ್ಸಮ್ ಒಯ್ಯಲು ಓಡಿಸಬೇಕಾಗುತ್ತದೆ. ವಿಸ್ತಾರವಾದ ಮಾರುಕಟ್ಟೆ ಮತ್ತು ಬೃಹತ್ ಪ್ರಮಾಣದ ಸ್ಥಾನಬದ್ಧ ಉತ್ಪಾದನಾ ಪದ್ಧತಿಯು ಸಾಗಾಣಿಕೆಯ ಮೇಲೆ ಬಹಳ ಭಾರವನ್ನು ಹಾಕಿದೆ. ಅದನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಪಡಸದೆ ಔದ್ಯೋಗೀಕರಣ ಅಸಂಭವ ಎನ್ನಿಸತೊಡಗಿದೆ. ಫಲವಾಗಿ ಉದ್ಯಮಗಳನ್ನು ಪ್ರಾರಂಭಿಸುವ ಮುನ್ನ ನಮಗೆ ನಮ್ಮ ಸಾಧನ ಹಾಗೂ ಬಂಡವಾಳದ ಬಹುದೊಡ್ಡ ಭಾಗವನ್ನು ರೈಲುಗಳ ವಿಕಾಸದ ಮೇಲೆಯೇ ತೊಡಗಿಸಬೇಕಾಗುತ್ತದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಂಬಂಧಿತ ಅಂಕಿಅಂಶಗಳ ಅನುಸಾರ ರೈಲ್ವೆಯ ಮೇಲೆ ೮೯.೫ ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು. ಇದು ಬೇರೆ ಯಾವುದೇ ವಿಭಾಗದಲ್ಲಿ ಮಾಡಲಾಗುವ ಖರ್ಚಿಗಿಂತ ಹೆಚ್ಚಿಗೆ ಆಗಿದೆ, ಆದರೂ ರೈಲ್ವೆ ನಮ್ಮ ಅವಶ್ಯಕತೆಗಳನ್ನು ಪೂರ್ಣಗೊಳಿಸುವ ಸ್ಥಿತಿಯಲ್ಲಿಲ್ಲ. ಆಯೋಗದ ಅಂದಾಜಿನ ಪ್ರಕಾರ ೧೯೬೦–೬೧ರಲ್ಲಿ ೬.೧ ಕೋಟಿ ಟನ್ ಸರಕು ಸಾಗಣೆಯ ಅವಶ್ಯಕತೆ ಬೀಳುತ್ತದೆ.

ಆದರೆ ರೈಲ್ವೆಗಳು ಕೇವಲ ೪.೨ ಕೋಟಿ ಟನ್‌ಗಳಷ್ಟನ್ನು ಮಾತ್ರ ಸಾಗಾಣಿಕೆ ಮಾಡಬಲ್ಲವು. ಇದೇ ಸ್ಥಿತಿ ಪ್ರವಾಸಿಕರದ್ದೂ ಕೂಡ. ಅದರಲ್ಲಿಯೂ ಜನಸಂದಣಿ ಕಡಿಮೆ ಆಗುವ ಲಕ್ಷಣಕಾಣಿಸುತ್ತಿಲ್ಲ. ಬಟ್ಟೆಗಿಂತ ಹೊಲಿಗೆಯ ವೆಚ್ಚವೇ ಹೆಚ್ಚು ಎಂಬ ಗಾದೆ ಮಾತು ನಿಜವಾಗುತ್ತಿದೆ. ನಾವು ಈ ಸಂಕಷ್ಟಗಳ ಬಗೆಗೂ ಗಂಭೀರವಾಗಿ ಯೋಚಿಸಬೇಕಾಗಿದೆ.

ಸಾಗಾಣಿಕೆಯ ಅಸಾಮಾನ್ಯ ಸಮಸ್ಯೆಯು ನಮ್ಮ ತಪ್ಪು ಉದ್ಯಮ ನೀತಿಯ ಹಾಗೂ ಸಾಗಾಣಿಕೆಯ ಎಲ್ಲ ಸಾಧನಗಳ ಸಮನ್ವಯದ ಬೆಳೆವಣಿಗೆಯ ಯೋಜನೆಗಳ ಕೊರತೆಯ ಪರಿಣಾಮವಾಗಿದೆ. ನಾವು ವಿಕೇಂದ್ರಿತ ಉತ್ಪಾದನಾ ಪದ್ಧತಿಯನ್ನು ಅನುಸರಿಸಿದರೆ ಹಾಗೂ ಕಚ್ಚಾ ಮಾಲಿನ ಹುಟ್ಟುವಳಿ ಆಗುವಲ್ಲಿಯೇ ಪಕ್ಕಾ ಮಾಲಿನ ಪೇಟೆಯೂ ಇರುವ ಸಂದರ್ಭವಿದ್ದಾಗ, ಅಲ್ಲೇ ಉತ್ಪಾದನೆ ಮಾಡಿದರೆ, ಸಾಗಾಟದ ಮೇಲಿನ ಭಾರವನ್ನು ಕಡಿಮೆ ಮಾಡಬಹುದು.

### ರಸ್ತೆಯ ಮೂಲಕ ಸಾಗಾಣಿಕೆ–ಎತ್ತಿನಗಾಡಿ

ರೈಲುಗಳ ಹೊರತಾಗಿ ನಾವು ರಸ್ತೆ ಹಾಗೂ ಜಲಮಾರ್ಗದ ಸಾಗಾಣಿಕೆಯ ಸಾಧನಗಳನ್ನು ಬೆಳೆಸಬೇಕು. ಈವರೆಗೆ ಎತ್ತಿನಗಾಡಿ ಹಾಗೂ ಹಡಗುಗಳ ಮುಖಾಂತರ ನಮ್ಮ ಬಹಳಷ್ಟು ಆಂತರಿಕ ವ್ಯಾಪಾರವು ಆಗುತ್ತಿತ್ತು. ಆದರೆ ನಿಧಾನವಾಗಿ ಆವರಿಸಿರುವ ನಿರ್ಲಕ್ಷ್ಯ ಅವುಗಳನ್ನು ಮುಗಿಸಿಯೇ ಬಿಟ್ಟಿದೆಯೆನ್ನಬೇಕು. ರೈತನು ತನ್ನ ಮಾಲನ್ನು ಮಂಡಿಯವರೆಗೆ ಒಯ್ಯಲು ಈವರೆಗೆ ಬಂಡಿಗಳ ಬಳಕೆ ಮಾಡುತ್ತಿದ್ದ. ಆದರೆ ನಾವು ಅವುಗಳ ಚಕ್ರದಲ್ಲಿ ತುಸು ಸುಧಾರಣೆ ಮಾಡಿದರೆ, ಅವು ಕನಿಷ್ಠಪಕ್ಷ ೫೦ ಮೈಲು ದೂರದವರೆಗೆ ಸರಕು ಸಾಗಣೆಯ ಕೆಲಸಕ್ಕೆ ಬರಬಲ್ಲವು. ಎತ್ತಿನಗಾಡಿಗಳ ಮುಖಾಂತರ ದೇಶದಲ್ಲಿ ಸುಮಾರು ಒಂದು ಕೋಟಿ ಜನ ಅರೆಕಾಲಿಕ ಅಥವಾ ಪೂರ್ಣಾವಧಿ ಕೆಲಸವನ್ನು ಪಡೆದುಕೊಳ್ಳುತ್ತಾರೆ. ಯುದ್ಧಕ್ಕೆ ಮುನ್ನ ಭಾರತದಲ್ಲಿ ಎತ್ತಿನಗಾಡಿಗಳಿಂದ ೨೫೦ ಕೋಟಿ ರೂಪಾಯಿಗಳ ಬಂಡವಾಳದ ಅಂದಾಜಿತ್ತು. ಸದ್ಯದ ಅಂದಾಜಿನಂತೆ ೧೯೫೬–೫೭ರಲ್ಲಿ ೧೦೭೧.೭೧ ಕೋಟಿ ರೂಪಾಯಿಗಳಾಗಿವೆ. ಎತ್ತಿನಗಾಡಿಯೆಂದು ವಿನೋದ ಮಾಡಿ ಇಷ್ಟೊಂದು ದೊಡ್ಡ ಪ್ರಮಾಣದ ಬಂಡವಾಳವನ್ನು ನಾಶಮಾಡುವುದು ಹಾಗೂ ಸಾಗಾಣಿಕೆಯ ಹೊಸ ಸಾಧನಗಳಲ್ಲಿ ಬಂಡವಾಳದ ಕೊರತೆಯನ್ನು ಅನುಭವಿಸುವುದು ಯೋಗ್ಯವಾಗುವುದಿಲ್ಲ.

### ಮೋಟಾರ್ ಮೂಲಕ ಸಾಗಾಣಿಕೆ

ಸಾಗಾಣಿಕೆಯ ಅಧುನಿಕ ಸಾಧನಗಳಲ್ಲಿ ಟ್ರಕ್ ಅಥವಾ ಲಾರಿ ಮೂಲಕ



ಸಾಗಾಣಿಕೆಯ ಬೆಳೆವಣಿಗೆಯ ಸಾಧ್ಯತೆಗಳು ಬಹಳ. ಖನಿಜತೈಲದ ಶೋಧ ಮತ್ತು ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಆಗುವವರೆಗೆ ಮೋಟಾರುಗಳು ದೇಶದ ಸ್ವಾವಲಂಬನೆಯ[1] ನೀತಿಯ ಜೊತೆ ಹೊಂದಿಕೆಯಾಗಲಾರವು. ಆದರೆ ಸಾಗಾಣಿಕೆಯ ಸಂಕಟವನ್ನು ದೂರಮಾಡಲು ಅವುಗಳಿಂದ ತುಂಬ ಸಹಾಯ ದೊರೆಯುವ ಸಂಭವ ಇದೆ. ದೌರ್ಭಾಗ್ಯದಿಂದ ಸರಕಾರವು ಹಿಡಿದುಕೊಂಡು ಹೊರಟಿರುವ ನೀತಿಯು ಈ ವರೆಗೆ ೧೯೩೦ರ ನಂತರದ ದರ ಇಳಿಕೆಯ ಕಾಲದಲ್ಲಿ ರೈಲು–ಮೋಟರುಗಳ ಪ್ರತಿಸ್ಪರ್ಧೆಯಿಂದ ಉತ್ಪನ್ನವಾದ ಪರಿಸ್ಥಿತಿಗಳ ಆಧಾರದ ಮೇಲೆಯೇ ಆಗಿದೆ. ಎರಡರ ಮಧ್ಯೆ ಸಮನ್ವಯದ ಹೆಸರಿನಲ್ಲಿ ಮೋಟಾರ್ ಸಾಗಾಣಿಕೆಯನ್ನು ಕುಂಠಿತಗೊಳಿಸಲಾಗಿದೆ. ಮೋಟಾರ್ ವಾಹನ ಕಾನೂನಿನ ಪರಿಷ್ಕರಣೆಯ ನಂತರವೂ ಪರಿಸ್ಥಿತಿ ಸುಧಾರಿಸಿಲ್ಲ. ತೆರಿಗೆಯ ಬಹುದೊಡ್ಡ ಹೊರೆಯನ್ನು ಅವರು ಹೊರಬೇಕಾಗಿದೆ. ಬೇರೆ ಬೇರೆ ಪ್ರಕಾರದ ತೆರಿಗೆಗಳಿಂದ ಸರಕಾರಕ್ಕೆ ೭೮.೭೩ ಕೋಟಿ ರೂಪಾಯಿಯ ಆದಾಯ ದೊರಕಿದೆ. ಅದರಲ್ಲಿ ೧೪.೯೪ ಕೋಟಿ ಆಯಾತ ಕರದ ರೂಪದಲ್ಲಿ ದೊರಕುತ್ತದೆ. ಖರ್ಚಿನ ದೃಷ್ಟಿಯಿಂದ ೨೭ ಕೋಟಿ ೯೪ ಲಕ್ಷ ರೂಪಾಯಿ ಎಲ್ಲ ಬಗೆಯ ದಾರಿಗಳ ನಿರ್ವಹಣೆಯ ಮೇಲೆ ಹಾಗೂ ೪.೫ ಕೋಟಿ ರೂಪಾಯಿ ಕೇಂದ್ರೀಯ ರಸ್ತೆ ನಿಧಿ ಕೋಶದಲ್ಲಿ ತೊಡಗಿಸಲಾಗುತ್ತದೆ. ಉಳಿದ ಸುಮಾರು ೩೭ ಕೋಟಿ ರೂಪಾಯಿಗಳ ನಿವ್ವಳ ಆದಾಯ ಸರಕಾರಕ್ಕೆ ಆಗುತ್ತದೆ. ೧೯೫೫–೫೬ರ ವರೆಗೆ ರಸ್ತೆಗಳ ಮೇಲೆ ೪೫೬ ಕೋಟಿ ರೂಪಾಯಿಗಳ ಬಂಡವಾಳ ವಿನಿಯೋಗದ ಅಂದಾಜಿತ್ತು. ಈ ಪ್ರಕಾರ ಸರಕಾರಕ್ಕೆ ಸುಮಾರು ಶೇ. ೮ರಷ್ಟು ಲಾಭ ಆಗುತ್ತದೆ. ರೈಲುಗಳಿಂದ ೧೯೫೦–೫೧ರ ಒಪ್ಪಂದದ ಪ್ರಕಾರ ಲಾಭಕಾರಿಯಲ್ಲದ ಹಾಗೂ ಯುದ್ಧಕ್ಕೆ ಸಂಬಂಧಿಸಿದ ಲೈನುಗಳನ್ನು ಬಿಟ್ಟು ಉಳಿದವುಗಳ ಮೇಲೆ ತೊಡಗಿಸಿದ ಬಂಡವಾಳದ ಮೇಲೆ ಕೇವಲ ಶೇ. ೪ ಲಾಭಾಂಶ ದೊರೆಯುತ್ತದೆ. ೧೯೪೪.೪೫ ರಲ್ಲಿ ಪ್ರತಿ ಗಾಡಿಗೆ ಟ್ಯಾಕ್ಸ್ ಕೇವಲ ೬೧೧ ರೂಪಾಯಿ ಇದ್ದಿತ್ತು. ೧೯೫೪–೫೫ ರಲ್ಲಿ ೧೯೦೬ ರೂಪಾಯಿ ಹಾಗೂ ೧೯೫೭–೫೮ ರಲ್ಲಿ ೨೧೦೦ ರೂಪಾಯಿ ಆಯಿತು. ಟ್ಯಾಕ್ಸ್‌ಗಳ ಭಾರವಷ್ಟೇ ಅಲ್ಲ, ಅದರ ವಸೂಲಿಯ ವಿಧಾನವೂ ತೊಡಕಿನದಾಗಿದೆ. ಹಲವಾರು ಸರಕಾರಿ ಸಂಸ್ಥೆಗಳ ಮೂಲಕ ಅದು ವಸೂಲಾಗುತ್ತದೆ, ಅದರಲ್ಲಿ ಸಮಯದ ಅಪವ್ಯಯದ ಜೊತೆಗೆ ಬೇರೆ ರೀತಿಯ ತೊಂದರೆಗಳನ್ನೂ ಅನುಭವಿಸಬೇಕಾಗುತ್ತದೆ. ಭಾರ ಹೊರುವ ಟ್ರಕ್‌ಗಳ ಕನಿಷ್ಠ ಶೇ. ೧೦ ರಷ್ಟು ಸಮಯ ಸುಂಕದಕಟ್ಟೆಗಳಲ್ಲಿ

---

೧. ಭಾರತವು ೧೯೫೬–೫೭ರಲ್ಲಿ ೮೧.೮೮ ಕೋಟಿ ರೂಪಾಯಿ ಹಾಗೂ ೧೯೫೭–೫೮ ರಲ್ಲಿ ೬೭.೮ ಕೋಟಿ ರೂಪಾಯಿಗಳ ಖನಿಜತೈಲವನ್ನು ಆಮದು ಮಾಡಿಕೊಳ್ಳಬೇಕಾಯಿತು.

ನಿಂತಿರುವುದರಲ್ಲಿಯೇ ಕಳೆಯುತ್ತಿತ್ತು. ಇದರ ಪರಿಣಾಮ ಅವರ ಚಾಲನಾ ಕೌಶಲ (operational efficiency)ದ ಮೇಲೆ ಆಗುತ್ತದೆ. ಜಕಾತಿಯ ಭಾಗವನ್ನು ವಿಕ್ರಯಕರ ಅಥವಾ ಉತ್ಪಾದನಾ ಕರದ ಜೊತೆ ಸೇರಿಸಿದ್ದರೆ ಚೆನ್ನಾಗಿರುತ್ತಿತ್ತು. ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಭಾರತದಲ್ಲಿ ರೈಲು ಮತ್ತು ಮೋಟರುಗಳ ಸಂಖ್ಯೆ ಈ ರೀತಿ ಇತ್ತು. ರೈಲು: ಪ್ರವಾಸಿಬೋಗಿಗಳು ೨೩೧೫೫, ಮಾಲು ಬೋಗಿಗಳು ೨೩೫೧೯೮; ಮೋಟಾರು, ಬಸ್‌ಗಳು ೪೪೬೧೨, ಟ್ರಕ್‌ಗಳು ೧,೩೦,೯೯೮.

೧೯೫೫–೫೬ರಲ್ಲಿ ಪ್ಯಾಸೆಂಜರ ಗಾಡಿಗಳ ಮೂಲಕ ೧೨೯೭ ಕೋಟಿ ಪ್ರವಾಸಿಗಳು ೩೦ ಮೈಲು ಸರಾಸರಿಯಲ್ಲಿ ಪ್ರಯಾಣ ಮಾಡಿದರು. ೩೦೦ ಕೋಟಿ ಪ್ರವಾಸಿಕರು ೧೨ ಮೈಲು ಸರಾಸರಿ ಪ್ರಮಾಣದಲ್ಲಿ ಬಸ್‌ಗಳಲ್ಲಿ ಪ್ರಯಾಣ ಮಾಡಿದರು.

**ಅನುಪಯುಕ್ತ ರಾಷ್ಟ್ರೀಕರಣ**

ಮೋಟಾರು ಸಾರಿಗೆಯ ರಾಷ್ಟ್ರೀಕರಣದ ಬಗೆಗಿನ ಸರಕಾರದ ನೀತಿಯೂ ಯೋಗ್ಯವಾದದ್ದಲ್ಲ. ಬೆಳೆವಣಿಗೆಯ ಅವಶ್ಯಕತೆಗಳ ಹೊರತಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರು ಹೆಚ್ಚಾಗಿ ಮಧ್ಯಮವರ್ಗದ ವ್ಯಕ್ತಿಗಳಾಗಿದ್ದಾರೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ನೀಡಲಾದ ಅಂಕಿ–ಸಂಖ್ಯೆಯ ಪ್ರಕಾರ ೧೯೫೧ ರಲ್ಲಿ ೪೭೫೭೫ ಜನರು ಬಸ್ ನಡೆಸುವವರಿದ್ದರು. ಇವರಲ್ಲಿ ೨೫ ಜನರ ಬಳಿ ೧೦೦ ಕ್ಕಿಂತ ಹೆಚ್ಚು ಬಸ್‌ಗಳಿದ್ದವು. ೫೦ ರ ಬಳಿ ೫೦, ಮತ್ತು ೧೦೦ರ ಮಧ್ಯೆ ಹಾಗೂ ೧೫೦೦ರ ಬಳಿ ೫ ರಿಂದ ೫೦ರ ಮಧ್ಯೆ ಬಸ್‌ಗಳಿದ್ದವು. ಉಳಿದ ೪೬೦೦೦ ಕ್ಕಿಂತ ಮೇಲೆ ಇದ್ದ ಸಂಚಾಲಕರ ಬಳಿ ೫ ಕ್ಕಿಂತ ಕಡಿಮೆ ಬಸ್‌ಗಳಿದ್ದವು. ರಾಷ್ಟ್ರೀಕರಣದ ಮೂಲಕ ಈ ಪ್ರಕಾರ ಸ್ವತಂತ್ರ ವ್ಯವಸಾಯವನ್ನು ಕೊನೆಗೊಳಿಸುವುದು ಸರಿಯಲ್ಲ. ರಾಷ್ಟ್ರೀಕೃತ ಮೋಟಾರು ಸಾರಿಗೆಯ ಅನುಭವವೂ ಅಷ್ಟೇನೂ ಒಳ್ಳೆಯದಲ್ಲ. ಅದರಲ್ಲಿ ಖರ್ಚು ಹಾಗೂ ಬಾಡಿಗೆ ಎರಡರದೂ ಹೆಚ್ಚಳ ಆಗುತ್ತದೆ.

ಇಂದು ಸರಕಾರದ ಬಳಿ ಹಣದ ಅಭಾವವಿದೆ, ಬಸ್ ರಾಷ್ಟ್ರೀಕರಣ ಮಾಡುವುದರಲ್ಲಿ ಅದನ್ನು ತೊಡಗಿಸುವುದು ಬುದ್ಧಿವಂತಿಕೆಯಲ್ಲ. ವಾಸ್ತವವಾಗಿ ಅದನ್ನು ಖಾಸಗಿ ಕ್ಷೇತ್ರಕ್ಕೆ ಒಪ್ಪಿಸಿಬಿಟ್ಟಿದ್ದರೆ, ಸರಕಾರವು ಬಹುದೊಡ್ಡ ಭಾರದಿಂದ ಮುಕ್ತವಾಗುತ್ತಿತ್ತು. ಬೆಳೆವಣಿಗೆಯ ದೃಷ್ಟಿಯಿಂದ ಕೂಡ ಮುಂದೆ ಬಸ್‌ಗಳನ್ನು ಹೆಚ್ಚಿಸುವ ಅವಶ್ಯಕತೆ ಬಹಳ ಉಂಟಾಗುತ್ತದೆ.

ರೈಲಿನ ಬದಲಿಗೆ ರಸ್ತೆಗಳ ವಿಕಾಸವು ವಿಕೇಂದ್ರೀಕೃತ ಅರ್ಥವ್ಯವಸ್ಥೆಗೆ ಅವಶ್ಯಕ. ಹೆಚ್ಚಾಗಿ ರೈಲುಗಳು ಕೇಂದ್ರೀಕರಣದಲ್ಲಿ ಸಹಾಯಕವಾಗುತ್ತವೆ. ಈ ಪ್ರಶ್ನೆಯ ಮೇಲೆ ರಾಷ್ಟ್ರ ಸಂಘದ ಆರ್ಥಿಕ ಆಯೋಗದ ‘೧೯೫೬ ಯೂರೋಪಿನ ಆರ್ಥಿಕ



ಸಮೀಕ್ಷಣೆ'ಯು ಈ ರೀತಿ ಬೆಳಕು ಬೀರಿದೆ: “ಯೂರೋಪಿನ ಔದ್ಯೋಗಿಕ ದೇಶಗಳಲ್ಲಿ ಸಾರಿಗೆ ನೀತಿಯ ಎದುರು ಅಸಮಾನತೆಯ ಸಮಸ್ಯೆಗಳಿವೆ. ಪ್ರಾರಂಭಿಕ ಔದ್ಯೋಗೀಕರಣ ಹಾಗೂ ದಟ್ಟವಾದ ಜನಸಂಖ್ಯೆಯ ಕಾರಣದಿಂದ ಅವರಲ್ಲಿ ರೈಲುಗಳು, ಆಂತರಿಕ ಜಲಮಾರ್ಗಗಳು, ಹಾಗೂ ತಟೀಯ ನೌಕಾಸಾರಿಗೆಯ ಒಂದು ಜಾಲವೇ ಹರಡಿಕೊಂಡಿದೆ. ಇವು ಅಲ್ಲಿನ ಜನಸಂಖ್ಯೆಯ ಕೇಂದ್ರೀಕರಣ ಹಾಗೂ ಸಂಪೂರ್ಣ ಆರ್ಥಿಕ ಸಂಚಲವಾದ ಕೆಲವು ನಗರಗಳಲ್ಲಷ್ಟೇ ಸೀಮಿತವಾಗಿವೆ. ರಸ್ತೆ ಹಾಗೂ ವಿಮಾನ ಸಾರಿಗೆ ವಿಕೇಂದ್ರೀಕರಣದಲ್ಲಿ ಸಹಾಯಕವಾಗಬಲ್ಲುದು. ಅಮೇರಿಕದಲ್ಲಿ ಆಗುತ್ತಿರುವುದು ಹಾಗೆಯೇ. ಕೆಲವು ಸರಕಾರಗಳು ಸಾರ್ವಜನಿಕ ಒಡೆತನದ ರೈಲುಗಳನ್ನು ರಸ್ತೆ ಸಾರಿಗೆಯ ಪ್ರತಿಸ್ಪರ್ಧೆಯಿಂದ ರಕ್ಷಿಸುತ್ತಿವೆ”.

**ನೌಕಾಸಾರಿಗೆ**

ನೌಕಾ ಸಾರಿಗೆಯ ಬಗೆಗೆ ಬಹಳ ಕಡಿಮೆ ಗಮನ ಕೊಡಲಾಗಿದೆ. ಇಂದು ಭಾರತದ ನದಿಗಳಿಂದ ಕೇವಲ ೧೫೫೭ ಮೈಲು ಶಕ್ತಿ ಚಾಲಿತ ನೌಕೆಗಳು ಹಾಗೂ ೩೫೮೭ ಮೈಲು ಹುಟ್ಟುಗಳಿಂದ ಚಲಾಯಿಸುವ ನೌಕೆಗಳು ಉಳಿದುಕೊಂಡಿವೆ. ಕಾಲುವೆಗಳಿಗಾಗಿ ದೊಡ್ಡ ದೊಡ್ಡ ಆಣೆಕಟ್ಟುಗಳಲ್ಲಿ ನದಿಗಳ ಮೇಲ್ಭಾಗದಲ್ಲಿ ನೀರು ನಿಲ್ಲಿಸಿದ್ದರ ಕಾರಣದಿಂದ ಅವುಗಳ ತಳದಲ್ಲಿ ಹೂಳು ತುಂಬಿವೆ. ಇದೆಲ್ಲದರ ಪರಿಣಾಮ ನಿಷಾಧ ವರ್ಗದ ಹೊಟ್ಟೆಯ ಮೇಲೆ ಹೊಡೆದಂತಾಗಿದೆ. ಈಗಲೂ ಕೂಡ ಸುಮಾರು ಒಂದು ಕೋಟಿ ಜನ ನೌಕಾಯಾನದ ಮೇಲೆಯೇ ತಮ್ಮ ಜೀವನ ನಿರ್ವಹಣೆಗೆ ನಡೆಸುತ್ತಿದ್ದಾರೆ. ಇದನ್ನು ವಿಕಾಸಗೊಳಿಸಿದರೆ ಸಾರಿಗೆ ಅತಿ ಹೆಚ್ಚು ಅಗ್ಗದ ಸಾಧನವಾಗಬಲ್ಲುದು.

**ಹಡಗು ಸಾರಿಗೆ**

ಭಾರತವು ಯಾವುದೋ ಕಾಲದಲ್ಲಿ ಜಹಜುಗಳ ನಿರ್ಮಾಣದಲ್ಲಿ ಮುಂದಾಳುವಾಗಿತ್ತು, ಆದರೆ ಇವತ್ತಿನ ಸ್ಥಿತಿ ನಿರಾಶಾಜನಕ. ಇಂದು ಭಾರತದ ವಿದೇಶೀ ವ್ಯಾಪಾರದ ಕೇವಲ ಶೇ. ೬ ಭಾರತೀಯ ಹಡಗುಗಳ ಮೂಲಕ ಸಾಗಿಸಲಾಗುತ್ತದೆ. ಒಂದು ಅಂದಾಜಿನ ಪ್ರಕಾರ ಸುಮಾರು ೨೦೫ ಕೋಟಿ ರೂಪಾಯಿಯ ವಿದೇಶೀ ವಿನಿಮಯ ಪ್ರತಿವರ್ಷ ನಮಗೆ ಹಡಗುಗಳ ಮೂಲಕ ಸರಕು ಸಾಗಣೆ, ಇನ್‌ಶುರೆನ್ಸ ಇತ್ಯಾದಿಗಳ ಬಗ್ಗೆ ವೆಚ್ಚ ಮಾಡಬೇಕಾಗುತ್ತದೆ. ವ್ಯಾಪಾರದ ದೃಷ್ಟಿಯಿಂದಷ್ಟೇ ಅಲ್ಲ, ಸುರಕ್ಷಿತತೆಯ ದೃಷ್ಟಿಯಿಂದಲೂ ನಾವು ಜಲಯಾನದ ವಿಕಾಸದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಇತ್ತೀಚೆಗಷ್ಟೇ ಕೇಂದ್ರದ ಮೂಲಕ ಪಾಸಾದ ಮರ್ಚೆಂಟ್ ಶಿಪ್ಪಿಂಗ್ ಆ್ಯಕ್ಟನಲ್ಲಿ ಭಾರತದ ಹಿತಾಸಕ್ತಿಯ

ಬಗ್ಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಸರಕಾರವು ತನ್ನ ಕೈಯಲ್ಲಿ ನಿರ್ಣಾಯಕ ಶಕ್ತಿಯನ್ನು ಇಟ್ಟುಕೊಂಡಿದ್ದರೂ ವಿದೇಶೀ ಹಿತಾಸಕ್ತಿಯ ಪ್ರವೇಶಕ್ಕೆ ವ್ಯವಸ್ಥೆ ಮಾಡಿ ನಾವು ಭವಿಷ್ಯದಲ್ಲಿ ಅಪಾಯವನ್ನು ಆಹ್ವಾನಿಸಿದ್ದೇವೆ. ಬೇರೆ ಕ್ಷೇತ್ರಗಳ ಹಾಗೆ ಇಲ್ಲಿಯೂ ತಟೀಯ ನೌಕಾಸಾರಿಗೆಯಲ್ಲಿ ಚಿಕ್ಕ ಚಿಕ್ಕ ನೌಕೆಗಳು ಬಹಳ ಕೆಲಸಕ್ಕೆ ಬರುತ್ತವೆ. ೧೯೪೯ರ ಸೆಲಂಗ್ ವೆಸಲ್ಸ ಸಮಿತಿಯ ವರದಿಯ ಪ್ರಕಾರ ಅವುಗಳ ಸಂಖ್ಯೆ ಸುಮರು ೨೬೦೦ ಇತ್ತು. ಅವು ಪ್ರತಿವರ್ಷ ೧೫ ಲಕ್ಷಟನ್ ವರೆಗೆ ಸರಕುಗಳ ಸಾಗಣೆ ಮಾಡುತ್ತವೆ. ಅವುಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ಅಂದಾಜು ೪೦,೦೦೦. ಅವುಗಳ ಅಭಿವೃದ್ಧಿಗಾಗಿ ಯಾವ ಯೋಜನೆಯನ್ನೂ ಹಮ್ಮಿಕೊಂಡಿಲ್ಲ.

ಸಂಕ್ಷಿಪ್ತವಾಗಿ ಇಷ್ಟು ಹೇಳಬಹುದು: ಈ ಕ್ಷೇತ್ರದಲ್ಲಿಯೂ ಆಧುನಿಕತೆಗೆ ಬಲಿಬಿದ್ದು ಹೆಚ್ಚು ಬಂಡವಾಳ ಬೇಡುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಬದಲು ನಮ್ಮ ಬಳಿ ಲಭ್ಯವಿರುವ ಸಾಧನಗಳಿಂದ ಹೆಚ್ಚು ಲಾಭ ಪಡೆಯುವಂತಾಗಬೇಕು. ಜೊತೆಗೆ ಅರ್ಥ ವ್ಯವಸ್ಥೆಯ ವಿಕಾಸಕ್ಕಾಗಿ ಸಾರಿಗೆ ಸಾಧನಗಳ ವಿಕಾಸ ಅವಶ್ಯಕವಾಗಿದೆ. ಆದರೆ ವಿಕಾಸದ ದಿಕ್ಕು ಹಾಗೂ ವೇಗವನ್ನು ಕೂಡ ಈ ಸಾಧನಗಳ ವಿಕಾಸ ಸಾಮರ್ಥ್ಯದ ಪ್ರಕಾರ ನಿಶ್ಚಿತಗೊಳಿಸಬೇಕು.

## ವಾಣಿಜ್ಯ

ವ್ಯಾಪಾರಿಯನ್ನು ಸಾಮಾನ್ಯವಾಗಿ ಏಜಂಟನೆಂದು ತಿಳಿಯಲಾಗುತ್ತದೆ. ಆದರೆ ಅವನ ಸ್ಥಾನವು ಮಹತ್ವದ್ದಾಗಿದೆ. ಅನೇಕ ಕ್ಷೇತ್ರಗಳಲ್ಲಿ ಸಹಕಾರಿ ಸಮಿತಿಗಳು ಆ ಸ್ಥಾನವನ್ನು ತುಂಬುವ ಕೆಲಸ ಮಾಡುತ್ತಿವೆ. ಆದರೆ ಅವು ಅದನ್ನು ಸಂಪೂರ್ಣವಾಗಿ ಸ್ಥಾಪಿಸಬಲ್ಲವೆಂದು ಹೇಳುವುದು ಕಷ್ಟ. ಭಾರತದಲ್ಲಿ ವ್ಯಾಪಾರಕ್ಕೆ ವಿವಿಧ ಸಮಸ್ಯೆಗಳಿವೆ. ಮೊದಲನೆಯದಾಗಿ ಇಲ್ಲಿ ಬಳಕೆದಾರನ ಕೈಯಲ್ಲಿ ವಸ್ತುಗಳ ಕ್ರಯ ಇರುವವರೆಗೆ ಅದು ಅನೇಕ ಕೈಗಳಿಂದ ಕೈಗೆ ಜಾರುತ್ತ ಬರಬೇಕಾಗುತ್ತದೆ. ಪರಿಣಾಮವಾಗಿ ಲಾಭ ಪಡೆಯುವವರ ಸಂಖ್ಯೆ ಹೆಚ್ಚುತ್ತ ಹೋಗುತ್ತದೆ. ಎರಡನೆಯದಾಗಿ ಕಚ್ಚಾ ವಸ್ತುವಿನ ಬೆಲೆ ನಿರ್ಧಾರ ದೂರದ ಪೇಟೆಯ ಬೇಡಿಕೆ ಮತ್ತು ದರಕ್ಕೆ ಅನುಗುಣವಾಗಿ ಇರುತ್ತದೆ. ಇಲ್ಲಿ ರೈತನು ಹಲವು ಬಗೆಯ ಕಡಿತಗಳನ್ನು ನೀಡಬೇಕಾಗುತ್ತದೆ.

ಔದ್ಯೋಗೀಕರಣದ ಚೌಕಟ್ಟನ್ನು ನಾವು ತಿಳಿದಿದ್ದು, ಅದನ್ನು ಅನುಸರಿಸಿದರೆ ಈ ಸಮಸ್ಯೆ ಬಹಳಷ್ಟು ಕಡಿಮೆಯಾಗುತ್ತದೆ. ಜೊತೆಗೆ ಮಂಡಿಗಳ ಯೋಗ್ಯವ್ಯವಸ್ಥೆಗಾಗಿ ಹಲವು ಪ್ರದೇಶಗಳಲ್ಲಿ ಕಾನೂನು ಮಾಡಲಾಗಿದೆ. ಸರಕಾರವು ದಾಸ್ತಾನು ಮಳಿಗೆಗಳ ವ್ಯವಸ್ಥೆಯ ಯೋಜನೆಯನ್ನೂ ಮಾಡಿದೆ.

ಭಾರತದ ಅಂತರದೇಶೀಯ ವ್ಯಾಪಾರವು ವಿದೇಶೀ ವ್ಯಾಪಾರದ ಜೊತೆ ತುಲನೆ ಮಾಡಿದರೆ ಬಹಳ ಹೆಚ್ಚಿಗೆ ಇದೆ. ಆದರೂ ಅದರ ಮೇಲೆ ಮಾರುಕಟ್ಟೆಯ



ದೃಷ್ಟಿಯಿಂದ ವಿದೇಶೀ ಪ್ರಭಾವ ಇನ್ನೂ ಭಾರೀ ಪ್ರಮಾಣದಲ್ಲಿ ಇದೆ. ಶ್ರೀ ಸೇನ್[೧] ಅವರ ಪ್ರಕಾರ ಭಾರತದ ಆಂತರಿಕ ವ್ಯಾಪಾರ ಸುಮಾರು ೨೮೦೦ ಕೋಟಿ ರೂಪಾಯಿಗಳಷ್ಟಿದೆ, ವಿದೇಶೀ ವ್ಯಾಪಾರ ೧೩೦೦ ಕೋಟಿಯಷ್ಟು, ಈ ವ್ಯಾಪಾರದ ಸುಮಾರು ೬೦ ಪ್ರತಿಶತ ಬಂದರುಗಳು ಹಾಗೂ ದೇಶದ ವಿಭಿನ್ನ ಭಾಗದ ಮಧ್ಯೆ ಹರಡಿಕೊಂಡಿರುತ್ತದೆ. ಮುಂಬಯಿ, ಮದ್ರಾಸ್, ಕಲಕತ್ತಾಗಳು ಉದ್ಯಮ ವ್ಯಾಪಾರಗಳಿಗಷ್ಟೇ ಕೇಂದ್ರವಲ್ಲದೆ, ವ್ಯಾಪಾರದ ಕೇಂದ್ರಗಳೂ ಆಗಿವೆ. ದೇಶದ ಆಂತರಿಕ ಕ್ಷೇತ್ರಗಳಲ್ಲಿ ಎಲ್ಲ ಬಗೆಯ ವಿಕಾಸದೊಂದಿಗೆ ಈ ಸ್ಥಿತಿಯಲ್ಲಿ ಬದಲಾವಣೆ ಉಂಟಾಗುತ್ತದೆ.

## ಸರಕಾರೀ ವ್ಯಾಪಾರ

ಸರಕಾರವು ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆದಂತೆ ವ್ಯಾಪಾರದ ಕಡೆಗೂ ಅದರ ದೃಷ್ಟಿಹರಿದಿದೆ. ಮತ್ತು ಈ ಉದ್ದೇಶದಿಂದ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಶನ್‌ನ ಸ್ಥಾಪನೆಯಾಗಿದೆ. ಸೈದ್ಧಾಂತಿಕ ದೃಷ್ಟಿಯಿಂದ ಸರಕಾರದ ಮೂಲಕ ವ್ಯಾಪಾರದ ಸಮರ್ಥನೆಯನ್ನು ಮಾಡಲಾಗದು. ನಮ್ಮಲ್ಲಿ ಹೇಳಿಕೆಯೇ ಇದೆ, ಸರಕಾರ ವ್ಯಾಪಾರ ಮಾಡಬಾರದು, ವ್ಯಾಪಾರಿ ಸರಕಾರ ಮಾಡಬಾರದು. ಸರಕಾರೀ ವ್ಯಾಪಾರದ ಸಮರ್ಥನೆ ವ್ಯಾಪಾರದ ನೀತಿಯಿಂದಲ್ಲ, ಆದರೆ ಕರೆನ್ಸಿಗೆ ಸಂಬಂಧಿಸಿದ ಹಾಗೂ ಹಣಕಾಸು ನೀತಿಯ ಮೇಲೆ ಅವಶ್ಯ ಮಾಡಬಹುದಾಗಿದೆ. ಇದರ ಮೂಲಕ ಸರಕಾರ ಏರುತ್ತಿರುವ ಬೆಲೆಯ ಸಂದರ್ಭದಲ್ಲಿ ಹೆಚ್ಚಿನ ರಾಜಸ್ವದ ಗಳಿಕೆ, ಹಾಗೂ ಕೆಲವು ಮಹತ್ವಪೂರ್ಣ ವಸ್ತುಗಳ ಬೆಲೆಗಳ ಸ್ಥಿರೀಕರಣವನ್ನೂ ಮಾಡಬಹುದು. ಆದರೆ ರಾಜ್ಯವು ಯಾವ ವಸ್ತುಗಳ ವ್ಯಾಪಾರವನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುವುದೆಂಬ ವಿಷಯದ ಬಗೆಗೆ ಗಂಭೀರವಾಗಿ ವಿಚಾರ ಮಾಡಬೇಕು. ಜೊತೆಗೆ ಬೇರೆ ಉಪಾಯಗಳಿಂದ ಕೆಲಸ ನಡೆಯುವವರೆಗೆ ಇದನ್ನು ಅವಲಂಬಿಸಬಾರದು. ಯಾಕೆಂದರೆ ರಾಜ್ಯದ ವ್ಯಾಪಾರದ ರಾಷ್ಟ್ರೀಕರಣದಿಂದ ಹಳೆಯ ಸ್ಥಿತಿಗೆ ಧಕ್ಕೆ ತಗಲುತ್ತದೆ, ಹಾಗೂ ಕರ ತನಿಖಾ ಆಯೋಗ (೧೯೫೩–೫೪)ದ ವರದಿಯ ಪ್ರಕಾರ ವ್ಯಾಪಾರೀ ಜ್ಞಾನದ ವಿಶೇಷಜ್ಞ ಕೆಲಸಗಾರರ ಕೊರತೆಯಿರುವಾಗ ಹೊಸವ್ಯವಸ್ಥೆಯನ್ನು ನೆಲೆಗೊಳಿಸುವುದು ಸಹಜ ಮತ್ತು ಶೀಘ್ರ ಸಾಧ್ಯವಾಗಲಾರದು.

ವಿದೇಶೀ ವ್ಯಾಪಾರದ ಸಂಬಂಧವಾಗಿ ಹೇಳುವುದಾದರೆ, ಮತ್ತೆ ಅದೂ ಕೂಡ ಸಾಮ್ಯವಾದೀ ದೇಶಗಳೊಡನೆ, ಅವರ ನಿಯಂತ್ರಿತ ಆರ್ಥಿಕ ನೀತಿಯ

---

೧. ಸೇನ್: *ಇಕಾನಮಿಕ್ ರಿಕನ್ಸ್ಟ್ರಕ್ಷನ್ ಆಫ್ ಇಂಡಿಯಾ*, ಪುಟ ೩೬

ಕಾರಣ ರಾಜ್ಯದ ಮೂಲಕ ವ್ಯಾಪಾರವು ಉಪಯೋಗಿಯೆಂದು ಸಿದ್ಧವಾಗಬಲ್ಲುದು. ಲೋಹ ಚೂರ್ಣ, ಯಂತ್ರಗಳು ಹಾಗೂ ಕುಟೀರ ಉದ್ಯೋಗಗಳ ವಸ್ತುಗಳಲ್ಲಿ ಈವರೆಗೆ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಶನ್ ಚೆನ್ನಾಗಿ ಲಾಭವನ್ನೂ ಗಳಿಸಿದೆ.

### ಧಾನ್ಯದ ವ್ಯಾಪಾರದ ರಾಷ್ಟ್ರೀಕರಣ

ಧಾನ್ಯದ ವ್ಯಾಪಾರದ ರಾಷ್ಟ್ರೀಕರಣ ಮಾಡಲು ಇತ್ತೀಚೆಗಷ್ಟೇ ಸರಕಾರ ನಿರ್ಣಯ ಮಾಡಿದೆ. ಈ ನಿರ್ಣಯವು ತನ್ನ ಹಿಂದಿನ ನೀತಿಯ ಅಸಫಲತೆಯನ್ನು ಮುಚ್ಚಿಹಾಕಲು ಮಾಡಿದ ಒಂದು ಪ್ರಯತ್ನ ಮಾತ್ರ. ಧಾನ್ಯದ ಬೆಲೆಯ ಸ್ಥಿರೀಕರಣದ ಅವಶ್ಯಕತೆ ಇರುತ್ತಲೂ ಸರಕಾರದ ಈ ಹೆಜ್ಜೆಯನ್ನು ಯಾವ ದೃಷ್ಟಿಯಿಂದಲೂ ಔಚಿತ್ಯಪೂರ್ಣ ಎನ್ನಲಾಗುವುದಿಲ್ಲ. ಮೊದಲನೆಯದಾಗಿ ಸರಕಾರವು ಈ ವ್ಯಾಪಾರದಲ್ಲಿ ಸುಮಾರು ೪೦೦ ಕೋಟಿ ರೂಪಾಯಿಗಳನ್ನು ತೊಡಗಿಸಬೇಕಾಗುತ್ತದೆ. ಈ ಹಣವನ್ನು ಇಂದಿನ ಸರಕಾರದ ರಾಜಸ್ವ ಸ್ಥಿತಿಯಲ್ಲಿ ಕ್ರೋಡೀಕರಿಸುವುದು ಕಷ್ಟವೇ ಆಗುತ್ತದೆ. ಅಲ್ಲದೆ ಈ ಹಣವನ್ನು ಕೃಷಿಯ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳಲ್ಲಿ ಬಳಸಿದ್ದರೆ ನಮಗೆ ಇನ್ನೂ ಹೆಚ್ಚು ಲಾಭವಾಗುತ್ತಿತ್ತು. ದೇಶದಲ್ಲಿ ೩೦ ಸಾವಿರ ಜನರು ಧಾನ್ಯದ ಥೋಕ ವ್ಯಾಪಾರಸ್ಥರು, ೩೦ ಲಕ್ಷ ಚಿಲ್ಲರೆ ವ್ಯಾಪಾರಿಗಳು ಇದ್ದಾರೆ. ಸರಕಾರವು ಇವರನ್ನು ಹೇಗೆ ಸ್ಥಾನಪಲ್ಲಟಗೊಳಿಸಬಲ್ಲುದು? ಇದು ನಮ್ಮ ದೇಶದ ನಿರುದ್ಯೋಗವನ್ನು ಇನ್ನಷ್ಟು ಹೆಚ್ಚಿಸುವುದಿಲ್ಲವೇ? ಅಲ್ಲದೆ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಭಾರೀ ಸಂಖ್ಯೆಯಲ್ಲಿ ಸರಕಾರಿ ಆಫೀಸರುಗಳು, ಕೆಲಸಗಾರರು ತೊಡಗಿಕೊಳ್ಳಬೇಕಾಗುತ್ತದೆ. ಸರಕಾರದ ಮೂಲಕ ವ್ಯಾಪಾರದ ರಾಷ್ಟ್ರೀಕರಣವು ಕೇವಲ ನಿರ್ಧಾರಿತ ಬೆಲೆಯಲ್ಲಿ ಧಾನ್ಯ ಖರೀದಿಸುವವರೆಗೆ ಮಾತ್ರ ಸೀಮಿತವಾಗಿ ಉಳಿಯುವುದಿಲ್ಲ. ಮೇಲಾಗಿ ಅದರ ಮುಂದಿನ ಸ್ವಾಭಾವಿಕ ಕ್ರಮವು ಬಲವಂತವಾಗಿ ಧಾನ್ಯವನ್ನು ವಸೂಲಿ ಮಾಡುವುದು ಹಾಗೂ ಅದರ ರೇಶನ್ ಹಂಚುವ ಕೆಲಸವೂ ಸೇರಿಕೊಳ್ಳುತ್ತದೆ. ನಾವು ನಿಯಂತ್ರಣದ ಕೆಡುಕುಗಳನ್ನು ಈಗಾಗಲೇ ಅನುಭವಿಸಿ ತಿಳಿದಿದ್ದೇವೆ. ಮತ್ತೆ ಅದೇ ತಪ್ಪುಗಳನ್ನು ಮರುಕಳಿಸುವುದು ಸರಿಯಲ್ಲ.



## ೧೨. ಸಮಾಜಸೇವೆಗಳು

ವಿಕಾಸಶೀಲ ಅರ್ಥವ್ಯವಸ್ಥೆಯಲ್ಲಿ ಸಮಾಜಸೇವೆಗಳಿಗೆ ತಮ್ಮದೇ ಆದ ಮಹತ್ವಪೂರ್ಣ ಸ್ಥಾನವಿದೆ. ಶಿಕ್ಷಣ ಮತ್ತು ಆರೋಗ್ಯದ ಸಂದರ್ಭದಲ್ಲಿ ವೆಚ್ಚಮಾಡಿದ ಹಣ ಒಂದು ಪ್ರಕಾರದಲ್ಲಿ ತೊಡಗಿಸುವುದೇ ಆಗಿದೆ. ಸ್ಥಿರ ಬಂಡವಾಳದ ಹಾಗೆ ಮಾನವ ಸಂಪನ್ಮೂಲವನ್ನು ಕೂಡ ಉತ್ಪಾದನೆಯ ಹೆಚ್ಚಳಕ್ಕಾಗಿ ಬಳಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಕೆಲಸಗಾರರಿಗೆ ಸೂಕ್ತ ತರಬೇತಿ ಹಾಗೂ ಅವರನ್ನು ಆರೋಗ್ಯಶಾಲಿಗಳನ್ನಾಗಿ ಇಡುವ ವ್ಯವಸ್ಥೆಯಿಂದ ಶ್ರಮದ ಅತ್ಯಧಿಕ ಪ್ರತಿಫಲವನ್ನು ಪಡೆಯಬಹುದಾಗಿದೆ. ಉತ್ಪಾದನಾ ವ್ಯವಸ್ಥೆಗೆ ತಕ್ಕಹಾಗೆ ಶಿಕ್ಷಣದ ವ್ಯವಸ್ಥೆಯನ್ನೂ ಮಾಡಬೇಕು. ಶಿಕ್ಷಣ ಮತ್ತು ವೈದ್ಯಕೀಯ ಈ ಎರಡೂ ದೃಷ್ಟಿಯಿಂದ, ಲಭ್ಯವಿರುವ ಸಾಧನಗಳನ್ನು ಹೆಚ್ಚು ಕಾರ್ಯದಕ್ಷವನ್ನಾಗಿ ಮಾಡುವುದೇ ಉಪಯುಕ್ತ. ಎಂಜಿನಿಯರಿಂಗ್ ಮತ್ತು ಔದ್ಯೋಗಿಕ ತರಬೇತಿಗಾಗಿ ವಿಶೇಷ ಕೇಂದ್ರಗಳನ್ನು ತೆರೆಯುವುದರ ಜೊತೆಗೆ ಟ್ರೇನೀ ಪದ್ಧತಿಯ ಉಪಯೋಗವನ್ನೂ ಮಾಡಿಕೊಳ್ಳಬೇಕು. ಚಿಕ್ಕ ಚಿಕ್ಕ ಉದ್ದಿಮೆಗಳಿಗೆ ನಮ್ಮಲ್ಲಿ ಅದಕ್ಕಾಗಿ ಸಾಕಷ್ಟು ವ್ಯವಸ್ಥೆಯಿದೆ. ಸರಕಾರವು ಈ ರೀತಿ ಖಾಸಗಿ ನೆಲೆಯಲ್ಲಿ ತರಬೇತಿ ಹೊಂದಿದ ವ್ಯಕ್ತಿಗಳ ಪರೀಕ್ಷೆಯ ವ್ಯವಸ್ಥೆ ಮಾಡಿ ಅವರಿಗೆ ಪ್ರಮಾಣಪತ್ರ ನೀಡುವಂತಾದರೆ ನಾವು ಬಹಳ ವೇಗವಾಗಿ ಈ ದಿಕ್ಕಿನಲ್ಲಿ ಮುಂದುವರಿಯಬಹುದು. ಆರೋಗ್ಯ ಚಿಕಿತ್ಸೆಯಲ್ಲಿ ಆಯುರ್ವೇದದತ್ತ ವಿಶೇಷ ಗಮನನೀಡಬೇಕಾದ ಅವಶ್ಯಕತೆಯಿದೆ. ಈ ಕ್ಷೇತ್ರದಲ್ಲಿ ಯಾವುದೇ ಸೈದ್ಧಾಂತಿಕ ಹಾಗೂ ವಿಭಿನ್ನ ಚಿಕಿತ್ಸಾ ಪದ್ಧತಿಗಳ ತೌಲನಿಕ ವೈಜ್ಞಾನಿಕತೆಯ ಸುತ್ತಿನಲ್ಲಿ ಸಿಕ್ಕಿ ಬೀಳಬೇಕಾದ ಅವಶ್ಯಕತೆಯಿಲ್ಲ. ಹೆಚ್ಚಿನ ಜನರಿಗೆ ಸಾಧಾರಣ ಚಿಕಿತ್ಸೆಯ ಅವಶ್ಯಕತೆ ಬೀಳುತ್ತದೆ. ಈ ರೀತಿಯ ಚಿಕಿತ್ಸೆ ನೀಡುವವರು ಎಲ್ಲ ಕಡೆ ದೊರಕುವಂತಾಗಬೇಕು, ಚಿಕಿತ್ಸೆ ಅಗ್ಗವಾಗಿ ಲಭ್ಯವಾಗಬೇಕು ಇದೇ ಮಹತ್ವದ ವಿಷಯ. ನಿಸ್ಸಂದೇಹವಾಗಿ ಆಯುರ್ವೇದ ಮಾತ್ರ ಈ ಅವಶ್ಯಕತೆಯನ್ನು ಪೂರೈಸಬಲ್ಲುದು.

### ಆರ್ಥಿಕ ದೃಷ್ಟಿಯಿಂದ

ಸಮಾಜ ಸೇವೆಯ ಕಾರ್ಯಕ್ರಮಗಳ ಒಂದು ಬೇರೆಯದೇ ಆದ ಆರ್ಥಿಕ ಆಯಾಮವಿದೆ. ಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆಯನ್ನು ಬಗೆಹರಿಸಲು ಇದರಿಂದ

ಭಾರೀ ಸಹಾಯ ದೊರೆಯುತ್ತದೆ. ನಾವು ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತೆಯ ಒಂದು ವ್ಯಾಪಕ ಕಾರ್ಯಕ್ರಮವನ್ನು ಹಾಕಿಕೊಂಡರೆ ದೇಶದ ಎಲ್ಲ ಶಿಕ್ಷಿತ ನಿರುದ್ಯೋಗಿಗಳಿಗೆ ಕೆಲಸವನ್ನು ಕೊಡಬಹುದು. ಆದರೆ ಸರಕಾರದ ಸಾಧನ ಮೂಲಗಳನ್ನು ಕುರಿತು ವಿಚಾರ ಮಾಡಿದಾಗ, ಶಿಕ್ಷಣದ ಈ ಕ್ಷೇತ್ರವನ್ನು ವಿಕೇಂದ್ರೀಕೃತಗೊಳಿಸಿ ಗ್ರಾಮ ಪಂಚಾಯತಗಳಿಗೆ ಇದನ್ನು ವಹಿಸಿಕೊಟ್ಟರೆ ಸರಿಯಾದೀತು.

ಸಮಾಜಸೇವೆ ಹಾಗೂ ಭವನ ನಿರ್ಮಾಣದ ಕಾರ್ಯ್ಕ್ರಮಗಳು ಸಾಧಾರಣವಾಗಿ ಜನತೆಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಮತ್ತು ಈ ಪ್ರಕಾರದ ಶಿಥಿಲ ಅರ್ಥವ್ಯವಸ್ಥೆಯನ್ನು ಜೀವತುಂಬಿ ಚುರುಕುಗೊಳಿಸುವ ಮಾರ್ಗ ಅನುಸರಿಸಬೇಕು. ಚಿಕ್ಕ ಚಿಕ್ಕ ಉದ್ಯಮ ದಂಧೆಗಳಲ್ಲಿ ತಯಾರಾದ ಸರಕುಗಳನ್ನು ಖರ್ಚುಮಾಡಲು, ಒಂದು ಕಡೆ ಕೃಷಿಕನಿಗೆ ಅವನು ಬೆಳೆದ ಬೆಳೆಗೆ ಯೋಗ್ಯ ಬೆಲೆ ದೊರಕುವಂತೆ ನೋಡಿಕೊಂಡು, ಅವನ ಕೈಗೆ ಹೆಚ್ಚು ಕೊಳ್ಳುವ ಶಕ್ತಿಯನ್ನು ಕೊಡಬೇಕಾಗಿದೆ. ಇನ್ನೊಂದು ಕಡೆ ಈ ಎಲ್ಲ ಕಾರ್ಯಕ್ರಮಗಳಿಂದ ನಿರುದ್ಯೋಗಿಗಳ ಗಳಿಕೆಯನ್ನು ಹೆಚ್ಚಿಸಬೇಕಾಗಿದೆ. ಹೀಗೆ ಹೆಚ್ಚಿದ ಕ್ರಯಶಕ್ತಿ ತನ್ನ ದ್ವಿಗುಣವಾಗುವ ಪ್ರಭಾವ (multiple effect) ದಿಂದ ಅನೇಕ ಉದ್ಯಮ ದಂಧೆಗಳನ್ನು ಸಕ್ರಿಯವಾಗಿಡಬಹುದು. ವಿದೇಶಗಳಿಂದ ಬಂಡವಾಳವನ್ನು ತರಿಸುವ ಹಾಗೂ ಈ ರೀತಿಯ ಸಮಾಜ ಸೇವೆಯಲ್ಲಿ ವೆಚ್ಚಮಾಡುವ ಸಂದರ್ಭದಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕಾದಾಗ, ನಾವು ಇನ್ನೊಂದನ್ನೇ ಆಯ್ಕೆ ಮಾಡುತ್ತೇವೆ. ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ೧೯೬೧ರವರೆಗೆ ೬ ರಿಂದ ೧೧ ವರ್ಷ ವಯಸ್ಸಿನವರೆಗಿನ ಮಕ್ಕಳಿಗೆ ಉಚಿತ ಶಿಕ್ಷಣದ ಸೌಲಭ್ಯ ನೀಡಬೇಕೆಂದು ಹೇಳಲಾಗಿದ್ದರೂ, ಸರಕಾರವು ಅದನ್ನು ಒಂದೇ ಸವನೆ ತಳ್ಳಿ ಹಾಕುತ್ತ ಬಂದಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ, ಕೇವಲ ಈ ವಯಸ್ಸಿನ ಬಾಲಕ–ಬಾಲಕಿಯರಲ್ಲಿ ಶೇ. ೬೮.೯ ರಷ್ಟು ಮಾತ್ರ ಶಿಕ್ಷಣ ವ್ಯವಸ್ಥೆ ಮಾಡಲು ಸಾಧ್ಯವಾಗಿದೆ. ೧೯೫೮ರ ಆಯೋಗದ ಮೂಲಕ ಪರಿಷ್ಕೃತ ಅಂಕಿ–ಅಂಶಗಳ ಪ್ರಕಾರ ಶಿಕ್ಷಣ, ಆರೋಗ್ಯ ಮುಂತಾದ ಎಲ್ಲ ಸಮಾಜಸೇವೆಗಳ ಮೇಲೆ ವೆಚ್ಚ ಮಾಡುವ ಹಣವನ್ನು ೯೪೫ ಕೋಟಿ ರೂಪಾಯಿಗಳಿಂದ ೮೩೩ ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ.

## ಸಾರ್ವಜನಿಕ ನಿರ್ಮಾಣ

ಸಾರ್ವಜನಿಕ ನಿರ್ಮಾಣ ಹಾಗೂ ಭವನ ನಿರ್ಮಾಣದ ಕಾರ್ಯಕ್ರಮಗಳಿಗೂ ಅರೆವಿಕಸಿತ ದೇಶಗಳ ವಿಕಾಸ ಕಾರ್ಯಕ್ರಮದಲ್ಲಿ ವಿಶೇಷ ಸ್ಥಾನವಿದೆ. ಇದರ ಮೂಲಕ ವಿಶೇಷ ತಾಂತ್ರಿಕ ಹಾಗೂ ಬಂಡವಾಳವಿಲ್ಲದ ಅನೇಕ ಜನರಿಗೆ ಕೆಲಸ



ದೊರೆಯುತ್ತದೆ. ಅವರ ಬಳಿ ತುಸು ಗಳಿಕೆ ಬಂದಾಗ, ಅವರಲ್ಲಿ ಉಳಿತಾಯ ಹಾಗೂ ಬಂಡವಾಳದ ಸಾಧ್ಯತೆಗಳು ಹೆಚ್ಚುತ್ತವೆ. ಪಂಚವಾರ್ಷಿಕ ಯೋಜನೆಗಳ ಒಳಗಡೆ ನಿರ್ಮಾಣದ ಕೆಲಸಗಳೇನೋ ಬಹಳ ಆಗಿವೆ. ಆದರೆ ಆ ಕೆಲಸ ಮಾಡುವಲ್ಲಿ ನಾವು ಯಂತ್ರಗಳಿಂದ ಹೆಚ್ಚಿನ ನೆರವನ್ನು ಪಡೆದಿದ್ದೇವೆ. ಪರಿಣಾಮವಾಗಿ ಖರ್ಚಾದ ಹಣದಲ್ಲಿ ಎಷ್ಟು ಭಾಗ ಜನತೆಯಲ್ಲಿ ವಿತರಣೆ ಆಗಬೇಕಾಗಿತ್ತೋ, ಅಷ್ಟೊಂದು ಆಗಲೇ ಇಲ್ಲ. ರಸ್ತೆ ತಯಾರಿಸುವುದು, ಮನೆ ನಿರ್ಮಿಸುವುದು ಮುಂತಾದವುಗಳಲ್ಲಿ ಮಾನವಶ್ರಮಕ್ಕಿಂತ ಹೆಚ್ಚಿಗೆ ಯಂತ್ರಗಳ ಮೇಲೆ ಹೆಚ್ಚು ಒತ್ತುಕೊಡಲಾಯಿತು. ಇದು ತಪ್ಪು ಅರ್ಥಶಾಸ್ತ್ರ, ನಾವು ಜನರನ್ನು ಕೆಲಸದಲ್ಲಿ ತೊಡಗಿಸಿದರೆ, ಅವರಷ್ಟೇ ಉಳಿತಾಯ ಮಾಡುವುದಿಲ್ಲ, ಬದಲಿಗೆ ಇದರಿಂದ ನಿರುದ್ಯೋಗಿ ಸ್ಥಿತಿಯಲ್ಲಿ ಅವರನ್ನೆ ಅವಲಂಬಿಸಿದ ಅವರ ಕುಟುಂಬದ ಜನರೂ ಗಳಿಸುವಂತಾಗಿ, ಅವರ ಆದಾಯದಲ್ಲಿ ಉಳಿತಾಯದ ಸಾಧ್ಯತೆಗಳು ಹೆಚ್ಚುತ್ತವೆ.*

## ವಸತಿ

ವಸತಿಯ ಸಮಸ್ಯೆಯೂ ಭಾರತಕ್ಕೆ ಒಂದು ಮುಖ್ಯ ಸಮಸ್ಯೆಯಾಗಿದೆ. ಕೇವಲ ನಗರಗಳಲ್ಲಿಯೇ ೧೯೫೧ರ ವರೆಗೆ ೨೫ ಲಕ್ಷ ಮನೆಗಳ ಕೊರತೆ ಇತ್ತು. ೧೯೬೧ರ ವರೆಗೆ ನಗರದ ಜನಸಂಖ್ಯೆಯಲ್ಲಿ ೨.೦೭ ಕೋಟಿಯಷ್ಟು ಹೆಚ್ಚಳದ ಅಂದಾಜಿದೆ, ಇದಕ್ಕಾಗಿಯೇ ೮೯ ಲಕ್ಷ ಮನೆಗಳ ಅವಶ್ಯಕತೆ ಉಂಟಾಗುತ್ತದೆ. ಮೊದಲ ಪಂಚವಾರ್ಷಿಕ ಯೊಜನೆಯ ಅವಧಿಯಲ್ಲಿ ಒಟ್ಟಾರೆ ೧೩ ಲಕ್ಷ ಮನೆಗಳು ತಯಾರಾದವು ಹಾಗೂ ಎರಡನೆಯ ಅವಧಿಯಲ್ಲಿ ೧೯ ಲಕ್ಷ ಮನೆಗಳು ಆಗುವ ಅಂದಾಜಿದೆ. ಈ ಪ್ರಕಾರ ೧೯೬೧ ರಲ್ಲಿ ೫೭ ಲಕ್ಷ ಮನೆಗಳ ಕೊರತೆ ಕೇವಲ ನಗರಗಳಲ್ಲಿ ಉಂಟಾಗುತ್ತದೆ. ಹಳ್ಳಿಗಳಲ್ಲಿ ನೋಡಿದರೆ, ಕನಿಷ್ಠಪಕ್ಷ ಹಳೆಯಮನೆಗಳ ದುರಸ್ತಿ ಹಾಗೂ ಹೊಸನಿರ್ಮಾಣದ ೫ ಕೋಟಿಯವರೆಗೆ ತಲುಪುತ್ತವೆ. ಇದು ಬಹಳ ದೊಡ್ಡ ಕೆಲಸ. ಇದೇ ರೀತಿಯಿಂದ ಕೈಗೆತ್ತಿಕೊಂಡರೆ ದೇಶದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಲು ಸಾಧ್ಯವಾಗಬಹುದು. ಆದರೆ ಇದಕ್ಕಾಗಿ ನಾವು ಸಿಮೆಂಟ ಮತ್ತು ಫೆರೋ ಕಾಂಕ್ರಿಟ್ ಇತ್ಯಾದಿಗಳ ಬದಲು ದೇಶದಲ್ಲಿ ದೊರೆಯುವ ಸಾಧನಗಳ ಬಳಕೆಯ ಮೇಲೆಯೇ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ಸಾದಾ

---

* "It is perhaps surprising that relatively little attention has been given in recent literature on economic development to the great opportunity for increasing capital formation in the under-developed countries by putting unemployed rural labour to work on various capital creating projects, without any necessary belt tightening". Charles Welf & Sidney Surtrin : *Capital formation and Investment in Underdeveloped Areas.*

ಸುಣ್ಣ ಹಾಗೂ ಇಟ್ಟಿಗೆ ಹಾಗೂ ಕಟ್ಟಿಗೆಯನ್ನು ಉಪಯೋಗ ಮಾಡಿ ಹೆಚ್ಚು ಮನೆಗಳನ್ನು ತಯಾರಿಸಬಹುದು. ಅಗ್ಗದ ಮನೆಗಳ ಕೆಲವು ಡಿಸೈನ್ ವಸ್ತು ಪ್ರದರ್ಶನಗಳಲ್ಲಿ ಕಾಣಿಸಿಕೊಳ್ಳುತ್ತವೆ, ಅವುಗಳನ್ನು ಜನಪ್ರಿಯಗೊಳಿಸಲು ಯಾವುದೇ ಗಟ್ಟಿಯಾದ ಹೆಜ್ಜೆಯನ್ನು ಇಡಲಾಗಿಲ್ಲ. ಇದು ವ್ಯಕ್ತಿಗತ ಪ್ರಯತ್ನಗಳಿಗೆ ಹೆಚ್ಚಿನ ಅವಕಾಶ ದೊರೆಯಬಹುದಾದಂತಹ ಕ್ಷೇತ್ರ ಇದು. ಜೊತೆಗೇ ವಿಕೇಂದ್ರಿತ ಆರ್ಥಿಕ ವ್ಯವಸ್ಥೆಯನ್ನು ಅನುಸರಿಸಿದರೆ ಮನೆಯ ಸಮಸ್ಯೆ ಸಾಕಷ್ಟು ಹಗುರವಾಗುತ್ತದೆ. ಯಾಕೆಂದರೆ ಮತ್ತೆ ಉದ್ಯಮ ವ್ಯಾಪಾರಗಳು ಹಳ್ಳಿಗಳ ಕಡೆ ಹೊರಳುತ್ತವೆ. ಇಂದು ದೊಡ್ಡ ನಗರಗಳಲ್ಲಿ ಮನೆಯನ್ನು ಕಟ್ಟಲು ಭೂಮಿಯ ಬೆಲೆ ಅದರ ಒಟ್ಟು ಬೆಲೆಯ ಬಹುದೊಡ್ಡ ಭಾಗವೇ ಆಗುತ್ತದೆ.

**ಸರಕಾರದ ಜವಾಬ್ದಾರಿ**

ವಿಕಾಸೋನ್ಮುಖವಾದ ಭಾರತದ ಆರ್ಥಿಕ ನೀತಿಯ ದಿಕ್ಕಿನ ಕಡೆ ಸಂಕೇತವನ್ನು ಹಿಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ. ತುಂಬ ದೀರ್ಘವಾದ ಅವಧಿಯಿಂದ ಪತನದ ಕಡೆ ಹೋಗುತ್ತಿರುವ ಸ್ಥಿತಿಯನ್ನು ಪ್ರಗತಿಯ ದಿಕ್ಕಿನಲ್ಲಿ ಬದಲಿಸಲು ಪ್ರಯತ್ನ ಮಾಡಬೇಕಾಗಿದೆ. ತಂತಾನೇ ಅಂದು ಕ್ಷೀಣಗತಿಯಿಂದ ವಿಕಾಸದತ್ತ ಹೊರಳಿಕೊಳ್ಳಲಾರದು. ವಾಸ್ತವವಾಗಿ ಯಾವುದೇ ವ್ಯವಸ್ಥೆಯು ಶಿಥಿಲವಾದಾಗ ಅದರ ಸ್ವಯಂಸುಧಾರಣೆಯ (Self correcting) ಸಾಮರ್ಥ್ಯ ಕುಸಿದುಹೋಗಿರುತ್ತದೆ. ವಿಕಾಸದ ಶಕ್ತಿಗಳು ಮೂಡಿಬರಬೇಕು ಹಾಗೂ ಚಾಲನೆಯನ್ನು ಕೊಡಲು ಯೋಜನಾಯುಕ್ತವಾದ ಪ್ರಯತ್ನವನ್ನು ಮಾಡಬೇಕು. ಸ್ವತಂತ್ರ ದೇಶದ ಸರಕಾರದ ಮೇಲೆ ಸ್ವಾಭಾವಿಕ ರೂಪದಲ್ಲಿ ಈ ಜವಾಬ್ದಾರಿ ಬಂದೇ ಬರುತ್ತದೆ.

ತನ್ನ ಈ ಜವಾಬ್ದಾರಿಯನ್ನು ನಿರ್ವಹಿಸಲು ಯೋಜನೆ ಹಾಗೂ ನೀತಿ ನಿರ್ಧಾರದ ಅವಶ್ಯಕತೆ ಬೀಳುತ್ತದೆ. ಆದರೆ ಸರಕಾರವು ಹಲವು ಬಾರಿ ತಪ್ಪು ಮಾಡುತ್ತಿರುತ್ತದೆ. ಅದು ಅರ್ಥವ್ಯವಸ್ಥೆಗೆ ಚಲನೆಯನ್ನು ಕೊಡುವುದರ ಬದಲು ತಾನೇ ಅದರ ಅಂಗವಾಗಿ ನಿಂತುಬಿಡುತ್ತದೆ. ಯಾವುದನ್ನು ಕುರಿತು ಅದು ತನ್ನ ಪ್ರಯತ್ನವನ್ನು ಪ್ರಾರಂಭಿಸಿತ್ತೋ, ಈ ಪ್ರಯತ್ನದಲ್ಲಿ ಅದಕ್ಕೆ ತನ್ನ ಗುರಿ ಮತ್ತು ಉದ್ದೇಶಗಳ ಮರೆಯಾಗಿಬಿಡುತ್ತದೆ.

ಅರ್ಥ ವ್ಯವಸ್ಥೆಯಲ್ಲಿ ಕ್ರಾಂತಿಕಾರಿಯಾದ ಬದಲಾವಣೆಯನ್ನು ತರುವುದು ಸಂಪೂರ್ಣವಾಗಿ ಜನರ ಪ್ರಯತ್ನದಿಂದಲೇ ಸಾಧ್ಯವಾಗುತ್ತದೆ. ಯಾವುದೇ ಸರಕಾರ, ಅದು ಜನತೆಯ ಹೆಸರಿನಲ್ಲಿ 'ಪೀಪಲ್ಸ್ ಡೆಮೊಕ್ರಸಿ' ಎಂಬ ಹೆಸರಿನಿಂದ ಸರ್ವಾಧಿಕಾರವನ್ನು ನಡೆಸತೊಡಗಲಿ, ಅಥವಾ ಅದು ಸರಿಯಾದ ಅರ್ಥದಲ್ಲಿ ಪ್ರತಿನಿಧಿ ಸರಕಾರವೇ ಆಗಿರಲಿ, ಜನತೆಯ ಸ್ಥಾನವನ್ನು ಪಡೆಯಲಾರದು. ಅದು



ಜನತೆಗೆ ಮಾರ್ಗದರ್ಶಕ ಆಗಬಹುದು, ಸಹಾಯಕ ಆಗಬಹುದು, ಜನತೆಯನ್ನು ನಿಯಂತ್ರಿಸಬಹುದು, ಆಜ್ಞೆ ಮಾಡಬಹುದು, ಅದನ್ನು ಗುಲಾಮನನ್ನಾಗಿಯೂ ಮಾಡಬಹುದು. ಇವುಗಳಲ್ಲಿ ಅದು ಯಾವ ರೂಪದಲ್ಲಿ ವ್ಯವಹರಿಸಬಯಸುತ್ತದೆ ಎಂಬುದರ ಮೇಲೆಯೇ ಅದರ ಯೋಜನೆಗಳ ಮಿತಿ ಹಾಗೂ ಸ್ವರೂಪ ಅವಲಂಬಿಸಿರುತ್ತದೆ.

**ನಿಯೋಜನೆಯ ಸ್ವರೂಪ**

ಯೋಜನೆ, ನಿಯೋಜನೆ, ಪ್ಲಾನಿಂಗ್ ಈ ಶಬ್ದಗಳ ಬಳಕೆ ಮೊದಲಾದದ್ದು ರಷ್ಯಾದಲ್ಲಿ. ಅದು ಸಾಮ್ಯವಾದೀ ಅರ್ಥವ್ಯವಸ್ಥೆಯ ಒಂದು ಅಂಗವಷ್ಟೇ ಅಲ್ಲ, ನಿಯೋಜಿತ ಆರ್ಥಿಕ ನೀತಿಯ ಪರಿಣಾಮವೇ ಸಾಮ್ಯವಾದವೆಂದು ಭಾವಿಸಲಾಗುತ್ತದೆ. ಆದರೆ ಇಂದು ನಿಯೋಜನೆ ಅರ್ಥಾತ್ ಪ್ಲಾನಿಂಗ್ ಸಾಮ್ಯವಾದಿಗಳಿಗಷ್ಟೇ ಸೀಮಿತವಾಗಿ ಉಳಿದಿಲ್ಲ. ಅಮೇರಿಕಾ ಮತ್ತು ಬ್ರಿಟನ್ ಕೂಡ ಪ್ಲಾನಿಂಗ್‌ನಲ್ಲಿ ವಿಶ್ವಾಸವಿಡುತ್ತವೆ. ಆದರೆ ರಷ್ಯಾ ಹಾಗೂ ಈ ದೇಶಗಳ ಪ್ಲಾನಿಂಗ್‌ನ ಕಲ್ಪನೆಗಳು ಭಿನ್ನಭಿನ್ನವಾಗಿವೆ. ಸಾಮ್ಯವಾದೀ ದೇಶವು ಒಂದು ಅತಿನಿಯಂತ್ರಿತ ಹಾಗೂ ಕಠೋರ ಜೀವನ ವ್ಯವಸ್ಥೆಯಲ್ಲಿ ವಿಶ್ವಾಸವಿಡುತ್ತದೆ. ಆದ್ದರಿಂದ ಆರ್ಥಿಕ ನೀತಿಯ ಕಾರಣದಿಂದಷ್ಟೇ ಅಲ್ಲ, ಅವರ ವಾದದ ವಿಶೇಷ ಬೇಡಿಕೆಯೇನೆಂದರೆ ಅವರು ಒಂದು ಅತ್ಯಂತ ಸೂತ್ರಬದ್ಧ ಯೋಜನೆಯನ್ನು ತಯಾರಿಸಬೇಕು, ಹಾಗೂ ಸಂಪೂರ್ಣ ಆರ್ಥಿಕ ನಿಯಮಗಳು ಉತ್ಪಾದನೆ, ವಿತರಣೆ, ಮತ್ತು ಉಪಭೋಗವನ್ನು ಸಂಪೂರ್ಣ ನಿಯಂತ್ರಿಸಬೇಕು. ಇವುಗಳ ವಿರುದ್ಧವಾಗಿ ಪ್ರಜಾಪ್ರಭುತ್ವವಾದಿಯು ತನ್ನ ವಿಶೇಷ ದೃಷ್ಟಿಕೋನದ ಕಾರಣದಿಂದಲೇ ಹೆಚ್ಚು ನಿಯಂತ್ರಿತ ಯೋಜನೆಯನ್ನು ಅದು ಆರ್ಥಿಕ ಕಾರಣಕ್ಕಾಗಿ ಸಾಧ್ಯವಾದರೂ ಅದನ್ನು, ಅನುಸರಿಸುವುದಿಲ್ಲ. ಇದೇ ಆಧಾರದ ಮೇಲೆ ೧೯೪೭ ರಲ್ಲಿ ಬ್ರಿಟನ್ನಿನ ನಾಲ್ಕನೆಯ ವಾರ್ಷಿಕ ಯೋಜನೆಯಲ್ಲಿ ಬರೆಯಲಾಗಿತ್ತು. "ಯುನೈಟೆಡ್ ಕಿಂಗಡಮ್‌ನ ಆರ್ಥಿಕ ಯೋಜನೆ ಈ ಕೆಲವು ಮೂಲಭೂತ ತತ್ವಗಳ ಮೇಲೆ ಆಧಾರಿತವಾಗಿದೆ. ಆರ್ಥಿಕ ತಥ್ಯ ಅಂದರೆ, ಯು.ಕೆ.ಯ. ಅರ್ಥವ್ಯವಸ್ಥೆ ಅಂತಾರಾಷ್ಟ್ರೀಯ ವ್ಯಾಪಾರದ ಮೇಲೆ ಅತಿ ಹೆಚ್ಚು ಅವಲಂಬಿತವಾಗಿದೆ. ರಾಜಕೀಯ ತಥ್ಯ ಅಂದರೆ ಅದು (ಯು.ಕೆ.) ಒಂದು ಪ್ರಜಾ ಪ್ರಭುತ್ವವಾಗಿದೆ ಮತ್ತು ಉಳಿಯುತ್ತದೆ. ಹಾಗೂ ಆಡಳಿತಾತ್ಮಕ ತಥ್ಯವೆಂದರೆ, ಯಾವುದೇ ಯೋಜನಾ ನಿರೂಪಕನು ಮುಂದಿನ ಆರ್ಥಿಕ ವಿಕಾಸದ ಸಾಮಾನ್ಯ ಪ್ರವೃತ್ತಿಗಿಂತ ಹೆಚ್ಚಿನ ಜ್ಞಾನವನ್ನು ಇಟ್ಟುಕೊಳ್ಳಲಾರ."

**ನಿಯೋಜನೆ ಮತ್ತು ಪ್ರಜಾಪ್ರಭುತ್ವ**

ಆರ್ಥಿಕ ಯೋಜನೆಯಲ್ಲಿ ಒಂದು ಅಂತಿಮ ತಥ್ಯಕ್ಕೆ ಅತ್ಯಧಿಕ ಮಹತ್ವವಿದೆ. ಯಾವುದೇ ಮನುಷ್ಯ, ಯಾವುದೇ ಜೀವಿ, ವಿಕಾಸಶೀಲ ಅರ್ಥವ್ಯವಸ್ಥೆಯ ಭಾವೀ ವ್ಯವಹಾರದ ಸಂಬಂಧದಲ್ಲಿ ಭವಿಷ್ಯವಾಣಿಯನ್ನು ಹೇಳಿದರೆ, ಅವನು ಕೇವಲ ತನ್ನ ಹಿಂದಿನ ಅನುಭವ ಹಾಗೂ ಕಲ್ಪನೆಗಳ ಆಧಾರದ ಮೇಲೆಯೇ ಕೆಲವು ಅಂದಾಜುಗಳನ್ನು ಮಾಡುತ್ತಾನೆ. ಅವು ಎಲ್ಲವೂ ಸತ್ಯವಾಗಿಬಿಡುತ್ತವೆಂದೇನೂ ನಿಶ್ಚಿತವಲ್ಲ. ಆದ್ದರಿಂದ ಅವನು ಅವುಗಳಲ್ಲಿ ಯಾವಾಗಲೂ ಪರಿವರ್ತನೆಗಾಗಿ ಸಿದ್ಧನಾಗಿರಬೇಕು. ಆದರೆ ಸರ್ವಾಧಿಕಾರಿಯ ಆಳ್ವಿಕೆಯು ಪರಿವರ್ತನೆಯನ್ನು ಸ್ವೀಕಾರ ಮಾಡುವುದರ ಬದಲು ಹಣದ ಚಲನೆಯನ್ನು ತನ್ನ ಭವಿಷ್ಯವಾಣಿಗೆ ಅನುಸಾರವಾಗಿ ಬದಲಿಸುವ ಆಗ್ರಹಮಾಡುತ್ತದೆ, ಅದರೊಳಗಿಂದ ಸಂಕಟ ಹುಟ್ಟಿಕೊಳ್ಳುತ್ತದೆ. ಇದೇ ಪ್ರಕಾರ ಯಾವುದಾದರೂ ಯೋಜನಾ ನಿರೂಪಕ ಯೋಜನೆಗೆ ಸಂಬಂಧಿಸಿದ ವಿಭಿನ್ನ ಅಂಗಗಳಲ್ಲಿ ಸಂಭಾವ್ಯ ಪರಿವರ್ತನೆಗಾಗಿ ಅವಕಾಶವನ್ನು ತೊರೆದು ನಡೆಯುವುದಿಲ್ಲವಾದರೆ ಬೇರೆ ಬೇರೆ ಬಗೆಯ ಸಂಕಟಗಳು ಎದ್ದುನಿಲ್ಲುತ್ತವೆ. ಅವುಗಳನ್ನು ತಳ್ಳಿಹಾಕಲು ಸರಕಾರವು ಹೆಚ್ಚು ಹೆಚ್ಚು ಅಧಿಕಾರವನ್ನು ಕೈಗೆ ತೆಗೆದುಕೊಳ್ಳುತ್ತ ಹೋಗುತ್ತದೆ. ಮೊದಲ ಪ್ರಕಾರವು ರಷ್ಯಾ ಮುಂತಾದ ಸಾಮ್ಯವಾದೀ ದೇಶಗಳಲ್ಲಿ ಕಾಣಿಸಿದರೆ, ಭಾರತದಲ್ಲಿ ಎರಡನೆಯ ರೀತಿಯದು ಕಾಣಿಸುತ್ತದೆ. ಒಂದರಲ್ಲಿ ಸರ್ವಾಧಿಕಾರದ ಅರ್ಥನೀತಿಯ ನಿಯಂತ್ರಣವಿದ್ದರೆ, ಮತ್ತೊಂದರಲ್ಲಿ ಅರ್ಥನೀತಿಯ ಕಷ್ಟಗಳು ಸರ್ವಾಧಿಕಾರಕ್ಕೆ ಜನ್ಮ ಕೊಡುತ್ತವೆ. ನಮಗೆ ಎರಡರಿಂದಲೂ ಬಚಾವಾಗಬೇಕಾಗಿದೆ.

ಮಾನವ ಜ್ಞಾನದ ಈ ಮಿತಿಗಳ ಆಚೆಗೂ ನಿಯೋಜನೆಯ ಮಿತಿಗಳನ್ನು ಜೀವನದ ಅನ್ಯ ಮೌಲ್ಯಗಳ ಆಧಾರದ ಮೇಲೆ ನಿಶ್ಚಿತಗೊಳಿಸಬೇಕಾಗುತ್ತದೆ. ಸರಕಾರವೇ ಸಂಪೂರ್ಣ ಆರ್ಥಿಕ ಉತ್ಪಾದನೆಯ ಒಡೆಯನಾದಾಗ ಅಲ್ಲಿ ಯೋಜನೆಗಳನ್ನು ತಯಾರಿಸುವುದು ಮತ್ತು ಅವನ್ನು ಕಾರ್‍ಯರೂಪಕ್ಕೆ ತರುವುದು ಸರಳವಾಗಿರುತ್ತದೆ. ವ್ಯಕ್ತಿಗಳಿಗೆ ಆರ್ಥಿಕ ಕ್ಷೇತ್ರದಲ್ಲಿ ಮುಕ್ತ ವಿನಾಯಿತಿ ಇದ್ದಾಗ ಅಲ್ಲಿಯೂ ಹೆಚ್ಚಿನ ಕಷ್ಟಗಳೇನೂ ಇಲ್ಲ. ಆದರೆ ಮಿಶ್ರ ಆರ್ಥಿಕ ವ್ಯವಸ್ಥೆ ಇರುವಲ್ಲಿ ಯೋಜನಾ ನಿರೂಪಣೆಯ ಕಾರ್ಯ ಕಷ್ಟಸಾಧ್ಯವಾದ ಕೆಲಸ. ಉದಾಹರಣೆಗಾಗಿ ಕೇವಲ ಸೈನ್ಯ ಸಂಚಾಲನೆಯನ್ನು ಮಾಡುವುದಿದ್ದರೆ ಆ ಕಾರ್ಯವನ್ನು ಸರಳವಾಗಿ ಮಾಡಬಹುದು, ಸಾಮಾನ್ಯ ರೀತಿಯಲ್ಲಿ ರಸ್ತೆಯ ಮೇಲೆ ಸಾರಿಗೆ ವ್ಯವಸ್ಥೆ ಮಾಡುವುದಿದ್ದರೆ ಟ್ರಾಫಿಕ್ ಪೋಲೀಸ್ ನಿಯಂತ್ರಣ ಹಾಗೂ ಸಂಚಾರ ನಿಯಮಗಳ ಪಾಲನೆಯಿಂದ ಮಾಡಬಹುದಾಗಿದೆ. ಆದರೆ ಪ್ರಧಾನ ಮಂತ್ರಿಯ ಆಗಮನವಾದಾಗ ಇದ್ದಕ್ಕಿದ್ದ ಹಾಗೆ ರಸ್ತೆಯಲ್ಲಿನ ಸಂಚಾರವನ್ನು ನಿಷೇಧಿಸಲಾಗುತ್ತದೆ, ಆಗ ಬಹಳ ತೊಂದರೆ, ಕ್ಷೋಭೆ ಉಂಟಾಗುತ್ತದೆ. ಪ್ರಧಾನ ಮಂತ್ರಿಯ ಗಾಡಿಯೂ ಅನ್ಯ ಸಂಚಾರೀ ಸಾಧನಗಳೊಂದಿಗೇನೇ ಟ್ರಾಫಿಕ್‌ನ ನಿಯಮಗಳನ್ನು ಪಾಲನೆ ಮಾಡುತ್ತಲೇ ಹೋದರೆ ಇಂಥ ಕ್ಷೋಭೆಯನ್ನೂ ಬದಿಗೆ ಸರಿಸಬಹುದು. ಆದರೆ ಸಾಧಾರಣ ಪ್ರವೃತ್ತಿಯು ಸರಕಾರದ ಯೋಜನೆಗಳಿಗೆ ಆದ್ಯತೆ ನೀಡುವುದಾಗಿದೆ.



**ನೀತಿ ಮತ್ತು ನಿಯೋಜನೆ**

ಪ್ರಜಾಸತ್ತೆಯ ದೇಶಗಳಲ್ಲಿ ಸರಕಾರವು ಕರೆನ್ಸಿ ಮತ್ತು ಹಣಕಾಸು ನೀತಿಗಳು, ಅಂತಾರಾಷ್ಟ್ರೀಯ ವ್ಯಾಪಾರದ ನಿಯಂತ್ರಣ ಮುಂತಾದವುಗಳಿಂದ ಅರ್ಥವ್ಯವಸ್ಥೆಯ ಕ್ರಿಯಾಕಲಾಪವನ್ನು ಸರಿಯಾಗಿಡುತ್ತದೆ. ಅವುಗಳ ಕೆಲಸ ಯೋಜನಾ ನೀತಿ ನಿರ್ಧರಿಸುವುದು, ಬಜೆಟ್ ಮುಂತಾದವುಗಳವರೆಗೇ ಸೀಮಿತವಿರುತ್ತದೆ. ಅವು ಒಂದೊಂದು ಕ್ಷೇತ್ರ, ಒಂದೊಂದು ಘಟಕದ ಕ್ರಿಯಾಕಲಾಪದ ಚಿಂತೆ ಮಾಡುವುದಿಲ್ಲ. ಇದನ್ನು ನಾವು ಬೃಹತ್ ಆರ್ಥಿಕ ನಿಯೋಜನೆ (macro economic planning) ಎಂದು ಹೇಳಬಹುದಾಗಿದೆ. ಇದಕ್ಕೆ ವಿರುದ್ಧವಾಗಿ ಚಿಕ್ಕ ಚಿಕ್ಕ ಗುರಿಗಳ ನಿರ್ಧಾರ ಸೂಕ್ಷ್ಮಾತಿಸೂಕ್ಷ್ಮ ಆರ್ಥಿಕ ಕಾರ್ಯಕಲಾಪದ ಯೋಜನೆ ಮಾಡಿದರೆ ಅದು ಅಣು ಆರ್ಥಿಕ (micro economic) ಯೋಜನೆ ಎಂದು ಹೇಳಲಾಗುತ್ತದೆ. ರಷ್ಯಾ ಎರಡನೆಯ ಪದ್ಧತಿಯನ್ನು ಅನುಸರಿಸುತ್ತಿದೆಯಾದರೆ ಅಮೆರಿಕೆ ಮತ್ತು ಬ್ರಿಟನ್ ಮೊದಲನೆಯ ಪದ್ಧತಿಯನ್ನು ಅನುಸರಿಸುತ್ತಿವೆ. ನಾವು ಎರಡನ್ನೂ ಸೇರಿಸಿ ಜೊತೆಗೂಡಿಸುವ ಪ್ರಯತ್ನ ಮಾಡಿದ್ದೇವೆ. ಆದರೆ ಪೂರ್ಣಸಮಾಜವಾದ ಆಗದ ಕಾರಣ ಎರಡನೆಯದು ವಿಫಲವಾಗುತ್ತದೆ, ಸಾರ್ವಜನಿಕ ಕ್ಷೇತ್ರದ ವಿಸ್ತಾರ ಹೆಚ್ಚಾಗಿರುವುದರಿಂದ ಮೊದಲನೆಯದು ಪ್ರಭಾವಿಯಾಗಲು ಬಿಡುವುದಿಲ್ಲ. ಸರಕಾರವು ತನ್ನ ಕೈಯಲ್ಲಿ ಬಹಳ ಸ್ವಲ್ಪ ಹಾಗೂ ಅಪರಿಹಾರ್ಯ ಉದ್ಯಮಗಳನ್ನು ತೆಗೆದುಕೊಂಡು ಉಳಿದವುಗಳನ್ನು ಕುಶಲ ನಿಯಂತ್ರಣದ (strategic controls) ಮೂಲಕ ಹಿಡಿತದಲ್ಲಿಟ್ಟುಕೊಳ್ಳಬೇಕು.

**ದ್ವಿತೀಯ ಪಂಚವಾರ್ಷಿಕ ಯೋಜನೆ**

ಭಾರತದಲ್ಲಿ ಈವರೆಗೆ ಎರಡು ಯೋಜನೆಗಳು ಆಗಿವೆ. ಮೊದಲನೆಯದು ಕೇವಲ ಕೆಲವೇ ಸ್ಕೀಮುಗಳ ಸಂಕಲನ ಮಾತ್ರವಾಗಿತ್ತು. ಆದರೆ ಎರಡನೆಯದರಲ್ಲಿ ದೇಶದ ಆರ್ಥಿಕ ಸ್ತರದಲ್ಲಿ ಮೂಲಭೂತ ಪರಿವರ್ತನೆ ತರುವ ಯೋಜನೆಯನ್ನು ತಯಾರಿಸಲಾಯಿತು. ರಾಷ್ಟ್ರೀಯ ಆದಾಯದಲ್ಲಿ ಶೇ. ೨೫ ಪ್ರತಿಶತ ಬೆಳೆವಣಿಗೆ, ಅಸಮಾನತೆಯನ್ನು ಕಡಿಮೆಗೊಳಿಸುವುದು, ಮೂಲ ಮತ್ತು ಭಾರೀ ಉದ್ಯಮಗಳ ವಿಕಾಸಕ್ಕೆ ಒತ್ತುಕೊಡುತ್ತ ದೇಶದಲ್ಲಿ ವೇಗವಾದ ಔದ್ಯೋಗೀಕರಣ ಹಾಗೂ

ರೋಜಗಾರಗಳನ್ನು ವಿಸ್ತರಿಸುವುದು ಈ ಗುರಿಗಳನ್ನು ಈ ಯೋಜನೆಯ ಎದುರಿನಲ್ಲಿ ಇಡಲಾಗಿತ್ತು. ಇವುಗಳನ್ನು ಸಾಧ್ಯವಾಗಿಸಿಕೊಳ್ಳಲು ೪೮೦೦ ಕೋಟಿ ರೂಪಾಯಿಗಳ ವೆಚ್ಚದ ಅಂದಾಜು ಮಾಡಲಾಗಿತ್ತು. ಸಮಾಜವಾದದ ಉದ್ದೇಶಕ್ಕೆ ಅನುಗುಣವಾಗಿ ಸರಕಾರದ ಮೂಲಕ ೩೮೦೦ ಕೋಟಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ೨೪೦೦ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ವ್ಯವಸ್ಥೆ ಇತ್ತು. ಸಾಧನ ಮೂಲಗಳ ಪುಷ್ಟಿಯಿಂದಾಗಿ ಮಾಡಲಾದ ಅಂದಾಜು ಏನೆಂದರೆ ೮೦೦ ಕೋಟಿ ರೂಪಾಯಿ ತೆರಿಗೆಗಳಿಂದ, ೧೨೦೦ ಕೋಟಿ ರೂಪಾಯಿ ಸಾಲದಿಂದ, ೮೦೦ ಕೋಟಿ ರೂಪಾಯಿ ವಿದೇಶಗಳಿಂದ, ೪೦೦ ಕೋಟಿ ರೂಪಾಯಿ ಬಜೆಟ್ಟಿನ ಅನ್ಯಸೂತ್ರಗಳಿಂದ ಹಾಗೂ ೧೨೦೦ ಕೋಟಿ ರೂಪಾಯಿ ಕೊರತೆಯ ಆರ್ಥಿಕ ವ್ಯವಸ್ಥೆಯಿಂದ ಪಡೆದುಕೊಳ್ಳಲಾಗುವುದು. ಉಳಿದ ೪೦೦ ಕೋಟಿ ರೂಪಾಯಿಯ ಕೊರತೆಯನ್ನು ಹೇಗೆ ತುಂಬಿಕೊಳ್ಳಲಾಗುವುದು ಎಂಬ ಬಗ್ಗೆ ಯಾವುದೇ ವಿಧಾನವನ್ನು ಸೂಚಿಸಿರಲಿಲ್ಲ.

ಈ ಯೋಜನೆ ತಯಾರಾದಾಗ ಇದು ಅತ್ಯಂತ ಮಹತ್ವಾಕಾಂಕ್ಷೆಯದು ಹಾಗೂ ಲಭ್ಯಸಾಧನಗಳ ಹೊರಗಿನದು ಎಂದು ಹೇಳಲಾಗಿತ್ತು. ಜೊತೆಗೆ ಕೃಷಿಯನ್ನು ಕಡೆಗಣಿಸಿ ಔದ್ಯೋಗೀಕರಣದ ಮೇಲೆ, ಅದರಲ್ಲೂ ಭಾರೀ ಉದ್ಯಮಗಳ ಮೇಲೆ ಒತ್ತುಕೊಟ್ಟಿದ್ದು ತಪ್ಪಾಗಿತ್ತು. ದೇಶದ ನಿರುದ್ಯೋಗವನ್ನು ನಿವಾರಿಸುವ ಯಾವುದೇ ಯೋಜನೆ ಅಲ್ಲಿರಲಿಲ್ಲ. ಸರಕಾರವು ತನ್ನ ಸಾಮರ್ಥ್ಯಕ್ಕಿಂತ ಹೆಚ್ಚಿನ ಭಾರವನ್ನು ತನ್ನ ಮೇಲೆ ಎಳೆದುಕೊಂಡಿತ್ತು. ತೆರಿಗೆಯ ಭಾರ ಹೊರೆಯಾಗಬಹುದಾಗಿತ್ತು ಇತ್ಯಾದಿ. ಕಳೆದ ಎರಡೂವರೆ ವರ್ಷಗಳ ಅನುಭವವು ಈ ವಿಶ್ಲೇಷಣೆಯನ್ನು ಸತ್ಯವೆಂದು ಸಾಬೀತುಮಾಡಿದೆ.

ಯೋಜನಾ ಆಯೋಗವು ಮೇ ೧೯೫೮ರಲ್ಲಿ ಯೋಜನೆಯ ಕಾರ್ಯಾಚರಣೆಯ ಸಿಂಹಾವಲೋಕನ ಮಾಡಿದೆ. ಅದರ ಪ್ರಕಾರ ಈಗಾಗಲೇ ಹೇಳಿದ ಅಂಕಿ ಸಂಖ್ಯೆಗಳಲ್ಲಿ ಅಂದಾಜುಗಳಲ್ಲಿ ಬದಲಾವಣೆ ಆಗಿದೆ. ಈಗ ರೆವಿನ್ಯೂದ ಆದಾಯದಲ್ಲಿ ಉಳಿತಾಯ ೭೫೯ ಕೋಟಿ, ರೈಲ್ವೆಯಿಂದ ೨೫೦ ಕೋಟಿ, ಸಾಲದಿಂದ ೯೮೪ ಕೋಟಿ, ಅನ್ಯಮೂಲಗಳಿಂದ ೨೯ ಕೋಟಿ ರೂಪಾಯಿ, ವಿದೇಶಗಳಿಂದ ೧೦೩೮ ಕೋಟಿ ರೂಪಾಯಿ ಹಾಗೂ ಕೊರತೆಯ ಅರ್ಥ ವ್ಯವಸ್ಥೆಯಿಂದ ೧೨೦೦ ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ. ಈ ರೀತಿ ಒಟ್ಟು ಆದಾಯದ ಅಂದಾಜು ೪೨೬೦ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಯೋಜನೆಯನ್ನು ಹೆಚ್ಚಿಸಿ ೪೫೦೦ ಕೋಟಿ ರೂಪಾಯಿ ಮಾಡುವ ಸಲಹೆಯನ್ನು ನೀಡಲಾಗಿದೆ. ನವೆಂಬರ್ ೧೯೫೮ರ ಆಯೋಗದ ಒಂದು ಟಿಪ್ಪಣಿಯ ಪ್ರಕಾರ ೪೫೦೦ ಕೋಟಿ ರೂಪಾಯಿಗಳನ್ನು ಸಂಗ್ರಹಿಸುವುದು ಸಂಭವನೀಯವಾಗಿಲ್ಲ. ಆದ್ದರಿಂದ ಇಳಿಸಿ ೪೨೦೦ ಕೋಟಿ ರೂಪಾಯಿ ಮಾಡೋಣ ಎಂಬ ಸಲಹೆಯನ್ನು



ಇಡಲಾಗಿದೆ. ಅಂದಾಜಿನಲ್ಲಿಯೂ ಕೆಲವು ಪರಿವರ್ತನೆ ಮಾಡಲಾಗಿದೆ. ರಾಷ್ಟ್ರೀಯ ವಿಕಾಸ ಪರಿಷತ್ತು ಈ ಸಲಹೆಗಳನ್ನು ಅಮಾನ್ಯಮಾಡಿದೆ.

ಯೋಜನೆಯ ಗುರಿಗಳು (targets) ಹಾಗೂ ಅಂದಾಜುಗಳು (estimates) ಇವುಗಳಲ್ಲಿನ ತಪ್ಪುಗಳು ಮಾನವಸಹಜವಾಗಿವೆ. ಹಾಗಿದ್ದರೂ ತುಸು ಹೆಚ್ಚು ಗಮನಕೊಟ್ಟಿದ್ದರೆ ಇದನ್ನು ಸಾಕಷ್ಟು ಸುಧಾರಣೆ ಮಾಡಬಹುದಾಗಿತ್ತು. ಆದರೆ ನಮ್ಮ ದೇಶದಲ್ಲಿ ಅಂಕಿಸಂಖ್ಯೆಗಳನ್ನು ಸಂಗ್ರಹಿಸುವುದು ಹಾಗೂ ವಿವೇಚಿಸುವ ಯಾವುದೇ ಒಳ್ಳೆಯ ವ್ಯವಸ್ಥೆಯಿಲ್ಲ, ಹಾಗೆಯೇ ವಿಶ್ವಸನೀಯವಾಗಿದ್ದು ತಕ್ಷಣ ದೊರಕುವ ವ್ಯವಸ್ಥೆಯೂ ಇಲ್ಲ. ಸರಕಾರದ ಕೆಂಪುಪಟ್ಟಿತನದಲ್ಲಿ (ರೆಡ್ ಟೇಪಿಸಂ) ಆಗುವುದೇ ಹಾಗೆ. ಅಂದಾಜುಗಳು ಒಮ್ಮೆ ಸರಿಯೇ ಆಗಿದ್ದರೆ ಕೂಡ ಭಾರತದ ಸಮಸ್ಯೆಗಳನ್ನು ಪರಿಹರಿಸುವುದು ದೂರ ಉಳಿಯಿತು, ಅದರ ಸಾಮರ್ಥ್ಯವನ್ನು ಪಡೆದುಕೊಳ್ಳುವ ದಿಕ್ಕಿನಲ್ಲಿ ಮುಂದುವರಿಯಲೂ ನಮಗೆ ಸಾಧ್ಯವಾಗುತ್ತಿಲ್ಲವೆಂಬುದು ಮಹತ್ವದ ಸವಾಲಾಗಿದೆ.

**ಯೋಜನೆಯ ಮೌಲಿಕವಾದ ತಪ್ಪು**

ಯೋಜನೆಯ ಎಲ್ಲಕ್ಕಿಂತ ದೊಡ್ಡ ತಪ್ಪೆಂದರೆ, ಅದರ ಮೂಲಕ ಭಾರತದ ಪರಿಸ್ಥಿತಿಗಳ ಬಗೆಗೆ ವಿಚಾರ ಮಾಡದಿರುವುದು. ಅದು ಭಾರತದ ಸಾಧನಗಳ ವಿಚಾರವನ್ನೂ ಮಾಡಲಿಲ್ಲ, ಅದರ ಅವಶ್ಯಕತೆಗಳ ಬಗೆಗೂ ಚಿಂತಿಸಲಿಲ್ಲ. ಅದು ರಷ್ಯಾ ಹಾಗೂ ಯುರೋಪ್‌ನ ಔದ್ಯೋಗೀಕರಣದ ಅನುಕರಣೆಯ ಒಂದು ದುರ್ಬಲ ಪ್ರಯತ್ನ. ಇದರಿಂದಲೂ ಈ ದೇಶದ ಎದುರಿನ ಔದ್ಯೋಗೀಕರಣದ ಕಾಲದಲ್ಲಿ ಮತ್ತು ಅದರ ಪರಿಣಾಮ ಸ್ವರೂಪವಾಗಿ ಹುಟ್ಟಿಕೊಂಡ ಸಮಸ್ಯೆಗಳ ಬಗೆಗೂ ವಿಚಾರ ಮಾಡಲಿಲ್ಲ. ಬೇರೆ ಬೇರೆ ಯೋಜನೆಗಳು ಹಾಗೂ ಕ್ಷೇತ್ರಗಳ ನಡುವೆ ಸಮತೋಲ ಕಾಪಾಡಲಿಲ್ಲ, ಸಮನ್ವಯವನ್ನೂ ಸಾಧಿಸಲಿಲ್ಲ. ಯಾವುದೇ ಯೋಜನೆಯನ್ನು ಪೂರ್ಣಗೊಳಿಸಲು ಹಣವಷ್ಟೇ ಅಲ್ಲ, ಭೌತಿಕ ಹಾಗೂ ಮಾನವೀಯ ಸಾಧನೆಗಳ ಅವಶ್ಯಕತೆಯಿದೆ. ನಮ್ಮ ಸಂಪೂರ್ಣ ಗಮನ ಸಂಪನ್ಮೂಲವನ್ನು ಹುಡುಕುವುದು ಮತ್ತು ಅದರ ಖರ್ಚಿನ ಪ್ರಮಾಣಕ್ಕನುಸಾರವಾಗಿ ಸಫಲತೆಯನ್ನು ಅಂದಾಜು ಮಾಡುವುದರಲ್ಲಿ ತೊಡಗಿದೆ. ಕನಿಷ್ಠಪಕ್ಷ ಖರ್ಚಿಗಿಂತ ಹೆಚ್ಚಿನ ಲಾಭದ ವಿಚಾರವೇ ಮರೆತುಹೋಗಿದೆ. ನಾವು ಮಾನವೀಯ ವಿಕಾಸದ ಗುರಿಯನ್ನು ಇಟ್ಟುಕೊಳ್ಳಬೇಕಾಗಿತ್ತು. ಆದರೆ ನಾವು ಭೌತಿಕ ಗುರಿಯನ್ನು ಇಟ್ಟುಕೊಂಡೆವು ಮತ್ತು ಅವುಗಳ ಆಧಾರವೂ ಹಣಕಾಸಿನ ಗುರಿಯೆಂದು ಭಾವಿಸಿದೆವು.

**ಮೂರನೆಯ ಯೋಜನೆ**

ಈಗ ಮೂರನೆಯ ಯೋಜನೆಯ ಚರ್ಚೆ ಶುರುವಾಗಿದೆ. ಭಾರತದ ಕೃಷಿ ಮತ್ತು ಅದರ ವಿಭಿನ್ನ ಅಂಗಗಳ ರೂಪದಲ್ಲಿ ನಿಂತುಕೊಂಡ ವಿಕೇಂದ್ರೀಕೃತ ಉದ್ಯಮಗಳಾಗಿರಲಿ, ಈ ದಿಸೆಯಲ್ಲಿ ನಾವು ಹಿಂದಿನ ಪುಟಗಳಲ್ಲಿ ಸಾಕಷ್ಟು ಗಮನ ಸೆಳೆದಿದ್ದು ಅವೇ ಭಾರತದ ಯೋಜನೆಗಳ ಆಧಾರವಾಗಿವೆ. ವಿಕೇಂದ್ರಿತ ಕೃಷಿ ಔದ್ಯೋಗಿಕ ಗ್ರಾಮಸಮಾಜದ ಬೆನ್ನೆಲುಬು ಆಗಬಹುದು. ಅದನ್ನು ವಿಕಾಸ ಮಾಡುವುದು, ಸಂಸ್ಥೆಗೆ ಸಂಬಂಧಿಸಿದ ವ್ಯವಸ್ಥೆಗಳನ್ನು ನಿರ್ಮಾಣ ಮಾಡುವುದು, ಇದೇ ಸರಕಾರದ ಯೋಜನೆಗಳ ಕೆಲಸ ಆಗಬಹುದು.

ದೇಶದ ಅರ್ಥವ್ಯವಸ್ಥೆಯ ಕ್ರಾಂತಿಕಾರಿಯಾದ ಅಭಿವೃದ್ಧಿ ಕಾರ್ಯಕ್ರಮವನ್ನು ನಿರೂಪಿಸುವಾಗಲೂ, ಮೂರನೆಯ ಯೋಜನೆಯು ಎರಡನೆಯದರ ಸಂಬಂಧವನ್ನು ಕತ್ತರಿಸಿಕೊಳ್ಳದಂತೆ ಗಮನವಿಟ್ಟುಕೊಳ್ಳಬೇಕಾಗುತ್ತದೆ. ಗಡಿಯಾರದ ಪೆಂಡ್ಯುಲಮ್ ಹಾಗೆ ಪರಿಸ್ಥಿತಿಗಳಿಂದ ಪೆಟ್ಟು ತಿಂದು ಅತ್ತಿಂದಿತ್ತ ತೂಗಾಡುವುದರಿಂದ, ನಾವು ಸಮಯ, ಶಕ್ತಿ, ಮತ್ತು ಸಾಧನಗಳ ಅಪವ್ಯಯವನ್ನೇ ಮಾಡುತ್ತೇವೆ. ಬಹಳ ವೆಚ್ಚ ಮಾಡಿ ಎರಡನೆಯ ಯೋಜನೆಯ ಅವಧಿಯಲ್ಲಿ ದೊರೆತ ಸಾಧನಗಳನ್ನು ಈ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬಹುದು. ಹಾಗಾಗಿ ನಾವು ಅವುಗಳನ್ನು ವ್ಯರ್ಥ ಹೋಗಗೊಡಬಾರದು, ಹಾಗೂ ನಮ್ಮ ಅರ್ಥವ್ಯವಸ್ಥೆಯಲ್ಲಿ ನಾವು ಹುಟ್ಟು ಹಾಕುತ್ತಿರುವ ಅಸಮತೋಲನವನ್ನು ಸರಿಪಡಿಸಿಕೊಳ್ಳುತ್ತ ಮುಂದೆ ಸಾಗಿದರೆ ವಿಕಾಸದ ವ್ಯವಸ್ಥೆಯನ್ನು ಮಾಡಬಹುದು.

* * * *



## ೧೩. ಉಪಸಂಹಾರ

ಈ ಪುಸ್ತಕ ೧೯೫೮ರಲ್ಲಿ ಪ್ರಕಾಶನಗೊಂಡಿತು. ಸನ್ಮಾನ್ಯ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು 'ವಿಕಾಸದ ಒಂದು ದಿಕ್ಕಿನ' ಕಡೆ ಸಂಕೇತ ಮಾಡಿದರು. ಇದು ಭಾರತೀಯ ಆರ್ಥಿಕ ನೀತಿಯ ಆಧಾರದ ಮೇಲೆ ಅನುಸರಿಸಬಹುದಾದದ್ದು. ಅವರು ನೀಡಿದ್ದ ಸೂಚನೆಗಳನ್ನು ನಾವು ಗಮನದಲ್ಲಿರಿಸಿಕೊಂಡಿದ್ದರೆ ಇವತ್ತಿನ ದಯನೀಯ ಪರಿಸ್ಥಿತಿ ನಿರ್ಮಾಣ ಆಗುತ್ತಿರಲಿಲ್ಲ. ಪಂಡಿತರು ಧರ್ಮಶಾಸ್ತ್ರಗಳ ಆಧಾರದ ಮೇಲೆ 'ಏಕಾತ್ಮ ಮಾನವದರ್ಶನ'ದ ಕಡೆಗೆ ಗಮನ ಸೆಳೆದಿದ್ದರು. ಅದು ವಿಶ್ವಶಾಂತಿಗೆ ಬೇಕಾದ ವ್ಯವಸ್ಥೆಯಾಗಿದೆ. ಯಾಕೆಂದರೆ ಸಂಪೂರ್ಣ ಜಗತ್ತು ಈ ಕಾಲದಲ್ಲಿ 'ಬಂಡವಳವಾದ' ಮತ್ತು 'ಸಮಾಜವಾದ' ಈ ಎರಡರ ಭಯಾನಕತೆಯಿಂದಲೂ ಸಂಕಷ್ಟಕ್ಕೆ ಗುರಿಯಾಗಿದೆ.

ಮೊದಲಿನ 'ಎರಡು ಮಾತು' ಗಳಲ್ಲಿ ಮಾನ್ಯ ದೀನ್ ದಯಾಳರು 'ಭಾರತೀಯ ಆರ್ಥಿಕ ನೀತಿ'ಯ ಮೂಲಕ 'ಪ್ರಾಚೀನ ಭಾರತದ ಆರ್ಥಿಕ ಸಂಬಂಧಿ ಕಲ್ಪನೆಗಳು ಅಥವಾ ಆಧುನಿಕ ಭಾರತದ ಆರ್ಥಿಕ ವ್ಯವಸ್ಥೆ ಮತ್ತು ನೀತಿಗಳು' ಎಂಬುದನ್ನು ಅರಿವಾಗುವಂತೆ ತಿಳಿಸಿದ್ದಾರೆ. ಹಳೆಯದರ ಶೋಧದಲ್ಲಿ ಇತಿಹಾಸ ತಜ್ಞ ತೊಡಗಿದಾಗ, ಆಧುನಿಕದ ನಿರ್ಮಾಣದ ಆಧಾರವು ರಾಜಕೀಯ ತಜ್ಞರ ವಿವೇಚನೆ ಆಯಿತು. ಅರ್ಥಶಾಸ್ತ್ರಜ್ಞರ ಮಹತ್ವವು ಆರ್ಥಿಕ ನೀತಿಯ ನಿರ್ಧಾರದಲ್ಲಿ ನಗಣ್ಯವಾಗಿಯೇ ಉಳಿಯಿತು, ಮತ್ತು ರಾಜಕೀಯತಜ್ಞರು ತಮ್ಮ ಹಿನ್ನೆಲೆಯ ಆಧಾರದ ಮೇಲೆ ಶೋಷಿತ ಜನಗಳ ಭಾವನೆಗಳ ರಾಜಕೀಯ ಲಾಭ ಪಡೆಯುತ್ತ 'ಸಮಾಜವಾದ'ದ ಘೋಷಣೆಯನ್ನು ಮೊಳಗಿಸಿದರು. ಭವಿಷ್ಯದ ಯೋಜನೆಗಳು ತಯಾರಾದವು. ಆದರೆ ಭೂತದ ಆಧಾರದ ಮೇಲೆ ವರ್ತಮಾನದ ವಿಚಾರ ಮಾಡಿ ಭವಿಷ್ಯದ ದಿಕ್ಕನ್ನು ನಿರ್ಧಾರ ಮಾಡುವ ಪ್ರಯತ್ನ ಆಗಲೇ ಇಲ್ಲ. ಇತಿಹಾಸ ತಜ್ಞ, ಅರ್ಥಶಾಸ್ತ್ರಜ್ಞ, ರಾಜಕೀಯತಜ್ಞ ಎಲ್ಲರೂ ಬೇರೆ ಬೇರೆಯಾಗಿ ವಿಚಾರ ಮಾಡುತ್ತಿದ್ದರು, ಈಗಲೂ, ಮಾಡುತ್ತಿದ್ದಾರೆ, ಅದರೆ 'ನಿರ್ಮಾಣಕಾರನ ಪೂರ್ಣ ಆಸಕ್ತಿ', ಹಾಗೂ 'ಪುರುಷಾರ್ಥ'ಗಳ ಅಭಾವ ಅವರಲ್ಲಿದೆ.

ಪಾಶ್ಚಾತ್ಯ ಪದ್ಧತಿಗಳು ಹಾಗೂ ವ್ಯವಸ್ಥೆಗಳ ಕುರುಡು ಅನುಕರಣೆ ಭಾರತದ ನೆಲದಲ್ಲಿ ವಿನಾಶಕಾರಿಯೆಂದು ಸಿದ್ಧವಾಗಿದೆ. ಮತ್ತು ನಾವು ಇಂದು ನೋಡುವ

ಹಾಗೆ ಸ್ವಾತಂತ್ರ್ಯ ಪಡೆಯುವ ಮುಂಚಿನ 'ಪುರುಷಾರ್ಥಮಯ' ವಾತಾವರಣ ಸಂಪೂರ್ಣ ನಾಶವಾಗಿದೆ. ಮತ್ತು 'ಅಸುರಕ್ಷಿತತೆ'ಯ ಮನಸ್ಥಿತಿಯಲ್ಲಿ ಸರಳವಾಗಿ ಹಣಗಳಿಸುವ ಒಂದೇ ಒಂದು ಗುರಿ ನಿರ್ಮಾಣವಾಗಿದೆ. ಒಳ್ಳೆಯ ಜನ ನಿರಾಶರಾಗುತ್ತಿದ್ದಾರೆ ಮತ್ತು 'ಹಣ'ದ ಮಾನಸಿಕ ದಾಸ್ಯದ ಕಾರಣದಿಂದ ಅವರ ನೈತಿಕ ಬಲ ಮತ್ತು ಸಾಹಸ ಕೂಡ ಮುಗಿದುಹೋಗುತ್ತಿದೆ. ಕಪ್ಪುಹಣ ಹೆಚ್ಚುತ್ತಿರುವುದರ ಜೊತೆಗೇನೇ, ಅನುತ್ಪಾದಕ ವೆಚ್ಚ ಹೆಚ್ಚುತ್ತಿದೆ. ಅದು ಭಯಾನಕವೆನಿಸುವ ಹಣದುಬ್ಬರ ಹಾಗೂ ಬೆಲೆಯೇರಿಕೆಯನ್ನು ಉಂಟುಮಾಡಿದೆ. ಒಳ್ಳೆಯ ಜನರು ತಮ್ಮ ಕಷ್ಟಗಳನ್ನು ಹಾಗೂ ಭ್ರಷ್ಟಜನರ ಜೀವನಮಟ್ಟವನ್ನು ಹೋಲಿಕೆ ಮಾಡತೊಡಗಿದ್ದಾರೆ ಅವರು ಮತ್ತು ಎಷ್ಟು ದಿನ ಹೀಗೆಯೇ ಹೋರಾಡುವರೆಂಬುದನ್ನು ಹೇಳಲಾಗದು. ಒಂದು ಕಡೆ ಆಡಳಿತಾತ್ಮಕ ಕೆಟ್ಟ ನೀತಿಯ ಪರಿಣಾಮವಾಗಿ ಅವಶ್ಯಕ ವಸ್ತುಗಳ ಕೊರತೆ ಉಂಟಾಗುತ್ತಿದೆ. ಅಲ್ಲಿಯೇ ಇನ್ನೊಂದು ಕಡೆ ವಿಲಾಸೀ ಬದುಕಿನ ಸಾಮಗ್ರಿಗಳ ಹೆಚ್ಚಳವೂ ಆಗುತ್ತಿದೆ. ಕಾಲುವೆಗಳಿದ್ದರೂ ನೀರು ಇಲ್ಲ, ವಿದ್ಯುತ್ ತಂತಿಗಳು ಹಳ್ಳಿಯವರೆಗೆ ಹೋಗಿವೆ ಆದರೆ ವಿದ್ಯುತ್ತಿನ ಪೂರೈಕೆಯಿಲ್ಲ, ಹೊಸ ಹೊಸ ಉದ್ಯಮಗಳು ತೆರೆದೆವು ಆದರೆ ಅವುಗಳು ತಮ್ಮ ಸಾಮರ್ಥ್ಯವನ್ನು ಇಡಿಯಾಗಿ ಪ್ರಯೋಗ ಮಾಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ಕಚ್ಚಾ ಸರಕುಗಳು, ವಿದ್ಯುತ್ ಕೊರತೆ, ಅಥವಾ ಕಲ್ಲಿದ್ದಲಿನ ಕೊರತೆಯನ್ನು ಅನುಭವಿಸುತ್ತಿವೆ. ಹಳೆಯ ಉದ್ಯಮಗಳನ್ನು ಸರಕಾರವು 'ರೋಗಗ್ರಸ್ತ ಘಟಕಗಳು' ಎಂದು ಘೋಷಿಸಿ ವಶಪಡಿಸಿಕೊಂಡವು, ಆದರೆ ಅದರಲ್ಲಿ ಅವುಗಳ ದೋಷವೇನೂ ಇರಲಿಲ್ಲ, ಅವುಗಳು ಆರ್ಥಿಕ ವ್ಯವಸ್ಥೆಯ ರಕ್ತದೋಷದಿಂದ ಪೀಡಿತವಾಗಿದ್ದವು. ಆದರೆ ಅವುಗಳಿಗೆ ಘಟಕವನ್ನು ನಡೆಸಲು ಅಗತ್ಯವಾದ ಪ್ರಮಾಣದ ಕಚ್ಚಾ ವಸ್ತು ಸಿಗುತ್ತಿರಲಿಲ್ಲ, ಹೊಸ ಕ್ಷೇತ್ರದಲ್ಲಿ ಇದೇ ಪ್ರಕಾರದ ಉದ್ದಿಮೆಗಳನ್ನು ಪ್ರಾರಂಭಿಸುವ ಯೋಜನೆಯಾಗುತ್ತಿದೆ, ಯಾಕೆಂದರೆ ಈ ಕ್ಷೇತ್ರಗಳು ಹಿಂದುಳಿದಿವೆ.

ಕೊರತೆಯೆಂಬುದು ಪ್ರಾಕೃತಿಕವಾಗಿರಲಿ, ಕೃತ್ರಿಮವಾಗಿರಲಿ, ರಾಜನೀತಿಜ್ಞ, ಆಡಳಿತಗಾರ, ಮತ್ತು ವ್ಯಾಪಾರಿಗಳಿಗೆ ಅದು ಲಾಭದಾಯವೆಂದೇ ಸಿದ್ಧವಾಗಿದೆ. ಆಡಳಿತಗಾರ ಮತ್ತು ವ್ಯಾಪಾರಿಗಳು ರಾಜಕೀಯದ ಜನರಷ್ಟು ದೋಷಿಗಳಲ್ಲ. ಯಾಕೆಂದರೆ ಯಾಕೆಂದರೆ ಆರ್ಥಿಕ ನೀತಿಯನ್ನು ರಾಜಕೀಯನೀತಿಯು ಹಾಳುಗೆಡವಿದೆ. ಪ್ರತಿಯೊಂದು ಆರ್ಥಿಕ ನೀತಿಯನ್ನು ರಾಜಕೀಯ ಲಾಭವನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಿಸಲಾಗುತ್ತಿದೆ. ಮತ್ತು ದೀರ್ಘಕಾಲೀನ ಯೋಜನೆಯ ಉದ್ದೇಶವು ಆರ್ಥಿಕ ವಿಕಾಸ ಅಥವಾ ಹಿತವನ್ನು ಹೆಚ್ಚಿಸುವುದು ಆಗಿರದೆ, ಅರ್ಥವ್ಯವಸ್ಥೆಯನ್ನು ಮಾತ್ರ ರಾಜಕೀಯದ ಜನರ ಸೌಲಭ್ಯಕ್ಕಾಗಿ ಪರಿವರ್ತನೆ ಮಾಡಲಾಗುತ್ತಿದೆ. 'ಜನತೆಯ ಕಲ್ಯಾಣ'ದ ಭಾವನೆಯ ಮೂಲದಲ್ಲಿ 'ಕುರ್ಚಿಯ



ಆಸೆ' ಹೋಗಿ ಅಡಗಿಕುಳಿತಿದೆ. 'ಬಡತನ' ಹಾಗೂ 'ನಿರಕ್ಷರತೆ' ಅವರ ಉದ್ದೇಶ ಪೂರ್ತಿಗೆ ಸಹಾಯ ನೀಡುತ್ತಿದೆ. ಈ ಕಾರಣದಿಂದ ಬಡತನ ಅಥವಾ ನಿರಕ್ಷರತೆಯನ್ನು ದೂರಮಾಡಲು ಇಂಥ ಯೋಜನೆಗಳಾದರೂ ಯಾವ ಕೆಲಸಕ್ಕೆ? ಆದರೆ ಪ್ರಜಾಪ್ರಭುತ್ವದಲ್ಲಿ ಜನತೆಯೇ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ, ಕಷ್ಟವನ್ನು ಸಹಿಸಲಾರದೆ ಹೆಚ್ಚುತ್ತಿರುವ ಜನತೆಯ ರೋಷವನ್ನು ಸಮಾಜದ್ದೇ ಬೇರೆ ಬೇರೆ ವಿಶಿಷ್ಟ ಅಂಗಗಳ ಕಡೆ, ಸಮಾಜದ್ದೆ ಕೊರತೆಯ ಕಡೆ, ಅಥವಾ ಪ್ರಕೃತಿಯ ಚಂಚಲತೆಯ ಕಡೆ ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ. ಜನರ ಮರು ಉತ್ಪಾದನೆಯ ಕ್ರಮದ ಬಗೆಗೇ ದೋಷಾರೋಪಣೆ ಮಾಡುತ್ತ ಕುಟುಂಬ ಯೋಜನೆ, ದೊಡ್ಡ ಉದ್ಯಮಪತಿಗಳ ಹಣದ ದಾಹ ಮುಂತಾದವುಗಳಿಗೆ ದೋಷ ನೀಡುತ್ತ, ಕಪ್ಪುಹಣದ ವಶಪಡಿಸಿಕೊಳ್ಳುವಿಕೆ, ಮತ್ತು ಪ್ರಕೃತಿಯ ದೋಷದ ಮೇಲೆ ಗೂಬೆ ಕೂರಿಸುವ, 'ಹಣ ವಿತರಣೆ'ಯ ಯೋಜನೆಗಳು ಇಂಥದೇ ಆಕರ್ಷಣೆಯ ಪ್ರಯತ್ನದ ಫಲವಾಗಿದೆ. ಸಾಮಾನ್ಯವಾಗಿ ಇತಿಹಾಸತಜ್ಞ ಮತ್ತು ಅರ್ಥಶಾಸ್ತ್ರಜ್ಞರೂ ರಾಜಕೀಯ ವ್ಯಕ್ತಿಗಳ ಪಡಿಯಚ್ಚಾಗುತ್ತಿದ್ದಾರೆ.

ಪರಸ್ಪರ ಕೆಸರೆರಚುವುದು ಸ್ವಭಾವೇ ಆಗಿಬಿಟ್ಟಿದೆ. ಶ್ರೀ ಸಂಜೀವಯ್ಯ ಅವರು ೧೯೬೩ ರಲ್ಲಿ ಹೇಳಿದ್ದರು: "ಯಾವ ಕಾಂಗ್ರೆಸ್ಸಿಗರು ೧೯೪೭ರಲ್ಲಿ ದರಿದ್ರರಾಗಿದ್ದರೋ, ಇಂದು ಅವರು ಲಕ್ಷಾಧಿಪತಿಗಳು, ಕೋಟ್ಯಾಧೀಶರಾಗಿದ್ದಾರೆ. ಅವರ ಬಳಿ ಅರಮನೆಯಂಥ ಮನೆಗಳಿವೆ, ಫ್ಯಾಕ್ಟರಿಗಳಿವೆ, ಹಾಗೆಂದು ನಿಶ್ಚಿತ ಆದಾಯದ ಯಾವುದೇ ಪ್ರತ್ಯಕ್ಷ ಸಾಧನ ಎದುರಿಗೆ ಕಾಣಿಸುವುದಿಲ್ಲ."[೧] ಹನುಮಂತಯ್ಯ ಅವರು ಹೇಳಿದರು: "ಕೆಲವೇ ಲಕ್ಷರೂಪಾಯಿಗಳಲ್ಲಿ ನಾನು ಮುಖ್ಯಮಂತ್ರಿ ಆಗಬಲ್ಲೆ, ಮತ್ತು ಕೆಲವೇ ಕೋಟಿ ರೂಪಾಯಿಗಳಲ್ಲಿ ಪ್ರಧಾನಮಂತ್ರಿ ಆಗಬಲ್ಲೆ."[೨] ಇತ್ತೀಚೆಗಷ್ಟೇ ಬಿಹಾರದ ಆಹಾರಮಂತ್ರಿ ಶ್ರೀ ಬೋದರೆ ಹೇಳಿಬಿಟ್ಟರು. "ನಾನು ಬೆಲೆಗಳನ್ನು ಹೇಗೆ ನಿಯಂತ್ರಣ ಮಾಡಬಲ್ಲೆ? ಸಪ್ಲೈ ಇನ್ಸಪೆಕ್ಟರರಿಂದ ಹಿಡಿದು ಕಮೀಶನರವರೆಗೆ ದರೋಡೆಯಲ್ಲಿ ಎಲ್ಲರೂ ತಮ್ಮ ಪಾಲನ್ನು ಬಯಸುತ್ತಾರೆ. ಶಾಸಕ, ಸಂಸದ ಸದಸ್ಯ ಮತ್ತು ಮಂತ್ರಿ ಎಲ್ಲರೂ ಕಳ್ಳರಾಗಿದ್ದಾರೆ."[೩] ಈ ರೀತಿಯಲ್ಲಿ ಪರಸ್ಪರರ ಮೇಲೆ ಪ್ರತ್ಯಾರೋಪ ಮಾಡುವುದು ಹಣದ ಲೋಲುಪತೆಯ ಕಡೆಗೆ ಬೆರಳು ಮಾಡುವುದಿಲ್ಲವೆ? ಈ ರೀತಿಯ ಆರೋಪಗಳಿಂದ ಎಷ್ಟೊಂದು ಅಧಿಕ ಪ್ರಚಾರ ಆಯಿತು, ಆಗುತ್ತಿದೆಯೆಂದರೆ, ಇಡಿಯ ವಾತಾವರಣವೇ ಹಾಳಾಗುತ್ತಿದೆ. ಇದೂ ಕೂಡ ಜನರ ಗಮನವನ್ನು ಬೇರೆಡೆ ಸೆಳೆಯುವಂತಹ ಒಂದು ವಿಧಾನ. ಜನರ

---

೧ ಹಾಗೂ ೨ ಸಾಪ್ತಾಹಿಕ ಹಿಂದುಸ್ತಾನ–ಭ್ರಷ್ಟಾಚಾರ ವಿಶೇಷಾಂಕ : ೨೬ ಜುಲೈ ೧೯೭೩.
೩ ತರುಣ ಭಾರತ ಲಖನೌ ೧೬ ಜೂನ್ ೧೯೭೩.

ಗಮನವನ್ನು ಹೊರಳಿಸುವ ಇನ್ನೂ ಒಂದು ಉದಾಹರಣೆಯನ್ನು ಕೊಡುವುದು ಯೋಗ್ಯವೆನಿಸುತ್ತದೆ. ೧೯೭೩ರ ಜುಲೈ ೧೨ರಂದು ಪ್ರಧಾನಮಂತ್ರಿ ಹೇಳಿದರು:[೪] "ದೇಶವು ಇಂದು ಅತ್ಯಂತ ಕಠಿಣವಾದ ಆರ್ಥಿಕ ಸ್ಥಿತಿಯನ್ನು ಎದುರಿಸುತ್ತಿದೆ. ಈ ಸ್ಥಿತಿಯು ಇನ್ನೆರಡು ತಿಂಗಳಲ್ಲಿ ಮತ್ತೂ ಕೆಡಬಹುದಾಗಿದೆ." ಅವರು ಬೆಲೆಯೇರಿಕೆ, ಹಣದುಬ್ಬರ, ಆಹಾರಧಾನ್ಯಗಳ ಕೊರತೆಯನ್ನು ಉಲ್ಲೇಖಿಸುತ್ತ ಹೇಳಿದರು. ಇದರ ಮುಖ್ಯ ಕಾರಣವೆಂದರೆ ಬಾಂಗ್ಲಾ ದೇಶದಿಂದ ಶರಣಾರ್ಥಿಗಳ ಆಗಮನ, ಬರಗಾಲ ಇತ್ಯಾದಿಗಳಾಗಿವೆ. ವಿಶ್ವದ ಅನೇಕ ದೇಶಗಳ ಸ್ಥಿತಿ ಹೀಗೆಯೇ ಇದೆ. ಹಸಿರು ಕ್ರಾಂತಿಯನ್ನು ಕುರಿತು ಚರ್ಚಿಸುತ್ತ ಅವರು ಹೇಳಿದರು. "ಇದರಲ್ಲಿ ಗೋಧಿಯ ಉತ್ಪಾದನೆ ಸಾಕಷ್ಟು ಹೆಚ್ಚಿದೆ, ಆದರೆ ಅಕ್ಕಿಯ ಉತ್ಪಾದನೆ ಸ್ವಲ್ಪಮಾತ್ರ ಹೆಚ್ಚಿದೆ. ಆದರೆ ಇಂದು ದೇಶದಲ್ಲಿ ಅಕ್ಕಿ ಮತ್ತು ಬೇಳೆಗಳ ಕೊರತೆಯಿದೆ. ಅವರು ಒಪ್ಪಿಕೊಂಡ ಸಂಗತಿಯೆಂದರೆ, ಗೋಧಿಯ ಸಗಟು ವ್ಯಾಪಾರದ ಯೋಜನೆ ನೂರಕ್ಕೆ ನೂರರಷ್ಟು ಯಶಸ್ವಿಯಾಗದಿದ್ದರೂ, ವಿತರಣ ವ್ಯವಸ್ಥೆಯನ್ನು ಸುದೃಢಗೊಳಿಸಲು ಈ ಹೆಜ್ಜೆಯನ್ನಿಡುವುದು ಅನಿವಾರ್ಯವಾಗಿದೆ. ಅಗ್ಗದ ದರದಲ್ಲಿ ಆಹಾರಧಾನ್ಯ ವಿತರಣೆಯ ವ್ಯವಸ್ಥೆಯನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸುವುದು ಸುಲಭದ ಕೆಲಸವಲ್ಲ." ಆಡಳಿತದಲ್ಲಿರುವ ಪಕ್ಷದ ದೃಷ್ಟಿಯಲ್ಲಿ ಬೆಲೆಯೇರಿಕೆ, ಹಣದುಬ್ಬರ, ಮತ್ತು ಆಹಾರಧಾನ್ಯಗಳ ಕೊರತೆಗಳಿಗೆ ಅವರ ಯೋಜನೆಗಳಾಗಲಿ ನೀತಿಯಾಗಲಿ ದೋಷಿಗಳಲ್ಲ, ಮತ್ತು ಈ ಸ್ಥಿತಿಯು ಬಂಗ್ಲಾದೇಶದ ನಿರಾಶ್ರಿತರು ಹಾಗೂ ಬರಗಾಲದಂತಹ ಆಕಸ್ಮಿಕ ಕಾರಣದಿಂದ ಉತ್ಪನ್ನವಾಗಿದೆ. ಇದೇ ಭಾಷಣದಲ್ಲಿ ಪ್ರಧಾನ ಮಂತ್ರಿ ಹೇಳಿದರು. 'ದೇಶದ ಏಕತೆಯನ್ನು ಕಾಪಿಟ್ಟುಕೊಂಡು, ಅದನ್ನು ಅಭಿವೃದ್ಧಿಯ ಹಾದಿಯಲ್ಲಿ ಮುಂದಕ್ಕೆ ಒಯ್ಯಬಲ್ಲ ಪಕ್ಷವೆಂದರೆ ಕಾಂಗ್ರೆಸ್ ಒಂದೇ ಎಂದು ದೇಶದ ಜನತೆ ಅರಿತುಕೊಂಡಿದ್ದಾರೆ'. ಆದರೆ ಕಾಂಗ್ರೆಸಿಗರ ತಮ್ಮೊಳಗಿನ ಜಗಳ ಮತ್ತು ಗುಂಪುಗಾರಿಕೆಯಿಂದಾಗಿ ಅವರಿಗೆ ಭಾರೀ ನಿರಾಶೆಯಾಗುತ್ತದೆ. ಜನತೆಯ ಗಮನವನ್ನು ಬೇರೆಡೆ ಸೆಳೆಯುವುದು ಮತ್ತು ಅದರ ಒಳಗಿನ ಇಚ್ಛೆಯನ್ನು ತೋರಿಸಲು ಇದು ಒಳ್ಳೆಯ ಉದಾಹರಣೆ.

ಇಂದಿನ ಪರಿಸ್ಥಿತಿಯಲ್ಲಿ ಪಂಡಿತ್ ದೀನ್ ದಯಾಳರ ಮೂಲಕ ಪ್ರಸ್ತುತಗೊಂಡ ಈ ಪುಸ್ತಕದಲ್ಲಿ ಪ್ರಣೀತವಾದ ವಿಚಾರಗಳ ಸಾರ್ಥಕತೆಯ ಪರೀಕ್ಷೆ ಮಾಡಲು ಈ ೨೨ ವರ್ಷಗಳ ನಡುವೆ ದೇಶದ ಆರ್ಥಿಕ ವಿಕಾಸಕ್ಕಾಗಿ ಅನುಸರಿಸಿದ ಯೋಜನೆಗಳ ಪ್ರಭಾವವನ್ನು ನೋಡಲೇಬೇಕಾಗುತ್ತದೆ. ಖರ್ಚಿನ ದೃಷ್ಟಿಯಿಂದ ಪ್ರಥಮ ಯೋಜನೆಯಲ್ಲಿ ೩೩,೬೦೦, ಎರಡನೆಯದರಲ್ಲಿ ೬೮,೩೧೦,

೪ ಸಂಸತ್ತಿನ ಮಳೆಗಾಲದ ಅಧಿವೇಶನಕ್ಕೆ ಮುನ್ನ ಕಾಂಗ್ರೆಸ್ ಪಾರ್ಟಿಯ ಸಭೆಯಲ್ಲಿ ಮಾಡಿದ ಭಾಷಣ.



ಮೂರನೆಯದರಲ್ಲಿ ೧೦೪,೦೦೦ ಮತ್ತು ನಾಲ್ಕನೆಯದರಲ್ಲಿ ೨೨೬,೩೫೦ ಮಿಲಿಯನ್ ರೂಪಾಯಿಗಳ ಹಣ ಒದಗಿಸಲಾಗಿತ್ತು. ಸಮಾಜವಾದದ ಸ್ಥಾಪನೆಯ ಮಾನದಂಡವೂ ಹಣವನ್ನು ಒದಗಿಸುವುದು ಮತ್ತು ಖರ್ಚನ್ನು ಒಪ್ಪಿಕೊಳ್ಳುತ್ತ ಸಾರ್ವಜನಿಕ ಕ್ಷೇತ್ರದಲ್ಲಿ ಮೊದಲ ಯೋಜನೆಯಲ್ಲಿ ೧೬,೬೦೦ ಎರಡನೆಯ ಯೋಜನೆಯಲ್ಲಿ ೪೬,೭೨೦ ಮೂರನೆಯದರಲ್ಲಿ ೮೫,೬೬೫, ೧೯೬೬–೬೭ ರಿಂದ ೧೯೬೮–೬೯ರ ವಾರ್ಷಿಕ ಯೋಜನೆಗಳಲ್ಲಿ ೬೬,೨೫೪ ಮತ್ತು ನಾಲ್ಕನೆಯದರಲ್ಲಿ ೧೫೯,೦೨೦ಮಿಲಿಯನ್ ರೂಪಾಯಿಗಳನ್ನು ಒದಗಿಸಲಾಗಿತ್ತು. ಈ ಪುಸ್ತಕವು ಪ್ರಕಟವಾಗುವ ಹೊತ್ತಿಗೆ ಎರಡು ಯೋಜನೆಗಳು ಆಗಿಬಿಟ್ಟಿದ್ದವು. ಮೊದಲನೆಯದು ಕೆಲವು ಸ್ಕೀಮುಗಳ ಸಂಕಲನ ಮಾತ್ರವಾಗಿತ್ತು, ಆದರೆ ಎರಡನೆಯದರಲ್ಲಿ ದೇಶದ ಆರ್ಥಿಕ ಸ್ತರದಲ್ಲಿ ಮೂಲಭೂತ ಪರಿವರ್ತನೆ ಮಾಡುವ ಯೋಜನೆಯನ್ನು ಮಾಡಲಾಯಿತು. ರಾಷ್ಟ್ರೀಯ ಆದಾಯದಲ್ಲಿ ಶೇ. ೨೫ ಹೆಚ್ಚಳ, ಅಸಮಾನತೆಯನ್ನು ಕಡಿಮೆ ಮಾಡುವುದು, ಮೂಲ ಮತ್ತು ಭಾರೀ ಉದ್ಯಮಗಳ ವಿಕಾಸಕ್ಕೆ ಒತ್ತು ಕೊಡುತ್ತ, ದೇಶದ ತ್ವರಿತ ಔದ್ಯೋಗೀಕರಣ ಹಾಗೂ ಉದ್ಯೋಗದ ವಿಸ್ತರಣೆ, ಈ ಗುರಿಯನ್ನು ಈ ಯೋಜನೆಯ ಎದುರು ಇಡಲಾಗಿತ್ತು. ಕೃಷಿಯನ್ನು ಕಡೆಗಣಿಸಿ ಔದ್ಯೋಗೀಕರಣದ ಮೇಲೆ, ಮತ್ತು ಅದರಲ್ಲಿಯೂ ಭಾರೀ ಉದ್ದಿಮೆಗಳಿಗೆ ಒತ್ತು ಕೊಡುವುದು ತಪ್ಪೆಂದು ಸಿದ್ಧವಾಯಿತು. ನಿರುದ್ಯೋಗ ನಿವಾರಣೆಯ ಬಗ್ಗೆ ಈ ಯೋಜನೆಯಲ್ಲಿ ವಿಚಾರ ಮಾಡಲಾಗಿಲ್ಲ ಮತ್ತು ಕರಗಳ ಭಾರ ಹೆಚ್ಚುತ್ತಲೇ ಹೋಯಿತು. ಪಂಡಿತ್ ದೀನ್‌ದಯಾಳರು ಇಂಥ ಯೋಜನೆಗಳಿಂದ ಭಾರತದ ಸಮಸ್ಯೆಗಳ ಪರಿಹಾರ ಅಸಂಭವ ಎಂದು ಹೇಳಿದರು. ಎಲ್ಲಕ್ಕಿಂತ ಯೋಜನೆಯ ದೊಡ್ಡ ತಪ್ಪು–ಭಾರತದ ಪರಿಸ್ಥಿತಿಯ ಬಗೆಗೆ ವಿಚಾರ ಮಾಡದಿರುವುದು' ಎಂದು ಹೇಳಿದರು. ಮತ್ತು ಈ ಯೋಜನೆಯನ್ನು "ರಷ್ಯಾ ಮತ್ತು ಯೂರೋಪನ ಅನುಕರಣೆಯ ಒಂದು ದುರ್ಬಲ ಪ್ರಯತ್ನ ಮಾತ್ರ" ಎಂದರು. ಮೂರನೆಯ ಯೋಜನೆಯ ಚರ್ಚೆ ಪ್ರಾರಂಭವಾಗಿತ್ತು, ಈ ಕಾರಣದಿಂದ ಅವರು ಪುನಃ ತಮ್ಮ ದೃಷ್ಟಿಕೋನವನ್ನು ಎದುರಿಗಿಟ್ಟರು. "ವಿಕೇಂದ್ರಿತ ಕೃಷಿ, ಉದ್ದಿಮೆ, ಔದ್ಯೋಗಿಕ ಗ್ರಾಮ ಸಮಾಜವೇ ನಮ್ಮ ರಾಷ್ಟ್ರದ ಬೆನ್ನೆಲುಬು ಆಗಿರಬಲ್ಲದು" ಮತ್ತು ಇನ್ನಷ್ಟು ಒತ್ತುಕೊಟ್ಟು ಅವರು ಹೇಳಿದ್ದೆಂದರೆ "ಮೂರನೆಯ ಯೋಜನೆ ಎರಡನೆಯದರಿಂದ ಸಂಬಂಧ ಕತ್ತರಿಸಿಕೊಳ್ಳದಂತೆ ನಾವು ಲಕ್ಷ್ಯವಹಿಸಬೇಕು. ಗಡಿಯಾರದ ಪೆಂಡ್ಯುಲಮ್ ಹಾಗೆ ಪರಿಸ್ಥಿತಿಯ ಪೆಟ್ಟು ತಿಂದು ಅತ್ತ ಇತ್ತ ತೂಗಾಡುತ್ತಿರುವುದರಿಂದ, ಸಮಯ, ಶಕ್ತಿ, ಸಾಧನಗಳ ಅಪವ್ಯಯವನ್ನಷ್ಟೇ ನಾವು ಮಾಡಿರುತ್ತೇವೆ." ಅವರ ಮಾತುಗಳು ಸತ್ಯವಾಗಿವೆ. ಸಂಪೂರ್ಣ ಯೋಜನೆಗಳ ಕಾಲದ ವರ್ತಮಾನ ಪ್ರತಿಫಲ ಇದನ್ನು ಸಿದ್ಧಮಾಡುತ್ತಿದೆ.

ಮೂರನೆಯ ಯೋಜನೆಯಲ್ಲಿ ಪ್ರತಿವರ್ಷ ಶೇ. ೫೦ ರಷ್ಟು ರಾಷ್ಟ್ರೀಯ ಆದಾಯದಲ್ಲಿ ವೃದ್ಧಿ, ಆಹಾರಧಾನ್ಯಗಳಲ್ಲಿ ಸ್ವಾವಲಂಬನೆ, ಮೂಲ ಉದ್ಯಮಗಳ ಪ್ರಸಾರ ಅದರಿಂದ ೧೦ ವರ್ಷಗಳಲ್ಲಿ ಔದ್ಯೋಗೀಕರಣದಲ್ಲಿ ಭಾರತದ ಸ್ವಾವಲಂಬನೆ, ಮಾನವಶಕ್ತಿಯ ಪೂರ್ಣ ಉಪಯೋಗ, ಹಾಗೂ ರೋಜಗಾರ ಅವಕಾಶಗಳಲ್ಲಿ ಹೆಚ್ಚಳ, ಮತ್ತು ಹೆಚ್ಚು ಸಮಾನತೆಯ ಸಂದರ್ಭಗಳ ಸ್ಥಾಪನೆ, ಆದಾಯ ಹಾಗೂ ಹಣವಿತರಣೆಯಲ್ಲಿ ಅಸಮಾನತೆಯನ್ನು ಕಡಿಮೆಮಾಡುವುದು, ಹಾಗೂ ಆರ್ಥಿಕ ಶಕ್ತಿಯ ಸರಿಯಾದ ಹಂಚಿಕೆಯ ಉದ್ದೇಶಗಳನ್ನು ಇಡಲಾಗಿತ್ತು. ಮೂರನೆಯ ಯೋಜನಾಕಾಲದಲ್ಲಿ ರಾಷ್ಟ್ರೀಯ ಆದಾಯದ ಹೆಚ್ಚಳವು ಬೇರೆ ಬೇರೆ ವರ್ಷಗಳಲ್ಲಿ ಶೇ. ೨ ರಿಂದ ಶೇ. ೭.೧ರಲ್ಲಿ ಪ್ರತಿಶತ ಪ್ರತಿವರ್ಷ ಉಳಿಯಿತು. ಆದರೆ ಅಂತಿಮ ವರ್ಷದಲ್ಲಿ ರಾಷ್ಟ್ರೀಯ ಆದಾಯ ಶೇ. ೫.೬ಕ್ಕೆ ಕುಸಿಯಿತು. ಎಲ್ಲ ಸೇರಿ ಮೂರು ಯೋಜನೆಗಳ ಅವಧಿಯಲ್ಲಿ ಸ್ಥಿರ ಮೂಲ್ಯದ ಮೇಲೆ ವಾರ್ಷಿಕ ಚಕ್ರವೃದ್ಧಿ ರಾಷ್ಟ್ರೀಯ ಆದಾಯ ಹೆಚ್ಚಳ ೩.೪ ಪ್ರತಿಶತ ಉಳಿಯಿತು. ೧೯೬೬ ರಿಂದ ೬೯ ರವರೆಗೆ ಪಂಚವಾರ್ಷಿಕ ಯೋಜನೆಗಳು ಸ್ಥಗಿತಗೊಂಡಿದ್ದವು. ಮತ್ತು ವಾರ್ಷಿಕ ಯೋಜನೆಗಳು ನಡೆದವು. ಈ ಕಾಲವನ್ನು 'ಯೋಜನೆ ತೆರವಾದಕಾಲ' 'ಯೋಜನೆ ರಜಾಕಾಲ' ಎಂದೂ ಹೇಳಲಾಗುತ್ತದೆ. ೧೯೬೯ ರಿಂದ ೭೪ ಕ್ಕಾಗಿ ನಾಲ್ಕನೆಯ ಯೋಜನೆ ತಯಾರಾಯಿತು. ಯಾಕೆಂದರೆ ಯೋಜನೆಯನ್ನು ಹೇಗೆ ಬಿಡಲಾದೀತು? ಅಭಿವೃದ್ಧಿಯನ್ನು ಮಾಡಲೇಬೇಕು. ನಾಲ್ಕನೆಯ ಯೋಜನೆಯ ಕಾಲದಲ್ಲಿ ಪ್ರತಿವರ್ಷ ರಾಷ್ಟ್ರೀಯ ಆದಾಯ ಹೆಚ್ಚಳದ ಗುರಿಯನ್ನು ಶೇ. ೫.೫ ರಷ್ಟು ಇಡಲಾಯಿತು. ಉದ್ದೇಶಗಳನ್ನು ಹೇಳಲಾಯಿತು. ಸ್ಥಿರತೆ, ಮತ್ತು ಅನಿಶ್ಚಿತತೆಯ ಸ್ಥಿತಿಯಲ್ಲಿ ಅಭಿವೃದ್ಧಿಯ ಗತಿಯನ್ನು ತೀವ್ರಗೊಳಿಸುವುದು, ಆಂತರಿಕ ಸಾಧನಗಳ ಮೇಲೆ ಹೆಚ್ಚು ಅವಲಂಬನೆ, ಮತ್ತು ವಿದೇಶಿ ಸಹಾಯವನ್ನು ಕಡಿಮೆ ಅವಲಂಬಿಸುವುದು, ಸ್ಥಾನಿಕ ಯೋಜನೆಯ ಮೂಲಕ ಗ್ರಾಮೀಣ ಹಾಗೂ ನಗರಕ್ಷೇತ್ರಗಳಲ್ಲಿ ಹೆಚ್ಚು ಉದ್ಯೋಗ ಅವಕಾಶಗಳನ್ನು ಉಂಟು ಮಾಡುವುದು, ಕುಟುಂಬ ಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯ, ಕೃಷಿ ಉತ್ಪಾದನೆಗೆ ಗರಿಷ್ಠ ಮಹತ್ವ, ಆಹಾರಧಾನ್ಯ ಪೂರೈಕೆಯನ್ನು ನಿರಂತರವಾಗಿಡಲು ಸಾಕಷ್ಟು ದಾಸ್ತಾನು ಇಡುವುದು, ಬೆಲೆಯ ಸ್ತರವನ್ನು ಸಾಮಾನ್ಯವಾಗಿ ಸ್ಥಿರವಾಗಿಡುವುದಕ್ಕೆ ಬೇರೆ ರೀತಿಯನ್ನು ಅವಲಂಬಿಸುವುದು ಇತ್ಯಾದಿ. ನಾಲ್ಕನೆಯ ಯೋಜನೆಯಲ್ಲಿ ರಾಷ್ಟ್ರೀಯ ಆದಾಯದ ಶೇ. ೫.೫ ಗುರಿಯನ್ನು ನಿಗದಿಪಡಿಸಿದ್ದರೂ, ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ಈ ವೃದ್ಧಿ ಹೆಚ್ಚೆಂದರೆ ಶೇ. ೨.೭ ಉಳಿಯಿತು. ಪ್ರತಿವ್ಯಕ್ತಿಯ ಆದಾಯದಲ್ಲಿ ಶೇ. ೦.೪ ವೃದ್ಧಿಯಾಯಿತು. ಇದರ ಗುರಿ ಶೇ. ೩ ಇತ್ತು. ಶ್ರೀಮತಿ ಗಾಂಧಿ ಪ್ರಧಾನ ಮಂತ್ರಿ ಆಗುವ ಮುನ್ನ ಜನಸಂಖ್ಯಾ ಹೆಚ್ಚಳದ ಹೊರತಾಗಿಯೂ ೨.೫ ಪ್ರತಿಶತ ಸರಾಸರಿ



ಅಭಿವೃದ್ಧಿಯ ದರ ಇತ್ತು. ಅವರ ಕಾಲದಲ್ಲಿ ಹಿಂದಿನ ಎಂಟು ವರ್ಷಗಳಲ್ಲಿ ಶೂನ್ಯವಾಯಿತು.

ಹಿಂದಿನ ಎರಡು ಯೋಜನೆಗಳು ಸಂಪೂರ್ಣ ವಿಫಲವಾದ ಹಿನ್ನೆಲೆಯಲ್ಲಿ ಐದನೆಯ ಯೋಜನೆಯ ನೀತಿಯ ಬಗ್ಗೆ ಆಳವಾದ ಸಂದೇಹ ವ್ಯಕ್ತವಾಗುತ್ತಿದೆ. ಅದು ಪ್ರಾರಂಭವಾಗಲು ಇನ್ನು ಎಂಟು ತಿಂಗಳು ಉಳಿದಿದೆ. ೧೯೭೩ರ ಫೆಬ್ರುವರಿ ೬ಕ್ಕೆ ಯೋಜನೆಯ ಸಂಸದೀಯ ಪರಾಮರ್ಶನ ಸಮಿತಿಯ ಸಭೆಯಲ್ಲಿ ತೀವ್ರ ವಿಮರ್ಶೆ ನಡೆಯಿತು. ಮತ್ತು ಶ್ರೀ ಕೃಷ್ಣಕಾಂತರು (ಕಾಂಗ್ರೆಸ್ ಸದಸ್ಯ) ಐದನೆಯ ಯೋಜನೆಯಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ನೀತಿಯ ಕೊರತೆ, ಬೆಲೆ ಹಾಗೂ ಆದಾಯ ನೀತಿಯ ವೈಫಲ್ಯವನ್ನು ಸಾಬೀತುಪಡಿಸಿದರು. ಇದೇ ಬೈಠಕ್ಕಿನಲ್ಲಿ ಎಲ್ಲಕ್ಕಿಂತ ಹೆಚ್ಚು ಬೆಲೆ ಹೆಚ್ಚಳವಾದದ್ದು ಕೇವಲ ಅವಶ್ಯಕ ವಸ್ತುಗಳದ್ದೇ ಎಂಬುದನ್ನು ಯೋಜನಾಮಂತ್ರಿಗಳು ಒಪ್ಪಿದರು. ಒಂದರ ನಂತರ ಇನ್ನೊಂದು ಯೋಜನೆಯಲ್ಲಿ ನಾವು ಶೇ. ೫.೫ ಪ್ರತಿವರ್ಷ ಪ್ರಗತಿಯ ದರದ ಗುರಿಯನ್ನು ಘೋಷಿಸುತ್ತಿದ್ದರೂ ಆದದ್ದು ಕೇವಲ ಶೇ. ೩.೫ ಮಾತ್ರ. ನಾಲ್ಕನೆಯ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ಈ ಪ್ರಗತಿಯದರ ಕೇವಲ ಶೇ. ೨.೭ ಇದ್ದಿತ್ತು. ಬೆಲೆ ಅತ್ಯಂತ ವೇಗವಾಗಿ ಏರುತ್ತಿತ್ತು. ೩ ಖರ್ವ ೪೮ ಅಬ್ಜ ೨೦ಕೋಟಿ ರೂಪಾಯಿಗಳ ಖರ್ಚಿನ ಐದನೆಯ ಯೋಜನೆಯ ಹಣಕಾಸು ಗಾತ್ರವನ್ನು ಚಿಕ್ಕದನ್ನಾಗಿ ಮಾಡಲೇಬೇಕಾಗಿರುವುದು ಸ್ಪಷ್ಟವಾಯಿತು. ಯೋಜನೆಯ ಹಣಕಾಸು ದೃಷ್ಟಿಯಿಂದ ಗಾತ್ರವನ್ನು ಹೆಚ್ಚಿಸಬಹುದಾದರೂ ಗುರಿಯ ವಿಷಯದಲ್ಲಿ ಬಹುಶಃ ಅದನ್ನು ಕಡಿಮೆ ಮಾಡಬೇಕಾದೀತು ಎಂದು ಯೋಜನಾ ಸಚಿವರು ಸೂಚನೆ ನೀಡಿದರು. 'ಯೋಜನೆಯ ತೆರವು' ಘೋಷಣೆಯ ಬೇಡಿಕೆ ಬರುತ್ತಿದೆ. ತೆರವು ಒಂದು ರೀತಿಯಲ್ಲಿ ಶುರುವಾಗಿದೆ, ಆದರೆ ಯೋಜನಾ ಮಂತ್ರಿ ಹೇಳುತ್ತಿದ್ದಾರೆ. ಬೆಲೆಯೇರಿಕೆ ಹಾಗೂ ಕಠಿಣ ಪರಿಷ್ಕಾರದ ಸ್ಥಿತಿ ಇರುವುದರಿಂದ ಹಾಗೆ ಆಗಲು ಸಾಧ್ಯವಿಲ್ಲ, ಮತ್ತು ಕಳೆದ ಒಂದು ವರ್ಷದಲ್ಲಿ ಬೆಲೆ ಬಹಳ ಎತ್ತರದ ಸ್ಥಿತಿಯನ್ನು ತಲುಪಿದೆ. ಜೂನ್ ೧೯೪೫ರಿಂದ ಜೂನ್ ೧೯೭೩ ರ ಮಧ್ಯೆ ಆಹಾರಧಾನ್ಯಗಳ ಠೋಕ್ ಬೆಲೆಗಳಲ್ಲಿ ಶೇ. ೨೨.೭ ಏರಿಕೆಯಾಗಿದೆ. ಯೋಜನೆಯ ಅವಶ್ಯಕ ಕ್ಷೇತ್ರಗಳಲ್ಲಿ ಯಾವುದೇ ಕಡಿತ ಇಲ್ಲ ಎಂದು ಯೋಜನಾಮಂತ್ರಿ ಹೇಳುತ್ತಲೇ ಇದ್ದಾರೆ. ಆದರೆ ವಿದ್ಯುತ್ ಉತ್ಪಾದನೆಯ ಗುರಿಯನ್ನು ಕಡಿಮೆ ಮಾಡಲಾಗುತ್ತಿದೆ.

ಆದ್ದರಿಂದ ನಾವು ನೋಡುವ ಹಾಗೆ ಸ್ವಾತಂತ್ರ್ಯಾನಂತರ ನಮ್ಮ ಆರ್ಥಿಕ ಇತಿಹಾಸದ ಅಪಾಯಕಾರಿ ನಡಿಗೆಗೆ ನಾವು ತಲುಪಿದ್ದೇವೆ. ಎಲ್ಲ ವ್ಯವಸ್ಥೆಯೂ ಕುಸಿದುಬೀಳುವ ಹಾಗೆ ಕಾಣಿಸುತ್ತಿದೆ. ೨೨ ವರ್ಷಗಳ ಕ್ರಮಬದ್ಧ ಯೋಜಿತ ಅಭಿವೃದ್ಧಿಯ ನಂತರವೂ ಕನಿಷ್ಠ ೨ ಕೋಟಿ ಜನರಿಗೆ ದಿನಗೂಲಿಯ ಕೆಲಸವೂ

ಇಲ್ಲ. ಜನಸಂಖ್ಯೆಯಲ್ಲಿ ಶೇ. ೨.೫ ಪ್ರತಿವರ್ಷ ಹೆಚ್ಚಳ ೭೦ ಲಕ್ಷ ಹೊಸ ಆಸೆಗಳು ಕಣ್ದೆರೆಯುತ್ತವೆ. ಆದರೆ ಉದ್ಯೋಗದ ಅವಕಾಶಗಳು ಹೆಚ್ಚುತ್ತಿಲ್ಲ. ಪ್ರತಿಯೊಂದು ಯೋಜನೆಯ ನಂತರವೂ ಉದ್ಯೋಗ ಸಿಗದವರ ಸಂಖ್ಯೆ ಹೆಚ್ಚುತ್ತಿದೆ. ಅಂದರೆ ಅದರ ಅರ್ಥ ಯೋಜನೆಗಳ ಪ್ರಕ್ರಿಯೆ ಉದ್ಯೋಗ ಪಡೆಯುವಂತೆ ಮಾಡಲು ವಿಫಲವಾಗಿದೆ. ಪ್ರಗತಿಯ ದರ ಶೇ. ೨.೭ ಪ್ರತಿವರ್ಷ ಇರುವುದಾದರೂ ಗುರಿ ಮಾತ್ರ ಶೇ. ೫.೫ ಇತ್ತು. ಪ್ರಗತಿಯದರ ಶೇ. ೩ ಇದ್ದರೆ ಪ್ರತಿವರ್ಷ ೩ ಲಕ್ಷ ಉದ್ಯೋಗಗಳು ದೊರೆಯುವುದು ಸಾಧ್ಯವಿತ್ತು. ಯೋಜನೆಯ ವೇಗ ಹೀಗೇ ಇದ್ದರೆ ಉದ್ಯೋಗದ ಸಮಸ್ಯೆಯನ್ನು ನಮ್ಮ ಯೋಜನೆಗಳು ಬಗೆಹರಿಸಲು ಸಾಧ್ಯವೇ?

ಯೋಜನೆಗೆ ಹಣಕಾಸು ಒದಗಿಸಲು ದೇಶಿ–ವಿದೇಶೀ ಸಾಲವನ್ನು ತುಂಬಾ ಪಡೆಯಲಾಯಿತು. ಇಂಥ ಪರಿಸ್ಥಿತಿಯಲ್ಲೂ ಕೊರತೆಯ ಅರ್ಥವ್ಯವಸ್ಥೆಯನ್ನು ಮುಂದುವರಿಸಲಾಯಿತು. ೧೯೭೨–೭೩ರ ವರ್ಷಕ್ಕಾಗಿ ಈ ಮೊತ್ತ ೧೯೨೧ ಕೋಟಿ ರೂಪಾಯಿಗೆ ತಲುಪಿತು. ಈ ರೀತಿ ಕೇವಲ ಒಂದು ವರ್ಷದಲ್ಲಿ ಸರಕಾರವು ಕೊರತೆಯ ಅರ್ಥವ್ಯವಸ್ಥೆಯನ್ನು ಎಷ್ಟೊಂದು ಮಾಡಿದೆಯೆಂದರೆ, ಮೂರು ಮತ್ತು ನಾಲ್ಕು ಎರಡು ಯೋಜನೆಗಳಿಗೆ ಒಟ್ಟೂ ಸಂಖ್ಯೆ ನಿರ್ಧಾರಿತವಾಗಿತ್ತು. ನಾಲ್ಕನೆಯ ಯೋಜನೆಗಾಗಿ ಹಣಕಾಸು ವ್ಯವಸ್ಥೆಯ ಒಟ್ಟೂ ೮೫೦ ಕೋಟಿ ರೂಪಾಯಿಯ ಪ್ರೊವಿಜನ್ ಇತ್ತು. ೧೨ ತಿಂಗಳಲ್ಲಿ ೨೦ ಪ್ರತಿಶತ ಬೆಲೆಯೇರಿಕೆ ಸರಕಾರವು ಖರ್ಚಿನ ಮೇಲೆ ಹಿಡಿತ ಮಾಡದ್ದರ ಕಾರಣದಿಂದಲೇ ಆಯಿತೆಂಬುದು ಸ್ಪಷ್ಟ. ಕಳೆದ ವರ್ಷ ಹಣಕಾಸು ಭರ್ತಿ ಶೇ. ೧೧.೫ ಕ್ಕಿಂತ ಹೆಚ್ಚಾಯಿತು. ಆದರೆ ಪ್ರಗತಿದರ ಕೇವಲ ಶೇ. ೧.೫ ಬೆಳೆಯಲು ಸಾಧ್ಯವಾಯಿತು. ಮತ್ತು ಮೂಲ್ಯ ೧೯೭೩–೭೪ ರಲ್ಲಿ ಶೇ. ೧೫೦ ದರದಲ್ಲಿ ಏರುತ್ತಿದೆ. ಪ್ರಗತಿ ದರದ ಗುರಿಯನ್ನು ೫.೫ ಪ್ರತಿಶತ ತಲುಪಬೇಕಾದರೆ ಹಣಕಾಸು ಭರಣ ಯಾವುದೇ ಸ್ಥಿತಿಯಲ್ಲಿ ಶೇ. ೭ಕ್ಕಿಂತ ಹೆಚ್ಚಿಗೆ ಆಗಬಾರದು ಎಂದು ಯೋಜನಾ ಆಯೋಗ ಸದಾ ಹೇಳುತ್ತಲೇ ಇದೆ. ಮೂಲಭೂತ ಸತ್ಯವೆಂದರೆ ಕಳೆದ ೨೦ ವರ್ಷಗಳಲ್ಲಿ ಕರೆನ್ಸಿ ಭರಣ ಶೇ. ೪೦೦ ಹೆಚ್ಚಿತು ವಸ್ತುಗಳು ಮತ್ತು ಸೇವೆಗಳು ಕೇವಲ ಶೇ. ೨೦ ಅಷ್ಟೇ ಬೆಳೆಯಲು ಸಾಧ್ಯವಾಯಿತು. ಸರಕಾರವು ೧೪ ಪ್ರಮುಖ ವಾಣಿಜ್ಯ ಬ್ಯಾಂಕ್‌ಗಳ ರಾಷ್ಟ್ರೀಕರಣದ ನಂತರ ಅವುಗಳ ಪ್ರಯೋಗವನ್ನೂ ಆರ್ಥಿಕ ವ್ಯವಸ್ಥೆಯಲ್ಲಿ ಮಾಡಲಾಯಿತು. ಹಣಕಾಸು ಸಚಿವಾಲಯವು ಒಂದೇ ಬಾರಿಗೆ ಎಲ್ಲ ಮುಖ್ಯಮಂತ್ರಿಗಳಿಗೆ ಬರೆದಿತ್ತು. ಅವರು ತಮ್ಮ ಯೋಜನೆ ಹಾಗೂ ಕಾರ್ಯಕ್ರಮಗಳಲ್ಲಿ ಉಳಿತಾಯ ಮಾಡುವ ದೃಷ್ಟಿಯಿಂದ ಮರು ಅವಲೋಕನ ಮಾಡಬೇಕು ಎಂದು. ಮತ್ತು ರಾಜ್ಯ ಸರಕಾರಗಳು ಯೋಜನೆಯ ಹಣವನ್ನು ಯೋಜನೇತರ ಕಾರ್ಯಗಳಿಗೆ



ಖರ್ಚು ಮಾಡುವುದರಿಂದ ಅವರಿಗೆ ಹೆಚ್ಚಿನ ಸಾಲ ಕೊಡಬಾರದು ಎಂದು ಬ್ಯಾಂಕ್‌ಗಳಿಗೆ ಆದೇಶ ನೀಡಿತ್ತು. ಆದರೆ ರಾಜ್ಯ ಸರಕಾರಗಳು ಅನ್ಯ ಸರಕಾರೀ ಹಣಕಾಸು ನಿಗಮಗಳ ಸಹಾಯದಿಂದ ದೀರ್ಘಕಾಲೀನ ಸಾಲ ಎತ್ತಲು ಆರಂಭ ಮಾಡಿದವು. ಸರಕಾರಿ ಪದಾಧಿಕಾರಿಗಳಿಗೆ ಪ್ರಯೋಗಾರ್ಥ ಕಾರ ಖರೀದಿಸಲು ೨ ಅಬ್ಜ ೮೦ ಕೋಟಿ ರೂಪಾಯಿಗಳ ಅವಕಾಶವನ್ನು ದೇಶದ ಐದನೇ ಯೋಜನೆಯಲ್ಲಿ ಮಾಡಲಾಯಿತು. ಅದನ್ನು ಸರಕಾರವು ರದ್ದು ಪಡಿಸಬಲ್ಲದು. ಆದರೆ ಚಿಕ್ಕ ಕಾರುಗಳು ತಯಾರಾಗುತ್ತಿವೆ, ಅವು ಮಾರಾಟವಾಗಬೇಕಲ್ಲ!

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೆಯದಕ್ಕಿಂತ ೧೩೫ ಪ್ರತಿಶತ ಹೆಚ್ಚು ಹಣ ವಿನಿಯೋಗ ಆಯಿತು, ಮೂರನೆಯದರಲ್ಲಿ ಎರಡನೆಯದಕ್ಕಿಂತ ೮೬ ಪ್ರತಿಶತ ಹೆಚ್ಚು, ಮತ್ತು ನಾಲ್ಕನೆಯದರಲ್ಲಿಯೂ ಮೂರನೆಯದರ ೪೭ ಪ್ರತಿಶತ ಹೆಚ್ಚು ಹಣದ ವಿನಿಯೋಗ ಆಯಿತು. ಈಗ ಐದನೆಯ ಯೋಜನೆಯಲ್ಲಿ ನಾಲ್ಕನೆಯದಕ್ಕಿಂತ ೧೧೨ ಪ್ರತಿಶತ ಹೆಚ್ಚಿಗೆ ಹಣ ವಿನಿಯೋಗಿಸುವುದು ನಿಶ್ಚಿತವಾಗುತ್ತಿತ್ತು, ಆದರೆ ಆರ್ಥಿಕ ಸ್ಥಿತಿ ಗಂಭೀರವಾಯಿತು. ಯೋಜನೆ ಏನಾದೀತು ಎಂದು ಹೇಳುವುದು ಕಷ್ಟ. ಆದರೆ ಮುಂದಿನ ಎರಡು ತಿಂಗಳಲ್ಲಿ ಪರಿಸ್ಥಿತಿ ಮತ್ತಷ್ಟು ಕೆಡಲಿದೆ ಎಂಬ ಪ್ರಧಾನಿಯ ಎಚ್ಚರಿಕೆ ತಪ್ಪೇನೂ ಅಲ್ಲ. ಯೋಜನೆಯ ಮೇಲೆ ದಿನದಿನವೂ ಖರ್ಚು ಹೆಚ್ಚುತ್ತ ಹೋಯಿತು, ಆದರೆ ಗುರಿ ತಲುಪುವುದೂ ದೂರವಾಗುತ್ತ ಹೋಯಿತು. ಸಾಧಾರಣ ವ್ಯಕ್ತಿಗಳ ಅರಿವಿಗೆ ಇದು ಬರುವಂತಹದಲ್ಲ. ಬಡವ–ಶ್ರೀಮಂತ ಅಂತರ ಹೆಚ್ಚಿದೆ. ನಿರುದ್ಯೋಗ ಹೆಚ್ಚಿದೆ, ಉತ್ಪಾದನೆ ಇಳಿದಿದೆ, ಸಾಲ ಹೆಚ್ಚಿದೆ, ಬೆಲೆ ಏರಿದೆ, ಆದಾಯ ಇಳಿದಿದೆ, ಆದರೆ ಯೋಜನೆಯಲ್ಲಿ ಹೂಡುವ ಪ್ರಯತ್ನ ಮತ್ತು ತ್ಯಾಗ ಅಭಿವೃದ್ಧಿಗಾಗಿಯೇ ಮಾಡುತ್ತಿರುವುದು, ಮಾಡುತ್ತಲೇ ಇದ್ದಾರೆ. ಕಾಳಸಂತೆಯಲ್ಲಿ ಎಲ್ಲವೂ ದೊರೆಯುತ್ತದೆ, ಆದರೆ ಜನತಾ ಬಜಾರ್‌ನಲ್ಲಿ ವಸ್ತುಗಳ ಕೊರತೆ ಇದೆ. ಕಪ್ಪುಹಣ ತಡೆಯುವ ಪ್ರಯತ್ನ ನಡೆದಿದೆ. ಆದರೆ ಅದು ಒಂದು ಸಮಾನಾಂತರ ಆರ್ಥಿಕ ವ್ಯವಸ್ಥೆಯನ್ನೇ ಉತ್ಪನ್ನ ಮಾಡಿದೆಯೇನೋ ಅನ್ನುವಷ್ಟು ಕಪ್ಪು ಹಣ ಬೆಳೆದಿದೆ. ೧೫೦೦೦ ಕೋಟಿಯಿಂದ ಹಿಡಿದು ೨೪೦೦೦ ಕೋಟಿಯವರೆಗೆ ಬೆಳೆದಿದ್ದು, ಪ್ರತಿವರ್ಷ ತಪ್ಪುದಾರಿಯಿಂದ ಪಡೆದ ಹಣ ಅದಕ್ಕೆ ಸೇರುತ್ತಲೇ ಹೋಗುತ್ತಿದೆ. ಇದು ಅರ್ಥವ್ಯವಸ್ಥೆಯ ದಯನೀಯ ಸ್ಥಿತಿಗೆ ಕಾರಣವಾಗಲಾರದೇನು?

ಯೋಜನೆ ಮತ್ತು ಅಭಿವೃದ್ಧಿಯ ದಿಕ್ಕಿನ ಕುರಿತು ಪಂಡಿತ ದೀನದಯಾಳರ ವಿಚಾರಗಳನ್ನು ಸಮೀಕ್ಷೆ ಮಾಡುವ ಪೂರ್ವದಲ್ಲಿ ನಿರ್ಮಾಣ ಮತ್ತು ಪ್ರಸಾರ ಯೋಜನೆಯ ಅವಧಿಯಲ್ಲಿ ಸಮಾಜವಾದದ ಸ್ಥಾಪನೆಯ ನಿಮಿತ್ತ ಮಾಡಲಾದ ಸಾರ್ವಜನಿಕ ಕ್ಷೇತ್ರದ ಮೇಲೆ ಕೂಡ ದೃಷ್ಟಿ ಹಾಯಿಸುವುದು ಉಪಯುಕ್ತವೆನಿಸುತ್ತದೆ.

ಸರಕಾರಿ ಉದ್ಯಮಗಳ ಬ್ಯುರೋ ಸರಕಾರಿ ಕ್ಷೇತ್ರದ ಕಾರ್ಯಕ್ರಮಗಳ ಬಗ್ಗೆ ಒಂದು ವರದಿಯಲ್ಲಿ ಹೀಗೆ ಬರೆದಿತ್ತು. ಹಿಂದುಸ್ತಾನ ಸ್ಟೀಲ್ ಲಿಮಿಟೆಡ್‌ನ ಅಧೀನ ಕಾರ್ಖಾನೆಗಳಲ್ಲಿ ಸರಕಾರಿ ಕ್ಷೇತ್ರದಲ್ಲಿ ತೊಡಗಿಸಲಾದ ಒಟ್ಟೂ ಬಂಡವಾಳದ ಒಂದು ನಾಲ್ಕಾಂಶ ಭಾಗಹೂಡಿಕೆಯಾಗಿದ್ದು, ೧೯೬೯–೭೦ ಅವಧಿಯಲ್ಲಿ ೧೦.೪೭ ಕೋಟಿ ರೂಪಾಯಿ ಹಾನಿಯನ್ನು ಅನುಭವಿಸಿದೆ. ಇದಕ್ಕಿಂತ ಮುಂಚೆ ಅವು ೩೯.೯೧ ಕೋಟಿ ರೂಪಾಯಿ ಹಾನಿಯನ್ನು ಅನುಭವಿಸಿದ್ದವು. ಹದಿನೈದು ವರ್ಷಗಳ ಅನುಭವದ ನಂತರವೂ ಕಾರಖಾನೆಗಳು ಹಾನಿಯನ್ನು ಅನುಭವಿಸುತ್ತಿರುವುದು ಅಚ್ಚರಿಯ ವಿಷಯವಾಗಿದೆ. ದುರ್ಗಾಪುರ ತನ್ನ ಸಾಮರ್ಥ್ಯದ ಕೇವಲ ಶೇ. ೩೯, ರೂರಕೇಲಾ ಕೇವಲ ಶೇ. ೫೭ ಮತ್ತು ಭಿಲಾಯಿ ಶೇ. ೭೭ ಬಳಕೆ ಮಾಡಿಕೊಳ್ಳುತ್ತಿವೆ. ಅದೇ ಸಮಯಕ್ಕೆ ಟಾಟಾ ಸ್ಟೀಲ್ ಕಾರಖಾನೆ ತನ್ನ ಸಾಮರ್ಥ್ಯದ ಶೇ. ೮೫ ಬಳಕೆ ಮಾಡಿಕೊಳ್ಳುತ್ತಿದೆ. ಆದರೆ ಇಂದು ದೇಶದ ಒಟ್ಟೂ ಉಕ್ಕು ಉತ್ಪಾದನೆಯ ಉದ್ಯಮ ಸರಕಾರದ ಕೈಯಲ್ಲಿದೆ. ಉಕ್ಕಿನ ಕೊರತೆಯಿಂದಾಗಿ ಔದ್ಯೋಗಿಕ ಅಭಿವೃದ್ಧಿಯ ಕೊರತೆಯ ದರ ಶೇ. ೪.೬ಕ್ಕೇ ನಿಂತುಬಿಟ್ಟಿದೆ. ೨೬೦ ಕೋಟಿ ರೂಪಾಯಿಗಳ ಕರಾಂಚಿಯ ಹೆವಿ ಎಂಜಿನಿಯರಿಂಗ್ ಕಾರ್ಪೊರೇಶನನ್ನು ವ್ಯಾವಹಾರಿಕ ರೂಪದಲ್ಲಿ ೧೯೭೪ ರಿಂದ ನಿಲ್ಲಿಸಲಾಗಿದೆ. ಅದು ಪ್ರತಿ ವರ್ಷ ೫೦ ಕೋಟಿ ರೂಪಾಯಿಗಳ ಹಾನಿಯನ್ನು ಅನುಭವಿಸುತ್ತಿದೆ. ಯಾಕೆಂದರೆ ಅದಕ್ಕೆ ಆರ್ಡರೇ ಬರುತ್ತಿಲ್ಲ. ಕಳೆದ ಕಾರಖಾನೆಯ ಮೂರೂ ವಿಭಾಗಗಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಇನ್ನೂ ಸ್ಥಾಪಿಸಿಲ್ಲ, ಒಟ್ಟೂ ಸಾಮರ್ಥ್ಯದ ಶೇ. ೨೦ ಮಾತ್ರ ಪ್ರಯೋಗದಲ್ಲಿದೆ ಎಂಬುದು ಅಚ್ಚರಿಯ ವಿಷಯ. ಇನ್ನೂ ಎಷ್ಟುಕಾಲ ಈ ಕಾರಖಾನೆ ಹಾನಿಯನ್ನು ಅನುಭವಿಸುತ್ತ ಇರುವುದೋ ಹೇಳುವುದು ಕಷ್ಟ. ಉಕ್ಕಿನ ರಾಷ್ಟ್ರೀಕರಣದಿಂದ ಹಿಡಿದು ಕಲ್ಲಿದ್ದಲು ರಾಷ್ಟ್ರೀಕರಣ, ಬ್ಯಾಂಕುಗಳ ರಾಷ್ಟ್ರೀಕರಣ, ಧಾನ್ಯಗಳ ಠೋಕ ವ್ಯಾಪಾರದ ರಾಷ್ಟ್ರೀಕರಣ ಇವೆಲ್ಲ ಚಿತ್ರಗಳು ಒಳ್ಳೆಯವಲ್ಲ, ಆದರೂ ಕೂಡ ಇವೆಲ್ಲಕ್ಕೂ ರಾಮಬಾಣ ಔಷಧಿ 'ರಾಷ್ಟ್ರೀಕರಣ' ಎಂದು ಭಾವಿಸಲಾಗುತ್ತದೆ, ಯಾಕೆಂದರೆ ಸಮಾಜವಾದವನ್ನು ತರಲು ಇದೇ ದಾರಿಯಾಗಿದೆ.

ಪಂಡಿತ್ ದೀನ್‌ದಯಾಳರು ಈ ಪುಸ್ತಕದಲ್ಲಿ ಬರೆದಿದ್ದಾರೆ. "ಯಾವುದೇ ಯೋಜನಾ ನಿರೂಪಕನು ಯೋಜನೆಯ ವಿಭಿನ್ನ ಸಂಬಂಧಿತ ಅಂಗಗಳಲ್ಲಿ ಸಂಭಾವ್ಯ ಪರಿವರ್ತನೆಗಾಗಿ ಅವಕಾಶವನ್ನು ಬಿಟ್ಟು ಹೋಗದಿದ್ದರೆ, ಆಗ ಬೇರೆ ಬೇರೆ ಪ್ರಕಾರದ ಸಂಕಟಗಳು ಉದ್ಭವಿಸತೊಡಗುತ್ತದೆ. ಅದನ್ನು ಬದಿಗೆ ಸರಿಸಲು ಸರಕಾರವು ಹೆಚ್ಚು ಹೆಚ್ಚಿಗೆ ಶಕ್ತಿಯನ್ನು ತನ್ನ ಕೈಗೆ ತೆಗೆದುಕೊಳ್ಳುತ್ತ ಹೋಗುತ್ತದೆ. ರಷ್ಯಾ ಮುಂತಾದ ಸಾಮ್ಯವಾದಿ ದೇಶಗಳಲ್ಲಿ ಮೊದಲ ರೀತಿ ಕಾಣಿಸಿಕೊಂಡರೆ, ಭಾರತದಲ್ಲಿ ಎರಡನೆಯ ರೀತಿಯದು. ಒಂದರಲ್ಲಿ ಸರ್ವಾಧಿಕಾರವು ಆರ್ಥಿಕ ನೀತಿಯನ್ನು



ನಿಯಂತ್ರಿಸಿದರೆ, ಇನ್ನೊಂದರಲ್ಲಿ ಆರ್ಥಿಕ ನೀತಿಯ ತೊಂದರೆ ಕಷ್ಟಗಳು ಅದನ್ನು ಸರ್ವಾಧಿಕಾರದ ಕಡೆಗೆ ದೂಡುತ್ತವೆ. ನಾವು ಎರಡರಿಂದಲೂ ಬಚಾವಾಗಬೇಕಾಗಿದೆ." ನಮ್ಮ ದೇಶದಲ್ಲಿನ ಆರ್ಥಿಕ ನೀತಿಯ ಕಷ್ಟಗಳನ್ನು ದೂರಮಾಡಲೆಂದೇ ಬ್ಯಾಂಕುಗಳನ್ನು, ಕಲ್ಲಿದ್ದಲನ್ನು, ಗೋಧಿಯ ಠೋಕ ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಿಲ್ಲವೆ? ಪಂಡಿತಜೀ ಸಲಹೆ ನೀಡಿದ್ದರು: "ಸರಕಾರವು ತನ್ನ ಕೈಯಲ್ಲಿ ಬಹಳ ಸ್ವಲ್ಪ ಹಾಗೂ ಅನಿವಾರ್ಯವಾದ ಉದ್ಯಮಗಳನ್ನಷ್ಟೇ ತೆಗೆದುಕೊಂಡು ಉಳಿದವುಗಳನ್ನು ನಿಯಂತ್ರಣದ ಮೂಲಕ ನಿಯಂತ್ರಿಸುತ್ತ ಹೋಗಬೇಕು." ಆಹಾರಧಾನ್ಯಗಳ ರಾಷ್ಟ್ರೀಕರಣದ ಬಗ್ಗೆ ದೀನ್‌ದಯಾಳರು ಬರೆದಿದ್ದರು, "ಸರಕಾರದ ಮೂಲಕ ವ್ಯಾಪಾರದ ರಾಷ್ಟ್ರೀಕರಣ ಕೇವಲ ನಿಗದಿಪಡಿಸದ ಬೆಲೆಯಲ್ಲಿ ಧಾನ್ಯ ಖರೀದಿವರೆಗಷ್ಟೇ ಸೀಮಿತವಾಗಿ ಉಳಿಯುವುದಿಲ್ಲ. ಮೇಲಾಗಿ ಅದರ ಮುಂದಿನ ಸ್ವಾಭಾವಿಕ ಹೆಜ್ಜೆಯು ಬಲಾತ್ಕಾರವಾಗಿ ಧಾನ್ಯ ವಸೂಲಿ ಮತ್ತು ರೇಶನ್ ಹಂಚುವುದು ಆಗಿರುತ್ತದೆ. ನಾವು ನಿಯಂತ್ರಣದ ಕಹಿ ಅನುಭವಗಳನ್ನು ಪಡೆದಿದ್ದೇವೆ. ಮತ್ತೆ ಹಳೆಯ ತಪ್ಪುಗಳನ್ನೇ ಮರುಕಳಿಸುವುದು ಸರಿಯೆನಿಸುವುದಿಲ್ಲ." ಈ ಕಾಲದಲ್ಲಿಯೂ ಕರಾಳ ಸ್ಥಿತಿಯ ಅನುಭವದ ಒಂದು ಪ್ರಮುಖ ಕಾರಣವೆಂದರೆ, ಧಾನ್ಯ ವ್ಯಾಪಾರದ ರಾಷ್ಟ್ರೀಕರಣವೇ ಆಗಿದೆ. ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೆ ಅವರು ನೀಡಿದ ಎಚ್ಚರಿಕೆ ಅವರ ದೃಷ್ಟಿಕೋನದ ವಾಸ್ತವವನ್ನು ಸಿದ್ಧಪಡಿಸುತ್ತದೆ." ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲಾರರು. ಭ್ರಷ್ಟಾಚಾರದ ವ್ಯಾಪಕತೆ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಅದನ್ನು ದೂರಮಾಡಲು ನಾವು ಕೆಲವು ಕಠಿಣ ಹೆಜ್ಜೆಗಳನ್ನು ಇಡಬೇಕಾಗಿದೆ. ಸಾರ್ವಜನಿಕ ಉದ್ಯಮಗಳ ಸರಿಯಾದ ವ್ಯವಸ್ಥಾಪನೆ ಆಗದಿದ್ದರೆ, ಭಾರತದ ಭಾವೀ ಔದ್ಯೋಗೀಕರಣದ ಅಡಿಗಲ್ಲನ್ನು ಇಡುವ ಬದಲು ತಮ್ಮದೇ ಸ್ವಂತದ ಪ್ರೇರಣೆಯಿಂದ ನಡೆಯುತ್ತಿರುವುದು ಅದರ ದಾರಿಯಲ್ಲಿನ ತೊಡಕಾಗಲಿದೆ."

ಉದ್ಯಮಗಳಿಗೆ ಸಂಬಂಧಿಸಿದಂತೆ ಮಾನ್ಯ ದೀನದಯಾಳರು ಬರೆದಿದ್ದಾರೆ. "ಮಿತವ್ಯಯವು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯಿಂದಲ್ಲ, ಅಧಿಕ ಉತ್ಪಾದನೆಯ ಕಾರಣದಿಂದ ಆಗುತ್ತದೆ ಎಂಬುದು ಸತ್ಯವಾದ ವಿಚಾರ. ಆದರೆ ನಾವು ಇತಿಹಾಸದಲ್ಲಿ ನೋಡಿದ ಹಾಗೆ, ಬ್ರಿಟನ್ನಿನಲ್ಲಿ ದೊಡ್ಡ ಪ್ರಮಾಣದಲ್ಲಿ ಬಟ್ಟೆ ತಯಾರಾದರೂ ಕೂಡ ಭಾರತದ ಬಟ್ಟೆ ಅಲ್ಲಿಯ ಮಾರುಕಟ್ಟೆಯಲ್ಲಿ ಅಗ್ಗದಲ್ಲಿ ದೊರೆಯುತ್ತದೆ. ಜಪಾನಿನ ವಸ್ತುಗಳು ಅಗ್ಗವಾಗಿ ಬಂದು ಮಾರುಕಟ್ಟೆಯ ಉಳಿದೆಲ್ಲ ಸರಕುಗಳನ್ನು ಹೊರಹಾಕಿಬಿಡುತ್ತವೆ, ಇವೆಲ್ಲ ದೊಡ್ಡ ಕಾರಖಾನೆಗಳಲ್ಲಿ ತಯಾರಾದವಲ್ಲ, ಮನೆಗಳಲ್ಲಿ ತಯಾರಾದವು. ಹೆಚ್ಚಿನ ಉತ್ಪಾದನೆ ಆಗದಿದ್ದರೆ, ದೊಡ್ಡ ಪ್ರಮಾಣದಲ್ಲಿ ಉದ್ಯಮಗಳ ಮೇಲುಸ್ತುವಾರಿಯದೇ ಎಷ್ಟೊಂದು ವೆಚ್ಚ ಬರುವುದೆಂದರೆ ಉತ್ಪಾದನಾ ವೆಚ್ಚ

ಹೆಚ್ಚಾಗದೆ ಉಳಿಯುವುದೇ ಇಲ್ಲ". ಇದು ಪಂಡಿತ ದೀನದಯಾಳರ ದೃಷ್ಟಿಯಲ್ಲಿ ಯೋಜನೆಯ ಕಲ್ಪನೆ. ಅದಕ್ಕೆ ಅವರು "ವಿಕೇಂದ್ರಿತ ಕೃಷಿ – ಔದ್ಯೋಗಿಕ ಗ್ರಾಮ–ಸಮಾಜ" ಎಂಬ ಹೆಸರು ಕೊಟ್ಟಿದ್ದಾರೆ. ಮತ್ತು ಶ್ರಮ ಬಂಡವಾಳದ ಹೂಡಿಕೆಯ ಬಗ್ಗೆ ಬರೆದಿದ್ದಾರೆ. "ಪಶ್ಚಿಮದಲ್ಲಿ ಶ್ರಮದ ಕೊರತೆಯಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಗೂ ಹೆಚ್ಚು ಉತ್ಪಾದನೆಯೇ ಅವನ ಏಕಮೇವ ಗುರಿಯಾಗಿರುತ್ತದೆ ಎಂಬುದನ್ನೂ ನಾವು ಯೋಚಿಸಬೇಕು. ಯಾವುದೇ ದೇಶದಲ್ಲಿ ದೊರೆಯದ ಉತ್ಪಾದನೆಯ ಅತಿಹೆಚ್ಚು ಉಪಯೋಗವೇ ಹಣಕಾಸು ವೃದ್ಧಿಯ ವಿಧಾನದ ಆಧಾರವಾಗಿರುತ್ತದೆ. ನಮ್ಮಲ್ಲಿ ಬಂಡವಾಳದ ಕೊರತೆಯಿದೆ. ಆದ್ದರಿಂದ ನಾವು ಬಂಡವಾಳದ ಪ್ರತಿ ಘಟಕದಿಂದ ಅತಿ ಹೆಚ್ಚು ಉತ್ಪಾದನೆಯನ್ನು ಪಡೆಯಬೇಕಾಗಿದೆ." ಭಾರತದ ಬಗೆಗಿನ ಭಕ್ತಿಯಿಂದ ಓತಪ್ರೋತವಾದ ಅವರ ವಿಚಾರಗಳ ಮೇಲೆ ಗಮನಹರಿಸಿದ್ದರೆ ಇವತ್ತಿನ ವಿಸ್ಮಯಕಾರಿ ಪ್ರತಿಫಲ ದೊರೆಯುತ್ತಿರಲಿಲ್ಲ.

ಕಲ್ಯಾಣ ರಾಜ್ಯದ ಅನುಭೂತಿಗಾಗಿ ಒಂದು ಆರೋಗ್ಯಕಾರಿಯಾದ ವೇತನ ನೀತಿ ಬೇಕು. ದುಬಾರಿಯ ಅನುಪಾತದಲ್ಲಿ ವೇತನವನ್ನು ಹೆಚ್ಚಿಸಲಾಗುವುದಿಲ್ಲ, ಆದರೆ ಜನರನ್ನು ಸಂತುಷ್ಟವಾಗಿಡಲು ಏನಾದರೂ ತುಸುಕೊಡಲೇ ಬೇಕು. ಸ್ವಲ್ಪ ಕೊಡುತ್ತೇವೆ ಸಹ. ಆದರೆ ವೇತನ ಆಯೋಗದ ಶಿಫಾರಸು ಆದಮೇಲೆ. ಇದನ್ನು ಇಂಗ್ಲಿಷರು ಅನುಸರಿಸಿದ್ದರು, ಅದೇ ನೀತಿಯನ್ನು ನಾವೂ ಅನುಸರಿಸುತ್ತಿದ್ದೇವೆ. ಮೂಲ್ಯ ಪ್ರಭಾವವನ್ನು ನೂರು ಪ್ರತಿಶತ ಇಲ್ಲವಾಗಿಸುವ ಸಿದ್ಧಾಂತದ ರೂಪದಲ್ಲಿ ಒಪ್ಪಿಕೊಂಡ ನಂತರವೂ, ಶ್ರಮಿಕನೇ ಒಂದು ರಾಷ್ಟ್ರದ ರಾಷ್ಟ್ರಪತಿಯಾಗಿದ್ದಾಗಲೂ, ನಾವು ಅದನ್ನು ಅನ್ವಯಿಸಲು ಆಗಲಿಲ್ಲ. "ಗಿರಿ ಎಪ್ರೋಚ್" ಕೂಡ ಬದಲಾಯಿತು. ಈವರೆಗೆ ರಾಷ್ಟ್ರೀಯ ವೇತನನೀತಿ ಸಿದ್ಧವಾಗಲಿಲ್ಲ. ಅವಶ್ಯಕತೆಯನ್ನು ಅವಲಂಬಿಸಿದ ೧೫ನೇ ಇಂಡಿಯನ್ ಲೇಬರ್ ಕಾನ್‌ಫರೆನ್ಸಿನ ಸೂತ್ರವು ಪರಿಗಣಿಸಿದ ೩೧೪ ರೂ ಮಾಸಿಕ ವೇತನ ಬಹಳ ದೂರವೇ ಇದೆ. ಯಾಕೆಂದರೆ ಮೂರನೆಯ ವೇತನ ಆಯೋಗವು ಅದನ್ನು ೧೮೫ ರೂಪಾಯಿಗೆ ತಂದು ನಿಲ್ಲಿಸಿದೆ. ಯೋಜನಾ ಆಯೋಗದಿಂದ ಪ್ರಸಾರಿತವಾದ 'ಬಡತನ ರೇಖೆ' ಪ್ರತಿತಿಂಗಳು ೨೦೦ ರೂಪಾಯಿಗಳಾಗಿವೆ. ಒಂದು ಕ್ಷಣ ಅಂದಾಜು ಮಾಡಿ, ಭಾರತದ ಬಡತನದ ಚಿತ್ರ ಜಗತ್ತಿನಲ್ಲೆಲ್ಲ ಅದ್ಭುತವಾಗಿದೆ. ಕೆಲಸಗಾರನು ಸಂಬಳ ಹೆಚ್ಚಳ ಬಯಸುವುದಿಲ್ಲ, ಅವನು ಕೇವಲ ಸುಖ ಸೌಲಭ್ಯಗಳನ್ನಲ್ಲ, ಆವಶ್ಯಕ ವಸ್ತುಗಳನ್ನು ತನಗೆ ಬೇಕಾಗುವಷ್ಟು ಬಯಸುತ್ತಾನೆ. ಆದರೂ ಭಾರತ ಸರಕಾರದ ಕಾರ್ಮಿಕ ಮಂತ್ರಿ ಹೇಳುತ್ತಾರೆ. ಭಾರತ ಸರಕಾರವು ವೇತನ ಹೆಚ್ಚಳವನ್ನು ತಡೆಯುವುದು ಯೋಗ್ಯವೆಂದು ಭಾವಿಸುತ್ತಿಲ್ಲ ಮತ್ತು ಸರಕಾರವು ವೇತನ ಹೆಚ್ಚಳವನ್ನು ತಡೆಯಲು ಬಯಸುತ್ತಿಲ್ಲ. ಮತ್ತು ಮುಷ್ಕರಕ್ಕೆ ತಡೆಯನ್ನು ಹಾಕಲು ಇಷ್ಟಪಡುತ್ತಿಲ್ಲ. ಸಂಬಳವನ್ನು ತುಸುಹೆಚ್ಚಿಸಿದರೆ



ಈ ಮುಷ್ಕರಗಳನ್ನು ತಡೆಯಲು ಸಾಧ್ಯವೇ? (ಹಣಕಾಸು ಸಚಿವರ ಪ್ರಕಾರ ರೂಪಾಯಿಯ ಬೆಲೆ ೩೯ ಪೈಸೆಗಿಂತ ಕಡಿಮೆ ಆಗಿರುವಾಗ.)

ಉಪಸಂಹಾರದ ಈ ಕೆಲವು ಪುಟಗಳಲ್ಲಿ ಬೆಳಕಿಗೆ ಬಂದ ಹಾಗೆ, ಸ್ಥಿತಿ ಭಯಾನಕವಾಗಿದೆ, ಅಸುರಕ್ಷಿತತೆಯ ವಾತಾವರಣದಲ್ಲಿ ನಾವು ಬದುಕುತ್ತಿದ್ದೇವೆ. ಭ್ರಷ್ಟಾಚಾರದ ನರ್ತನ ನಡೆದಿದೆ, ಹಣದುಬ್ಬರ, ಬೆಲೆಯೇರಿಕೆ ನೀತಿಗಳಿಂದ ಉತ್ಪನ್ನವಾಗಿದೆ. ಬಡತನ ಕಡಿಮೆಯಾಗುತ್ತಿಲ್ಲ, ಆದರೆ ಶ್ರೀಮಂತರು ಹೆಚ್ಚುತ್ತಿದ್ದಾರೆ, ಶ್ರಮ ಮತ್ತು ಪುರುಷಾರ್ಥದ ಪರಿಭಾಷೆಗಳು ಬದಲಾಗುತ್ತಿವೆ, ಹೇಳುವಿಕೆ–ಮಾಡುವಿಕೆಗಳಲ್ಲಿ ಸಾಮಂಜಸ್ಯವನ್ನು ತರುವ ಪ್ರಯತ್ನಗಳೂ ನಡೆಯುತ್ತಿಲ್ಲ, ಹಣವನ್ನು ಸುಲಭವಾಗಿ ಪಡೆಯಬಹುದು, ಹಾಗಾಗಿ ಬೆವರು ಸುರಿಸಿ ದುಡಿಯುವುದರಲ್ಲಿ ಜನರಿಗೆ ಆಸಕ್ತಿ ಹೊರಟು ಹೋಗಿದೆ. ಲಾಟರಿ ಬಂದ್ ಆಗಿತ್ತು. ಈಗ ಮತ್ತಷ್ಟು ಹೆಚ್ಚಿದೆ. ಸಾಲ ಬಹಳ ಕಷ್ಟದಿಂದ ದೊರಕುತ್ತಿತ್ತು, ಈಗ ಬಹಳ ಸುಲಭವಾಗಿ ದೊರಕುತ್ತಿದೆ. ಯೋಜನೆಯೆಂಬುದು ಅಭಿವೃದ್ಧಿಯ ಯಜ್ಞವಾಗದೆ ಜನರನ್ನು ಭ್ರಷ್ಟಗೊಳಿಸುವ ನೆಪವಾಗುತ್ತಿದೆ. ಇಷ್ಟೊಂದು ದಿನಗಳಲ್ಲಿಯೂ ಭಾರತೀಯ ಜನತೆಯ ಧೈರ್ಯವನ್ನು ನಾಶಮಾಡಲು ಸಾಧ್ಯವಾಗದ ನಮ್ಮದೇ ನೀತಿಯ ವೈಫಲ್ಯವನ್ನು ಹಳೆಯ ವ್ಯವಸ್ಥೆಗಳ ಮೇಲೆ ಹೇರಿ ಅವುಗಳನ್ನು ಅಳಿಸಿಹಾಕಲು ಜನತೆಯಲ್ಲಿ ಕ್ರಾಂತಿಯನ್ನು ಉತ್ತೇಜಿಸುವ ಕೆಲಸ ಮಾಡುತ್ತಿದ್ದೇವೆ. ಮತ್ತು ಬಡತನ ಅಳಿಸಿ ಹೋಗದಿದ್ದರೆ ರಕ್ತಕ್ರಾಂತಿಯಾಗುತ್ತದೆ ಎಂದು ಹೇಳುತ್ತೇವೆ. ಆದರೆ ಅವರಿಗೆ ರಕ್ತ ಕ್ರಾಂತಿಯ ಅರ್ಥವಾದರೂ ಗೊತ್ತಿದೆಯೆ? ಮತ್ತು ಅದರ ಪರಿಣಾಮದ ಸಂಗ್ರಹ ಮಾಡಲು ಸಮರ್ಥರಿದ್ದಾರೆಯೆ? ಹಣದ ಭೂತವನ್ನು ಎಚ್ಚರಿಸಿದವರು ಯಾರು? ಪ್ರತಿಯೊಂದು ಕಾರ್ಯವನ್ನು ಹಣದ ಮೂಲಕವೇ ಅಳೆಯಲು ಕಲಿಸಿದವರಾರು? ಯಾವ ದೇಶದ ಜನರು ತಮ್ಮ ತ್ಯಾಗ ಮತ್ತು ಬಲಿದಾನಗಳಿಂದ ಇಂಗ್ಲಿಷರನ್ನು ಓಡಿಸಿದರೋ, ಅದನ್ನು ಸ್ವಾತಂತ್ರ್ಯ ದೊರೆತ ಮೇಲೆ ಹಾಳುಮಾಡಿದವರಾರು? ಮತ್ತು ಸ್ವಾತಂತ್ರ್ಯವನ್ನು ತೆಗೆದುಕೊಂಡದ್ದಾದರೂ ಯಾತಕ್ಕೆ ಎಂಬುದನ್ನು ಮರೆತು ಬಿಟ್ಟೆವೇ? ಧರ್ಮವನ್ನು ರಾಜನೀತಿಯಿಂದ ದೂರಸರಿಸಿದ ಮೇಲೆ ಜನರು ವ್ಯಕ್ತಿ–ಕುಟುಂಬ–ಸಮಾಜ–ರಾಷ್ಟ್ರ ಅಥವಾ ವಿಶ್ವದ ರಕ್ಷಣೆ ಮಾಡುವ ಆ ಧರ್ಮವನ್ನೇ ಮರೆತುಬಿಟ್ಟದ್ದು ಯಾಕೆ? 'ಅರ್ಥ' ಮತ್ತು ನಿಯಂತ್ರಣವಿಲ್ಲದ 'ಕಾಮ' ದ ಪ್ರಸಾರ ಸಾಕಷ್ಟಾಗಿದೆ. ಅವಶ್ಯಕ ವಸ್ತುಗಳ ಕೊರತೆ ಮತ್ತು ವಿಲಾಸೀ ವಸ್ತುಗಳ ಹೆಚ್ಚುತ್ತಿರುವ ಉತ್ಪಾದನೆ ಬೇರೇನೂ ಹೇಳುತ್ತಿಲ್ಲ. ಸರಕಾರಿ ಹಣವನ್ನು ತಮ್ಮದಕ್ಕಿಂತ ಹೆಚ್ಚು ಬೆಲೆಯುಳ್ಳದ್ದು, ಎಂದು ತಿಳಿಯುವ ಜನರು ಕಡಿಮೆಯಾಗಿದ್ದಾರೆ. ಈ ಕಾರಣದಿಂದಲೇ ಯೋಜನೆಗಳು ವಿಫಲವಾಗಿವೆ. ಇಂದು ಹೇಳಲಾಗುತ್ತಿದೆ, "ಪ್ರತಿಯೊಬ್ಬ ವ್ಯಕ್ತಿಗೂ ಬೆಲೆ ಇದೆ. ಕೆಲವರದು ಕಡಿಮೆ, ಕೆಲವರದು ಹೆಚ್ಚು." ಖಂಡಿತವಾಗಿ ಇಂದಿಗೂ

ಖರೀದಿ ಮಾಡಲು ಸಾಧ್ಯವಾಗದ ವ್ಯಕ್ತಿಗಳು ಇದ್ದಾರೆ. ಆದರೆ ಅವರ ತಮ್ಮಲ್ಲಿಯೇ ಮುಳುಗಿದ್ದಾರೆ–ಸಾಮಾಜಿಕ ಪ್ರಭಾವದಿಂದ ಹೀನರಾಗಿ ಇಂತಹ ವ್ಯಕ್ತಿಗಳನ್ನು ಪ್ರಭಾವಿಗಳನ್ನಾಗಿ ಮಾಡಬೇಕು, ಧರ್ಮವನ್ನು ಹೀಗೆ ರಾಜಕೀಯದಲ್ಲಿ ತರುವ ಮೊದಲ ಪ್ರಯತ್ನ ನಡೆಯಬೇಕು.

'ಏಕಾತ್ಮ ಮಾನವದರ್ಶನ'ವನ್ನು ಪಂಡಿತ್ ದೀನ್‌ದಯಾಳರು 'ಸಮಾಜವಾದ' ಹಾಗೂ 'ಬಂಡವಳವಾದ'ಗಳಿಗೆ ಪರ್ಯಾಯವಾಗಿ ಪ್ರಸ್ತುತಗೊಳಿಸಿದರು. ಈ ಪುಸ್ತಕ ಬರೆದ ಅನಂತರ ನಿರಂತರ ನಡೆಯುವ ರಾಷ್ಟ್ರ ಚಿಂತನದ ಪ್ರತಿಫಲ ಅದು. 'ಸ್ವ'ದ ಬಗೆಗೆ ದುರ್ಲಕ್ಷ್ಯ ಮಾಡದಿರಲು, ಮತ್ತು ಆತ್ಮಾಭಿಮುಖಿ ಆಗುವ ಪಾಠವನ್ನು ಅವರು ಯಾವಾಗಲೂ ನೀಡಿದರು. ನಮ್ಮ ದೇಶ, ನಮ್ಮ ಚಿಂತನೆ, ನಮ್ಮ ಪರಿಸ್ಥಿತಿಗಳು, ನಮ್ಮ ನಿರ್ಣಯ ಅವರ ಆದರ್ಶ ಆಗಿತ್ತು. ಭಾರತೀಯ ಸಂಸ್ಕೃತಿಯ ಏಕಾತ್ಮವಾದೀ ಸ್ವರೂಪದಲ್ಲಿ ವಿವಿಧತೆಯಲ್ಲಿ ಏಕತೆ, ಅಥವಾ ಏಕತೆಯ ವಿವಿಧ ರೂಪಗಳಲ್ಲಿ ವ್ಯಕ್ತಿಗತ ಕೇಂದ್ರಸ್ಥವಿಚಾರವಿದೆ. ಅದನ್ನು ಹೃದಯಂಗಮಗೊಳಿಸಿದ ಮೇಲೆ, ಬೇರೆ ಬೇರೆ ಅಧಿಕಾರದ ಮಧ್ಯೆ ಸಂಘರ್ಷ ಲುಪ್ತವಾಗಿಬಿಡುತ್ತದೆ. ಪರಸ್ಪರ ಪೂರಕತೆಯನ್ನು ಗುರುತಿಸಿಕೊಂಡು ಅವುಗಳಲ್ಲಿ ಪರಂಪರೆಗೆ ಅನುಕೂಲವಾದ ವಿಕಾಸ ಮಾಡುವುದು, ಹಾಗೂ ಅದನ್ನು ಸಂಸ್ಕರಿಸುವುದು ಅದೇ ಸಂಸ್ಕೃತಿ. ಪ್ರಕೃತಿಯನ್ನು ನಮ್ಮ ಧ್ಯೇಯಕ್ಕೆ ಅನುಗುಣವಾಗಿ ಮಾಡಿಕೊಳ್ಳುವುದು ಸಂಸ್ಕೃತಿ, ಮತ್ತು ಪ್ರತಿಕೂಲ ಮಾಡಿಕೊಳ್ಳುವುದು ವಿಕೃತಿ. ಮಾನ್ಯ ದೀನ್‌ದಯಾಳರು ತಮ್ಮ ಪುಸ್ತಕದ ಪ್ರಸ್ತಾವನೆಯಲ್ಲಿ ಬರೆಯುತ್ತಾರೆ. "ಇಲ್ಲಿ ಒಂದು ದಿಕ್ಕಿನತ್ತ ಬೆರಳು ತೋರಿಸಲಾಗಿದೆ, ಅಷ್ಟೇ. ವಿಕಾಸ ಕಡೆ ಮುಖ ಮಾಡಿದ ಭಾರತದ ಸ್ಥೂಲ ರೇಖೆಗಳು ಮತ್ತು ಚಿತ್ರದಲ್ಲಿ ಬಣ್ಣ ತುಂಬುವ ಕೆಲಸ ಪ್ರಕೃತಿ ಮತ್ತು ಪುರುಷರ ಮೂಲಕ ಪೂರ್ಣವಾಗಬೇಕಾಗಿದೆ. ಅದು ಆಗುತ್ತ ಹೋದ ಹಾಗೆ, ಚಿತ್ರವು ಎದ್ದು ಕಾಣತೊಡಗುತ್ತದೆ. ನೋಡುಗನ ಉತ್ಸುಕತೆಯನ್ನು ಬಿಟ್ಟು, ನಿರ್ಮಾಣಕಾರನ ಶ್ರದ್ಧೆ ಮತ್ತು ಪುರುಷಾರ್ಥದಿಂದ ಅದರಲ್ಲಿ ತೊಡಗಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ."

ಮಾನವನ ಪ್ರಗತಿಯ ಅರ್ಥ ಶರೀರ, ಮನಸ್ಸು, ಬುದ್ಧಿ, ಮತ್ತು ಆತ್ಮ ಈ ನಾಲ್ಕರ ಪ್ರಗತಿಯೇ ಆಗಿದೆ. ಮನುಷ್ಯನ ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮದ ಅವಶ್ಯಕತೆಗಳ ಪೂರೈಕೆ, ಅವನ ವಿವಿಧ ಬಯಕೆಗಳು, ಇಚ್ಛೆಗಳು ಹಾಗೂ ಈಷಣಗಳ ಸಂತುಷ್ಟಿ, ಮತ್ತು ಅದರ ಸರ್ವಾಂಗೀಣ ವಿಕಾಸದ ದೃಷ್ಟಿಯಿಂದ ವ್ಯಕ್ತಿಯ ಎದುರಿಗೆ ಕರ್ತವ್ಯದ ರೂಪದಿಂದ ನಮ್ಮೆಲ್ಲ ಚತುರ್ವಿಧ ಪುರುಷಾರ್ಥಗಳ ಕಲ್ಪನೆಯನ್ನು ಇಡಲಾಗಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಧರ್ಮವು ಆಧಾರಭೂತ ಪುರುಷಾರ್ಥ, ಆದರೂ ಧರ್ಮ, ಅರ್ಥ, ಕಾಮ ಒಂದು ಇನ್ನೊಂದಕ್ಕೆ ಪೂರಕ



ಪೋಷಕಗಳಾಗಿವೆ. ಧರ್ಮವು ಮಹತ್ವಪೂರ್ಣವಾದದ್ದು, ಆದರೆ 'ಅರ್ಥ'ದ ಕೊರತೆಯಿದ್ದಲ್ಲಿ ಧರ್ಮವು ನಿಲ್ಲುವುದಿಲ್ಲವೆಂಬುದನ್ನು ಮರೆಯಬಾರದು. ಆಧಾರಭೂತ ಪುರುಷಾರ್ಥವಾಗಿ ಧರ್ಮವು ಇಲ್ಲದಿದ್ದಲ್ಲಿ, ಭ್ರಷ್ಟಾಚಾರದ ದಾನವ ಹುಟ್ಟಿಕೊಳ್ಳುತ್ತಾನೆ. ಯೋಜನೆಗಳ ಆರಂಭಕ್ಕೆ ಮುನ್ನ ಧರ್ಮ ಇತ್ತು, ಯಾಕೆಂದರೆ ಹಣದ ಅಭಾವ ಇರಲಿಲ್ಲ. ಇಂದು ಹಣದ ಅಭಾವದಿಂದ ಧರ್ಮವು ನಾಶವಾಗುತ್ತಿದೆ. ವಿಷಯ ಪುರುಷಾರ್ಥದಿಂದ ಗಳಿಸಿದ ಹಣದ್ದು. ಏಕಾತ್ಮ ಮಾನವದರ್ಶನವು ವ್ಯಕ್ತಿಯ ವಿಭಿನ್ನರೂಪಗಳು ಹಾಗೂ ಸಮಾಜದ ಅನೇಕ ಸಂಸ್ಥೆಗಳಲ್ಲಿ ನಿರಂತರ ಸಂಘರ್ಷವನ್ನು ಅಥವಾ ಹಿತವಿರೋಧವನ್ನು ಒಪ್ಪುವುದಿಲ್ಲ. ಅದು ಎಲ್ಲಿಯಾದರೂ ಕಾಣಿಸಿದರೆ, ಅದು ವಿಕೃತಿಯ ದ್ಯೋತಕ. ವರ್ಗ ಸಂಘರ್ಷದ ಕಲ್ಪನೆಯೇ ಮೋಸದ್ದು. ರಾಷ್ಟ್ರದ ನಿರ್ಮಾಣದ ಯಜ್ಞದಲ್ಲಿ ತೊಡಗಿದ ಎಲ್ಲ ವ್ಯಕ್ತಿಗಳು ಅಥವಾ ಸಂಸ್ಥೆಗಳಲ್ಲಿ ಸಂಘರ್ಷವಿದ್ದರೆ ಯಜ್ಞವು ನಡೆಯುವುದಾದರೂ ಹೇಗೆ? ವರ್ಗ ಸಂಘರ್ಷದ ಕಲ್ಪನೆಯು ರಕ್ತ ಕ್ರಾಂತಿಯ ಆಧಾರದ ಮೇಲೆ ಸಮಾಜವನ್ನು ಒಯ್ಯುತ್ತದೆ. ಮತ್ತು ಎಲ್ಲವನ್ನೂ ಮುರಿದು ಹೊಸದುಗೊಳಿಸುವ ಆದರ್ಶವನ್ನು ಮುಂದಿಟ್ಟು, ಹಳೆಯ ಒಪ್ಪಿತಗಳನ್ನು ಭಗ್ನಗೊಳಿಸಿ, ಹೊಸವರ್ಗದ ರಚನೆಯನ್ನು ಮಾಡಲಾಗುತ್ತದೆ. ಆದರೆ ಇಷ್ಟಾದರೂ ಸಂಘರ್ಷ ನಿಲ್ಲುತ್ತದೆಯೇ? ವರ್ಗದ ಕಲ್ಪನೆಯೇ ಸಂಘರ್ಷಕ್ಕೆ ಜನ್ಮ ಕೊಡುತ್ತದೆ. ಸಮಾನತೆ ಇಲ್ಲವಾದರೂ ಏಕಾತ್ಮತೆ ಇರಬಲ್ಲುದು ಎಂದು ನಾವು ಭಾವಿಸುತ್ತೇವೆ.

ಮಾನ್ಯ ದೀನ್‌ದಯಾಳರು ಬರೆದಿದ್ದಾರೆ: "ಬಹುಮತದಲ್ಲಿ ಅಥವಾ ಜನತೆಯಲ್ಲಿ ಧರ್ಮ ಇಲ್ಲವಾಗಿದೆ ಎಂಬುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಆದ್ದರಿಂದ ಪ್ರಜಾಪ್ರಭುತ್ವದ ವ್ಯಾಖ್ಯೆಯಲ್ಲಿ ಜನತೆಯ ಶಾಸನವಷ್ಟೇ ಸಾಲದು, ಈ ಆಡಳಿತವು ಜನತೆಯ ಹಿತಕ್ಕಾಗಿಯೂ ಇರಬೇಕು. ಜನತೆಯ ಹಿತದ ನಿರ್ಣಯವನ್ನು ಧರ್ಮವಷ್ಟೇ ಮಾಡಬಲ್ಲುದು. ಹಾಗಾಗಿ ಜನರಾಜ್ಯವು ಧರ್ಮರಾಜ್ಯವೂ ಆಗಬೇಕಾದ್ದು ಅವಶ್ಯಕ. ಸ್ವಾತಂತ್ರ್ಯ ಹಾಗೂ ಧರ್ಮ ಎರಡೂ ಇರುವಲ್ಲಿ ನಿಜವಾದ ಪ್ರಜಾಪ್ರಭುತ್ವ ಇರಬಲ್ಲುದು ಧರ್ಮರಾಜ್ಯದಲ್ಲಿ ಈ ಎಲ್ಲ ಕಲ್ಪನೆಗಳ ಸಂಗಮ ಇರಬಲ್ಲುದು. ಉದ್ದೇಶಸಹಿತವಾದ, ಸುಖಿಯಾದ, ವಿಕಾಸಶೀಲವಾದ ಜೀವನಕ್ಕಾಗಿ ಯಾವೆಲ್ಲ ಭೌತಿಕ ಸಾಧನಗಳ ಅವಶ್ಯಕತೆ ಇದೆಯೋ, ಅವೆಲ್ಲವೂ ಅವಶ್ಯವಾಗಿ ದೊರೆಯಬೇಕು. ದೇವರ ಸೃಷ್ಟಿಯನ್ನು ಅಧ್ಯಯನ ಮಾಡಿದರೆ ಗೊತ್ತಾಗುತ್ತದೆ, ಎಷ್ಟೊಂದು ವ್ಯವಸ್ಥೆಯನ್ನು ಆತನೇ ಮಾಡಿದ್ದಾನೆ. ಆದರೆ ಭಗವಂತನು ಮನುಷ್ಯನನ್ನು ಕೇವಲ ಉಪಭೋಗಶೀಲ ಪ್ರಾಣಿಯನ್ನಾಗಿ ಮಾಡಿದ್ದಾನೆ ಎಂದು ನಾವು ತಿಳಿದರೆ, ಮತ್ತು ಅದಕ್ಕಾಗಿ ಯದ್ವಾತದ್ವಾ ಬಳಕೆಗಾಗಿಯೇ ತನ್ನೆಲ್ಲ ಶಕ್ತಿಯನ್ನು ಖರ್ಚುಮಾಡಿದರೆ, ಅದು ಸರಿಯಾದುದಲ್ಲ. ಏನೂ ಇಲ್ಲದವನಿಗೆ ಎಲ್ಲರೂ

ಕೊಡಬೇಕಾದ್ದು ಜನ್ಮಸಿದ್ಧ ಅಧಿಕಾರ. ಆದರೆ ಅದು ಬರುವುದೆಲ್ಲಿಂದ? ನಮ್ಮ ಪ್ರಯತ್ನಗಳು ಹಾಗೂ ಪುರುಷಾರ್ಥಗಳಿಂದಲೇ ಅದು ಬರಬೇಕು ಎಂಬುದು ಸ್ಪಷ್ಟ. ಸಮಾಜ ವ್ಯವಸ್ಥೆಯಾಗಲಿ, ಅಥವಾ ಅರ್ಥವ್ಯವಸ್ಥೆಯಾಗಲಿ, ಜನರ ಪುರುಷಾರ್ಥದಲ್ಲಿ ಬಾಧಕವಾದರೆ ಅದು ಆತ್ಮಘಾತುಕ". 'ವಿಕೇಂದ್ರೀಕೃತ ಕೃಷಿ–ಔದ್ಯೋಗಿಕ ಗ್ರಾಮ ಸಮಾಜ' ವೇ ಮಾನ್ಯ ದೀನದಯಾಳರ ಏಕಾತ್ಮ ಮಾನವವಾದೀ ಯೋಜನೆಗಳು ಭಾರತೀಯ ಸಂದರ್ಭದಲ್ಲಿ ಒಂದು ಪರಿಹಾರವಾಗಿದೆ. ಅದನ್ನು ತನ್ನದಾಗಿಸಿಕೊಂಡು ಭಾರತವು ವರ್ತಮಾನದ ನಿರಾಶೆಯ ವಾತಾವರಣವನ್ನು ನಾಶಮಾಡಿ ಪ್ರತಿಷ್ಠಾಪನೆಗೊಳ್ಳಬಲ್ಲುದು, ಮತ್ತು ಜಗತ್ತಿನ ಮುಂದಾಳುವಾಗುವ ತನ್ನ ಹಿನ್ನೆಲೆಯನ್ನು ಕೂಡ ನಿರ್ವಹಿಸಬಲ್ಲುದು.

* * * *

# ರಾಷ್ಟ್ರ ಜೀವನದ ದಿಕ್ಕು

ಅನು. : **ಡಾ. ಜಿ. ಶಾಂತಕುಮಾರಿ**

**Blank**



## ೧. ಪರಮ ಸುಖದ ಮಾರ್ಗ

ಮನುಷ್ಯನ ಎಲ್ಲಾ ಕ್ರಿಯೆಗಳ ಉದ್ದೇಶ ಒಂದೇ – ಆನಂದ ಅಥವಾ ಸುಖ ಪ್ರಾಪ್ತಿ. ಹಾಗೆ ನೋಡಿದರೆ ಸಂಪೂರ್ಣ ಸೃಷ್ಟಿಯೇ ಆನಂದಮಯ. ಪ್ರತಿಯೊಂದು ಪ್ರಾಣಿಯೂ ತನಗೆ ಸುಖ ಕೊಡುವ ಕಾರ್ಯವನ್ನೇ ಮಾಡುತ್ತದೆ. ಪ್ರಾಣಿಗಳಷ್ಟೇ ಅಲ್ಲ ಜಡಪದಾರ್ಥಗಳಲ್ಲಿ ಕೂಡ ಆಗುವುದೆಲ್ಲಾ ಸುಖಪ್ರಾಪ್ತಿಗಾಗಿಯೇ. ಸಂಪೂರ್ಣ ಸೃಷ್ಟಿಯಲ್ಲಿ ಆನಂದದ ನಾದವೊಂದೇ ಕೇಳಿಬರುತ್ತದೆ. ಸಾಧಾರಣ ಜೀವಜಂತುಗಳೂ ಸಹ ಸುಖಕ್ಕಾಗಿಯೇ ಕಾರ್ಯಮಾಡುತ್ತವೆ. ನಾಯಿಗೆ ದೊಣ್ಣೆ ತೋರಿಸಿದರೆ ಅದು ಓಡಿಹೋಗುತ್ತದೆ, ಹಾಗೆಯೇ ರೊಟ್ಟಿ ತೋರಿಸಿದರೆ ಅದು ಹತ್ತಿರ ಬರುತ್ತದೆ. ಒಮ್ಮೆ ದೂರ ಓಡುವುದು ಮತ್ತೊಮ್ಮೆ ಹತ್ತಿರ ಬರುವ ಈ ಕ್ರಿಯೆ ಸುಖಪ್ರಾಪ್ತಿಗಾಗಿಯೇ ನಡೆದಿದೆ. ಮನುಷ್ಯನಂತೂ ವಿಕಾಸ ಹೊಂದಿರುವ ಪ್ರಾಣಿ. ಮನುಷ್ಯನ ಎಲ್ಲಾ ಕ್ರಿಯೆಗಳ ಉದ್ದೇಶ ಸುಖಪ್ರಾಪ್ತಿ ಎಂಬುದರ ಬಗ್ಗೆ ಯಾವುದೇ ವಿಶೇಷ ತರ್ಕದ ಆವಶ್ಯಕತೆಯಿಲ್ಲ.

ಸುಖ ಎಂದರೆ ಏನು? ಎಂಬುದು ವಿಚಾರಿಸಬೇಕಾದಂತಹ ಪ್ರಶ್ನೆ. ಈ ಕುರಿತು ಮನೋವಿಜ್ಞಾನಿಗಳು ಒಂದು ಪ್ರಯೋಗ ನಡೆಸಿದ್ದಾರೆ. ಒಂದು ಪರೀಕ್ಷಾನಳಿಕೆಯೊಳಗೆ ಒಂದಕ್ಕೊಂದು ಕೂಡಿದ ಮೂರು ರಸ್ತೆಗಳಿದ್ದವು. ಒಂದು ಚಿಕ್ಕ ಹುಳುವನ್ನು ಪರೀಕ್ಷಾನಳಿಕೆಯ ಒಂದು ಕೊನೆಯಲ್ಲಿ ಇಡಲಾಯಿತು. ಉಳಿದೆರಡು ರಸ್ತೆಗಳಲ್ಲಿ ಎಡಗಡೆಯ ರಸ್ತೆಗೆ ವಿದ್ಯುತ್ ಕರೆಂಟು ಜೋಡಿಸಲಾಯಿತು. ಆ ಹುಳು ಮುಂದೆ ಚಲಿಸಿ ಎಡಕ್ಕೆ ತಿರುಗಿದಾಗ ವಿದ್ಯುತ್ ಪ್ರವಾಹದ ಹೊಡೆತಕ್ಕೆ ಸಿಲುಕುತ್ತಿತ್ತು. ಆಗ ಅದು ಹಿಂದಿರುಗುತ್ತಿತ್ತು. ಪ್ರತಿಯೊಂದು ಬಾರಿಯು ಆ ಹುಳು ಎಡಕ್ಕೆ ಚಲಿಸಿದಾಗ ಹೊಡೆತಕ್ಕೆ ಸಿಲುಕಿ ಬಲಗಡೆಗೆ ತಿರುಗುತ್ತಿತ್ತು. ಹತ್ತು–ಹನ್ನೆರಡು ಬಾರಿ ಹೀಗೆಯೆ ಆದಾಗ ಆ ಹುಳು ನಳಿಕೆಯ ಎಡಗಡೆಯ ರಸ್ತೆಗೆ ತಿರುಗುವುದನ್ನೇ ನಿಲ್ಲಿಸಿಬಿಟ್ಟಿತು. ಪರೀಕ್ಷಾನಳಿಕೆಯ ಒಂದು ಕೊನೆಯಲ್ಲಿ ಅದನ್ನು ಬಿಟ್ಟರೆ ಬಹಳ ಎಚ್ಚರದಿಂದ ಎಡ ರಸ್ತೆಯನ್ನು ಬಿಟ್ಟು ಬಲಗಡೆಯೇ ಮುಂದೆ ಚಲಿಸತೊಡಗಿತು. ಈ ಪ್ರಯೋಗದಿಂದ ವಿಜ್ಞಾನಿಗಳು ಅನುಕೂಲವಾದ ಅನುಭವವೇ ಸುಖವೆಂಬ ನಿರ್ಣಯಕ್ಕೆ ಬಂದರು. ಸುಖವನ್ನು ಹುಡುಕುತ್ತಾ ಹೋಗುವುದು ಹಾಗೂ ದುಃಖದಿಂದ ದೂರ ಸರಿಯುವುದು ಪ್ರಾಣಿಗಳ ಸರ್ವಸಾಧಾರಣ ಸ್ವಭಾವವಾಗಿದೆ.

ಆದರೆ ಈ ರೀತಿಯ ಸುಖದ ಅನುಭೂತಿಯಲ್ಲೂ ಬಹಳ ಅಂತರವಿದೆ. ಸುಖದ ಅನುಭೂತಿಗಳು ಭಿನ್ನ-ಭಿನ್ನ ರೀತಿಯಲ್ಲಿ ಉಂಟಾಗುತ್ತದೆ. ಮನುಷ್ಯನಿಗೆ ಊಟ ಮಾಡುವ, ನೀರು ಕುಡಿಯುವ, ಚಳಿ, ಬಿಸಿಲು, ಮಳೆಯಿಂದ ಶರೀರವನ್ನು ಕಾಪಾಡಿಕೊಳ್ಳುವ, ಸುಗಂಧಿತ ಪುಷ್ಪಗಳ ಸುಗಂಧಹೀರುವ ರಂಗು-ರಂಗಿನ ದೃಶ್ಯಗಳನ್ನು ನೋಡುವ ಮುಂತಾದ ಎಷ್ಟೋ ಬಗೆಯ ಅನುಭವಗಳು ಉಂಟಾಗುತ್ತವೆ. ಅವನು ಇದರಲ್ಲಿ ಆನಂದವನ್ನು ಪಡೆಯುತ್ತಾನೆ. ಇವು ಇಂದ್ರಿಯ ಜನ್ಯ ಸುಖಗಳು. ಇಂದ್ರಿಯಗಳಿಂದ ಇದನ್ನು ಅನುಭವಿಸಬೇಕಾಗಿದೆ. ಮನುಷ್ಯ ಹಾಗೂ ಅನ್ಯಪ್ರಾಣಿಗಳಲ್ಲಿ ಈ ಸುಖ ಸಮಾನವಾಗಿರುತ್ತದೆ ಎಂದು ನಮ್ಮಲ್ಲಿ ಹೇಳಲಾಗಿದೆ. ಆಹಾರ, ನಿದ್ರೆ, ಭಯ, ಮೈಥುನ ಮುಂತಾದವುಗಳಿಂದ ಉಂಟಾಗುವ ಅನುಕೂಲ ವೇದನೆಯೇ ಮನುಷ್ಯ ಹಾಗೂ ಪಶುವಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಸುಖ. ಮನುಷ್ಯ ಹಾಗೂ ಪಶುವಿನಲ್ಲಿ ಕಂಡುಬರುವ ಒಂದೇ ವ್ಯತ್ಯಾಸವೆಂದರೆ ಮನುಷ್ಯರಲ್ಲಿ ಒಂದಲ್ಲ ಒಂದು ಜೀವನೋದ್ದೇಶವಿರುತ್ತದೆ. ಪಶುವಿನ ಜೀವನದಲ್ಲಿ ಯಾವುದೇ ಗುರಿ ಇರುವುದಿಲ್ಲ. ಗುರಿಯಿಂದಲೇ ಮನುಷ್ಯರು ತಮ್ಮ ಮನುಷ್ಯತ್ವವನ್ನು ಅರಿಯುತ್ತಾರೆ. ಗುರಿಯಿಲ್ಲದ ಮನುಷ್ಯನೆಂದರೆ ಪಶು. ಈ ಗುರಿಯೇ ಮನುಷ್ಯನನ್ನು ಸಾಮಾನ್ಯನಿಂದ ವಿಶೇಷನನ್ನಾಗಿಸುತ್ತದೆ. ಆದುದರಿಂದಲೇ ಇಂದ್ರಿಯಗಳು ಹಾಗು ಅದರ ವಿಷಯಗಳ ಸಂಯೋಗದಿಂದ ಪಡೆದ ಸುಖ ರಾಜಸ ಸುಖವೆನಿಸಿಕೊಳ್ಳುತ್ತದೆ. ಈ ಇಂದ್ರಿಯಜನ್ಯ ಸುಖ ಕ್ಷಣಿಕ. ಈ ಸುಖವು ಹಲವು ಬಾರಿ ನಿಸ್ಸಾರವೆನಿಸುತ್ತದೆ. ಓರ್ವ ಕಮ್ಯೂನಿಸ್ಟನು ತನ್ನ ಮಿತ್ರನಿಗೆ ಅತ್ಯಂತ ಆಗ್ರಹದಿಂದ ಹೀಗೆ ಹೇಳಿದನು: ಜಗತ್ತಿನಲ್ಲಿರುವ ಅತಿ ದೊಡ್ಡ ಸವಾಲೆಂದರೆ ಹೊಟ್ಟೆಪಾಡು. ಪ್ರಪಂಚದ ಅತಿ ದೊಡ್ಡದಾದ ಸಮಸ್ಯೆ ಎಂದರೆ ಇದೇ ಎಂದು ನೀನು ತಿಳಿಯುತ್ತೀಯೆ? ಎಂದು ತನ್ನ ಮಿತ್ರನನ್ನು ಕೇಳಿದಾಗ ಅವನು 'ಹೌದು' ಎಂದ. ಅನಂತರ ಮಿತ್ರನು 'ಸರಿ, ನಾನು ಇದನ್ನು ಬಗೆಹರಿಸುವೆನು, ಎಂದು ಹೇಳಿದನು. 'ನಾಳೆಯಿಂದ ಪ್ರತಿದಿನ ನಮ್ಮ ಮನೆಗೆ ಬನ್ನಿ, ತಮಗೆ ಹೊಟ್ಟೆ ತುಂಬ ಸ್ವಾದಿಷ್ಟ ಭೋಜನವಿಡುತ್ತೇನೆ. ಆದರೆ ಒಂದು ಶರತ್ತು. ದಿನ ಸಂಜೆ ಇದೇ ಸ್ಥಳದಲ್ಲಿ ನಿಲ್ಲಿಸಿ ನಾಲ್ಕು ಚಪ್ಪಲಿ ಏಟು ಕೊಡುತ್ತೇನೆ. 'ಕಮ್ಯೂನಿಸ್ಟ್ ಸಜ್ಜನರು ಕಾರಣ ಕೇಳಿದಾಗ- ಮಿತ್ರನು ಹೀಗೆ ಹೇಳಿದನು ಇದರಿಂದ ನಿಮಗೇನು ತೊಂದರೆ? ನಿಮ್ಮ ಸಮಸ್ಯೆ ಹೊಟ್ಟೆಗೆ ಸಂಬಂಧಿಸಿದ್ದು. ಅದನ್ನು ಪೂರೈಸಬೇಕಾಗಿದೆ. ಈ ಎರಡನೆಯ ಸಮಸ್ಯೆ ನನ್ನದು' ಇದನ್ನು ನನಗೆ ಬಿಡಿ. ಈ ಹಾಸ್ಯ ಪ್ರಸಂಗದಲ್ಲಿಯೂ ಬಹಳ ಮಹತ್ವಪೂರ್ಣ ರಹಸ್ಯವಡಗಿದೆ. ಅದೆಂದರೆ ಸುಖ ಕೇವಲ ಇಂದ್ರಿಯಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದರ ಸಂಬಂಧ ಯಾವುದೋ ಒಂದು ಅನ್ಯ ವಸ್ತುವಿನೊಡನೆಯೂ ಇದೆ. ಸಜ್ಜನರೊಬ್ಬರು ನಾಸಿಕ್‌ಗೆ ಹೋಗಿ ಅಲ್ಲಿ ತಮ್ಮ



ಪಿತೃಗಳಿಗೆ ತರ್ಪಣ ಕೊಡುತ್ತಿದ್ದರು. ತರ್ಪಣ ಸಂಸ್ಕಾರದಲ್ಲಿ ವಿಶ್ವಾಸವಿಲ್ಲದ ಮಿತ್ರರೊಬ್ಬರು ಅವರೊಡನೆ ಇದ್ದರು. ಆದುದರಿಂದ ಹಾಸ್ಯ ಮಾಡುತ್ತಾ 'ಏನು ಮಾಡುತ್ತಿದ್ದೀಯೆ?' ಎಂದು ಕೇಳಿದರು. ಸಜ್ಜನರು, 'ಪಿತೃಗಳಿಗೆ ತರ್ಪಣ ಬಿಡುತ್ತಿದ್ದೇನೆ' ಎಂದರು. ಅದಕ್ಕೆ ಮಿತ್ರ 'ಇಲ್ಲಿ ಬಿಡುವ ನೀರು ಅವರನ್ನು ಹೇಗೆ ತಲುಪುವುದು?' ಎಂದು ಪ್ರಶ್ನಿಸಿದರು. ಆಗ ಆ ಸಜ್ಜನರು ಮಿತ್ರನಿಗೆ ಉತ್ತರ ನೀಡದೆ ಅವರ ತಂದೆಯನ್ನು ಜೋರಾಗಿ ಬೈಯ್ಯತೊಡಗಿದರು. ಇದರಿಂದ ಮಿತ್ರನಿಗೆ ಬಹಳ ಸಿಟ್ಟು ಬಂದಿತು. ಅವರು, 'ನಿನಗೆ ಉತ್ತರಿಸಲಾಗದು ಎಂದರೆ ಸುಮ್ಮನೆ ಬೈಯ್ಯಬೇಡ. ನನ್ನ ತಂದೆಯನ್ನು ಯಾರಾದರೂ ನಿಂದಿಸಿದರೆ ನಾನು ಅದನ್ನು ಸಹಿಸಲಾರೆ' ಎಂದರು. ಆಗ ಆ ಸಜ್ಜನರು ಶಾಂತಭಾವದಿಂದ ಹೀಗೆ ಹೇಳಿದರು, 'ಮಿತ್ರ, ನಿಮ್ಮ ತಂದೆಯವರು ಮನೆಯಲ್ಲಿ ಇದ್ದಾರೆ. ಇಲ್ಲಿನ ಬೈಗಳು ಅವರನ್ನು ತಲುಪುವುದಿಲ್ಲ. ಹಾಗಿದ್ದಲ್ಲಿ ಏಕೆ ಸುಮ್ಮನೆ ಉದ್ವೇಗಗೊಳ್ಳುತ್ತೀಯ?' ಹೀಗೆ ಆ ಮಿತ್ರನಿಗೆ ತನ್ನ ಪ್ರಶ್ನೆಗೆ ತಕ್ಕ ಉತ್ತರ ದೊರೆಯಿತು. ಅದೇನೆಂದರೆ ಇದೆಲ್ಲಾ ಮನಸ್ಸಿಗೆ ಒಪ್ಪುವ ಸಂಗತಿ ಹಾಗೂ ಭಾವನೆಗೆ ಸಂಬಂಧಿಸಿದ ಪ್ರಶ್ನೆ. 'ಉದ್ಧವ ಚರಿತ್ರೆ'ಯಲ್ಲಿ ಹೀಗೆ ಹೇಳಲಾಗಿದೆ, 'ಉದ್ಧವ ಮನಸ್ಸಿಗೆ ಮೆಚ್ಚಿದ ಮಾತು'. ಗೋಪಿಕೆಯರಿಗೆ ತಿಳಿಯ ಹೇಳಿದರೆ ಗೋಪಿಕೆಯರು ಅದನ್ನು ಒಪ್ಪಲಿಲ್ಲ. ಅವರು ಇದನ್ನು ತಮ್ಮ ಮನಸ್ಸಿಗೆ ಸಂಬಂಧಿಸಿದ ಸಮಸ್ಯೆ ಎಂದು ಹೇಳಿದರು. ನಾವು ನಿರಾಕಾರ ನಿರ್ಗುಣನನ್ನು ಆರಾಧಿಸಿ ಪ್ರಸನ್ನರಾಗಲು ಆಗದು. ನಮಗೆ ನಮ್ಮ ಆಡುವ-ಕುಣಿಯುವ, ಲೀಲೆಗಳನ್ನು ಮಾಡಿ ಸಂತೋಷಗೊಳಿಸುವ ಕೃಷ್ಣನೇ ಬೇಕು. ಆದುದರಿಂದ ಕೇವಲ ಇಂದ್ರಿಯ ಸುಖದಿಂದ ಕೆಲಸ ನಡೆಯುವುದಿಲ್ಲ. ಮನಸ್ಸಿನ ಸಂತೋಷ ಅಥವಾ ಸುಖ ಕೂಡ ಅಗತ್ಯ. ಇಲ್ಲವಾದರೆ ತಟ್ಟೆಯಲ್ಲಿರುವ ಸ್ವಾದಿಷ್ಟ ಭೋಜನ ಸಹ ವಿಷದಂತೆ ಕಾಣುತ್ತದೆ ಮತ್ತು ವ್ಯಕ್ತಿ ಅದನ್ನು ಸ್ವೀಕರಿಸಲಾರ.

ಇದೆಲ್ಲದರೊಡನೆ ಮನುಷ್ಯನ ಬಳಿ ಬುದ್ಧಿಯೂ ಇದೆ. ಅವನು ಚಿಂತನೆ ಮಾಡುತ್ತಾನೆ ಮತ್ತು ಚಿಂತನೆಯಲ್ಲಿಯೂ ಸುಖವಿದೆ. ಮನುಷ್ಯನಲ್ಲಿರುವ ವಿಕಸಿತ ಬುದ್ಧಿ ಬೇರೆ ಯಾವುದೇ ಪ್ರಾಣಿಯಲ್ಲಿಯೂ ಇಲ್ಲ. ಅವನು ಕ್ಷಣಿಕ ಹಾಗೂ ಶಾಶ್ವತ ಸುಖದ ನಡುವಿನ ವ್ಯತ್ಯಾಸವನ್ನು ತಿಳಿಯಬಯಸುತ್ತಾನೆ. ಯಾವ ಸುಖ ಶಾಶ್ವತ ಹಾಗೂ ಚಿರಂತನ, ಯಾವುದು ಹೆಚ್ಚು ಕಾಲದವರೆಗೂ ಇರುವುದು ಹಾಗೂ ಯಾವ ಸುಖವು ಕ್ಷಣಿಕ ಹಾಗೂ ಅದರ ಪರಿಣಾಮ ಬಹು ದುಃಖದಾಯಕವಾಗಿರುವುದು ?- ಈ ಕುರಿತು ವಿಚಾರಿಸಲು ಮನುಷ್ಯ ಬಯಸುತ್ತಾನೆ. ಅವನು ವಿವೇಕದೊಡನೆ ಮುನ್ನಡೆಯುತ್ತಾನೆ. ವ್ಯಕ್ತಿ ವಜ್ರವನ್ನು ತೊರೆದು ಗಾಜಿನ ತುಂಡನ್ನು ಏಕೆ ತೆಗೆದುಕೊಳ್ಳಬೇಕು ಎಂದು ಯೋಚಿಸುತ್ತಾನೆ. ಅಮೃತವನ್ನು ಸವಿದವರು ಹಾಗಲಕಾಯಿಯ ಕಹಿಯನ್ನು ಏಕೆ ಸ್ವೀಕರಿಸಬೇಕು ? ಆದುದರಿಂದ

ಅವನ ಬುದ್ಧಿಯು ಸುಖವನ್ನು ಬಯಸುತ್ತದೆ. ಯಾವ ಜೀವನದ ಗುರಿಯನ್ನು ಅವನು ತನ್ನ ಇಚ್ಛೆಯಿಂದ ಸ್ವೀಕರಿಸಿದ್ದಾನೆಯೋ ಅದರಲ್ಲಿ ಪಡೆವ ಸುಖ–ದುಃಖ ವೇದನೆಗಳು ಒರೆಗಲ್ಲಾಗುತ್ತದೆ. ಗುರಿಯತ್ತ ಸಾಗುವಾಗ ದಾರಿಯ ಮುಳ್ಳುಗಳು ಸಹ ಹಿತವೆನಿಸುತ್ತದೆ. ಸತ್ಯಕ್ಕಾಗಿ ಅವನು ಲಕ್ಷ ಕಷ್ಟಗಳನ್ನು ಆನಂದದಿಂದ ಅನುಭವಿಸುತಾನೆ. ತನ್ನ ಸಿದ್ಧಾಂತಗಳ ಸ್ಥಾಪನೆಗಾಗಿ ಯಾವುದೇ ವಸ್ತುವನ್ನೂ ಸಹ ತ್ಯಜಿಸಲು ಸಿದ್ಧನಾಗುವನು. ಸಾವಿರ ಬಗೆಯ ಚಿಂತೆಯಲ್ಲಿ ಮುಳುಗುವುದು ಮನಸ್ಸಿನ ಕೆಲಸ. ಈ ಮನಸ್ಸನ್ನು ನಿಯಂತ್ರಿಸಿ ಏಕಾಗ್ರಗೊಳಿಸುವುದರಿಂದ ಮನುಷ್ಯ ತನ್ನ ಗುರಿಯತ್ತ ಮುಂದುವರಿಯುತ್ತಾನೆ. ಆದುದರಿಂದ ಅವನು ಬುದ್ಧಿ–ಸುಖದ ಆವಶ್ಯಕತೆಯನ್ನು ಅನುಭವಿಸುತ್ತದೆ. ಗೋಸ್ವಾಮಿ ತುಳಸಿದಾಸರನ್ನು ಕುರಿತು ಇಂತಹುದೇ ಒಂದು ನೀತಿಪ್ರಧಾನವಾದ ಕಥೆ ಇದೆ. ಅವರು ತಮ್ಮ ಪತ್ನಿಯನ್ನು ಎಷ್ಟು ಪ್ರೀತಿಸುತ್ತಿದ್ದರೆಂದರೆ ಅವಳನ್ನು ಬಿಟ್ಟು ಅವರಿಗೆ ಇರಲಾಗುತ್ತಿರಲಿಲ್ಲ. ಒಮ್ಮೆ ಅವರ ಪತ್ನಿ ತನ್ನ ತಂದೆಯ ಮನೆಗೆ ಹೋದಳು. ಮೋಹಾವಸ್ಥೆಯಲ್ಲಿ ವ್ಯಾಕುಲರಾದ ತುಳಸಿದಾಸರು ಓಡುತ್ತಾ ಅತ್ತೆಯಮನೆ ಸೇರಿದರು. ಅದು ಮಳೆಗಾಲ, ನದಿ ತುಂಬಿ ಹರಿಯುತ್ತಿತ್ತು. ಅಂತಹುದರಲ್ಲಿ ಹರಿದು ಬರುತ್ತಿರುವ ಒಂದು ಶವವನ್ನು ಹಿಡಿದು ಅವರು ನದಿ ದಾಟಿದರು. ಅವರು ಅತ್ತೆಯಮನೆಗೆ ಬಂದ ವೇಳೆ ಮನೆ ಬಾಗಿಲು ಹಾಕಿತ್ತು. ಆಗ ಅವರು ಕಿಟಕಿಯಲ್ಲಿ ನೇತಾಡುತ್ತಿರುವ ಒಂದು ಹಾವನ್ನು ಹಗ್ಗವೆಂದು ತಿಳಿದು, ಅದನ್ನು ಹಿಡಿದುಕೊಂಡು ಒಳಗೆ ಸೇರಿದರು. ಪತ್ನಿಯನ್ನು ನಿದ್ದೆಯಿಂದ ಎಬ್ಬಿಸಿದರು. ಪತ್ನಿ ತನ್ನ ಪತಿಯ ಈ ಅವಸ್ಥೆಯನ್ನು ನೋಡಿ ಅವರನ್ನು ಧಿಕ್ಕರಿಸಿದಳು. ಇದರಿಂದಾಗಿ, ಆಗ ಅವರ ಮನಸ್ಸನ್ನು ಆವರಿಸಿದ್ದ ಮೋಹ ಸರಿಯಿತು. ಬುದ್ಧಿ ಬೆಳಕಿಗೆ ಬಂದಿತು. ನಿಜಕ್ಕೂ ಪತ್ನಿಯ ಈ ಮಾತುಗಳಲ್ಲಿ ಸುಖವಡಗಿದೆ ಅನಿಸಿತು. ಮೂಳೆ–ಮಾಂಸದ ಈ ಶರೀರವನ್ನು ಎಷ್ಟು ಪ್ರೀತಿಸುತ್ತೇವೆಯೋ ಅದೇ ಕಾಳಜಿ ಶ್ರೀರಾಮನನ್ನು ಕುರಿತು ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು. ಅವರು ಇದೇ ಸುಖದೆಡೆಗೆ ಮುನ್ನಡೆದರು ಹಾಗೂ 'ಶ್ರೀರಾಮ ಚರಿತ ಮಾನಸ'ವನ್ನು ರಚಿಸಿ ಅಪಾರ ಆನಂದವನ್ನು ಹೊಂದಿರು.

ಆದರೂ ಬುದ್ಧಿಯ ಸುಖವೇ ಅಂತಿಮ ಶಾಶ್ವತ ಆನಂದದ ಸುಖವಲ್ಲ. ಬುದ್ಧಿಗೂ ಮಿಗಿಲಾದುದು ಆತ್ಮಸುಖ. ತಾಯಿ ಮಗುವನ್ನು ತನ್ನ ಮಡಿಲಿನಲ್ಲಿಟ್ಟು ಕೊಂಡು ಆತ್ಮಸುಖವನ್ನು ಅನುಭವಿಸುತ್ತಾಳೆ. ಇದು ಆತ್ಮವೈಶಾಲ್ಯದ ಸುಖ. ಇದರ ಮುಂದೆ ಮತ್ತೆಲ್ಲಾ ಸುಖಗಳೂ ಹೀನವಾಗಿ ಕಂಡುಬರುತ್ತದೆ. ಭಯಮುಕ್ತ ಹಾಗೂ ಸ್ವಾರ್ಥಮುಕ್ತರಾದಾಗ ಆನಂದವನ್ನು ಹೊರತುಪಡಿಸಿ ಮತ್ತಾವುದು ಇರಲಾರದು, ಆದುದರಿಂದ ವ್ಯಕ್ತಿ ಇದನ್ನು ಹುಡುಕುವಾಗ ವೈಶಾಲ್ಯದ ಮನೋಭಾವವನ್ನು ಬೆಳಸಿಕೊಳ್ಳುತ್ತಾ ಮುಂದುವರಿಯುತ್ತಾನೆ.



ಹೀಗೆ ಶರೀರ, ಮನಸ್ಸು, ಬುದ್ಧಿ, ಆತ್ಮ ನಾಲ್ಕು ಪ್ರಕಾರದ ಸುಖಪ್ರಾಪ್ತಿಯೇ ಜೀವನ– ಗುರಿ.

ಆದರೂ ಯಾವುದೇ ಮಾನವನು ಒಬ್ಬಂಟಿಗನಾಗಿ ಈ ಸುಖವನ್ನು ಹೊಂದಲಾರನು. ತನ್ನ ಪರಿಶ್ರಮದಿಂದ ಅವನು ಸಂಪೂರ್ಣ ಸುಖಿಯಾಗಲಾರ. ಆಗಲೇ ಸಮಾಜದೊಡನೆ ಅವನ ಸಂಬಂಧದ ಪ್ರಶ್ನೆ ಎದುರಾಗುವುದು. ನಾವು ಉಂಡ ಭೋಜನ ಹೇಗೆ ಕೇವಲ ನಮ್ಮ ಪರಿಶ್ರಮದ ಫಲವಲ್ಲವೋ ಅದರಲ್ಲಿ ಅನೇಕ ಬಂಧುಗಳ ಸಹಕಾರವಿರುತ್ತದೆ. ರೊಟ್ಟಿ ಸುಡುವ ಅಡುಗೆಯವನಿಂದ, ಅಂಗಡಿಯವನು, ಮಂಡಿಯ ಆಳು–ಕಾಳು ಮತ್ತು ರೈತನವರೆಗೂ ಅದೆಷ್ಟೋ ಜನ ತಮ್ಮ ಸುಖಕ್ಕೆ ಕಾರಣರಾಗುತ್ತಾರೆ. ಹೀಗೆ ನಮ್ಮ ಪ್ರತಿಯೊಂದು ಸುಖದ ಹಿಂದೆ ಅನೇಕ ಜನರ ಪರಿಶ್ರಮವಿದೆ. ಅಷ್ಟೇ ಏಕೆ, ಸಮಸ್ತ ಸುಖೋಪಭೋಗ ಸಾಧನಗಳಿದ್ದರೂ ಸಹ ವ್ಯಕ್ತಿ ಒಬ್ಬಂಟಿಯಾದರೆ ಅವನು ದುಃಖಿಯಾಗುತ್ತಾನೆ. ಆಗಾಗ ಬಹುವಿಧ ಸಾಧನಸಂಪನ್ನರಾದ ಜನರ ಬಾಯಿಯಿಂದಲೂ ಸಹ ಈ ರೀತಿಯ ಮಾತುಗಳನ್ನು ನೀವು ಕೇಳಿಯೇ ಇರುತ್ತೀರ, "ಎಲ್ಲಾ ಇದೆ ಆದರೆ ಏನು ಪ್ರಯೋಜನ? ಇದನ್ನು ಅನುಭವಿಸಲು ಯಾರೂ ಇಲ್ಲವೆಂದು ಹೃದಯ ಭಾರವಾಗುತ್ತದೆ." ಆದುದರಿಂದಲೇ ಸುಖಕ್ಕಾಗಿ ಪರೋಪಕಾರದ ಯಶೋಗೀತೆಯನ್ನು ಹಾಡಲಾಗಿದೆ. ಪರಸ್ಪರ ಸಾಮರಸ್ಯದಿಂದಿರುವುದು, ಸಹಾಯಕ್ಕೆ ಬರುವುದು, ಆತ್ಮೀಯರಿಗೆ ಸುಖ ನೀಡಲು ಯತ್ನಿಸುವುದೇ ಪರೋಪಕಾರ. ಇದೇ ಪರಸ್ಪರಾನುಕೂಲತೆ. ಪ್ರತಿಯೊಬ್ಬರ ಆವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಒಬ್ಬರಿಗೊಬ್ಬರು ತಯಾರಾಗಿದ್ದಾಗ ಆನಂದ ಸುತ್ತಲೂ ನಲಿದಾಡುತ್ತದೆ. ಆದುದರಿಂದ ಸುಖದ ಆಧಾರ ಪರಸ್ಪರಾನುಕೂಲವೇ ಹೊರತು ಘರ್ಷಣೆಯಲ್ಲ. ತಮ್ಮ ತಮ್ಮ ಸುಖಕ್ಕಾಗಿ ಹೋರಾಡುವುದರಿಂದ ಮತ್ಸರಪೂರ್ಣ ಸ್ಪರ್ಧೆ ಉಂಟಾಗುತ್ತದೆ. ಅದರಲ್ಲಿ ಸುಖದ ಅರಿವು ಉಂಟಾದರೂ ಸಹ, ಕೊನೆಗೆ ಉಂಟಾಗುವುದು ದುಃಖವೇ. ಆದುದರಿಂದಲೇ ಸುಖ ಆತ್ಮಕ್ಕೆ ಸಂಬಂಧಿಸಿದುದಾಗಿದೆಯೇ ಹೊರತು ವಸ್ತುವಿನಲ್ಲಿ. ವಸ್ತುವಿಗಲ್ಲ ಸುಖವಡಗಿದ್ದಲ್ಲಿ ಆ ವಸ್ತು ಬಳಿ ಇರುವವರೆಗೂ ಅದು ಸುಖವನ್ನು ಕೊಡುತ್ತಿತ್ತು. ಆದರೆ ಯಾವವಸ್ತು ಸುಖಕರವಾಗಿರುತ್ತದೆಯೋ ಹಲವು ಕಾರಣಗಳಿಂದ ದುಃಖಕಾರಿಯಾಗುವುದನ್ನು ನಾವು ಅನೇಕ ಬಾರಿ ನೋಡುತ್ತೇವೆ. ಪರಸ್ಪರಾನುಕೂಲವನ್ನು ಆಧರಿಸಿದ ಸುಖ ಆತ್ಮಕ್ಕೆ ಸಂಬಂಧಿಸಿದುದಾಗಿದೆ. ಸೃಷ್ಟಿಯ ಎಲ್ಲಾ ಕ್ರಿಯೆಗಳೂ ಈ ರೀತಿಯ ಪರಸ್ಪರ ಪೂರೈಕೆಯಲ್ಲಿ ಪ್ರಕಟಗೊಳ್ಳುತ್ತದೆ. ಸಮುದ್ರದ ನೀರು ಮೋಡವಾಗುತ್ತದೆ. ಮೋಡ ಗುಡುಗಿ ಮಳೆ ಸುರಿಯುತ್ತದೆ. ನದಿಗಳು ಉಕ್ಕಿ ಹರಿದು ಸಮುದ್ರವನ್ನು ಸೇರುತ್ತದೆ. ಇದೇ ಆನಂದ. ವ್ಯಷ್ಟಿ, ಸಮಷ್ಟಿ, ಸೃಷ್ಟಿ ಹಾಗೂ ಪರಮೇಷ್ಟಿ ಈ ನಾಲ್ಕು ತತ್ವಗಳು ನಮ್ಮ ಮುಂದಿವೆ.

ಈ ತತ್ವಗಳ ಪರಸ್ಪರ ಸಹಕಾರದಿಂದ ಸುಖವುಂಟಾಗುತ್ತದೆ. ವ್ಯಕ್ತಿ ಸಮಾಜವನ್ನು ಅವಲಂಬಿಸಿದ್ದಾನೆ. ಸಮಾಜ ಸೃಷ್ಟಿಯನ್ನು ಆಧರಿಸಿದೆ ಹಾಗೂ ಸೃಷ್ಟಿಯ ಚಾಲನೆ ಪರಮೇಷ್ಟಿಯಿಂದ ಉಂಟಾಗುತ್ತದೆ. ಎಲ್ಲಿಯ ತನಕ ಇವುಗಳ ಪರಸ್ಪರ ಹೊಂದಾಣಿಕೆ ಇರುವುದೋ ಎಲ್ಲವೂ ಸರಿಯಾಗಿ ನಡೆಯುತ್ತದೆ. ಇದೇ ಯಜ್ಞಚಕ್ರ. ಪ್ರಾಣಿಯು ಅನ್ನದಿಂದ, ಅನ್ನವು ಮಳೆಯಿಂದ, ಮಳೆಯು ಯಜ್ಞದಿಂದ ಹಾಗೂ ಯಜ್ಞವು ಬ್ರಹ್ಮನಿಂದ ಉಂಟಾಗಿದೆ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಹೀಗೆ ಈ ಚಕ್ರವು ಪೂರ್ಣಗೊಳ್ಳುತ್ತದೆ ಎಂದು ಹೇಳಲಾಗಿದೆ. ಈ ಅಖಂಡ ಚಕ್ರವೇ ಎಲ್ಲಾ ಸುಖದ ಅನುಭೂತಿಯನ್ನುಂಟುಮಾಡುತ್ತದೆ. ಇದನ್ನು ನಾವು ಧರ್ಮವೆಂದು ಕರೆಯುತ್ತೇವೆ. ಅಂದರೆ ಪರಸ್ಪರ ಕರ್ತವ್ಯ ನಿರ್ವಹಣೆಯಿಂದ ಪ್ರಕಟಗೊಳ್ಳುವ ಧರ್ಮವೇ ಸುಖ.

ವ್ಯಕ್ತಿಯ ಜೀವನದಲ್ಲಿ ಈ ಸುಖ ಪ್ರಾಪ್ತಿಗಾಗಿ ನಾಲ್ಕು ವಿಷಯಗಳ ಆವಶ್ಯಕತೆ ಇದೆ – ಶಿಕ್ಷಣ, ಸ್ವಾತಂತ್ರ್ಯ, ಶಾಂತಿ ಮತ್ತು ಪೌರುಷ.

ಮೇಲೆ ಉಲ್ಲೇಖಿಸಲಾದ ಯಜ್ಞಚಕ್ರವನ್ನು ಸರಿಯಾಗಿ ಮತ್ತಷ್ಟು ಸುಗಮವಾಗಿ ಅನ್ವಯಿಸಲು ಶಿಕ್ಷಣ ಬೇಕು. ವ್ಯಕ್ತಿಗಳನ್ನು ಸುಶಿಕ್ಷಿತರನ್ನಾಗಿಸುವ ವ್ಯವಸ್ಥೆ ಸಮಾಜದಲ್ಲಿರಬೇಕು. ಆದರೆ ವ್ಯಕ್ತಿ ಹಾಗೂ ಸಮಾಜ ಇವೆರಡೂ ಸ್ವತಂತ್ರವಾಗಿದ್ದಾಗ ಮಾತ್ರ ಇದು ಸಾಧ್ಯ. ಮಾನಸಿಕ ಸ್ವಾತಂತ್ರ್ಯ ಮಾತ್ರವಲ್ಲದೇ ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯ ಸಹ ಅತ್ಯಗತ್ಯ. ಜನಾಂಗ ಪ್ರಜ್ಞೆಯ ಅರಿವು ಪ್ರಬಲವಾಗಿದ್ದಾಗ ಈ ಸ್ವಾತಂತ್ರ್ಯವಿರುತ್ತದೆ. ಸ್ವಾಭಿಮಾನವಿಲ್ಲದೆಡೆ ಸ್ವಾತಂತ್ರ್ಯವೂ ಇರುವುದಿಲ್ಲ. ಇದಕ್ಕೆ ಶಾಂತಿ ಹಾಗೂ ಪೌರುಷಗಳ ಅಗತ್ಯವಿದೆ. ಈ ಸಾಧನ ಚತುಷ್ಟಯಗಳ ನಿರ್ಮಾಣ ಹಾಗೂ ಸುರಕ್ಷೆಗಾಗಿ ಯೋಗ್ಯ ಶಕ್ತಿಯನ್ನು ರಚಿಸಲಾಗುತ್ತದೆ. ಸ್ವಾತಂತ್ರ್ಯದ ರಕ್ಷಣೆಗಾಗಿ ರಾಜ್ಯ, ಶಿಕ್ಷಣಕ್ಕಾಗಿ ಗುರುಕುಲ, ಅನ್ಯ ಎಲ್ಲಾ ಪ್ರಕಾರದ ಶಾಂತಿ ಹಾಗೂ ಪೌರುಷ ನಿರ್ಮಾಣಕ್ಕಾಗಿ ಸಮಾಜದ ಚಾತುರ್ವರ್ಣ ವ್ಯವಸ್ಥೆ ಇದೆ. ಪ್ರತಿಯೊಬ್ಬ ವ್ಯಕ್ತಿಯನ್ನು ಸಮರ್ಥರನ್ನಾಗಿಸಲು ನಾಲ್ಕು ಆಶ್ರಮಗಳಿವೆ. ಈ ರೀತಿ ನಾಲ್ಕು ವರ್ಣಾಶ್ರಮಗಳನ್ನಾಧರಿಸಿ ಚತುರ್ವಿಧ ಸಾಧನಗಳ ಸಹಾಯದಿಂದ, ಚತುರ್ವಿಧ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಪರಮಸುಖದ ಪ್ರಾಪ್ತಿಗಾಗಿ ವ್ಯಾವಹಾರಿಕ ಮಾದರಿಯನ್ನು ರೂಪಿಸಲಾಗಿದೆ. ಈ ಎಲ್ಲಾ ಸಾಧನಗಳು, ಸಾಧ್ಯವಾಗುವುದು ‘ಚಿತಿ’ಯಿಂದ. ಆದುದರಿಂದ ರಾಷ್ಟ್ರವನ್ನು ಚೈತನ್ಯ ಪ್ರಧಾನವನ್ನಾಗಿಸುವುದೇ ಈ ಎಲ್ಲಾ ಕಾರ್ಯಗಳಿಗೂ ಮೂಲಪ್ರೇರಣೆ. ರಾಷ್ಟ್ರದ ಚೈತನ್ಯವನ್ನು ರೂಪಿಸುವುದರಿಂದಲೇ ಈ ಎಲ್ಲಾ ಕೆಲಸಗಳೂ ಸಂಪೂರ್ಣವಾಗುತ್ತವೆ.



## ೨. ‘ನಾನು’ ಮತ್ತು ‘ನಾವು’

ತಮ್ಮ ದೇಶ ವೈಭವಶಾಲಿಯಾಗಬೇಕೆಂಬುವುದು ಪ್ರತಿಯೊಬ್ಬ ದೇಶಭಕ್ತನ ಬಯಕೆ ಹಾಗೂ ಇದು ಸಹಜವೂ ಸಹ. ರಾಷ್ಟ್ರ ಸುಖ ಹಾಗೂ ಸಮೃದ್ಧ ಶಾಲಿಯಾಗಬೇಕು, ರಾಷ್ಟ್ರೀಯ ಉತ್ಪಾದನೆ ಹೆಚ್ಚಲಿ, ನಿರುದ್ಯೋಗ, ಹಸಿವು, ಅಶಾಂತಿಗಳ ಅಂತ್ಯವಾಗಲಿ, ನ್ಯಾಯ ಸುಲಭ–ಸಾಧ್ಯವಾಗಲಿ, ಪರಸ್ಪರ ಘರ್ಷಣೆ ಕೊನೆಗೊಳ್ಳಲಿ, ಸಾಂಪ್ರದಾಯಿಕ, ಪ್ರಾಂತಗಳಿಗೆ ಸಂಬಂಧಿಸಿದ, ಭಾಷಾ ಸಂಕುಚಿತ ಮನೋಭಾವಗಳನ್ನು ಮೀರಿ ಜನ ಯೋಚಿಸಿ, ವಿಚಾರಿಸುವಂತಾಗಬೇಕು. ವಿಭಜಿಸುವ ಭಾವನೆಯನ್ನು ಹರಡುವುದರಿಂದ ನಮ್ಮ ನಾಯಕರು ಮುಕ್ತರಾಗಲಿ, ಭಾರತ ತನ್ನ ರಾಷ್ಟ್ರೀಯ ಸ್ವರೂಪದಲ್ಲಿ ಆರ್ಥಿಕ, ರಾಜನೈತಿಕ, ಸಾಮಾಜಿಕ, ವೈಜ್ಞಾನಿಕ, ಶೈಕ್ಷಣಿಕ ಎಲ್ಲಾ ಕ್ಷೇತ್ರಗಳಲ್ಲಿಯೂ ಲೋಕಕಲ್ಯಾಣಕಾರಿಯಾಗಲಿ. ಈ ರೀತಿಯ ಭಾವನೆ ಯಾರಲ್ಲಿ ಮೂಡುವುದಿಲ್ಲವೋ ಅವರು ಭಾರತೀಯರಾದರೂ ಸಹ ಮನುಷ್ಯರಲ್ಲ. ದಿವಂಗತ ಕವಿ ಮೈಥಿಲಿ ಶರಣಗುಪ್ತರ ಮಾತುಗಳಲ್ಲಿ ಹೇಳುವುದಾದರೆ: **“ಯಾರಿಗೆ ಆತ್ಮಗೌರವ ಹಾಗೂ ಸ್ವದೇಶ ಗೌರವವಿರುವುದಿಲ್ಲವೋ ಅವರು ಮಾನವರೆನಿಸಲಾರರು.”** ಪ್ರತಿಯೊಬ್ಬ ಜೀವಂತ ಭಾರತೀಯನ ಹೃದಯದಲ್ಲಿ ತನ್ನ ದೇಶವನ್ನು ಗೌರವಶಾಲಿಯನ್ನಾಗಿ ನೋಡುವ ಬಯಕೆ ಮೂಡುವುದು ಅತ್ಯಂತ ಸಹಜ.

ಇರಲಿ. ರಾಷ್ಟ್ರವೈಭವಶಾಲಿಯಾಗುವುದು ಎಂಬ ಮಾತಿನ ಅರ್ಥವೇನು? ಕೆಲವರು ಈ ಸಂದರ್ಭದಲ್ಲಿ ಅಪೂರ್ಣ ಚಿಂತನೆಯೆಡೆಗೆ ಸಾಗುತ್ತಾರೆ. ಸ್ವಂತದ ಹಿತದ ದೃಷ್ಟಿಯಿಂದ ರಾಷ್ಟ್ರೀಯ ಪ್ರಗತಿಯನ್ನು ಪರಿಗಣಿಸುವವರು ರಾಷ್ಟ್ರ ವೈಭವಶಾಲಿಯಾಗುವುದೆಂದರೆ ಸ್ವಂತದ ಜೀವನ ಸುಖ– ಸಮೃದ್ಧವಾಗುವುದೆಂದು ತಮ್ಮ ಚಿಂತನೆಯನ್ನು ಮಿತಿಗೊಳಿಸುತ್ತಾರೆ. ಈ ರೀತಿಯ ಜನರು ಓದು–ಬರಹ, ವ್ಯಾಪಾರ, ಪರಿಶ್ರಮ ಹಾಗು ಹಗಲು–ಇರುಳಿನ ಓಡಾಟ ಎಲ್ಲವನ್ನೂ ‘ನಾನು’ ವೈಯಕ್ತಿಕವಾಗಿ ದೊಡ್ಡವನಾಗಬೇಕೆಂಬ ಉದ್ದೇಶದಿಂದ ಮಾಡುತ್ತಾರೆ. ಅವರ ಮಹತ್ವಾಕಾಂಕ್ಷೆಗಳು ಮೇಲ್ನೋಟಕ್ಕೆ ರಾಷ್ಟ್ರದ ಪರವಾಗಿ ಕಂಡರೂ ನಿಜವಾಗಿಯೂ ವೈಯಕ್ತಿಕವಾಗಿರುತ್ತದೆ. ವೈಯಕ್ತಿಕ ಆಕಾಂಕ್ಷೆಗಳ ಹಿನ್ನೆಲೆಯಲ್ಲಿ ಮಾಡಿದಂತಹ ಕಾರ್ಯಗಳಲ್ಲಿ ಒಂದಲ್ಲ ಒಂದು ಅಧ್ಯವಸಾಯವಿರುವುದರಿಂದ ಹಲವು ಬಾರಿ

ಪ್ರತ್ಯೇಕ ವ್ಯಕ್ತಿ ಪ್ರಗತಿಪರನಾದರೆ ದೇಶವು ಪ್ರಗತಿಪರವಾಗುವುದು ಎಂಬ ತರ್ಕವನ್ನು ನೀಡಲಾಗುವುದು. ಆದರೆ ಈ ತರ್ಕ ಕೇವಲ ವಂಚನೆಯದು. ರಾಷ್ಟ್ರ ಸರ್ವಾಂಗೀಣ ಪ್ರಗತಿಯು ಒಬ್ಬ ವ್ಯಕ್ತಿಯಿಂದ ಸಾಧ್ಯವಾಗದು. ಸ್ವತಃ ಒಬ್ಬ ವ್ಯಕ್ತಿಯೂ ಸಹ ತನ್ನಷ್ಟಕ್ಕೆ ತಾನೇ ಏನೂ ಮಾಡಲಾರ. ನಾವು ಸ್ವಲ್ಪ ಗಂಭೀರವಾಗಿ ಯೋಚಿಸಿದಾಗ 'ನಾನು' ಎಂಬುದರ ವ್ಯಾವಹಾರಿಕ ಅರ್ಥ 'ನಾವು' ಎಂಬ ನಿರ್ಣಯಕ್ಕೆ ತಲುಪುತ್ತೇವೆ.

ನನ್ನ ಹೆಸರು ದೀನ್ ದಯಾಳ್. ಈ ಹೆಸರಿನ ಜೊತೆ 'ನಾನು' ಸೇರಿಕೊಂಡಿದೆ. ಇದರಿಂದಲೇ ಜನ ನನ್ನನ್ನು ಗುರುತಿಸುತ್ತಾರೆ. ನನ್ನ ಪ್ರತಿಯೊಂದು ಕೆಲಸವನ್ನು ಇದರಿಂದಲೇ ಅರಿತುಕೊಳ್ಳಲಾಗುತ್ತದೆ. ಇದರೊಂದಿಗೆ ನನ್ನ ಮೋಹವಿರುವುದು ಸ್ವಾಭಾವಿಕ. ಗಾಢ ನಿದ್ದೆಯಲ್ಲಿರುವಾಗ ಯಾರಾದರೂ ನನ್ನನ್ನು ಈ ಹೆಸರಿನಿಂದ ಕರೆದಾಗ ನಾನು ಎಚ್ಚರಗೊಳ್ಳುತ್ತೇನೆ. ಜನಜಂಗುಳಿಯ ನಡುವೆಯಿದ್ದಾಗ ಆ ಕೋಲಾಹಲದಲ್ಲಿಯೂ ಯಾರಾದರೂ ನನ್ನ ಹೆಸರು ಕರೆದಲ್ಲಿ ನಾನು ಜಾಗೃತನಾಗುತ್ತೇನೆ. ಇಷ್ಟು ಗಾಢ ಸಂಬಂಧ ನನ್ನ ಹೆಸರಿನೊಡನೆ ಇದೆ. ಆದರೆ ಈ ಹೆಸರು ನನಗೆ ಹೇಗೆ ದೊರೆತಿದೆ? ದೀನ್ ದಯಾಳ್ ಹೆಸರಿಗೆ ಬದಲಾಗಿ ನನ್ನ ಹೆಸರನ್ನು 'ಮಿ.ಜಾನ್' ಎಂದು ಏಕೆ ಇಡಲಾಗಲಿಲ್ಲ? ಅಥವಾ ಈ ಪ್ರಪಂಚದಲ್ಲಿ ಕೋಟಿಗಟ್ಟಲೆ ಅನ್ಯ ಹೆಸರುಗಳಿವೆ, ಆದರೆ ಈ ಹೆಸರನ್ನೇ ನನಗೆ ಏತಕ್ಕೆ ಇಡಲಾಯಿತು? ತಾಯಿ ಈ ಹೆಸರನ್ನಿಟ್ಟಳು ಎಂದು ಕೆಲವರು ಹೇಳಬಹುದು. ಆದರೆ ತಾಯಿ ಇದೇ ಹೆಸರನ್ನು ಏತಕ್ಕಾಗಿ ಇಟ್ಟಳು? ರಷ್ಯಾ, ಚೀನಾ, ಕ್ರೈಸ್ತ, ತುರ್ಕಿ, ಅರಬ್ಬಿ ಮುಂತಾದ ಯಾವುದೇ ಹೆಸರುಗಳನ್ನೇಕೆ ಇಡಲಿಲ್ಲ? ನಾನು ಯಾವ ಸಮಾಜದ ಅಂಗವೋ ಅದಕ್ಕೆ ತಕ್ಕಂತೆ ನನ್ನ ನಾಮಕರಣವಾಗಿದೆ.

ಇದರರ್ಥವೇನೆಂದರೆ ಜನ್ಮದಿಂದ ನನ್ನ ಸಂಬಂಧ ಪೂಜ್ಯ ತಾಯಿ–ತಂದೆಯೊಡನಿದೆ. ಆದರೆ ಯಾವ ದಿನ ನನ್ನ ನಾಮಕರಣ ಸಂಸ್ಕಾರವಾಯಿತೋ ಅಂದಿನಿಂದ ನಾನು ಸಮಾಜದ ಅಂಗವಾದೆ. ನನ್ನ ಮಾತನಾಡುವ ಶಕ್ತಿಯ ವಿಕಾಸವಾಯಿತು. ಸಮಾಜದಿಂದ ನನಗೆ ಭಾಷೆಯು ಸಹ ದೊರೆಯಿತು. ಮಾತೃಭಾಷೆ ದೊರೆಯಿತು. ಬೆಳೆಯುತ್ತಾ ಸಭ್ಯರಾದೆವು. ಇವುಗಳ ಸಂಬಂಧ ಸಮಾಜದೊಡನೆ ಇದೆ. ಅಂದರೆ ಸಮಾಜ ಶಿಕ್ಷಣವನ್ನು ಕೊಟ್ಟು ನನ್ನನು ಬೆಳಸಿದೆ. ಜೀವನದಲ್ಲಿ ಎಷ್ಟೋ ಸುಖ–ದುಃಖದ ಸಂದರ್ಭಗಳೆದುರಾದವು. ಎಲ್ಲದರಲ್ಲೂ ಸಮಾಜದ ಅಸ್ತಿತ್ವವಿತ್ತು. ಸುಖ–ದುಃಖದ ಅನುಭವಗಳೂ ಸಹ ಸಮಾಜದ ಕೊಡುಗೆಯೇ. ಮನೆಯಲ್ಲಿ ಯಾವುದಾದರೂ ಸಂತೋಷದ ಸಮಾರಂಭವಿದ್ದರೆ ವಿವಾಹ, ಮಗು ಹುಟ್ಟಿದ್ದು ಅಥವಾ ಗೃಹಪ್ರವೇಶ, ನಾಲ್ಕು ಜನ ಸೇರಲಿ ಎಂಬ ಬಯಕೆಯುಂಟಾಗುತ್ತದೆ. ಜನರು ಬರದಿದ್ದ ಸಂದರ್ಭದಲ್ಲಿ ಉಳಿತಾಯವಾಯಿತೆಂದು



ಯಾರೂ ಸಂತೋಷಪಡಲಾರರು. ಎಲ್ಲರೂ ಸೇರಲಿ ಎಂಬ ತೀವ್ರ ಬಯಕೆಯುಂಟಾಗುವುದು. ಸಮಾಜ ಪ್ರಶಂಸಿಸಿದಾಗ ಮನಸ್ಸಿಗೆ ಬಹಳ ಸಂತಸ ಉಂಟಾಗುತ್ತದೆ. ನಿಂದಿಸಿದಾಗ ಬಹಳ ದುಃಖವಾಗುತ್ತದೆ. ಈ ಸಮಾಜದೊಡನೆ ವ್ಯಕ್ತಿಯ ನಂಟು ಬೆಳೆಯುತ್ತದೆ. ಯಾರಾದರೂ ಸಮಾಜವನ್ನು ನಿಂದಿಸಿದಾಗ ಅದು ಅಸಹನೀಯವಾಗುತ್ತದೆ. 'ಎಲ್ಲದಕ್ಕಿಂತಲೂ ಕಠಿಣಕರ ಜಾತಿ ಅಪಮಾನ' ಎಂಬ ಗೋಸ್ವಾಮಿ ತುಳಸೀದಾಸರ ಉಕ್ತಿ ಗೊತ್ತೇ ಇದೆ. ಒಮ್ಮೆ ನಾನು ರೈಲಿನಲ್ಲಿ ಪ್ರಯಾಣಮಾಡುತ್ತಿದ್ದೆನು. ಆಗ ಪ್ರಯಾಣಿಕರಲ್ಲಿ ಯಾವುದೋ ವಿಷಯವನ್ನು ಕುರಿತು ಪರಸ್ಪರ ವಿವಾದ ಉಂಟಾಯಿತು. ವಿವಾದ ಜಗಳವಾಯಿತು. ಅದರಲ್ಲಿ ಪಂಜಾಬಿನ ಸಜ್ಜನರೊಬ್ಬರಿದ್ದರು. ಮತ್ತೊಬ್ಬ ಪ್ರಯಾಣಿಕರು ಅವರನ್ನು ಉದ್ದೇಶಿಸಿ ಎಲ್ಲಾ ಪಂಜಾಬಿನವರನ್ನು ನಿಂದಿಸತೊಡಗಿದರು. ಅದನ್ನು ಕೇಳಿ ಅವರು ಹೀಗೆಂದರು– "ನೋಡು ತಮ್ಮ, ಇಲ್ಲಿಯತನಕ ನೀನು ನನ್ನನ್ನು ನಿಂದಿಸುತ್ತಿದ್ದೆ. ಆದರೆ ಈಗ ನೀನು ಎಲ್ಲಾ ಪಂಜಾಬಿಯರನ್ನು ನಿಂದಿಸುತ್ತಿದ್ದೀಯೆ. ಇದನ್ನು ನಾನು ಸಹಿಸಲಾರೆ." ಇಷ್ಟು ಹೇಳಿ ಅವರು ಸೇಡು ತೀರಿಸಿಕೊಳ್ಳಲು ತಯಾರಾದರು. ಈಗ ಯೋಚಿಸಬೇಕಾದ ಸಂಗತಿ ಎಂದರೆ ಅಲ್ಲಿ ಪಂಜಾಬಿನ ಜನರು ಪ್ರತ್ಯಕ್ಷವಾಗಿಲ್ಲದಿದ್ದರೂ ನಿಜಕ್ಕೂ ಅವರೆಲ್ಲಾ ಆ ವ್ಯಕ್ತಿಯಲ್ಲಿದ್ದರು. ಹೀಗೆಯೇ ಭಗವಾನ್ ರಾಮಚಂದ್ರ, ಕೃಷ್ಣ, ಬುದ್ಧ, ಶಿವಾಜಿ, ಗುರುಗೋವಿಂದಸಿಂಹ, ನಾನಕ್, ಕಬೀರ್, ರಾಮದಾಸ್, ಮೀರಾ, ತುಳಸಿ, ಗಾಂಧಿ, ಪಟೇಲ್ ಮುಂತಾದವರಲ್ಲಿ ಯಾರನ್ನಾದರೂ ನಿಂದಿಸಿದರೆ ನಮ್ಮಲ್ಲಿ ಅಡಗಿ ಕುಳಿತಿರುವ 'ನಾನು' ಜಾಗೃತವಾಗುತ್ತದೆ. ಹಾಗಿದ್ದಲ್ಲಿ ಅದು ಕೇವಲ ನನ್ನ ಶರೀರಕ್ಕೆ ಸೀಮಿತವಾದಂತಹ ವಿಚಾರವಾಗಿರುವುದಿಲ್ಲ 'ನಾನು' ಸಮಾಜವಾಗಿಬಿಡುತ್ತದೆ. 'ನಾನು' ಕೇವಲ ಶರೀರಕ್ಕೆ ಸಂಬಂಧಿಸಿದ್ದಲ್ಲಿ ಯಾರಾದರೂ ಈ ಮಹಾಪುರುಷರ ಬಗ್ಗೆ ಏನೇ ಹೇಳಿದರೂ ನೋವಾಗುತ್ತಿರಲಿಲ್ಲ. ಆದರೆ ಈ 'ನಾನು' ಎಂಬ ಪದದಲ್ಲಿ ಈ ಮಹಾಪುರುಷರು ಎಲ್ಲೋ ಖಂಡಿತ ಅಡಗಿದ್ದಾರೆ. ಹಾಗೆಯೇ ವಿದೇಶಗಳಲ್ಲಿ ಆಟದ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ. ಆಗ ಭಾರತದ ತಂಡ ವಿಜಯ ಸಾಧಿಸಿದಲ್ಲಿ ಸಂತೋಷದಿಂದ ನಲಿದಾಡುತ್ತೇವೆ. ಸಿಹಿ ಹಂಚುತ್ತೇವೆ. ಆನಂದಗೊಳ್ಳುತ್ತೇವೆ. ಭಾರತದ ತಂಡ ಸೋತಾಗ ದುಃಖಗೊಳ್ಳುತ್ತೇವೆ. ಭಾರತದ ಗೆಲುವಿಗೆ 'ನಾನು' ಸಂತೋಷ ಹಾಗೂ ಸೋಲಿಗೆ ದುಃಖಗೊಳ್ಳುತ್ತದೆ. ಈ 'ನಾನು'ವಿನಲ್ಲಿ ಸಂಪೂರ್ಣ ದೇಶವೂ ಭಾಗಿಯಾಗುತ್ತದೆ. ಹೀಗೆ ಹಲವಾರು ಪ್ರಸಂಗಳಲ್ಲಿ 'ನಾನು' ವಾಸ್ತವದಲ್ಲಿ 'ನಾವು' ಆಗಿರುತ್ತದೆ. 'ನಾವು' ಮಹತ್ವಪೂರ್ಣವಾದದ್ದು ಹಾಗೂ ಎಲ್ಲವೂ ಸಾಮೂಹಿಕ ಜೀವನವನ್ನು ಅವಲಂಬಿಸಿರುತ್ತದೆ. ವೈಭವವೂ ಸಹ ಸಾಮೂಹಿಕ ಜೀವನದ ಒಂದು ವಿಶೇಷ

ಸ್ಥಿತಿ. ಸಜ್ಜನರೊಬ್ಬರು ವಿದೇಶದ ಯಾತ್ರೆಯಿಂದ ಹಿಂದಿರುಗಿದರು. ಈ ಕುರಿತು ಅವರು ಲೇಖನ ಬರೆದು ಬಹಳ ದುಃಖ ವ್ಯಕ್ತಪಡಿಸಿದರು. ಏಕೆ ಇಷ್ಟೊಂದು ದುಃಖಿತರಾಗಿ ಇರುವಿರಿ ಎಂದು ಕೇಳಿದೆ "ಏನು ಹೇಳಲಿ, ವಿಶ್ವದ ಎಲ್ಲಾ ದೇಶಗಳಲ್ಲಿ ಹಿಂದುಸ್ಥಾನವನ್ನು ಕುರಿತು ಇದೊಂದು ಭಿಕ್ಷುಕರ ದೇಶವೆಂಬ ಧೋರಣೆ ಇದೆ" ಎಂದು ಅವರು ಹೇಳಿದರು." ನೀವು ಭಿಕ್ಷೆ ಬೇಡುತ್ತಿಲ್ಲವಲ್ಲ?" ಎಂದು ನಾನು ಹೇಳಿದನು. ಆಗ ಅವರು ಹೀಗೆಂದರು, "ಇಲ್ಲ, ಆದರೆ ಭಾರತ ಭಿಕ್ಷೆ ಬೇಡುತ್ತಿದೆ." ಎಂದರೆ ಹೇಗೆ ಸಹಿಸುವುದು. ಅಂದರೆ ರಾಷ್ಟ್ರೀಯ ಅವಮಾನದಿಂದ ನಮ್ಮೆಲ್ಲರ ಅವಮಾನವಾಗುತ್ತದೆ. ಹಾಗೆಯೇ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲಿ ಭಾರತೀಯ ಸೈನಿಕರು ಶತ್ರುಗಳನ್ನು ಪರಾಜಯಗೊಳಿಸಿ ಮುನ್ನುಗ್ಗತೊಡಗಿದರು. ಆಗ ಗೆಲುವಿನ ಸಂತೋಷದಲ್ಲಿ ಎಲ್ಲೆಡೆ ಘೋಷಣೆ ಮಾಡಲಾಯಿತು. ರಾಷ್ಟ್ರೀಯ ಯಶಸ್ಸಿನೊಡನೆ ಸ್ವಯಂ ಗೌರವಾನ್ವಿತರಾಗುವಂತಹ ಅನುಭವ ಪಡೆದರು. ಅಂದರೆ ರಾಷ್ಟ್ರದ ವೈಭವದಲ್ಲಿಯೇ ನಮ್ಮ ವೈಭವವಡಗಿದೆ.

ಹಾಗೆ ನೋಡಿದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನ ಕ್ಷಣಿಕವಾದದ್ದು, ಆದರೂ ಭಗತ್‌ಸಿಂಹನನ್ನು ಎಲ್ಲರೂ ನೆನಪಿಸಿಕೊಳ್ಳುತ್ತಾರೆ. ಹಕೀಕತ್ ರಾಯ್, ಗುರುತೇಜ ಬಹಾದ್ದೂರ್‌ರನ್ನು ನೆನಪಿಸಿಕೊಳ್ಳುತ್ತಾರೆ. ಇದರ ಹಿನ್ನಲೆಯಲ್ಲಿರುವ ವಿಶಾಲವಾದ ಪರಂಪರೆಯನ್ನು ಸ್ಮರಿಸುತ್ತಾರೆ. ಈ ಎಲ್ಲಾ ಮಹಾಪುರುಷರು ದೇಶಕ್ಕಾಗಿ ತಮ್ಮ ಪ್ರಾಣವನ್ನು ಲೆಕ್ಕಿಸಲಿಲ್ಲ. 'ನಾನು' ಎಂಬುದನ್ನು ಇಷ್ಟು ಎತ್ತರಕ್ಕೆ ಏರಲು ಪ್ರೇರೇಪಿಸಿದ್ದು 'ನಾವು' ಆಗಿದೆ. ಈ ಮಹಾಪುರುಷರೆಲ್ಲಾ ಅದಕ್ಕಾಗಿ ನಗು-ನಗುತ್ತಾ ತಮ್ಮ ಪ್ರಾಣವನ್ನು ಅರ್ಪಿಸಿದರು. ಶರೀರ ನಶ್ವರವೆಂದರು. ಸಮಾಜ ಶಾಶ್ವತವಾದದ್ದು. ಸಮಾಜವನ್ನು ಜೀವಂತವನ್ನಾಗಿರಿಸಲು ವ್ಯಕ್ತಿ ತನ್ನ ಬಲಿದಾನ ಮಾಡಿದನು. ಸಮಾಜವು ತನ್ನ ಸ್ಮೃತಿಯಲ್ಲಿ ಇವರನ್ನು ಇರಿಸಿ ಅಮರರನ್ನಾಗಿಸಿತು. ಹೀಗೆ ಇಬ್ಬರೂ ಅಮರರಾದರು. ಆದರೆ ಈ ಬಲಿದಾನಗಳನ್ನು ಆತ್ಮಹತ್ಯೆ ಎನ್ನಲಾಗುವುದೇ ? ಇಲ್ಲ. ಬಲಿದಾನ ಹಾಗೂ ಆತ್ಮಹತ್ಯೆಗಳಲ್ಲಿ ವ್ಯತ್ಯಾಸವಿದೆ. ಆತ್ಮಹತ್ಯೆ 'ನಾನು'ವಿಗೆ ಸಂಬಂಧಿಸಿದ್ದುದಾಗಿದೆ, ಆದುದರಿಂದಲೇ ಇದು ತಪ್ಪು. ಆದರೆ ಇದೇ ಕಾರ್ಯ 'ನಾವು'ಗಾಗಿ ಮಾಡಿದಲ್ಲಿ ಅದು ಬಲಿದಾನವಾಗುತ್ತದೆ. ಶರೀರವನ್ನು ದೇಶಕ್ಕಾಗಿ, ಸಮಾಜಕ್ಕಾಗಿ ಅರ್ಪಿಸಿದಲ್ಲಿ ಗೌರವದ ವಿಷಯವಾಗುತ್ತದೆ. ಅದರಲ್ಲಿ ಚಿಂತೆ ಏನಿದೆ? ಅದು ಶ್ರೇಷ್ಠ. ಇದರಿಂದ ಸಮಾಜಕ್ಕೆ ಶಕ್ತಿ ದೊರಕುತ್ತದೆ. ಬಲಿದಾನದಿಂದ ಶ್ರೇಷ್ಠ ಮಟ್ಟದ ಮರಗಳಿಗೆ ನೀರುಣಿಸಬಹುದು. 'ನಾನು'ವಿನ ನಿಜವಾದ ಅರ್ಥ 'ನಾವು' ಎನಿಸುತ್ತದೆ. 'ನಾವು' ಎಂದೊಡನೆ ಎಲ್ಲಿ ಸಾಮೂಹಿಕ ಜವಾಬ್ದಾರಿಯಿರುತ್ತದೆಯೋ ಅಲ್ಲಿ ಶಕ್ತಿ ಸ್ಫುರಿಸುತ್ತದೆ. ಆದ್ದರಿಂದ ರಾಷ್ಟ್ರಕ್ಕೆ ನವ ಚೈತನ್ಯಕೊಡುವುದರಲ್ಲಿ ಬಲಿದಾನ ಪಾತ್ರವಹಿಸುತ್ತದೆ.



'ನಾನು'ವನ್ನು ಸಾರ್ಥಕವನ್ನಾಗಿಸುವ ಮೂಲಭೂತ ತಥ್ಯವೇ 'ನಾವು'. ಆರ್ಥಿಕ, ನೈತಿಕ, ಆಧ್ಯಾತ್ಮಿಕ ಎಲ್ಲಾ ರೀತಿಯ ವಿಕಾಸ ಈ ತಥ್ಯವನ್ನು ಆಧರಿಸಿದೆ. ಒಬ್ಬರು ಹಿಮಾಲಯದ ತಪ್ಪಲಿಗೆ ತೆರಳಿ ಅಲ್ಲಿ ಯೋಗಾಭ್ಯಾಸ ಮಾಡಿದರು ಹಾಗೂ 'ನಾನು'ವಿನಿಂದ 'ನಾವು'ವರೆಗೂ ತಲುಪಲಿಲ್ಲ. ಕೇವಲ ವೈಯಕ್ತಿಕ ಮೋಕ್ಷದಾಕಾಂಕ್ಷೆಯಿಂದ ಎಲ್ಲ ಕಾರ್ಯಗಳನ್ನು ಮಾಡಿ, ಯೋಗಾಭ್ಯಾಸ ಮಾಡಿದರೂ ಅವರಿಗೆ ಮುಕ್ತಿ ಸಿಗುವುದಿಲ್ಲ. ಸಮಾಜವನ್ನು ತೊರೆದು ಏಕಾಂತದಲ್ಲಿ ಯಾರೋ ಒಬ್ಬರಿಗೆ ಲಭಿಸುವಂತಹ ಸಣ್ಣವಸ್ತುವಲ್ಲ ಮುಕ್ತಿ. ಯಾವುದೇ ಸಿದ್ಧಿ ಲಭಿಸಿದ್ದರೂ ಸಹ ತನ್ನ ನಾಲ್ಕೂ ಕಡೆ ಹರಡಿರುವ ಸಮಾಜದ ಬಂಧುಗಳನ್ನು ಉನ್ನತಮಟ್ಟಕ್ಕೆ ತಲುಪಿಸುವವರೆಗೂ ಆ ಸಿದ್ಧಿ ನಿರರ್ಥಕವಾಗುತ್ತದೆ. ಹಲವರು ಸಮಾಜದ ಅಧಃಪತನವಾದರೂ ಕೇವಲ ತಾವು ಮಾತ್ರ ಮುಕ್ತಿಪಡೆಯಲು ಅರ್ಹರೆಂಬ ತಪ್ಪು ಧೋರಣೆಯಲ್ಲಿರುತ್ತಾರೆ. ಇದು ತಪ್ಪು. ಮುಕ್ತಿ ವೈಯಕ್ತಿಕವಾಗಿ ಪಡೆಯುವ ವಸ್ತುವಲ್ಲ. ಮುಕ್ತಿಯೂ ಸಹ ಸಮಷ್ಟಿಗೆ ಸೇರಿದ್ದು. ಸಮಾಜವು ಮುಕ್ತವಾದಾಗ ಅದು ಉನ್ನತಮಟ್ಟಕ್ಕೆ ಏರುವುದು. ಉನ್ನತಕ್ಕೇರಿದಾಗ ಮಾತ್ರ ವ್ಯಕ್ತಿಗೆ ಶಾಂತಿದೊರೆಯುವುದು. ಆದುದರಿಂದಲೇ ಸನ್ಯಾಸಾಶ್ರಮದಲ್ಲಿ ಪ್ರವೇಶಿಸುವವರು ಲೋಕಸಂಗ್ರಹದ ಹೊಣೆ ವಹಿಸುತ್ತಾರೆ. ಲೋಕಮಾನ್ಯ ತಿಲಕರ ಗೀತಾರಹಸ್ಯದಲ್ಲಿ ವರ್ಣಿಸಲಾದ ಕರ್ಮಯೋಗದ ಸಾರವು ಇದೇ ಆಗಿದೆ. ಶಾಸ್ತ್ರಗಳಲ್ಲಿ ಬಣ್ಣಿಸಲಾದ ಒಂದು ಶ್ಲೋಕದ ಪ್ರಕಾರ, ಯಾರು ಧರ್ಮ-ಕರ್ಮಗಳನ್ನು ತೊರೆದು ಕೃಷ್ಣ-ಕೃಷ್ಣ ಎಂದು ಹಾರಾಡುತ್ತಾರೆಯೋ ಅವರು ಪಾಪಿಗಳು. ಕೃಷ್ಣನು ಧರ್ಮದ ಸ್ಥಾಪನೆಗಾಗಿ ಸ್ವಯಂ ಪ್ರಯತ್ನಶೀಲನಾಗಿದ್ದ. 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ'ಯ ಘೋಷಣೆಯಾಯಿತು. ದೇವನು ಇದಕ್ಕಾಗಿಯೇ ಅವತರಿಸುತ್ತಾನೆ. ಭಗವಂತನು ಅವತಾರ ತಾಳಿ ಯಾವುದೇ ಗುಹೆಯಲ್ಲಿ ಕುಳಿತು ಏಕಾಂತದಲ್ಲಿ ಮುಕ್ತಿಯ ಸಾಧನೆಯಲ್ಲಿ ತೊಡಗಿದಂತಹ ವರ್ಣನೆ ಎಲ್ಲಿಯೂ ಕಂಡುಬಂದಿಲ್ಲ. ರಾಮನ ಚರಿತ್ರೆ ನಮ್ಮ ಮುಂದಿದೆ. ನಶಿಸಿದ ಮರ್ಯಾದೆ ಹಾಗೂ ಧ್ಯೇಯಗಳನ್ನು ಪುನಃ ಸ್ಥಾಪಿಸಿದಾಗ ಅವುಗಳ ಆಸರೆಯಲ್ಲಿ ಧರ್ಮದ ವಿಜಯ ಪ್ರಾಪ್ತವಾಯಿತು. ಆದುದರಿಂದ ಸಮಾಜದ ಏಳಿಗೆ ಪರಮಾತ್ಮನಿಗೆ ಅರ್ಪಿಸುವ ಕೆಲಸ ಹಾಗೂ ವೈಯಕ್ತಿಕ ಸ್ವಾರ್ಥಕ್ಕೆ ಮಾಡಿದ ಕಾರ್ಯ ರಾಕ್ಷಸನ ಕೆಲಸವಾಗುತ್ತದೆ. ರಾಷ್ಟ್ರಭಕ್ತಿ ಮತ್ತು ಸಮಾಜಭಕ್ತಿಯೇ ಭಗವಂತನ ಭಕ್ತಿ.

'ನಾನು' ಮತ್ತು 'ನಾವು'ವಿನಲ್ಲಿ ಇರುವ ಅಂತರವೆಂದರೆ ಇದೇ. ಮಹಾಭಾರತದ ಉದಾಹರಣೆ ತೆಗೆದುಕೊಳ್ಳಿ. ಮಹಾಭಾರತದಲ್ಲಿ 'ಯತೋ ಧರ್ಮಸ್ತತೋಜಯಃ' ಎಂದು ಹೇಳಲಾಗಿದೆ. ಅಂದರೆ ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ. ಆಗ ಮಹಾಭಾರತದ ಯುದ್ಧದಲ್ಲಿ ಭಾಗವಹಿಸಿದ ಕೌರವರ ಅಷ್ಟೂ ಪ್ರಮುಖ

ಸೇನಾಪತಿಗಳೆಲ್ಲರನ್ನು ಚಾಣಾಕ್ಷತೆಯಿಂದ ಕೊಂದರು ಎಂದು ಜನರು ಪ್ರಶ್ನಿಸುತ್ತಾರೆ ಭೀಷ್ಮನನ್ನು ಕೊಲ್ಲಲು ಶಿಖಂಡಿಯನ್ನು ನಿಲ್ಲಿಸಲಾಯಿತು. ದ್ರೋಣಾಚಾರ್ಯರ ಯುದ್ಧ ಕೊನೆಗೊಳಿಸಲು ಯುಧಿಷ್ಠಿರನು ಸುಳ್ಳು ಹೇಳಿದನು. ತನ್ನ ರಥದ ಚಕ್ರವನ್ನು ತೆಗೆಯಲು ಅನುಮತಿ ಕೇಳುವಾಗಲೇ ಕರ್ಣನನ್ನು ಕೊಲ್ಲಲಾಯಿತು. ಜಯದ್ರಥನ ಮೃತ್ಯುವಿಗೆ ಕಾರಣ ಸೂರ್ಯ ಮೋಡಗಳಲ್ಲಿ ಮರೆಯಾಗಿ ಪುನಃ ಕಾಣಿಸಿಕೊಂಡದ್ದು. ದುರ್ಯೋಧನನ ಮೃತ್ಯು ಅವನ ಸೊಂಟದ ಕೆಳಭಾಗವನ್ನು ಗದೆಯಿಂದ ಪ್ರಹಾರ ಮಾಡಿದ್ದರಿಂದ ಭೀಮನಿಂದ ಆಯಿತು. ಇದನ್ನೆಲ್ಲಾ ನೋಡಿದರೆ, ಪಾಂಡವರು ತಮ್ಮ ಗೆಲುವಿಗಾಗಿ ಮಾಡಿದಂತಹ ಈ ಕಾರ್ಯಗಳೆಲ್ಲ ಧರ್ಮಾನುಕೂಲವೆನಿಸಿಕೊಳ್ಳುವವೇ? ಪಾಂಡವರು ವಂಚಿಸಿದರು. ಆದರೂ ಸಹ 'ಎಲ್ಲಿ ಧರ್ಮವೋ ಅಲ್ಲಿ ಜಯ'ವೆಂಬ ಘೋಷಣೆ ವೇದವ್ಯಾಸರು ಮಾಡುತ್ತಾರೆ. ಹಾಗಿದ್ದಲ್ಲಿ ಇದು ಪರಸ್ಪರ ವಿರೋಧಿಸುವ ವಿಚಾರವಾಗಿದೆಯಲ್ಲವೇ? ಧರ್ಮದ ಹೆಸರಿನಲ್ಲಿ ಅಧರ್ಮವಾಗಲಿಲ್ಲವೇ? ಇದರ ಉತ್ತರವನ್ನು ಹುಡುಕಿದಾಗ ಪಾಂಡವರು ಹಾಗೂ ಕೌರವರ ಪಕ್ಷದ ನಡುವೆ ಒಂದು ದೊಡ್ಡ ಮೂಲಭೂತ ವ್ಯತ್ಯಾಸವಿತ್ತು. ಭೀಷ್ಮ ಪಿತಾಮಹ ಮಹಾನ್‌ವ್ಯಕ್ತಿ ಆದರೆ ಅವರ ವ್ಯಕ್ತಿವಾದಿ ದೃಷ್ಟಿ. ಈ ವಿಚಾರದಿಂದ ಸ್ಪಷ್ಟವಾಗುತ್ತದೆ – "ನಾನು ಪ್ರತಿಜ್ಞೆ ಮಾಡಿದ್ದೇನೆ – ಶಿಖಂಡಿ ಮೇಲೆ ನಾನು ಬಾಣ ಹೂಡುವುದಿಲ್ಲ." ಭೀಷ್ಮ ಪಿತಾಮಹರು ತಾವು ಒಬ್ಬ ಸೇನಾಪತಿಗಳೆಂದು ಯೋಚಿಸಲಿಲ್ಲ. ಅವರ ಮೇಲೆ ಸಂಪೂರ್ಣ ಸೈನ್ಯದ ಜವಾಬ್ದಾರಿ ಇದ್ದರೂ ಅವರನ್ನು ಕೇವಲ ಅವರ ಪ್ರತಿಜ್ಞೆ ಕಾಡುತ್ತಿತ್ತು. ಮತ್ತೊಂದು ಕಡೆ ಅರ್ಜುನನು ಇದೇ ರೀತಿ ತನ್ನ ವೈಯಕ್ತಿಕ ದೃಷ್ಟಿಯಿಂದಲೇ ಶತ್ರುಗಳನ್ನು ಎದುರಿಸದಿರುವ ಮಾತುಗಳನ್ನು ಆಡಿದಾಗ ಶ್ರೀಕೃಷ್ಣನು ನೀನು ವೈಯಕ್ತವಾಗಿ ಯೋಚಿಸಿದರೆ ಅದು ವ್ಯರ್ಥ ಎಂದು ಧರ್ಮದ ರಹಸ್ಯವನ್ನು ಹೇಳಿದ. ಆಗ ಅರ್ಜುನನು 'ನಾನು' ಎಂಬುದನ್ನು ತ್ಯಜಿಸಿ 'ನಾವು' ಎಂಬುದನ್ನು ಸ್ವೀಕರಿಸಿದನು.

ಭೀಷ್ಮ ಪಿತಾಮಹ ತಮ್ಮ ಪಕ್ಷ, ಸಮಾಜವನ್ನು ಕುರಿತು ಚಿಂತಿಸಲಿಲ್ಲ. ಕೇವಲ 'ನಾನು'ವಿನ ಬಗ್ಗೆ ಯೋಚಿಸಿದರು. ಇತ್ತ ಭಗವಾನ್ ಕೃಷ್ಣ ಮಹಾಭಾರತ ಯುದ್ಧದಲ್ಲಿ ಶಸ್ತ್ರ ಹಿಡಿಯುವುದಿಲ್ಲವೆಂಬ ಪ್ರತಿಜ್ಞೆ ಮಾಡಿದ್ದನು. ಆದರೂ ಸಹ ಶಸ್ತ್ರ ಹಿಡಿಯಲೇಬೇಕಾದ ಪ್ರಸಂಗ ಬಂದಲ್ಲಿ ಅವನು ಹಿಂದೆ–ಮುಂದೆ ಯೋಚಿಸಲಿಲ್ಲ. ಸಮಷ್ಟಿಯ ಹಿತದೃಷ್ಟಿಯಿಂದ ವೈಯಕ್ತಿಕವಾಗಿ ಅವರನ್ನು ಕುರಿತು ಏನು ಹೇಳಲಾಗುವುದು ಎಂಬುದರ ಬಗ್ಗೆ ಯೋಚಿಸಲಿಲ್ಲ. ಧರ್ಮರಾಜ ಯುಧಿಷ್ಠಿರನು ಸಹ ಅವರ ಮಾತು ಕೇಳಿದನು ಹಾಗೂ ಸಮಷ್ಟಿಯ ಬೇಡಿಕೆಯ ಮೇರೆಗೆ ತನ್ನ ರಥವನ್ನು ಸ್ವಲ್ಪ ಕೆಳಮಟ್ಟಕ್ಕೆ ಇಳಿಸಿದನು. ಇತ್ತ ದ್ರೋಣಾಚಾರ್ಯರಿಗೆ ಪುತ್ರನ ಮೇಲೆ ಅಪಾರ ಮೋಹವಿತ್ತು. ಅವರು ಪುತ್ರವಧೆಯ ಸಮಾಚಾರವನ್ನು ತಿಳಿದೊಡನೆ



ಶಸ್ತ್ರವನ್ನು ಕೈಬಿಟ್ಟರು. ಕರ್ಣನು ಸೂರ್ಯನಿಂದ ಕೊಡಲ್ಪಟ್ಟ ತನ್ನ ಕವಚ–ಕುಂಡಲಗಳನ್ನು ಇಂದ್ರನಿಗೆ ಕೊಟ್ಟನು. ಆದರೆ ಸೂರ್ಯನು ಕವಚ–ಕುಂಡಲಗಳನ್ನು ಕೊಡಬಾರದೆಂಬ ಎಚ್ಚರಿಕೆ ಕರ್ಣನಿಗೆ ನೀಡಿದ್ದನು. ಆದರೆ ಕರ್ಣನಿಗೆ ತನ್ನ ದಾನವೀರತೆಯ ಕಡೆ ಗಮನವಿತ್ತು. ಅವನು ಎಲ್ಲರನ್ನೂ ಕುರಿತು ಯೋಚಿಸಲಿಲ್ಲ. ಆದರೆ ಕುಂತಿ ಅಗತ್ಯವೆನಿಸಿದಾಗ ಕರ್ಣನ ಬಳಿಗೆ ಹೋಗಿ ಅವನು ತನ್ನ ಪುತ್ರನೆಂಬ ಸತ್ಯವನ್ನು ಹೇಳಿದಳು. ತಾನು ಕುಮಾರಿಯಾಗಿದ್ದಾಗಲೇ ಕರ್ಣ ಜನಿಸಿದನು ಎಂಬ ಮಾತನ್ನು ಹೇಳುವಾಗ ಅಪಾರ ಅವಮಾನವನ್ನು ಅವಳು ಸಹಿಸಬೇಕಾಯಿತು. ಆದರೆ ಸಮಷ್ಟಿಗಾಗಿ ಅವಳು ಈ ಸತ್ಯವನ್ನು ಘೋಷಿಸಿದುದು ಅಲ್ಲದೇ ಅರ್ಜುನನ್ನು ಹೊರತು ಮತ್ಯಾವ ಪಾಂಡವರ ಮೇಲೆಯೂ ಬಾಣ ಹೂಡಲಾರೆ ಎಂಬ ಮಾತು ಕರ್ಣನಿಂದ ಪಡೆದುಕೊಂಡಳು. ಇತ್ತ ಭೀಷ್ಮನ ಮೃತ್ಯುವಿನ ರಹಸ್ಯ ಯಾರಿಗೂ ತಿಳಿದಿರಲಿಲ್ಲ. ಆದರೆ ದ್ರೌಪದಿ ಹೋಗಿ ಈ ಕುರಿತು ಕೇಳಿದಾಗ ಭೀಷ್ಮರು ಶಿಖಂಡಿ ಎದುರಾದರೆ ಯುದ್ಧ ಮಾಡುವುದನ್ನು ನಿಲ್ಲಿಸಿಬಿಡುತ್ತೇನೆ ಎಂದು ಹೇಳಿಬಿಟ್ಟರು. ಸೇನಾಪತಿ ಈ ರೀತಿ ಹೇಳುವುದರಿಂದ ಸೇನೆಗೆ ಒಳಿತಲ್ಲವೆಂಬುದರ ಬಗ್ಗೆ ಭೀಷ್ಮ ಯೋಚಿಸಲಿಲ್ಲ. ಆದರೆ ಎಲ್ಲರನ್ನು ಕುರಿತು ಅಲ್ಲದೇ ಕೇವಲ ತಮ್ಮ ಬಗ್ಗೆ ಅವರು ಯೋಚಿಸಿದರು. ಆದ್ದರಿಂದಲೇ ಪಾಂಡವರ ಪಕ್ಷಕ್ಕೆ ಹೋಲಿಸಿದಾಗ ಕೌರವರ ಪಕ್ಷದಲ್ಲಿ ಒಬ್ಬರಿಗಿಂತಲೂ ಒಬ್ಬರು ದೊಡ್ಡ–ದೊಡ್ಡ ಯೋಧರು, ವೀರರಿದ್ದರೂ ಸಹ ಅವರೆಲ್ಲರ ಕ್ರಿಯಾ–ಕಲಾಪಗಳು ಬೇರೆಯಾಗಿದ್ದವು. ಎಲ್ಲರೂ ಒಟ್ಟಾಗಿ ಕಾರ್ಯಸಾಧನೆಗೆ ತೊಡಗಲಿಲ್ಲ. ಅವರೆಲ್ಲರಿಗೂ ತಮ್ಮದೇ ಆದ ಸ್ವಾರ್ಥವಿತ್ತು. ಭೀಷ್ಮರಿಗೆ ತಮ್ಮ ಪ್ರತಿಜ್ಞೆಯ ಚಿಂತೆಯಿತ್ತು. ದ್ರೋಣಾಚಾರ್ಯರಿಗೆ ಪುತ್ರನ ಮೇಲೆ ಅಪಾರ ಮೋಹವಿತ್ತು. ದುರ್ಯೋಧನನಿಗೆ ಕೇವಲ ತನ್ನ ರಾಜ್ಯದ ಚಿಂತೆಯಿತ್ತು. ಅತ್ತ ಪಾಂಡವರ ಪಕ್ಷದಲ್ಲಿ ಎಲ್ಲರೂ ಒಟ್ಟಾಗಿ ಕಾರ್ಯ ಸಾಧಿಸಿದರು. ಅದರಲ್ಲಿನ ಪ್ರತಿಯೊಬ್ಬನೂ ತನ್ನ ವೈಯಕ್ತಿಕ ದೃಷ್ಟಿಯನ್ನು ಬಿಟ್ಟು ಕಾರ್ಯವೆಸಗಿದನು. ಶ್ರೀಕೃಷ್ಣನ ನೇತೃತ್ವದಲ್ಲಿ ಒಟ್ಟಾಗಿ ಯಾವ ಕಾರ್ಯ ಎದುರಾದರೂ ಅದನ್ನು ನಿಭಾಯಿಸಿದರು. ಕರ್ಣನಲ್ಲಿ ಭಿಕ್ಷೆ ಬೇಡಬೇಕಾಯಿತು – ಬೇಡಿದರು, ಹುಸಿ ನುಡಿಯಬೇಕಾದ ಕ್ಷಣ ಎದುರಾಯಿತು–ನುಡಿದರು, ತಮ್ಮ ಗುಪ್ತ ರಹಸ್ಯಗಳನ್ನು ಬಯಲು ಮಾಡಿ ಅವಮಾನಿತರಾದ ಪರಿಸ್ಥಿತಿಯನ್ನು ಎದುರಿಸಿದಾಗಲೂ ಯೋಚಿಸಲಿಲ್ಲ. ಕೃಷ್ಣನು ಹೇಳಿದ ಹಾಗೆಯೇ ಕಾರ್ಯನಿರ್ವಹಿಸಿದರು. ತಮ್ಮ–ತಮ್ಮ ಹಿತಾಸಕ್ತಿ ಬಿಟ್ಟುಕೊಟ್ಟು ಸಮಷ್ಟಿಗಾಗಿ ಕಾರ್ಯ ನೆರವೇರಿಸಿದರು. ಸಮಷ್ಟಿಗಾಗಿ ಕಾರ್ಯವಹಿಸುವ ಈ ಗುಣವೇ ಧರ್ಮವಾಯಿತು ಹಾಗೂ ವೈಯಕ್ತಿಕ ಹಿನ್ನಲೆಯಲ್ಲಿ ಕಾರ್ಯಮಾಡಿದ್ದರಿಂದ ಕೌರವರ ಪಕ್ಷ ಅಧರ್ಮದ ಪಕ್ಷವಾಯಿತು. ಕೊನೆಗೆ ಧರ್ಮದ ಗೆಲುವಾಯಿತೇ

ಹೊರತು ಅಧರ್ಮವಿದ್ದಲ್ಲ. ಅಂದರೆ ಸಮಷ್ಟಿವಾದವೇ ಧರ್ಮ. ವ್ಯಕ್ತಿವಾದವೇ ಅಧರ್ಮ ರಾಷ್ಟ್ರಕ್ಕಾಗಿ ಕಾರ್ಯನಿರ್ವಹಿಸುವುದು ಧರ್ಮ. ರಾಷ್ಟ್ರ–ಕಾರ್ಯ ಸಾಧನೆಯ ಮಾರ್ಗದಲ್ಲಿ ಏನು ಅಡ್ಡಿ ಬಂದರೂ ಎದುರಿಸಲೇಬೇಕು. ಸತ್ಯ, ಅಸತ್ಯವೆಲ್ಲವೂ ಸಮಷ್ಟಿಯ ಹಿತಕ್ಕಾಗಿಯೇ. ಧರ್ಮರಾಜ ಸುಳ್ಳು ಹೇಳಿದನು ಆದುದರಿಂದ ನಾವು ಸಹ ನಮ್ಮ ದೈನಂದಿನ ಜೀವನದಲ್ಲಿ ಸುಳ್ಳು ಹೇಳಬಹುದು ಎಂಬುದು ಇದರ ಅರ್ಥವಲ್ಲ. ಸುಳ್ಳು ಹೇಳುವುದು ತಪ್ಪು ಎನಿಸಿಕೊಳ್ಳುತ್ತದೆ. ರಾಷ್ಟ್ರವನ್ನು, ಸಮಷ್ಟಿಯನ್ನು ಕುರಿತು ವಿಚಾರಿಸಿ ಕಾರ್ಯ ನಿರ್ವಹಿಸಲಾಗಿದೆಯೇ? ಎಂಬ ಪ್ರಶ್ನೆ ಮೂಡಿಬರುತ್ತದೆ. ಯಾರನ್ನಾದರೂ ಕೊಲ್ಲುವುದು ಪಾಪಕೃತ್ಯ. ಆದರೆ ಯುದ್ಧದಲ್ಲಿ ಹೋರಾಡುವ ಸೈನಿಕನನ್ನು ಕೊಲೆಗಾರ ಎನ್ನಲಾಗುವುದಿಲ್ಲ. ಶತ್ರುಗಳ ಮೇಲೆ ಪ್ರಹಾರ ಮಾಡುವುದು ಸೈನಿಕನ ಧರ್ಮ. ಯುದ್ಧದಲ್ಲಿ ಸೈನಿಕನು ದಿನವು ಹಿಂಸೆ ಮಾಡುತ್ತಾನೆ. ಅವನಿಗೆ ಪರಮವೀರ ಚಕ್ರಕೊಟ್ಟು ಗೌರವಿಸುತ್ತೇವೆ. ಏಕೆಂದರೆ ಈ ಕಾರ್ಯವನ್ನು ಅವನು ವೈಯಕ್ತಿಕ ದೃಷ್ಟಿಯಿಂದ ಮಾಡಲಿಲ್ಲ. ರಾಷ್ಟ್ರವನ್ನು ಕುರಿತು, ಚಿಂತಿಸಿ ವ್ಯವಹರಿಸಿದ್ದಾನೆ. ಆದ್ದರಿಂದಲೇ ಇದು ಸಂತಸದ ಕೃತ್ಯವಾಗುತ್ತದೆ. ವ್ಯಕ್ತಿ ಜೀವನದಲ್ಲಿ ಇದೇ ಕಾರ್ಯವನ್ನು ಯಾರಾದರೂ ಎಸಗಿದಲ್ಲಿ ಅವನನ್ನು ಗಲ್ಲಿಗೇರಿಸಲಾಗುತ್ತದೆ, ಆದರೆ ಯುದ್ಧದಲ್ಲಿ ಶತ್ರುಗಳನ್ನು ನಾಶಗೊಳಿಸುವುದು ರಾಷ್ಟ್ರರಕ್ಷೆಯ ಪವಿತ್ರ ಕರ್ತವ್ಯವಾಗುತ್ತದೆ. ಶತ್ರು ಪಕ್ಷದ ಒಳಹೊಕ್ಕಿ ಗೂಢಾಚಾರಿಯಾಗುವ (ಪತ್ತೇದಾರಿಯ) ಸಮಯದಲ್ಲಿ ಎಷ್ಟೋ ಕಾರ್ಯಗಳನ್ನು ಮಾಡಬೇಕಾಗುತ್ತದೆ. ವ್ಯಕ್ತಿ ಜೀವನದಲ್ಲಿ ಇವುಗಳನ್ನು ಸರಿಯಲ್ಲವೆನ್ನಲಾಗುತ್ತದೆ. ಸುಳ್ಳು ಹೇಳಿ, ಕಳ್ಳತನ ಮಾಡಿ ಹಾಗೂ ಇನ್ನೆಷ್ಟೋ ರೀತಿಯ ಕೆಲಸಮಾಡಿ ಶತ್ರು ಪಕ್ಷದ ರಹಸ್ಯವನ್ನರಿಯಬೇಕಾಗುತ್ತದೆ. ಆದರೆ ಈ ಕಾರ್ಯವನ್ನು ಸಮಷ್ಟಿಯ ಹಿತದೃಷ್ಟಿಯಿಂದ ಮಾಡಲಾಗುವುದರಿಂದ ಗೌರವಾನ್ವಿತವಾಗುತ್ತದೆ. ರಾಷ್ಟ್ರಕ್ಕಾಗಿ ಮಾಡಿದ ಕಳ್ಳತನವು, ಕಳ್ಳತನವಾಗಿರುವುದಿಲ್ಲ ; ಅಂದರೆ ಕರ್ಮದ ಮಹತ್ವ ಅದರ ಉದ್ದೇಶವನ್ನು ಅವಲಂಬಿಸಿರುತ್ತದೆ. ಸಮಷ್ಟಿಗಾಗಿ ಮಾಡಿದಂತಹುದು ಪುಣ್ಯಕರ್ಮವಾಗುತ್ತದೆ. ಸಮಷ್ಟಿಯ ಹಿನ್ನಲೆಯಲ್ಲಿ ಕಾರ್ಯ ಮಾಡುವ ಜನರಶಕ್ತಿ ಸಂಘಟಿತ ಶಕ್ತಿಯಾಗುತ್ತದೆ. ವ್ಯಕ್ತಿವಾದ ಶಕ್ತಿಯಾಗಲಾರದು. ಆದ್ದರಿಂದಲೇ ರಾಷ್ಟ್ರೀಯತೆಯ ಭಾವ ಶಕ್ತಿಯಮಾರ್ಗವೆನಿಸಿಕೊಳ್ಳುತ್ತದೆ.

ಈ ಸಾಮೂಹಿಕ ಭಾವನೆ ಅಂದರೆ ರಾಷ್ಟ್ರೀಯತೆಯನ್ನು ಆಧರಿಸಿ ನಮ್ಮ ಪ್ರತಿಯೊಂದು ಕೃತಿ, ಪ್ರತಿಯೊಂದು ವ್ಯವಸ್ಥೆ ಸರಿ ಅಥವಾ ತಪ್ಪು ಎನಿಸಿಕೊಳ್ಳುತ್ತದೆ. ಉದಾಹರಣೆಗೆ, ಪ್ರಜಾಪ್ರಭುತ್ವದಲ್ಲಿ ನಾಗರಿಕರಿಗೆ ದೊರೆತಿರುವ ಅಧಿಕಾರಗಳನ್ನೇ ತೆಗೆದುಕೊಳ್ಳಿ. ನಾಗರಿಕರಿಗೆ ವೋಟು ನೀಡುವ ಅಧಿಕಾರವಿದೆ. ವೋಟ್ ನೀಡುವಲ್ಲಿ ರಾಷ್ಟ್ರವನ್ನು ಕುರಿತು ಚಿಂತನೆ ಮಾಡಿದರೆ ಧರ್ಮವಾಗುತ್ತದೆ. ಹಾಗೆಯೇ ವೈಯಕ್ತಿಕ



ಚಿಂತನೆಯ ಆಧಾರದಲ್ಲಿ ಮಾಡಿದ ಕಾರ್ಯ ಅಧರ್ಮವಾಗುತ್ತದೆ. ರಾಷ್ಟ್ರೀಯತೆ ಸರಿಯಿದ್ದಲ್ಲಿ ವ್ಯವಸ್ಥೆಯು ಸರಿಯೆನಿಸಿಕೊಳ್ಳುತ್ತದೆ ಹಾಗೂ ರಾಷ್ಟ್ರೀಯತೆಗೆ ವಿರುದ್ಧ ಕಾರ್ಯ ನೆರವೇರಿದಾಗ ಅತಿ ಶ್ರೇಷ್ಠ ವ್ಯವಸ್ಥೆಯೂ ತಪ್ಪಾಗುತ್ತದೆ. ಯಾರು ರಾಷ್ಟ್ರೀಯತೆಯ ಸೋಗಿನಲ್ಲಿ ಮರೆಯಲ್ಲಿ ರಾಷ್ಟ್ರದ ಆಲೋಚನೆ ಬದಿಗಿಟ್ಟು ವಿಭಿನ್ನ ಪ್ರಕಾರದ 'ವಾದಗಳ' ಪೋಷಣೆಯಲ್ಲಿ ಮುಳುಗಿರುತ್ತಾರೆಯೋ ಅವರು ನಿಜಕ್ಕೂ ತಪ್ಪು ಮಾಡುತ್ತಿದ್ದಾರೆ. ಅವರಿಂದ ಯಾವುದೇ ಒಳಿತುಂಟಾಗುವುದಿಲ್ಲ. ಸಮಾಜವಾದ, ಬಂಡವಾಳಶಾಹಿ, ಪ್ರಜಾಪ್ರಭುತ್ವ ಅಥವಾ ಬೇರೆ ಯಾವುದೇ ವಾದವಾಗಿರಲಿ ಅವು ಒಂದು ಮಾರ್ಗವೇ ಹೊರತು ಪ್ರಗತಿಯ ಆಧಾರವಲ್ಲ. ವ್ಯಕ್ತಿಗತ, ಪಕ್ಷಗತ ಹಾಗೂ ವಾದಗತ ಯಾವುದೇ ವಿಚಾರವನ್ನು ತೆಗೆದುಕೊಂಡು ಮುನ್ನಡೆದರೂ ಪ್ರಗತಿ ಸಾಧ್ಯವಿಲ್ಲ. ರಾಜಕೀಯ ಇರುವುದು ರಾಷ್ಟ್ರಕ್ಕಾಗಿಯೇ, ರಾಷ್ಟ್ರವನ್ನು ಕುರಿತು ವಿಚಾರ ಮಾಡುವುದನ್ನು ಬಿಟ್ಟು ಅಂದರೆ ರಾಷ್ಟ್ರದ ಅಸ್ಮಿತೆ, ಅದರ ಇತಿಹಾಸ, ಸಂಸ್ಕೃತಿ, ನಾಗರಿಕತೆಯಗಳನ್ನು ತೊರೆದರೆ ಅಂಥ ರಾಜಕೀಯದ ಪ್ರಯೋಜನವಾದರೂ ಏನು? ರಾಷ್ಟ್ರವನ್ನು ತೊರೆದಲ್ಲಿ ಎಲ್ಲವೂ ಶೂನ್ಯವಾಗುತ್ತದೆ. ರಾಷ್ಟ್ರದ ವಿಚಾರದಿಂದ ಮುನ್ನಡೆದರೆ ಸ್ಮರಿಸಿ ಕಾರ್ಯಮಾಡಿದಲ್ಲಿ ಎಲ್ಲರ ಬೆಲೆ ಹೆಚ್ಚುತ್ತದೆ. ರಾಷ್ಟ್ರವನ್ನು ಮತ್ತು ಒಂದು ಸೇರಿ ಎರಡಾಗದೇ ಹನ್ನೊಂದು ಆಗುತ್ತದೆ. ಈ ಆಧಾರದ ಮೇಲೆ ಒಟ್ಟುಗೂಡಿಸುತ್ತಾ ಹೋದರೆ ಒಂದು, ಒಂದು, ಒಂದು, ಒಂದು ಕೂಡಿ ಒಂದು ಸಾವಿರದ ಒಂದು ನೂರ ಹನ್ನೊಂದು ಆಗುತ್ತದೆ. ರಾಷ್ಟ್ರೀಯತೆ ತೊರೆದರೆ ದಶಮಾಂಶಕ್ಕೆ ಕುಸಿಯುತ್ತದೆ. ಈಗ ಎಷ್ಟುಬಾರಿ ಒಂದನ್ನು ಜೋಡಿಸಿದರೂ ಅದರ ಬೆಲೆ ಕಡಿಮೆಯಾಗುತ್ತಾ ಹೋಗುತ್ತದೆ. ರಾಷ್ಟ್ರವನ್ನಾಧರಿಸಿ ವ್ಯಕ್ತಿಯ ಬೆಲೆ ಹೆಚ್ಚುತ್ತದೆ. ರಾಷ್ಟ್ರವನ್ನು ತೊರೆದರೆ ಬೆಲೆ ಕಡಿಮೆಯಾಗುತ್ತದೆ. ಸಾಮೂಹಿಕ ಜೀವನದ ಈ ಸಂಸ್ಕಾರಗಳನ್ನು ಪ್ರಬಲಗೊಳಿಸುವುದೇ ಪ್ರಗತಿಯ ಮಾರ್ಗ, ಪ್ರತಿಯೊಬ್ಬ ವ್ಯಕ್ತಿಯ 'ನಾನು' ಹಾಗೂ 'ನನ್ನದು' ವಿಚಾರವನ್ನು ತ್ಯಜಿಸಿ 'ನಾವು ಎಂದು ಯೋಚಿಸಬೇಕು. ಇಲ್ಲದಿದ್ದಲ್ಲಿ ವ್ಯಕ್ತಿಯು ರಾಷ್ಟ್ರಕ್ಕಾಗಿ ಪ್ರಾಣವನ್ನು ಅರ್ಪಿಸಲು ಸಿದ್ದನೆಂದು ಹೇಳುತ್ತಾ ಎಲ್ಲಾ ಕಾರ್ಯಗಳನ್ನು ವೈಯಕ್ತಿಕ ಹಿನ್ನಲೆಯಲ್ಲಿ ಯೋಚಿಸಿ ಮಾಡುವುದನ್ನು ನಾವು ಕಾಣಬಹುದು. ಇದರಿಂದ ವ್ಯಕ್ತಿಗೂ ಹಾಗೂ ಸಮಾಜಕ್ಕೂ ಒಳಿತಲ್ಲ. ವಾಸ್ತವಕ್ಕೆ ಸಮಷ್ಟಿಗಾಗಿ ಕಾರ್ಯಮಾಡುವುದು ಅಂದರೆ ಧರ್ಮಾಚರಣೆಯ ಶಿಕ್ಷಣವೂ ಇರುವುದು. ಅದರಲ್ಲಿಯೂ ಸಂಸ್ಕಾರಗಳನ್ನು ಹಾಕಬೇಕಾಗುತ್ತದೆ. ಈ ಸಂಸ್ಕಾರಗಳನ್ನು ನೀಡುವುದೇ ರಾಷ್ಟ್ರದ ಸಂಘಟನೆಯಾಗುತ್ತದೆ.

ಆದರೆ 'ನಾನು ಎಂಬ ಯಾವುದೇ ಶಕ್ತಿಯಿಲ್ಲ ಎಂದು ಅರ್ಥ ಮಾಡಿಕೊಳ್ಳಬಾರದು. 'ನಾನು'ವಿನ ಸಾರ್ಥಕತೆ 'ನಾವು'ವಿನಲ್ಲಿ ಅಡಗಿರುವುದು ಎಂಬುವುದೇ ಇದರ ತಾತ್ಪರ್ಯ. ವ್ಯಕ್ತಿಭಾವದಲ್ಲಿ ವ್ಯಕ್ತಿಯ ವ್ಯಕ್ತಿತ್ವ ಖಂಡಿತವಾಗಿ

ಕೆಳಮಟ್ಟಕ್ಕೆ ಇಳಿಯುವುದು. ವ್ಯಾಯಾಮದಿಂದ ಶರೀರ ಬಲಿಷ್ಠವಾಗಿರುತ್ತದೆ. ಸಂಧ್ಯೋಪಾಸನೆಗಳಿಂದ ಅಂತಃಕರಣಕ್ಕೆ ಶಾಂತಿ ದೊರೆಯುತ್ತದೆ. ದೀರ್ಘಾಯಸ್ಸು ಪ್ರಾಪ್ತಿಯಾಗುವುದು. ವ್ಯಕ್ತಿಭಾವದಿಂದ ವ್ಯಕ್ತಿಗಳ ಸೇವೆ ಮತ್ತು ಆರೈಕೆಗಳಿಂದಲೇ ಇದೆಲ್ಲಾ ಸಾಧ್ಯವಾಗಬಲ್ಲದು. ವ್ಯಕ್ತಿಯು ಅವಶ್ಯವಾಗಿ ನಿರೋಗಿ, ದೀರ್ಘಜೀವಿ, ಹುಷ್ಟ–ಪುಷ್ಟ ಬಲಿಷ್ಠ ಪ್ರಸನ್ನ ಹಾಗೂ ಕಾರ್ಯದಕ್ಷ, ಯಶಸ್ವಿಯಾಗಿರಬೇಕು. ವ್ಯಕ್ತಿಯು ಎಲ್ಲಿ ನಿರ್ಬಲ ಹಾಗೂ ಅಪ್ರಯೋಜಕನಾಗಿರುವನೋ ಅಲ್ಲಿ ಸಮಷ್ಟಿಯ ಆರಾಧನೆಯ ಸಂಪೂರ್ಣ ಲೋಪ ಸ್ವಾಭಾವಿಕ. ಆದುದರಿಂದಲೇ ವ್ಯಕ್ತಿಯ ಗುಣಗಳು ವಿಕಸಿತಗೊಳ್ಳಬೇಕು. ವ್ಯಕ್ತಿ ಅಪ್ರಯೋಜಕನಾದಲ್ಲಿ ಸಮಾಜದ ಸೇವೆ ಹೇಗೆ ಮಾಡಬಲ್ಲರು. ಆದುದರಿಂದಲೇ ನಮ್ಮಲ್ಲಿ ಹೀಗೆಯೂ ಹೇಳಲಾಗಿದೆ:

*ಅಂಧಂತಮಃ ಪ್ರವಿಶಂತಿ ಯೇ ಸಂಭೂತಿಮುಪಾಸತೆS*
*ತತೋ ಭೂಯ ಇವ ತೇ ತಮೋ ಯ ಸಂಭೂತ್ಯಾಂ ರತಾಃ ॥*

ಯಾರು ವ್ಯಕ್ತಿವಾದವನ್ನು ಅವಲಂಬಿಸುತ್ತಾರೆಯೋ ಅವರು ಪತನಗೊಳ್ಳುತ್ತಾರೆ. ಆದರೆ ಯಾರು ಸಮಷ್ಟಿವಾದದಲ್ಲಿ ಮುಳುಗಿಹೋಗುತ್ತಾರೆಯೋ ಅವರು ಅದಕ್ಕಿಂತಲೂ ಕೆಳಮಟ್ಟಕ್ಕೆ ಜಾರುತ್ತಾರೆ.

ಇದರಿಂದ ಭಾರತೀಯ ತತ್ವಜ್ಞಾನಿಗಳು 'ನಾನು' ಹಾಗೂ 'ನಾವು'ವಿನ ಸಮನ್ವಯವನ್ನು ಕುರಿತು ಆಲೋಚಿಸಿದ್ದಾರೆ. ಅವರ ಪ್ರಕಾರ

*ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಂ ಸಹ*
*ವಿನಾಶೇನ ಮೃತ್ಯು ತೀರ್ತ್ವಾ ಸಂಭೂತ್ಯಾಮೃತಮಶ್ನುನಂತೇS ।*

ಸಮಷ್ಟಿವಾದ ಹಾಗೂ ವ್ಯಕ್ತಿವಾದ ಈ ಎರಡೂ ಜೊತೆಗಿದ್ದಲ್ಲಿ ಲಾಭದಾಯಕವಾಗಿರುತ್ತದೆ. ವ್ಯಕ್ತಿವಾದದ ಅನುಷ್ಠಾನದಿಂದ ವ್ಯಕ್ತಿಯ ಕಷ್ಟಗಳನ್ನು ದೂರಮಾಡಬಹುದು ಹಾಗೂ ಸಮಷ್ಟಿವಾದದಿಂದ ಅಮರತ್ವವನ್ನು ಹೊಂದಬಹುದು.

ಇದೇ 'ಸಂಭೂಯ ಸಮುತ್ಥಾನ'ದ ಅರ್ಥ. ಸಾಮೂಹಿಕ ಏಳಿಗೆಯೇ ಪ್ರಗತಿಯ ಮಾರ್ಗ. ಸಾಮೂಹಿಕವಾಗಿರದಿರುವುದು, ಅಂದರೆ ವ್ಯಕ್ತಿಶಃವಾಗಿರುವುದು ಬೇರೆ–ಬೇರೆಯಾಗಿ ಇರುವುದು, ಅಸಂಘಟಿತ ಅವಸ್ಥೆಯಾಗುವುದು. ಇದರ ಹೆಸರೇ ವಿನಾಶ, ಏಕೆಂದರೆ ವ್ಯಕ್ತಿಯ ವಿನಾಶವಾಗಬಹುದು ಹಾಗೂ ಸಮಾಜ ಅಜರಾಮರವಾಗಬಲ್ಲದು. ಮಾನವರ ಅಮರತ್ವ ಸಂಘಭಾವದಲ್ಲಿದೆ ಹಾಗೂ ವ್ಯಕ್ತಿಗಳಲ್ಲಿ ಪರಸ್ಪರ ಒಗ್ಗಟ್ಟು ಇಲ್ಲದಿದ್ದಲ್ಲಿ ಖಂಡಿತವಾಗಿ ಅವನ ನಾಶವಾಗುತ್ತದೆ. ಆದುದರಿಂದಲೇ ವ್ಯಕ್ತಿ ಗುಣವಂತ, ಶಕ್ತಿವಂತನಾಗಬೇಕು ಹಾಗೂ ವ್ಯಕ್ತಿವಾದವನ್ನು ತೊರೆದು ಸಂಘಶಕ್ತಿಯನ್ನು ಆರಾಧಿಸಬೇಕು. ಮನುಷ್ಯ ಅಮರತ್ವವನ್ನು ಬಯಸುತ್ತಾನೆ. ಆ ಅಮರತ್ವವು ಸಂಭೂತಿಯಿಂದಲೇ ದೊರೆಯುತ್ತದೆ. 'ಸಂಭೂತ್ಯಾ ಅಮೃತಂ ಅಶ್ನುತೇ' ಸಂಘದಿಂದ ಅಮರತ್ವವನ್ನು ಹೊಂದಬಹುದು. ಸಂಘಜೀವನ ಅಥವಾ



ಸಾಮೂಹಿಕವಾಗಿ ಜೀವನ ನಡೆಸುವುದೇ ಅಮರತ್ವವನ್ನು ಹೊಂದುವುದಾಗಿದೆ. ಈ ಹಿನ್ನಲೆಯಲ್ಲಿ 'ನಾನು' ನಿಜವಾದ ಅರ್ಥದಲ್ಲಿ 'ನಾವು' ಆಗಿ ರೂಪುಗೊಳ್ಳುತ್ತದೆ.

# ೩. ರಾಷ್ಟ್ರದ ಜೀವದಾಯಕ ಶಕ್ತಿ

ವಿಶ್ವದ ಪ್ರತಿಯೊಂದು ಪ್ರಾಣಿಯೂ ತನ್ನ ಅಸ್ತಿತ್ವ ಹಾಗೂ ಜೀವನಕ್ಕಾಗಿ ಸತತ ಪ್ರಯತ್ನ ಮಾಡುತ್ತಲೇ ಇರುತ್ತದೆ. ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಅದು ಇತರ ಪ್ರಾಣಿಗಳನ್ನು ಅಸ್ತಿತ್ವಹೀನರನ್ನಾಗಿಸುವ ಪ್ರಯತ್ನ ಮಾಡುತ್ತಲೇ ಇರುತ್ತದೆ. ಹಾಗೂ ತನ್ನನ್ನು ಅಸ್ತಿತ್ವಹೀನರನ್ನಾಗಿಸುವ ಶಕ್ತಿಗಳೊಡನೆ ನಿರಂತರವಾಗಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿರುತ್ತದೆ. ವಿನಾಶ ಹಾಗೂ ರಕ್ಷಣೆಯ ಈ ಪ್ರಯತ್ನಗಳೇ ಸಮಷ್ಟಿಯಾಗಿ ಜೀವನವೆನಿಸಿಕೊಳ್ಳುತ್ತದೆ. ಈ ಪ್ರಯತ್ನಗಳ ಭಿನ್ನತೆಯೇ ಭಿನ್ನ-ಭಿನ್ನ ರೀತಿಯ ಜೀವನಶೈಲಿಗೆ ಕಾರಣವಾಗುತ್ತದೆ ಹಾಗೂ ಇದರ ಸಾಫಲ್ಯ ಹಾಗೂ ವೈಫಲ್ಯಗಳೇ ವಿಭಿನ್ನ ಪ್ರಾಣಿಗಳ ವಿಕಾಸ ಹಾಗೂ ವಿಕಾರಗಳ ಮಾನದಂಡವಾಗುತ್ತದೆ. ಮಾನವನೂ ಈ ನಿಯಮಗಳಿಗೆ ಅಪವಾದವಲ್ಲ. ಆದಿಮಾನವನ ಸೃಷ್ಟಿ ಹಾಗೂ ಅಂದಿನಿಂದ ಇಂದಿನವರೆಗೂ ಇರುವ ಇತಿಹಾಸ ಈ ಪ್ರಯತ್ನಗಳ ಇತಿಹಾಸವಾಗಿದೆ. ಆದರೆ ಮನುಷ್ಯ ವಿಶ್ವದ ಅನ್ಯ ಪ್ರಾಣಿಗಳಿಗಿಂತ ವಿಕಾಸ ಹೊಂದಿದ್ದಾನೆ. ಅವನ ಅಸ್ತಿತ್ವ ಕೇವಲ ಮೂಲಭೂತ ಭೌತಿಕ ಆವಶ್ಯಕತೆಗಳ ಪೂರೈಕೆಯನ್ನು ಮಾತ್ರ ಅವಲಂಬಿಸಿರುವುದಿಲ್ಲ. ಆದರೆ ಅವನ ಜೀವನದಲ್ಲಿ ಭೌತಿಕ ಹಾಗೂ ಆಧ್ಯಾತ್ಮಿಕ ತತ್ವಗಳ ಸಮನ್ವಯವುಂಟಾಗುತ್ತದೆ. ಮನುಷ್ಯ ಜೀವನದ ಉದ್ದೇಶ ಉಸಿರಾಟ ಹಾಗೂ ಉಸಿರಾಟದ ಕ್ರಿಯೆಯ ರಕ್ಷಣೆ ಮಾತ್ರವಲ್ಲ, ಅದಕ್ಕಿಂತಲೂ ಬೇರೆಯೇ ಆಗಿದೆ. ಅವನು ಉಸಿರಾಟದ ಈ ಕ್ರಿಯೆಯನ್ನು ಕೇವಲ ಜೀವನಕ್ಕಾಗಿ ಸಾಧನವೆಂದುಕೊಳ್ಳುತ್ತಾನೆಯೇ ಹೊರತು ಸಾಧ್ಯವೆಂದುಕೊಳ್ಳುವುದಿಲ್ಲ. ಅವನ ಸಾಧ್ಯ ಉಪನಿಷತ್‌ಗಳ ಶಬ್ದಗಳಲ್ಲಿದೆ. 'ಆತ್ಮಾ ವಾ ಅರೇ ದ್ರಷ್ಟವ್ಯೋ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ'. ಅವನು ಆತ್ಮಾನುಭೂತಿ ಬಯಸುತ್ತಾನೆ, ಅದನ್ನು ತಿಳಿಯಬಯಸುತ್ತಾನೆ. ತನ್ನ ಸಂಪೂರ್ಣ ಕ್ರಿಯೆಗಳನ್ನು ಆ ಅನುಭೂತಿಯೊಂದಿಗೆ ಒಟ್ಟುಗೂಡಿಸುತ್ತಾನೆ.

ಈ ಆತ್ಮವೆಂದರೇನು ಹಾಗೂ ಇದಕ್ಕಾಗಿ ಮಾನವನಿಷ್ಟು ಮರಗುತ್ತಾನೆ? ಈ ಕುರಿತು ಅನೇಕ ಅನಿಸಿಕೆಗಳಿವೆ ಹಾಗೂ ಈ ಅನಿಸಿಕೆಗಳಿಂದಲೇ ವಿಶ್ವದಲ್ಲಿ ಹಲವಾರು ಸಂಪ್ರದಾಯಗಳು ಸೃಷ್ಟಿಗೊಂಡಿವೆ. ಅನೇಕ ವಿದ್ವಾಂಸರು ಈ ಆತ್ಮವನ್ನು ವಿಶ್ವದ ಮೂಲ ಕಾರಣ, ಸೃಷ್ಟಿಕರ್ತ, ಸರ್ವಶಕ್ತಿಸಂಪನ್ನ ಸರ್ವವ್ಯಾಪಿ



ಪರಬ್ರಹ್ಮ ಪರಮೇಶ್ವರನೆಂದೇ ತಿಳಿದಿದ್ದಾರೆ. ಅದೇ ಸಂಪೂರ್ಣ ವಿಶ್ವವನ್ನು ನಡೆಸುತ್ತಿರುವ ಏಕೈಕ ಶಕ್ತಿಯಾಗಿದೆ. ಹಾಗೂ ಪ್ರತಿಯೊಂದು ಪ್ರಾಣಿ ಅದರತ್ತ ಮುಂದುವರಿಯಲು ಪ್ರಯತ್ನಿಸುತ್ತಿದೆ. ಎಂಬುದು ಅವರ ಕಥನವಾಗಿದೆ. ಅದು ಅದರಲ್ಲೇ ಸೇರಬಯಸುತ್ತದೆ. ಆದುದರಿಂದಲೇ ಮಾನವನು ಆ ಪರಬ್ರಹ್ಮನ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುತ್ತಾನೆ. ಆ ಪರಬ್ರಹ್ಮನಲ್ಲಿ ಪರಿಪೂರ್ಣತೆ ಇರುವುದರಿಂದಲೇ "ಸತ್ಯಂ ಶಿವಂ ಹಾಗೂ ಸುಂದರಂ"ನ ಪೂರ್ಣಾಭಿವ್ಯಕ್ತಿಯಾಗುವುದು. ಆದ್ದರಿಂದಲೇ ಮನುಷ್ಯ ಈ ಗುಣಗಳತ್ತ ಆಕರ್ಷಿತನಾಗುತ್ತಾನೆ ಹಾಗೂ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ಗುಣಗಳ ಭಾಗಶಃ ಅನುಭೂತಿ ಹೊಂದುತ್ತ ಪೂರ್ಣ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನ ಪಡುತ್ತಾನೆ. ಆ ಅದೃಶ್ಯ ಶಕ್ತಿಯಲ್ಲಿ ನಂಬಿಕೆ ಇಲ್ಲದೇ ಕೆಲವು ವಿದ್ವಾಂಸರು ಕೇವಲ ದೃಶ್ಯ ಜಗತ್ತನ್ನು ನಂಬುತ್ತಾರೆ ಹಾಗೂ ಮಾನವ ವಿಕಾಸವನ್ನು (ಅವನ ಸುಖ-ಸಾಧನ ಸಂಪನ್ನ ಜೀವನವನ್ನು) ಮಾತ್ರವೇ ಪರಮೋದ್ದೇಶವೆಂದು ತಿಳಿದು ಸುಖದ ಗಳಿಕೆಗಾಗಿ ಮಾಡುವ ಪ್ರಯತ್ನಗಳನ್ನೇ ಮಾನವ ಜೀವನದ ಏಕೈಕ ಕರ್ತವ್ಯವೆಂದು ತಿಳಿಯುತ್ತಾರೆ. ಅವರ ಪ್ರಕಾರ ಈಶ್ವರನ ಅಸ್ತಿತ್ವವಿಲ್ಲ. ಆದರೆ ಗಂಭೀರವಾಗಿ ಯೋಚಿಸಿದಾಗ ಮಾನವನ ಒಗ್ಗಟ್ಟಿನ ಅನುಭೂತಿ ಹಾಗೂ ಅದನ್ನು ಸುಖಮಯವನ್ನಾಗಿಸುವ ಬಯಕೆಯ ಪ್ರೇರಕಶಕ್ತಿ ಖಂಡಿತವಾಗಿಯೂ ದೃಶ್ಯ ಜಗತ್ತಿಗೆ ಹೊರತಾದ ಯಾವುದೋ ಒಂದು ಸೂಕ್ಷ್ಮ ತತ್ವವಾಗಿದ್ದು ಈ ದೃಶ್ಯ ಜಗತ್ತನ್ನು ವ್ಯಾಪಿಸಿ ಪ್ರತಿಯೊಂದು ಪ್ರಾಣಿಯ ಅಂತಃಕರಣದಲ್ಲಿ ಸಂಪೂರ್ಣತೆಯ, ಏಕಾತ್ಮತೆಯ ಭಾವನೆಯನ್ನು ಹುಟ್ಟಿಸುತ್ತದೆ ಎಂದು ತಿಳಿಯುತ್ತದೆ. ಆ ಶಕ್ತಿಗೆ ತಾವು ಯಾವುದೇ ಹೆಸರು ನೀಡಿ, ಆದರೆ ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಅದರೆಡೆ ನಡೆಯುತ್ತಾನೆ ಹಾಗೂ ಮಾನವಕಲ್ಯಾಣ ಭಾವನೆ ಯಾವುದೇ ಸ್ವಾರ್ಥದ ಪರಿಣಾಮವಾಗದೇ ಆತ್ಮಾನುಭೂತಿಯ ಬಯಕೆಯಾಗುವುದು. ಅಜ್ಞಾನದಿಂದ ಮಾನವನು ಆತ್ಮದ ಸ್ವರೂಪವನ್ನು ಸಂಕುಚಿತಗೊಳಿಸುವ ಪ್ರಯತ್ನಪಡುತ್ತಾನೆ, ಆದರೆ ಸತ್ಯದ ಜ್ಞಾನವಾದರೋ ಸತತವಾಗಿ ಅಜ್ಞಾನಪಟವನ್ನು ಭೇದಿಸುವ ಪ್ರಯತ್ನದಲ್ಲಿರುತ್ತದೆ.

ಸಮಸ್ತ ಸೃಷ್ಟಿಯ ಐಕ್ಯತೆಯ ಸಾಕ್ಷಾತ್ಕಾರದ ಉದ್ದೇಶವನ್ನು ಮುಂದಿಟ್ಟುಕೊಂಡರೂ ಸಹ ತನ್ನ ಸ್ವಭಾವದಂತೆ ಅವನು ಅದರೆಡೆಗೆ ಮುನ್ನಡೆಯುತ್ತಾನೆ. ಅದೇ ರೀತಿ ಸಂಸಾರದ ವಿಭಿನ್ನ ಭಾಗಗಳಲ್ಲಿ ಇರುವಂತಹ ಮಾನವನು ಸಹ ಸಂಪೂರ್ಣ ಮಾನವತೆಯ ಆಂತರಿಕ ಏಕತೆಯ ಭಾವನೆಯನ್ನು ಹೊಂದಿದ್ದು ಹಾಗೂ ಅದರ ಪೂರ್ಣಾನುಭೂತಿ ಬಯಸಿದರೂ ಸಹ ಸಂಪೂರ್ಣ ಮಾನವತೆಯ ಆಂತರಿಕ ಏಕತೆಯ ಭಾವಸಿಯನ್ನು ಹೊಂದಿದ್ದು ಹಾಗೂ ಅದರ ಪೂರ್ಣಾನುಭೂತಿ ಬಯಸಿದರೂ ಪ್ರಕೃತಿಯ ಸಾಧನಗಳು ಹಾಗೂ ಅವುಗಳನ್ನು

ತಮ್ಮ ನಿಯಂತ್ರಣದಲ್ಲಿರಿಸಿ ಮುಂದೆ ನಡೆಯುವ ಪ್ರಯತ್ನಗಳಲ್ಲಿ ತನ್ನ ವಿಶಿಷ್ಟ ದಿಕ್ಕನ್ನು ನಿಶ್ಚಯ ಮಾಡಿಕೊಳ್ಳುತ್ತಾನೆ. ಅವನಲ್ಲಿ ಕೆಲವು ವಿಶೇಷತೆಗಳು ಕಾಣುತ್ತವೆ, ಅವನಲ್ಲಿನ ಪ್ರತಿಭೆ ಅರಳುತ್ತದೆ. ಸಂಪೂರ್ಣ ಭೂಮಿಯು ಒಂದೇ ಆದರೂ ಅದರ ಮೇಲಿರುವ ಬೆಟ್ಟ-ಗುಡ್ಡ, ಸಾಗರ ಹಾಗೂ ವನಪ್ರದೇಶಗಳಿಂದಾಗಿ ಅದರ ವಿಭಿನ್ನ ಭಾಗಗಳಲ್ಲಿ ವಿಭಿನ್ನ ಪ್ರಕಾರದ ಹವಾಮಾನ ಹಾಗೂ ವನಸ್ಪತಿಯು ಆ ಪ್ರದೇಶದಲ್ಲಿ ವಾಸಿಸುವ ಮಾನವನ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ ಹಾಗೂ ಆ ವಿಶಿಷ್ಟ ಭೂಭಾಗದ ಮನುಷ್ಯ ಪೂರ್ಣಾನುಭೂತಿಯ ಪ್ರಯತ್ನಗಳಲ್ಲಿ ತಮ್ಮ ವಿಕಾಸವನ್ನು ನಿಗದಿಪಡಿಸಿಕೊಳ್ಳುತ್ತಾರೆ. ಒಂದೇ ಸೇನೆಯ ವಿಭಿನ್ನ ಅಂಗಗಳ ಹಾಗೆ ಬಹುಆಯಾಮಗಳನ್ನು ಹೊಂದಿದ ಅವರದೇ ಆದ ಒಂದು ಸ್ವಂತಿಕೆ ಏರ್ಪಡುತ್ತದೆ. ಆಧುನಿಕ ಯುದ್ಧದಲ್ಲಿ ಜಲ, ನೆಲ ಹಾಗೂ ವಾಯುಸೇನೆಗಳು ಹೇಗೆ ತಮ್ಮದೇ ಪದ್ಧತಿಗಳನ್ನನುಸರಿಸಿ ಯುದ್ಧ ಗೆಲ್ಲಲು ಪ್ರಯತ್ನಿಸುವವೋ ಅದೇ ರೀತಿ ವಿಶ್ವದ ವಿಭಿನ್ನ ರಾಷ್ಟ್ರಗಳು ಒಂದೇ ಮಾನವತೆಯ ಅನುಭೂತಿಗಾಗಿ ಪ್ರಯತ್ನ ಪಡುತ್ತಿರುತ್ತವೆ. ಜಲ, ನೆಲ ಹಾಗೂ ವಾಯುಸೇನೆಗಳಲ್ಲಿ ಕಾರ್ಯನಿರತರಾದ ಸೈನಿಕರಲ್ಲಿ ತಮ್ಮದೇ ಆದ ವಿಶೇಷ ಪ್ರತಿಭೆ ವಿಕಸಿತವಾಗುತ್ತದೆ. ಹಾಗೂ ಅವರು ತಮ್ಮದೇ ವಿಶಿಷ್ಟ ಪದ್ಧತಿಯಿಂದ ಶತ್ರುಗಳನ್ನು ಪರಾಜಯಗೊಳಿಸುವ ಪ್ರಯತ್ನದಲ್ಲಿರುತ್ತಾನೆ. ಮೂರು ಸೈನ್ಯಗಳಲ್ಲಿ ಸಾಮರಸ್ಯ ಭಾವನೆಯಿರುವುದು ಒಳ್ಳೆಯದು. ಆದರೆ ಯಾವುದೇ ಸೈನ್ಯದ ಸೈನಿಕರು ತಮ್ಮ ಶೈಲಿಯನ್ನು ಅಂತಿಮವೆಂದು ತಿಳಿದು ಬೇರೆ ಸೈನ್ಯದ ಸೈನಿಕರನ್ನು ಪ್ರಭಾವಕ್ಕೊಳಪಡಿಸಿದರೆ ಅಥವಾ ಅವರ ಪ್ರತಿಭೆಯನ್ನು ನಾಶಗೊಳಿಸಲು ಪ್ರಯತ್ನಿಸಿದರೆ ಅವರ ಈ ಬಯಕೆ ಅಂತಿಮ ಉದ್ದೇಶವನ್ನು ಪೂರೈಸುವಲ್ಲಿ ಅಡ್ಡಿ ಉಂಟುಮಾಡುತ್ತದೆ ಹಾಗೂ ಆಕ್ರಮಣಕಾರಿ ಸೈನಿಕರೊಡನೆ ಮೊದಲು ಯುದ್ಧಮಾಡಿ ಅವರನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವುದು ಆಕ್ರಮಿತ ಸೈನ್ಯದ ಸೈನಿಕರ ಪ್ರಪ್ರಥಮ ಕರ್ತವ್ಯವಾಗುತ್ತದೆ. ಇದೇ ರೀತಿ ಯಾವುದೇ ಸೇನೆಯ ವಿಶೇಷ ಪ್ರಭಾವವನ್ನು ಕಂಡು ಅಥವಾ ಯಾವುದೇ ವಿಶೇಷ ಕ್ಷೇತ್ರದಲ್ಲಿ ಅವರ ವಿಜಯವನ್ನು ಕಂಡು ಅಥವಾ ಆಕ್ರಮಣಕಾರಿ ಸೇನೆಯ ಸಾಮರ್ಥ್ಯವನ್ನು ಅನುಭವಿಸಿದ ಸೇನೆ ತನ್ನ ಶೈಲಿ, ತನ್ನ ಪ್ರಯತ್ನ ಹಾಗೂ ತನ್ನದೇ ಆದ ಪ್ರತಿಭೆಯನ್ನು ತ್ಯಜಿಸಿ ಆ ಮತ್ತೊಂದು ಸೇನೆಯ ವೈಶಿಷ್ಟ್ಯಗಳನ್ನು ಹಾಗೂ ಅದರಲ್ಲಿಯೂ ವಿಶೇಷವಾಗಿ ಅದರ ಬಾಹ್ಯ ಸ್ವರೂಪವನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದರೆ ಅದು ಸ್ವತಃ ನಷ್ಟವಾಗಿ ಹೋಗುತ್ತದೆ ಹಾಗೂ ಮಾನವನ ಅಂತಿಮ ವಿಜಯದಲ್ಲಿಯೂ ಅವನ ಜವಾಬ್ದಾರಿಯನ್ನು ನೆರವೇರಿಸುವುದರಲ್ಲಿ ಅದು ನೆರವಾಗಲಾರದು.

ಮೇಲೆ ತಿಳಿಸಿದಂತಹ ಉದಾಹರಣೆಯ ಭಾವನೆಯನ್ನು ವಿಶ್ವದ ಅನೇಕ



ರಾಷ್ಟ್ರಗಳ ಇತಿಹಾಸ ಸೂಚಿಸುತ್ತದೆ. ಪ್ರತಿಯೊಂದು ರಾಷ್ಟ್ರ, ತನ್ನ ವಿಶಿಷ್ಟ ಪದ್ಧತಿಯನ್ನೇ ಸತ್ಯವೆಂದು ತಿಳಿಯುತ್ತದೆ ಹಾಗೂ ತನ್ನನ್ನು ಮಾತ್ರ ಪ್ರತಿಭಾವಂತನೆಂದು ತಿಳಿದು ಬೇರೆ ರಾಷ್ಟ್ರಗಳ ಮೇಲೆ ತನ್ನ ವೈಶಿಷ್ಟ್ಯಗಳನ್ನು ಹೇರುವ ಪ್ರಯತ್ನ ಮಾಡುತ್ತದೆ. ಈ ಪ್ರಯತ್ನ ಶಾಂತಿಯುತವಾಗಿದ್ದರೆ ತೊಂದರೆ ಇಲ್ಲ. ಆದರೆ ಅದು ಬಲವಂತವಾಗಿ ತನ್ನ ಸಿದ್ಧಾಂತಗಳನ್ನು ಪರರ ಗಂಟಲಿನಲ್ಲಿ ಇಳಿಸಲು ಬಯಸುತ್ತದೆ. ವ್ಯಕ್ತಿಯು ಸಮಸ್ತ ಮಾನವರ ಸುಖ ಹಾಗೂ ವೈಭವವನ್ನು ತನ್ನ ರಾಷ್ಟ್ರದ ಸುಖ ಹಾಗೂ ವೈಭವಕ್ಕೆ ಸೀಮಿತಗೊಳಿಸಿ ಅನ್ಯ ರಾಷ್ಟ್ರಗಳ ಸುಖ ಶಾಂತಿಯನ್ನು ಭಂಗಗೊಳಿಸುತ್ತಾನೆ. ಅದರ ಪ್ರಾಕೃತಿಕ ವಿಕಾಸವನ್ನು ಅಡ್ಡಿಪಡಿಸುತ್ತಾನೆ. ಇದರಿಂದಾಗಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಮೇಲೆ ವಿಜಯ ಸಾಧಿಸಿ ಅದನ್ನು ಗುಲಾಮ ರಾಷ್ಟ್ರವನ್ನಾಗಿ ಮಾಡಿಕೊಳ್ಳುತ್ತದೆ.

# ೪. ರಾಷ್ಟ್ರ ಹಾಗೂ ರಾಜ್ಯ

ಇಂದು ಯಾವ ಅರ್ಥದಲ್ಲಿ ಆಡಳಿತದ ಕಡೆಯಿಂದ ರಾಷ್ಟ್ರೀಕರಣದ ಬೇಡಿಕೆ ಕೇಳಿಬರುತ್ತಿದೆಯೋ ಅದನ್ನು ನಾವು ಕಣ್ಣು ಮುಚ್ಚಿ ಸಮರ್ಥಿಸಲಾಗುವುದಿಲ್ಲ. ಇದನ್ನು ಕುರಿತು ಒಬ್ಬ ಸಜ್ಜನರು ಹೀಗೆ ಹೇಳತೊಡಗಿದರು, “ನೀವು ರಾಷ್ಟ್ರಕ್ಕಾಗಿ ಸಮರ್ಪಿತರಾಗಲು ಸಂಪೂರ್ಣವಾಗಿ ಕೃತಸಂಕಲ್ಪರಾಗುವಿರಿ. ಹಾಗಿದ್ದಲ್ಲಿ ರಾಷ್ಟ್ರೀಕರಣದಲ್ಲಿ ಮರ್ಯಾದೆಯನ್ನು ಕುರಿತು ನೀವು ಏಕೆ ಮಾತನಾಡುವಿರಿ?” ನಿಸ್ಸಂದೇಹವಾಗಿ ಈ ಪ್ರಶ್ನೆ, ಎಷ್ಟು ಸರಳವಾಗಿದೆಯೋ ಅದರ ಉತ್ತರ ಅಷ್ಟೇ ಗಂಭೀರವಾಗಿದೆ. ರಾಷ್ಟ್ರದ ಕಾರ್ಯವನ್ನು ಈಡೇರಿಸುವ ಸಲುವಾಗಿ ಪ್ರತಿಯೊಬ್ಬ ವ್ಯಕ್ತಿಯು ‘ರಾಷ್ಟ್ರ’ ಹಾಗೂ ‘ರಾಜ್ಯ’ದ ನಡುವೆಯ ಅಂತರವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಾಲ್ಕೂ ಕಡೆ ಹರಡಿರುವ ರಾಜಕೀಯ ಕೋಲಾಹಲದಲ್ಲಿ ಇಂದು ‘ರಾಷ್ಟ್ರ’ ಹಾಗೂ ‘ರಾಜ್ಯ’ದ ನಡುವಿನ ಮೂಲ ಹಾಗೂ ಸೂಕ್ಷ್ಮ ಅಂತರವನ್ನು ಅರಿಯುವುದು ಬಹಳ ಕಷ್ಟವಾಗುತ್ತಿದೆ. ಈ ಕಾರಣದಿಂದಲೇ ನಾವು ರಾಷ್ಟ್ರೀಯ ಐಕ್ಯತೆ, ರಾಷ್ಟ್ರೀಯ ಪ್ರಗತಿ, ರಾಷ್ಟ್ರೀಯ ಗುರಿ ಮುಂತಾದ ಎಷ್ಟೋ ಮಹತ್ವಪೂರ್ಣ ಪ್ರಶ್ನೆಗಳಿಗೆ ಸಮಾಧಾನಪಡಿಸುವಂತಹ ಉತ್ತರವನ್ನು ಹುಡುಕುವುದರಲ್ಲಿ ಅಸಮರ್ಥರಾಗಿದ್ದೇವೆ. ನಮ್ಮ ರಾಷ್ಟ್ರೋಜ್ಜೀವನದ ಶುದ್ಧ–ಸಾಂಸ್ಕೃತಿಕ ಧಾರೆಯ ವಿಷಯದಲ್ಲಿ ಸಹ ನಾವು ಗೊಂದಲದಿಂದ ಇದ್ದೇವೆ.

ವಾಸ್ತವವಾಗಿ ‘ರಾಷ್ಟ್ರ’ ಹಾಗೂ ‘ರಾಜ್ಯ’ ಎರಡು ಬೇರೆ–ಬೇರೆ ಅಸ್ತಿತ್ವಗಳು. ಬಹಳ ಜನರು ತಿಳಿದುಕೊಳ್ಳಲಾರರು. ಅವರು ರಾಜ್ಯ ಹಾಗೂ ರಾಷ್ಟ್ರವನ್ನು ಒಂದೇ ಎಂದು ತಿಳಿಯುತ್ತಾರೆ. ಹಾಗೂ ಅದೇ ರೀತಿ ಅದನ್ನು ಬಳಸುತ್ತಾರೆ. ರಾಜ್ಯಕ್ಕಾಗಿ ರಾಷ್ಟ್ರವೋ ಅಥವಾ ರಾಷ್ಟ್ರಕ್ಕಾಗಿ ರಾಜ್ಯವೋ? ಈ ಪ್ರಶ್ನೆಗೆ ಸರಿಯಾದ ಉತ್ತರ ಪಡೆಯಬೇಕು. ಅದಕ್ಕಾಗಿ ನಾವು ಈ ಎರಡರ ವಾಸ್ತವಿಕ ಮಹತ್ವವನ್ನು ತಿಳಿಯಬೇಕು.

ರಾಷ್ಟ್ರ ಒಂದು ಜೀವಂತಶಕ್ತಿಯಾಗಿದೆ. ಈ ಶಕ್ತಿ ಹಲವಾರು ಶತಮಾನಗಳ ಹಿಂದಿನ ಕಾಲಖಂಡದಲ್ಲಿ ವಿಕಸನಗೊಳ್ಳುತ್ತಾ ಬಂದಿರುವಂತದ್ದು. ಯಾವುದೋ ನಿಶ್ಚಿತ ಭೂ–ಭಾಗದಲ್ಲಿ ವಾಸಿಸುತ್ತಿರುವ ಮಾನವ ಸಮುದಾಯ ಎಂದು ಆ ಭೂಮಿಯೊಡನೆ ತಾದಾತ್ಮ್ಯ ಅನುಭವಿಸುತ್ತದೆಯೋ ಆಗ ಜೀವನದ ವಿಶಿಷ್ಟ



ಗುಣಗಳನ್ನು ಆಚರಿಸುತ್ತಾ ಸಮಾನ ಪರಂಪರೆ ಹಾಗೂ ಮಹತ್ವಾಕಾಂಕ್ಷೆಗಳಿಂದ ಕೂಡಿರುತ್ತದೆ. ಸುಖ–ದುಃಖಗಳ ಸಮಾನ ನೆನಪುಗಳು ಹಾಗೂ ಶತ್ರು–ಮಿತ್ರರ ಸಮಾನ ಅನುಭವಗಳನ್ನು ಹೊಂದುತ್ತಾ ಪರಸ್ಪರ ಹಿತಸಂಬಂಧಗಳಲ್ಲಿ ಒಂದಾಗುತ್ತದೆ. ಸಂಘಟಿತವಾಗಿ ತನ್ನ ಶ್ರೇಷ್ಠ ಜೀವನ ಮೌಲ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ ಹಾಗೂ ಈ ಪರಂಪರೆಯನ್ನು ನಿರ್ವಹಿಸಿ ಅದನ್ನು ಹೆಚ್ಚು–ಹೆಚ್ಚಾಗಿ ಪ್ರಬಲಗೊಳಿಸುವ ಮಹತ್ತರವಾದ ತಪ, ತ್ಯಾಗ, ಪರಿಶ್ರಮದಲ್ಲಿ ನಿರತರಾಗಿರುವ ಮಹಾಪುರುಷರ ಪಂಕ್ತಿಯ ನಿರ್ಮಾಣವಾಗುತ್ತದೆ. ಆಗ ಭೂಮಿಯ ಬೇರೆ ಮಾನವ ಸಮುದಾಯಗಳಿಗಿಂತ ಭಿನ್ನವಾದ ಒಂದು ಸಾಂಸ್ಕೃತಿಕ ಜೀವನ ಉಂಟಾಗುತ್ತದೆ. ಈ ಭಾವನಾತ್ಮಕ ಸ್ವರೂಪವೇ ರಾಷ್ಟ್ರ ಎಂದು ಗುರುತಿಸಲ್ಪಡುವುದು. ಎಲ್ಲಿಯ ತನಕ ಈ ರಾಷ್ಟ್ರೀಯ ಅಸ್ಮಿತೆಯಿರುವುದೋ ಅಲ್ಲಿಯತನಕ ರಾಷ್ಟ್ರ ಜೀವಂತವಾಗಿರುವುದು. ಇದು ಕ್ಷೀಣಿಸಿದಲ್ಲಿ ರಾಷ್ಟ್ರ ನಶಿಸುತ್ತದೆ.

ಹೀಗೆ ರಾಷ್ಟ್ರ ಒಂದು ಶಾಶ್ವತವಾದ ಸತ್ಯ. ರಾಷ್ಟ್ರದ ಆವಶ್ಯಕತೆಗಳ ಪೂರೈಕೆಗಾಗಿ ‘ರಾಜ್ಯ’ದ ನಿರ್ಮಾಣವಾಗುತ್ತದೆ. ರಾಜ್ಯದ ಹುಟ್ಟಿಗೆ ಎರಡು ಕಾರಣಗಳನ್ನು ಹೇಳಲಾಗಿದೆ. ಅಂದರೆ ‘ರಾಜ್ಯ’ದ ಆವಶ್ಯಕತೆ ಎರಡು ಸ್ಥಿತಿಗಳಲ್ಲಿ ಉಂಟಾಗುತ್ತದೆ. ಮೊದಲನೆಯದಾಗಿ ರಾಷ್ಟ್ರದ ಜನತೆಗೆ ಯಾವುದಾದರೂ ವಿಕೃತಿ ಒದಗಿದಾಗ ರಾಜ್ಯದ ಆವಶ್ಯಕತೆಯುಂಟಾಗುತ್ತದೆ. ಆ ಸ್ಥಿತಿಯಿಂದ ಹುಟ್ಟಿಕೊಂಡ ಸಮಸ್ಯೆಗಳನ್ನು ರಾಜ್ಯದಿಂದ ಬಗೆಹರಿಸಲ್ಪಡಬೇಕು. ಉದಾಹರಣೆಗೆ ಯಾವುದೇ ಬಡಾವಣೆಯಲ್ಲಿ ಗಲಭೆಯಾಗದಿದ್ದಲ್ಲಿ ಅಥವಾ ಗಲಭೆಯಾಗುವ ಸಾಧ್ಯತೆ ಇದ್ದರು ಸಹ ಅಲ್ಲಿ ಪೋಲಿಸರು ಕಾಣಿಸುವುದಿಲ್ಲ. ಗಲಭೆ ಸಂಭವಿಸಿದಲ್ಲಿ ತಕ್ಷಣವೇ ಪೊಲೀಸರನ್ನು ಕರೆಯಲಾಗುತ್ತದೆ. ಸಮಾಜಕ್ಕೆ ಯಾವುದಾದರೂ ಸಂಕಟ ಒದಗಿದಲ್ಲಿ ರಾಜ್ಯನಿರ್ಮಾಣದ ಎರಡನೆಯ ಆವಶ್ಯಕತೆಯುಂಟಾಗುತ್ತದೆ. ಸಾರ್ವಜನಿಕರ ಜೀವನವನ್ನು ವ್ಯವಸ್ಥಿತೆಗೊಳಿಸಬೇಕು. ದುರ್ಬಲರು, ಅಸಹಾಯಕರು ಹಾಗೂ ದರಿದ್ರಜನರ ಲಾಭವನ್ನು ಶಕ್ತಿಶಾಲಿ, ಸಂಪನ್ನ ಹಾಗೂ ಸಾಧನಯುಕ್ತ ವರ್ಗದವರು ಪಡೆಯಬಾರದು. ನ್ಯಾಯದ ಎಲ್ಲೆಯನ್ನು ಮೀರದೆ ಕಟ್ಟುನಿಟ್ಟಾಗಿ ಎಲ್ಲರೂ ಚಲಿಸಬೇಕು. ಇದಕ್ಕಾಗಿ ರಾಜ್ಯವನ್ನು ನಿರ್ಮಿಸಲಾಗುತ್ತದೆ. ವಾಸ್ತವಕ್ಕೆ ಈ ಎರಡು ಕಾರಣಗಳಿಂದಲೇ ‘ರಾಜ್ಯ’ ಉದ್ಭವಿಸುತ್ತದೆ. ಸಮಾಜದಲ್ಲಿ ಉಂಟಾದ ವಿಕೃತಿಯನ್ನು ನಿಯಂತ್ರಿಸಿ, ವಿಕೃತ ವ್ಯಕ್ತಿಗಳನ್ನು ದಂಡಿಸುವುದು ಅಂದರೆ ಶಾಂತಿಯನ್ನು ಸ್ಥಾಪಿಸುವುದು ಹಾಗೂ ಸಮಾಜಕ್ಕೊದಗಿದ ಸಂಕಟವನ್ನು ದೂರಮಾಡಿ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯಪೂರ್ಣ, ಗೌರವಾನ್ವಿತ ಜೀವನದ ಸುವ್ಯವಸ್ಥೆಯನ್ನು ಒದಗಿಸುವುದೇ ‘ರಾಜ್ಯ’ದ ಕಾರ್ಯವೆಂದುಕೊಳ್ಳಲಾಗಿದೆ. ಮೂರನೆಯ ಕಾರ್ಯವು ಈ ಎರಡೂ ಕಾರ್ಯಗಳನ್ನು ಪೂರ್ಣಗೊಳಿಸುವ ಮಹತ್ವದ ಅಂಗವಾಗಿದೆ. ಅದೆಂದರೆ ವಿಶ್ವದ

ಅನ್ಯ ರಾಜ್ಯಗಳೊಡನೆ ಸಂಬಂಧ ಸ್ಥಾಪಿಸುವುದಾಗಿದೆ. ಅಂದರೆ ಬಾಹ್ಯ ಆಕ್ರಮಣಗಳಿಂದ ರಕ್ಷಣೆಯ ಕಾರ್ಯವನ್ನು ರಾಜ್ಯ ಮಾಡುತ್ತದೆ.

ಈ ಕಾರ್ಯಕ್ಕಾಗಿ 'ರಾಜ್ಯ' ರಾಷ್ಟ್ರದ ಪ್ರತಿನಿಧಿತ್ವವನ್ನು ವಹಿಸುತ್ತದೆ. ಉದಾಹರಣೆಗೆ ಯಾವುದನ್ನು ನಾವು ಸಂಯುಕ್ತ ರಾಷ್ಟ್ರ ಸಂಘವೆಂದು ಹೇಳುತ್ತೇವೆಯೋ ವಾಸ್ತವಕ್ಕೆ ಅದು ರಾಷ್ಟ್ರಗಳ ಸಂಘವಲ್ಲ, ರಾಜ್ಯಗಳ ಸಂಘವಾಗಿದೆ. 'ರಾಜ್ಯ' ಅಲ್ಲಿ ರಾಷ್ಟ್ರಗಳ ಪ್ರತಿನಿಧಿಯಾಗಿರುತ್ತದೆ. ಆದರೆ ರಾಜ್ಯದಲ್ಲಿ ವಿಕೃತಿಯುಂಟಾದಲ್ಲಿ ಅಥವಾ ಅದು ತನ್ನ ಜವಾಬ್ದಾರಿ ನಿರ್ವಹಿಸುವುದರಲ್ಲಿ ಅಸಮರ್ಥವಾದಲ್ಲಿ 'ರಾಷ್ಟ್ರ' ಇಂತಹ 'ರಾಜ್ಯ'ಗಳನ್ನು ಬದಲಾಯಿಸಿಬಿಡುತ್ತದೆ. ಸಾಮಾನ್ಯ ಅರ್ಥದಲ್ಲಿ ಈ ದೇಶದ ಸರ್ಕಾರ ಬದಲಾಗಿದೆ ಎಂದು ಹೇಳಬಹುದು. ರಾಜ್ಯವನ್ನು ಉಪಯೋಗಿಯನ್ನಾಗಿಸುವ ಹಾಗೂ ಅವಶ್ಯವೆನಿಸಿದಲ್ಲಿ ಅದನ್ನು ಬದಲಾಯಿಸುವ ಪದ್ಧತಿಯ ಹೆಸರೇ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವವು ರಾಜ್ಯವನ್ನು ಬದಲಾಯಿಸಬಲ್ಲದು ಆದರೆ ರಾಷ್ಟ್ರವನ್ನು ಬದಲಾಯಿಸಲಾಗುವುದಿಲ್ಲ. ರಾಷ್ಟ್ರದ ಅಸ್ತಿತ್ವವು ಬಹುಮತ ಹಾಗೂ ಅಲ್ಪಮತವನ್ನು ಅವಲಂಬಿಸಿರುವುದಿಲ್ಲ. ರಾಷ್ಟ್ರಕ್ಕೆ ಒಂದು ಸ್ವಯಂಭೂ ಶಕ್ತಿಯಿದೆ. ಅದು ಸ್ವಯಂ ಪ್ರಕಟವಾಗುತ್ತದೆ ಹಾಗೂ ತನ್ನ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಮಾಜಿಕ, ಆರ್ಥಿಕ, ರಾಜನೈತಿಕ ಎಲ್ಲಾ ಕ್ಷೇತ್ರಗಳಲ್ಲಿ ವಿಭಿನ್ನ ಭಾವನೆಗಳನ್ನು ಸ್ಥಾಪಿಸುತ್ತದೆ. ಈ ವಿಭಿನ್ನ ಭಾವನೆಗಳಲ್ಲಿ 'ರಾಜ್ಯ'ವೂ ಒಂದಾಗಿದೆ. ರಾಜ್ಯಗಳು ಪರಸ್ಪರ ಒಂದಾಗಿ ರಾಷ್ಟ್ರದ ಶಕ್ತಿಯನ್ನು ಪ್ರಬಲಗೊಳಿಸಲು ನಿರಂತರ ಪ್ರಯತ್ನಶೀಲರಾಗಬೇಕು. ಅದಕ್ಕಾಗಿ ರಾಷ್ಟ್ರವನ್ನು ಸದಾ ಜಾಗೃತವಾಗಿಡ ಬೇಕಾಗಿರುವುದು ಅತ್ಯಂತ ಆವಶ್ಯಕ.

ರಾಷ್ಟ್ರ ಸುಪ್ತವಾದಾಗ ಎಲ್ಲಾ ರೀತಿಯ ಕೆಡುಕುಗಳು ಮನೆಮಾಡಿಕೊಳ್ಳುತ್ತವೆ. ರಾಷ್ಟ್ರ ಸುಪ್ತವಾದಲ್ಲಿ ಅದರ ವಿಭಿನ್ನ ಭಾವಗಳನ್ನು ಪ್ರತಿನಿಧಿಸುವ ಶಕ್ತಿಗಳಾದ ರಾಜ್ಯ, ಪಂಚಾಯತಿ, ಕುಟುಂಬ ಮುಂತಾದವೆಲ್ಲವೂ ನಿಯಂತ್ರಣವಿಲ್ಲದೆ ಸ್ವೇಚ್ಛಾಚಾರಿಗಳಾಗುತ್ತವೆ. ರಾಜ್ಯ ಭ್ರಷ್ಟವಾಗುತ್ತದೆ. 'ಪ್ರಭುತಾ ಪಾಯ್ ಕಾಹಿ ಮದ್ ನಾಹಿ'ಯ ಛಂದಸ್ಸು ಸರಿ ಎನಿಸುತ್ತದೆ. ರಾಷ್ಟ್ರ ಜಾಗೃತ ಹಾಗೂ ದಕ್ಷವಾಗಿದ್ದ ಪಕ್ಷದಲ್ಲಿ ರಾಜ್ಯದ ಪ್ರಭುತ್ವ ಗೌರವಪೂರ್ಣವಾಗಿರುತ್ತದೆ. ರಾಜ್ಯ, ರಾಷ್ಟ್ರದ ವಕೀಲನಾಗುತ್ತದೆ. ಹಲವು ಬಾರಿ ವಕೀಲನು ತನ್ನ ಕಕ್ಷಿದಾರನ ಪರವಾಗಿ ವಾದ ಮಂಡಿಸುವ ಸಮಯ ಪ್ರಾರ್ಥಿಸುವ ಭಾಷೆಯಲ್ಲಿ ಮಾತನಾಡುತ್ತಾನೆ. ಹೀಗೆ ಮಾತನಾಡುವುದು ಅತಿ ಆವಶ್ಯಕವಾಗುತ್ತದೆ. ವಕಾಲತ್‌ನಾಮವನ್ನು ಬರೆಯಲಾಗುತ್ತದೆ. ಆದರೆ ವಕೀಲನೇ ಸರಿಯಾಗಿ ಕೆಲಸಮಾಡದಿದ್ದಲ್ಲಿ ವಕಾಲತ್‌ನಾಮವನ್ನು ಬದಲಾಯಿಸಬಹುದು. ರಾಜ್ಯಕ್ಕೆ ಸಮಸ್ತ ಅಧಿಕಾರ ರಾಷ್ಟ್ರದಿಂದ ಬರುತ್ತದೆ ಹಾಗೂ ರಾಷ್ಟ್ರ ಜಾಗೃತವಾಗಿಲ್ಲದ ಸಂದರ್ಭದಲ್ಲಿ ರಾಜ್ಯ ಆ ಅಧಿಕಾರಗಳನ್ನು



ದುರುಪಯೋಗಪಡಿಸಿಕೊಳ್ಳುತ್ತದೆ. ರಾಜ್ಯವು ಅನಿಯಂತ್ರಿತವಾಗಿ ರಾಷ್ಟ್ರದ ಸಮಸ್ತ ಶಕ್ತಿಗಳನ್ನು ಅಪಹರಿಸಿದಲ್ಲಿ ಏಕತಂತ್ರಶಾಸನವುಂಟಾಗುತ್ತದೆ ಮತ್ತು ರಾಷ್ಟ್ರ ಹೆಳವನಂತಾಗುತ್ತದೆ.

ಇದರರ್ಥ 'ರಾಜ್ಯ'ದ ಮಹತ್ವ ಕಡಿಮೆ ಎಂದು ಖಂಡಿತ ಅಲ್ಲ. ರಾಜ್ಯದ ಮಹತ್ವ ವಿವಾದಾತೀತವಾದದ್ದು. ರಾಷ್ಟ್ರದ ಅಭಿವೃದ್ಧಿ, ಸಂರಕ್ಷಣೆ, ವೈಭವಶಾಲಿಯನ್ನಾಗಿಸುವುದು, ರಾಷ್ಟ್ರದ ಬೇಡಿಕೆಗಳಿಗನುಗುಣವಾಗಿ ನಿರ್ಣಯ ತೆಗೆದಕೊಂಡು ವಿಶ್ವ ಸಂಬಂಧದಲ್ಲಿ ಹೆಜ್ಜೆಯಿಡುವುದು ಮುಂತಾದ ಕಾರ್ಯಗಳು 'ರಾಜ್ಯ'ದ್ದಾಗಿದೆ. ಇಷ್ಟೆಲ್ಲಾ ಇದ್ದರೂ 'ರಾಜ್ಯ' ಸದಾ ಶಾಶ್ವತವಲ್ಲ. 'ರಾಜ್ಯ' ವಿಲ್ಲದಂತಹ ಸಂರ್ಭವೂ ಒದಗಬಹುದು. ಆದರೆ ರಾಷ್ಟ್ರಮಾತ್ರ ಅಸ್ತಿತ್ವದಲ್ಲಿರುತ್ತದೆ. ಈ ರೀತಿಯ ವರ್ಣನೆ ಸತ್ಯಯುಗದಲ್ಲಿ ದೊರೆಯುತ್ತದೆ. ಸತ್ಯಯುಗವನ್ನು ವರ್ಣಿಸುತ್ತಾ ಹೀಗೆ ಹೇಳಲಾಗಿದೆ. 'ನ ರಾಜ್ಯಂ ನ ಚ ರಾಜಾಸೀತ್ ನ ದಂಡ್ಯೋ ನ ಚ ದಾಂಡಿಕಃ' ಅಂದರೆ ಆಗ ರಾಜ್ಯವಿರಲಿಲ್ಲ, ರಾಜನಿರಲಿಲ್ಲ, ದಂಡವಿರಲಿಲ್ಲ ಹಾಗೂ ದಂಡನೆ ನೀಡುವವನು ಇರಲಿಲ್ಲ. ಆದರೆ ಆಗಲೂ ಸಹ ರಾಷ್ಟ್ರವಿತ್ತು. ಇದೇ ರೀತಿಯ ಕಲ್ಪನೆ ಸಾಮ್ಯವಾದಿ ಘೋಷಣೆಗಳನ್ನು ಹರಡುವ ಕಾರ್ಲ್ ಮಾರ್ಕ್ಸ್‌ನು ಸಹ 'ವಿದರಿಂಗ್ ಅವೇ ಆಫ್ ದಿ ಸ್ಟೇಟ್' (ರಾಜ್ಯ ಕ್ಷೀಣಿಸುವಾಗ)ನ ಮುಖಾಂತರ ಸ್ವೀಕರಿಸಿದ್ದಾನೆ. ಕೊನೆಗೆ ರಾಜ್ಯವಿರುವುದಿಲ್ಲ ಎಂಬುದೇ ಇವರ ಕಲ್ಪನೆ. ಆಗ ಉಳಿಯುವುದಾದರೂ ಏನು? ನಿಶ್ಚಿತವಾಗಿಯೂ ರಾಷ್ಟ್ರವು ಯಾವುದೋ ಸರ್ವಮಾನ್ಯ ಸಿದ್ಧಾಂತಗಳನ್ನು ಆಧರಿಸಿದೆ. ೧೯ನೆಯ ಶತಮಾನದಲ್ಲಿ ಮಾರ್ಕ್ಸ್‌ನು 'ರಾಷ್ಟ್ರ'ವನ್ನು ಒಪ್ಪಲಿಲ್ಲವಾದರೂ ಕಳೆದ ೫೦ ವರ್ಷಗಳ ಕಮ್ಯುನಿಸ್ಟ್ ಅನುಭವದಿಂದ ರಾಷ್ಟ್ರದ ಪ್ರೇರಣೆ ಕೇವಲ ಬಂಡವಾಳಶಾಹಿ ವ್ಯವಸ್ಥೆಯ ಉತ್ಪನ್ನವಾಗಿರದೇ ಕಮ್ಯೂನಿಸ್ಟ್ ವ್ಯವಸ್ಥೆಯಲ್ಲಿಯೂ ಸಹ ಅದೇ ಜೀವನದ ಶಕ್ತಿದಾಯ ಪ್ರೇರಣೆಯಾಗಿದೆ. ಅಷ್ಟೇ ಅಲ್ಲ ಯಾವುದೇ ರಾಷ್ಟ್ರ ಗುಲಾಮಗಿರಿಯಲ್ಲಿರುವಾಗ ಅಥವಾ ಆ ರಾಷ್ಟ್ರದ ಭೂಮಿಯ ಯಾವುದೇ ಭಾಗ ಗುಲಾಮಗಿರಿಯಲ್ಲಿರುವಾಗ ಪರಕೀಯ ರಾಜ್ಯ ಸ್ಥಾಪಿತವಾಗುತ್ತದೆ. ಆಗಲೂ ರಾಷ್ಟ್ರದ ಅಸ್ತಿತ್ವವಿರುತ್ತದೆ. ಹೇಗೆ ಬ್ರಿಟಿಷರು ಇಲ್ಲಿಗೆ ಬಂದು ತಮ್ಮ ಶಾಸನ ನಡೆಸಿದಾಗ ದೇಶ ಗುಲಾಮವಾಯಿತು ಆಗ ಬ್ರಿಟಿಷ್ ಗರ್ವನಮೆಂಟ್ ಎಂದು ಕರೆಯಲಾಗುತ್ತದೆ. ಆ ಸಮಯದಲ್ಲಿ ಭಾರತೀಯ ರಾಜ್ಯ ನಷ್ಟವಾಗಿತ್ತು ಅಥವಾ ಭಾರತೀಯ ರಾಜರುಗಳ ಸಂಕುಚಿತ ಎಲ್ಲೆಯಲ್ಲಿ ಅದು ಕುಂಠಿತಗೊಂಡು ಪರಕೀಯ ರಾಜ್ಯವನ್ನು ಆಶ್ರಯಿಸಿತು. ಆದರೆ ಆಗ ಭಾರತೀಯ ರಾಷ್ಟ್ರ ಅಸ್ತಿತ್ವದಲ್ಲಿ ಇರಲಿಲ್ಲ ಎಂದು ಯಾರಾದರೂ ಹೇಳಬಹುದೆ? ಭಾರತದ ರಾಷ್ಟ್ರೋಜ್ಜೀವನ ಇರದಿದ್ದ ಪಕ್ಷದಲ್ಲಿ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುತ್ತಿರಲಿಲ್ಲ. 'ರಾಜ್ಯ' ನಷ್ಟವಾದರೂ 'ರಾಷ್ಟ್ರ' ಅಸ್ತಿತ್ವದಲ್ಲಿರುವುದು. ಆದುದರಿಂದಲೇ ರಾಷ್ಟ್ರ–ಜಾಗೃತಿ

ಮಂತ್ರವನ್ನು ಹಬ್ಬಿಸಲಾಯಿತು. ರಾಷ್ಟ್ರ ತನ್ನ ಅಭಿವ್ಯಕ್ತಿಗಾಗಿ 'ಸ್ವರಾಜ್ಯ'ವನ್ನು ಘೋಷಿಸಲಾರಂಭಿಸಿತು. ರಾಜ್ಯವಿರದಿದ್ದರೂ ಸ್ವರಾಜ್ಯ ಪಡೆಯುವ ಸಲುವಾಗಿ ಗಲ್ಲಿಗೇರಲು ಅಥವಾ 'ಕರಿನೀರಿನ ಶಿಕ್ಷೆ'ಯನ್ನು ಅನುಭವಿಸುವಾಗಲೂ ಹೃದಯದಲ್ಲಿ ವಿಶ್ವಾಸ ಹಾಗೂ ಆನಂದ ಮೂಡಿಸುವವನು ಯಾರು ? ಆ ಸಮಯದಲ್ಲಿಯೂ ಸಹ ರಾಷ್ಟ್ರ ಅಸ್ತಿತ್ವದಲ್ಲಿತ್ತು. ಸಾಹಿತ್ಯ, ಕಲೆ, ದರ್ಶನ, ವಾಣಿಜ್ಯ ಮೊದಲಾದ ವಿವಿಧ ಕ್ಷೇತ್ರಗಳಲ್ಲಿಯೂ ಇದರ ಪ್ರತಿಬಿಂಬ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ವಂದೇ ಮಾತರಂನ ಘೋಷಣೆಯಾದಾಗ ಬಲಿದಾನಕ್ಕಾಗಿ ಸಿದ್ಧಗೊಳಿಸುವಂತಹ ಪ್ರೇರಣೆ ಯಾರದು? ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಒಂದೇ ಭಾವನೆಯನ್ನು ಮೂಡಿಸುವುದು ಯಾವುದು? ನಿಶ್ಚಿತವಾಗಿ ಅದು 'ರಾಷ್ಟ್ರ'ವೇ ಹೊರತು 'ರಾಜ್ಯ'ವಲ್ಲ.

ಹೀಗೆ ರಾಷ್ಟ್ರಕ್ಕಾಗಿ ರಾಜ್ಯವೇ ಹೊರತು ರಾಜ್ಯಕ್ಕಾಗಿ ರಾಷ್ಟ್ರವಲ್ಲ ಎಂಬುದು ಸ್ಪಷ್ಟ. ಹಾಗೆಯೇ ರಾಜಕೀಯಕ್ಕಾಗಿ ರಾಷ್ಟ್ರೀಯತೆಯಲ್ಲದೇ ರಾಷ್ಟ್ರೀಯತೆಯ ಘೋಷಣೆಗಾಗಿ ರಾಜಕೀಯವಿರಬೇಕು. ರಾಷ್ಟ್ರವನ್ನು ಕ್ಷೀಣಿಸುವ ರಾಜಕೀಯದ ಆವಶ್ಯಕತೆ ಇರುವುದಿಲ್ಲ. ಇದೇ ವಿಚಾರ ಸುರಾಜ್ಯ ಹಾಗೂ ಸ್ವರಾಜ್ಯದಲ್ಲಿರುವ ಅಂತರವನ್ನು ಸ್ಪಷ್ಟಪಡಿಸುತ್ತದೆ. ಪರಕೀಯರ ಅಧಿನಕ್ಕೊಳಗಾದ ಸುರಾಜ್ಯಕ್ಕಿಂತಲೂ ಕಷ್ಟಗಳಿಂದ ಕೂಡಿದ ಸ್ವರಾಜ್ಯ ಒಳಿತಾಗಿರುತ್ತದೆ. ಸ್ವರಾಜ್ಯದ ವ್ಯಾಖ್ಯಾನದಲ್ಲಿ ಮೂರು ಪ್ರಮುಖ ಸಂಗತಿಗಳಿವೆ.

ಮೊದಲನೆಯದಾಗಿ, ರಾಜ್ಯವು ರಾಷ್ಟ್ರದ ಅಂಗವಾದ ಪ್ರಜೆಗಳಿಂದ ಚಲಾಯಿಸಲ್ಪಡಬೇಕು. ಎರಡನೆಯ ವೈಶಿಷ್ಟ್ಯವೆಂದರೆ ಇಂತಹ ರಾಜ್ಯ, ರಾಷ್ಟ್ರದ ಹಿತದೆಡೆಗೆ ಚಲಿಸಬೇಕು ಅಂದರೆ ರಾಷ್ಟ್ರೀಯ ಹಿತದೃಷ್ಟಿಯಿಂದ ನೀತಿಗಳನ್ನು ಅಳವಡಿಸಿಕೊಳ್ಳಬೇಕು. ಹಾಗೂ ಮೂರನೆಯದಾಗಿ, ರಾಷ್ಟ್ರದ ಹಿತಸಾಧನೆಗೆ ತನ್ನದೇ ಆದ ಸಾಮರ್ಥ್ಯ ರಾಜ್ಯಕ್ಕೆ ಇರಬೇಕು. ಅಂದರೆ ಸ್ವಾವಲಂಬನೆಯಿಲ್ಲದೇ ಸ್ವರಾಜ್ಯದ ಕಲ್ಪನೆ ಮಾಡುವುದೂ ತಪ್ಪಾಗುತ್ತದೆ. ರಾಜ್ಯ ರಾಷ್ಟ್ರದ ಅನೇಕ ಘಟಕಗಳ ಅಧೀನದಲ್ಲಿದ್ದೂ ಸಹ ಆರ್ಥಿಕ ಅಥವಾ ವಿದೇಶಿ ವಿಷಯಗಳಲ್ಲಿ ಬೇರೆ ರಾಷ್ಟ್ರಗಳನ್ನು ಹಿಂಬಾಲಿಸಿದರೆ ಅಥವಾ ಅವುಗಳ ಒತ್ತಡಕ್ಕೆ ಸಿಲುಕಿದರೆ ಸ್ವರಾಜ್ಯ ಅರ್ಥಹೀನವಾಗುತ್ತದೆ. ರಕ್ಷಣೆಯ ವಿಷಯದಲ್ಲಿ ರಾಜ್ಯ ಸ್ವಾವಲಂಬಿಯಾಗಿರದಿದ್ದರೆ, ನೀತಿಗಳ ಸಂದರ್ಭದಲ್ಲಿ ಸ್ವಾತಂತ್ರ್ಯವಿರದಿದ್ದರೆ ಹಾಗೂ ಆರ್ಥಿಕ ಯೋಜನೆಗಳು ಅಪರಿಪೂರ್ಣವಾಗಿದ್ದರೆ ಆ ರಾಷ್ಟ್ರವನ್ನು ಕುರಿತು ಅಹಿತಕರ ಕಾರ್ಯವೆಸಗಲು ಪ್ರೇರಣೆ ದೊರೆಯುತ್ತದೆ. ಈ ರೀತಿಯ ಪರಾವಲಂಬಿ ರಾಜ್ಯ ವಿನಾಶಕ್ಕೆ ಕಾರಣವಾಗುತ್ತದೆ.

ಆದ್ದರಿಂದ ಎಲ್ಲಿಯ ತನಕ ಸ್ವರಾಷ್ಟ್ರದ ಆವಶ್ಯಕತೆಗಳನ್ನು ಪೂರೈಸುವುದೋ ಅಲ್ಲಿಯ ತನಕ ಸ್ವರಾಜ್ಯವು ಉಪಯುಕ್ತ ಮತ್ತು ಸಾರ್ಥಕ. ರಾಷ್ಟ್ರೀಯ ಸಮಾಜವು



'ರಾಜ್ಯ'ವನ್ನು ಮೀರಿ 'ರಾಷ್ಟ್ರ'ವನ್ನು ಆರಾಧಿಸಿದಾಗ ಮಾತ್ರ ಇದು ಸಾಧ್ಯ. ನಿಜವಾದ ಸಾಮರ್ಥ್ಯವಿರುವುದು 'ರಾಷ್ಟ್ರ'ದಲ್ಲೇ ಹೊರತು ರಾಜ್ಯದಲ್ಲಲ್ಲ. ಆದ್ದರಿಂದಲೇ ಯಾರು ರಾಷ್ಟ್ರಪ್ರೇಮಿಗಳಾಗಿರುತ್ತಾರೆಯೋ ಅವರು ರಾಜಕೀಯಕ್ಕೆ ಮಿಗಿಲಾದ ರಾಷ್ಟ್ರಭಾವವನ್ನು ಆರಾಧಿಸುತ್ತಾರೆ ರಾಷ್ಟ್ರವೇ ಅಂತಿಮ ಸತ್ಯ. ಈ ಸತ್ಯದ ಉಪಾಸನೆ ಸಾಂಸ್ಕೃತಿಕ ಕಾರ್ಯವೆನಿಸಿಕೊಳ್ಳುತ್ತದೆ. ರಾಜಕೀಯ ಕಾರ್ಯದ ಸಾಫಲ್ಯವು ಈ ರೀತಿಯ ಪ್ರಖರ ರಾಷ್ಟ್ರವಾದದಿಂದ ಕೂಡಿದ ಸಾಂಸ್ಕೃತಿಕ ಶಕ್ತಿ ಸದಾ ಅದರ ಹಿಂದೆ ಇರುವುದರಿಂದ ಸಾಧ್ಯ.

## ೫. ರಾಷ್ಟ್ರದ ಸ್ವರೂಪ : ಚಿತಿ

ರಾಷ್ಟ್ರದ ವಾಸ್ತವಿಕ ಸ್ವರೂಪವನ್ನು ಅರಿತುಕೊಳ್ಳಲು ಆ ಮೂಲತತ್ವವನ್ನು ಸರಿಯಾಗಿ ಅರಿತುಕೊಳ್ಳಬೇಕು. ಅದರ ಉದಯದಿಂದಲೇ ರಾಷ್ಟ್ರದ ಉದಯವಾಗುತ್ತದೆ, ಅದರಿಂದಲೇ ರಾಷ್ಟ್ರದ ಸ್ವೀಕೃತಿಯಾಗುವುದು ಹಾಗೂ ಅದು ಕ್ಷೀಣಗೊಂಡಲ್ಲಿ ರಾಷ್ಟ್ರ ವಿನಾಶದೆಡೆಗೆ ಮುಂದುವರಿಯುವುದು. ಈ ಮೂಲ ತತ್ವವೇ–ರಾಷ್ಟ್ರದ ಪ್ರಕೃತಿ. ಇದನ್ನು ಶಾಸ್ತ್ರೋಕ್ತವಾಗಿ 'ಚಿತಿ' ಹೆಸರಿನಿಂದ ಕರೆಯಲಾಗುತ್ತದೆ. 'ಚೈತನ್ಯ'ವು ಪ್ರತಿಯೊಂದು ವಸ್ತುವನ್ನು ಸ್ವೀಕೃತ ಅಥವಾ ಅಸ್ವೀಕೃತವನ್ನಾಗಿಸುವ ಅಳತೆಗೋಲಾಗಿದೆ. ಉದಾಹರಣೆಗೆ ನಾವು ರಾಮಾಯಣದ ಪ್ರಸಂಗವನ್ನು ನೋಡಬಹುದು. ವಿಭೀಷಣನು ತನ್ನ ಸಹೋದರ ರಾವಣನ ಪಕ್ಷವನ್ನು ಬಿಟ್ಟು ಭಗವಾನ್ ಶ್ರೀರಾಮನ ಪಕ್ಷಕ್ಕೆ ಬಂದನು. ಇದಕ್ಕೆ ವಿಭೀಷಣನನ್ನು ಹೊಗಳಲಾಯಿತು. ಹಾಗೆಯೇ ರಾವಣನು ವೇದಗಳನ್ನು ಅರಿತವನು ಹಾಗೂ ಉಚ್ಚಕುಲದ ಬ್ರಾಹ್ಮಣನಾಗಿದ್ದನು. ಆದರೆ ರಾವಣನಿಗೆ ಜಯಕಾರವಿಲ್ಲ. ಪ್ರಭು ರಾಮಚಂದ್ರನು ನಮ್ಮ ಇಷ್ಟದೇವತೆ ಹಾಗೂ ಆದರ್ಶದೇವತೆಯಾಗಿದ್ದಾನೆ. ಅದೇ ರೀತಿ ಮಹಾಭಾರತದಲ್ಲಿ ನಾವು ಶ್ರೀಕೃಷ್ಣನನ್ನು ಅವತಾರವೆಂದು ಪೂಜಿಸುತ್ತೇವೆ. ಅವನು ತನ್ನ ಸ್ವಂತ ಮಾವ ಕಂಸನನ್ನು ಕೊಂದು, ಅದೆಷ್ಟೋ ಕೌರವ ಸೇನಾಪತಿಗಳ ವಿನಾಶಕ್ಕೆ ಪ್ರಯತ್ನಿಸಿದನು. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯನು ಪಾಂಡವರ ವಿಜಯವನ್ನು ಧರ್ಮವೆಂದೂ ಹಾಗೂ ಕೌರವರನ್ನು ಅನೀತಿಯ ಪಕ್ಷಕ್ಕೆ ಸೇರಿದವರು ಎನ್ನುತ್ತಾನೆ. ಹೀಗೆ ಹಲವಾರು ವಿಷಯಗಳಲ್ಲಿ ನಾವು ಭಾರತದ ರಾಷ್ಟ್ರೀಯ ಮಾನಸದ ಅದ್ಭುತ ಐಕ್ಯತೆಯ ದೃಶ್ಯವನ್ನು ಕಾಣುತ್ತೇವೆ. ಆತ್ಮ–ಪರಮಾತ್ಮನ ಸಂಬಂಧ, ಮಾನವಜೀವನದ ಗುರಿ, ಆ ಗುರಿಯನ್ನು ಸಾಧಿಸಲು ಶ್ರೇಷ್ಠ ಗುಣಗಳನ್ನು ಒಗ್ಗೂಡಿಸುವುದು ಹಾಗೂ ಇಂತಹ ಆಚರಣೆಗಳನ್ನು ಸಾರ್ಥಕಗೊಳಿಸುವಂತಹ ಮಹಾಪುರುಷರಿಗೆ ಸಮಾನ ಶ್ರದ್ಧೆ–ಆದರದ ಭಾವ ಇತ್ಯಾದಿ ಎಷ್ಟೋ ವಿಷಯಗಳು ಕಂಡುಬರುತ್ತವೆ. ಇದನ್ನು ಕುರಿತು ಸಮಾನ ಸಮೀಕ್ಷೆ ವಿಭಿನ್ನ ಭಾಷೆಗಳಲ್ಲಿ ಲಭಿಸುವ ಗ್ರಂಥಗಳ ವಿಪುಲ ಸಾಹಿತ್ಯದಲ್ಲಿ ಒಂದೇ ರೀತಿಯ ಚಿಂತನೆಯ ವಿವಿಧ ನೋಟಗಳು ಸಿಗುತ್ತವೆ. ನಿಸ್ಸಂದೇಹವಾಗಿ ಈ ಏಕರೂಪತೆಯನ್ನು ನೋಡಿ ನಾವು ಒಂದು ಕ್ಷಣ ಅವಾಕ್



ಆಗಿ ಈ ರೀತಿಯ ನೀರ–ಕ್ಷೀರ ವಿವೇಕದ ಆಧಾರವಾದರು ಏನು ಎಂದು ಯೋಚಿಸುತ್ತೇವೆ. ಈ ಆಧಾರ ಎಂದು ಹೇಗೆ ಸೃಷ್ಟಿಯಾಯಿತು? ರಾಷ್ಟ್ರಕ್ಕಾಗಿ ನಾವು ಎಂದು ಈ ಅಳತೆಗೋಲನ್ನು ನಿರ್ಧರಿಸಿದೆವು? ಹಾಗೂ ಶತಮಾನಗಳ ಈ ನಿರಂತರ ಕಾಲಖಂಡದಲ್ಲಿ ಉಂಟಾದ ಅಸಂಖ್ಯಾತ ಪರಿವರ್ತನೆಗಳಿದ್ದರೂ ಪ್ರತಿಯೊಂದು ಹೊರಗಿನ ತೊಂದರೆಗಳನ್ನು ತನ್ನ ಆಂತರಿಕ ಇಚ್ಛಾಶಕ್ತಿಯೊಂದಿಗೆ ಎದುರಿಸಿದ ಸಮರ್ಥವಾದ ಆ ನಿರ್ಣಾಯಕ ವಸ್ತು ಯಾವುದು ? ರಾಷ್ಟ್ರದ ಈ ಚಿರಂತನ ಜೀವನ ಶಕ್ತಿಯಾದ ಇದನ್ನೇ 'ಚೈತನ್ಯ' ಎಂದು ಕರೆಯಲಾಗುತ್ತದೆ.

ಇದನ್ನು ಅರಿತುಕೊಳ್ಳಲು ರಾಷ್ಟ್ರದ ಹೆಸರಿನಲ್ಲಿ ಮಾಡುವಂತಹ ಎಲ್ಲಾ ತಪ್ಪುಗಳಿಂದ ನಾವು ಪ್ರಪ್ರಥಮವಾಗಿ ದೂರವಿರಬೇಕು. ಹಿಂದಿನ ಅಧ್ಯಾಯದಲ್ಲಿ 'ರಾಷ್ಟ್ರ' ಹಾಗೂ 'ರಾಜ್ಯ'ದ ಅಂತರವನ್ನು ಸ್ಪಷ್ಟಗೊಳಿಸುತ್ತಾ ಹೀಗೆ ಹೇಳಲಾಗಿದೆ, ಸಾಮಾನ್ಯವಾಗಿ ರಾಜ್ಯವನ್ನೇ ರಾಷ್ಟ್ರವೆಂದು ಜನರು ತಿಳಿಯುತ್ತಾರೆ. ಅವರು ತಪ್ಪು ಮಾಡುತ್ತಾರೆ. 'ರಾಜ್ಯ' ರಾಷ್ಟ್ರದ ಆವಶ್ಯಕತೆಗಳನ್ನು ಪೂರೈಸುವಂತಹ ಒಂದು ಅಂಗವಾಗಿದೆ. ರಾಜ್ಯ ಹಲವಾರು ಸಂದರ್ಭದಲ್ಲಿ ರಾಷ್ಟ್ರವನ್ನು ಪ್ರತಿನಿಧಿಸುತ್ತದೆ ಹಾಗೂ ಈ ಕಾರಣದಿಂದಲೇ ರಾಜ್ಯಕ್ಕೆ ಕಡೆಗಣಿಸಲಾಗದಂತಹ ಮಹತ್ವಪೂರ್ಣ ಸ್ಥಾನ ದೊರತಿದೆ. ಆದರೂ ಈ ಕಾರಣಗಳಿಂದ ನಾವು 'ರಾಜ್ಯ'ವನ್ನೇ ರಾಷ್ಟ್ರವೆಂದು ತಿಳಿಯುವಂತಹ ಅಪರಾಧ ಮಾಡಬಾರದು, ಏಕೆಂದರೆ ರಾಷ್ಟ್ರ ಒಂದು ಜೀವಂತ ಮಾನದಂಡ, ಇದು ಸ್ವಯಂಪ್ರಕಟವಾಗುತ್ತದೆ ಹಾಗೂ ಇದು ತನ್ನ ಆವಶ್ಯಕತೆಗಳನ್ನು ಪೂರೈಸುವ ಸಲುವಾಗಿ ರಾಜ್ಯವೂ ಸೇರಿದಂತೆ ಹಲವಾರು ಸಣ್ಣ–ದೊಡ್ಡ ಮಾನದಂಡಗಳನ್ನು ನಿರ್ಮಿಸುತ್ತದೆ. ಈ ವಿಭಿನ್ನ ಮಾನದಂಡಗಳು ರಾಷ್ಟ್ರಕ್ಕೆ ಪೋಷಕವಾಗಿ ಕಾರ್ಯ ನಿರ್ವಹಿಸಬೇಕು, ಹಾಗೂ ಇವುಗಳಲ್ಲಿ ಎಂದಿಗೂ ಯಾವುದೇ ಪ್ರಕಾರದ ಘರ್ಷಣೆ ಉಂಟಾಗಬಾರದು. ಇದಕ್ಕಾಗಿ ರಾಷ್ಟ್ರವನ್ನು ಸದಾ ಜಾಗೃತವಾಗಿಟ್ಟಿರಬೇಕಾದ ಆವಶ್ಯಕತೆ ಇದೆ. ಯಜುರ್ವೇದದಲ್ಲಿ 'ವಯಂ ರಾಷ್ಟ್ರೇ ಜಾಗೃಯಾಮ ಪುರೋಹಿತಾಃ' ಮಂತ್ರದಿಂದ ನಾವು ಎಚ್ಚರವಾಗಿರಬೇಕು ಆಗಲೇ ರಾಷ್ಟ್ರವನ್ನು ಎಚ್ಚರವಾಗಿಡಬಲ್ಲೆವು ಎಂಬ ಅಪೇಕ್ಷೆಯನ್ನು ವ್ಯಕ್ತಪಡಿಸಲಾಗಿದೆ.

ಹೀಗೆಯೇ 'ದೇಶ' ಹಾಗೂ 'ರಾಷ್ಟ್ರ' ಬೇರೆ ಬೇರೆ ಎಂಬ ಸಂಗತಿಯನ್ನು ನಾವು ಚೆನ್ನಾಗಿ ಅರಿತುಕೊಳ್ಳಬೇಕು. 'ರಾಜ್ಯ'ಕ್ಕಿಂತಲೂ 'ದೇಶ' ಅಧಿಕ ವಿಶಾಲ ಹಾಗೂ ಶಾಶ್ವತ ಶಕ್ತಿಯಾಗಿದೆ ಹಾಗೂ ಇದೇ ಕಾರಣದಿಂದ ಬಹುಶಃ ದೇಶ ಹಾಗೂ ರಾಷ್ಟ್ರ ಸಮಾನಾರ್ಥಕ ಶಬ್ದಗಳ ರೂಪದಲ್ಲಿ ಬಳಸಲ್ಪಡುತ್ತವೆ. 'ನಮ್ಮ ಪ್ರೀತಿಯ ಭಾರತ–ದೇಶ' ಎಂಬ ಗೀತೆಯನ್ನು ಹಾಡಿದಾಗ ವಾಸ್ತವಕ್ಕೆ ನಮ್ಮ ಗಮನ ರಾಷ್ಟ್ರದೆಡೆ ಇರುತ್ತದೆ. ಈ ರೀತಿ 'ದೇಶ' ಹಾಗೂ 'ರಾಷ್ಟ್ರ' ಈ ಪದಗಳನ್ನು ಒಂದೇ ರೀತಿಯಾಗಿ ಹೇಳಲಾಗಿದೆ. ಆದರೂ ಸಹ ರಾಷ್ಟ್ರದ ಯಾವ ಚಿರಂತನ

ಶಕ್ತಿಯ ಸೂಕ್ಷ್ಮ ಅಧ್ಯಯನವನ್ನು ನಾವು ಮಾಡಬೇಕೋ, ಅದಕ್ಕಾಗಿ ದೇಶ ಹಾಗೂ ರಾಷ್ಟ್ರದ ನಡುವಿನ ಅಂತರವನ್ನು ಸಹ ಗಮನದಲ್ಲಿ ಇಡಬೇಕಾದದ್ದು ಆವಶ್ಯಕ. ಯಾವ ರೀತಿ 'ರಾಷ್ಟ್ರ'ಕ್ಕೆ 'ರಾಜ್ಯ'ಕ್ಕಿಂತ ಮಿಗಿಲಾದ ಭಿನ್ನವಾದಂತಹ ಶಕ್ತಿ ಇದೆಯೋ ಹಾಗೆಯೇ 'ರಾಷ್ಟ್ರ' ಹಾಗೂ 'ದೇಶ'ವ ಸಹ ಒಂದೇ ಅಲ್ಲ. ಭೂಮಿ ಹಾಗೂ ಜನರು ಒಂದಾಗಿ ದೇಶವಾಗುತ್ತದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಭೂಖಂಡ ಹಾಗೂ ಜನಸಮುದಾಯ ಎರಡೂ ಸಹ ನಾವು ಸೂಕ್ತವಾಗಿ ನೋಡಿ, ಕೇಳಿ, ಅರಿಯಬೇಕಾದಂತಹ ವಿಷಯಗಳಾಗಿವೆ. ಅಂದರೆ ದೇಶ ಪ್ರತ್ಯಕ್ಷವಾಗಿ ಗೋಚರಿಸುವಂತಹ ಶಕ್ತಿಯಾಗಿದೆ. ದೇಶ ಕಾಣಿಸಿಕೊಳ್ಳುತ್ತದೆ. ಆದುದರಿಂದ ನಾವು ರಾಷ್ಟ್ರವನ್ನು ವರ್ಣಿಸುವಾಗ ಇದೇ ಗೋಚರಿಸುವ ದೇಶವನ್ನು ವರ್ಣಿಸಬೇಕಾಗುತ್ತದೆ. ಈ ಕಾರಣದಿಂದಲೇ ದೇಶ ಹಾಗೂ ರಾಷ್ಟ್ರ ಸಮಾನಾರ್ಥಕ ಪದಗಳಾಗಿ ಕಂಡುಬರುತ್ತವೆ. ಹೇಗೆ 'ರಾಜ್ಯ' ರಾಷ್ಟ್ರದ ಪ್ರತಿನಿಧಿಯಾಗಿ ನಮಗೆ ಕಂಡುಬರುತ್ತದೆಯೋ, ಹಾಗೆಯೇ ದೇಶವು ಸಹ ರಾಷ್ಟ್ರದ ಅಭಿವ್ಯಕ್ತಿಗೆ ಪ್ರಬಲ ಆಧಾರವಾಗಿ ನಮ್ಮ ಮುಂದೆ ಕಾಣಿಸಿಕೊಳ್ಳುತ್ತದೆ. ದೇಶವಿಲ್ಲದೆ ಯಾವುದೇ ರಾಷ್ಟ್ರದ ಕಲ್ಪನೆಯೂ ಅಸಾಧ್ಯವಾಗುತ್ತದೆ. ಭೂಖಂಡವಿಲ್ಲದೇ ಹಾಗೂ ಯಾವುದೇ ಮಾನವ ಸಮುದಾಯವಿಲ್ಲದೇ ರಾಷ್ಟ್ರ ಎಂದು ಹೇಗೆ ಹೇಳಲು ಸಾಧ್ಯವಾಗುತ್ತದೆ? ಆದರೂ ಸಹ ಒಂದು ಸೂಕ್ಷ್ಮ ರಹಸ್ಯವನ್ನು ನಾವು ಸ್ವೀಕರಿಸಲೇಬೇಕು. ಅದೇಂದರೆ ಯಾವ ರೀತಿ ದೇಶ ಗೋಚರಿಸುವ ಶಕ್ತಿಯೋ ಅದೇ ರೀತಿ 'ರಾಷ್ಟ್ರ' ಒಂದು ಅಗೋಚರ ಶಕ್ತಿ. ದೇಶ ಕಾಣಿಸಿಕೊಳ್ಳುತ್ತದೆ, ರಾಷ್ಟ್ರ ಕಾಣಿಸಿಕೊಳ್ಳುವುದಿಲ್ಲ. ಹೇಗೆ ಶರೀರ ಕಾಣಿಸುತ್ತದೆ, ಆತ್ಮ ಕಾಣಿಸುವುದಿಲ್ಲವೊ ಹಾಗೂ ಶರೀರವಿಲ್ಲದೇ ಆತ್ಮ ಪ್ರಕಟಗೊಳ್ಳುವುದಿಲ್ಲ, ಜೊತೆಗೆ ಆತ್ಮವಿಲ್ಲದೇ ಶರೀರ ಶವಕ್ಕೆ ಸಮಾನವಾಗುತ್ತದೆಯೋ ಹಾಗೆ. ದೇಶ ಹಾಗೂ ರಾಷ್ಟ್ರ ಅಭಿನ್ನವಾದರೂ ಬೇರೆ–ಬೇರೆ ಶಕ್ತಿಗಳಾಗಿವೆ. ರಾಷ್ಟ್ರ ಒಂದು ಅದೃಶ್ಯ ಶಕ್ತಿಯಲ್ಲದೆ ಗೂಢ ಹಾಗೂ ಚಿರಂತನವೂ ಆಗಿದೆ. ಈ ಸಂದರ್ಭದಲ್ಲಿ ನಾವು ನಮ್ಮ ಭಾರತದ ಕಡೆ ಗಮನಹರಿಸೋಣ. ನಾವು ಭಾರತಕ್ಕಾಗಿ ಅನನ್ಯ ಭಕ್ತಿ–ಭಾವದಿಂದ ಕಾರ್ಯಮಾಡುತ್ತೇವೆ. 'ಭಾರತ' ದೇಶವಾಗಿ ಪೃಥ್ವಿಯ ಒಂದು ಭೂ–ಭಾಗದ ಹೆಸರು. ಮೂರು ಕಡೆ ಸಮುದ್ರ ಹಾಗೂ ಉತ್ತರಕ್ಕೆ ಹಿಮಾಲಯ ಪರ್ವತಶ್ರೇಣಿಗಳಿಂದ ಕೂಡಿದ ಭೂ–ಭಾಗವೇ ನಮ್ಮ ದೇಶವಾಗಿದೆ. ಈ ಅರ್ಥದಲ್ಲಿ ಭಾರತ ದೇಶ ಪೃಥ್ವಿಯ ಭಾಗವೇ ಈ ದೇಶವನ್ನೇ ರಾಷ್ಟ್ರ ಎಂದು ನಾವು ಆರಾಧಿಸುತ್ತೇವೆಯೇ?

ನಿಸ್ಸಂದೇಹವಾಗಿ ಯಾವುದೇ ರಾಷ್ಟ್ರಭಕ್ತನೂ ಇದನ್ನು ಒಪ್ಪುವುದಿಲ್ಲ. ಕೇವಲ ನೆಲದ ಒಂದು ಅಂಶ ಎಂದಿಗೂ ರಾಷ್ಟ್ರವಾಗಲಾರದು. ಪ್ರಪಂಚದಲ್ಲಿ ನಾವು ರಾಷ್ಟ್ರ ಎಂದು ಕರೆಯಲಾಗದಂತಹ ಎಷ್ಟೋ ಭೂ–ಖಂಡಗಳಿವೆ. ಉತ್ತರ



ಧ್ರುವ ಹಾಗೂ ದಕ್ಷಿಣ ಧ್ರುವದ ಭೂ–ಖಂಡಗಳನ್ನು ನಾವು ರಾಷ್ಟ್ರ ಎಂದು ಕರೆಯಬಹುದೇ? ಈ ಪ್ರಕಾರ ದಕ್ಷಿಣ ಆಫ್ರಿಕಾದಲ್ಲಿ ರಾಷ್ಟ್ರವಲ್ಲದ ಎಷ್ಟೋ ಭೂಖಂಡಗಳಿವೆ. ಭೂಮಿಯ ಒಂದು ಭಾಗವಾಗಿ ಎಷ್ಟೋ ದ್ವೀಪಗಳಿವೆ, ಅಲ್ಲಿ ಜನರು ವಾಸಿಸುತ್ತಾರೆ, ಆದರೆ ಅಲ್ಲಿ ಯಾವುದೇ ರಾಷ್ಟ್ರೀಯ ಜೀವನದ ವಿಕಾಸವಾಗುವುದಿಲ್ಲ. ಈ ತಥ್ಯವನ್ನು ಮತ್ತಷ್ಟು ಸರಳವಾಗಿ ಅರಿತುಕೊಳ್ಳಲು ನಾವು ನಮ್ಮ ಭಾರತದ ವಿಭಿನ್ನ ಪ್ರದೇಶಗಳ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಉತ್ತರಪ್ರದೇಶ ಒಂದು ಭೌಗೋಳಿಕ ಅಂಗವಾಗಿದೆ. ಬಂಗಾಳವು ಸಹ ನೆಲದ ಒಂದು ಭಾಗವಾಗಿದೆ. ಆದರೆ ಉತ್ತರಪ್ರದೇಶ ಅಥವಾ ಬಂಗಾಳ ಎನ್ನುವುದರಿಂದ ಯಾವುದೇ ರಾಷ್ಟ್ರ ಎಂದು ತಿಳಿಯುವುದೇ? 'ಭಾರತ' ಎಂದು ಹೇಳುವುದರಿಂದ ಹೇಗೆ ರಾಷ್ಟ್ರದ ಅರಿವು ಉಂಟಾಗುತ್ತದೆಯೋ ಹಾಗೆ ಕೇವಲ ಉತ್ತರಪ್ರದೇಶ ಅಥವಾ ಬಂಗಾಳ ಎಂದು ಯಾವುದೇ ಪ್ರದೇಶದ ಹೆಸರು ಹೇಳುವುದರಿಂದ ಆಗುವುದಿಲ್ಲ. ಆದುದರಿಂದ ನಿಶ್ಚಿತವಾದ ಒಂದು ಭೂ–ಭಾಗ ಯಾವುದೇ ರಾಷ್ಟ್ರದ ಅನಿವಾರ್ಯತೆ ಹಾಗೂ ಪ್ರಥಮ ಆವಶ್ಯಕತೆಯಾಗಿದೆ ಆದರೂ ಕೇವಲ ಭೂ–ಭಾಗವೇ ರಾಷ್ಟ್ರವಾಗಲಾರದು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ರಾಷ್ಟ್ರದ ಸ್ವರೂಪ ಯಾವ ತತ್ವದ ಅಸ್ತಿತ್ವವನ್ನು ಅವಲಂಬಿಸಿದೆಯೋ ಅದು ಅಗೋಚರವಾಗಿದ್ದರೂ ಅದು ಒಂದು ವಿಲಕ್ಷಣ ತತ್ವವಾಗಿದ್ದು ಹೆಚ್ಚು–ಹೆಚ್ಚಾಗಿ ಅದು ಅನುಭವಕ್ಕೆ ಬರುತ್ತದೆ. ವ್ಯಕ್ತಿಯ ಜೀವನದಲ್ಲಿ ವ್ಯಕ್ತಿಯ ಅಭಿಮಾನ ಎಷ್ಟು ಮಹತ್ವದ್ದೋ ಹಾಗೆಯೇ ರಾಷ್ಟ್ರೀಯಅಭಿಮಾನವೂ ಮಹತ್ವಪೂರ್ಣವಾಗಿದೆ. ರಾಷ್ಟ್ರಾಭಿಮಾನದಿಂದ ರಾಷ್ಟ್ರ ಜೀವಂತವಾಗಿರುತ್ತದೆ. ಅದು ಕ್ಷೀಣಗೊಂಡಾಗ ರಾಷ್ಟ್ರವೂ ಕ್ಷೀಣಿಸುತ್ತದೆ ಮತ್ತು ಅದು ಲೋಪ ಅಥವಾ ಮರೆಯಲ್ಪಟ್ಟರೆ ಸಂಪೂರ್ಣ ರಾಷ್ಟ್ರವೇ ನಾಶಗೊಳ್ಳುತ್ತದೆ. ಪ್ರಪಂಚದ ಭೂಪಟದಲ್ಲಿ ಎಷ್ಟೋ ರಾಷ್ಟ್ರಗಳು ಇಂದು ಗತಜೀವನದ ನೆನಪುಗಳಾಗಿ ಮಾತ್ರ ಉಳಿದಿವೆ. ಇದರ ಕಾರಣ ಸಹ ಇದೇ ಆಗಿದೆ. ಅಲ್ಲಿಯ ಭೂಖಂಡ ಹಾಗೂ ಜನರು ಇಂದಿಗೂ ಸಹ ಇದ್ದಾರೆ ಆದರೂ ಪ್ರಾಚೀನ ಇರಾನ್, ಯುನಾನ್, ಗ್ರೀಕ್ ಎಲ್ಲವೂ ಕೊನೆಯಾಗಿಬಿಟ್ಟಿವೆ. ಅಂದರೆ ರಾಷ್ಟ್ರಾಭಿಮಾನ, ಅದರ ನಿಜವಾದ ಸ್ವಭಾವ ನಾಶವಾಗಿದೆ. ರಾಷ್ಟ್ರದ ಸ್ವರೂಪ ಅದರ ಈ ಅಭಿಮಾನದಲ್ಲಿ ಅಡಗಿರುತ್ತದೆ.

ವ್ಯಕ್ತಿಯ ಹಾಗೆಯೇ ರಾಷ್ಟ್ರಕ್ಕೂ ತನ್ನದೇ ಆದ ಅಭಿಮಾನವಿರುತ್ತದೆ ಎಂದು ನಾವು ಹೇಳಿದಾಗ ನಮ್ಮ ಮುಂದೆ ಆ ಭೂಖಂಡದಲ್ಲಿ ವಾಸಿಸುವ ಒಂದು ಮಾನವ–ಸಮುದಾಯ ಕಂಡುಬರುತ್ತದೆ. ವಾಸ್ತವವಾಗಿ 'ರಾಷ್ಟ್ರ' ಎಂಬುದರ ಅಭಿಮಾನದ ಅರ್ಥವನ್ನು ತಿಳಿಯಲು ನಾವು ಪ್ರಯತ್ನಿಸಿದರೆ ಆಗ ಅದು ಒಂದು ಸಮೂಹವನ್ನು ಸೂಚಿಸುವ ಶಬ್ದವಾಗುತ್ತದೆ. ತರಗತಿ ಎಂದರೆ ಹೇಗೆ ಒಂದು

ವಿದ್ಯಾರ್ಥಿಯಲ್ಲದೆ ವಿದ್ಯಾರ್ಥಿಗಳ ಸಮೂಹವನ್ನು ಸೂಚಿಸುತ್ತದೆಯೋ, ಅದೇ ರೀತಿ ರಾಷ್ಟ್ರವೆಂದರೇ ಸಮೂಹವೆಂದಾಗುತ್ತದೆ. ರಾಷ್ಟ್ರದ ಈ ಸಮೂಹಕ್ಕೆ ಸಾಮಾನ್ಯವಾಗಿ ಯಾವ ಹೆಸರನ್ನು ಕೊಡಲಾಗುತ್ತದೆಯೋ, ಅದು 'ಜನ' ಎಂದರ್ಥವಾಗುತ್ತದೆ. ಇದೇ 'ಜನ' ಶಬ್ದಕ್ಕೆ ನಾವು ಇಂದು ಜನತೆ ಎನ್ನುತ್ತೇವೆ. ಜನಸಮೂಹವೇ ನಿಶ್ಚಿತ ಭೂ–ಭಾಗದಲ್ಲಿ ರಾಷ್ಟ್ರವೆಂದು ಕರೆಯಲ್ಪಡುತ್ತದೆ. ಆದರೆ ಅದು ಯಾವ ಜನಸಮುದಾಯ? ಯಾವ ಜನ ಸಮುದಾಯವಾಗಿ ರಾಷ್ಟ್ರವಾಗುತ್ತಾರೆ? ಯಾವುದೇ ಜನರ ಸಮೂಹವನ್ನು ನಾವು ರಾಷ್ಟ್ರ ಎಂದು ಕರೆಯಬಹುದೆ ? ಎಷ್ಟು ಜನ? ಯಾವ ರೀತಿಯ ಜನ? ಏಕೆಂದರೆ ಯಾವ ರಾಷ್ಟ್ರೀಯ ಹೆಮ್ಮೆಯ ಸಲುವಾಗಿ 'ರಾಷ್ಟ್ರ' ಶಬ್ದ ಸಾರ್ಥಕವಾಗುತ್ತದೆಯೋ, ಅದು ಯಾವುದೋ ಗುಂಪು ಒಂದೆಡೆ ಸೇರುವುದರಿಂದ ಪ್ರಕಟವಾಗುವುದಿಲ್ಲ. ಈ ಪ್ರಶ್ನೆಗಳಿಗೆ ಉತ್ತರ ನೀಡುವುದು ಕಠಿಣವಲ್ಲ. ಆದರೂ ಬಹಳಷ್ಟು ಜನ ಗಾಬರಿಗೊಳ್ಳುತ್ತಾರೆ. ಬಹಳಷ್ಟು ಜನ ಈ ವಿಷಯದಲ್ಲಿ ರಾಜ್ಯವನ್ನು ಆಧಾರವನ್ನಾಗಿಸಿ ರಾಜ್ಯದಲ್ಲಿ ವಾಸಿಸುವಂತಹ ಎಲ್ಲಾ ವ್ಯಕ್ತಿಗಳು 'ರಾಷ್ಟ್ರ'ದ ಜನರಾಗುತ್ತಾರೆ ಎಂದು ಹೇಳತೊಡಗುತ್ತಾರೆ. ಯಾರು ಇದನ್ನು ಬದಿಗಿಟ್ಟು ಯೋಚಿಸಬಲ್ಲರೋ ಅವರು ದೇಶವನ್ನು ಆಧಾರವನ್ನಾಗಿಸಿ ಜನರನ್ನು ಕಲ್ಪಿಸಿಕೊಳ್ಳುತ್ತಾರೆ. ಆ ಭೂಮಿಯಲ್ಲಿ ವಾಸಿಸುವ ಜನರೆಲ್ಲಾ ಈ ಗುಂಪಿಗೆ ಸೇರುವರು ಎಂದು ಅವರ ಅಭಿಪ್ರಾಯ. ಈ ಎರಡೂ ರಾಷ್ಟ್ರವನ್ನು ಕುರಿತು ವಿಚಾರಿಸಲು ಇರುವ ಎರಡು ಸ್ಥೂಲ ರೀತಿಗಳಾಗಿವೆ. ರಾಷ್ಟ್ರದ ಯಾವ 'ಜನಾಂಗ' ಎಂಬ ಭಾವವಿದೆಯೋ ಅದನ್ನು ಈ ಎರಡೂ ವಿಚಾರಗಳಿಗೆ ಸರಿಯಾಗಿ ವ್ಯಕ್ತಪಡಿಸಲಾಗುವುದಿಲ್ಲ. ಆದುದರಿಂದ ರಾಜ್ಯ ಅಥವಾ ದೇಶದ ಆಧಾರದ ಮೇಲೆ 'ಜನಾಂಗ'ವನ್ನು ಕಲ್ಪಿಸಿಕೊಳ್ಳುವ ಮೊದಲು ರಾಷ್ಟ್ರದ 'ಒಂದು–ಜನಾಂಗ' ಎಂಬುದನ್ನು ಚೆನ್ನಾಗಿ ವಿಚಾರ ಮಾಡಬೇಕು. ಆಗಲೇ ನಾವು ರಾಷ್ಟ್ರೀಯ ಹೆಮ್ಮೆಯನ್ನು ಸರಿಯಾಗಿ ತಿಳಿಯಬಹುದು.

'ರಾಷ್ಟ್ರ' ದಿಂದ ಯಾವ ಸಮೂಹದ ಅರಿವಾಗುತ್ತದೆಯೋ, ಅದನ್ನು ನಾವು 'ಒಂದು–ಜನಾಂಗ' ಎಂದು ಕರೆಯುತ್ತೇವೆ. ಆದರೆ 'ಜನಾಂಗ' ಒಂದು ಜೀವಂತ ಅಂಶವಾಗಿದೆ. ಯಾವ ರೀತಿ ವ್ಯಕ್ತಿ ಹುಟ್ಟುತ್ತಾನೆ ಅವನನ್ನು ತಯಾರಿಸಲು ಸಾಧ್ಯವಿಲ್ಲವೋ ಅದೇ ರೀತಿ 'ಜನಾಂಗ' ಸಹ ಒಂದು ಸ್ವತಂತ್ರ ಸ್ವಯಂಭು ಶಕ್ತಿಯಾಗಿದೆ.

ವ್ಯಕ್ತಿಗಳ ಸಮೂಹವನ್ನು ಕೃತಕವಾಗಿ ಮಾಡಲಾಗುವುದು ಎಂಬುದು ನಿಜ. ಉದಾಹರಣೆಗೆ ಕ್ಲಬ್ ಹಾಗೂ ಸಂಸ್ಥೆಗಳು–ಸಮೂಹದಲ್ಲಿ ಜನ ಒಗ್ಗೂಡುತ್ತಾರೆ, ನಾಮಕರಣಮಾಡುತ್ತಾರೆ. ಸಂಸ್ಥೆಗಳುಂಟಾಗುತ್ತದೆ, ಸಂವಿಧಾನ ತಯಾರಾಗುತ್ತದೆ. ಯಾವ ರೀತಿ ಇದು ನಿರ್ಮಿಸಲ್ಪಡುತ್ತದೆಯೋ ಅದೇ ರೀತಿ ಆವಶ್ಯಕವೆನಿಸಿದಲ್ಲಿ



ಇದನ್ನು ನಾಶಗೊಳಿಸಬಹುದು. ಇದನ್ನು ನಿರ್ಮಿಸುವವರು ಹಾಗು ನಾಶಗೊಳಿಸುವವರು ಸಹ ಇರುತ್ತಾರೆ. ಅದೇ ರೀತಿ ದೊಡ್ಡ–ದೊಡ್ಡ ಧರ್ಮಗಳು ಮೂಡಿಬರುತ್ತವೆ. ಎಷ್ಟೋ ರೀತಿಯ ಸಂಪ್ರದಾಯಗಳುಂಟಾಗುತ್ತವೆ. ರಾಜಕೀಯ ಪಕ್ಷಗಳು ಕಟ್ಟಲ್ಪಡುತ್ತವೆ ಹಾಗೂ ನಾಶವಾಗುತ್ತವೆ. ಉದ್ಯೋಗದಲ್ಲಿ ಸಮುದಾಯಗಳ ಬೇರೆ ಬೇರೆ ಯೂನಿಯನ್‌ಗಳುಂಟಾಗುತ್ತದೆ. ಸಫಲತೆಗಾಗಿ ಇದರಲ್ಲಿ ಜನರು ಒಟ್ಟಾಗಿ ಕೆಲಸ ಮಾಡುತ್ತಾರೆ. ಪರಸ್ಪರ ಸಹಕರಿಸುತ್ತಾರೆ. ಇಸ್ಪೀಟಿನ ಆಟದಲ್ಲಿ ಎರಡು–ನಾಲ್ಕು ಆಗಲಿ ಅಥವಾ ಸಾವಿರ–ಲಕ್ಷಗಳಾಗಲಿ ಪರಸ್ಪರ ಒಂದಾಗುತ್ತಾರೆ. ಆದರೆ ಈ ಎಲ್ಲಾ ಸಮೂಹಗಳನ್ನು ನಿರ್ಮಿಸಲಾಗುತ್ತದೆ. ತನ್ನಿಂದ ತಾನೇ ಪ್ರಕಟವಾಗುವುದಿಲ್ಲ. ಯಾವುದೋ ನಿರ್ದಿಷ್ಟ ಆವಶ್ಯಕತೆಗಾಗಿ ನಿಗದಿತ ಹಾಗೂ ನಿರ್ದೇಶಿತವಾದ ಉದ್ದೇಶಗಳ ಸಲುವಾಗಿ ಈ ಸಮೂಹಗಳ ನಿರ್ಮಾಣವಾಗುತ್ತವೆ ಹಾಗೂ ಆವಶ್ಯಕತೆ ಪೂರೈಸಿದ ನಂತರ ಅಥವಾ ಮಧ್ಯದಲ್ಲಿಯೇ ಇದನ್ನು ವಿಸರ್ಜಿಸಲಾಗುತ್ತದೆ.

ಆದರೆ ಯಾವ 'ಜನ'ಶಕ್ತಿಯನ್ನು ಕುರಿತು ನಾವು ಮಾತನಾಡುತ್ತಿದ್ದೇವೆಯೋ ಅದನ್ನು ಈ ರೀತಿ ಕೃತಕವಾಗಿ ನಿರ್ಮಿಸಲಾಗದು. ಐದು–ಐವತ್ತು ಅಥವಾ ಐವತ್ತು–ನೂರು ಕೋಟಿ ಜನ ಒಂದಾಗಿ, ಅವರು ತಮ್ಮ 'ಆರ್ಟಿಕಲ್ ಆಫ್ ಅಸೋಸಿಯೇಶನ್' ಘೋಷಿಸಿಕೊಳ್ಳುವರು, ಎಲ್ಲರನ್ನು ಸಭೆಗೆ ಆಹ್ವಾನಿಸಿದರು, ನಾಮಕರಣ ಮಾಡಿ, ದಾಖಲಿಸಿಕೊಳ್ಳಲಾಯಿತು ಹಾಗೂ ಅವರೆಲ್ಲಾ 'ಜನ' ರಾಷ್ಟ್ರವೆನಿಸಿಕೊಳ್ಳುವರು ಎಂದು ಇದರ ಅರ್ಥವಲ್ಲ. ಜನಾಂಗದ ರಿಜಿಸ್ಟರ್ ಆಗುವುದಿಲ್ಲ. ಜನಾಂಗಕ್ಕೆ ತಯಾರಕ, ಜನಕ ಅಥವಾ ಸೃಜಿಸುವವರು ಇರುವುದಿಲ್ಲ. 'ಜನಾಂಗ' ಕೃತಕವಾದುದಲ್ಲ.

ಇದು ಜೀವಂತ ವಸ್ತುವಾಗಿದೆ ಮತ್ತು ಸ್ವಯಂ ಹುಟ್ಟುತ್ತದೆ. ಇದರೊಳಗೆ ಒಂದು ಜೀವನವಿದೆ, ಒಂದು ಪ್ರಾಣಿಶಕ್ತಿಯಿದೆ. ಇದೇ ಕೃತಕ ಸಮೂಹ ಹಾಗೂ ಜೀವಂತ ಶಕ್ತಿಯಲ್ಲಿರುವ ಒಂದು ದೊಡ್ಡ ವ್ಯತ್ಯಾಸ. ಮೇಲ್ನೋಟಕ್ಕೆ ಈ ವ್ಯತ್ಯಾಸವನ್ನು ತಿಳಿಯುವುದು ಬಹಳ ಕಷ್ಟ. ಮೋಟರ್ ಚಲಿಸುತ್ತದೆ ಹಾಗೂ ಕುದುರೆಯು ಸಹ ಚಲಿಸುತ್ತದೆ ಆದರೆ ಎರಡರಲ್ಲಿಯೂ ಅಂತರವಿದೆ. ಅದೇನೆಂದರೆ ಮೋಟರ್‌ಗಾಡಿಯನ್ನು ತಯಾರಿಸಲಾಗುತ್ತದೆ. ಹಾಗೂ ಕುದುರೆ ಯಾವುದೇ ಕಾರ್ಖಾನೆಯಲ್ಲಿ ತಯಾರಾಗುವುದಿಲ್ಲ, ಕುದುರೆ ಜನ್ಮತಳೆಯುತ್ತದೆ. ಎರಡೂ ಚಲಿಸುತ್ತದೆ ಎನ್ನುವ ಕಾರಣದಿಂದ ನಾವು ಎರಡನ್ನು ಒಂದೇ ಎಂದು ತಿಳಿದು ವ್ಯವಹರಿಸುವುದು ಸಾಧ್ಯವಿಲ್ಲ. ಮೋಟರು ಕೃತಕವಾಗಿದೆ. ಆದ್ದರಿಂದ ಅದರ ಚಲಿಸುವ ಸಾಮರ್ಥ್ಯವನ್ನು ಹೊರಗಿನಿಂದ ನಿಯಂತ್ರಿಸಿ ಅದರ ವೇಗವನ್ನು ಹೆಚ್ಚು ಕಮ್ಮಿ ಮಾಡಬಹುದು, ಆದರೆ ಕುದುರೆಗೆ ತನ್ನದೇ ಆದ ಸ್ವಂತದ ಶಕ್ತಿ ಇರುವುದು.

ಇದೇ ರೀತಿ ಎಲ್ಲಾ ಜೀವಂತ ಹಾಗೂ ಜಡವಸ್ತುಗಳಲ್ಲಿ ವ್ಯತ್ಯಾಸವಿದೆ. ಮರ ನೆಲದಿಂದ ಉದ್ಭವಿಸುತ್ತದೆ. ಹೊರಗಿನಿಂದ ರೆಂಬೆ, ಕೊಂಬೆ, ಹೂವು, ಎಲೆ ಸೇರಿಸಿ / ಜೋಡಿಸಿ ಅದನ್ನು ಅರಳಿಸಲಾಗುವುದಿಲ್ಲ. ಜೀವಂತವಾಗಿರುವುದರ ವಿಕಾಸವನ್ನು ಯಾವುದೇ ಹೊರಗಿನ ವಸ್ತುವಿನಿಂದ ಮಾಡಲಾಗದು. ಇದೇ ಜೀವಂತಿಕೆಯ ಲಕ್ಷಣವಾಗಿದೆ ಅದು ಸ್ವಯಂ ವಿಕಾಸಗೊಳ್ಳುತ್ತದೆ. ಪುಷ್ಟವಾಗಿ ಬಲಿಷ್ಠವಾಗುತ್ತದೆ. ಈ ಪುಷ್ಟಿಯೇ ಸಂಘಟನೆಯಾಗುತ್ತದೆ. ಸಂಘಟನೆಯ ಆಧಾರ ಪ್ರೇಮ. ಈ ಪರಸ್ಪರ ಪ್ರೇಮಭಾವವೇ 'ಜನಾಂಗ'ವೆಂಬ ಸಮೂಹದಲ್ಲಿ–ರಾಷ್ಟ್ರದಲ್ಲಿ ಸ್ವಾಭಾವಿಕವಾಗಿ ಉತ್ಪನ್ನವಾಗುತ್ತದೆ.

ನಾವು ರಾಷ್ಟ್ರ–ನಿರ್ಮಾಣ ಶಬ್ದವನ್ನು ಬಳಸಿದರೆ, ಅದರ ಅರ್ಥ ಕೃತಕವಾಗಿ ರಾಷ್ಟ್ರವನ್ನು ನಿರ್ಮಿಸಬಹುದು ಎಂದಲ್ಲ. ಹೇಗೆ ಮನೆಯನ್ನು ನಿರ್ಮಿಸಬಹುದೋ ಹಾಗೆ ರಾಷ್ಟ್ರವನ್ನು ನಿರ್ಮಿಸಲಾಗುವುದಿಲ್ಲ. ರಾಷ್ಟ್ರನಿರ್ಮಾಣದ ಹಿನ್ನೆಲೆಯಲ್ಲಿ ಅದನ್ನು ಪ್ರಬಲಗೊಳಿಸುವ ಭಾವನೆ ಇದೆ. ರಾಷ್ಟ್ರನಿರ್ಮಾಣ ಒಂದು ಬಹು ದೊಡ್ಡ ಕ್ರಿಯೆಯಾಗಿದೆ ಹಾಗೂ ಇದು ಸ್ವಯಂ ಸಂಪನ್ನವಾಗುತ್ತದೆ. ಯಾವ ರಾಷ್ಟ್ರದ ಸೃಷ್ಟಿ, ಅಭ್ಯುದಯ, ಪುನರುತ್ಥಾನ ಅಥವಾ ಪತನವಾಗಬೇಕು ಎಂಬುದನ್ನು ಸೃಷ್ಟಿಯ ರಚನೆಯೇ ನಿರ್ದಿಷ್ಟಗೊಳಿಸುತ್ತದೆ. ಏಕೆಂದರೆ ಸೃಷ್ಟಿಯಲ್ಲಿ ರಾಷ್ಟ್ರದ ಜೀವನೋದ್ದೇಶವು ಅಡಗಿರುತ್ತದೆ. ಸೃಷ್ಟಿಯಿಂದ ನಿರ್ಧರಿಸಲಾದ ಜೀವನೋದ್ದೇಶವನ್ನು ರಾಷ್ಟ್ರವು ಎಲ್ಲಿಯತನಕ ನಿರ್ವಹಿಸುತ್ತಿರುವುದೋ ಅದರ ಅಸ್ತಿತ್ವ ಸಹ ಇರುತ್ತದೆ. ನಾವು ನಮ್ಮ ರಾಷ್ಟ್ರವನ್ನೇ ತೆಗೆದುಕೊಳ್ಳಬಹುದು. ಯಾವಾಗ ಈ ರಾಷ್ಟ್ರದ ನಿರ್ಮಾಣವಾಯಿತು ಎಂದು ನಾವು ಹೇಳಬಹುದೆ ? ಇತಿಹಾಸದ ಪುಟಗಳನ್ನು ತಿರುವಿಹಾಕುತ್ತೇವೆ. ಇತಿಹಾಸದ ಪುಟಗಳು ಕೊನೆಗೊಳ್ಳುವ ಸಮಯವೂ ಬರಬಹುದು, ಆಗಲೂ ನಾವು ಆ ಕಾಲದಲ್ಲಿಯೂ ರಾಷ್ಟ್ರ ಅಸ್ತಿತ್ವದಲ್ಲಿತ್ತು ಎಂದು ಹೇಳಬೇಕಾಗುತ್ತದೆ. ನಾವು ಯಾವ ದಿನ, ಮುಹೂರ್ತ ಅಥವಾ ಗಳಿಗೆಯಲ್ಲಿ ರಾಷ್ಟ್ರನಿರ್ಮಿಸಿದೆವು ಎಂದು ಹೇಳಲಾಗುವುದಿಲ್ಲ. ವಿಶ್ವದ ಅನೇಕ ರಾಷ್ಟ್ರಗಳ ಕ್ರಮವೂ ಇದೇ ಆಗಿದೆ. ಸುದೀರ್ಘ ಹಾಗೂ ನಿರಂತರ ಕ್ರಿಯೆಯಲ್ಲಿ ಪೀಳಿಗೆಯಿಂದ ಪೀಳಿಗೆಗಳೂ ಒಂದು ವಿಶಿಷ್ಟ ಸ್ವಭಾವವನ್ನು ಹೊಂದಿದ್ದು ಅದು 'ಜನಾಂಗ'ವಾಗಿ ಪ್ರಕಟಗೊಳ್ಳುತ್ತದೆ. ಈ ಜನಾಂಗದ ಮೂಲಪ್ರಕೃತಿಯೇ ಅದರ ಜೀವನಾಧಾರ. ಈ 'ಜನಾಂಗ'ವು ತನ್ನ ಮೂಲ ಪ್ರಕೃತಿಯ ಪೋಷಣೆಗಾಗಿ ಯಾವುದಾದರೂ ಭೂಖಂಡದೊಡನೆ ಸಂಬಂಧ ಬೆಳೆಸುತ್ತದೆ. ಆ ಭೂಮಿಯೊಡನೆ ಅದರ ಸಂಬಂಧ ತಾಯಿ ಹಾಗೂ ಮಗನಿಗೆ ಸಮಾನವಾಗಿರುತ್ತದೆ. ತನ್ನ ಜೀವನಾಧಾರ ಮೂಲ ಪ್ರಕೃತಿಯ ಸಮಸ್ತ ಪೋಷಕ ತತ್ವಗಳು ಅದಕ್ಕೆ ಈ ಭೂಮಿಯಿಂದ ದೊರೆಯುತ್ತದೆ. ಈ ಮಾತೃಭೂಮಿಯೇ ಅದರ ಎಲ್ಲಾ



ತರಹದ ಪೋಷಣೆ ಹಾಗೂ ಸಂವರ್ಧನೆಯನ್ನುಂಟುಮಾಡುತ್ತದೆ. ಅಂದರೆ ಭೂಖಂಡ ಕೇವಲ ಭೂಮಿಯ ತುಂಡಾಗದೆ ಜೀವಂತ ಮಾತೃಶಕ್ತಿಯ ರೂಪದಲ್ಲಿ ಸದಾ ಇರುತ್ತದೆ. ಇಲ್ಲಿ ಈ ಪುತ್ರರೂಪ ಸಮಾಜ(ಜನಾಂಗ)ದ ತನ್ನದೇ ಆದ ಸ್ವತಂತ್ರ ಜೀವಂತ ಶಕ್ತಿ ಇದ್ದರೂ ಸಹ ಅದು ಮಾತೃಭೂಮಿಯಿಲ್ಲದೇ ಪ್ರಕಟವಾಗಲಾರದು. ಜನನಿಯಿಲ್ಲದೆ ಅದರ ಲಾಲನೆ–ಪಾಲನೆ, ಪೋಷಣೆ ಹಾಗೂ ವೃದ್ಧಿ ಆಗುವುದಿಲ್ಲ, 'ಜನಾಂಗ'ವೂ ಸಹ ಇದಕ್ಕಾಗಿ ಭೂಮಿಯೊಡನೆ ಬದ್ಧವಾಗಿರುತ್ತದೆ. ಒಂದನ್ನು ಬಿಟ್ಟು ಮತ್ತೊಂದನ್ನು ಊಹಿಸಿಕೊಳ್ಳುವುದು ಸಹ ಕಷ್ಟವಾಗುತ್ತದೆ. ಪುತ್ರನಿಲ್ಲದೇ ತಾಯಿಯ ಅಸ್ತಿತ್ವ ನಿರರ್ಥಕವಾಗಿರುತ್ತದೆ. ಯಾರು ಅದರ ಗರಿಮೆಯನ್ನು ಕೊಂಡಾಡುವರು, ಕಣ–ಕಣವನ್ನು ಪ್ರೀತಿಸುವರು, ಇತಿಹಾಸವನ್ನು ಓದುವರು ಅದನ್ನು ಗೌರವಾನ್ವಿತಗೊಳಿಸುವರು? ಈ ಪುತ್ರರೂಪ ಸಮಾಜವಿಲ್ಲದಿದ್ದಲ್ಲಿ ಯಾರು ಈ ನೆಲದ ಒಂದೊಂದು ಭಾಗವನ್ನು ಸಂರಕ್ಷಿಸಲು ಎದುರಾಗುವ ಸವಾಲುಗಳನ್ನು ಸ್ವೀಕರಿಸುವರು? ಈ ಜೀವನ ಸಂಚಾರಕ್ಕೆ ಕಾರಣ ಈ ಭೂಮಿಯ ಸ್ನೇಹದ ಗರಿಮೆಯೇ. 'ಜನಾಂಗ' ಹಾಗೂ 'ಭೂಮಿ'ಯ ಈ ಪರಸ್ಪರ ಸಂಬಂಧ ಪುತ್ರ ಹಾಗೂ ತಾಯಿಯ ಸಂಬಂಧವಾಗಿರುತ್ತದೆ. ಈ ಸಂಬಂಧ ಮಹತ್ವಪೂರ್ಣವಾಗಿದೆ ಅದಲ್ಲದೇ ಕೇವಲ ಆ ಭೂಮಿಯ ಮೇಲೆ ವಾಸಿಸುವ ಹಾಗೂ ಅನ್ಯರೀತಿಯ ಒಡನಾಟವೂ ಇರಬಹುದು. ಉದಾಹರಣೆಗೆ ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ಮುಂತಾದವುಗಳ ಸ್ಥಿತಿಗಳು. ಆ ಭೂಖಂಡದ ಮೂಲನಿವಾಸಿಗಳನ್ನು ನಾಶಗೊಳಿಸಿ ಅಲ್ಲಿ ಯೂರೋಪಿನ ಜಾತಿಗಳು ನೆಲೆಯೂರಿದೆ. ಇದನ್ನು 'ಕಾಲೋನಿ' ಎನ್ನಲಾಗುತ್ತದೆ. ಈ ಜಾತಿಗಳ ಸಂಬಂಧ ಆ ಭೂಮಿಯೊಡನೆ ಕೇವಲ ಉಪಭೋಗದ್ದಾಗಿದೆ. ಪೃಥ್ವಿಯ ಮೇಲೆ ಎಷ್ಟೋ ಭಾಗ ಅಥವಾ ಸ್ಥಳಗಳಲ್ಲಿ ಇಂಥ ಜನ ನೆಲೆಯೂರುತ್ತಾರೆ ಹಾಗೂ ಇವರ ಮನಸ್ಸಿನಲ್ಲಿ ಯಾವುದೋ ದೂರದ ಅನ್ಯ ಭೂಮಿಯ ಮೇಲೆ ಪ್ರೀತಿಯಿರುತ್ತದೆ. ಅವರು ಆ ಭೂಮಿಯ ಸಂತಾನವಾಗಿ ಅಲ್ಲಿ ನೆಲೆಯೂರುವುದಿಲ್ಲ. ಅವರು ಯಾವುದೋ ಅನ್ಯದೇಶದ ಕನಸು ಕಾಣುತ್ತಿರುತ್ತಾರೆ. ಇಂಥ ಜನರು ಎಲ್ಲಿಯ ತನಕ ತಮ್ಮ ಸಂಬಂಧವನ್ನು ಅನ್ಯ ಭೂಮಿಯೊಡನೆ ಕಡಿದುಕೊಳ್ಳುವುದಿಲ್ಲವೋ ಅಲ್ಲಿಯತನಕ ಆ ಭೂಮಿಯ 'ಜನಾಂಗ' ಎನಿಸಿಕೊಳ್ಳುವುದಿಲ್ಲ. ದೇಶವೆಂಬ ಶಬ್ದವನ್ನು ಎಲ್ಲಿ ಯಾವುದೇ ಜನಾಂಗದ ಸಂಬಂಧ ಅದರೊಡನೆ ಮಾತೃರೂಪದಲ್ಲಿರುವುದೋ ಅಲ್ಲಿ ಬಳಸಲಾಗುವುದು. ಆದುದರಿಂದಲೇ ನಾವು ರಾಷ್ಟ್ರ ಎಂದು ಹೇಳಿದಾಗ ಕೇವಲ ಭಾರತವೆಂದರೆ ಕೆಲಸವಾಗುವುದಿಲ್ಲ. ಭಾರತ ಎನ್ನುವುದರಿಂದ ನೆಲದ ಒಂದು ತುಂಡು ಎಂಬ ವಿಚಾರ ಮೂಡಿಬರಬಹುದು. ಆದರೆ ಭಾರತಮಾತೆ ಎಂದೊಡನೆ ಒಂದು ವಿಶಿಷ್ಟ ಸಂಬಂಧ ಸ್ಥಾಪಿತವಾಗುತ್ತದೆ

ಹಾಗೂ ಅದು ಒಂದೇ ಜನಾಂಗದ ಭಾವನೆಯನ್ನುಂಟುಮಾಡುತ್ತದೆ. ಆದುದರಿಂದಲೇ ಯಾರು ಭಾರತಮಾತೆಗೆ ಜಯಕಾರ ಮಾಡಲು ಹಿಂಜರಿಯುತ್ತಾರೊ ಅವರು ಭಾರತದಲ್ಲಿದ್ದರೂ ಸಹ ಭಾರತೀಯ ಜನಾಂಗವಾಗುವುದಿಲ್ಲ. ಧೂರ್ತ ಆಂಗ್ಲರು ಈ ಸತ್ಯವನ್ನು ಚೆನ್ನಾಗಿ ಅರಿತಿದ್ದರು. ಈ 'ಒಂದು–ಜನಾಂಗ'ವನ್ನು ನಷ್ಟಗೊಳಿಸಲು ಭಾರತವನ್ನು 'ಇಂಡಿಯಾ' ಎನ್ನಲಾರಂಭಿಸಿದರು. ಅವರ ಈ ಸಂಚಿನ ಯಶಸ್ಸನ್ನು ನಮ್ಮ ಈ ಮಾತು ಸ್ಪಷ್ಟಪಡಿಸುತ್ತದೆ ಅದೇನೆಂದರೆ ನಾವು ನಮ್ಮ ಸಂವಿಧಾನದಲ್ಲಿ 'ಇಂಡಿಯಾ ದಟ್ ಈಸ್ ಭಾರತ' ಆಗಿಬಿಟ್ಟಿದ್ದೇವೆ. ಆಂಗ್ಲರಿಗೆ 'ಭಾರತ' ಶಬ್ದವನ್ನು ಉಚ್ಚರಿಸಲಾಗುತ್ತಿರಲಿಲ್ಲವೆಂದರ್ಥವಲ್ಲ, ನಿಜಕ್ಕೆ ಅವರು ಭಾರತವನ್ನು ಮರೆಮಾಡುವ ಸಂಚಿನಲ್ಲಿದ್ದರು. ಭಾರತದಲ್ಲಿ ಪುತ್ರರೂಪದಲ್ಲಿರುವ ಜನರ ಮಾತೃರೂಪ ಮಹತ್ವವನ್ನು ನಾಶಗೊಳಿಸುವ ಸಂಚಿನಲ್ಲಿದ್ದರು. ಇಂಡಿಯಾ ಎನ್ನುವುದರಿಂದ ಯಾರು ಇಂಡಿಯಾ–ಮಾತೆ ಎಂದು ಹೇಳಲಾರರು ಹಾಗೂ ಆಗ ಭಾರತಮಾತೆಗೆ ಜಯವಾಗಲಿ ಘೋಷಣೆಯಲ್ಲಿ ಲೋಪ ಸಹಜವಾಗಿ ಉಂಟಾಗುತ್ತದೆ ಎಂದು ಆಂಗ್ಲರು ಯೋಚಿಸಿದರು.

ಆದರೆ ಸೌಭಾಗ್ಯದಿಂದ ಇದರ ಲೋಪವಾಗಲಿಲ್ಲ. ಭಾರತ ಮಾತೆಗೆ ಜಯವಾಗಲಿ ಎಂಬ ಘೋಷಣೆ ಪ್ರತಿಧ್ವನಿಸುತ್ತಲೇ ಇತ್ತು. ನಮ್ಮ ರಾಷ್ಟ್ರೀಯತೆಯ ಆಧಾರ 'ಭಾರತಮಾತೆ'ಯಾಗಿದೆ, ಕೇವಲ ಭಾರತವಲ್ಲ. ಮಾತೆ ಶಬ್ದವನ್ನು ತೆಗೆದುಹಾಕಿದಲ್ಲಿ ಭಾರತ ಕೇವಲ ನೆಲದ ಒಂದು ಭಾಗವಾಗಿರುತ್ತದೆ. ಈ ಭೂಮಿಯೊಡನೆ ಮಾತೆ ಶಬ್ದ ಸೇರಿದಾಗ ಮಾತ್ರ ನಮ್ಮಲ್ಲಿ ಮಮಕಾರ ಬೆಳೆಯುತ್ತದೆ. ಎಲ್ಲಿಯತನಕ ಯಾವುದೇ ಭೂಮಿಯೊಡನೆ ಯಾವುದೇ ಜಾತಿಗೆ ತಾಯಿಯ ಮಮಕಾರ ಅಂದರೆ ಪುತ್ರನು ತನ್ನ ತಾಯಿಯನ್ನು ಪ್ರೀತಿಸುವ ಭಾವನೆಯಿರುವುದಿಲ್ಲವೋ ಅಲ್ಲಿಯ ತನಕ ಯಾವುದೇ ಭೂಮಿ ದೇಶವಾಗಲಾರದು. ಇದೇ ದೇಶಭಕ್ತಿ. ಹಾಗಿದ್ದಲ್ಲಿ ದೇಶಭಕ್ತಿ ಎಂದರೆ ನೆಲದ ತುಂಡನ್ನು ಪ್ರೀತಿಸುವುದು ಮಾತ್ರವಲ್ಲ. ಹಾಗೆಯೇ ಹಲವಾರು ಪಶು–ಪಕ್ಷಿಗಳು ಸಹ ತಮ್ಮ ಮನೆಯನ್ನು ಬಹಳ ಪ್ರೀತಿಸುತ್ತವೆ. ಹಾವು ತನ್ನ ಬಿಲವನ್ನು ಬಿಡಲಾರದು, ಹುಲಿ ಕಾಡಿನಲ್ಲಿ ವಾಸಿಸುತ್ತದೆ, ಪಕ್ಷಿಗಳು ಪ್ರತಿದಿನ ತಮ್ಮ ಗೂಡಿಗೆ ಹಿಂದಿರುಗುತ್ತವೆ. ಆದರೆ ಇದನ್ನು ದೇಶಭಕ್ತಿ ಎನ್ನಲಾಗುವುದಿಲ್ಲ. ಮಾನವನು ಎಲ್ಲಿ ವಾಸಿಸುತ್ತಾನೆಯೋ ಆ ಸ್ಥಳದೊಡನೆ ಸಂಬಂಧವೇರ್ಪಡುವುದು ಸಹಜ. ಆದರೆ ವಾಸಿಸುವುದರಿಂದ ದೇಶಭಕ್ತಿ ಮೂಡುವುದಿಲ್ಲ. ಯಾರು ದೇಶದೊಡನೆ ಒಂದಾಗಿ ಬಾಳ್ವೆನಡೆಸುತ್ತಾರೆಯೋ ಅವರ ಪ್ರೇಮವನ್ನು ದೇಶಭಕ್ತಿ ಎನ್ನಲಾಗುವುದು. ಇದಕ್ಕಾಗಿ ಒಂದು ಒಳ್ಳೆಯ ಉದಾಹರಣೆ ಎಂದರೆ ಇಸ್ರೇಲ್. ಇಸ್ರೇಲ್‌ನ ಮೊದಲು 'ಜನಾಂಗ' ಹಾಗೂ ಭೂಖಂಡ ಪೆಲೆಸ್ಟೈನ್ ಆಗಿತ್ತು. ಪೆಲೆಸ್ಟೈನ್‌ನೊಡನೆ ಮಾತೃತ್ವದ ಸಂಬಂಧ



ಅವರಿಗಿತ್ತು. ಆದರೆ ಅವರು ಪೆಲೆಸ್ಟೈಯಿನ್‌ನಲ್ಲಿರಲಿಲ್ಲ. ಪ್ರಪಂಚದೆಲ್ಲೆಡೆ ಶರಣಾರ್ಥಿಗಳ ರೀತಿ ಅಲೆದಾಡುತ್ತಿದ್ದರೆ, ಅವರು ಜರ್ಮನಿ, ಫ್ರಾನ್ಸ್ ಹಾಗೂ ಇಂಗ್ಲೆಂಡಿನಲ್ಲಿದ್ದರು. ಅವರು ದೊಡ್ಡ–ದೊಡ್ಡ ಕೆಲಸಗಳನ್ನು ಮಾಡಿದರು ಆದರೆ ಸದಾ ತಮ್ಮ ಮಾತೃಭೂಮಿಗಾಗಿ ತಪಿಸುತ್ತಿದ್ದರು. ಮಾತೆಗಾಗಿ ಯಾವ ರೀತಿ ಪುತ್ರನು ತಪಿಸುತ್ತಾನೆಯೋ ಹಾಗೆಯೇ ಹಲವಾರು ವರ್ಷಗಳಿದ್ದರು. ಅಷ್ಟು ವರ್ಷಗಳಾದರೂ ಅವರು ತಮ್ಮ ರಾಷ್ಟ್ರತ್ವವನ್ನು ಜೀವಂತವಾಗಿಟ್ಟರು ಹಾಗೂ ಇಂದು ತಮ್ಮ ಮಾತೃಭೂಮಿಗೆ ತೆರಳಿದ್ದಾರೆ. ಒಂದು ಜನಾಂಗದಲ್ಲಿ ಮಾತೃಭೂಮಿಯನ್ನು ಕುರಿತಿರುವ ಈ ಪ್ರಜ್ಞೆಯೇ ಅಕ್ಷಯ ಶಕ್ತಿಯನ್ನು ನೀಡುತ್ತದೆ.

ರಾಷ್ಟ್ರದ ಸ್ವರೂಪ ಈ 'ಒಂದು–ಜನಾಂಗದ' ಸಾಮೂಹಿಕ ಮೂಲ ಪ್ರಕೃತಿಯಿಂದ ನಿರ್ಧರಿಸಲ್ಪಡುತ್ತದೆ. ಇದೇ 'ಪ್ರಜ್ಞೆ'. ಕಾಲ ಹಾಗೂ ಪರಿಸ್ಥಿತಿಗನುಗುಣವಾಗಿ ಬಾಹ್ಯ ಸ್ವರೂಪದಲ್ಲಿ ಎಷ್ಟು ಪರಿವರ್ತನೆಯಾದರೂ ರಾಷ್ಟ್ರದ ಮೂಲ ಪ್ರಕೃತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಯಾವ ಸಿದ್ಧಾಂತಗಳನ್ನು ಚರಿತಾರ್ಥಗೊಳಿಸಲು ರಾಷ್ಟ್ರದ ಆವಿರ್ಭಾವವಾಯಿತೋ ಅವುಗಳನ್ನು ಪರಿಪಾಲಿಸುವವರೆಗೂ 'ಚೈತನ್ಯ ಪ್ರಜ್ಞೆ'ಯ ವಿದ್ಯಮಾನವಿರುತ್ತದೆ. ರಾಷ್ಟ್ರದಲ್ಲಿ ಚೈತನ್ಯವಿರುತ್ತದೆ. ರಾಷ್ಟ್ರ ಅತಿ ದೊಡ್ಡ ತ್ಯಾಗ ಮಾಡಲು ತಯಾರಿರುತ್ತದೆ. ಗಂಭೀರವಾದ ಸಂಕಟದಲ್ಲಿರುವಾಗಲೂ ಮುನ್ನಡೆಯುತ್ತದೆ. ಯಾವ ರೀತಿ ಒಬ್ಬ ವ್ಯಕ್ತಿಯ ಜೀವನದಲ್ಲಿ ಬಾಲ್ಯಕಾಲದಿಂದ ವೃದ್ಧಾಪ್ಯದವರೆಗೂ ಅನೇಕ ಬದಲಾವಣೆಗಳುಂಟಾಗುತ್ತವೆ, ಅನೇಕ ರೀತಿಯ ಸುಖ–ದುಃಖ, ಸಂಪತ್ತು–ವಿಪತ್ತು, ಉನ್ನತಿ–ಅವನತಿಯ ಕ್ಷಣಗಳೆದುರಾಗುವವು, ಆದರೂ ವ್ಯಕ್ತಿ ತನ್ನ ಅಸ್ಮಿತೆಯನ್ನು ಜಾಗೃತವಾಗಿರಿಸಿಕೊಂಡು ತನ್ನ ಜೀವನಯಾತ್ರೆಯನ್ನು ಪೂರ್ಣಗೊಳಿಸುತ್ತಾನೆ ಹಾಗೂ ಸದಾ ತನ್ನ ಸ್ವಭಾವದ ಆಧಾರದ ಮೇರೆಗೆ ಒಳ್ಳೆಯ–ಕೆಟ್ಟ, ಗ್ರಾಹ್ಯ–ಅಗ್ರಾಹ್ಯ, ಸ್ವೀಕೃತ–ಅಸ್ವೀಕೃತ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾ ಪ್ರತಿಯೊಂದು ಒಳ್ಳೆಯ ಕೆಟ್ಟ ಪ್ರಸಂಗ ಮತ್ತು ವಸ್ತುವನ್ನು ಸರಿಯಾಗಿ ಬಳಸಿಕೊಳ್ಳುತ್ತಾನೆ. ಇದೇ ರೀತಿ 'ಒಂದು–ಜನಾಂಗ'ವಾದ ಈ ರಾಷ್ಟ್ರ ಮಾತೃಭೂಮಿಗಾಗಿ ನಿಷ್ಠೆಯೊಡನೆ ತನ್ನ ಮೂಲಪ್ರಕೃತಿ ಅಂದರೆ 'ಚಿತಿ'ಯನ್ನು ಜಾಗೃತಗೊಳಿಸಿ ಸಮರ್ಥ, ಸ್ವಾವಲಂಬಿ, ಕಾರ್ಯದಕ್ಷ, ವಿಜಯ ಹಾಗೂ ಸಾರ್ವಕಾಲಿಕ ನವೋನ್ಮೇಷಶಕ್ತಿಯಿಂದ ಕೂಡಿದ್ದು ಜೀವಂತವಾಗಿರುತ್ತದೆ.

ಈ 'ಚಿತಿ' ಜನಸಮೂಹದ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಮಾತೃಭೂಮಿಯನ್ನು ಕುರಿತು ಪರಮಸುಖದ ಭಾವನೆಯಿರುತ್ತದೆ. ಯಾವ ಸರ್ವೋತ್ಕೃಷ್ಟ ಸುಖದ ಮುಂದೆ ಉಳಿದೆಲ್ಲಾ ಮಾತುಗಳು ಗೌಣವಾಗುತ್ತದೆಯೋ, ಆ ಸುಖವು 'ಚಿತಿ'ಯಿಂದ ಸ್ಥಾಪಿಸಲ್ಪಡುತ್ತದೆ. ಇದನ್ನು ವ್ಯಕ್ತಿಯ ಎಲ್ಲಾ ರೀತಿಯ ಕಾರ್ಯಗಳಲ್ಲೂ

ಕಾಣಬಹುದಾಗಿದೆ. ಅವನ ಸಮಸ್ತ ವ್ಯಾಪಾರ, ನಿಃಶೇಷ ಪ್ರಯತ್ನಗಳು ಎಲ್ಲಾ ರೀತಿಯ ಕರ್ಮ ಈ 'ಚಿತಿ'ಯ ಪ್ರಕಾಶದಲ್ಲಿ ಚೈತನ್ಯದಿಂದ ಇರುತ್ತವೆ. ಎಲ್ಲಿಯತನಕ 'ಚಿತಿ' ಜಾಗೃತ ಹಾಗೂ ನಿರಾಮಯವಾಗಿರುವುದೋ ಅಲ್ಲಿಯ ತನಕ ರಾಷ್ಟ್ರದ ಅಭ್ಯುದಯವಾಗುತ್ತದೆ. ಈ ಚೈತನ್ಯದ ಆಧಾರದ ಮೇರೆಗೆ ರಾಷ್ಟ್ರ ಸಂಘಟಿತವಾಗುತ್ತದೆ. 'ಚಿತಿ'ಯಿಂದ ಜಾಗೃತ ಹಾಗೂ ಒಂದಾದ ಸಮಷ್ಟಿಯ ಸ್ವಾಭಾವಿಕ ಕ್ಷಾತ್ರ ಶಕ್ತಿ ಅಂದರೆ ಅನಿಷ್ಟಗಳಿಂದ ರಕ್ಷಿಸಿಕೊಳ್ಳುವ ಶಕ್ತಿ 'ವಿರಾಟ್' ಎನಿಸಿಕೊಳ್ಳುತ್ತದೆ. ವ್ಯಕ್ತಿ ಒಬ್ಬ ಸಾಮಾಜಿಕ ಪ್ರಾಣಿ. ಸಾಮೂಹಿಕ ಜೀವನ ನಡೆಸಲು ಅವನಿಗೆ ಪ್ರಕೃತಿಯಿಂದ ಸಹಾನುಭೂತಿಯ ಭಾವ ದೊರೆಯುತ್ತದೆ. ಈ ಸಹಾನುಭೂತಿಯಿಂದ ಕೂಡಿದ ತೇಜಸ್ಸು ವ್ಯಕ್ತಿ ಸಮಾಜದ ಹಿತಕ್ಕಾಗಿ ಆತ್ಮತ್ಯಾಗಮಾಡಲು ಪ್ರೇರಿಸುತ್ತದೆ. ಪರಸ್ಪರ ಸಹಾನುಭೂತಿಯ ಈ ಭಾವನೆ ಸಮಷ್ಟಿಯ ರಕ್ಷಣೆಗಾಗಿ ವೈಯಕ್ತಿಕ ಶಕ್ತಿಯನ್ನು ಹೆಚ್ಚು–ಕಡಿಮೆ ಒಂದಾಗಿಸಿ ಕೇಂದ್ರಸ್ಥವನ್ನಾಗಿಸುತ್ತದೆ. ವಿರಾಟ್, ಚಿತಿಯ ಪ್ರಕಾಶದಿಂದ ಇದು ಜಾಗೃತಗೊಳ್ಳುತ್ತದೆ ಹಾಗೂ ರಾಷ್ಟ್ರ ಜಾಗೃತಗೊಂಡಿದೆ ಎಂದು ಹೇಳುತ್ತೇವೆ. ವಿರಾಟ್ ರಾಷ್ಟ್ರದ ಪ್ರಾಣವಾದರೆ ಚಿತಿ (ರಾಷ್ಟ್ರದ) ಆತ್ಮವಾಗುತ್ತದೆ.

'ಚಿತಿ'ಯ ಪ್ರಕಾಶದಿಂದ ಜಾಗೃತಗೊಂಡ 'ಒಂದು–ಜನಾಂಗ'ದ ಸಂಘಟಿತ ಕಾರ್ಯಶಕ್ತಿ 'ವಿರಾಟ್'ದಿಂದ ಜೀವನವೇ ಮಾತೃಭೂಮಿಯ ಆರಾಧನೆಯಲ್ಲಿ ಇಹಲೌಕಿಕ ಹಾಗೂ ಪಾರಲೌಕಿಕ ಎಲ್ಲಾ ರೀತಿಯ ಐಶ್ವರ್ಯವನ್ನು ಪಡೆಯುತ್ತಾ, ವಿಶ್ವದಲ್ಲಿ ಅಜೇಯವಾಗಿ ನಿಲ್ಲುತ್ತದೆ. ಇದೇ ರಾಷ್ಟ್ರದ ಸಂಬಂಧದಲ್ಲಿ ಚಿರಂತನ ಸತ್ಯ ಸಿದ್ಧಾಂತವಾಗಿದೆ ಹಾಗೂ ಇದೇ ಸತ್ಯ ಭಾರತದಲ್ಲಿ ಹಿಂದೂ ರಾಷ್ಟ್ರವಾಗಿ ಪ್ರಕಟಗೊಂಡಿದೆ.



# ೬. ಸೆಕ್ಯುಲರ್ : ಅರ್ಥ – ಅನರ್ಥ

ಸ್ವಾತಂತ್ರ್ಯಾನಂತರ ಭರತವರ್ಷವನ್ನು ಒಂದು 'ಸೆಕ್ಯುಲರ್ ಸ್ಟೇಟ್' ಎಂದು ಘೋಷಿಸಲಾಯಿತು. ಹಾಗೂ ಅಂದಿನಿಂದ ಈ ಶಬ್ದವು ಜನರ ಬಾಯಿಮಾತಿನಲ್ಲಿ ಎಷ್ಟು ಸಾಧಾರಣವಾಯಿತೆಂದರೆ ದೊಡ್ಡ–ದೊಡ್ಡ ನಾಯಕರು ಹಾಗೂ ಹಳ್ಳಿ–ಹಳ್ಳಿ, ಹಾದಿ–ಬೀದಿಗಳಲ್ಲಿ ಮಾತನಾಡುವ ಧ್ವನಿಯನ್ನು ಏರಿಸಿ ಭಾಷಣ ನೀಡುವ ಹಸಿವನ್ನು ಇಂಗಿಸಿಕೊಳ್ಳುವ ಮಾತುಗಾರರು, ಎಲ್ಲಾ ದಿನದಲ್ಲಿಯೂ ನಾಲ್ಕು ಬಾರಿ 'ಸೆಕ್ಯೂಲರ್ ಸ್ಟೇಟ್'ನ ತಮ್ಮ ಮಾತನ್ನು ನೆರವೇರಿಸಿಕೊಳ್ಳುವ ಹಾಗೂ ಇತರರನ್ನು ಇದಕ್ಕೆ ವಿರುದ್ಧವೆಂದು ಹೇಳಿ ಅವರನ್ನು ತಪ್ಪಿತಸ್ಥರನ್ನಾಗಿಸುವ ಹೊಂಚಿನಲ್ಲಿರುತ್ತಾರೆ. ಈ ಶಬ್ದವನ್ನು ಕೇಳಿ ಕೇಳಿ ಸದಾ ಇದು ಕಿವಿಗಳಲ್ಲಿ ಇದ್ದರೂ ಸಹ ಭಾರತ ಸರ್ಕಾರ, ಮಾತನಾಡುವ ನಾಯಕರು ಹಾಗೂ ಕೇಳಿಸಿಕೊಲ್ಲುವ ಜನತೆ 'ಸೆಕ್ಯೂಲರ್' ಶಬ್ದದ ಅರ್ಥವನ್ನು ಹೇಗೆ ಗ್ರಹಿಸಿದ್ದಾರೆ ಎಂಬುದು ಇಲ್ಲಿಯ ತನಕ ಸ್ಪಷ್ಟವಾಗಿಲ್ಲ. ವಿಧಾನಪರಿಷದ್‌ನಲ್ಲಿ 'ಸೆಕ್ಯುಲರ್ ಸ್ಟೇಟ್'ನ ಹೆಸರು ಹೇಳಿದಾಗ ಒಬ್ಬ ಸದಸ್ಯ ಪಂಡಿತ್ ಜವಾಹರ್‌ಲಾಲ್ ನೆಹರೂರವರನ್ನು 'ಸೆಕ್ಯೂಲರ್ ಸ್ಟೇಟ್'ನ ಅರ್ಥವೇನಂದು ಕೇಳಿದಾಗ, ಅವರು ಅರ್ಥ ಹೇಳುವುದನ್ನು ಬಿಟ್ಟು ಗೌರವಾನ್ವಿತ ಸದಸ್ಯರನ್ನು ಗದರಿಸಿ ಶಬ್ದಕೋಶ ನೋಡಲು ಹೇಳಿದರು. ಇದರ ಪರಿಣಾಮ ಆ ಸಮಸ್ಯೆ ಬಗೆಹರಿಯಲಿಲ್ಲ ಹಾಗೂ ಇಂದಿಗೂ ಜನ ಸೆಕ್ಯೂಲರ್ ಶಬ್ದಕ್ಕೆ ಬೇರೆ–ಬೇರೆ ಅರ್ಥ ನೀಡುತ್ತಿದ್ದಾರೆ. ಸೆಕ್ಯುಲರ್‌ಗಾಗಿ ಭಾರತೀಯ ಭಾಷೆಗಳಲ್ಲಿ ಬಳಸುವ ಪರ್ಯಾಯಗಳಿಂದ ಈ ಅಂತರ ಸ್ಪಷ್ಟವಾಗುತ್ತದೆ. ಲೌಕಿಕ, ಧರ್ಮಹೀನ, ಧರ್ಮವಿಲ್ಲದ, ಧರ್ಮನಿರಪೇಕ್ಷ, ಅಧಾರ್ಮಿಕ, ಅಧರ್ಮಿ ಅಸಾಂಪ್ರದಾಯಿಕ ಮುಂತಾದ ಅನೇಕ ಶಬ್ದಗಳನನು ಸೆಕ್ಯುಲರ್‌ಗೆ ಪರ್ಯಾಯ ರೂಪದಲ್ಲಿ ಬಳಸುತ್ತಾರೆ. ನಿಶ್ಚಿತವಾಗಿ ಮೇಲೆ ಹೇಳಿದ ಎಲ್ಲಾ ಶಬ್ದಗಳು ಸಮಾನಾರ್ಥಕವಲ್ಲ. ಅವುಗಳಲ್ಲಿ ಮತಭೇದವಲ್ಲದೇ ವಿರೋಧದ ಎಲ್ಲೆಯನ್ನು ಸಹ ಸ್ಪರ್ಶಿಸುತ್ತವೆ. ರಾಜ್ಯದ ಸ್ವರೂಪವನ್ನು ಕುರಿತು ಇಷ್ಟು ವೈಮನಸ್ಯ ವಾಸ್ತವಕ್ಕೆ ಹಿತವಲ್ಲ. ನಾವು ಸೆಕ್ಯೂಲರ್ ಶಬ್ದದ ಸರಿಯಾದ ಅರ್ಥ ತಿಳಿಯುವುದು ಒಳ್ಳೆಯದು, ಯಾವ ಅರ್ಥದಲ್ಲಿ ನಾವು ಭಾರತವನ್ನು ಸೆಕ್ಯುಲರ್ ಸ್ಟೇಟ್ ಮಾಡಲಿಚ್ಛಿಸುತ್ತಿದ್ದೇವೆಯೋ ಅದರ ನಿರ್ಣಯವನ್ನು ಮಾಡಲೇಬೇಕು.

ನೆಹರೂ ಅವರ ಆದೇಶದ ಮೇರೆಗೆ ನಾವು ಶಬ್ದಕೋಶವನ್ನು ಅವಲಂಬಿಸಬೇಕಾದ ಪಕ್ಷದಲ್ಲಿ ಈ ಸಮಸ್ಯೆ ಬಗೆಹರಿಯುವುದಿಲ್ಲ. ಏಕೆಂದರೆ ಕೋಶದಲ್ಲಿ ಸೆಕ್ಯೂಲರ್‌ನ ಅರ್ಥ ಹೀಗಿದೆ 'ಲಾಸ್ಟಿಂಗ್ ಫಾರ್ ಏಸ್, ಕಮಿಂಗ್ ಒನ್ಸ್ ಇನ್ ಎ ಸೆಂಚುರಿ, ವರ್ಲ್ಡ್‌ಲಿ, ಟೆಂಪೊರಲ್' ಅಂದರೆ ನೂರು ವರ್ಷಗಳಲ್ಲಿ ಒಂದು ಭಾರಿ ಆಗುವಂತಹ, ಲೌಕಿಕ. ಇದರಲ್ಲಿ 'ಲೌಕಿಕ' ಅರ್ಥ ಸರ್ವಸಾಧಾರಣ ವ್ಯವಹಾರದಲ್ಲಿ ಬಳಕೆಯಾಗುವುದು ಹಾಗೂ 'ಸ್ಪಿರಿಚ್ಯುಯಲ್'ಗೆ ವಿರುದ್ಧವಾದರ್ಥದಲ್ಲಿ ಇದನ್ನು ಬಳಸಲಾಗುತ್ತದೆ. ಸೆಕ್ಯೂಲರ್‌ಸ್ಟೇಟ್‌ನ ಕಲ್ಪನೆಯ ವಿಕಾಸದ ಹಿನ್ನೆಲೆಯಲ್ಲಿ ಇದೇ ಭಾವವಿದೆ. ಏಕೆಂದರೆ ಸೆಕ್ಯೂಲರ್ ಸ್ಟೇಟ್‌ನ ಕಲ್ಪನೆಯ ಉದಯ ಪವಿತ್ರ ರೋಮನ್ ಸಾಮ್ರಾಜ್ಯ 'ಹೋಲಿ ರೋಮನ್ ಎಂಪೈಯರ್'ನ್ನು ವಿರೋಧಿಸಿ ಉಂಟಾಯಿತು. ಯೂರೋಪ್‌ನಲ್ಲಿ ಎಲ್ಲಾ ದೇಶಗಳು ಎಲ್ಲಾ ಕಾಲ ರೋಮ್ ಪೋಪ್‌ನ ಅಧೀನದಲ್ಲಿದ್ದರು ಹಾಗೂ ಪ್ರತಿಯೊಂದು ದೇಶದ ರಾಜ ಪೋಪ್‌ನ ಹೆಸರಿನಲ್ಲಿಯೇ ಆಡಳಿತ ನಡೆಸುತ್ತಿದ್ದನು. ಆದರೆ ನಿಧಾನವಾಗಿ ರೋಮನ್ ಕ್ಯಾಥೋಲಿಕ್ ಮತ ಹಾಗೂ ಪೋಪ್ ಎರಡೂ ಅಥವಾ ಇವುಗಳಲ್ಲಿ ಯಾವುದಾದರೂ ಒಂದರ ಬಗ್ಗೆ ಅವಿಶ್ವಾಸ ಹಾಗೂ ವಿರೋಧದ ಭಾವನೆ ಹೆಚ್ಚಾಗತೊಡಗಿತು. ಪರಿಣಾಮ ಪ್ರೊಟೆಸ್ಟೆಂಟ್ ಮತದ ಜನ್ಮವಾಯಿತು ಹಾಗೂ ಫ್ರಾನ್ಸ್‌ನ ಕ್ರಾಂತಿಗೆ ಕಾರಣವಾಯಿತು ಹಾಗೂ ಅದರ ಪರಿಣಾಮಸ್ವರೂಪವಾಗಿ 'ಸಮಾನತೆ', 'ಸ್ವಾತಂತ್ರ್ಯ' ಹಾಗೂ 'ಬಂಧುತ್ವ' ಜನತೆಯ ಘೋಷಣೆಯಾಯಿತು. ಜೊತೆಗೆ ಹೆಚ್ಚುತ್ತಿರುವ ರಾಷ್ಟ್ರೀಯತೆ ಹಾಗೂ ಕ್ರೈಸ್ತ ಮತದ ಅನೇಕ ಚರ್ಚುಗಳ ಸ್ಥಾಪನೆ ಹಾಗೂ ಕ್ರೈಸ್ತ ಮತದ ಪ್ರಭಾವವು ಸಾಮಾನ್ಯ ಜೀವನದ ಮೇಲೆ ಕಡಿಮೆಯಾಗುತ್ತಿರುವ ಸಲುವಾಗಿ ಪವಿತ್ರ ರೋಮನ್ ಸಾಮ್ರಾಜ್ಯವನ್ನು ವಿಘಟಿಸಿ ಎಲ್ಲಾ ಮತಗಳ ಜನರು ನಾಗರಿಕತೆಯ ಸಮಾನ ಅಧಿಕಾರಗಳನ್ನು ಅನುಭವಿಸಬಹುದು ಹಾಗೂ ರಾಜ್ಯದ ಜನತೆ, ಮತ ಅಥವಾ ರಿಲಿಜನ್‌ನಲ್ಲಿ ಯಾವುದೇ ರೀತಿಯಲ್ಲಿ ತಲೆತೂರಿಸದಂತಹ ರಾಜ್ಯದ ಕಲ್ಪನೆಗೆ ಅವಕಾಶ ಮಾಡಿದರು. ಜನರ ದೃಷ್ಟಿ ಭೌತಿಕತೆಯ ಕಡೆ ಅಧಿಕವಾಗಿರುವ ಕಾರಣ ರಾಜ್ಯದ ಮಹತ್ವ ಕೇವಲ ಲೌಕಿಕ ಆವಶ್ಯಕತೆಗಳ ಪೂರೈಕೆಗೆ ಸೀಮಿತಗೊಂಡಿತು ಹಾಗೂ ಆತ್ಮ-ಸಂಬಂಧಿ ಎಲ್ಲಾ ಪ್ರಶ್ನೆಗಳನ್ನು ವೈಯಕ್ತಿಕ ಇಚ್ಛೆ-ಅನಿಚ್ಛೆಗೆ ಬಿಡುವುದು ಸೂಕ್ತ ಎಂದು ತಿಳಿಯಲಾಯಿತು.

ಯೂರೋಪಿನಲ್ಲಿ 'ಸೆಕ್ಯೂಲರ್ ಸ್ಟೇಟ್'ನ ಪರಿಕಲ್ಪನೆಯ ವಿಕಾಸದ ಸಂಕ್ಷಿಪ್ತ ವಿವರಣೆಯನ್ನು ಮೇಲೆ ನೀಡಲಾಗಿದೆ. ರಾಜ್ಯವನ್ನು ಸ್ಪಿರಿಚ್ಯುಯಲ್ ಹಾಗೂ ಟೆಂಪೋರಲ್ (ಸೆಕ್ಯೂಲರ್) ಎಂಬ ಎರಡು ಭಿನ್ನ-ಭಿನ್ನ ಕ್ಷೇತ್ರಗಳನ್ನಾಗಿಸಿ ಕೇವಲ ಸೆಕ್ಯೂಲರ್ ಆವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಿದರೂ



ಸಹ ಯೂರೋಪ್‌ನ ಯಾವುದೇ ರಾಜ್ಯ ವಿಶೇಷ ಮತದ ಪಕ್ಷಪಾತದಿಂದ ಮುಕ್ತವಾಗಲಿಲ್ಲ. ಇಂಗ್ಲೆಂಡಿನ ರಾಜನನ್ನು ಈಗಲೂ ಸಹ 'ಡಿಫೆಂಡರ್ ಆಫ್ ದಿ ಫೇತ್' ಎಂದು ಹೇಳಲಾಗುತ್ತದೆ ಹಾಗೂ ಇದಕ್ಕಾಗಿ ಅವನು ಚರ್ಚ್ ಆಫ್ ಇಂಗ್ಲೆಂಡ್‌ನ್ನು ಒಪ್ಪುವಂತಹ ಪ್ರೊಟೆಸ್ಟೆಂಟ್ ಆಗಿರಬೇಕು. ರಾಜ್ಯದ ಕಡೆಯಿಂದ ಚರ್ಚ್ ಹಾಗೂ ಪಾದ್ರಿಗಳಿಗೆ ವೇತನ ಹಾಗೂ ಸಹಾಯವೂ ದೊರೆಯುತ್ತದೆ. ಅಮೆರಿಕಾದಲ್ಲಿಯೂ ಸಹ ಅಧ್ಯಕ್ಷರಾಗಿ ಪ್ರತಿಜ್ಞೆ ಮಾಡುವಾಗ ಧಾರ್ಮಿಕ ವಿಧಿಗಳ ನಿರ್ವಹಣೆ ಅಗತ್ಯ.

ಭಾರತವರ್ಷದಲ್ಲಿ ವಾಸ್ತವವಾಗಿಯೂ ರಾಜ್ಯದ ಕಲ್ಪನೆಯಲ್ಲಿ ಲೌಕಿಕ ರಾಜ್ಯದ ಪರಿಕಲ್ಪನೆಯಿತ್ತು. ನಮ್ಮಲ್ಲಿ ಧರ್ಮಗುರುವಿಗೆ ಎಂದಿಗೂ ರಾಜನ ಸ್ಥಾನ ದೊರೆತಿಲ್ಲ. ರಾಜ ಸ್ವಯಂ ಯಾವುದೇ ಮತವನ್ನು ಒಪ್ಪುವವರಾದರೂ ಸಹ, ಸದಾ ಎಲ್ಲಾ ಮತಾವಲಂಬಿಗಳೊಡನೆ ನ್ಯಾಯ ಹಾಗೂ ಸಮಾನತೆಯಿಂದ ವ್ಯವಹರಿಸುತ್ತಿದ್ದನು. ಇಂದಿನ ಸೆಕ್ಯೂಲರಿಜಮ್‌ನ ಕಲ್ಪನೆಗನುಗುಣವಾಗಿ ಪಕ್ಷಪಾತರಹಿತವಾಗಿರುವುದರ ಅರ್ಥ ಯಾರದೇ ಸಹಾಯ ಮಾಡುವುದಲ್ಲ. ಆದ್ದರಿಂದ ರಾಜ್ಯ ಎಲ್ಲಾ ಮತಾವಲಂಬಿಗಳೊಡನೆ ಸಮಾನವಾಗಿ ಸಹಕರಿಸುತ್ತಿತ್ತು. ಈ ಸಹಕಾರದ ಹಿಂದಿರುವ ಭಾವವೆಂದರೆ ಮೊದಲನೆಯದಾಗಿ, ಪಾರಲೌಕಿಕ ಉನ್ನತಿಯಿಲ್ಲದೆ ಲೌಕಿಕಉನ್ನತಿ ವ್ಯರ್ಥ ಹಾಗೂ ಎರಡನೆಯದಾಗಿ ಪ್ರಜೆಗಳ ಎಲ್ಲಾ ರೀತಿಯ ಉನ್ನತಿಗೆ ಎಡೆ ಮಾಡುವುದು ರಾಜನ ಕರ್ತವ್ಯ. ಲೌಕಿಕ ಕ್ಷೇತ್ರದಲ್ಲಿ ಈ ವ್ಯವಸ್ಥೆ ಮತಾವಲಂಬಿಗಳೊಡನೆ ಸಮಾನವಾಗಿ ಸಹಕರಿಸುತ್ತಾ ಅವರ ಪರಸ್ಪರ ಸಂಬಂಧಗಳನ್ನು ಸದ್ಭಾವನೆಯೊಂದಿಗೆ ನಿರ್ವಹಿಸುವುದಾಗಿದೆ. ಅಲ್ಲದೆ ಯಾವುದೇ ಮತದ ರಾಜ್ಯವನ್ನು ಖಾಯಂಗೊಳಿಸದೆ 'ಯತೋऽಭ್ಯುದಯನಿಃಶ್ರೇಯಸಸಿದ್ಧಿಃ ಧರ್ಮಃ' ಎಂಬುದರ ವ್ಯಾಖ್ಯಾನಕ್ಕೆ ಅನುಗುಣವಾಗಿ ಧರ್ಮವನ್ನು ವಿಕಾಸಮಾಡುತ್ತಾ ಧರ್ಮ-ರಾಜ್ಯವನ್ನು ಅವಶ್ಯವಾಗಿ ಸ್ಥಾಪಿಸಲಾಗುತ್ತಿತ್ತು.

ಇಂದು ಭರತವರ್ಷದ ನಾಯಕರು ಪಶ್ಚಿಮದ ಆದರ್ಶಗಳನ್ನು ಸ್ವೀಕರಿಸಿ ಭಾವಿ ಭಾರತವನ್ನು ರಚಿಸಲು ಬಯಸುತ್ತಿದ್ದಾರೆ. ಅವರ ಪ್ರಕಾರ ಪಶ್ಚಿಮದ ಅರ್ಥದಲ್ಲಿ, ಸೆಕ್ಯೂಲರ್ ಸ್ಟೇಟ್‌ನ ಅರ್ಥ, ಲೌಕಿಕರಾಜ್ಯ. ಆದರೆ ಭಾರತೀಯ ಜನತೆಗೆ ಧರ್ಮ-ರಾಜ್ಯ ಅಥವಾ ರಾಮರಾಜ್ಯದ ಹಸಿವೆಯಿದೆ ಹಾಗೂ ಅದು ಕೇವಲ ಲೌಕಿಕ ಉನ್ನತಿಯಿಂದ ಸಂತೋಷವನ್ನು ಪಡೆಯಲಾರದು. ಭಾರತೀಯತೆಯ ಸ್ಥಾಪನೆಯೂ ಸಹ ಕೇವಲ ಏಕಾಂಗಿ ಉನ್ನತಿಯಿಂದ ಸಾಧ್ಯವಾಗುವುದಿಲ್ಲ. ಏಕೆಂದರೆ ನಾವು ಲೌಕಿಕ ಹಾಗೂ ಪಾರಲೌಕಿಕ ಉನ್ನತಿಯನ್ನು ಒಂದಕ್ಕೊಂದು ಪೂರಕವಾಗಿ ಮಾತ್ರವೇ ಅಲ್ಲ ಎರಡನ್ನೂ ಅಭಿನ್ನವೆಂದೇ ತಿಳಿಯುತ್ತೇವೆ. ಆದರೆ ಪಾರಲೌಕಿಕ ಉನ್ನತಿಯ ಕ್ಷೇತ್ರದಲ್ಲಿ ರಾಜ್ಯದ ಕಡೆಯಿಂದ ಯಾವುದೇ ಒಂದು

ಮತದ ಕಲ್ಪನೆ ತಪ್ಪಾಗುತ್ತದೆ. ಆದ್ದರಿಂದ ಎಲ್ಲಾ ಮತಗಳ ಏಳಿಗೆಯಾಗುವಂತಹ ವಾತಾವರಣವನ್ನು ನಿರ್ಮಿಸಬೇಕಾಗುತ್ತದೆ ಹಾಗೂ 'ಏಕಂ ಸತ್‌ವಿಪ್ರಾಃ ಬಹುಧಾವದಂತಿ' ಎಂಬ ಸಿದ್ಧಾಂತನ್ನು ಅನುಸರಿಸಬೇಕಾಗುತ್ತದೆ.

ಹೀಗಾಗಿ ನಮ್ಮ ರಾಜ್ಯಕ್ಕೆ 'ಲೌಕಿಕ ರಾಜ್ಯ' ಎಂಬುದು 'ಸೆಕ್ಯೂಲರ್ ಸ್ಟೇಟ್'ನ ಸರಿಯಾದ ಪರ್ಯಾಯವಾಗಿದ್ದರೂ,ಅದು ಸೂಕ್ತವಾಗುವುದಿಲ್ಲ. ಧರ್ಮ ಶಬ್ದಕ್ಕೆ ಮೇಲೆ ನೀಡಿದಂತಹ ಪರೀಕ್ಷೆ ಹಾಗೂ 'ಧಾರಣಾದ್ಧರ್ಮಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ' ಮುಂತಾದ ವ್ಯಾಖ್ಯಾನಗಳಿಗೆ ಅನುಗುಣವಾಗಿ ಈ ಶಬ್ದ ಇಂಗ್ಲಿಷಿನ ರಿಲೀಜನ್‌ನ ಪರ್ಯಾಯವಾಗದೇ ಅದಕ್ಕಿಂತಲೂ ಭಿನ್ನವಾಗಿದೆ ಹಾಗೂ ವ್ಯಾಪಕ ಅರ್ಥವನ್ನು ಹೊಂದಿದೆ. ನಮ್ಮಲ್ಲಿ ಧರ್ಮವಿಲ್ಲದೆ ಯಾವುದೇ ಭಾವ, ಅದರ ಅಸ್ತಿತ್ವದ ಕಲ್ಪನೆಯೇ ಕಷ್ಟ. ಹೀಗಾಗಿ ನಮ್ಮ ರಾಜ್ಯ ಧರ್ಮವನ್ನು ಬಿಡುವುದಿಲ್ಲ, ಅಧಾರ್ಮಿಕ, ಧರ್ಮನಿರಪೇಕ್ಷ, ಧರ್ಮರಹಿತ, ಧರ್ಮಹೀನ, ಧರ್ಮವಿರತ ಮುಂತಾದ ಎಲ್ಲಾ ಶಬ್ದಗಳು ನಮ್ಮ ರಾಜ್ಯದ ಆದರ್ಶವನ್ನು ಪ್ರಕಟಗೊಳಿಸುತ್ತವೆ ಹಾಗೂ ಇದು ಸೆಕ್ಯೂಲರ್ ಸ್ಟೇಟ್‌ಗೆ ಪರ್ಯಾಯವಾಗಲಾರದು ಎಂದು ನಾವು ತಿಳಿಯುತ್ತೇವೆ.

ಆಂಗ್ಲಭಾಷೆಯ ರಿಲಿಜನ್ ಶಬ್ದದ ಪರ್ಯಾಯ ಶಬ್ದ ನಮ್ಮಲ್ಲಿ 'ಮತ' ವಾಗಿದೆ ಹಾಗೂ ಮತವನ್ನು ಒಪ್ಪುವವರಿಗೆ ಸಂಪ್ರದಾಯ ಎಂದು ಹೇಳಲಾಗಿದೆ. ಉದಾಹರಣೆಗೆ ಶೈವಸಂಪ್ರದಾಯ, ವೈಷ್ಣವಸಂಪ್ರದಾಯ, ಮುಂತಾದವು. ನಿಶ್ಚಿತವಾಗಿಯೂ ಹಿಂದಿನಿಂದ ಇಂದಿನವರೆಗೂ ರಾಜ್ಯ ಇವುಗಳಲ್ಲಿ ಯಾವುದೇ ಒಂದು ಸಂಪ್ರದಾಯಕ್ಕೆ ಸೀಮಿತವಾಗಲಾರದು. ರಾಜ್ಯದ ದೃಷ್ಟಿ ಎಲ್ಲರ ಮೇಲೆಯೂ ಸಮಾನವಾಗಿರಬೇಕು. ಪರಿಣಾಮವಾಗಿ ರಾಜ್ಯ ಸಾಂಪ್ರದಾಯಿಕವಲ್ಲದೇ ಅಸಾಂಪ್ರದಾಯಿಕವಾಗಿರಬೇಕು. ಇದೇ ರಾಜ್ಯದ ಸರಿಯಾದ ಆದರ್ಶ. ಇಂತಹ ರಾಜ್ಯ ಯಾವುದೇ ವಿಶೇಷ ಸಂಪ್ರದಾಯದ ಬಗ್ಗೆ ಪಕ್ಷಪಾತ ಅಥವಾ ಯಾರೊಡನೆಯೂ ದ್ವೇಷದಿಂದ ವರ್ತಿಸದೇ ಇದ್ದರೂ ಜೀವನದ ಲೌಕಿಕ ಹಾಗೂ ಆಧ್ಯಾತ್ಮಿಕ ಉನ್ನತಿಯ ಮಾರ್ಗವನ್ನು ಹದಗೊಳಿಸುತ್ತಾ ಧರ್ಮರಾಜ್ಯವಾಗಬಲ್ಲದು.

'ಅಸಾಂಪ್ರದಾಯಿಕ' ಶಬ್ದದಿಂದ ರಾಜ್ಯದ ಸರಿಯಾದ ಆದರ್ಶಗಳ ಅರಿವು ಮೂಡುವುದಿಲ್ಲ. ಬದಲಿಗೆ 'ಸೆಕ್ಯೂಲರ್'ನ ಶಾಬ್ದಿಕ ಅರ್ಥವಲ್ಲದಿದ್ದರೂ ಪಾಶ್ಚಾತ್ಯ ವ್ಯಾವಹಾರಿಕ ಅರ್ಥಕ್ಕೂ ಇದು ಬಹಳ ಸನಿಹದಲ್ಲಿದೆ. ರಷ್ಯಾವನ್ನು ಹೊರತುಪಡಿಸಿ ಬೇರೆ ಯಾವುದೇ ರಾಜ್ಯವು ರಿಲೀಜನ್(ಮತ)ನ್ನು ಕೊನೆಗೊಳಿಸಲಿಲ್ಲ ಹಾಗೂ ಇಂದು ರಷ್ಯಾ ಸಹ ಪೂಜಾ–ಸ್ವಾತಂತ್ರ್ಯವನ್ನು ಸ್ವೀಕರಿಸಿದೆಯಾದರೂ ರಾಜ್ಯದ ಕಡೆಯಿಂದ ಅಲ್ಲಿ ಯಾರಿಗೂ ಯಾವುದೇ ಸೌಲಭ್ಯ ಸಿಗುವುದಿಲ್ಲ. ಉಳಿದೆಲ್ಲಾ



ರಾಜ್ಯಗಳಲ್ಲಿಯೂ ಎಲ್ಲಾ ಸಂಪ್ರದಾಯಗಳಿಗೂ ಆತ್ಮಿಕ, ಶಾರೀರಿಕ ಸ್ವಾತಂತ್ರ್ಯವಿದೆ. ಇಂಗ್ಲೆಂಡಿನ ರಾಜನನ್ನು ಬಿಟ್ಟು ಉಳಿದ ಯಾವುದರಲ್ಲಿಯೂ ವಿಶೇಷವಾದ ಪಕ್ಷಪಾತವಿಲ್ಲ. ಆದ್ದರಿಂದ ಆ ರಾಜ್ಯಗಳನ್ನು ಸಹ ಪವಿತ್ರ ರೋಮನ್ ಸಾಮ್ರಾಜ್ಯಕ್ಕೆ ವಿರುದ್ಧವಾಗಿ ಲೌಕಿಕವೆಂದು ತಿಳಿದುಕೊಳ್ಳಬಹುದು, ಆದರೆ ಅಸಾಂಪ್ರದಾಯಿಕ ಎಂದು ಹೇಳುವುದರ ಯುಕ್ತಿ ಸಂಗತವಾಗುತ್ತದೆ. ನಮ್ಮ ನಾಯಕರು ಬಳಸುವ ಅಸಾಂಪ್ರದಾಯಿಕ ಶಬ್ದದಿಂದ ಬಹಳಷ್ಟು ಅರ್ಥವು ಸ್ಪಷ್ಟವಾಗುತ್ತದೆ. ಏಕೆಂದರೆ ಇಂದು ಸೆಕ್ಯೂಲರ್ ಶಬ್ದದ ಪ್ರಯೋಗ ಕೇವಲ ಪಾಕಿಸ್ತಾನದಿಂದ, ಅದು ತನ್ನನ್ನು ತಾನೇ ಇಸ್ಲಾಮಿ ರಾಜ್ಯವೆಂದು ಘೋಷಿಸಿಕೊಂಡಿದೆಯೋ ಅದಕ್ಕಿಂತ ಭಿನ್ನವಾಗಿರಬೇಕು. ಭಾರತ ಇಸ್ಲಾಮಿ ರಾಜ್ಯದ ಹಾಗೆ ಒಂದು ಕೋಮಿನ ರಾಜ್ಯವಲ್ಲ ಎಂದು ನಮ್ಮ ನಾಯಕರು ಪ್ರಕಟಗೊಳಿಸಲು ಇಷ್ಟಪಡುತ್ತಾರೆ.

ಇದಕ್ಕಾಗಿ ಅವರು 'ಸೆಕ್ಯೂಲರ್' ಎಂಬ ಶಬ್ದವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಹಾಗಾದರೂ ಇಂದು ಕೋಮು ಹಾಗೂ ರಾಷ್ಟ್ರೀಯ ಶಬ್ದಗಳ ಸರಿಯಾದ ಜ್ಞಾನವಿಲ್ಲದಿರುವುದರಿಂದ ಸೆಕ್ಯೂಲರ್ ಶಬ್ದದ ಹೆಸರು ಹೇಳಿ ರೇಡಿಯೋವಿನಿಂದ ಗೀತೆ ಹಾಗೂ ರಾಮಾಯಣ ಮುಂತಾದವುಗಳ ಪಠನೆಯನ್ನು ಕೊನೆಗೊಳಿಸುವಂತಹ ಅನೇಕ ಕಾರ್ಯಗಳನ್ನು ಮಾಡಲಾಗುತ್ತದೆ. ಆದರೂ ಭಾರತೀಯ ರಾಜ್ಯದ ಆದರ್ಶಗಳನ್ನು ಘೋಷಿಸುವಾಗ ನಮ್ಮ ನಾಯಕರ ತಲೆಯಲ್ಲಿದ್ದಂತಹ ಪ್ರಮುಖ ಧೋರಣೆ 'ಅಸಾಂಪ್ರದಾಯಿಕ' ಶಬ್ದದಿಂದಲೇ ಹೆಚ್ಚಾಗಿ ವ್ಯಕ್ತಪಡಿಸಲಾಗುತ್ತಿದೆ.

ಮೇಲೆ ಹೇಳಿದ ಎಲ್ಲಾ ಕಾರಣದಿಂದ 'ಅಸಾಂಪ್ರದಾಯಿಕ' ಶಬ್ದವೇ 'ಸೆಕ್ಯೂಲರ್'ನ ಹತ್ತಿರದ ಭಾಷಾಂತರವಾಗಿದೆ ಹಾಗೂ ಅದೇ ಶಬ್ದವನ್ನು ಬಳಸಬೇಕಾಗಿದೆ.

# ೭. ರಾಷ್ಟ್ರ : ಪ್ರಕೃತಿ ಮತ್ತು ವಿಕೃತಿ

ನಮ್ಮ ರಾಷ್ಟ್ರೋಜ್ಜೀವನದ ಪ್ರಕೃತಿ, ವಿಕೃತಿ ಹಾಗೂ ಸಂಸ್ಕೃತಿಯನ್ನು ಕುರಿತು ವಿಚಾರ ಮಾಡುವುದಕ್ಕಿಂತಲೂ ಮೊದಲು ಈ ಮೂರು ಶಬ್ದಗಳ ಅರ್ಥವನ್ನು ತಿಳಿದುಕೊಳ್ಳಬೇಕು. ನಾವು ಮೊದಲು ಪ್ರಕೃತಿಯನ್ನು ಕುರಿತು ವಿಚಾರ ಮಾಡೋಣ. ಯಾವುದೇ ಜೀವಂತ ವಸ್ತುವಿನಲ್ಲಿ ಜನ್ಮತಾಳುವ ಒಂದು ಗುಣವೇ ಪ್ರಕೃತಿ. ನಿರ್ಜೀವ ವಸ್ತುಗಳಿಗೂ ಸಹ ಪ್ರಕೃತಿ ಇರುತ್ತದೆ. ಆದರೆ ಅದನ್ನು ಕುರಿತು ವಿಚಾರ ಮಾಡುವುದು ಇಲ್ಲಿ ಅಗತ್ಯವಿಲ್ಲ. ನಾವು ಹಿಂದಿನ ಜನ್ಮವನ್ನು ನಂಬುತ್ತೇವೆ. ಈ ಜನ್ಮದಲ್ಲಿ ನಮಗೆ ಯಾವ ಪ್ರಕೃತಿ ದೊರೆಯುತ್ತದೆಯೋ, ಅದು ನಮ್ಮ ಪೂರ್ವಜನ್ಮದ ಸಂಚಿತ ಕರ್ಮಗಳ ಪರಿಣಾಮವಾಗಿದೆ. ಇದು ನಮ್ಮ ಮೂಲ ಪ್ರಕೃತಿಯಾಗಿರುತ್ತದೆ. ಇದರಲ್ಲಿ ಯಾವುದೇ ಪರಿವರ್ತನೆ ಇರುವುದಿಲ್ಲ. ಬಾಹ್ಯ ವಾತಾವರಣ ಹಾಗೂ ಸಮಾಜದ ಪರಿಸ್ಥಿತಿಗಳು ಪ್ರಕೃತಿಯನ್ನು ಪ್ರಭಾವಗೊಳಿಸುತ್ತದೆ. ಆದರೆ ಅದರ ಮೂಲ ರೂಪವನ್ನು ಬದಲಾಯಿಸಲಾರದು.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಸ್ವತಂತ್ರ ಪ್ರಕೃತಿಯಿದೆ. ಅವರು ತಮ್ಮ ಪ್ರಕೃತಿಗೆ ಅನುಗುಣವಾಗಿ ವಿಕಾಸ ಹೊಂದುತ್ತಾ ಜೀವನದಲ್ಲಿ ಉನ್ನತ ಮಟ್ಟಕ್ಕೆ ಏರಬಹುದು. ಯಾವುದೇ ವ್ಯಕ್ತಿಯಲ್ಲಿ ಸಾಹಿತ್ಯಕ ಪ್ರತಿಭೆಯಿದ್ದಲ್ಲಿ, ಅವನು ಇಂಜಿನಿಯರು ಅಥವಾ ವಿಜ್ಞಾನಿ ಅಲ್ಲದೇ ಒಬ್ಬ ಯಶಸ್ವಿ ಕವಿ ಅಥವಾ ಸಾಹಿತಿಯಾಗಬಲ್ಲನು. ಅದೇ ರೀತಿ ಶಿಲ್ಪ ಅಥವಾ ವಿಜ್ಞಾನದಲ್ಲಿ ಆಸಕ್ತಿಯಿರುವವನು ಯಶಸ್ವಿ ಸಾಹಿತಿಯಾಗುವುದಿಲ್ಲ. ಆದ್ದರಿಂದಲೇ ಕವಿಗಳೂ ಹುಟ್ಟಿನಿಂದಲೇ ಆಗಿರುತ್ತಾರೆ, ಅವರನ್ನು ತಯಾರಿಸಲಾಗದು ಎಂದು ಹೇಳಲಾಗುವುದು.

ಹೀಗೆ ಪ್ರತಿಯೊಬ್ಬ ವ್ಯಕ್ತಿಯ ಪ್ರಕೃತಿ ಭಿನ್ನವಾಗಿರುವುದೋ ಹಾಗೆಯೇ ಪ್ರತಿಯೊಂದು ರಾಷ್ಟ್ರದ ಪ್ರಕೃತಿ ಭಿನ್ನವಾಗಿರುತ್ತದೆ. ಭಾರತದ್ದೂ ತನ್ನದೇ ಆದ ಒಂದು ಪ್ರಕೃತಿಯಿದೆ. ನಮ್ಮ ಇತಿಹಾಸದ ಅಧ್ಯಯನದಿಂದ ನಮ್ಮಲ್ಲಿ ಸಮ್ರಾಟರು ಅಥವಾ ಲಕ್ಷ್ಮೀ–ಪುತ್ರರಿಗಿಂತಲೂ ಋಷಿ–ಮುನಿಗಳಿಗೆ ಮಹರ್ಷಿಗಳಿಗೆ ಹೆಚ್ಚು ಮಹತ್ವ ನೀಡಲಾಗಿದೆ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತದೆ. ದೊಡ್ಡ–ದೊಡ್ಡ ಅರಸರು ಸಹ ಈ ಮುನಿಗಳಿಗೆ ಶಿರಬಾಗುತ್ತಿದ್ದರು. ನಮ್ಮ ರಾಷ್ಟ್ರದ ಮೂಲ ಪ್ರಕೃತಿ ಅಧ್ಯಾತ್ಮ–ಪ್ರಧಾನವಾಗಿದೆ. ನಾವು ಭೌತಿಕ ಸಮೃದ್ಧಿಯ ಆಕರ್ಷಕ ಘೋಷಣೆಗಳ



ಮರೆಯಲ್ಲಿ ಇದನ್ನು ಬದಲಾಯಿಸಬಾರದು. ನಾವು ನಮ್ಮ ಮೂಲ ಪ್ರಕೃತಿಯ ಅವಹೇಳನೆ ಮಾಡಲು ಪ್ರಯತ್ನಿಸಿದಲ್ಲಿ ನಮ್ಮ ರಾಷ್ಟ್ರೋಜ್ಜೀವನದಲ್ಲಿ ಅನೇಕ ಪ್ರಕಾರದ ವಿಕೃತಿಗಳು ಉಂಟಾಗುತ್ತವೆ. ನಾವು ಭೌತಿಕತೆಯನ್ನು ಕುರಿತು ವಿಚಾರ ಮಾಡುವುದೇ ಇಲ್ಲ ಎಂದು ಹೇಳಲಾಗದು. ನಮ್ಮಲ್ಲಿ ಗತಕಾಲದಲ್ಲಿ ಅನಂತ ಭೌತಿಕ ಸಮೃದ್ಧಿಯಿತ್ತು. ಈ ಸಮೃದ್ಧಿಯಿಂದ ಆಕರ್ಷಿತರಾಗಿ ವಿದೇಶಿ ಆಕ್ರಮಣಕಾರರು ಇಲ್ಲಿಗೆ ಬಂದರು. ನಾವು ಭೌತಿಕತೆಯನ್ನು ದುರ್ಲಕ್ಷ್ಯಗೊಳಿಸಲಿಲ್ಲ, ಆದರೆ ನಮ್ಮ ವೃತ್ತಿಗಳು ಧರ್ಮ, ಆಧ್ಯಾತ್ಮಿಕತೆ ಅಥವಾ ಪರಮಾತ್ಮನ ಚಿಂತನೆಯಲ್ಲಿಯೇ ಮುಳುಗಿರುತ್ತದೆ. ದೌರ್ಭಾಗ್ಯದಿಂದ ಇಂದು ನಮ್ಮ ರಾಷ್ಟ್ರೋಜ್ಜೀವನ ಮೂಲ ಪ್ರಕೃತಿಯಿಂದ ದೂರ ಸರಿಯುತ್ತಿದೆ. ನಾವು ಕೇವಲ ಭೌತಿಕ ಪ್ರಗತಿಯ ಓಟದಲ್ಲಿ ಮೊದಲ ಸ್ಥಾನಗಳಿಸಲು ಕಾತರರಾಗಿದ್ದೇವೆ. ಪರಣಾಮಸ್ವರೂಪ ಸಂಕೀರ್ಣ ಪ್ರಾದೇಶಿಕತೆ, ಜಾತೀಯತೆ, ಭಾಷಾವಾದ ಮುಂತಾದ ಹಲವಾರು ರೂಪಗಳಲ್ಲಿ ನಮ್ಮ ರಾಷ್ಟ್ರೋಜ್ಜೀವನದಲ್ಲಿ ವಿಕೃತಿಗಳುಂಟಾಗುತ್ತಿವೆ. ನಮ್ಮ ರಾಷ್ಟ್ರದ ಇತಿಹಾಸ ಋಷಿ–ಮುನಿಗಳ ಸಾಧನೆ, ತಪಶ್ಚರ್ಯ ಹಾಗೂ ತ್ಯಾಗಮಯ ಜೀವನದ ಇತಿಹಾಸವಾಗಿದೆ. ವಿಶ್ವವಿಜಯಿಯಾಗುವ ಮಹತ್ವಾಕಾಂಕ್ಷಿ ಅಲೆಕ್ಸಾಂಡರ್‌ನ ಪರಾಜಯದ ವೃತ್ತಾಂತ ನಮ್ಮ ಪುರಾಣಗಳಲ್ಲಿ ಎಲ್ಲಿಯೂ ಸಿಗುವುದಿಲ್ಲ. ರಾಜ ಜನಕ, ಹರಿಶ್ಚಂದ್ರ, ಶಿಬಿ ಅಥವಾ ಯುಧಿಷ್ಠಿರನಂತಹ ರಾಜರುಗಳ ವರ್ಣನೆ ಲಭ್ಯವಾಗುತ್ತದೆ.

ನಮ್ಮ ರಾಷ್ಟೋಜ್ಜೀವನವನ್ನು ಕುರಿತು ವಿಚಾರ ಮಾಡುವ ಮುನ್ನ ರಾಷ್ಟ್ರ ಶಬ್ದವನ್ನು ಕುರಿತು ವಿಚಾರ ಮಾಡುವುದು ಒಳ್ಳೆಯದು. ರಾಷ್ಟ್ರ ಶಬ್ದದ ಶಾಸ್ತ್ರೀಯ ವ್ಯಾಖ್ಯಾನಕ್ಕೆ ನಾವು ಹೋಗದಿದ್ದರೂ ರಾಷ್ಟ್ರನಿರ್ಮಾಣದ ಸಲುವಾಗಿ ಒಂದು ವಿಶೇಷ ಭೂ–ಭಾಗದಲ್ಲಿ ವಾಸಿಸುವಂತಹ ಜನರ ಹೃದಯದಲ್ಲಿ ಅದನ್ನು ಕುರಿತು ಅಚಲವಾದ ಧ್ಯೇಯಭಾವವಿರುವುದು ಆವಶ್ಯಕ. ರಾಷ್ಟ್ರವು ಕೇವಲ ನದಿಗಳು, ಬೆಟ್ಟ–ಗುಡ್ಡಗಳು, ಮೈದಾನಗಳು, ಕಲ್ಲಿನ ರಾಶಿಯಿಂದ ಉಂಟಾಗಿಲ್ಲ. ಇದು ಕೇವಲ ಒಂದು ಭೌತಿಕ ಮಾತ್ರವಲ್ಲ, ಅದಕ್ಕಾಗಿ ಒಂದು ದೇಶದಲ್ಲಿ ವಾಸಿಸುವ ಜನದ ಹೃದಯಗಳಲ್ಲಿ ಅವುಗಳನ್ನು ಕುರಿತು ಅಪಾರ ಶ್ರದ್ಧೆಯಿರುವುದು ಅಗತ್ಯವಾಗಿದೆ. ಈ ಶ್ರದ್ಧಾಭಾವನೆಯಿಂದಲೇ ನಾವು ನಮ್ಮ ದೇಶವನ್ನು ಮಾತೃಭೂಮಿ ಎಂದು ಹೇಳುತ್ತೇವೆ.

ಮಾತೃಭೂಮಿಯನ್ನು ಕುರಿತ ಶ್ರದ್ಧೆಗೆ ಕೆಲವೊಂದು ಆಧಾರಗಳಿರುತ್ತವೆ. ಅನೇಕ ವರ್ಷಗಳು ಒಂದೇ ದೇಶದಲ್ಲಿ ವಾಸಿಸುವುದರಿಂದ ಒಂದು ರೀತಿಯ ಸಾಹಚರ್ಯ ಹಾಗೂ ಆತ್ಮೀಯತೆಯ ಭಾವವು ಉಂಟಾಗುತ್ತದೆ. ಹೀಗೆ ನಿಧಾನವಾಗಿ ರಾಷ್ಟ್ರದ ಇತಿಹಾಸವುಂಟಾಗುತ್ತದೆ. ಇವುಗಳಲ್ಲಿ ಕೆಲವು ವಿಷಯಗಳು ರಾಷ್ಟ್ರೀಯ

ಗೌರವಕ್ಕೆ ಹಾಗೂ ಕೆಲವು ಅವಮಾನಕ್ಕೆ ಕಾರಣವಾಗುತ್ತದೆ. ಗೌರವಾನ್ವಿತ ವಿಷಯುಗಳನ್ನು ಸ್ಮರಿಸಿ ನಾವು ಹೆಮ್ಮೆಪಡುತ್ತೇವೆ ಹಾಗೂ ಅವಮಾನವನ್ನುಂಟುಮಾಡುವ ವಿಷಯಗಳಿಂದ ಅವಮಾನವನ್ನು ಅನುಭವಿಸುತ್ತೇವೆ. ಮೊಹಮ್ಮದ್ ಘೋರಿ ಅಥವಾ ಮೊಹಮ್ಮದ್ ಘಜನಿ ಭಾರತದ ಮೇಲೆ ಆಕ್ರಮಣ ಮಾಡಿದ. ಈ ಘಟನೆಯನ್ನು ಕುರಿತು ವಿಚಾರ ಮಾಡಿದಾಗ ನಮ್ಮಲ್ಲಿ ಸ್ವಾಭಾವಿಕವಾಗಿ ಆಕ್ರೋಶ ಹುಟ್ಟುತ್ತದೆ. ನಮ್ಮ ಆತ್ಮೀಯತೆ ಪೃಥ್ವಿರಾಜ್ ಹಾಗೂ ಈ ದೇಶದ ಅನ್ಯ ದೇಶಭಕ್ತರೊಡನೆ ಇರುತ್ತದೆ. ಯಾವುದೇ ವ್ಯಕ್ತಿಯ ಆತ್ಮೀಯತೆ ನಮ್ಮ ದೇಶವನ್ನು ಕುರಿತಲ್ಲದೆ ಪರಕೀಯ ಆಕ್ರಮಣಕಾರಿಗಳನ್ನು ಕುರಿತು ಇರುವುದಾದರೆ ಆ ವ್ಯಕ್ತಿಯಲ್ಲಿ ರಾಷ್ಟ್ರೀಯತೆಯ ಭಾವನೆಯಿರುವುದಿಲ್ಲ. ನಾವು ಮಹಾರಾಣಪ್ರತಾಪ, ಛತ್ರಪತಿ ಶಿವಾಜಿ ಅಥವಾ ಗುರುಗೋವಿಂದ ಸಿಂಹರನ್ನು ಸ್ಮರಿಸಿದಾಗ ನಮ್ಮ ಮನಸ್ಸು ಅವರ ಬಗ್ಗೆ ಗೌರವ ಮತ್ತು ಶ್ರದ್ಧೆಗಳಿಂದ ಬಾಗುತ್ತದೆ. ಇದಕ್ಕೆ ವಿರುದ್ಧವಾಗಿ ಅದೇ ನಾವು ಔರಂಗಜೇಬ್ ಅಲಾಉದ್ದೀನ್, ಕ್ಲೈವ್ ಅಥವಾ ಡಾಲ್‌ಹಾಸಿಯ ಹೆಸರುಗಳನ್ನು ಸ್ಮರಿಸಿದಾಗ ಇವರ ಬಗ್ಗೆ ವಿದೇಶಿ ಆಕ್ರಮಣಕಾರಿಯ ಬಗ್ಗೆ ಯಾವ ಭಾವನೆ ಮೂಡಬೇಕೋ ಅದೇ ಭಾವನೆ ಮೂಡುತ್ತದೆ. ಈ ರೀತಿ ಒಂದು ವಿಶೇಷ ಭೂ–ಭಾಗದಲ್ಲಿ ವಾಸಿಸುವ ಜನರಲ್ಲಿ ಯಾರ ಹೃದಯದಲ್ಲಿ ತಮ್ಮ ಮಾತೃಭೂಮಿಯ ಬಗ್ಗೆ ಅಸಂದಿಗ್ಧ ಶ್ರದ್ಧಾ ಭಾವವಿರುವುದೋ, ಯಾರ ಜೀವನಾದರ್ಶಗಳಲ್ಲಿ ಸಮಾನತೆ ಇರುವುದೋ ಜೀವನವನ್ನು ಕುರಿತು ಒಂದು ವಿಶಿಷ್ಟ ದೃಷ್ಟಿಯಿದೆಯೋ, ಅವರ ಶತ್ರು–ಮಿತ್ರರು ಸಮಾನರೋ, ಐತಿಹಾಸಿಕ ಮಹಾಪುರುಷರು ಒಂದೇ ಆಗಿರುವಲ್ಲಿ ಅಲ್ಲಿ ಒಂದು ರಾಷ್ಟ್ರದ ನಿರ್ಮಾಣವಾಗುತ್ತದೆ.

ನಮ್ಮ ರಾಷ್ಟ್ರೋಜ್ಜೀವನದ ಪ್ರವಾಹ ಸಾವಿರಾರುವರ್ಷಗಳಿಂದ ಹರಿದು ಬಂದಿದೆ. ಇದರಲ್ಲಿ ವಿಧ–ವಿಧವಾದ ಝರಿಗಳು ಹರಿದು ಬಂದು ಸೇರಿವೆ. ಹೇಗೆ ಗಂಗಾ ನದಿಯಲ್ಲಿ ಅನೇಕ ಸಣ್ಣ–ಪುಟ್ಟ ನದಿ–ಕಾಲುವೆಗಳು ಬಂದು ಸೇರುತ್ತವೆಯೋ ಆದರೆ ಗಂಗಾನದಿಯನ್ನು ಸೇರಿದೊಡನೆ ಆ ಅಖಂಡ ಪ್ರವಾಹದಲ್ಲಿ ಒಂದಾಗಿ ಹೋಗುತ್ತವೆಯೋ ಹಾಗೆಯೇ ನಮ್ಮ ರಾಷ್ಟ್ರೋಜ್ಜೀವನ ಪ್ರವಾಹದಲ್ಲಿ ಶಕ–ಹೂಣ ಮುಂತಾದ ಅನೇಕ ಜನಾಂಗಗಳು ಬಂದು ಸೇರಿ ನಮ್ಮಲ್ಲಿ ಒಂದಾಗಿವೆ. ಯಾವುದೇ ಜಾತಿ ಈ ಮೂಲ ಜೀವನ–ಪ್ರವಾಹದಿಂದ ಬೇರ್ಪಡುವ ಪ್ರಯತ್ನ ಮಾಡಿದ್ದಲ್ಲಿ ವಿಕೃತಿ ಜನ್ಮತಾಳುತ್ತದೆ ಹಾಗೂ ಅದು ಆಂತರಿಕ ಕಲಹಗಳಿಗೆ ಕಾರಣವಾಗುತ್ತದೆ.

ನಮ್ಮ ರಾಷ್ಟ್ರೋಜ್ಜೀವನ ಒಂದು ವಿಸ್ತೃತ ಭೂ–ಪ್ರದೇಶದಲ್ಲಿ ವ್ಯಾಪ್ತಗೊಂಡಿದೆ. ಇದರಲ್ಲಿ ಅನೇಕ ವೈವಿಧ್ಯಗಳಿವೆ. ಈ ವೈವಿಧ್ಯತೆ ಸ್ವಾಭಾವಿಕವಾಗಿದೆ. ಇದರಿಂದ



ನಮ್ಮ ಜೀವನದಲ್ಲಿ ಸೌಂದರ್ಯಭಾವ ಬಲಿಷ್ಠವಾಗುತ್ತದೆ. ಹೇಗೆ ವಿವಿಧ ರೀತಿಯ ಹೂಗಳಿಂದ ಒಂದು ಸುಂದರ ಮಾಲೆಯನ್ನು ಪೋಣಿಸಲಾಗುವುದೋ, ಹಾಗೆಯೇ ವೈವಿಧ್ಯತೆಗಳ ಒಂದು ವಿಶಿಷ್ಟ ಮಾಧ್ಯಮದಿಂದ ಸಮನ್ವಯವನ್ನು ಸ್ಥಾಪಿಸಬಹುದಾಗಿದೆ. ಜೀವನದ ಬಗ್ಗೆ ಆಧ್ಯಾತ್ಮಿಕ ದೃಷ್ಟಿಯೇ ಆ ಸಮನ್ವಯದ ಮಾಧ್ಯಮವಾಗಿದೆ. ಆದರೆ ಈ ಸಮನ್ವಯ ಸಮಾನ ಪ್ರಕೃತಿಯಿರುವ ವಸ್ತುಗಳಲ್ಲಿಯೇ ಉಂಟಾಗುತ್ತದೆ. ವಿಕೃತಿಯೊಡನೆ ಈ ಸಮನ್ವಯ ಉಂಟಾಗುವುದಿಲ್ಲ. ವಿವಿಧ ಬಗೆಯ ಆಹಾರಪದಾರ್ಥಗಳು ಸೇರಿ ಖಿಚಡಿಯಾಗಬಲ್ಲದು ಆದರೆ ಅದರಲ್ಲಿ ಕಲ್ಲು ಸೇರಿಸಿದರೆ ವಿಕೃತಿ ಉಂಟಾಗುತ್ತದೆ. ಶರೀರದಲ್ಲಿ ಹುಣ್ಣಾದಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ ಅಸ್ವಸ್ಥರಾಗಬೇಕಾಗುತ್ತದೆ. ರಾಷ್ಟ್ರೋಜ್ಜೀವನದಲ್ಲಿಯೂ ಈ ಸಿದ್ಧಾಂತಗಳನ್ನು ಅಳವಡಿಸಬಹುದು. ನಮ್ಮ ಭಾಷೆಗಳು ಬೇರೆ ಆಗಿರಬಹುದು, ಪೂಜಾ ಪದ್ಧತಿಗಳು ಭಿನ್ನವಾಗಿರಬಹುದು, ವೇಷಭೂಷಗಳಲ್ಲಿ ಅಂತರವಿರಬಹುದು, ತಿಂಡಿ–ತಿನಿಸುಗಳಲ್ಲಿ ಭಿನ್ನತೆಯಿರಬಹುದು, ಆದರೆ ಈ ಎಲ್ಲಾ ಬಗೆಯ ವಿವಿಧತೆಗಳಲ್ಲಿ ಸಹ ಸಮನ್ವಯ ಸ್ಥಾಪಿಸಬಹುದಾಗಿದೆ. ನಮ್ಮ ಅಂತಃಕರಣದಲ್ಲಿ ಮಾತೃಭೂಮಿಯ ಬಗ್ಗೆ ಅಪಾರ ಶ್ರದ್ಧೆ ಇದ್ದಲ್ಲಿ, ನಮ್ಮ ಹೃದಯತಂತಿ ಕೆಲವು ಸಮಾನ ಆದರ್ಶಗಳು ಹಾಗೂ ಜೀವನ ಮೌಲ್ಯಗಳಿಗೆ ಝಂಕೃತವಾದಲ್ಲಿ ಸಮನ್ವಯ ಸ್ಥಾಪಿಸುವುದು ಅಷ್ಟೇನು ಕಷ್ಟಕರ ವಿಷಯವಲ್ಲ. ಶ್ರದ್ಧೆಯ ಈ ಭಾವನೆಯಿಲ್ಲದಿದ್ದಲ್ಲಿ ಎಲ್ಲಾ ಭಿನ್ನತೆಗಳು ವಿಘಟನೆಗೆ ಜನ್ಮನೀಡುವುದು.

ಸಮನ್ವಯ ಭಾವವನ್ನು ಬಲಿಷ್ಠಗೊಳಿಸಲು ಬೇಕಾಗುವ ಅವಶ್ಯ ಗುಣವೆಂದರೆ ಸಹಿಷ್ಣುತೆ. ಸಹಿಷ್ಣುತೆ ಭಾರತೀಯ ಸಂಸ್ಕೃತಿಯ ಅತಿ ದೊಡ್ಡ ವಿಶೇಷತೆಯಾಗಿದೆ. ಈ ವಿಶೇಷತೆಯಿಂದಾಗಿ ಇಲ್ಲಿ ಅನೇಕ ಸಮುದಾಯಗಳು ನಡೆದುಬಂದಿವೆ. ಯಾರೋ ಶಿವನನ್ನು ಪೂಜಿಸಲಿ ಅಥವಾ ವಿಷ್ಣುವನ್ನು, ಶಕ್ತಿಯನ್ನು ಆರಾಧಿಸಲಿ ಅಥವಾ ಗಣಪತಿಯನ್ನಾಗಲಿ, ಇದರಿಂದ ಯಾವ ಸಂಘರ್ಷವೂ ಉಂಟಾಗಲಿಲ್ಲ.

ಧರ್ಮದ ಹೆಸರಿನಲ್ಲಿ ಯುರೋಪ್ ದೇಶಗಳಲ್ಲಿ ಎಷ್ಟು ರಕ್ತಪಾತವಾಗಿದೆಯೋ ಅಷ್ಟು ಇಲ್ಲಿ ಆಗಲಿಲ್ಲ. ಯಾವುದೇ ಪೈಗಂಬರನನ್ನು ಆಗಲಿ ಅಥವಾ ಯಾವುದೇ ಪುಸ್ತಕವನ್ನು ನಂಬುವುದರಿಂದ ಸ್ವರ್ಗಸಿಗುವುದು ಹಾಗೂ ನಂಬದಿದ್ದಲ್ಲಿ ನರಕವೆಂದು ನಾವು ಹೇಳುವುದಿಲ್ಲ. ಈ ಧಾರ್ಮಿಕ ಅಸಹಿಷ್ಣುತೆ ಭಾರತದ ಸ್ವಭಾವವಲ್ಲ. ಬಲವಂತದಿಂದ ಯಾರದೇ ಧರ್ಮ–ಪರಿವರ್ತನೆ ಮಾಡುವುದು ನಮ್ಮ ಪರಂಪರೆಯಲ್ಲ. ಎಲ್ಲರೂ ತಮ್ಮ–ತಮ್ಮ ಪೂಜಾ ವಿಧಾನಗಳನ್ನು ಪಾಲಿಸುತ್ತಾ ಸ್ವಭಾವದಿಂದ ಬಂದಿರುವ ಕರ್ತವ್ಯಗಳನ್ನು ಆಚರಿಸುತ್ತಾ ಸಿದ್ಧಿಗಳಿಸುವುದೇ ನಮ್ಮ ದೃಷ್ಟಿ. ನಾವು ಸಾಧಕರ ಮನಃಸ್ಥಿತಿ, ಯೋಗ್ಯತೆ ಹಾಗೂ ಪರಿಸ್ಥಿತಿಗಳನ್ನು ವಿಚಾರ ಮಾಡಿ ಅದಕ್ಕಾಗಿ ಸಿದ್ಧಿ–ಮಾರ್ಗವನ್ನು ನಿಶ್ಚಯಗೊಳಿಸುತ್ತೇವೆ. ಅದರಲ್ಲಿ

ಪ್ರಖರ ಜ್ಞಾನವಿದೆ. ಅವು ಜ್ಞಾನ ಮಾರ್ಗವನ್ನವಲಂಬಿಸಿ ಲಕ್ಷ್ಯ ಸಿದ್ಧಿಸಿಕೊಳ್ಳಬಹುದು. ಜ್ಞಾನಕ್ಕೆ ಸಮಾನವಾದ ಹಾಗೂ ಪವಿತ್ರವಾದ ವಸ್ತು ಮತ್ತ್ಯಾವುದಿಲ್ಲ. ಈ ರೀತಿ ಈ ಮಾರ್ಗದ ಶ್ರೇಷ್ಠತೆಯನ್ನು ವರ್ಣಿಸಲಾಗಿದೆ. ಭಾವುಕ ಹೃದಯಗಳಿಗೆ ಭಕ್ತಿ ಮಾರ್ಗವನ್ನನುಸರಿಸುವುದು ಸರಿ ಎನ್ನಲಾಗಿದೆ. ಭಕ್ತನು ತರ್ಕದಿಂದಲ್ಲದೇ ಶ್ರದ್ಧೆಯಿಂದ ಪರಮಾತ್ಮನನ್ನು ಪಡೆಯಬಹುದು. ಅದರಲ್ಲಿ ಪ್ರಬಲ ಕರ್ಮವಿರಬೇಕು, ಅವರು ನಿಸ್ವಾರ್ಥಭಾವದಿಂದ ಕರ್ಮಯೋಗಿಯಾಗಬೇಕು. ಜ್ಞಾನಮಾರ್ಗ ಹಾಗೂ ಭಕ್ತಿಮಾರ್ಗಕ್ಕಿಂತಲೂ ಕರ್ಮಮಾರ್ಗದ ವೈಶಿಷ್ಟ್ಯವನ್ನು ಸ್ವೀಕರಿಸಲಾಗಿದೆ. ಜ್ಞಾನ, ಭಕ್ತಿ ಹಾಗೂ ಕರ್ಮದ ಸಮನ್ವಯದ ಆದರ್ಶವನ್ನು ಸ್ಥಾಪಿಸಲಾಗಿದೆ. ಜ್ಞಾನವಿಲ್ಲದ ಭಕ್ತಿ ಆಡಂಬರವಾಗುತ್ತದೆ. ಕರ್ಮರಹಿತ ಜ್ಞಾನ ವ್ಯರ್ಥ. ಭಕ್ತಿಯಿಲ್ಲದ ಕರ್ಮ ನೀರಸವಾಗುತ್ತದೆ ಹಾಗೂ ಜ್ಞಾನವಿಲ್ಲದ ಕರ್ಮ ಕುರುಡಾಗುತ್ತದೆ. ಈ ರೀತಿ ಭಕ್ತಿ–ಸಮನ್ವಿತ ಜ್ಞಾನಯುಕ್ತ ನಿಷ್ಕಾಮ ಕರ್ಮವೇ ನಮ್ಮ ಆದರ್ಶವಾಗಿದೆ. ಭಾರತೀಯ ಚಿಂತನೆಯ ಈ ಸಾರ ಕೇವಲ ತ್ರಿಕಾಲಾಬಾಧಿತವಲ್ಲದೆ ಸಾರ್ವತ್ರಿಕವೂ ಹೌದು. ವಿಶ್ವದ ಸಮಸ್ತ ಮಾನವ ಸಮುದಾಯಕ್ಕೆ ಲಾಭದಾಯಕವಾಗಿದೆ. ಇದರ ಆರಾಧನೆ ಭಾರತ ವಾಸಿಗಳ ವಿಶೇಷತೆಯಾಗಿದೆ. ಸದ್ಗುಣಸಂಪನ್ನ ಹಾಗೂ ಸಂಪೂರ್ಣ ಸಮರ್ಪಿತ ಭಾವವನ್ನು ಒಳಗೊಂಡ ಜೀವನದ ಈ ಸಾರ ಭಾರತದಲ್ಲಿ ಪ್ರಕಟಗೊಂಡಿತು.

ಹಲವರು ಮೊಟ್ಟಮೊದಲು ಮಾನವತೆಯ ವಿಚಾರವನ್ನು ಕುರಿತು ಮಾತನಾಡಬಯಸುತ್ತಾರೆ. ಅವರ ದೃಷ್ಟಿಯಲ್ಲಿ ಒಂದು ದೇಶ ಅಥವಾ ರಾಷ್ಟ್ರದ ವಿಚಾರ ಮಾಡುವುದು ಸಂಕೀರ್ಣ. ಆದರೆ ಈ ಅನಿಸಿಕೆ ಸರಿಯಲ್ಲ. ದೇಶಭಕ್ತಿ ಹಾಗೂ ಮಾನವತಾ ಸೇವೆಯಲ್ಲಿ ಎಲ್ಲಿಯೂ ಯಾವುದೇ ರೀತಿಯ ವಿರೋಧವಿಲ್ಲ. ಮಾನವತೆಯ ಸೇವೆಗೆ ಪ್ರಥಮ ಸೋಪಾನವೇ ದೇಶಭಕ್ತಿ. ಯಾರಿಗೆ ತಮ್ಮ ಜನನಿ ಹಾಗೂ ಜನ್ಮಭೂಮಿಯ ಬಗ್ಗೆ ಪ್ರೇಮವಿಲ್ಲವೋ ಅವನು ಮಾನವತೆಯ ಸೇವೆ ಹೇಗೆ ಮಾಡುವನು? ಯಾವ ವ್ಯಕ್ತಿ ಸ್ತ್ರೀಯನ್ನು ತಾಯಿಯ ರೂಪದಲ್ಲಿ ಗ್ರಹಿಸಿ ಎಲ್ಲರ ಸೇವೆ ಮಾಡುವ ಪ್ರಯತ್ನ ಮಾಡುತ್ತಾನೆ ಆದರೆ ತನ್ನ ಸ್ವಂತ ತಾಯಿಯ ಸೇವೆಯನ್ನು ಸಂಕೀರ್ಣವೆಂದರೆ ಅವನನ್ನು ಏನೆಂದು ಕರೆಯಬೇಕು? ಎಲ್ಲರ ಸೇವೆ ಮಾಡಿದರೂ ನಮ್ಮ ತಾಯಿಗೆ ಯಾರೂ ಸಮಾನರಲ್ಲ. ತಾಯಿಗೆ ತನ್ನ ಸಂತಾನದ ಬಗ್ಗೆ ಇರುವ ಪ್ರೀತಿ, ಅಕ್ಕರೆ ಅನ್ಯ ಸ್ತ್ರೀಯರ ಸಂತಾನದ ಬಗ್ಗೆ ಇರುವುದಿಲ್ಲ. ಯಾವ ವ್ಯಕ್ತಿ ತನ್ನ ತಾಯಿಯನ್ನು ಸಂಕಟದಲ್ಲಿ ಕಂಡು ಪರರ ತಾಯಿಯ ಸೇವೆ ಮಾಡುತ್ತಾನೆಯೋ ಅವನು ಎಷ್ಟೇ ದೊಡ್ಡ ಆದರ್ಶವಾದದಿಂದ ಪ್ರೇರಣೆಗೊಂಡಿದ್ದರೂ ವ್ಯಾವಹರಿಕತೆಗೆ ವಿರುದ್ಧವೆಂದೇ ತಿಳಿಯಲಾಗಿರುವುದು. ತನ್ನ ತಾಯಿ ಕುರೂಪಿಯೋ ಅಥವಾ ಸುಂದರಿಯೋ ಎಂದು ಯಾರು ವಿಚಾರ



ಮಾಡುತ್ತಾರೆ? ಇವಳು ನಮ್ಮ ತಾಯಿ. ಅದಕ್ಕಾಗಿ ಅವಳು ವಂದನೀಯಳು. ಆದರಕ್ಕೆ ಪಾತ್ರಳು ಹಾಗೂ ಅಭಿನಂದನೀಯಳು. ಇದರಲ್ಲಿ ತಾಯಿ ಅಥವಾ ಅವಳ ಯಾವುದೇ ಉಪಯೋಗವನ್ನು ಕುರಿತು ಯಾರೂ ಲೆಕ್ಕಾಚಾರದ ವಿಚಾರ ಮಾಡುವುದಿಲ್ಲ. ತಾಯಿಯ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಅವಳ ಪುತ್ರ ತಾಯಿಯ ಯಾವುದೇ ಪ್ರಯೋಜನವನ್ನು ವಿಚಾರಮಾಡಿ ಅವಳ ಸ್ವಾಭಿಮಾನಕ್ಕೆ ಪೆಟ್ಟು ಮಾಡುವ ಕಾರಣವನ್ನು ದೂರ ಮಾಡುವುದಿಲ್ಲ. ತಾಯಿಯ ಉಪಯೋಗ ಹಾಗೂ ಅನುಪಯೋಗವನ್ನು ಕುರಿತು ವಿಚಾರ ಮಾಡುವುದೇ ಮಾತೃಭಕ್ತಿ–ಭಾವನೆಗೆ ವಿರುದ್ಧವಾಗಿದೆ. ನಮ್ಮ ಪ್ರಧಾನಮಂತ್ರಿಗಳ ಹೇಳಿಕೆ ಹೀಗಿದೆ, ಚೈನಾ ಯಾವ ಭೂಮಿಯ ಮೇಲೆ ಅಧಿಕಾರ ಪಡೆದಿದೆಯೋ, ಅದು ಬಂಜರು, ಜನಶೂನ್ಯ, ಅಲ್ಲಿ ಹುಲ್ಲುಕೂಡ ಬೆಳೆಯಲಾಗುವುದಿಲ್ಲ ಅದಕ್ಕಾಗಿ ಸಂಘರ್ಷ ಮಾಡಲಾಗುವುದಿಲ್ಲ. ಇದು ಮಾತೃಭಕ್ತಿ–ಭಾವನೆಗೆ ವಿರುದ್ಧವಾಗಿದೆ. ನಾವು ಭಾರತವನ್ನು ಮಾತೆಯ ರೂಪದಲ್ಲಿ ಗ್ರಹಿಸಿದ್ದೇವೆ. ಇದರ ಕಣ–ಕಣವೂ ನಮಗೆ ಪವಿತ್ರವಾಗಿದೆ. ಇದರ ಕಣ–ಕಣದಲ್ಲಿ ಪವಿತ್ರ ಶಕ್ತಿಯಿದೆ. ಸ್ವಾಮಿ ವಿವೇಕಾನಂದರು ವಿಶ್ವದಲ್ಲೆಲ್ಲಾ ಭಾರತೀಯ ಧರ್ಮ, ಸಂಸ್ಕೃತಿ ಹಾಗೂ ದರ್ಶನದ ವಿಜಯ–ವೈಜಯಂತಿಯನ್ನು ಹಾರಿಸಿ ಭಾರತಕ್ಕೆ ಮರಳಿ ಬಂದಾಗ ಅವರು ಮದ್ರಾಸಿನ ಭೂಮಿಯ ಮೇಲೆ ಇಳಿದೊಡನೆಯೇ ಸ್ವದೇಶದ ಮಣ್ಣಿನಲ್ಲಿ ಹೊರಳಾಡಿದರು. ಒಬ್ಬ ವೇದಾಂತಿಯ ಈ ರೀತಿಯ ಭಾವಪೂರ್ಣ ಆಚರಣೆಯನ್ನು ಕಂಡು ಎಲ್ಲರೂ ಆಶ್ಚರ್ಯಚಕಿತಗೊಂಡಿದ್ದರು. ನಂತರ ಅಲ್ಲಿ ಉಪಸ್ಥಿತರಾಗಿದ್ದ ಜನರ ಆಶ್ಚರ್ಯವನ್ನು ಶಮನಗೊಳಿಸುತ್ತಾ ಹೀಗೆ ಹೇಳಿದರು – ನಾನು ಬಹಳ ಸಮಯದಿಂದ ವಿದೇಶ ಪ್ರವಾಸ ಮಾಡುತ್ತಿದ್ದೆನು. ಈ ಅವಧಿಯಲ್ಲಿ ಅನೇಕ ರೀತಿಯ ಜನರ ಸಂಪರ್ಕ ಉಂಟಾಯಿತು. ಅನೇಕ ದೇಶಗಳಲ್ಲಿ ಸುತ್ತಾಡಿದೆನು. ಅದರಿಂದ ನನ್ನ ಶರೀರದಲ್ಲಿ ಸ್ವಲ್ಪ ವಿಕೃತಿಯುಂಟಾಗುವ ಸಾಧ್ಯತೆಯಿದೆ. ನಾನು ಈ ಆಚರಣೆಯಿಂದ ಆ ಎಲ್ಲಾ ವಿಕೃತಿಗಳನ್ನು ದೂರ ಮಾಡುತ್ತಿದ್ದೇನೆ.

ಅವರ ಹೃದಯದಲ್ಲಿ ಭಾರತದ ಬಗ್ಗೆ ಎಷ್ಟು ಶ್ರದ್ಧೆ ಇತ್ತು. ನಾವು ಇಂಗ್ಲೆಂಡಿನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅಲ್ಲಿ ಸೂರ್ಯನ ದರ್ಶನವೂ ವರ್ಷದಲ್ಲಿ ೧೦–೨೦ ಬಾರಿಗಿಂತಲೂ ಹೆಚ್ಚು ಆಗುವುದಿಲ್ಲ. ಜನರು ಚಳಿಯಲ್ಲಿ ನಡುಗುತ್ತಿರುತ್ತಾರೆ. ಹೊಟ್ಟೆ ತುಂಬುವಷ್ಟು ಅನ್ನವನ್ನು ಬೆಳೆಯಲಾಗುವುದಿಲ್ಲ. ಅನ್ನಕ್ಕಾಗಿ ಅವರು ಬೇರೆ ದೇಶಗಳನ್ನು ಅವಲಂಬಿಸಬೇಕಾಗುತ್ತದೆ. ಆದರೂ ಯಾವುದೇ ಆಂಗ್ಲನನ್ನು ಈ ಪ್ರಶ್ನೆ ಕೇಳಿದರೆ, ಪ್ರಪಂಚದ ಯಾವ ದೇಶ ನಿನಗೆ ಹೆಚ್ಚು ಪ್ರಿಯ? ಎಂದು ಕೇಳಿದಾಗ ಅವನು ಯೋಚಿಸದೆ ಉತ್ತರ ನೀಡುತ್ತಾನೆ, "ಇಂಗ್ಲೆಂಡ್ ನನ್ನ ಅಚ್ಚುಮೆಚ್ಚಿನ ದೇಶ" ಆಂಗ್ಲ ಕವಿಯೊಬ್ಬನು ಸಹ ಹೀಗೆ

ಹೇಳಿದಾಗ, 'England : with all thy faults I love the.' ಹಾಗಿದ್ದಲ್ಲಿ ಅವನು ಇದೇ ಭಾವವನ್ನು ಪ್ರದರ್ಶಿಸಿದ್ದಾನೆ. ದೌರ್ಭಾಗ್ಯದಿಂದ ನಮ್ಮ ರಾಷ್ಟ್ರೀಯ ಜೀವನದಲ್ಲಿ ಮಾತೃಭಕ್ತಿಯ ಅಭಾವದಿಂದ ಅನೇಕ ವಿಕೃತಿಗಳುಂಟಾಗಿವೆ. ಪಾಕಿಸ್ಥಾನದ ನಿರ್ಮಾಣ ಆ ವಿಕೃತಿಯ ದೊಡ್ಡ ಉದಾಹರಣೆ. 'ಕೇವಲ ಮುಸಲ್ಮಾನರ ರಾಜ್ಯವೇ ಪವಿತ್ರ– ಉಳಿದುದ್ದೆಲ್ಲಾ ಅಪವಿತ್ರ' ಎನ್ನುವ ಮುಸಲ್ಮಾನರ ದೃಷ್ಟಿ ರಾಷ್ಟ್ರಭಕ್ತಿಯ ಅಭಾವವನ್ನು ಸೂಚಿಸುತ್ತದೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಈ ವಿಕೃತಿಯನ್ನು ದೂರ ಮಾಡಲಾಗಲಿಲ್ಲ. ಆದುದರಿಂದ ಭಾರತಮಾತೆಯ ಅಂಗವನ್ನು ಕತ್ತರಿಸಿ ಪಾಕಿಸ್ತಾನವನ್ನು ಮಾಡಲಾಯಿತು. ಭಾರತ ಸ್ವಾತಂತ್ರ್ಯವನ್ನು ಪಡೆದ ನಂತರ ಸಹ ಜಣರ್ಭಾಗ್ಯದಿಂದ ರಾಷ್ಟ್ರಭಕ್ತಿಯ ಶುದ್ಧ ಭಾವನೆಯನ್ನು ಜನರಲ್ಲಿ ಮೂಡಿಸಲಾಗಲಿಲ್ಲ. ನಾಗಾಲ್ಯಾಂಡ್‌ನ ನಿರ್ಮಾಣವೂ ಇದರ ಪರಿಣಾಮವೇ ಆಗಿದೆ. ನಾಗಾ ಜನರೊಡನೆ ಶಾಂತಿಯ ಮಾತುಕತೆ ಕುರಿತು ಸಮಾಧಾನ ವ್ಯಕ್ತಪಡಿಸುತ್ತಾ ನಮ್ಮ ದೇಶದ ಪ್ರಧಾನಿ ಹೀಗೆ ಹೇಳಿದರು, "ನಾಗಾ ಜನರನ್ನು ಭಾರತೀಯ ಸಮಾಜದ ಸಹಭಾಗಿಗಳನ್ನಾಗಿಸಲಾಗಿದೆ." ಈ ಉಕ್ತಿಯಲ್ಲಿ ನಾಗರು ಮೊದಲು ನಮ್ಮ ಸಹಭಾಗಿಗಳಾಗಿರಲಿಲ್ಲವೆಂಬ ಭಾವ ಅಡಗಿದೆ. ನಾಗಲ್ಯಾಂಡ್‌ಗೆ ಸಂಸತ್ತಿನ ಒಪ್ಪಿಗೆ ದೊರೆಯಿತು. ಅದರೊಡನೆ ಅಸ್ಸಾಂನ ಗುಡ್ಡಗಾಡಿನ ಭಾಗಗಳಲ್ಲಿ ಭಿನ್ನ–ಭಿನ್ನ ಪರ್ವತೀಯ ರಾಜ್ಯಗಳ ಬೇಡಿಕೆ ಹೆಚ್ಚಾಗತೊಡಗಿತು. ಚೈನಾದವರು ಸಾವಿರಾರು ಚದುರ ಮೈಲಿ ಭೂಮಿಯನ್ನು ಆಕ್ರಮಿಸಿದ್ದಾರೆ. ಈ ಸತ್ಯವನ್ನು ಕಡೆಗಣಿಸಿ ದೇಶದ ಕೆಲವು ಜನರಿಗೆ ಬಹು ಸಮಯದವರೆಗೂ ಚೈನಾ ಆಕ್ರಮಣ ಮಾಡಿದೆಯೋ ಅಥವಾ ಇಲ್ಲವೋ ಎಂದು ನಿರ್ಣಯ ಮಾಡಲಾಗಲಿಲ್ಲ. ಈ ರೀತಿಯ ಎಲ್ಲಾ ದುರವಸ್ಥೆ ನಿಜವಾದ ಮಾತೃಭಕ್ತಿಯ ಅಭಾವದಿಂದ ಉಂಟಾಗುತ್ತದೆ.

ಈ ವಿಕೃತಿಯನ್ನು ದೂರಗೊಳಿಸುವ ಉಪಾಯ ನಮ್ಮ ಸಂಸ್ಕೃತಿಯ ಬಳಿಯಿದೆ. ನಮ್ಮ ಸಂಸ್ಕೃತಿಯ ಆಧಾರ ಭೋಗವಲ್ಲದೇ ತ್ಯಾಗವಾಗಿದೆ. ತ್ಯಾಗದಿಂದ ಅಮರತ್ವವನ್ನು ಪಡೆಯಬಹುದು. ರಾಮಚಂದ್ರನು ಲಂಕಾನಗರವನ್ನು ಗೆದ್ದು ಅದನ್ನು ವಿಭೀಷಣನಿಗೆ ನೀಡಿದನು. ಅವನಿಗೆ ಸ್ವರ್ಣಮಯ ಲಂಕಾನಗರಕ್ಕಿಂತಲೂ ತನ್ನ ಮಾತೃಭೂಮಿ ಅಯೋಧ್ಯಾನಗರವೇ ಆಕರ್ಷಿಸಿತು. ಏಕೆಂದರೆ ಜನನಿ ಹಾಗೂ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದವು.

ಛತ್ರಪತಿ ಶಿವಾಜಿ ಜಯಸಿಂಹನಿಗೆ ಪತ್ರ ಬರೆದು ನೀವು ಮೊಘಲರ ಸಹವಾಸ ಬಿಟ್ಟುಬಿಡಿ, ನಂತರ ಈ ಎಲ್ಲಾ ರಾಜ್ಯವನ್ನು ನೀವೇ ಆಳಿ. ನನಗೆ ರಾಜ್ಯದ ಹಸಿವು ಇಲ್ಲ ಎಂದು ಹೇಳಿದರು. ಭರತನು ರಾಮಚಂದ್ರನ ಪಾದುಕೆಗಳನ್ನು ರಾಜ್ಯ ಸಿಂಹಾಸನದ ಮೇಲೆ ಇರಿಸಿ ತಾನು ನಂದಿಗ್ರಾಮದಲ್ಲಿ ತಪಸ್ವಿಯ ಹಾಗೆ



ಜೀವನ ನಡೆಸುತ್ತಾ ರಾಜ್ಯಕಾರ್ಯ ನಿರ್ವಹಿಸಿದನು. ಚಾಣಕ್ಯನು ಚಂದ್ರಗುಪ್ತನಿಗಾಗಿ ಒಂದು ವಿಶಾಲ ಸಾಮ್ರಾಜ್ಯವನ್ನು ನಿರ್ಮಿಸಿದನು. ಆದರೆ ನಿಸ್ಪೃಹ ಕರ್ಮಯೋಗಿಯ ಹಾಗೆ ರಾಜ್ಯದಿಂದ ದೂರವಿದ್ದ. ಇಂದು ನಮ್ಮ ರಾಜಕೀಯ ಜೀವನದಲ್ಲಿ ಯಾವ ವಿಕೃತಿಗಳು ಕಂಡುಬರುತ್ತಿವೆಯೋ, ಅವು ಬಿಗುವಿಲ್ಲದಿರುವುದರಿಂದ ಉತ್ಪನ್ನವಾಗಿವೆ. ಸೇವೆಯ ಸ್ಥಾನವನ್ನು ಅಧಿಕಾರವು ಗ್ರಹಿಸಿದೆ. ಜೀವನವನ್ನು ಅತ್ಯಧಿಕ ಭೌತಿಕ ದೃಷ್ಟಿಯಿಂದ ನೋಡುವ ಕಾರಣದಿಂದ ಅನೇಕ ವಿಕೃತಿಗಳು ಉತ್ಪನ್ನವಾಗಿವೆ. ಮಾನವೀಯ ಭಾವನೆಗಳು ಹಾಗೂ ಜೀವನ ಮೌಲ್ಯಗಳ ಮಹತ್ವ ಕಡಿಮೆಯಾಗಿದೆ. ಇಂದು ವ್ಯಕ್ತಿಯ ಪ್ರತಿಷ್ಠೆಗೆ ಕಾರಣ ಅವನ ನಡತೆ, ಯೋಗ್ಯತೆ ಹಾಗೂ ಗುಣಗಳಲ್ಲ. ಹಣವೇ ಪ್ರತಿಷ್ಠೆಗೆ ಮೂಲ ಕಾರಣವಾಗಿದೆ. ಇದು ವಿಕೃತಿಗೆ ಕಾರಣವಾಗುತ್ತದೆ. ಹಣ ನಮ್ಮ ಭೌತಿಕ ಆವಶ್ಯಕತೆಗಳ ಪೂರ್ತಿಗೆ ಕೇವಲ ಸಾಧನವೇ ಹೊರತು ಜೀವನದ ಗುರಿಯಲ್ಲವೆಂಬುದನ್ನು ತಿಳಿದು ಮುನ್ನಡೆಯಬೇಕು. ಹೀಗೆ ಜೀವನದ ಬಗ್ಗೆ ನಮ್ಮ ದೃಷ್ಟಿಯನ್ನು ಬದಲಾಯಿಸಬೇಕು. ದೃಷ್ಟಿ ಪರಿವರ್ತನೆ ಭಾರತೀಯ ಸಂಸ್ಕೃತಿ ಆದರ್ಶಗಳನ್ನು ಆಧರಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಈ ಗೌರವಮಯ ಸಂಸ್ಕೃತಿಯ ಪುನರ್ ಪ್ರತಿಷ್ಠಾಪನೆಯಿಂದಲೇ ನಮ್ಮ ರಾಷ್ಟ್ರೋಜ್ಜೀವನ ನಾಲ್ಕೂ ದಿಕ್ಕುಗಳಲ್ಲಿ ಹರಡಿರುವ ವಿಕೃತಿಗಳನ್ನು ಕುಗ್ಗಿಸಿ ಅವುಗಳನ್ನು ನಿರಾಕರಿಸಬಹುದು.

# ೮. ನಮ್ಮ ರಾಷ್ಟ್ರ ಧ್ವಜ

ವಿಶ್ವದಲ್ಲಿಯೇ ಭಾರತ ಎಲ್ಲಕ್ಕಿಂತ ಪ್ರಾಚೀನವಾದ ರಾಷ್ಟ್ರವಾಗಿದೆ. ಪಶ್ಚಿಮದಲ್ಲಿ ಯಾವಾಗ ಹಸಿ ಮಾಂಸದ ಬದಲಾಗಿ ಬೆಂದ ಮಾಂಸವನ್ನು ತಿನ್ನುವುದನ್ನು ಕಲಿತಿದ್ದರೋ, ಅದಕ್ಕೂ ಬಹಳ ಹಿಂದೆಯೇ ನಮ್ಮದೊಂದು ರಾಷ್ಟ್ರವಾಗಿತ್ತು. ಆಸೇತು ಹಿಮಾಲಯ ಹರಡಿರುವ ಈ ಮಾತೃಭೂಮಿಯಲ್ಲಿ ಪುತ್ರನ ರೂಪದಲ್ಲಿ ವಾಸಮಾಡುವ ಈ ಸಮಾಜದ ರಾಷ್ಟ್ರಜೀವನ ಅತಿ ಪ್ರಾಚೀನ ಕಾಲದಿಂದಲೂ ವಿದ್ಯಮಾನವಾಗಿದೆ. ಆದ್ದರಿಂದಲೇ ನಮ್ಮ ಪೂರ್ವಜರು ಭರತವರ್ಷದ ವರ್ಣನೆ ಮಾಡುತ್ತಾ ಹೀಗೆ ಹೇಳಿದ್ದಾರೆ.

**ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್**
**ವರ್ಷಂ ತದ್ ಭಾರತಂ ನಾಮ ಭಾರತೀ ಯತ್ರ ಸಂತತಿಃ ॥**

ಅಂದರೆ ಪೃಥ್ವಿಯ ಯಾವ ಭೂ–ಭಾಗವು ಸಮುದ್ರದ ಉತ್ತರ ಮತ್ತು ಹಿಮಾಲಯದ ದಕ್ಷಿಣದಲ್ಲಿ ಸ್ಥಿತವಾಗಿದೆಯೋ, ಅದು ಭರತವರ್ಷವೆನಿಸಿಕೊಳ್ಳುತ್ತದೆ ಹಾಗೂ ಅದರ ಸಂತತಿಯನ್ನು ಭಾರತೀಯರೆಂದೆನ್ನುತ್ತೇವೆ. ಮಾತೃಭೂಮಿಯ ಈ ಚಿತ್ರ ಸಾವಿರಾರು ವರ್ಷಗಳಿಂದ ಭಾರತೀಯರ ಮನಸ್ಸಿನಲ್ಲಿ ನೆಲೆನಿಂತಿದೆ. ನಿತ್ಯಸ್ನಾನ, ಸಂಧ್ಯಾರಾಧನೆ ಮತ್ತು ಪ್ರತ್ಯೇಕ ಧಾರ್ಮಿಕ ವಿಧಿಗಳಲ್ಲಿ ಮಾತೃಭೂಮಿಯ ಇದೇ ರೂಪದ ಸ್ಮರಣೆ ವಿಭಿನ್ನ ರೀತಿಗಳಲ್ಲಿ ಮಾಡಲಾಗುತ್ತಿದೆ. ಇವೆಲ್ಲವೂ ಪ್ರಾಚೀನ ರಾಷ್ಟ್ರದ ಒಂದು ವಿಶಿಷ್ಟ ಜೀವನ ಪದ್ಧತಿಯಾಗಿದೆ. ಜೀವನದ ಆದರ್ಶ, ಸಂಸ್ಕೃತಿ, ಅನುಭೂತಿ, ಭಾವನೆಗಳು ಮತ್ತು ಪರಂಪರೆಯ ಸಮ್ಮಿಲನದಿಂದ ಏಕರೂಪತೆಯು ಪ್ರಾಪ್ತವಾಗಿದೆ. ಈ ರೀತಿ ವಿಕಾಸಶೀಲ ಸಮಾಜ ಈ ಭೂಮಿಯ ಸಂತಾನದ ರೂಪದಲ್ಲಿ ಸಾವಿರಾರು ವರ್ಷಗಳಿಂದ ವಾಸಮಾಡುತ್ತಾ ಬಂದಿದೆ. ನಮ್ಮ ರಾಷ್ಟ್ರೀಯ ಪರಂಪರೆ ಅನಾದಿಕಾಲದಿಂದಲೂ ಇದೆ. ಅತಿ ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ನಮ್ಮ ಎಲ್ಲಾ ಮಹಾನ್ ಪುರುಷರು ತಮ್ಮ–ತಮ್ಮ ಜೀವನದ ಉದಾಹರಣೆಗಳಿಂದ ಈ ಪರಂಪರೆಗೆ ಪುಷ್ಟ ನೀಡಿದ್ದಾರೆ. ಜೀವನದ ಆದರ್ಶ ಮತ್ತು ಮಾತೃಭೂಮಿಯ ಬಗ್ಗೆ ಅನನ್ಯ ಶ್ರದ್ಧೆಯ ಸಮಾನ ಪರಂಪರೆಗಳನ್ನು ಜಾಗೃತವಾಗಿರಿಸಲು ವಿಭಿನ್ನ ಪ್ರಕಾರದ ಸಂಸ್ಕಾರಗಳ ವ್ಯವಸ್ಥೆಯೂ ಪ್ರಾಚೀನ ಕಾಲದಿಂದ ನಡೆದುಬರುತ್ತಿದೆ. ಈ ಸಂಸ್ಕಾರಗಳಲ್ಲಿ ಬಾಹ್ಯ ರೂಪದಲ್ಲಿ



ಸಮಯಕ್ಕನುಸಾರವಾಗಿ ಕೆಲವು ಪರಿವರ್ತನೆಗಳು ಆಗಿರಬಹುದು ಆದರೆ ಮೂಲ ಭಾವನೆಯಲ್ಲಿ ಯಾವುದೇ ಪರಿವರ್ತನೆಯು ಆಗುವುದಿಲ್ಲ. ರಾಷ್ಟ್ರ–ಭಾವನೆಯನ್ನು ಜಾಗೃತವಾಗಿರಿಸಲು ನಿತ್ಯ ಹಾಗೂ ನೈಮಿತ್ತಿಕ ಎರಡೂ ಪ್ರಕಾರದ ಸಂಸ್ಕಾರಗಳು ಇಂದಿಗೂ ಪ್ರಚಲಿತದಲ್ಲಿವೆ. ನಮ್ಮ ತೀರ್ಥಸ್ಥಾನಗಳು, ಯಾತ್ರೆಗಳು, ವ್ರತ, ಹಬ್ಬ ಮುಂತಾದ ಎಲ್ಲಾ ಈ ಸಂಸ್ಕಾರಗಳನ್ನು ಪ್ರಸ್ತುತಪಡಿಸುವ ಮಾಧ್ಯಮವಾಗಿವೆ. ಈ ಸಂಸ್ಕಾರಗಳ ಮೂಲಕ ನಮ್ಮ ಮನಸ್ಸಿನಲ್ಲಿ ರಾಷ್ಟ್ರದ ಬಗ್ಗೆ ಶ್ರದ್ಧೆಯ ಭಾವನೆಯು ಉಂಟಾಗಿದೆ. ರಾಷ್ಟ್ರದ ಬಗ್ಗೆ ನಮ್ಮ ಧೋರಣೆಯು ದೃಢವಾಗುತ್ತದೆ. ನಮ್ಮ ಸಂಸ್ಕೃತಿಯ ವಿಶೇಷತೆಗಳು, ಚರಿತ್ರೆ, ಭಾಷೆ, ನಾಗರಿಕತೆ ಮುಂತಾದ ಎಷ್ಟೋ ವಿಚಾರಗಳು ಈ ರಾಷ್ಟ್ರಧೋರಣೆಯ ಅಡಿಯಲ್ಲಿಯೇ ಚೈತನ್ಯ ಪಡೆಯುತ್ತವೆ. ರಾಷ್ಟ್ರಕ್ಕೆ ಸಂಬಂಧಿಸಿದ ನಮ್ಮ ಈ ಪ್ರೀತಿಯನ್ನು ನಾವು ಯಾವಾಗಲೂ ಶಬ್ದಗಳಲ್ಲೇ ವ್ಯಕ್ತಪಡಿಸಬಲ್ಲೆವೆನ್ನುವುದರಲ್ಲಿ ಹುರುಳಿಲ್ಲ. ಎಷ್ಟೋ ಬಾರಿ ನಾವು ರಾಷ್ಟ್ರದ ಬಗ್ಗೆ ನಮ್ಮ ಈ ಸ್ವಂತಿಕೆಯನ್ನು ವ್ಯಕ್ತಪಡಿಸುವ ಕಾರಣಗಳನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಲಾರೆವು. ರಾಷ್ಟ್ರದ ಬಗ್ಗೆ ಇರುವ ನಮ್ಮ ಈ ಭಕ್ತಿಭಾವನೆಯು ನಮ್ಮ ಪ್ರತಿಯೊಂದು ನಡವಳಿಕೆಯಲ್ಲಿ ಅಡಗಿರುತ್ತದೆ. ಮನದಲ್ಲಿ ಅದು ಕಲ್ಪನೆಯಂತೆ ಹುದುಗಿರುತ್ತದೆ. ಈ ಅಮೂರ್ತ ಕಲ್ಪನೆಯನ್ನು ತಮ್ಮ ಕಣ್ಣುಗಳ ಮುಂದೆ ಉಪಸ್ಥಿತಿವಾಗಿರಿಸುವುದಕ್ಕಾಗಿಯೇ ವಿಭಿನ್ನ ಪ್ರಕಾರದ ಸಾಧನಗಳ ಪ್ರಯೋಗ ಮಾಡಲಾಗುತ್ತದೆ. ರಾಷ್ಟ್ರದ ಬಗ್ಗೆ ನಮ್ಮ ಭಕ್ತಿಯನ್ನು ಪ್ರಕಟಗೊಳಿಸುವ ಅವಕಾಶ ಸಿಗಲೆಂದು ರಾಷ್ಟ್ರಕ್ಕೆ ಸಂಬಂಧಿಸಿದಂತೆ ನಮ್ಮ ಆಂತರಿಕ ಭಾವನೆಯನ್ನು ನಾವು ಪ್ರಕಟಗೊಳಿಸಲು ಬಯಸುತ್ತೇವೆ. ಯಾವ ರೀತಿ ನಿರಾಕಾರ ಪರಬ್ರಹ್ಮನ ಬಗ್ಗೆ ಭಕ್ತಿಯನ್ನು ವ್ಯಕ್ತಪಡಿಸಲು ಭಕ್ತನು ಮೂರ್ತಿಯ ಮೊರೆಹೋಗುತ್ತಾನೋ, ಹಾಗೆಯೇ, ಈ ವಿಚಾರವೂ ಸಹ. ಇದರಿಂದಾಗಿಯೇ ರಾಷ್ಟ್ರಕ್ಕೆ ಸಂಬಂಧಿಸಿದ ಭಕ್ತಿಯ ಸಂಸ್ಕಾರಗಳನ್ನು ದೃಢಗೊಳಿಸಲು ಕೆಲವು ಮಾಧ್ಯಮಗಳ ಆಲಂಬನೆ ಪಡೆಯಲಾಗುತ್ತದೆ.

ರಾಷ್ಟ್ರಕ್ಕೆ ಸಂಬಂಧಿಸಿದ ಈ ಅಮೂರ್ತ ಭಕ್ತಿ–ಭಾವನೆಗಳಿಗೆ ಮೂರ್ತ ಸ್ವರೂಪವನ್ನು ನೀಡಲು ಎಲ್ಲಕ್ಕಿಂತ ಹೆಚ್ಚು ವ್ಯಾಪಕವಾದ ಸಾಧನವೆಂದರೆ ನಮ್ಮ ಪರಮ ಪವಿತ್ರವಾದ ರಾಷ್ಟ್ರ ಧ್ವಜ. ಪ್ರತ್ಯೇಕ ರಾಷ್ಟ್ರಕ್ಕೂ ಧ್ವಜವಿರುತ್ತದೆ. ರಾಷ್ಟ್ರದ ಪ್ರತೀಕವಾಗಿ ಅದು ಪ್ರತಿಯೊಬ್ಬರಿಗೂ ಪ್ರೇರಣೆ ನೀಡುತ್ತದೆ. ನಮ್ಮದೂ ಒಂದು ರಾಷ್ಟ್ರಧ್ವಜವಿದೆ ಅದು ಇಂದಿನಿಂದಲ್ಲ, ಅನಾದಿ ಕಾಲದಿಂದಲೂ ಪ್ರಚಲಿತವಾಗುತ್ತಾ ಇದೆ. ರಾಷ್ಟ್ರಧ್ವಜದಲ್ಲಿ ನಾವು ನಮ್ಮ ದೇಶದ ಸಮಗ್ರ ಇತಿಹಾಸ ಪ್ರತಿಬಿಂಬಿತವಾಗಿರುವುದನ್ನು ಕಾಣುತ್ತೇವೆ. ಇದು ಕೇವಲ ಒಂದು ಬಟ್ಟೆಯ ತುಂಡಲ್ಲ. ಒಂದು ವೇಳೆ ಹಾಗಾಗಿದ್ದರೆ ಇದನ್ನು ನೋಡಿ ಈ ರೀತಿ ಶ್ರದ್ಧೆಯಿಂದ

ನಮ್ಮ ತಲೆ ಬಾಗುತ್ತಿರಲಿಲ್ಲ. ಬಣ್ಣ ಹಾಗೂ ಬಟ್ಟೆಯ ಅನೇಕ ಪ್ರಕಾರದ ಧ್ವಜಗಳು ತೂಗುತ್ತಿದ್ದರೂ ನಾವು ಅವುಗಳಲ್ಲಿ ಈ ಪ್ರಕಾರದ ಶ್ರದ್ಧೆಯನ್ನು ವ್ಯಕ್ತಪಡಿಸಲಾರೆವು. ಅದರಲ್ಲಿ ನಮಗೆ ಸ್ಫೂರ್ತಿಯೂ ಸಿಗಲಾರದು. ಆದರೆ ಈ ಧ್ವಜದ ಮುಂದೆ ನಾವು ಶ್ರದ್ಧಾವಂತರಾಗಿಬಿಡುತ್ತೇವೆ. ಆದ್ದರಿಂದಲೇ ಇದು ನಮ್ಮ ರಾಷ್ಟ್ರದ ಮೂರ್ತಸ್ವರೂಪವಾಗಿದೆ. ರಾಷ್ಟ್ರದ ಭೂತ, ವರ್ತಮಾನ ಮತ್ತು ಭವಿಷ್ಯ ಅದರಲ್ಲಿ ಅಡಗಿರುವಂತೆ ಕಂಡುಬರುತ್ತದೆ. ಇದೇ ನಮ್ಮ ಸಾಂಸ್ಕೃತಿಕ ಪರಂಪರೆಯ ಸಂಕೇತ.

ಯಾವ ರಾಷ್ಟ್ರಜೀವನದ ಪ್ರತೀಕವಾಗಿ ಈ ಧ್ವಜವಿದೆಯೋ ಆ ರಾಷ್ಟ್ರ ಜೀವನ ಹಿಂದೂ ಜೀವನವೇ ಆಗಿದೆಯೆಂದು ಹೇಳುವ ಆವಶ್ಯಕತೆಯೇನೂ ಇಲ್ಲ. ಹಿಂದುತ್ವದ ಪರಂಪರೆಯೇ ಈ ದೇಶದ ಪರಂಪರೆಯಾಗಿದೆ. ಇದು ಒಂದು ಐತಿಹಾಸಿಕವಾದ ವಾಸ್ತವಿಕತೆ. ಅತಿ ಪ್ರಾಚೀನ ವೇದಕಾಲದಿಂದಲೂ ಮಾತೃಭೂಮಿಗಾಗಿ ಪ್ರೇಮ ಹಾಗೂ ಭಕ್ತಿಯ ಆದರ್ಶ ಮತ್ತು ಪರಂಪರೆಗಳನ್ನು ನಿಶ್ಚಿತಗೊಳಿಸಿದವರು ಹಿಂದೂ ಸಮಾಜದ ಪೂರ್ವಜರೇ ಆಗಿದ್ದರು ಎಂಬುದು ಸ್ಪಷ್ಟ. ಅವರು ಮಾತೃಭೂಮಿಯ ಸಜೀವ ಅಖಂಡ ಪ್ರತಿಮೆಯನ್ನು ಸಮಾಜದ ಮಾನಸಿಕತೆಯಲ್ಲಿ ಸದಾ ಉಜ್ವಲವಾಗಿರಿಸುವ ಕಾರಣದಿಂದಾಗಿ ವಿವಿಧ ಕರ್ತವ್ಯಗಳು ಮತ್ತು ಕೃತ್ಯಗಳನ್ನು ನಿರ್ದಿಷ್ಟಗೊಳಿಸಿದರು. ನಮ್ಮ ಮಾತೃಭೂಮಿಯ ಅಖಂಡತೆ ಹಾಗೂ ಪವಿತ್ರತೆಯ ರಕ್ಷಣೆಗಾಗಿ ತಮ್ಮ ರಕ್ತ ಹರಿಸಿದವರೂ ಇವರೇ. ಈ ವಾಸ್ತವಾಂಶಕ್ಕೆ ಸಾವಿರಾರು ವರ್ಷಗಳ ಚರಿತ್ರೆಯೇ ಸಾಕ್ಷಿಯಾಗಿದೆ. ಆದ್ದರಿಂದ ಯಾವ ರೀತಿ ಇದು ಅನಾದಿಕಾಲದಿಂದಲೂ ನಡೆದು ಬರುತ್ತಿರುವ ರಾಷ್ಟ್ರೀಯ ಪರಂಪರೆಯಾಗಿದೆಯೋ ಅದೇ ರೀತಿ ಇದು ಈ ಭಕ್ತಿ–ಭಾವನೆಯನ್ನು ವ್ಯಕ್ತಪಡಿಸುವ ರಾಷ್ಟ್ರ–ಧ್ವಜವೂ ಹಿಂದಿನಿಂದಲೂ ನಮ್ಮ ರಾಷ್ಟ್ರದಲ್ಲಿ ಇದ್ದೇ ಇದೆ.

ಈ ಧ್ವಜದ ಅಂದರೆ ನಮ್ಮ ರಾಷ್ಟ್ರಜೀವನದ ಮೂರ್ತರೂಪದ ಪ್ರತೀಕದ ನಿರ್ಮಾಣ ಯಾವಾಗ ಆಯಿತೆಂದು ಹೇಳುವುದು ಕಷ್ಟ. ಇದರ ನಿರ್ಮಾಣದ ಕಥೆ ಚರಿತ್ರೆಯಲ್ಲಿ ಸಿಗದು. ಯಾವಾಗ ಇದರ ಬಣ್ಣ ಮತ್ತು ಈ ಆಕಾರದ ಧ್ವಜವನ್ನು ನಿಶ್ಚಯಿಸಿದರೆಂಬುದೂ ತಿಳಿಯುತ್ತಿಲ್ಲ. ಆದರೆ ಪ್ರಾಚೀನ ಗ್ರಂಥಗಳಲ್ಲಿ ಕೇಸರಿ ಧ್ವಜದ ಉಲ್ಲೇಖ ದೊರೆಯುತ್ತದೆ. ವೇದಗಳಲ್ಲಿಯೂ ಇದರ ಉಲ್ಲೇಖ 'ಅಗ್ನಿ ಕೇತವಃ' ಎಂಬ ಹೆಸರಿನಿಂದಾಗಿದೆ. ಅಗ್ನಿಯ ಬಣ್ಣ ಈ ಧ್ವಜದ ಉದ್ದೇಶವೇ ಆಗಿದೆ. ನಾವೆಲ್ಲರೂ ನಮ್ಮ ಸಂಸ್ಕೃತಿಯಲ್ಲಿ ಯಜ್ಞಕ್ಕೆ ಬಹು ದೊಡ್ಡ ಸ್ಥಾನ ಪ್ರಾಚೀನ ಕಾಲದಿಂದಲೂ ಇದೆ ಎಂಬುದನ್ನು ತಿಳಿದೇ ಇದ್ದೇವೆ. ಎಲ್ಲಿಯವರೆಗೆಂದರೆ ಭಾರತೀಯ ಸಂಸ್ಕೃತಿಯನ್ನು ಯಜ್ಞಸಂಸ್ಕೃತಿ ಎಂದೂ ಹೇಳಲಾಗಿದೆ. ಆರ್ಯ ಜಾತಿಯ ಸಂಪೂರ್ಣ ಜೀವನ ಯಜ್ಞಪ್ರಧಾನವಾಗಿತ್ತು. ಯಜ್ಞದ ಕಾರಣದಿಂದಾಗಿ



ಋಷಿ–ಮುನಿಗಳು ಒಗ್ಗೂಡುತ್ತಿದ್ದರು ಮತ್ತು ಪರಸ್ಪರ ವಿಚಾರ–ವಿನಿಮಯ ಮಾಡುತ್ತಾ ಜೀವನದ ಸಮಸ್ತ ಸಮಸ್ಯೆಗಳನ್ನು ಪರಿಹರಿಸುತ್ತಾ ಹೊಸ ವಿಚಾರ ಮಾಡುತ್ತಿದ್ದರು. ಇವೇ ಯಜ್ಞಸ್ಥಳಗಳಲ್ಲಿ ನಾವು ಸಮಾಜದ ಲೌಕಿಕ ಮತ್ತು ಪಾರಲೌಕಿಕ ಎಲ್ಲಾ ಪ್ರಕಾರದ ಉನ್ನತಿಯ ಮಾರ್ಗವನ್ನು ಹುಡುಕಿ ತೆಗೆದೆವು. ಇದೇ ನಮ್ಮ ಪ್ರತೀಕವಾಗಿತ್ತು ಹಾಗೂ ಯಾವ ಜನರು ಈ ಸಂಸ್ಕೃತಿಯನ್ನೂ ಸಂಸ್ಕೃತಿಯನ್ನು ನಾಶ ಮಾಡಲು ಅಪೇಕ್ಷಿಸಿದರೋ ಅವರು ಯಜ್ಞಗಳ ಧ್ವಂಸ ಮಾಡಲು ಪ್ರಯತ್ನಿಸಿದರು. ರಾಕ್ಷಸರ ಮೂಲಕ ಯಜ್ಞಗಳ ಧ್ವಂಸ ಮಾಡುವ ವರ್ಣನೆ ಕಂಡುಬರುತ್ತದೆ. ಅದು ಇದೇ ವಾಸ್ತವಾಂಶದ ದ್ಯೋತಕ. ರಾಕ್ಷಸರು ಯಜ್ಞಗಳನ್ನು ಮಾಡಲು ಬಿಡುತ್ತಿರಲಿಲ್ಲ ಏಕೆಂದರೆ ಯಜ್ಞಗಳಲ್ಲಿ ನಮ್ಮ ಸಂಸ್ಕೃತಿಯು ನೆಲೆಸಿತ್ತು. ನಮ್ಮ ರಾಷ್ಟ್ರದ ಆತ್ಮ ಇದೇ ಯಜ್ಞಗಳಲ್ಲಿ ವಾಸ ಮಾಡುತ್ತಿತ್ತು. ಯಜ್ಞಸಂಸ್ಕೃತಿಯ ವಿಶಾಲತೆಯಿಂದಾಗಿ ಭಾರತದ ಸಾಂಸ್ಕೃತಿಕ ವೈಭವ ಹೆಚ್ಚಾಗುತ್ತಿತ್ತು. ಆದರೆ ಸಮಯವು ಮುಂದೆ ಸಾಗುತ್ತಿದ್ದಂತೆ, ಈ ಯಜ್ಞಗಳನ್ನು ಹೆಚ್ಚು ಸ್ಥಳಗಳಿಗೆ ಕೊಂಡೊಯ್ಯುವುದು ಕಠಿಣವಾಯಿತು. ಯಜ್ಞದ ಮಹತ್ವ ಕಡಿಮೆಯಾಗುತ್ತಾ ಹೋಯಿತು. ಆದ್ದರಿಂದಲೇ ನಮ್ಮ ಸಂಸ್ಕೃತಿಯ ವಿಶೇಷತೆಗಳನ್ನು ಅಖಂಡವಾಗಿರಿಸುತ್ತಾ ಯಜ್ಞದ ಪ್ರತೀಕಸ್ವರೂಪವಾಗಿ ಧ್ವಜದ ಆವಿಷ್ಕಾರವಾಯಿತು. ಅಗ್ನಿಯ ಜ್ವಾಲೆಗಳ ರೂಪದಲ್ಲಿ ಅದೇ ಬಣ್ಣ ಅದೇ ಆಕಾರದಲ್ಲಿ ಇದರ ಪ್ರತಿಷ್ಠಾಪನೆಯಾಯಿತು. ಈ ಧ್ವಜದಿಂದ ನಾವು ನಮ್ಮ ಯಜ್ಞ ಸಂಸ್ಕೃತಿಯನ್ನು ವಿಸ್ತಾರ ಮಾಡುತ್ತಿದ್ದೆವು. ಇದೇ ಧ್ವಜವನ್ನು ಹಿಡಿದು ನಾವು ಯುದ್ಧಗಳಲ್ಲಿ ವಿಜಯಗಳಿಸುತ್ತಿದ್ದೆವು ಯಾವುದನ್ನು ನೋಡಿ ಪ್ರೇರಣೆ ದೊರೆಯುತ್ತಿತ್ತೋ, ಸ್ಫೂರ್ತಿ ಸಿಗುತ್ತಿತ್ತೋ, ಆದರ್ಶ ಹೊಮ್ಮುತ್ತಿತ್ತೋ, ಜೀವನದ ಗುರಿಯ ಸ್ಫೂರ್ತಿಸಿಗುತ್ತಿತ್ತೋ ಮತ್ತು ಯಾವ ಶ್ರೇಷ್ಠ ಮೌಲ್ಯಗಳ ರಕ್ಷಣೆಗಾಗಿ ಹೋರಾಡುತ್ತಿದ್ದ ಸಮಯದಲ್ಲಿ ನಮ್ಮ ವೈಯಕ್ತಿಕ ಜೀವನವನ್ನು ಅರ್ಪಿಸುತ್ತಾ ಹರ್ಷದಿಂದಿರುತ್ತಿದ್ದೆವೋ, ಇವೆಲ್ಲವುಗಳ ಪ್ರತೀಕ ಈ ಧ್ವಜವೇ ಆಗಿತ್ತು. 'ಕೃಣ್ವಂತೋ ವಿಶ್ವಮಾರ್ಯಮ್' ಎಂದು ಧ್ವನಿಯೇರಿಸುತ್ತಾ ಸಂಪೂರ್ಣ ವಿಶ್ವದಲ್ಲಿ ಅಜೇಯರಾಗಲು ಯಾವ ಶ್ರೇಷ್ಠ ಧ್ಯೇಯವು ಪ್ರೇರಣೆ ನೀಡುತ್ತಿತ್ತೋ ಅದು ಈ ಧ್ವಜದಲ್ಲಿ ಪ್ರಕಟವಾಗುತ್ತಿತ್ತು. ಸಂಪೂರ್ಣ ವಿಶ್ವವನ್ನು ಸೌಮ್ಯಗೊಳಿಸಲು, ಅದಕ್ಕೆ ಜ್ಞಾನವನ್ನು ನೀಡಲು ಎಲ್ಲಾ ಪ್ರಕಾರದ ಸಂಕಟಗಳೊಂದಿಗೆ ಹೋರಾಡುವ ಶಕ್ತಿಯೂ ಇದೇ ಧ್ವಜದಿಂದ ದೊರೆತಿದೆ. ಆದಾಗ್ಯೂ ಭಾರತವು ವಿಶ್ವವನ್ನು ಗುಲಾಮನನ್ನಾಗಿಸಲು ಯುದ್ಧ ಮಾಡಲಿಲ್ಲ. ಯುದ್ಧವು ಆತ್ಮರಕ್ಷಣಾರ್ಥವಾಗಿಯೇ ನಡೆಯಿತು. ಆದರೆ ಆತ್ಮರಕ್ಷಣೆಯ ಅರ್ಥ ನಮ್ಮ ತುಚ್ಛ ಐಹಿಕ ಜೀವನದ ರಕ್ಷಣೆಯಲ್ಲ, ನಮ್ಮ ಸಂಸ್ಕೃತಿಯ ರಕ್ಷಣೆಯಾಗಿತ್ತು. 'ಶರೀರ ನಶ್ವರ ಮತ್ತು ಆತ್ಮ ಅಮರ' ಎಂಬ ಸಿದ್ಧಾಂತವನ್ನು

ಒಪ್ಪಿಕೊಳ್ಳುತ್ತಾ ಧರ್ಮ, ಸಂಸ್ಕೃತಿ, ನಾಗರಿಕತೆಯ ರಕ್ಷಣೆಗಾಗಿ ದೊಡ್ಡ-ದೊಡ್ಡ ಬಲಿದಾನಗಳಾಯಿತು. ಈ ಎಲ್ಲಾ ಆದರ್ಶಗಳನ್ನು ನಮ್ಮ ಮುಂದೆ ಪ್ರಸ್ತುತಪಡಿಸುವ ಯಾವುದಾದರೊಂದು ಪ್ರತೀಕವಿದ್ದರೆ ಅದರಿಂದ ಅವಶ್ಯವಾಗಿ ಸ್ಫೂರ್ತಿ ಸಿಗುತ್ತದೆ. ಯಜ್ಞದಂತೆಯೇ ತ್ಯಾಗ, ತಪಸ್ಸು, ಉದ್ಯೋಗ ಮತ್ತು ಉತ್ಸರ್ಗಗಳನ್ನು ಮಾಡುವ ಭಾವವು ಈ ಧ್ವಜದಿಂದ ಪ್ರಾಪ್ತವಾಗಿದೆ. ಆದ್ದರಿಂದಲೇ ಅನಾದಿಕಾಲದಿಂದಲೂ ಇದು ನಮ್ಮ ರಾಷ್ಟ್ರಧ್ವಜವಾಗಿದೆ.

ಈ ಬಣ್ಣದ ವಿಶೇಷತೆಯೆಂದರೆ ಇದು ಸನ್ಯಾಸಿಯ ಬಣ್ಣವಾಗಿದೆ. ಧ್ವಜದ ಬಣ್ಣ ಕೇಸರಿ ಬಣ್ಣವಾಗಿದೆ. ಆದ್ದರಿಂದ ಸನ್ಯಾಸಿಗಳು ಕೇಸರಿ ಬಣ್ಣದ ಬಟ್ಟೆಗಳನ್ನು ಧರಿಸಲು ಪ್ರಾರಂಭಿಸಿದರು. ಅಥವಾ ಸನ್ಯಾಸಿಗಳ ಬಟ್ಟೆಯ ಬಣ್ಣ ಕೇಸರಿಯಾದ ಕಾರಣ ಧ್ವಜದ ಬಣ್ಣವೂ ಕೇಸರಿ ಬಣ್ಣವಾಯಿತು. ಇದನ್ನು ನಿರ್ಧರಿಸುವುದು ಕಠಿಣ. ವಾಸ್ತವದಲ್ಲಿ ಎರಡೂ ಏಕರೂಪವಾದುವೇ ಆಗಿವೆ.

ಸಾಧು-ಸನ್ಯಾಸಿಗಳು ತಮ್ಮ ಜೀವನದ ಸಮಸ್ತ ಮೋಹಗಳನ್ನು ತ್ಯಜಿಸಿ ದೇಶ ಮತ್ತು ಸಮಾಜದ ಕಾರ್ಯಗಳಿಗಾಗಿ ಜೀವನವನ್ನು ನಡೆಸುತ್ತಿದ್ದರು. ನಾಲ್ಕಾರು ಕಡೆ ಸುತ್ತುತ್ತಿದ್ದರು. ಮೂರು ದಿನಕ್ಕಿಂತಲೂ ಹೆಚ್ಚಾಗಿ ಯಾವುದೇ ಸ್ಥಳಗಳಲ್ಲಿ ಉಳಿದುಕೊಳ್ಳುವುದಿಲ್ಲ. ಸತತವಾಗಿ ಜನಸೇವೆಯಲ್ಲಿ ನಿರತರಾಗುತ್ತಿದ್ದರು. ಪರಂಪರಾಗತವಾಗಿ ಈ ಸಾಧು-ಸನ್ಯಾಸಿಗಳು ಸಮಾಜವನ್ನು ಜ್ಞಾನವಂತ, ಸಮರ್ಥ ಮತ್ತು ಸುಖಿಯನ್ನಾಗಿಸಲು ಪ್ರಯತ್ನ ಮಾಡಿದ್ದಾರೆ. ಈ ದೇಶಕ್ಕೆ ರಾಷ್ಟ್ರೀಯತೆಯ ಪಾಠ ಕಲಿಸುವ ಕೆಲಸ ಅವರೇ ಮಾಡಿದ್ದಾರೆ. ಅವರ ತ್ಯಾಗ, ಪರಿಶ್ರಮ, ಸೇವೆಯ ಕಾರಣವೇ ಆಸೇತು ಹಿಮಾಚಲ ಸಂಪೂರ್ಣ ಭರತವರ್ಷದಲ್ಲಿ ಏಕತೆಯ ಸೂತ್ರವನ್ನು ಸ್ಥಾಪಿಸಲಾಗಿದೆ. ಐಹಿಕ ಜೀವನದ ಆಸೆಗಳಿಂದ ಮೇಲೆದ್ದಿರುವ ಅವರ ತ್ಯಾಗಪೂರ್ಣ ವ್ಯಕ್ತಿತ್ವವು ಎಲ್ಲಾ ದಿಶೆಗಳಲ್ಲಿ, ಎಲ್ಲಾ ಪ್ರಾಂತ್ಯಗಳಲ್ಲಿ ಮತ್ತು ಎಲ್ಲಾ ಭಾಷೆಯ ಜನರಲ್ಲಿ ಸಮಾನರೂಪವಾಗಿ ಇಂದಿಗೂ ಪೂಜ್ಯಭಾವದ್ದಾಗಿದೆ. ಸುಂದರವಾದ ಗತಕಾಲದಲ್ಲಿ ಇಂದಿನಂತೆ ಉತ್ತಮ ಸಾಧನಗಳಿರಲಿಲ್ಲ. ಜೀವನದ ಆದರ್ಶಗಳು, ದೃಷ್ಟಿಕೋನದ, ಸಾಹಿತ್ಯದಂತಹ ಭಾವನೆಗಳನ್ನು ನಿರ್ಮಾಣ ಮಾಡುವ ಕಾರ್ಯ ಈ ಸನ್ಯಾಸಿಗಳ ಮೂಲಕವೇ ನೆರವೇರಿತ್ತು. ಆದ್ದರಿಂದ ಈ ಸಮಾಜ ಸಮರ್ಪಿಸುವ ತ್ಯಾಗಿ ಮತ್ತು ನಿಷ್ಕಾಯ ಕರ್ಮಯೋಗಿ ಸನ್ಯಾಸಿಗಳ ಪರಂಪರೆಯನ್ನು ಭಾರತವು ಆದರ್ಶವೆಂದು ಒಪ್ಪಿಕೊಂಡಿದೆ. ಜೀವನದ ಅಪರಿಮಿತ ಸಾಹಸವು ತ್ಯಾಗದಲ್ಲಿ ಅಂಕಿತವಾಗಿದೆ. ದೊಡ್ಡ-ದೊಡ್ಡ ಸಾಮ್ರಾಟರ ರಾಜಮುಕುಟವೂ ಈ ತಪಸ್ವಿಗಳ ಮುಂದೆ ಶರಣಾಗತವಾಗಿದೆ. ಆಂತರಿಕಬಾಹ್ಯವಾಗಿ ಪೂರ್ಣ ನಿಸ್ವಾರ್ಥ, ಸಂಗರಹಿತವಾಗಿದ್ದುಕೊಂಡು ಸಮಸ್ತ ಸಮಾಜದ ಕಲ್ಯಾಣದಲ್ಲಿ ತಮ್ಮ ಜೀವನವನ್ನು ಹೋಮ ಮಾಡುವ ಈ ವೈರಾಗಿಗಳ ಜೀವನ ಸಾಕ್ಷಾತ್ ಯಜ್ಞವೇ



ಆಗಿತ್ತು. ಯಜ್ಞದ ಜ್ವಾಲೆಗಳಂತೆ ಶುದ್ಧರೂ ತೇಜಸ್ವಿಗಳೂ ಆದ ಈ ಸನ್ಯಾಸಿಗಳು ತಮ್ಮ ವೇಷಭೂಷಣವೂ ಅದರದ್ದೇ ಪ್ರತೀಕ ಸ್ವರೂಪವಾದ ಕೇಸರಿ ಬಣ್ಣವನ್ನು ಆರಿಸಿಕೊಂಡರು. ಕೇಸರಿ ವಸ್ತ್ರ ಸನ್ಯಾಸಿಗಳ ವೇಷವಾಯಿತು. ಇದೇ ಆದರ್ಶವನ್ನು ಭಾರತವು ನಮ್ಮ ಮುಂದಿಡುವ ಕಾರಣದಿಂದಾಗಿ ಸನ್ಯಾಸಿಗಳ ಈ ವಸ್ತ್ರವನ್ನೇ ನಮ್ಮ ದೇಶದ ರಾಷ್ಟ್ರಧ್ವಜವೆಂದು ಒಪ್ಪಿಕೊಂಡರು. ರಾಷ್ಟ್ರದ ಆತ್ಮದ ಬಣ್ಣವೇ ಈ ಬಣ್ಣವಾಗಿತ್ತು. ಮೂರ್ತವಾದ ಪವಿತ್ರತೆ ಮತ್ತು ತ್ಯಾಗಪೂರ್ಣ ವ್ಯವಹಾರದ ಸಂದೇಶ ನೀಡುತ್ತಾ ಈ ಕೇಸರಿ ಧ್ವಜವು ಇಂದಿಗೂ ಅದೇ ಆದರ್ಶಗಳ ಕಡೆಗೆ ನಮ್ಮನ್ನು ಪ್ರೇರಿತಗೊಳಿಸುತ್ತದೆ.

ಎಷ್ಟೋ ಇಂತಹ ಅವಕಾಶಗಳು ಎದುರಾದಾಗ ನಾವು ನಮ್ಮ ರಾಷ್ಟ್ರೀಯ ಆದರ್ಶಗಳ ಈ ವಾಸ್ತವಾಂಶದ ಅನುಭೂತಿಯಾಗುತ್ತದೆ. ನಮಗೆ ತಿಳಿಯದೆಯೇ ಕೇಸರಿ ವಸ್ತ್ರಧಾರಿಯಾದ ಯಾವುದೇ ವ್ಯಕ್ತಿಯನ್ನು ಕಂಡಾಗ ನಮ್ಮ ಅಂತಃಕರಣ ಅದರ ಕಡೆಗೆ ಶ್ರದ್ಧೆಯಿಂದ ಆಕರ್ಷಿತವಾಗುತ್ತದೆ. ಇದರ ಕಾರಣವೂ ನಾವು ನಮ್ಮ ರಾಷ್ಟ್ರೀಯ ಪರಂಪರೆಯ ತ್ಯಾಗಪೂರ್ಣ ಜೀವನದ ಬಗ್ಗೆ ಶ್ರದ್ಧಾವಂತರಾಗಿದ್ದೇವೆ ಎಂಬುದೇ ಆಗಿದೆ. ಒಂದು ಕಾಲದ ಘಟನೆಯಿದು. ನಾನು ರೈಲಿನಲ್ಲಿ ಪ್ರವಾಸ ಮಾಡುತ್ತಿದ್ದೆ. ರೈಲು ಗಾಡಿಯಲ್ಲಿ ಬಹಳ ಜನಸಂದಣಿಯಿತ್ತು. ಯಾವ ನಿಲ್ದಾಣದಲ್ಲಿ ಗಾಡಿ ನಿಲ್ಲುತ್ತಿತ್ತೋ ಅಲ್ಲಿ ನೂಕುನುಗ್ಗಲಾಗುತ್ತಿತ್ತು. ಬೋಗಿಯಲ್ಲಿ ಹತ್ತುವುದು – ಇಳಿಯುವುದು ಬಹಳ ಕಠಿಣವಾಗಿತ್ತು. ಬೋಗಿಯಲ್ಲಿ ಸೇನೆಯ ಒಬ್ಬ ವ್ಯಕ್ತಿಯೂ ಕುಳಿತಿದ್ದನು. ಅವನು ಬಾಗಿಲ ಬಳಿಯಲ್ಲೇ ಇದ್ದ ಕಾರಣ ಯಾರನ್ನೂ ಒಳಗೆ ಬರಲು ಬಿಡುತ್ತಿರಲಿಲ್ಲ. ಜನಸಂದಣಿಯೂ ಎಷ್ಟೊಂದಿತ್ತೆಂದರೆ ಅದನ್ನು ಸಹ ದೂಷಿಸಲಾರೆವು. ಆದರೆ ಒಂದು ನಿಲ್ದಾಣದಲ್ಲಿ ಒಬ್ಬ ಸಾಧುವು ಬೋಗಿಯೊಳಗೆ ಹತ್ತುವುದನ್ನು ನೋಡಿ ಆ ಸೈನಿಕನು ಇತ್ತ-ಅತ್ತ ಜನರನ್ನು ತಳ್ಳುತ್ತಾ ಆ ಸಾಧುವನ್ನು ಬೋಗಿಯೊಳಕ್ಕೆ ಎಳೆದುಕೊಂಡನು. ಒಬ್ಬ ಸಜ್ಜನನು ಬಟ್ಟೆ-ಬರೆ ಚೆನ್ನಾಗಿ ಧರಿಸಿದ್ದು ಓದು-ಬರಹ ತಿಳಿದಿದ್ದ ವಿದ್ಯಾವಂತನಂತೆ ಕಾಣುತ್ತಿದ್ದನು. ಬಹಳ ಒತ್ತಡಕ್ಕೊಳಗಾಗಿದ್ದ ಆತ ಈ ಸೈನಿಕನನ್ನು ಕೇಳಿದನು, "ಭಲೇ, ನೀವು ವಿಚಿತ್ರವಾಗಿದ್ದೀರಿ, ಈ ಸಾಧುವನ್ನು ಏಕೆ ಒಳಗೆ ಬರಲು ಬಿಟ್ಟಿರಿ?"

ಸೈನಿಕನು ಕೇಳಿದನು : "ಸಾಧುವನ್ನು ಒಳಗೆ ಬಿಡುವುದರಲ್ಲೇನು ತೊಂದರೆ!" ಸಜ್ಜನನು ಹೇಳಿದನು "ಇವನು ಸಾಧುವಲ್ಲ, ಸ್ವಾಧು." ಇಂತಹದ್ದೇ ಕೆಲ ಮಾತುಗಳನ್ನು ಆ ಸಜ್ಜನನು ಹೇಳಿದಾಗ ಆ ಸೈನಿಕನು ಉತ್ತರ ನೀಡಿದನು – "ನನಗೆ ವ್ಯಕ್ತಿಯ ಚಿಂತೆಯಿಲ್ಲ, ನನಗೆ ಈ ಬಟ್ಟೆಯ ಬಣ್ಣದ ಮೇಲೆ ಪ್ರೇಮ, ಅಭಿಮಾನವಿದೆ. ನಾನು ಈ ಬಣ್ಣವನ್ನು ಒಳಬರಲು ಬಿಟ್ಟೆನು. ಈ ವ್ಯಕ್ತಿ ನಿಜವಾಗಿಯೂ ಕೆಟ್ಟವನೇ ಆಗಿರಬಹುದು ಆದರೆ ಇವನು ಈ ಬಟ್ಟೆಯನ್ನು

ಧರಿಸಿದ್ದಾನೆ. ಈ ಬಣ್ಣವನ್ನು ನೋಡುತ್ತಲೇ ನಾವು ಶ್ರದ್ಧೆಯಿಂದ ಬಾಗಿಬಿಡುತ್ತೇವೆ."

ಇದು ನನ್ನ ಅನುಭವದ ಒಂದು ಸಣ್ಣ ಉದಾಹರಣೆ. ಇಂತಹ ಎಷ್ಟೋ ಉದಾಹರಣೆಗಳನ್ನು ನೀಡಬಹುದು. ನಾವು ವಿಚಾರ ಮಾಡಬೇಕಾದುದು ಈ ಶ್ರದ್ಧೆ ಏಕಿದೆ? ಎಲ್ಲಿಂದ ಬಂತು? ಎಂದು. ಸ್ವಲ್ಪ ಆಳವಾಗಿ ಯೋಚಿಸಿದಾಗ ತಿಳಿಯುವುದೇನೆಂದರೆ ಯುಗ-ಯುಗಳಿಂದ ಭಾರತವು ಯಾವ ತ್ಯಾಗಪೂರ್ಣ ಜೀವನವನ್ನು ಆರಾಧಿಸಿದೆಯೋ ಅದೇ ಆಕಸ್ಮಿಕವಾಗಿ ಹೊರಹೊಮ್ಮುತ್ತದೆ. ಇದು ನಮ್ಮ ರಾಷ್ಟ್ರೀಯ ಅಭಿವ್ಯಕ್ತಿಯ ಸಾಧನವಾಗಿದೆ. ನಮ್ಮ ದೇಶಭಕ್ತಿಯ ಸಶಕ್ತ ಮಾಧ್ಯಮವಾಗಿದೆ. ಸಾಧಾರಣ ದೈನಿಕ ಜೀವನದಲ್ಲಿ ನಾವು ನಿಜವಾಗಿಯೂ ಅದರತ್ತ ಗಂಭೀರವಾಗಿ ಯೋಚಿಸಿ-ವಿಚಾರ ಮಾಡದಿರಬಹುದು. ಆದರೆ ಇಂತಹ ಪರಿಸ್ಥಿತಿಗಳು ಉಪಸ್ಥಿತವಾಗಿರುವುದರಿಂದ ಹೃದಯದಲ್ಲಿ ರಾರಾಜಿಸುತ್ತಿರುವ ಸಂಸ್ಕೃತಿಯು ಹೊರಹೊಮ್ಮುತ್ತದೆ. ಅದನ್ನು ನಾವು ತಡೆಯಲಾರೆವು.

ಆದ್ದರಿಂದಲೇ ಈ ಧ್ವಜವು ನಮ್ಮ ಸಂಸ್ಕೃತಿಯ ಸಂದೇಶ ನೀಡುತ್ತಿರುವಂತೆ ಕೇಳಿಬರುತ್ತದೆ. ಇದನ್ನು ನೋಡಿ ನಮ್ಮ ತ್ಯಾಗಪೂರ್ಣ ಜೀವನದ ಆಕಾಂಕ್ಷೆಯಿಂದ ಮನ ತುಂಬಿ ಬರುತ್ತದೆ. ಕೆಲವು ವ್ಯಕ್ತಿಗಳು ಈ ಸಂದೇಶವನ್ನು ಕೇಳಲಾರರು. ಏಕೆಂದರೆ ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ಉಡುಗೊರೆಯಾಗಿ ನೀಡುವ ಭಾವನೆಯಿರುವ ಅಂತಃಕರಣವೇ ಇದರ ಮಹತ್ವವನ್ನು ಅರಿಯಬಲ್ಲದು. ಅದರೊಳಗೆ ಸ್ವಲ್ಪವಾದರೂ ರಾಷ್ಟ್ರಸೇವೆಯು ಬಲವಾಗಿರುತ್ತದೆ. ಅದಕ್ಕಾಗಿಯೇ ಈ ಧ್ವಜದ ಸಂದೇಶವು ಮಾರ್ದನಿಸುತ್ತದೆ. ರಾಷ್ಟ್ರದ ಸಮಸ್ತ ಇತಿಹಾಸ ಕಣ್ಣುಗಳಲ್ಲಿ ತೇಲಾಡುತ್ತಿದೆ. ವೈದಿಕ ಋಷಿಗಳ ವಾಣಿ, ರಾಮ, ಕೃಷ್ಣ, ಬುದ್ಧ, ಮಹಾವೀರರಿಂದ ಹಿಡಿದು ಸೂರ್‌ದಾಸ್, ತುಳಸಿದಾಸ್, ನಾನಕ, ಮೀರಾ, ಚೈತನ್ಯ, ರಾಮದಾಸ ಮುಂತಾದ ಎಷ್ಟೋ ಆದರ್ಶ ಮಹಾಪುರುಷರ ಜೀವನ ಅತುಲ ಪರಾಕ್ರಮ ಶೂರ-ವೀರ ಯೋಧರ ವಿಜಯಗಾಥೆಗಳು, ಮಠ, ಮಂದಿರ, ತೀರ್ಥ, ಮತ್ತು ಪವಿತ್ರ ನದಿಗಳ ಯಾತ್ರೆ ಮಾಡುವ ಪವಿತ್ರ ಆತ್ಮಗಳು ಇತ್ಯಾದಿ-ಇತ್ಯಾದಿ ಎಷ್ಟೋ ಚಿತ್ರಗಳು ಕಣ್ಣ ಮುಂದೆ ಉಯ್ಯಾಲೆಯಾಡುತ್ತದೆ. ಇವೆಲ್ಲವುಗಳಿಂದ ಒಂದೇ ಧ್ವನಿ ಕೇಳಿ ಬರುವುದೇನೆಂದರೆ ತ್ಯಾಗಮಯ ಜೀವನವನ್ನು ನಡೆಸುತ್ತಾ ಸಮನ್ವಯದ, ಸಹಿಷ್ಣುತೆಯ, ಸಾಂಸ್ಕೃತಿಕ ವಿಶೇಷತೆಯನ್ನು ಅರಿತುಕೊಳ್ಳಬೇಕು. ಯಾರೂ ಬೇರೆಯವರಾಗಿರಬಾರದು, ಎಲ್ಲರನ್ನೂ ನಮ್ಮವರನ್ನಾಗಿಸಬೇಕು. **ವಿಶಾಲತೆಯೇ ಜೀವನ; ಸಂಕುಚಿತತೆಯೇ ಮೃತ್ಯು**. ಈ ಧ್ವಜವು ಅಗ್ನಿಯ ಜ್ವಾಲೆಗಳ, ಯಜ್ಞದ ಪ್ರತೀಕವಾಗಿದೆ. ಅಗ್ನಿಯ ವಿಶೇಷತೆಯೆಂದರೆ ಅದು ಸ್ವತಃ ಪವಿತ್ರವಾಗಿರುವುದಲ್ಲದೆ, ಯಾರೇ ಅದರ ಸಂಪರ್ಕಕ್ಕೆ ಬಂದರೂ, ಅವರಿಗೂ ಅಗ್ನಿಯು ಪವಿತ್ರತೆಯನ್ನು ನೀಡಿದೆ. ಇಷ್ಟೊಂದು ದಾಹಕತೆ, ಮತ್ತು ಪವಿತ್ರತೆಯ ಜೀವನವನ್ನು ನಡೆಸುವ ಶಿಕ್ಷಣವು ಈ ಧ್ವಜದಿಂದ



ದೊರಕುತ್ತದೆ. ಸದಾ ಒಂದು ಸಂಸ್ಕೃತಿಯ ವಿಶೇಷತೆಯೇನಿತ್ತೆಂದರೆ ಯಾರೇ ಅದರ ಸಮೀಪ ಬಂದರೂ ಅದು ಅವರನ್ನು ತನ್ನದಾಗಿಸಿಕೊಂಡುಬಿಟ್ಟಿತು. ಎಂದಿನಿಂದ ನಾವು ನಮ್ಮ ಸಾಂಸ್ಕೃತಿಕ ವಿಶೇಷತೆಯನ್ನು ಮರೆತೆವೋ, ಅಂದಿನಿಂದ ಈ ಧ್ವಜದ ಸಂದೇಶವನ್ನು ಕಡೆಗಣಿಸಿದ್ದೆವು. ಸರ್ವಸಂಗ್ರಾಹಕ ವೃತ್ತಿಯನ್ನು ಬಿಟ್ಟುಬಿಟ್ಟೆವು. ಅಂದಿನಿಂದಲೇ ನಮ್ಮ ನಾಶ ಪ್ರಾರಂಭವಾಯಿತು. ಎಲ್ಲಿಯವರೆಗೂ ನಾವು ಈ ಧ್ವಜವನ್ನು ಗೌರವಾನ್ವಿತವಾದ ಗುರುಸ್ಥಾನದಲ್ಲಿರಿಸಿದೆವೋ ಮತ್ತು ಇದರ ಶಿಕ್ಷಣಗಳ ಮೇಲೆ ಗಮನ ನೀಡಿದೆವೋ ಅಲ್ಲಿಯವರೆಗೂ ಶಕರು, ಹೂಣರು, ಸಿಥಿಯನ್ನರು ಮುಂತಾದ ಎಷ್ಟು ಜನರು ಬಂದರೋ ಅವರನ್ನು ನಾವು ಒಪ್ಪಿಕೊಂಡೆವು. ನಮ್ಮವರಂತೆಯೇ ಮಾಡಿಕೊಂಡೆವು. ಅರಗಿಸಿಕೊಳ್ಳುವ ಪ್ರವೃತ್ತಿ ಆರ್ಯ ಸಂಸ್ಕೃತಿಯ ವಿಶೇಷತೆಯಾಗಿದೆ. ಈ ವಿಶೇಷತೆಯನ್ನು ತಿಳಿಸುವುದು ಈ ಧ್ವಜವೇ ಆಗಿದೆ. ಯಜ್ಞಮಯ ಜೀವನದ ಪ್ರೇರಣೆ ನೀಡುವ, ಅಗ್ನಿಯ ಈ ಧ್ವಜದ ಸಂದೇಶವನ್ನು ನೀವು ಸರಿಯಾದ ರೀತಿಯಲ್ಲಿ ಕೇಳಬೇಕು.

ದೌರ್ಭಾಗ್ಯವಶಾತ್ ಇಂದು ಎಷ್ಟೋ ಪ್ರಕಾರದ ಭ್ರಮೆಗಳಿಂದ ಕೂಡಿದ ಧೋರಣೆಗಳು ಪ್ರಚಲಿತವಾಗಿವೆ. ಅದರಿಂದ ಪ್ರಭಾವಿತರಾಗಿ ಇದರ ನಿಜವಾದ ಸಂದೇಶವನ್ನು ನಾವು ಮರೆತಿದ್ದೇವೆ. ಎಷ್ಟೋ ಜನರು ಇದು ಸನ್ಯಾಸಿಯಾಗಿ ಕಾಡಿನಲ್ಲಿ ಕುಳಿತು ಮತ್ತು ಮೂಗು ಹಿಡಿದು ಧ್ಯಾನ ಧಾರಣೆ ಮಾಡುವ ಸಂದೇಶ ಮಾತ್ರವೆಂದು ತಿಳಿಯುತ್ತಾರೆ. ದೇಶ, ಸಮಾಜ, ಇತ್ಯಾದಿ ಯಾವುದೇ ವಿಚಾರ ಮಾಡದೆ ಕೇವಲ ಕೆರಳಿಸಿ ಸಮಾಜದಿಂದ ದೂರ ಹೋಗಿ ಕೂರುವುದರಲ್ಲೇ ಸನ್ಯಾಸದ ರಹಸ್ಯವಿದೆಯೆಂದು ಜನ ತಿಳಿಯುತ್ತಾರೆ. ಆದರೆ ಈ ಮಾತು ತಪ್ಪು. ಸನ್ಯಾಸತ್ವ ಮಹಾನ್ ಕರ್ಮಗಳ ಪ್ರೇರಕವಾಗಿದೆ. ಅಖಂಡ ಕರ್ಮಯೋಗಿಯಾಗುವುದೇ ನಿಜವಾದ ಸನ್ಯಾಸತ್ವದ ರಹಸ್ಯ. ಈ ಬಣ್ಣದ ಸಂದೇಶ ಕರ್ಮಗಳಿಂದ ಪಲಾಯನ ಮಾಡುವುದಲ್ಲ, ಕರ್ಮಗಳ ನಿಜವಾದ ಕರ್ತನಾಗುವುದು. ಈ ಬಣ್ಣದಿಂದ ಉದ್ಧೃತವಾದ ಧರ್ಮದಲ್ಲಿ ಐಹಿಕ ಮತ್ತು ಪಾರಲೌಕಿಕ ಎರಡೂ ಪ್ರಕಾರದ ಉನ್ನತಿಯ ಮಾರ್ಗವನ್ನು ತಿಳಿಸಲಾಗಿದೆ. ಯಾವ ವ್ಯಕ್ತಿ ಇಹಲೋಕದ ಚಿಂತೆ ಮಾಡುವುದಿಲ್ಲವೋ ಅವನು ಯಶಸ್ವಿಯಾಗಲಾರನು. ನಾವು ಮನುಷ್ಯನ ಆಧ್ಯಾತ್ಮಿಕ ಪ್ರಗತಿಯನ್ನು ಗುರಿಯ ಕಾರಣದಿಂದಾಗಿಯೇ ನಮ್ಮ ಮುಂದಿಟ್ಟಿದ್ದೇವೆ. ಇದು ನಿಜವೇ ಆದರೆ ಇದರ ಅರ್ಥ ಖಂಡಿತವಾಗಿಯೂ ಲೌಕಿಕ ಪ್ರಗತಿಯನ್ನು ಕಡಿಮೆ ಪರಿಶೀಲಿಸಬೇಕೆಂದಿಲ್ಲ. ದೇವರು ನಮಗೆ ಈ ಜೀವನವನ್ನು ಏಕೆ ನೀಡಿದ್ದಾನೆ ? ನಾವು ಚಿರಂತನವಾದ ಸುಖ ಮತ್ತು ಶಾಶ್ವತವಾದ ಶಾಂತಿಯನ್ನು ಪಡೆದುಕೊಳ್ಳಲೆಂದೇ ನೀಡಿದ್ದಾನೆ.

ಈ ಉದ್ದೇಶದ ಪ್ರಾಪ್ತಿಗಾಗಿ ಸಾಂಸಾರಿಕ ಜೀವನವೇ ಸಾಧನವಾಗಿದೆ.

ಒಂದು ವೇಳೆ ನಾವು ಸಾಧನದ ಕಡೆಗೆ ದುರ್ಲಕ್ಷ್ಯರಾಗಿದ್ದರೆ ಲಕ್ಷ್ಯವನ್ನು ಪಡೆದುಕೊಳ್ಳಲಾರೆವು. ಅದೇ ರೀತಿ ಮೋಟಾರುಕಾರಿನಲ್ಲಿ ನಾವು ಪ್ರಯಾಣಿಸಿ ಯಾವುದೋ ಸ್ಥಳವನ್ನು ತಲುಪಬೇಕಾದರೆ ಮೋಟಾರುಕಾರನ್ನು ಸರಿಯಾಗಿ ನೋಡಿಕೊಳ್ಳುವುದು ಅವಶ್ಯಕವಾದುದು. ಮೋಟಾರಿನ ಕಡೆಗೆ ದುರ್ಲಕ್ಷ್ಯವಾಗಿದ್ದು ಅಸಡ್ಡೆಯಿಂದ ಮುಂದುವರೆದರೆ ಯಾವುದಾದರೂ ಗೋಡೆಗೆ ಡಿಕ್ಕಿ ಹೊಡೆಯಬಹುದು. ಇದಕ್ಕೆ ನಮ್ಮಲ್ಲಿ ನದಿ–ದೋಣಿಯ ಉದಾಹರಣೆಯೂ ನೀಡಲಾಗಿತ್ತು. ದೋಣಿಯಿಂದ ನದಿಯನ್ನು ದಾಟಬೇಕಾದರೆ ದೋಣಿಯು ಸರಿಯಾಗಿರಬೇಕು. ಅದರಲ್ಲಿ ಒಂದೇ ಒಂದು ತೂತಿದ್ದರೂ ನದಿಯನ್ನು ದಾಟಮಾಡಲು ಸಾಧ್ಯವಾಗದು. ದೋಣಿಯನ್ನು ಸರಿಯಾದ ರೀತಿಯಲ್ಲಿ ಹುಟ್ಟುಗೋಲು ಹಾಕುತ್ತಾ ನಾವು ಆ ತೀರಕ್ಕೆ ಹೊರಟುಹೋದರೆ ಇದೇ ಬುದ್ಧಿವಂತಿಕೆಯ ವ್ಯವಹಾರವೆಂದೆನ್ನಬಹುದು. ಹೌದು! ನದಿಯೇ ನಮ್ಮ ಸರ್ವಸ್ವವಲ್ಲ, ಧ್ಯೇಯವಲ್ಲ, ಇಷ್ಟಂತೂ ಸತ್ಯ. ನದಿ ದಾಟಿದ ಅನಂತರ ನಾವು ದೋಣಿಯನ್ನು ಹಿಡಿದು ಕುಳಿತುಬಿಟ್ಟರೆ, ಮರಳಿಗೆ ದೋಣಿಯನ್ನು ಎಳೆದು ತಂದರೆ ಅದು ಮೂರ್ಖತನವೆಂದಾಗುತ್ತದೆ. ಇಂತಹ ವ್ಯಕ್ತಿಯು ದೋಣಿಯ ಮಹತ್ವವನ್ನು ಅರಿತಿಲ್ಲ ಎಂದು ಹೇಳಬೇಕಾಗುತ್ತದೆ. ಪಾಶ್ಚಾತ್ಯ ಜಗತ್ತು ಇದನ್ನೇ ಮಾಡಿದೆ. ಪಾಶ್ಚಾತ್ಯ ಜಗತ್ತಿನ ಸಾಂಸಾರಿಕ ಪ್ರಗತಿಯ ಆಸೆಯು ದೋಣಿಯನ್ನು ಹಿಡಿದು ಕುಳಿತುಬಿಡುವಂತೆಯೇ ಆಗಿದೆ. ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಅಂತರವೆಂದರೆ ನಾವು ಸಾಧನವನ್ನು ಕಡೆಗಣಿಸಲಿಲ್ಲ ಆದರೆ ಅದನ್ನೇ ಗುರಿಯೆಂದು ತಿಳಿಯುವ ತಪ್ಪನ್ನೂ ಮಾಡಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಯು ಈ ಜೀವನವನ್ನೇ ಸರ್ವಸ್ವವೆಂದು ಒಪ್ಪಿಕೊಂಡುಬಿಟ್ಟಿದೆ. ಇದರ ಮುಂದಿನ ಚಿಂತೆಯೇ ಮಾಡಲಿಲ್ಲ. ಪರಿಣಾಮ ಸ್ವರೂಪವಾಗಿ ಅಲ್ಲಿ ಸಂಘರ್ಷವು ಆವರಿಸಿದೆ. ರಾಕ್ಷಸವೃತ್ತಿಯಿಂದ ನರಸಂಹಾರವನ್ನು ಮಾಡಲಾಗುತ್ತಿದೆ. ಆದರೆ ನಾವು ಎರಡರ ಸರಿ–ತಪ್ಪುಗಳ ವಿಚಾರ ಮಾಡಿದೆವು. ಆದ್ದರಿಂದಲೇ ಭೌತಿಕ ಜೀವನದಿಂದ ಮೇಲೆದ್ದಿರುವ ತ್ಯಾಗಿಗಳು, ವೈರಾಗಿಗಳು, ತಪಸ್ವಿಗಳು, ಋಷಿಮುನಿಗಳು, ಜಗತ್ತನ್ನು ಸರಿಪಡಿಸುವಪಣತೊಟ್ಟರು. ಸಾಮ್ರಾಜ್ಯದ ನಿರ್ಮಾಣ ಮಾಡಿದರು. ಜಗತ್ ಕಲ್ಯಾಣಕ್ಕಾಗಿ ಅಖಂಡವಾದ ಕರ್ಮಚೇತನದ ಉದಾಹರಣೆಯನ್ನು ಪ್ರಸ್ತುತಪಡಿಸಿದರು. ತ್ಯಾಗದ ಪ್ರತೀಕವಾದ ಈ ಧ್ವಜವನ್ನು ಹಿಡಿದು ಭರತವರ್ಷದ ದ್ವೀಪ–ದ್ವೀಪಗಳಲ್ಲಿ ಸುತ್ತಿದರು. ಜಾವಾ, ಸುಮಾತ್ರಾ, ಬಾಲಿ, ಇಂಡೋನೇಷಿಯಾ, ಜಪಾನ್, ಚೀನಾ ಮುಂತಾದ ಎಷ್ಟೋ ದೇಶಗಳಲ್ಲಿ ಇಂದಿಗೂ ಭಾರತದ ಸಾಂಸ್ಕೃತಿಕ ವಿಜಯದ ಚಿಹ್ನೆಯು ಅಂಕಿತವಾಗಿದೆ. ಭಾರತದ ಮಹಾನ್ ಕರ್ಮವೀರ ಯೋಧರು ದಿಗ್ವಿಜಯವನ್ನು ಸಾಧಿಸುತ್ತಲೇ ಇದ್ದರು. ಯಾವ ಧ್ವಜದ ಮಾರ್ಗದರ್ಶನದಲ್ಲಿ



ಸಮಸ್ತ ವಿಶ್ವದ ವೈಭವವನ್ನು ಸಂಪಾದಿಸಲಾಗಿದೆಯೋ, ಅದು ಕರ್ಮದಿಂದ ಪಲಾಯನ ಹೊಂದುವ ಸಂದೇಶವನ್ನು ಹೇಗೆ ತಾನೇ ನೀಡೀತು. ಆದ್ದರಿಂದಲೇ ಭಾರತ ಸ್ವರ್ಣಭೂಮಿಯೆಂದೆನಿಸಿಕೊಂಡಿತು ಮತ್ತು ಇಲ್ಲಿ ಹಾಲಿನ ನದಿಗಳು ಹರಿಯುತ್ತವೆಂದು ಸಾಬೀತಾಯಿತು. ಇದೇ ಧ್ವಜವನ್ನು ಹಿಡಿದು ನಾವು ಸಂಪೂರ್ಣ ಜಗತ್ತಿನಲ್ಲಿ ಜ್ಞಾನದ ಪ್ರಚಾರ ಮಾಡಿದೆವು. ವಾಣಿಜ್ಯ ವ್ಯಾಪಾರ, ಕಲೆ ಕೌಶಲ್ಯ, ಸೈನ್ಯ–ಸಂಚಾಲನೆ, ಸಮಾಜವ್ಯವಸ್ಥೆ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ನಾವು ಉನ್ನತಿಯನ್ನು ಪಡೆದೆವು. ಲೌಕಿಕ ಜೀವನವನ್ನು, ಪಾರಲೌಕಿಕ ಜೀವನವನ್ನು ಸಂಪಾದಿಸುವ ಸಾಧನೆಯೆಂದು ತಿಳಿದು ನಡೆದೆವು.

ಈ ಸಂಬಂಧವಾಗಿ ಅನೇಕ ಉದಾಹರಣೆಗಳನ್ನು ನೀಡಬಹುದಾಗಿದೆ. ಜಗದ್ಗುರು ಶಂಕರಾಚಾರ್ಯರ ಉದಾಹರಣೆ ಈ ರೀತಿ ಇದೆ. ಕೇವಲ ಮೂವತ್ತೆರಡು ವರ್ಷಗಳ ಆಯುಸ್ಸಿನಲ್ಲಿ ಅವರು ಎಷ್ಟು ದೊಡ್ಡ ಲೋಕೋದ್ಧಾರದ ಕಾರ್ಯವನ್ನು ಮಾಡಿದರು. ಅವರು ಕೇವಲ ಕಾಡಿನಲ್ಲಿ, ಏಕಾಂಗಿಯಾಗಿ ಕುಳಿತು ತಪಸ್ಸು ಮಾಡುತ್ತಿದ್ದರೆಂದು ಯಾರಾದರೂ ಹೇಳಬಲ್ಲರೇ? ಅವರು ನಾಲ್ಕು ಬಾರಿ ಸಂಪೂರ್ಣ ಭಾರತದ ಪರಿಭ್ರಮಣೆ ಮಾಡಿದ್ದರು. ಉಪನಿಷತ್ತುಗಳು ಮತ್ತು ಗೀತೆಯ ಮೇಲೆ ಭಾಷ್ಯಗಳನ್ನು ಬರೆದರು. ಸಂಪೂರ್ಣ ದೇಶದ ಸ್ಥಾನ–ಸ್ಥಾನಗಳಲ್ಲಿ ಶಾಸ್ತ್ರದ ಅರ್ಥವನ್ನು ತಿಳಿಸಿದರು. ಈ ರೀತಿ ಮಹಾನ್ ಕರ್ಮಮಯವಾದ ಬದುಕನ್ನು ಬದುಕಿದರು. ಅತ್ಯಲ್ಪ ಕಾಲದಲ್ಲಿ ಸಂಪೂರ್ಣ ಭಾರತದಲ್ಲಿ ನವಚೈತನ್ಯದ ಸಂಚಾರವಾಗುವಂತೆ ಮಾಡಿದರು. ಇದೇ ಕರ್ಮಮಯವಾದ ಬದುಕನ್ನು ಬದುಕುವುದೇ ಈ ಧ್ವಜದ ಸಂದೇಶವಾಗಿದೆ. ಇದು ರಾಷ್ಟ್ರದ ಸನಾತನ ಸಂಸ್ಕೃತಿಯ ಪ್ರತೀಕವಾಗಿದೆ. ಈ ಧ್ವಜವೇ ನಮ್ಮ ಗುರುವಾಗಿದೆ. ಇದರ ಮಾರ್ಗದರ್ಶನದಿಂದಲೇ ಪ್ರೇರಣೆಯನ್ನು ಪಡೆದು ನಾವು ಉಜ್ವಲ ಭವಿಷ್ಯದ ಕಡೆಗೆ ನಡೆಯಬಲ್ಲೆವು.

ಆದ್ದರಿಂದಲೇ ನಾವು ಭಾರತೀಯತ್ವದ ನಿಜವಾದ ಪ್ರತೀಕ ಮತ್ತು ರಾಷ್ಟ್ರಧ್ವಜವನ್ನು ಸರಿಯಾದ ರೀತಿಯಲ್ಲಿ ಅರಿತುಕೊಳ್ಳಬೇಕು.

ಇತ್ತೀಚೆಗೆ ಎಷ್ಟೋ ಬಾರಿ ಜನರು ಭ್ರಮೆಯಲ್ಲಿ ಪ್ರಾಚೀನ ಕಾಲದಲ್ಲಿ ನಮ್ಮ ಯಾವುದೇ ರಾಷ್ಟ್ರವಿರಲಿಲ್ಲ ಆದ್ದರಿಂದ ನಮ್ಮ ಧ್ವಜವೂ ಮೊದಲೆಂದೂ ಇರಲಿಲ್ಲ ಎಂದು ಹೇಳುವುದನ್ನು ನೋಡಬಹುದಾಗಿದೆ. ಆದರೆ ಇದು ಆಂಗ್ಲರ ಮೂಲಕ ಹಬ್ಬಿಸಲಾದ ದುರ್ಬುದ್ಧಿಯ ಪ್ರಭಾವ. ಆಂಗ್ಲರು ತಮ್ಮ ಪ್ರಭಾವವನ್ನು ಇಲ್ಲಿ ನಿರ್ಮಾಣ ಮಾಡಲು ಭಾರತವೆಂದೂ ರಾಷ್ಟ್ರವಾಗಿರಲಿಲ್ಲ ಮತ್ತು ಆಂಗ್ಲರೇ ಭಾರತಕ್ಕೆ ಸರ್ವಪ್ರಥಮವಾಗಿ ಒಂದು ರಾಷ್ಟ್ರವೆಂಬ ಜ್ಞಾನವನ್ನು ನೀಡಿದುದು ಎಂಬ ಒಂದು ತಪ್ಪು ವಿಚಾರಧಾರೆಯನ್ನು ಹರಡಿದರು. ಈ ಅಪಾರ್ಥದ ಬಲಿಪಶುವಾದ ಕಾರಣವೇ ಪ್ರಾಚೀನ ರಾಷ್ಟ್ರಜೀವನ ಮತ್ತು ಪ್ರಾಚೀನ ರಾಷ್ಟ್ರಧ್ವಜದ

ವಿಸ್ಮರಣೆಯುಂಟಾಯಿತು. ಇಂತಹ ಜನರು ಹೊಸ ರಾಷ್ಟ್ರಧ್ವಜವನ್ನು ಮಾಡುವ ಕಲ್ಪನೆಯನ್ನು ಹೊತ್ತು ಮುಂದುವರೆದರು. ಅಜ್ಞಾನವಶರಾಗಿದ್ದ ಅವರು ಯಾವ ಭಾರತವು ಹೊಸ ರಾಷ್ಟ್ರವಾಗಬೇಕೋ ಅದೇ ರೀತಿ ಅದಕ್ಕೆ ಹೊಸದಾದ ರಾಷ್ಟ್ರಧ್ವಜವನ್ನು ನೀಡಬೇಕೆಂದು ಯೋಚಿಸಿದರು. ಭಾರತದ ಸನಾತನ ರಾಷ್ಟ್ರಜೀವನದ ವಿಸ್ಮರಣೆಯ ದುಃಖಭರಿತ ಪರಿಣಾಮವಾಗಿ ಜನರು ರಾಷ್ಟ್ರಧ್ವಜವನ್ನು ಹುಡುಕಲಾರಂಭಿಸಿದರು.

ನವೀನ ರಾಷ್ಟ್ರಧ್ವಜದ ಹುಡುಕಾಟ ಎಲ್ಲಕ್ಕಿಂತ ಮೊದಲು ವಿದೇಶದಲ್ಲಿಯೇ ನಡೆಯಿತೆಂದು ಹೇಳಲಾಗುತ್ತದೆ. ಭರತವರ್ಷವನ್ನು ದಾಸ್ಯದಿಂದ ಮುಕ್ತಗೊಳಿಸಲು ಕ್ರಾಂತಿ ಕಾರ್ಯಗಳನ್ನು ಮಾಡುವ ಶಿಕ್ಷಣವನ್ನು ನೀಡಲು ಕೆಲವು ನವಯುವಕರು ಫ್ರಾನ್ಸ್‌ಗೆ ಬಂದರು. ಅಲ್ಲಿ ಒಂದು ಸ್ಥಳದಲ್ಲಿ ಬಹಳಷ್ಟು ನವಯುವಕರು ಒಟ್ಟುಗೂಡಿ ತಮ್ಮ ದೇಶವಾದ ಭಾರತಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡುತ್ತಿದ್ದರು. ಆ ಒಬ್ಬ ವಿದೇಶೀ ಯುವಕನು ಭಾರತೀಯ ಯುವಕನನ್ನು ಕೇಳಿದನು, "ದೊಡ್ಡದಾಗಿ ಮಾತನಾಡುತ್ತಿದ್ದೀಯಾ, ನಿಮ್ಮ ರಾಷ್ಟ್ರಧ್ವಜ ಯಾವುದೆಂದು ಹೇಳು, ನೋಡೋಣ?" ಭಾರತೀಯ ಯುವಕನು ನಿರುತ್ತರನಾಗಿದ್ದನು ಏಕೆಂದರೆ ಅವನಿಗೆ ಭಾರತದ ರಾಷ್ಟ್ರಧ್ವಜದ ಜ್ಞಾನವಿರಲಿಲ್ಲ. ಆ ದಿನಗಳಲ್ಲಿ ಭಾರತದಲ್ಲಿ ಆಂಗ್ಲರ ರಾಜ್ಯವಿತ್ತು ಮತ್ತು ಇಲ್ಲಿ ಯೂನಿಯನ್ ಜಾಕ್ ಹಾರಿಸಲಾಗುತ್ತಿತ್ತು. ಭಾರತೀಯ ಯುವಕನಿಗೆ ಯೂನಿಯನ್ ಜಾಕ್ ಭಾರತದ ಧ್ವಜವಲ್ಲವೆಂದಂತೂ ತಿಳಿದಿತ್ತು. ಆದರೆ ಆ ಬಡಪಾಯಿಗೆ ಭಾರತದ ಧ್ವಜ ಯಾವುದೆಂದು ತಿಳಿದಿರಲಿಲ್ಲ. ಆಗ ಭಾರತದ ಯುವಕರು ಫ್ರಾನ್ಸ್‌ನಲ್ಲಿ ಒಂದು ಧ್ವಜದ ನಿರ್ಮಾಣ ಮಾಡಿದರು. ಅದರಲ್ಲಿ ಭಾರತದ ಪ್ರಾಂತ್ಯಗಳ ಸಂಖ್ಯೆಗಳ ಕೆಲವು ತಾರೆಗಳು, ಕಮಲದ ಹೂ ಮತ್ತು ಮೂರು ಬಣ್ಣದ ಪಟ್ಟಿಗಳಿದ್ದವು. ಇಲ್ಲಿ ಧ್ವಜವನ್ನು ೧೯೦೭ರಲ್ಲಿ ಹಾರಿಸಲಾಯಿತು. ನಂತರ ೧೯೨೧ರಲ್ಲಿ ಕಾಂಗ್ರೆಸ್‌ನ ವಿಜಯವಾಡಾ ಅಧಿವೇಶನದಲ್ಲಿ ಮಹಾತ್ಮ ಗಾಂಧಿಯವರು ಮೂರು ಬಣ್ಣದ ಪಟ್ಟಿಗಳೊಂದಿಗೆ ಚರಕವಿರುವ ಧ್ವಜವನ್ನು ನಿರ್ಮಿಸಿದರು. ಆ ಸಮಯದಲ್ಲಿ ಆಂಗ್ಲರ ವಿರುದ್ಧ ಆಂದೋಲನದ ವಿಜೃಂಭಣೆಯಿತ್ತು. ಈ ಧ್ವಜವು ಸ್ವಾತಂತ್ರ್ಯದ ಜಗಳದಲ್ಲಿ ಮುಂದಾಳತ್ವವನ್ನು ವಹಿಸಿತ್ತು. ಕೇಸರಿ ಹಸಿರು ಮತ್ತು ಬಿಳಿ ಬಣ್ಣದ ಈ ಧ್ವಜದಲ್ಲಿ ಕೇಸರಿ ಬಣ್ಣ ಹಿಂದೂಗಳ, ಹಸಿರು ಮುಸಲ್ಮಾನರ ಹಾಗೂ ಬಿಳಿ ಬಣ್ಣ ಉಳಿದೆಲ್ಲರದ್ದು ಎಂದು ಹೇಳಲಾಗಿದೆ. ಆದರೆ ನಂತರ ಅನೇಕ ಚಿಕ್ಕ–ಚಿಕ್ಕ ವರ್ಗಗಳಿಂದ ಅವರ ಬಣ್ಣವನ್ನು ಧ್ವಜದಲ್ಲಿ ಸೇರಿಸಬೇಕೆಂಬ ಬೇಡಿಕೆಯು ಬರತೊಡಗಿತು. ಇದರಿಂದ ಸಮಸ್ಯೆಯು ನಿರ್ಮಾಣವಾಯಿತು. ಈ ವಿವಾದದ ಪರಿಹಾರಕ್ಕಾಗಿ ಧ್ವಜ ಸಮಿತಿಯನ್ನು ನಿರ್ಮಿಸಲಾಯಿತು. ಇದರ ಅಧ್ಯಕ್ಷರು ಪಂಡಿತ್ ಜವಾಹರ್‌ಲಾಲ್ ನೆಹರೂರವರೇ



ಆಗಿದ್ದರು. ಈ ಸಮಿತಿಯೂ ಕೇಸರಿಯ ಬಣ್ಣವೇ ರಾಷ್ಟ್ರಧ್ವಜವಾಗಬಹುದೆಂಬ ತೀರ್ಮಾನವನ್ನು ಶಬ್ದಗಳಲ್ಲಿ  ನಂತರದಲ್ಲಿ ಆಂಗ್ಲರ ಮೂಲಕ ಪ್ರಸ್ತುತಪಡಿಸಿದ ಮಿಶ್ರಣ ಸಂಸ್ಕೃತಿ ಮತ್ತು ಕಿಚಡಿ ರಾಷ್ಟ್ರವಾದದ ಪ್ರಭಾವಕ್ಕೊಳಗಾಗಿ ಧ್ವಜದ ಕಮಿಟಿಯು ಈ ವರದಿಯನ್ನು ಕ್ರಿಯಾರೂಪಕ್ಕೆ ತರಲಾಗಲಿಲ್ಲ. ಮೂರು ಬಣ್ಣಗಳ ಧ್ವಜವನ್ನೇ ಸ್ವೀಕರಿಸಿತು. ಕೇವಲ ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳ ಅರ್ಥಗಳನ್ನು ಬದಲಾಯಿಸಿ ಸಮೂಹದ ದ್ಯೋತಕವಲ್ಲ, ಗುಣಗಳ ದ್ಯೋತಕವೆಂದು ತಿಳಿಸಲಾಯಿತು. ಆ ಕಾಲ ಆಂಗ್ಲರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಲವಾಗಿತ್ತು. ರಾಷ್ಟ್ರದ ಪ್ರಗತಿಗಾಗಿ ಸ್ವಾತಂತ್ರ್ಯವು ಸರ್ವಪ್ರಥಮವಾಗಿ ಅವಶ್ಯಕವಾದುದಾಗಿತ್ತು. ಆದ್ದರಿಂದ ಇದರ ಚಲನೆ ಪ್ರಾರಂಭವಾದ ಮೇಲೆ ಎಲ್ಲರೂ ಇದನ್ನು ಸ್ವೀಕರಿಸಿದರು. ಹೌದು, ಗೌರವವನ್ನೂ ನೀಡಿದರು. ಇದು ಸ್ವಾಭಾವಿಕವೇ ಆಗಿತ್ತು. ದೇಶದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ನಡೆದ ಆಂದೋಲನಗಳಲ್ಲಿ ಈ ಧ್ವಜವನ್ನು ಹಿಡಿದು ತ್ಯಾಗ ಮತ್ತು ಬಲಿದಾನಗಳಾದವು. ಅನೇಕ ಜನರು ಯಾತನೆಗಳನ್ನು ಸಹಿಸಿದರು ಮತ್ತು ನೇಣುಗಂಬಕ್ಕೆ ಮುತ್ತಿಟ್ಟರು. ಆದ್ದರಿಂದ ಧ್ವಜದ ಕಮಿಟಿಯ ವರದಿಯನ್ನು ಒಪ್ಪಿಕೊಳ್ಳದೆ ಈ ಧ್ವಜವನ್ನು ಸ್ವೀಕರಿಸಲಾಯಿತು. ಇಂದಿಗೂ ಅದೇ ಬಣ್ಣಗಳ ಚಕ್ರಾಂಕಿತ ಮೂರು ಬಣ್ಣಗಳ ಧ್ವಜವೇ ನಮ್ಮ ರಾಷ್ಟ್ರಧ್ವಜ ಮತ್ತು ನಮಗೆ ಇದು ಪರಮಶ್ರದ್ಧೆಯ ಹಾಗೂ ಗೌರವದ ಕೇಂದ್ರ ಬಿಂದುವಾಗಿದೆ. ಆದರೂ ಸಹಜವಾಗಿಯೇ ನಮ್ಮ ಮನದಲ್ಲಿ  ನಮ್ಮ ರಾಷ್ಟ್ರ ಜೀವನ ಎಷ್ಟು ಪ್ರಾಚೀನವಾಗಿದೆ? ಅದರ ಶತಮಾನಗಳ ದೀರ್ಘವಾದ ಪರಂಪರೆಯನ್ನು ವ್ಯಕ್ತಪಡಿಸುವುದರಲ್ಲಿ ಈ ಧ್ವಜವು ಸಮರ್ಥವಾಗಬಲ್ಲದೆ ? ಎಂಬ ಪ್ರಶ್ನೆಯು ಮೂಡುತ್ತದೆ. ಮೂವತ್ತು ಮೂವತ್ತೈದು ವರ್ಷಗಳ ನಮ್ಮ ತ್ಯಾಗ – ಬಲಿದಾನಕ್ಕೆ ಇದು ಪ್ರತೀಕವಾಗಿತ್ತು. ಇದು ಸತ್ಯವೇ ಆದರೆ ಸಾವಿರಾರು ವರ್ಷಗಳ ಪೌರುಷ, ಪರಾಕ್ರಮ ಮತ್ತು ಶ್ರೇಷ್ಠಪೂರ್ಣವಾದ ಜೀವನದ ಇತಿಹಾಸವನ್ನು ನೋಡಿದಾಗಲಂತೂ ಈ ವಿಚಾರವನ್ನು ಅಪೂರ್ಣವಾಗಿಯೇ ಒಪ್ಪಿಕೊಳ್ಳಬೇಕಾಗುತ್ತದೆ. ತಕ್ಕಡಿಯಲ್ಲಿ ಒಂದು ಕಡೆ ನಮ್ಮ ಮೂವತ್ತು–ಮೂವತ್ತೈದು ವರ್ಷಗಳ ಭಾವನೆಗಳನ್ನು ಇಟ್ಟರೆ ತಕ್ಕಡಿಯ ಯಾವ ತಟ್ಟೆ ತೂಕವಾಗಿರುತ್ತದೆ ? ನಿಸ್ಸಂದೇಹವಾಗಿ ಯಾವ ರಾಷ್ಟ್ರೀಯ ಪ್ರತೀಕವನ್ನು ಹಿಡಿದು ವೇದಗಳ ಕಾಲದಿಂದ ಇಂದಿನವರೆಗೂ ನಾವು ಸ್ಫೂರ್ತಿಯನ್ನು ಪಡೆಯುತ್ತಿದ್ದೆವೋ, ಅದರಲ್ಲಿ ಶತಮಾನಗಳ ಉತ್ಥಾನ, ಪತನದ ರೋಮಾಂಚಕಾರಿ ಕ್ಷಣಗಳ ಗಾಥೆಗಳು ಅಡಕವಾಗಿವೆ. ಯಾವುದರಲ್ಲಿ ತ್ಯಾಗಿಗಳು, ತಪಸ್ವಿಗಳು, ಪರಾಕ್ರಮಿಗಳು, ದಿಗ್ವಿಜಯಿಗಳು, ಜ್ಞಾನಿಗಳು, ಋಷಿ–ಮುನಿಗಳು, ಸಾಮ್ರಾಟರು, ಸೇನಾಪತಿಗಳೂ, ಕವಿಗಳು, ಸಾಹಿತ್ಯಕಾರರು, ಸನ್ಯಾಸಿಗಳು ಮತ್ತು ಅಸಂಖ್ಯ ಕರ್ಮಯೋಗಿಗಳ ಚಾರಿತ್ರ್ಯದ ಸ್ಮರಣೆಯು ಅಂಕಿತವಾಗಿದೆಯೋ, ಅಲ್ಲಿ

ದಾರ್ಶನಿಕ ಕಾರ್ಯಸಾಧನೆಗಳೊಂದಿಗೆ ಜೀವವನ್ನೇ ಹೋಮ ಮಾಡುವ ಅಸಂಖ್ಯ ಉದಾಹರಣೆಗಳು ನಮ್ಮ ಸ್ಮೃತಿಪಟಲದಲ್ಲಿ ನಾಟ್ಯವಾಡುತ್ತವೆ. ಆ ಪರಮ ಪವಿತ್ರ ಕೇಸರಿ ಧ್ವಜವೇ ನಮ್ಮ ಅಖಂಡ ರಾಷ್ಟ್ರೀಯ ಪರಂಪರೆಯ ಪ್ರತೀಕವಾಗಿ ನಮ್ಮ ಮುಂದೆ ಹಾಜರಾಗುತ್ತದೆ. ಇದೇ ಸತ್ಯವಾದುದು. ಇದೇ ಧ್ವಜ ನಮ್ಮನ್ನು ನಮ್ಮ ಭೂತಕಾಲದ ಬಗ್ಗೆ ಸರಿಯಾದ ಜ್ಞಾನವನ್ನು ನೀಡಿ ಭವಿಷ್ಯದ ಉತ್ತಮ ಪ್ರೇರಣೆಯನ್ನು ನೀಡುತ್ತಾ ವರ್ತಮಾನದಲ್ಲಿ ಕರ್ಮಚೇತನವನ್ನು ಜಾಗೃತಗೊಳಿಸುವುದಕ್ಕಾಗಿ ಸಕ್ಷಮವಾಗಿದೆ. ಇದೇ ನಮ್ಮ ಸ್ಫೂರ್ತಿಯ ಕೇಂದ್ರವಾಗಿದೆ. ರಾಷ್ಟ್ರಕ್ಕೆ ಅನಂತಕಾಲದವರೆಗೆ ಮಾರ್ಗದರ್ಶನ ನೀಡುವ ಇದೇ ಕೇಸರಿ ಧ್ವಜ ನಮ್ಮ ಗುರು, ನಮ್ಮ ಮಾರ್ಗದರ್ಶಕವಾಗಿದೆ. ಇದರ ಮುಂದೆಯೇ ಶಿರಬಾಗಿ ನಾವು ನಮ್ಮ ಜೀವನವನ್ನು ಶ್ರೇಷ್ಠಗೊಳಿಸಿಕೊಳ್ಳಬಲ್ಲೆವು.



# ೯. ವಿಜಯಾಕಾಂಕ್ಷೆ

ಮಾನವನ ಸ್ಥಿತಿ ಮತ್ತು ಪ್ರಗತಿ ಅವನ ಜಯಿಷ್ಣು ಮತ್ತು ಸಹಿಷ್ಣು ಪ್ರವೃತ್ತಿಯ ಸಾಮಂಜಸ್ಯವನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಇಚ್ಛೆ ಬೇರೆಯುವರ ಮೇಲೆ ಪ್ರಭಾವ ಬೀರುವುದು, ಅವರ ಮೇಲೆ ವಿಜಯಗಳಿಸುವುದಾಗಿರುತ್ತದೆ. ಹಾಗೂ ತನ್ನ ವ್ಯಕ್ತಿತ್ವವನ್ನು ಪ್ರಭಾವಯುತ ಹಾಗೂ ವಿಜಯಿಯನ್ನಾಗಿಸಲು ಅವನು ಸತತ ಪ್ರಯತ್ನಶೀಲನಾಗಿರುತ್ತಾನೆ. ಆದ್ದರಿಂದಲೇ ಸರಸರನೆ ಓಡಾಡುತ್ತಿರುತ್ತಾನೆ. ಆದರೆ ಈ ಪ್ರಕಾರದ ವ್ಯಕ್ತಿ–ವ್ಯಕ್ತಿಯ ವಿಜಯದ ಪ್ರಬಲ ಆಕಾಂಕ್ಷೆಯ ಪರಿಣಾಮ ಬೇರೆಯವರ ವಿನಾಶವಾಗದಿರಲಿ ಹಾಗೂ ಈ ವಿನಾಶದ ಕಾರಣದಿಂದಾಗಿ ಬೇರೆಯವರ ಅಭಿಪ್ರಾಯವನ್ನು ಗೌರವಿಸಲಿ, ಹಾಗೂ ಅದನ್ನು ಸತ್ಯವೆಂದು ತಿಳಿದು ನಡೆಯಲಿ. ಈ ಭಾವನೆಯೇ ಸಹಿಷ್ಣುತೆಯ ಪ್ರವೃತ್ತಿಗೆ ಜನ್ಮ ನೀಡಿದೆ.

ವಿಶ್ವದಲ್ಲಿ ಭರತವರ್ಷವು ನಮ್ಮ ಉತ್ಕೃಷ್ಟ ಮಟ್ಟದ ಸಹಿಷ್ಣುತೆಯ ಭಾವನೆಗಾಗಿ ಪ್ರಸಿದ್ಧವಾಗಿದೆ. ಪಶ್ಚಿಮವು ಈ ಸಹಿಷ್ಣುತೆಯ ಭಾವನೆಯ ಅನುಭವವನ್ನು ಈಗೀಗಲೇ ಸನಿಹವರ್ತಿಯನ್ನಾಗಿಸಿದೆ ಹಾಗೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅದರ ಬಗ್ಗೆ ವಿಶ್ವಾಸವನ್ನು ವ್ಯಕ್ತಪಡಿಸುವ ಪ್ರಯತ್ನಮಾಡಿದೆ. ಆದರೂ ಪಶ್ಚಿಮದ ಜೀವನದಲ್ಲಿ ಅಸಹಿಷ್ಣುತೆ ಎಷ್ಟು ಬೆರೆತು ಹೋಗಿದೆಯೆಂದರೆ ಸಹಿಷ್ಣುತೆಯ ಹಾಡು ಹೇಳುವಾಗಲೂ ಸಹ ಒಂದಲ್ಲ ಒಂದು ಪ್ರಕಾರದ ಭಯಂಕರ ಅಸಹಿಷ್ಣುತೆಯು ಪ್ರಕಟವಾಗಿಯೇಬಿಡುತ್ತದೆ. ಆಂಗ್ಲರು, ಫ್ರಾನ್ಸಿನವರು ಮತ್ತು ಡಚ್ಚರ ಸಾಮ್ರಾಜ್ಯವಾದಿ ಭಾವನೆಗಳು, ಏಷ್ಯಾದ ಜನರ ಮೇಲೆ ಯೂರೋಪಿಯನ್ ಜನರ ಮೂಲಕ ಮಾಡಲಾದ ಅತ್ಯಾಚಾರ, ಕ್ರೈಸ್ತ ಮತದ ಹೊರತಾಗಿ ಎಲ್ಲಾ ಧರ್ಮಗಳನ್ನು ಅರ್ಥವಿಲ್ಲವೆಂದು ತಿಳಿದು ಅವುಗಳೊಂದಿಗೆ ಮಾಡಿರುವ ಬರ್ಬರ ಮತಾಂತರದ ವ್ಯವಹಾರ, ಆಂಗ್ಲರು ಹೇಳಿಕೊಳ್ಳುವ ಬಿಳಿ ಮಾನವರ ಹೊರೆ, ಆಫ್ರಿಕಾದ ಹಬ್ಶಿಯರು ಹಾಗೂ ಅನ್ಯ ಕರಿಯರಿಗಾಗಿ ನಿರ್ಮಿಸಲಾದ ಕಾನೂನು, ಅಮೇರಿಕಾದಲ್ಲಿ ನೀಗ್ರೋಗಳು ಹಾಗೂ ರೆಡ್‌ಇಂಡಿಯನ್‌ಗಳನ್ನು ನಡೆಸಿಕೊಂಡ ರೀತಿ ಹಾಗೂ ಜರ್ಮನಿ, ಇಟಲಿ, ರಷ್ಯಾ ಮುಂತಾದ ದೇಶಗಳಲ್ಲಿ ಉತ್ಪನ್ನವಾಗುವ ಫ್ಯಾಸಿಸ್ಟ್ ಮನೋವೃತ್ತಿ ಹಾಗೂ ಪ್ರತಿ ೨೫ ವರ್ಷಗಳ ನಂತರ ಯುದ್ಧ, ಇವೇ

ಅವರ ಅಸಹಿಷ್ಣು ಮನೋವೃತ್ತಿಯ ನಿದರ್ಶನಗಳಾಗಿವೆ. ಇಂದಿಗೂ ಪಶ್ಚಿಮದಲ್ಲಿ ಈ ಜಾತಿಗಳ ಬಗ್ಗೆ, ಯಾರನ್ನೂ ಅವರು ಹೀನರೆಂದು ತಿಳಿಯುತ್ತಾರೋ, ಅವರ ಬಗ್ಗೆ ಗೌರವ ಮತ್ತು ಶ್ರದ್ಧೆಯ ಭಾವವು ಹುಟ್ಟಲಿಲ್ಲ. ಇಂದಿಗೂ ಅಲ್ಲಿನ ವಿದ್ವಾಂಸರು ಯೂರೋಪ್ ಮತ್ತು ಅಮೇರಿಕಾವನ್ನು ವಿಶ್ವದ ಮೇಲೆ ಅಧಿಪತ್ಯ ಸ್ಥಾಪಿಸಿ ಅದರ ಉಪಯೋಗ ಮಾಡುವ ಕೇಂದ್ರವೆಂದು ತಿಳಿದು ಸಂಪೂರ್ಣ ವಿಶ್ವವನ್ನು ಅವರ ಕ್ಷೇಮಕ್ಕೆ ಅನುಸಾರವಾಗಿ ಕುಣಿಸಲು ಬಯಸುತ್ತಾರೆ.

ಭಾರತದಲ್ಲಿ ಇದಕ್ಕೆ ವಿರುದ್ಧವಾಗಿ ಬಹಳ ಹಿಂದೆಯೇ ಸಹಿಷ್ಣುತೆಯ ಭಾವನೆಯ ಉದಯವಾಗಿಬಿಟ್ಟಿತು. ಎರಡು ಸಾವಿರ ಮೈಲಿ ಉದ್ದ ಹಾಗೂ ಎರಡು ಸಾವಿರ ಮೈಲಿ ಅಗಲವಿರುವ ಭಾರತದ ವಿವಿಧ ರೂಪವಾದ ಪ್ರಕೃತಿಯ ಅಂತರದ ಸತ್ಯದ ಸಾಕ್ಷಾತ್ಕಾರ ಮಾಡಿಸಿದರು. ನಾವು ವಿವಿಧತೆಯಲ್ಲಿ ಏಕತೆ ಎಂಬ ಅನುಭೂತಿಯನ್ನು ಹೊಂದಿದೆವು ಮತ್ತು ಇದರ ಪರಿಣಾಮಸ್ವರೂಪವಾಗಿ ಸಹಿಷ್ಣುತೆಯ ಭಾವನೆಗಳು ಹುಟ್ಟಿಕೊಂಡವು. ಇದರಿಂದಾಗಿ ಜ್ಞಾನ, ಕರ್ಮ ಮತ್ತು ಭಕ್ತಿ ಮೂರೂ ಕ್ಷೇತ್ರಗಳಲ್ಲಿ ನಾವು ನಮ್ಮ ಸಹಿಷ್ಣುತೆಯ ಮನೋವೃತ್ತಿಯ ಪರಿಚಯ ನೀಡಿದ್ದೇವೆ. 'ಏಕಂಸತ್ ವಿಪ್ರಾಃ ಬಹುಧಾ ವದಂತಿ' ಎಂಬ ಆದರ್ಶವನ್ನು ಮುಂದಿಟ್ಟುಕೊಂಡು ಜ್ಞಾನದ ಕ್ಷೇತ್ರದಲ್ಲಿ, ನಿಷ್ಕಾಮ ಕರ್ಮಯೋಗದ ಸಿದ್ಧಾಂತವನ್ನು ಪ್ರತಿಪಾದಿಸಿ ಕರ್ಮದ ಕ್ಷೇತ್ರದಲ್ಲಿ ಹಾಗೂ ಒಂದೇ ಬ್ರಹ್ಮದ ವಿವಿಧ ರೂಪದ ಭಿನ್ನ-ಭಿನ್ನ ದೇವತೆಗಳೆಂದು ತಿಳಿದು ಭಕ್ತಿಯ ಕ್ಷೇತ್ರದಲ್ಲಿ ಸಹಿಷ್ಣುತೆಯ ಭಾವನೆಯು ವಿಕಾಸಹೊಂದಿತು. ಸಹಿಷ್ಣುತೆಯು ನಮ್ಮ ಜೀವನದ ಅಂಗವಾಗಿಬಿಟ್ಟಿದೆ.

ಇಂದು ಪಶ್ಚಿಮದ ಜೀವನ ಮತ್ತು ಅದರ ಇತಿಹಾಸದ ಮೇಲೆ ನಮ್ಮಲ್ಲಿ ಪ್ರೀತಿ ಮೂಡಿದೆ. ಅಲ್ಲಿ ಯಾವ ಘೋಷಣೆಗಳನ್ನು ಹೊರಡಿಸುತ್ತಾರೋ, ಅವನ್ನು ನಾವು ಯಥಾವತ್ ಆಗಿ ಗ್ರಹಿಸುವುದರಲ್ಲಿ ಪ್ರಗತಿಯಿದೆ ಎಂದು ತಿಳಿಯುತ್ತಿದ್ದೇವೆ. ಈ ಕಾರಣದಿಂದಾಗಿ ಪಶ್ಚಿಮದ ಸಹಿಷ್ಣುತೆಯ ಘೋಷಣೆಯೂ ನಮ್ಮ ಬಹು ದೊಡ್ಡ ಸಾಧನೆಯೆಂದೆನಿಸುತ್ತದೆ. ಇದರ ಇನ್ನೂ ಒಂದು ಕೆಟ್ಟ ಪ್ರಭಾವ ನಮ್ಮ ಮೇಲಾಗಿರುವುದೇನೆಂದರೆ ಈ ಸಹಿಷ್ಣುತೆಯ ಮೇಲೆ ನಮ್ಮಲ್ಲಿರುವ ಅಭಿಮಾನ ಆತ್ಮನಿಷೇಧದ ಎಲ್ಲೆಯನ್ನೂ ಸಹ ದಾಟಿಬಿಟ್ಟಿದೆ. ಸ್ವತಃ ನಾವೇ ಕಳಂಕಿತ ಮತ್ತು ಅಪಮಾನಿತರಾಗಲು ನಾವು ಸಹಿಷ್ಣುವಾಗಿರಲು ಘೋಷಿಸಲಾರಂಭಿಸಿದೆವು. ಅಷ್ಟೇ ಅಲ್ಲದೆ ಸಹಿಷ್ಣುತೆಯ ಭಾವನೆಯ ಮೇಲೆ ಎಷ್ಟು ಒತ್ತು ನೀಡಲಾಯಿತೆಂದರೆ ಜೀವನದ ಮತ್ತೊಂದು ಅವಶ್ಯಕವಾದ ಪ್ರವೃತ್ತಿ ಮತ್ತು ಜಯಿಷ್ಣು ಪ್ರವೃತ್ತಿಯ ಕಡೆಗೆ ನಮ್ಮ ಗಮನಹರಿದಿಲ್ಲ ಫಲಸ್ವರೂಪವಾಗಿ ಮಹತ್ವಾಕಾಂಕ್ಷೆಯಿಂದ ಹೀನವಾಗಿ, ಜಗತ್ತಿನ ಪ್ರತಿಯೊಂದು ಜನಾಂಗದ ಎದುರು ಬಾಗುತ್ತಾ ಹೋಗುವುದು, ನಮ್ಮ ತನ್ನತನವನ್ನು ಹಾಗೂ ಜೀವನವನ್ನು ಸಂಪೂರ್ಣವಾಗಿ ನೆಲಸಮ ಮಾಡುವುದೇ,



ಸಹಿಷ್ಣುತೆಯ ಅರ್ಥವೆಂದಾಯಿತು. ನಮ್ಮ ಆತ್ಮರಕ್ಷಣೆಗಾಗಿ ಕೂಡ ನಡೆಸುವ ಯುದ್ಧವೂ ಸಹ ನಮಗೆ ಪಾಪಕಾರ್ಯವೇ ಆಗಿದೆ. 'ಯಾರಾದರೂ ನಿಮ್ಮ ಕೆನ್ನೆಗೆ ಬಾರಿಸಿದರೆ ಅವರಿಗೆ ನೀವು ಮತ್ತೊಂದು ಕೆನ್ನೆಯನ್ನು ತೋರಿಸಿ' ಎಂಬ ಈ ಸಿದ್ಧಾಂತದ ಮೇಲೆ ಎಷ್ಟು ಒತ್ತು ಬಿದ್ದಿದೆಯೆಂದರೆ ನಾವು ಅಪಮಾನಗಳ ಬಗ್ಗೆಯೂ ಚಿಂತಿಸುತ್ತಿಲ್ಲ.

ನಿಜವಾಗಿಯೂ ಸಹಿಷ್ಣುತೆಯ ಮುಂದೆ ಜಯಿಷ್ಣುತೆಯ ಸಿದ್ಧಾಂತದ ಅವಶ್ಯಕತೆಯಿದೆ. ಒಂದು ವೇಳೆ ಜಯಿಷ್ಣುತೆಯು ಅಧಿಕ ಅವಶ್ಯಕವಾದುದೆಂದು ಹೇಳಿದರೆ ಅದು ಅನುಚಿತವೆಂದಾಗದು. ಜಯಿಷ್ಣುತೆಯ ಭಾವನೆಯೇ ಇಲ್ಲದಿರುವ ಯಾವುದೇ ಸಮಾಜ ಜೀವಂತವಾಗಿಯೂ ಇರಲಾರದು ಮತ್ತು ತನ್ನ ಜೀವನದ ವಿಕಾಸವನ್ನೂ ಮಾಡಲಾರದು. ಯಾವುದೇ ವ್ಯಕ್ತಿ ಅಥವಾ ಸಮಾಜ ಕೇವಲ ಉಸಿರಾಡಲಷ್ಟೇ ಜೀವಂತವಾಗಿರುವುದಿಲ್ಲ, ಬದಲಾಗಿ ತಮ್ಮ ಆದರ್ಶಗಳಿಗಾಗಿ ಜೀವಂತವಾಗಿರುತ್ತವೆ ಹಾಗೂ ಅವಶ್ಯಕತೆ ಬಂದಾಗ ಆ ಆದರ್ಶದ ರಕ್ಷಣೆಗಾಗಿ ತಮ್ಮ ಜೀವನದ ಮುಕ್ತಾಯವನ್ನೂ ಮಾಡಿಬಿಡುತ್ತಾರೆ. ಆದರ್ಶವಾದ ವ್ಯಕ್ತಿಗಳೂ ಸಹ ಎಲ್ಲಾ ಪ್ರಕಾರದ ಕಠಿಣತೆಗಳನ್ನು ಅನುಭವಿಸಿಯೂ ಜಗತ್ತನ್ನು ಮುಂದುವರೆಯುವಂತೆ ಮಾಡಿದರು. ಯಾರು ಜೀವನದಲ್ಲಿ ತಮ್ಮ ಆದರ್ಶಗಳನ್ನು ವಿಜಯೀಯಾಗುವಂತೆ ಮಾಡಿದರು. ಯಾರ ಜೀವನದಲ್ಲಿ ತಮ್ಮ ಆದರ್ಶಗಳನ್ನು ವಿಜಯೀಯಾಗುವಂತೆ ಮಾಡುವ ಮಹತ್ವಾಕಾಂಕ್ಷೆಯಿರುತ್ತದೆಯೋ ಅವರೇ ಜಗತ್ತಿನ ನಿರಾಶೆಯುಕ್ತ ವಾತಾವರಣದಿಂದ ಮೇಲೆದ್ದು ಏನನ್ನಾದರೂ ಸಾಧಿಸಬಲ್ಲರು ಹಾಗೂ ಮತ್ತೊಬ್ಬರಿಗೂ ಪ್ರಕಾಶಪುಂಜವಾಗಿ ಮಾರ್ಗದರ್ಶಕರಾಗುತ್ತಾರೆ. ವಿಶ್ವದ ಹೊಸ-ಹೊಸ ದೇಶಗಳನ್ನು ಹುಡುಕುವ, ಪ್ರಕೃತಿಯ ನಿಗೂಢ ಸಿದ್ಧಾಂತಗಳನ್ನು ಹುಡುಕಿ ಹೊರತೆಗೆಯುವ, ಬ್ರಹ್ಮ ಮತ್ತು ಜೀವನದಲ್ಲಿರುವ ಭೇದದ ಸಾಕ್ಷಾತ್ಕಾರ ಹೊಂದುವ, ದುಃಖತಪ್ತ ಮಾನವರಿಗೆ ಶಾಂತ ಮತ್ತು ಸತ್ಯದ ಉಪದೇಶ ನೀಡುವವರು ಇವರೆಲ್ಲರೂ ತಮ್ಮ ಜೀವನದಲ್ಲಿ ಒಂದು ಮಹತ್ವಾಕಾಂಕ್ಷೆಯನ್ನು ಹೊತ್ತು ತಂದಿದ್ದರು ಮತ್ತು ಅವನ್ನು ಪಡೆಯುವ ಕಾರಣದಿಂದಾಗಿ ಜೀವನ ಪರ್ಯಂತ ಪ್ರಯತ್ನ ಮಾಡುತ್ತಲೇ ಇದ್ದರು.

ಭರತವರ್ಷವು ಈ ವಿಜಯೋನ್ಮುಖ ಪ್ರವೃತ್ತಿಯ ಮಹತ್ವವನ್ನು ಸದಾ ತಿಳಿಯುತ್ತದೆ ಮತ್ತು ಇದರಿಂದಾಗಿಯೇ ವಿಜಯದಶಮಿಯಂತಹ ಶಕ್ತಿಪೂಜೆಯ ಹಬ್ಬಗಳನ್ನು ಆಯೋಜಿಸಲಾಯಿತು. ವಿಜಯದಶಮಿ ನಮ್ಮ ವಿಜಯಗಳ ಸ್ಮಾರಕ ಹಾಗೂ ಭಾವೀ ವಿಜಯಗಳ ಪ್ರೇರಕವಾಗಿದೆ. ಈ ದಿನವು ನಾವು ಜಗತ್ತಿನಲ್ಲಿ ವಿಜಯಗಳಿಸಬೇಕು ಎಂಬುದನ್ನು ಜ್ಞಾಪಿಸಲು ಪ್ರತಿವರ್ಷವೂ ಬರುತ್ತದೆ. ನಾವು ಪರಾಜಿತರಾಗಲು ಅಥವಾ ಉದಾಸಿಗಳಾಗಿ ಕೇವಲ 'ಆಹಾರನಿದ್ರಾಭಯ

ಮೈಥುನಂಚ'ದವರೆಗೆಯೇ ನಮ್ಮ ಜೀವನವನ್ನು ಸೀಮಿತಗೊಳಿಸುವುದಲ್ಲ, ಬದಲಾಗಿ ವಿಜಯಗಳಿಸಲು ಹುಟ್ಟಿದ್ದೇವೆ.

ವಿಜಯಗಳಿಸಲು ಸೀಮೋಲ್ಲಂಘನೆಯ ಆವಶ್ಯಕತೆ ಇದೆ. ಆದರೆ ಇಂದು ನಾವು ನಮ್ಮ ಜೀವನವನ್ನು ಸೀಮಿತವಾಗಿರಿಸಿದ್ದೇವೆ. ಸ್ವಾರ್ಥ ಮತ್ತು ಅಜ್ಞಾನದ ಸಂಕುಚಿತವಾದ ಕ್ಷೇತ್ರದಲ್ಲಿ ನಾವು ಕೂಪಮಂಡೂಕಗಳಂತೆ ನಮ್ಮ ಜೀವನವನ್ನು ಸೀಮಿತಗೊಳಿಸಿದ್ದೇವೆ. ನಾವು ನಮ್ಮ ಎಲ್ಲೇಖಗಳನ್ನು ಮುರಿಯಬೇಕು. ಯಾರು ಈ ಎಲ್ಲೆಯನ್ನು ದಾಟಿ ಹೊರಗೆ ಹೋಗಲಾರನೋ ಅವನು ವಿಜಯವನ್ನೂ ಗಳಿಸಲಾರನು. ಸೀಮೋಲ್ಲಂಘನೆ ಮತ್ತು ವಿಜಯಗಳನ್ನು ಕೇವಲ ಸೇನೆ ಮತ್ತು ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಶತ್ರುವಿನ ರಾಜ್ಯದ ಮೇಲೆ ಆಕ್ರಮಣ ಮಾಡಿ ಪರಾಭವಗೊಳಿಸಿ ನಾವು ನಮ್ಮ ವಿಜಯವನ್ನು ಆಚರಿಸುತ್ತೇವೆ.

ದುರ್ಗಾ, ರಘುರಾಮ ಮತ್ತು ಸಿದ್ಧಾರ್ಥರ ಜೀವನದ ಘಟನೆಗಳು ವಿಜಯದಶಮಿಯೊಂದಿಗೆ ಸೇರಿಕೊಂಡಿವೆ. ಇವರಲ್ಲಿ ಪ್ರತಿಯೊಬ್ಬರೂ ವಿಭಿನ್ನ ಕ್ಷೇತ್ರಗಳಲ್ಲಿ ಹಾಗೂ ವಿಭಿನ್ನ ಪ್ರಕಾರದಲ್ಲಿ ವಿಜಯವನ್ನು ಗಳಿಸಿದ್ದಾರೆ. ಕ್ಷೇತ್ರಗಳಲ್ಲಿ ಭಿನ್ನತೆಯಿದ್ದರೂ ಅವರ ಪ್ರವೃತ್ತಿಯ ಏಕತೆಯು ಸ್ಪಷ್ಟವಾಗಿದೆ. ಆದ್ದರಿಂದ ನಮ್ಮ ಜೀವನದಲ್ಲಿ ಅವರ ಒಂದು ಧ್ಯೇಯನಿಷ್ಠೆ ಹಾಗೂ ತಮ್ಮ ಜೀವನದ ಸಂಕುಚಿತವಾದ ಕ್ಷೇತ್ರದಂದ ಹೊರ ಬಂದು ಆದರ್ಶವನ್ನು ಪಡೆಯುವುದೇ ಮಹತ್ವಾಕಾಂಕ್ಷೆಯಾಗಿತ್ತು. ಆದ್ದರಿಂದ ನಾವೂ ಕೂಡ ಜೀವನದಲ್ಲಿ ವಿಜಯವನ್ನು ಗಳಿಸಬಲ್ಲೆವು.



## ೧೦. ಜನಾಭಿಪ್ರಾಯ–ಪರಿಷ್ಕಾರ

ರಾಜ್ಯದ ಪುನರ್‌ರಚನೆಯ ಪ್ರಶ್ನೆಯನ್ನು ಕುರಿತು ದೇಶದಲ್ಲಿದ್ದ ವಿಭಿನ್ನ ಬೇಡಿಕೆಗಳ ಬಗ್ಗೆ ಜನರ ಭಾವನೆಗಳು ಉಗ್ರವಾಗುತ್ತಿದ್ದ ಸಂದರ್ಭದಲ್ಲಿ ಪ್ರಧಾನಮಂತ್ರಿ ಪಂಡಿತ ಜವಹರ್‌ಲಾಲ ನೆಹರುವರು ಒಂದು ಶಿಷ್ಟಮಂಡಳಿಯನ್ನು ರಚಿಸಿದರು. ಶಿಷ್ಟಮಂಡಳಿಯ ಸದಸ್ಯನೊಬ್ಬನು ಪಂಡಿತ್‌ಜೀ ಅವರನ್ನು ಪ್ರಾರ್ಥಿಸುತ್ತಾ ಹೀಗೆ ಹೇಳಿದನು: "ದೆಹಲಿಯಲ್ಲಿ ವಿಧಾನಸಭೆಯ ಅಗತ್ಯವಿಲ್ಲವೆಂಬ ನಿರ್ಣಯದಿಂದ ಜನರು ಬಹಳ ಸಂತೋಷಗೊಂಡಿದ್ದಾರೆ. ಆದುದರಿಂದ ಈ ನಿರ್ಣಯದಲ್ಲಿ ಯಾವುದೇ ಬದಲಾವಣೆ ಮಾಡಬಾರದು." ನೆಹರೂರವರು ಮುಗುಳುನಗುತ್ತಾ ಉತ್ತರಿಸಿದರು: "ಯಾರು ವಿಧಾನಸಭೆಯನ್ನು ಉಳಿಸಬೇಕೆಂಬ ಬೇಡಿಕೆಯನ್ನು ಮುಂದಿಡುತ್ತಾರೆಯೋ ಅವರು ಸಹ ಜನರ ಪರವಾಗಿಯೇ ಮಾತನಾಡುತ್ತಾರೆ. ಆಗ ಜನರ ಇಚ್ಛೆ ಎಂದು ಯಾವುದನ್ನು ತಿಳಿಯಬೇಕು?" ಪಂಡಿತರು ಯಾವ ಪ್ರಶ್ನೆಯನ್ನು ಮುಂದಿಟ್ಟರೋ ಅದು ಜನಾಭಿಪ್ರಾಯಕ್ಕೆ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ರಾಜ್ಯವು ಜನತೆಯ ಇಚ್ಛೆಯಂತೆ ರೂಪುಗೊಳ್ಳುತ್ತದೆ. ಆದರೆ ಯಾವುದೇ ಇಬ್ಬರ ಇಚ್ಛೆ ಒಂದೇ ಸಮನಾಗಿ ಇರುವುದಿಲ್ಲ. ಹಾಗಿದ್ದಲ್ಲಿ ಕೋಟಿಗಟ್ಟಲೆ ಮಾನವರ ಪ್ರಶ್ನೆಯಿದ್ದೆಡೆ ರಾಷ್ಟ್ರದ ಜನತೆಯೆಲ್ಲಾ ಒಂದು ಇಚ್ಛೆಯನ್ನು ಪ್ರಕಟಗೊಳಿಸುತ್ತಾರೆ ಎನ್ನುವುದು ಸಾಮಾನ್ಯವಾಗಿ ಸಾಧ್ಯವಾಗಲಾರದು. ಯುದ್ಧ ಮುಂತಾದ ಸಮಯ ಒದಗಿದಾಗ ಎಲ್ಲರ ಇಚ್ಛೆ ಶತ್ರುಗಳ ಮೇಲೆ ವಿಜಯ ಸಾಧಿಸುವುದು ಎಂಬುದು ಸಮಾನವಾಗಿರುತ್ತದೆ, ಆದರೆ ಅಲ್ಲಿಯೂ ನೀತಿಗೆ ಸಂಬಂಧಿಸಿದ ಪ್ರಶ್ನೆಯನ್ನು ಕುರಿತು ಹಲವಾರು ಭಿನ್ನಾಭಿಪ್ರಾಯಗಳು ಇರುತ್ತವೆ.

ಸಮಾನ ಜನಾಭಿಪ್ರಾಯ ವಾಸ್ತವವಾಗಿಯೂ ಒಂದು ಅಗತ್ಯ ಕಲ್ಪನೆ ಮಾತ್ರ. ಪ್ರಜಾಪ್ರಭುತ್ವದಲ್ಲಿ ಯಾರ ಇಚ್ಛೆಯೂ ನೆರವೇರದು ಎಂಬುದು ಸತ್ಯ ಸಂಗತಿಯಾಗಿದೆ. ಪ್ರತಿಯೊಬ್ಬನು ಒಂದು ಸರ್ವಸಾಮಾನ್ಯ ಇಚ್ಛೆಗನುಗುಣವಾಗಿ ತನ್ನ ಇಚ್ಛೆಗಳನ್ನು ರೂಪಿಸಿಕೊಳ್ಳಬೇಕು. ಹೀಗೆ ಆಗದೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಸೆ–ಆಕಾಂಕ್ಷೆ ಹಾಗೂ ನಂಬಿಕೆಗಳನ್ನೇ ಶ್ರೇಷ್ಠವೆಂದು ತಿಳಿದು ನಡೆದಾಗ ಪ್ರಜಾಪ್ರಭುತ್ವವು ಮುಂದೆ ಸಾಗುವುದಿಲ್ಲ. ಈ ಸ್ಥಿತಿಯಿಂದ ಉಂಟಾಗುವ ಪರಿಣಾಮಗಳೆಂದರೆ ಅರಾಜಕತೆ, ವಿಘಟನೆ ಹಾಗೂ ಕೊನೆಯಲ್ಲಿ ಏಕತಂತ್ರದ

ನಿರಂಕುಶ ಪ್ರಭುತ್ವ.

ತಮ್ಮ ಇಚ್ಛೆಗಳ ದಮನದ ಅರ್ಥವೆಂದರೆ, ಪರರ ಮಾತನ್ನು ಒಪ್ಪಲು ತಯಾರಾಗುವುದು ಎಂದು. ಪ್ರಜಾಪ್ರಭುತ್ವದ ಒಂದು ವ್ಯಾಖ್ಯಾನದ ಪ್ರಕಾರ ಅದು ವಾದ–ವಿವಾದಗಳಿಂದ ನಡೆಯಲ್ಪಡುವ ರಾಜ್ಯ. 'ವಾದೇ ವಾದೇ ಜಾಯತೇ ತತ್ವಬೋಧಃ' ಇದು ನಮ್ಮಲ್ಲಿಯ ಪ್ರಾಚೀನವಾದ ಉಕ್ತಿಯಾಗಿದೆ. ಆದರೆ ಎಂದು ನಾವು ಮತ್ತೊಬ್ಬರ ಮಾತನ್ನು ಗಮನವಿಟ್ಟು ಕೇಳುತ್ತೇವೆಯೋ ಹಾಗೂ ಅದರಲ್ಲಿನ ಸತ್ಯಾಂಶವನ್ನು ಗ್ರಹಿಸಲು ಇಚ್ಛಿಸುವೆವೋ ಆಗ ಮಾತ್ರ ತತ್ತ್ವ ಬೋಧನೆಯಾಗಲು ಸಾಧ್ಯ. ಮತ್ತೊಬ್ಬರ ದೃಷ್ಟಿಕೋನವನ್ನು ತಿಳಿಯಲು ಪ್ರಯತ್ನಿಸದೇ ನಾವು ನಮ್ಮ ದೃಷ್ಟಿಕೋನವನ್ನು ಆಗ್ರಹಿಸಿದರೇ 'ವಾದೇ–ವಾದೇ ಜಾಯತೇ ಕಂಠಶೋಷಃ' ಎಂಬ ಉಕ್ತಿಯು ಚರಿತಾರ್ಥವಾಗುತ್ತದೆ.

'ನಾನು ನಿನ್ನ ಮಾತನ್ನು ಸತ್ಯ ಎಂದು ತಿಳಿಯುವುದಿಲ್ಲ, ಆದರೆ ತಮ್ಮ ಮಾತನ್ನು ಹೇಳುವ ನಿನ್ನ ಅಧಿಕಾರಕ್ಕಾಗಿ ನಾನು ಸಂಪೂರ್ಣ ಶಕ್ತಿಯೊಡನೆ ಹೋರಾಡುವೆನು' ಎಂದು ವಾಲ್ಟೇರ್ ಹೇಳಿದಾಗ ಅವನು ಮನುಷ್ಯನ ಕಂಠಶೋಷಣೆಯ ಅಧಿಕಾರವನ್ನು ಮಾತ್ರ ಸ್ವೀಕರಿಸಿದನು. ಭಾರತೀಯ ಸಂಸ್ಕೃತಿ ಇದನ್ನೂ ಮೀರಿ ವಾದ–ವಿವಾದವನ್ನು 'ತತ್ವಬೋಧನೆ'ಯ ಸಾಧನವನ್ನಾಗಿ ನೋಡುತ್ತದೆ. ಸತ್ಯವು ಏಕಾಂಗಿಯಾಗಿರುವುದಿಲ್ಲ, ವಿವಿಧ ದೃಷ್ಟಿ ಕೋನಗಳಿಂದ ಒಂದೇ ಸತ್ಯವನ್ನು ನೋಡಿ, ಪರೀಕ್ಷಿಸಿ ಹಾಗೂ ಅನುಭವಿಸಬಹುದು ಎಂಬುದು ನಮ್ಮ ಅನಿಸಿಕೆಯಾಗಿದೆ. ಆದುದರಿಂದ ಈ ವೈವಿಧ್ಯಗಳ ಸಾಮಂಜಸ್ಯದಿಂದ ಯಾರು ಸಂಪೂರ್ಣವನ್ನು ಗ್ರಹಿಸುವ ಶಕ್ತಿ ಹೊಂದಿರುತ್ತಾರೆಯೋ, ಅವರೇ ತತ್ವದರ್ಶಿಗಳು, ಅವರೇ ಜ್ಞಾನಿಗಳಾಗುತ್ತಾರೆ.

ನೋಡುವ ದೃಷ್ಟಿಯಲ್ಲಿ ಈ ರೀತಿಯಾದಂತಹ ಸಾಮಂಜಸ್ಯಪೂರ್ಣ ಬದಲಾವಣೆಗಾಗಿ ಜೀವನದಲ್ಲಿ ಸಂಯಮದ ಅತ್ಯಗತ್ಯವಾಗುತ್ತದೆ. ಯಾರು ಸಂಯಮಿಗಳಲ್ಲವೋ, ಅವರು ತಮ್ಮ ಇಚ್ಛೆಗಳನ್ನು ಎಂದಿಗೂ ನಿಯಂತ್ರಿಸಲಾರರು. ಅವುಗಳನ್ನು ಪೂರೈಸುವ ಸಲುವಾಗಿ ಅವನು ಉಳಿದೆಲ್ಲಾ ಜನರ ಬಗ್ಗೆ ಚಿಂತಿಸದೆ ಜನರನ್ನು ಲೆಕ್ಕಿಸದೇ ಎಲ್ಲಾ ರೀತಿಯಲ್ಲಿಯೂ ಪ್ರಯತ್ನಿಸುತ್ತಾನೆ. ಈ ಪ್ರಯತ್ನಗಳಲ್ಲಿ ಯಶಸ್ವಿಯಾದರೆ ಅವನು ತನ್ನ ಕ್ಷೇತ್ರದಲ್ಲಿ ಏಕಾಧಿಪತ್ಯವನ್ನು ಸ್ಥಾಪಿಸಿಕೊಂಡು ಪ್ರಜಾತಂತ್ರವನ್ನು ನಾಶಮಾಡುತ್ತಾನೆ. ಯಶಸ್ವಿಯಾಗದಿದ್ದಲ್ಲಿ ಅವನಿಗೆ ಪ್ರಜಾತಂತ್ರವು ಸಾರಹೀನ ಹಾಗೂ ದುಃಖಕರವಾಗುತ್ತದೆ. ಬಹುಜನ ಸಮಾಜ ಪ್ರಜಾರಾಜ್ಯದಲ್ಲಿ ತಮ್ಮ ಸುಖವನ್ನು ಅನುಭವಿಸಲು ಆಗದಿದ್ದರೆ ಅಲ್ಲಿ ಪ್ರಜಾತಂತ್ರದ ಆತ್ಮವಲ್ಲದೇ ಕೇವಲ ನಿರ್ಜೀವ ಸ್ವರೂಪವಿದೆ ಎಂದು ಹೇಳಬೇಕಾಗುತ್ತದೆ.

ಮತ್ತೊಬ್ಬರ ಮಾತು ಕೇಳುವುದು ಅಥವಾ ಅವರ ಅಭಿಪ್ರಾಯವನ್ನು



ಆದರಿಸುವುದು ಒಂದು ವಿಷಯ ಹಾಗೂ ಮತ್ತೊಬ್ಬರ ಮುಂದೆ ತಲೆಬಾಗುವುದು ಸಂಪೂರ್ಣವಾಗಿ ಅದಕ್ಕಿಂತ ಭಿನ್ನವಾದ ವಿಷಯ. ಮತ್ತೊಬ್ಬರ ಇಚ್ಛೆಯೆದುರು ತಲೆಬಾಗುವುದರಲ್ಲಿ ಸದಾ ಒಂದು ಅಪಾಯವಿರುತ್ತದೆ. ಯಾರು ತಿರುಳಿಲ್ಲದ–ಸಜ್ಜನರು ಹಾಗೂ ಧರ್ಮಹೇಡಿಗಳಾಗಿರುತ್ತಾರೆಯೋ ಅವರು ಸದಾ ತಮ್ಮ ಮಾತಿಗೆ ಆಗ್ರಹಿಸದೇ ಮತ್ತೊಬ್ಬರ ಮಾತನ್ನು ಸುಲಭವಾಗಿ ಒಪ್ಪಿಕೊಳ್ಳುತ್ತಾರೆ, ಆದರೆ ಯಾರು ದುರ್ಜನರು ಹಾಗೂ ದುರಾಗ್ರಹಿಗಳಾಗಿರುತ್ತಾರೆಯೋ ಅವರು ತಮ್ಮ ಮಾತನ್ನು ಒತ್ತಾಯಪಡಿಸಿ ಒಪ್ಪಿಸುತ್ತಾರೆ ಹಾಗೂ ಸಮಾಜದ ಮುಂದಾಳುಗಳಾಗುತ್ತಾರೆ ಹಾಗೂ ನಿಧಾನವಾಗಿ ಪ್ರಜಾತಂತ್ರ ವಿಕೃತಗೊಂಡು ಸಮಾಜದ ಪಾಲಿಗೆ ಕಷ್ಟಕರವಾಗುತ್ತದೆ. ಬಹುಶಃ ಈ ಸಂಕಟವನ್ನೆದುರಿಸಲೆಂದೇ ನಮ್ಮಲ್ಲಿ ಶಾಸ್ತ್ರಜ್ಞರು ಲೋಕಾಭಿಪ್ರಾಯ–ಪರಿಷ್ಕಾರವನ್ನು ನಮ್ಮ ಮುಂದಿಟ್ಟರು. ಯಾವ ಸಮಾಜದಲ್ಲಿ ಈ ಪರಿಷ್ಕಾರದ ಕೆಲಸ ಸಾಗುತ್ತಿರುವುದೋ, ಅಲ್ಲಿ ಸಹಿಷ್ಣು ಹಾಗೂ ಸಂಯಮಶೀಲ ವ್ಯಕ್ತಿಗಳ ಸಮೂಹ ಹೆಚ್ಚುತ್ತಲಿರುತ್ತದೆ. ಎಷ್ಟರಮಟ್ಟಿಗೆ ಹೆಚ್ಚುತ್ತದೆಯೆಂದರೆ ವಾಯುಮಂಡಲದಲ್ಲಿ ಈ ಗುಣಗಳಿಂದ ವಂಚಿತರಾದ ವ್ಯಕ್ತಿ ಬಹುಶಃ ಎಲ್ಲಿಯೂ ಸಿಗಲಾರರು. ಹಾಗೆ ಒಬ್ಬಿಬ್ಬರೂ ದೊರೆತರೂ ಅವರು ತಮ್ಮ ವರ್ಚಸ್ಸನ್ನು ಬೇರೂರಿಸಲಾರರು.

ಆದರೆ ಈ ಜನಾಭಿಪ್ರಾಯ–ಪರಿಷ್ಕರಣದ ಕೆಲಸವನ್ನು ಯಾರು ಮಾಡಬೇಕು? ರಷ್ಯಾ ಹಾಗೂ ಅನ್ಯ ಸಾಮ್ಯವಾದಿ ದೇಶಗಳಲ್ಲಿ ಈ ಕೆಲಸವನ್ನು ರಾಜ್ಯದ ಮೂಲಕ ಮಾಡಲಾಗುತ್ತದೆ. ಮಾರ್ಕ್ಸ್‌ನ ಸಿದ್ಧಾಂತಗಳ ಪ್ರಕಾರ ಶ್ರಮಜೀವಿಗಳ ಕ್ರಾಂತಿಯ ನಂತರ ಪ್ರತಿಕ್ರಾಂತಿಯ ಸಾಧ್ಯತೆಯಿದೆ, ಅದನ್ನು ತಡೆಗಟ್ಟಲು ಕಠಿಣ ಉಪಾಯಗಳನ್ನು ಅವಲಂಬಿಸಬೇಕಾಗಿದೆ. ಜೊತೆಗೆ ಇಲ್ಲಿಯತನಕ ಜೀವನದ ಯಾವ ಮೌಲ್ಯಗಳನ್ನು ಸ್ಥಾಪಿಸಲಾಗಿದೆಯೋ ಅವು ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನು ಆಧಾರವನ್ನಾಗಿಸಿಕೊಂಡಿವೆ. ಅವುಗಳನ್ನು ತೊರೆದು ಪ್ರಗತಿವಾದಿ ಮೌಲ್ಯಗಳನ್ನು ಪ್ರತಿಷ್ಠಾಪಿಸಬೇಕಾಗಿದೆ. ಈ ಕಾರ್ಯವನ್ನು ಲೆನಿನ್ ಶ್ರಮಜೀವಿಗಳ ಪ್ರತಿನಿಧಿಗಳು ಹಾಗೂ ಕ್ರಾಂತಿದರ್ಶಿ ಮಹಾನುಭಾವರಿಂದ ಚಲಾಯಿಸಲ್ಪಡುವ ರಾಜ್ಯಕ್ಕೆ ವಹಿಸಿದನು. ಆದರೆ ಇದರ ಪರಿಣಾಮವಾಗಿ ಅಲ್ಲಿ ಲೋಕಾಭಿಪ್ರಾಯ ಪರಿಷ್ಕಾರದ ಹೆಸರಿನಲ್ಲಿ ವ್ಯಕ್ತಿಯ ಎಲ್ಲಾ ಸ್ವಾತಂತ್ರ್ಯಗಳನ್ನು ಕೊನೆಗೊಳಿಸಲಾಯಿತು. ಹಾಗೂ ಕೆಲವೇ ವ್ಯಕ್ತಿಗಳ ಏಕತಂತ್ರ ಆಡಳಿತವೇ ಸಮಸ್ತ ಜನರ ಇಚ್ಛೆಯ ಹೆಸರಿನಲ್ಲಿ ಚಾಲನೆಗೊಂಡಿತು. ಅಲ್ಲಿ ನೀಡಲಾದ ಔಷಧದಿಂದ ರೋಗಿ ಗುಣಮುಖನಾಗಲಿಲ್ಲ. ಹಾಂ! ರೋಗಿ ಈ ಪ್ರಪಂಚವನ್ನೇ ತೊರೆದನು. ಅಂದರೆ ಸಮಸ್ಯೆಗಳು ಎರಡೂ ಕಡೆಯಲ್ಲಿವೆ–ಒಂದೆಡೆ ಅಪರಿಷ್ಕೃತ ಲೋಕಾಭಿಪ್ರಾಯ, ಎಂದಿಗೂ ಇದರ ದಿಕ್ಕನ್ನು ಯೋಚಿಸಿ–ವಿಚಾರಿಸಿ ನಿರ್ಧರಿಸಲಾಗುವುದಿಲ್ಲ.

ಶೇಕ್ಸ್‌ಪಿಯರ್‌ನು ತನ್ನ ನಾಟಕ ಜೂಲಿಯಸ್ ಸೀಜರ್‌ನಲ್ಲಿ ಅದನ್ನು ಬಹಳ ಸ್ಪಷ್ಟವಾಗಿ ಚಿತ್ರಿಸಿದ್ದಾನೆ. ಯಾವ ಜನತೆ ಬ್ರೂಟಸ್‌ನ ಜೊತೆ ಸೇರಿ ಜೂಲಿಯಸ್ ಸೀಜ಼ರ್‌ನ ವಧೆಯ ನಂತರ ಹರ್ಷವನ್ನಾಚರಿಸುತ್ತಿದ್ದರೋ ಅದೇ ಜನತೆ ಸ್ವಲ್ಪ ಸಮಯದಲ್ಲಿಯೇ ಆ್ಯಂಟೋನಿಯೋವಿನ ಭಾಷಣ ಕೇಳಿದನಂತರ ಬ್ರೂಟಸ್‌ನ್ನು ವಧಿಸಲು ಸನ್ನದ್ಧರಾದರು. ಮಾಬೋಕ್ರಸಿ ಹಾಗೂ ಆಟೋಕ್ರಸಿಯ ಎರಡು ಬೀಸುಕಲ್ಲುಗಳ ನಡುವೆ ಡೆಮೋಕ್ರಸಿಯನ್ನು ಜೀವಂತವಾಗಿರಿಸಿರುವುದು ಒಂದು ಕಠಿಣ ಸಮಸ್ಯೆಯಾಗಿದೆ.

ಆದ್ದರಿಂದಲೇ ಜನಾಭಿಪ್ರಾಯ–ಪರಿಷ್ಕಾರದ ಕಾರ್ಯವನ್ನು ಲೌಕಿಕ ಸುಖದ ಆಸೆ–ಆಕಾಂಕ್ಷೆಗಳಿಂದ ಉನ್ನತಮಟ್ಟಕ್ಕೆ ಏರಿದವನು ಮಾತ್ರ ಮಾಡಬಲ್ಲನು. ಭಾರತವು ಇದಕ್ಕೆ ಉತ್ತರವನ್ನು ಹುಡುಕಿತು. ಜನಾಭಿಪ್ರಾಯ ನಿರ್ಮಾಣದ ಸಾಧನವನ್ನು ರಾಜ್ಯದಿಂದ ಕಸಿದುಕೊಂಡು ಭಾರತವು ಈ ಪ್ರಶ್ನೆಗೆ ಉತ್ತರ ಕಂಡು ಕೊಂಡಿದೆ. ಲೋಕಾಭಿಪ್ರಾಯ–ಪರಿಷ್ಕಾರವು ರಾಗದ್ವೇಷಾದಿಗಳ ದ್ವಂದ್ವವನ್ನು ತೊರೆದ ಸನ್ಯಾಸಿಗಳ ಕಾರ್ಯವಾಗಿದೆ. ಲೋಕಾಭಿಪ್ರಾಯಕ್ಕನುಗುಣವಾಗಿ ನಡೆಯುವುದು ರಾಜ್ಯದ ಕೆಲಸ. ಸನ್ಯಾಸಿಗಳು ಸದಾ ಧರ್ಮದ ತತ್ವಗಳಿಗನುಗುಣವಾಗಿ ಜನತೆಯ ಐಹಿಕ ಹಾಗೂ ಆಧ್ಯಾತ್ಮಿಕ ಉತ್ಕರ್ಷವನ್ನು ಬಯಸುತ್ತಾ ತಮ್ಮ ಉಪದೇಶ ಹಾಗೂ ಸರಳ ಆಚರಣೆಯಿಂದ ಜನಜೀವನಕ್ಕೆ ಸಂಸ್ಕಾರವನ್ನು ನೀಡುತ್ತಲಿರುತ್ತಾರೆ. ಅವರಿಗೆ ಧರ್ಮದ ಸೀಮೆಯ ತಿಳಿವಳಿಕೆಯನ್ನು ಉಂಟು ಮಾಡುತ್ತಿರುತ್ತಾರೆ. ಯಾವುದೇ ಮೋಹ ಹಾಗೂ ಲೋಭವಿಲ್ಲದಿರುವುದರಿಂದ ಅವರು ಸತ್ಯವನ್ನು ಬಹಳ ಸಹಜವಾಗಿ ನುಡಿಯಬಲ್ಲರು. ಹೀಗೆ ಅವರು ಲೋಕ–ಶಿಕ್ಷಣ ಹಾಗೂ ಲೋಕ–ಸಂಸ್ಕಾರದ ಕೇಂದ್ರವಾಗುತ್ತಾರೆ. ಶಿಕ್ಷಣ ಹಾಗೂ ಸಂಸ್ಕಾರದಿಂದಲೇ ಸಮಾಜದ ಜೀವನ–ಮೌಲ್ಯಗಳು ರೂಪುಗೊಳ್ಳುತ್ತವೆ ಹಾಗೂ ದೃಢವಾಗುತ್ತವೆ. ಈ ಮೌಲ್ಯಗಳನ್ನು ಕರಗತವಾಗಿಸಿಕೊಂಡ ನಂತರ ಲೋಕೇಚ್ಛೆಯ ನದಿಯು ಎಂದಿಗೂ ತನ್ನ ದಡ ಅತಿಕ್ರಮಿಸಿ ತೊಂದರೆಗೀಡುಮಾಡಲಾರದು.

ಮರ್ಯಾದೆಯ ಚೌಕಟ್ಟಿನಲ್ಲಿ ಇರುವ ಕ್ರಿಯೆಯ ಹೆಸರೇ ಸಂಯಮ. ಹಸಿವಿನಿಂದ ಸಾಯುವುದು ಸಂಯಮವಲ್ಲ, ಬದಲಿಗೆ ಶರೀರದ ಅಗತ್ಯಗಳಿಗನುಗುಣವಾಗಿ ಒಳ್ಳೆಯ ಗುಣವತ್ತಾದ ಹಾಗೂ ಸರಿಯಾದ ಪ್ರಮಾಣದಲ್ಲಿ ಊಟ ಮಾಡುವುದು ಸಂಯಮ. ಮೌನವಾಗಿರುವುದು, ಅತ್ಯಾಚಾರಿಯ ವಿರುದ್ಧ ಮಾತನಾಡದಿರುವುದು ಅಥವಾ ಪರಾಮರ್ಶಿಸದೇ ಇರುವುದು ಸಂಯಮವಲ್ಲ. ಸಂಯಮಿಪುರುಷನು ವಾಚಾಳಿ ಹಾಗೂ ಮೂಗನ ನಡುವೆ ಇರುವನು. ಅಗತ್ಯವಿದ್ದಲ್ಲಿ ಮಾತನಾಡುವನು ಹಾಗೂ ಅಗತ್ಯವಾಗಿ ಮಾತನಾಡೇ ತೀರುತ್ತಾನೆ. ವ್ಯಕ್ತಿಗೆ ತನ್ನ ಆದರ್ಶಗಳ ಬಗ್ಗೆ ಆಸಕ್ತಿ ಹಾಗೂ ತನ್ನ ಜವಾಬ್ದಾರಿಗಳ ಅರಿವು ಇದ್ದಲ್ಲಿ ಮಾತ್ರ



ತನ್ನ ವ್ಯವಹಾರವನ್ನು ಹೀಗೆ ನಿಯಂತ್ರಿಸಲು ಸಾಧ್ಯ. ಸಂಯಮವಿಲ್ಲದಿರುವುದು ಹಾಗೂ ಬೇಜವಾಬ್ದಾರಿ ಒಟ್ಟಿಗೆ ಚಲಿಸುತ್ತದೆ. ಪ್ರಜಾರಾಜ್ಯದ ಸಾಫಲ್ಯ ಪ್ರತಿಯೊಬ್ಬ ನಾಗರಿಕನು ತನ್ನ ಜವಾಬ್ದಾರಿಯನ್ನು ತಿಳಿದು ಅದನ್ನು ನಿರ್ವಹಿಸಲು ಕ್ರಿಯಾಶೀಲನಾದಾಗ ಮಾತ್ರ ಸಾಧ್ಯವಾಗುತ್ತದೆ. ರಾಜ್ಯವನ್ನು ಮುನ್ನಡೆಸುವ ಜವಾಬ್ದಾರಿ ತನ್ನ ಮೇಲಿದೆ ಎಂದು ಸಮಾಜವು ಎಷ್ಟು ತಿಳಿಯುತ್ತದೆಯೋ ಅದು ಅಷ್ಟೇ ಸಂಯಮಶೀಲವಾಗುತ್ತಾ ಹೋಗುತ್ತದೆ. ಯಾವ ಪಕ್ಷಕ್ಕೆ ಇಂದಲ್ಲ ನಾಳೆ ನಮ್ಮ ಹೆಗಲ ಮೇಲೆ ರಾಜ್ಯ–ಸಂಚಾಲನೆಯ ಭಾರ ಬರಬಹುದು ಎಂದು ಅನಿಸುತ್ತದೆಯೋ ಆ ಪಕ್ಷವು ತನ್ನ ಆಶ್ವಾಸನೆ ಹಾಗೂ ವ್ಯವಹಾರದಲ್ಲಿ ಬೇಜವಾಬ್ದಾರಿಯಾಗುವುದಿಲ್ಲ ಹಾಗೂ ತನ್ನ ಸಂಯಮವನ್ನು ಕಳೆದುಕೊಳ್ಳುವುದಿಲ್ಲ. ಜೊತೆಗೆ ಜನರ ಮೇಲೆ ರಾಜ್ಯಚಾಲನೆಯ ಜವಾಬ್ದಾರಿ ಸದಾ ಇದ್ದೇ ಇರುತ್ತದೆ. ಸಮಯ–ಸಮಯಕ್ಕೂ ಅವರು ತಮ್ಮ ಪ್ರತಿನಿಧಿಗಳ ರೂಪದಲ್ಲಿ ಭಿನ್ನ ಪಕ್ಷಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅವರು ಜವಾಬ್ದಾರರಾಗಿದ್ದಲ್ಲಿ ಅವರ ಪಕ್ಷವೂ ಸಂಯಮವನ್ನು ಕಳೆದುಕೊಳ್ಳುವುದಿಲ್ಲ.

ಆದ್ದರಿಂದ ಜನತೆಯನ್ನು ಸುಸಂಸ್ಕೃತರನ್ನಾಗಿಸುವುದು ಹಾಗೂ ಜನಾಭಿಪ್ರಾಯದ ಪರಿಷ್ಕಾರ ಬಹಳ ಮಹತ್ವವನ್ನು ಹೊಂದಿದೆ. ಈ ಕೆಲಸವನ್ನು ಎಸಗುವವರು ಎಲ್ಲಿಯತನಕ ರಾಜ್ಯದ ಮೋಹಕ್ಕೆ ಸಿಲುಕದಿರುವ, ಭಯಮುಕ್ತರಾದ, ಮಹಾಪುರುಷರು ಹಾಗೂ ಸಂಘಟಕರು ಇರುತ್ತಾರೆಯೋ ಅಲ್ಲಿಯ ತನಕ ಜನಾಭಿಪ್ರಾಯವು ತನ್ನ ಸರಿಯಾದ ದಿಕ್ಕಿನಲ್ಲಿ ಮುಂದುವರಿಯುತ್ತದೆ.

# ೧೧. ಪರಂ ವೈಭವಂ ನೇತುಮೇತತ್ಸ್ವರಾಷ್ಟ್ರಂ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಯ ಪ್ರತಿದಿನದ ಕಾರ್ಯಕ್ರಮದಲ್ಲಿ ಸಾಮೂಹಿಕವಾಗಿ ಯಾವ ಪ್ರಾರ್ಥನೆಯನ್ನು ಹಾಡಲಾಗುವುದೋ ಅದರಲ್ಲಿ ರಾಷ್ಟ್ರದ ಸರ್ವಾಂಗೀಣ ಉನ್ನತಿಗಾಗಿ ಬದ್ಧರಾಗಿರುವ ವಿಷಯವಡಗಿದೆ. “ಪರಂ ವೈಭವಂ ನೇತುಮೇತತ್ಸ್ವ ರಾಷ್ಟ್ರಂ”ನ ಈ ಸಾಲಿನಲ್ಲಿ ಈ ಅರ್ಥವಡಗಿದೆ. ಇಂದಿನ ದುರವಸ್ಥೆ ದೂರವಾಗಲಿ ಹಾಗೂ ರಾಷ್ಟ್ರ ಪ್ರಗತಿಶೀಲವಾಗಲಿ ಎಂಬ ಈ ಆಕಾಂಕ್ಷೆ ಪ್ರತಿಯೊಬ್ಬ ದೇಶಭಕ್ತ ನಾಗರಿಕನ ಹೃದಯದಲ್ಲಿ ಜಾಗೃತವಾಗುವುದು ಸಹಜವೇ.

ಸಂಘದ ಸ್ವಯಂ ಸೇವಕರನ್ನು ಬಹಳಷ್ಟು ಮಂದಿ ಕೇಳುವ ಪ್ರಶ್ನೆಯೆಂದರೆ ಉನ್ನತಿಯನ್ನು ಕುರಿತಾದ ನಿಮ್ಮ ಕಲ್ಪನೆ ಏನು? ಯಾರು ರಾಷ್ಟ್ರೋನ್ನತಿಗಾಗಿ ಸಕ್ರಿಯರಾಗಿದ್ದಾರೆಯೋ ಅವರು ಈ ಬಗ್ಗೆ ವಿಸ್ತೃತವಾಗಿ ಹೇಳುವ ಅಗತ್ಯವಿಲ್ಲ. ದುರವಸ್ಥೆಯನ್ನು ಕಂಡು ಯಾವ ಆಂತರಿಕ ನೋವು ಸಹಜವಾಗಿ ಉಂಟಾಗುತ್ತದೆಯೋ ಅದು ಭಾವನೆಗಳಲ್ಲಿ ಪ್ರಕಟವಾಗುತ್ತದೆ ಹಾಗೂ ಆ ನೋವನ್ನು ದೂರಗೊಳಿಸುವ ಪ್ರಯತ್ನಗಳು ನೇರ ಕಾರ್ಯದಲ್ಲಿ ಪ್ರಕಟಗೊಳ್ಳುತ್ತವೆ. ಆದ್ದರಿಂದಲೇ ಕಾರ್ಯಮಾಡುವವರ ಆಚರಣೆಯಿಂದ ಪರಿಸ್ಥಿತಿಗಳ ಸೂಕ್ಷ್ಮ ವಿಶ್ಲೇಷಣೆ ಹಾಗೂ ಅವುಗಳನ್ನು ನಿರಾಕರಿಸಲು ನಿಗದಿಪಡಿಸಿದ ಕಾರ್ಯ ಹಾಗೂ ಉದ್ದೇಶ ಎರಡೂ ಸಂಗತಿಗಳ ಬಗ್ಗೆ ಸರಿಯಾಗಿ ಅರಿವು ಉಂಟಾಗುತ್ತದೆ. ಕೇಳುವವರಿಗೆ ಆಗ ವಿಶೇಷವಾಗಿ ಉತ್ತರಿಸುವ ಅಗತ್ಯವಿರುವುದಿಲ್ಲ ಹಾಗೂ ಸತತವಾಗಿ ಕೆಲಸದಲ್ಲಿ ತೊಡಗಿರುವವರೆಗೆ ಇದಕ್ಕೆ ಅವಕಾಶವೂ ಇರುವುದಿಲ್ಲ. ಇವರು ವ್ಯರ್ಥ ವಾದ–ವಿವಾದದಲ್ಲಿ ಸಿಲುಕಿಕೊಳ್ಳಲು ಬಯಸುವುದಿಲ್ಲ. ಕೇವಲ ಕೆಲಸದ ಮೇಲೆ ಅವರ ದೃಷ್ಟಿ ಕೇಂದ್ರೀಕೃತವಾಗಿರುತ್ತದೆ. ಇದು ಸತ್ಯವಾದರೂ ಸಹ ರಾಷ್ಟ್ರೋತ್ಥಾನದ ವ್ರತಪಾಲಿಸುವ ಕಾರ್ಯಕರ್ತರು ಸದಾ ಜಾಗರೂಕರಾಗಿದ್ದು ಯೋಚಿಸುವ ಅಗತ್ಯವಿದೆ ಎಂಬುದನ್ನು ಒಪ್ಪದೇ ಇರಲಾಗುವುದಿಲ್ಲ. ಕೇವಲ ಭಾವಾವೇಶದಲ್ಲಿ ಮುಂದೆ ಚಲಿಸುವವರು ತಮ್ಮ ಉದ್ದೇಶದಿಂದ ಹಾದಿ ತಪ್ಪುತ್ತಾರೆ ಎಂಬುದು ಇತಿಹಾಸದಲ್ಲಿ ಹಲವುಬಾರಿ ಕಂಡುಬಂದಿದೆ. ವಿವೇಕವನ್ನು ತೊರೆದು ತಪ್ಪುಹಾದಿಯಲ್ಲಿ ಚಲಿಸುವುದು ದಾರಿತಪ್ಪುವುದಕ್ಕೆ ಕಾರಣವಾಗುತ್ತದೆ.

ಆದುದರಿಂದ ನೈಜ ಹಾಗೂ ನಕಲಿ ಪ್ರಗತಿಯ ವ್ಯತ್ಯಾಸ ಸದಾ ಕಣ್ಣ



ಮುಂದೆ ಇರಬೇಕು. ನಿಜವನ್ನು ತಿಳಿಯುವ ಶಕ್ತಿ ಸದಾ ನಮ್ಮಲ್ಲಿರಬೇಕು. ಕೆಲವು ಬಾರಿ ಗಾಜಿನತುಂಡು ಸಹ ವಜ್ರದ ಹಾಗೆ ಹೊಳೆಯುತ್ತಿರುತ್ತದೆ ಎಂಬುದನ್ನು ಮರೆಯಬಾರದು. ಈ ವೇಳೆ ಗಾಜು ಹಾಗೂ ವಜ್ರಕ್ಕೆ ಇರುವ ಸೂಕ್ಷ್ಮ ವ್ಯತ್ಯಾಸವನ್ನು ತಿಳಿಯಲಿಲ್ಲವೆಂದರೇ ತಪ್ಪಾಗಬಹುದು. ಇದನ್ನು ಕುರಿತು ಒಂದು ಕತೆಯಿದೆ. ಒಬ್ಬ ರಾಜನಿದ್ದನು. ಅವನ ಬಳಿಗೆ ಒಬ್ಬ ವ್ಯಾಪಾರಿ ಬಂದನು. ಅವನು ರಾಜನ ಮುಂದೆ ಹೊಳೆಯುವ ಎರಡು ತುಂಡುಗಳನ್ನು ಇಟ್ಟನು. ಸರಿಯಾದುದನ್ನು ಗುರುತಿಸುವ ಕೆಲಸ ರಾಜನದಾಗಿತ್ತು. ಅವನು ಒಂದು ತುಂಡನ್ನು ತೆಗೆದುಕೊಳ್ಳಬೇಕಾಗಿತ್ತು. ಅದು ಅಪ್ಪಟವಾಗಲಿ ಅಥವಾ ನಕಲಿಯಾಗಿರಲಿ, ವಜ್ರದ ಬೆಲೆಯನ್ನೇ ಅವನು ನೀಡಬೇಕಾಗಿತ್ತು. ಈಗ ರಾಜನು ಗಲಿಬಿಲಿಗೆ ಒಳಗಾದನು. ರಾಜನ ಸಮೀಪದಲ್ಲಿ ಸಾಧುವೊಬ್ಬನಿದ್ದನು. ಆ ಸಾಧುವಿಗೆ ಕಣ್ಣಿರಲಿಲ್ಲ. ಆದರೆ ಬಹಳ ಬುದ್ಧಿವಂತನಾಗಿದ್ದನು. ರಾಜನು ಅಪ್ಪಟವಜ್ರವನ್ನು ಆರಿಸಿಕೊಡುವ ಕೆಲಸ ಆ ಬುದ್ಧಿವಂತ ಸಾಧುವಿಗೆ ವಹಿಸಿದನು. ಸಾಧು ಸ್ವಲ್ಪ ಸಮಯದಲ್ಲಿಯೇ ಅಪ್ಪಟ ವಜ್ರವನ್ನು ಆರಿಸಿ ರಾಜನಿಗೆ ಕೊಟ್ಟುಬಿಟ್ಟನು ಹಾಗೂ ಗಾಜಿನ ತುಂಡನ್ನು ವ್ಯಾಪಾರಿಯ ಕೈಯಲ್ಲಿಟ್ಟುಬಿಟ್ಟನು. ರಾಜನಿಗೆ ಬಹಳ ಆಶ್ಚರ್ಯವಾಯಿತು. ಅವನು ‘ಯಾವ ರೀತಿ ಅಪ್ಪಟವಜ್ರವನ್ನು ಕಂಡುಹಿಡಿದೆ?’ ಎಂದು ಸಾಧುವನ್ನು ಕೇಳಿದನು. ಈ ಕತೆಯಲ್ಲಿ ಸಾಧು ಅಪ್ಪಟವಜ್ರವನ್ನು ಗುರುತಿಸಲು ಹೇಳಿದಂತಹ ರೀತಿ ಸರಿಯೋ ಅಥವಾ ತಪ್ಪೋ ನನಗೆ ತಿಳಿಯದು. ಆದರೆ ಕತೆಯಂತೂ ಹೀಗಿದೆ – ಸಾಧುವು ಆ ಎರಡು ತುಂಡುಗಳನ್ನು ಕೆಲ ಸಮಯದವರೆಗೂ ಬಿಸಿಲಿನಲ್ಲಿಟ್ಟನು. ಗಾಜಿನ ತುಂಡು ವಜ್ರಕ್ಕೆ ಹೋಲಿಸಿದಲ್ಲಿ ಬಹಳ ಬೇಗ ಹೆಚ್ಚು ಬಿಸಿಯಾಗಿತ್ತು. ಹೀಗೆ ಅವನು ಅಪ್ಪಟ ವಜ್ರವನ್ನು ಗುರುತಿಸಿದನು. ಈ ಕತೆಯ ತಾತ್ಪರ್ಯವೆಂದರೆ ಜೀವನದಲ್ಲಿ ಅಸಲಿ ಅಥವಾ ನಕಲಿಯನ್ನು ಗುರುತಿಸುವಂತಹ ಸಂದರ್ಭಗಳು ಅನೇಕ ಬಾರಿ ಎದುರಾಗುತ್ತವೆ ಮೇಲ್ನೋಟಕ್ಕೆ ಪ್ರಗತಿಯ ಶೀಘ್ರಮಾರ್ಗ ಕಾಣಿಸುತ್ತದೆಯೋ ಅದರ ಪರಿಣಾಮವಾಗಿ ಚಕ್ರವ್ಯೂಹದ ಆಟವಾಗಿ ನಮ್ಮನ್ನು ಎಲ್ಲಿಗೋ ತಲುಪಿಸಿಬಿಡುತ್ತದೆ. ದಾರಿತಪ್ಪಿದ ಸಂಗತಿ ನಮಗೆ ತಿಳಿಯುವುದರೊಳಗೆ ಎಲ್ಲವೂ ಮಣ್ಣುಪಾಲಾಗುತ್ತದೆ. ನಮ್ಮ ಉದ್ದೇಶದ ಮೇಲೆ ತಣ್ಣೀರೆರಚಿದಂತಾಗುತ್ತದೆ. ಆದುದರಿಂದ ಸರ್ವಾಂಗೀಣ ಉನ್ನತಿಗಾಗಿ ಕಟಿಬದ್ಧರಾದರೆ ಸಾಲದು. ತಮ್ಮ ಗುರಿಯ ಸರಿಯಾದ ಅರಿವೂ ಸಹ ಇರಬೇಕು. ಉನ್ನತಿಯ ಸ್ವರೂಪ ಹಾಗೂ ಅದರ ದಿಕ್ಕಿನ ಸೂಕ್ಷ್ಮಾತಿಸೂಕ್ಷ್ಮ ವೈಜ್ಞಾನಿಕ ಪದ್ಧತಿಯನ್ನು ಒಳಗೊಂಡ ಜ್ಞಾನವನ್ನು ಪಡೆಯುವ ವಿಧಾನ ನಮಗೆ ತಿಳಿದರೆ ಯಶಸ್ಸು ನಿಶ್ಚಿತವಾಗಿ ಸಿಗುತ್ತದೆ. ಭೂಗೋಳಶಾಸ್ತ್ರದಲ್ಲಿ ಭೂಗೋಳದ ಮೇಲೆ ಯಾವುದೇ ನಗರದ ಸರಿಯಾದ ಸ್ಥಾನವನ್ನು ನಿರ್ಧರಿಸಲು ಹೇಗೆ

ಅಕ್ಷಾಂಶ ಹಾಗೂ ರೇಖಾಂಶಗಳ ರೇಖೆಗಳನ್ನು ನಿರ್ಧರಿಸಲಾಗುವುದೋ ಅದೇ ರೀತಿ ಉನ್ನತಿಯನ್ನು ಕುರಿತು ಅದರ ಸ್ವರೂಪ ಹಾಗೂ ದಿಕ್ಕು ಎರಡೂ ವಿಷಯಗಳು ಮುಂಚಿತವಾಗಿಯೇ ನಿರ್ಧರಿಸಲ್ಪಡಬೇಕು.

ಆದುದರಿಂದ ಸಮಾಜದ ಪ್ರಾರ್ಥನೆಯಲ್ಲಿ "ಪರಂ ವೈಭವಂ ನೇತುವೇತತ್ತ್ವ ರಾಷ್ಟ್ರಂ" ಉದ್ದೇಶವನ್ನು ಘೋಷಿಸುವ ಸಾಲಿದೆ. ಅಲ್ಲಿ ಆ ಸಾಲಿನೊಡನೆ ಮತ್ತಷ್ಟು ವಿಷಯಗಳನ್ನು ಹೇಳಲಾಗಿದೆ ಎಂಬುದು ನಮಗೆ ತಿಳಿದ ಸಂಗತಿ. 'ರಾಷ್ಟ್ರದ ಪರಮ ವೈಭವ'ದ ಗುರಿಯು ಅವಶ್ಯವಾಗಿದೆಯಾದರೂ ಯಾವುದೇ ಮಟ್ಟದ ವೈಭವ, ಪರಮವೈಭವವೆನಿಸಿಕೊಳ್ಳುವುದಿಲ್ಲ. ಸಾಲವಾಗಿ ಪಡೆದ ಸಂಪತ್ತಿನಿಂದ ಅಥವಾ ಪರಿಸ್ಥಿತಿಗಳ ಒತ್ತಡಕ್ಕೆ ಸಿಲುಕಿ ತೆಗೆದುಕೊಂಡ ನಿರ್ಣಯಗಳಿಂದ ಪಡೆದ ಪ್ರಗತಿಯನ್ನೇ ನಾವು ವೈಭವಪೂರ್ಣ ಸ್ಥಿತಿ ಎಂದು ತಿಳಿದಲ್ಲಿ ಅದರ ಪರಿಣಾಮ ಬಹಳ ದುಃಖದಾಯಕವಾಗುತ್ತದೆ. ಭರತವರ್ಷದ ಅತಿ ಪ್ರಾಚೀನ ಸನಾತನ ರಾಷ್ಟ್ರ-ಜೀವನದ ಆಧಾರಸ್ವರೂಪವಾದ ನಂಬಿಕೆಗಳನ್ನು ಅಲ್ಲಗಳೆದು ನಾವು ಮುಂದೆ ಚಲಿಸಿದಲ್ಲಿ ಐತಿಹಾಸಿಕ ಪ್ರಮಾಣಗಳು ಹಾಗೂ ತರ್ಕಶುದ್ಧ ವೈಚಾರಿಕ ಸಾರವನ್ನು ತ್ಯಜಿಸಿ ನಾವು ಕಾರ್ಯಕೈಗೊಂಡಲ್ಲಿ ಏನು ಪ್ರಯೋಜನ ? ಕೇವಲ ಚಲಿಸುವುದನ್ನು ಗತಿಯೆಂದು ತಿಳಿದಲ್ಲಿ ನಿಶ್ಚಯಗೊಳಿಸಿದ ಸ್ಥಾನಕ್ಕೆ ತಲುಪಲಾಗುವುದೇ? ಕೇವಲ ಯಾತ್ರಿಗಳಾಗಿ ಕಾಶಿಯನ್ನು ತಲುಪದೇ ಲಂಡನ್, ಮಾಸ್ಕೋ ಅಥವಾ ವಾಶಿಂಗ್‌ಟನ್ ತಲುಪಿದಲ್ಲಿ ನಮಗೆ ಕಾಶಿಯ ಗಂಗಾಸ್ನಾನದ ಪುಣ್ಯ ಲಭಿಸುವುದೇ? ಆದುದರಿಂದ ಯಾವ ರೀತಿ ಯಾತ್ರೆ ಅನಿವಾರ್ಯವೋ ಅದೇ ರೀತಿ ಪ್ರತಿಯೊಂದು ಹೆಜ್ಜೆಯನ್ನು ನಿರ್ಧರಿಸುವ ಶರತ್ತು ಕೂಡ ಅನಿವಾರ್ಯವಾಗಿದೆ. ಆದ್ದರಿಂದ ಈ ಪ್ರಾರ್ಥನೆಗಾಗಿ "ಪರಂ ವೈಭವಂ ನೇತುಮೇ ತತ್ಸ್ವ ರಾಷ್ಟ್ರಂ"ನ ಸಾಲು ಎಲ್ಲಿಯ ತನಕ ಪೂರ್ಣವಾಗುವುದಿಲ್ಲವೆಂದರೇ ಅದಕ್ಕೆ ಮುಂಚಿತವಾಗಿ ಹೇಳಲಾದ ಸಾಲು "ವಿಜೇತ್ರಿಚೇನಃ ಸಂಹತಾ ಕಾರ್ಯಶಕ್ತಿರ್" ಹಾಗೂ "ವಿಧಾಯಾಸ್ಯ ಧರ್ಮಸ್ಯ ಸಂರಕ್ಷಣಂ"ನ ಸರಿಯಾದ ಅರ್ಥ ತಿಳಿಯುವವರೆಗೂ ಅದು ಪೂರ್ಣವಾಗಲಾರದು. ಕೇವಲ ವೈಭವದಿಂದ ಕೆಲಸ ನಡೆಯುವುದಿಲ್ಲ. 'ಧರ್ಮವನ್ನು ರಕ್ಷಿಸುತ್ತಾ ನಮ್ಮ ಸಂಘಟಿತ ಕಾರ್ಯಶಕ್ತಿ ರಾಷ್ಟ್ರವನ್ನು ಪರಮವೈಭವಕ್ಕೆ ಕೊಂಡೊಯ್ಯುವಲ್ಲಿ ಸಮರ್ಥವಾಗಲಿ' ಎಂದು ಈ ಸಾಲುಗಳಲ್ಲಿ ಹೇಳಲಾಗಿದೆ. ಅಂದರೆ ರಾಷ್ಟ್ರವನ್ನು ಪರಮವೈಭವದೆಡೆ ಕೊಂಡು ಹೋಗುವಲ್ಲಿ ಎರಡು ಸವಾಲುಗಳನ್ನು ಪೂರ್ಣಗೊಳಿಸಬೇಕು. ಆಗ ಮಾತ್ರ ಆ ವೈಭವ, ರಾಷ್ಟ್ರದ ನಿಜವಾದ ವೈಭವವಾಗಲು ಸಾಧ್ಯ. ಮೊದಲನೆಯ ವಿಷಯವೆಂದರೆ ಈ ವೈಭವ ನಮ್ಮ ರಾಷ್ಟ್ರೀಯ ಪುರುಷಾರ್ಥದಿಂದ ಗಳಿಸಬೇಕು. ಇದಕ್ಕಾಗಿ ಸಂಪೂರ್ಣ ರಾಷ್ಟ್ರದ ಒಟ್ಟುಗೂಡಿದ ಕಾರ್ಯಶಕ್ತಿ ಅಗತ್ಯವಿದೆ.



ಈ ಸವಾಲು ಪೂರ್ಣಗೊಂಡಾಗಲೇ ಆ ವೈಭವವನ್ನು ಭಾರತದ ನಿಜವಾದ ವೈಭವವೆನ್ನಬಹುದು. ಜೊತೆಗೆ ಎರಡನೆಯ ವಿಷಯವೆಂದರೆ, ಒಗ್ಗೂಡಿದ ಕಾರ್ಯಶಕ್ತಿಯಿಂದ ಗಳಿಸಿದ ವೈಭವದ ಸಾಫಲ್ಯ ಧರ್ಮದ ಸಂರಕ್ಷಣೆಯನ್ನು ಮಾಡುತ್ತಾ ಹೊಂದಬೇಕು. ಕೇವಲ ಒಗ್ಗೂಡಿದ ಶಕ್ತಿಯು ಸಾಕಾಗುವುದಿಲ್ಲ. ನಾಲ್ಕು ಜನ ಕಳ್ಳರು ಸಹ ಪರಸ್ಪರ ಪ್ರಬಲವಾದ ಒಕ್ಕೂಟವನ್ನು ರಚಿಸಿಕೊಳ್ಳಬಹುದು. ಆದರೆ ಆ ಒಕ್ಕೂಟ ಸ್ಥಾಯಿ ಹಾಗೂ ಕಲ್ಯಾಣಕಾರಿಯಾಗಿರುವುದಿಲ್ಲ. ಆದುದರಿಂದಲೇ ಧರ್ಮದ ಸಂರಕ್ಷಣೆ ಮಾಡುತ್ತಾ 'ಸಂಹತಾ' ಅಂದರೆ ನಮ್ಮ ಸಂಘಟಿತ/ ಕಾರ್ಯಶಕ್ತಿಯು 'ವಿಜೇತ್ರಿ' ಅಂದರೆ ವಿಜಯಶಾಲಿನಿಯಾಗಬೇಕಾಗುವುದು ಅತ್ಯಗತ್ಯ. ಧರ್ಮವನ್ನು ಆಧಾರವಾಗಿರಿಸಿ ನಾವು ಎಲ್ಲ ರಾಷ್ಟ್ರೀಯ ಜನರ ಸಂಘಟಿತ ಶಕ್ತಿಯ ಕಾರ್ಯಶಕ್ತಿಯು ವಿಜಯಶಾಲಿಯಾದಲ್ಲಿ ನಮ್ಮ ರಾಷ್ಟ್ರವು ಪರಮ ವೈಭವವನ್ನು ಪಡೆಯುವುದರಲ್ಲಿ ಸಮರ್ಥವಾಗುತ್ತದೆ. ಈ ಮೂರು ವಿಷಯಗಳನ್ನು ಜೊತೆಯಾಗಿಯೆ ಗಮನದಲ್ಲಿಟ್ಟುಕೊಳ್ಳಬೇಕು. ಕೇವಲ ಒಂದನ್ನು ಕುರಿತು ವಿಚಾರಮಾಡುವುದರಿಂದ ಕಾರ್ಯವಾಗುವುದಿಲ್ಲ. ಒಂದನ್ನು ಬಿಟ್ಟು ಮತ್ತೊಂದರ ಕಲ್ಪನೆ ಸಾಧ್ಯವಿಲ್ಲ. ಪರಮ ವೈಭವವನ್ನು ಗಳಿಸಲು ಯಶಸ್ವೀ ಪ್ರಯತ್ನಗಳು ಅಗತ್ಯ. ಪ್ರಯತ್ನಗಳ ಯಶಸ್ಸು ಒಕ್ಕೂಟವನ್ನು ಅವಲಂಬಿಸುತ್ತದೆ. ಧರ್ಮವಿಲ್ಲದೇ ಯಾವುದೇ ಸ್ಥಾಯಿ ಒಕ್ಕೂಟವು ನಿಲ್ಲಲಾರದು. ಅದೇ ರೀತಿ ಧರ್ಮ ಪ್ರಕಟಗೊಳ್ಳಲು ಸಂಘಟನೆ/ಒಕ್ಕೂಟದಂತಹ ಕಾರ್ಯದಕ್ಷ ನಕಾಶೆಯಿರಬೇಕು. ಒಕ್ಕೂಟ ಸ್ವಾಭಾವಿಕವಾಗಿ ಒಂದಾಗಿರುವ ಹಾಗೂ ಒಂದು ಅಂಗ-ಅಂಗೀಯ ಸಂಬಂಧವಿರುವ ಸಮೂಹವಾದುದರಿಂದ ಒಂದೇ ಹೆಸರಿನಿಂದ ಕರೆಯಲ್ಪಡುವ ಜನರಲ್ಲಿ ಮಾತ್ರ ಸಾಧ್ಯವಾಗುತ್ತದೆ. ಯಾವ ರೀತಿ ಶರೀರ ಹಾಗೂ ಆತ್ಮದ ಸಂಬಂಧವಿದೆಯೋ ಹಾಗೆ ಆತ್ಮ ಅತ್ಯಗತ್ಯವಾಗಿದೆ ಇಲ್ಲದಿದ್ದಲ್ಲಿ ಕೇವಲ ಶರೀರ ಯಾವ ಕೆಲಸಕ್ಕೂ ಬಾರದು. ಶರೀರದ ಸ್ವರೂಪಕ್ಕೆ ಮಹತ್ವ ಕಡಿಮೆ ಎಂದು ಹೇಳಲಾಗುವುದಿಲ್ಲ. ಶರೀರವಿಲ್ಲದಿದ್ದಲ್ಲಿ ಆತ್ಮ ಹೇಗೆ ಪ್ರಕಟಗೊಳ್ಳುತ್ತದೆ? ಶರೀರ ಹಾಗೂ ಆತ್ಮ ಎರಡೂ ಇದ್ದರೂ ನೆನಪು ನಶಿಸಿಹೋದಲ್ಲಿ, ಸ್ವಅಸ್ತಿತ್ವದ ಜ್ಞಾನವಿರದಿದ್ದಲ್ಲಿ, ವ್ಯಾವಹಾರಿಕ ಜಗತ್ತಿನಲ್ಲಿ ವಿಭಿನ್ನ ಮಾನವ ಸಮುದಾಯಗಳೊಡನೆ ಬರುವಂತಹ ಒಳ್ಳೆಯ-ಕೆಟ್ಟ ಸಂಬಂಧಗಳ ನಡುವೆ ತನ್ನ ವೈಶಿಷ್ಟ್ಯಗಳನ್ನು ಪ್ರತಿನಿಧಿಸುವಂತಹ ಹೆಸರು ಇರದಿದ್ದಲ್ಲಿ ಎಲ್ಲವೂ ವ್ಯರ್ಥವಾಗುತ್ತದೆ. ಹುಚ್ಚ ಅಥವಾ ಅವಿಕಸಿತ ವ್ಯಕ್ತಿಯನ್ನು ಯಾವುದೇ ಹೆಸರಿನಿಂದ ಕರೆಯಿರಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಆದ್ದರಿಂದಲೇ ಹೆಸರಿನ ಮಹತ್ವವೂ ಇದೆ.

ಹಾಗೆಯೇ ಪರಮ ವೈಭವಕ್ಕಾಗಿ ಮೂರು ವಿಷಯಗಳು ಅಗತ್ಯವಾಗಿ ಬೇಕು. ಶರೀರದಲ್ಲಿ ಆತ್ಮಕ್ಕೆ ಎಷ್ಟು ಮಹತ್ವವಿದೆಯೋ ಅಷ್ಟೇ ಸಂಘಟನೆಯಲ್ಲಿ

ಅಂದರೆ ಸಮಾಜದಲ್ಲಿ ಧರ್ಮದ ಸ್ಥಾನವಿದೆ.

ಧರ್ಮವನ್ನು ಆಧರಿಸಿ ಸಮಾಜವು ಕಾರ್ಯನಿರ್ವಹಿಸುತ್ತದೆ. ಈ ಕಾರಣದಿಂದಾಗಿಯೇ ಸಂಘಟಿತ ಕಾರ್ಯಶಕ್ತಿಯ ಸ್ವಾಭಾವಿಕ ಪರಿಣಾಮ ಸ್ವರೂಪವೇ ಪ್ರಗತಿಯಾಗುತ್ತದೆ. ಅದೇ ಪರಮ ವೈಭವವಾಗುತ್ತದೆ. ಶರೀರ ಹಾಗೂ ಆತ್ಮ ಸರಿಯಾಗಿ ಜೊತೆ ಸೇರಿದಾಗ ಪ್ರಗತಿ ಸಹಜವಾಗಿ ಉಂಟಾಗುತ್ತದೆ. ಆತ್ಮಕ್ಕೆ ಅನುಕೂಲವಾದಂತಹ ಕೆಲಸವನ್ನೇ ಶರೀರ ಮಾಡುತ್ತದೆ. ಆಗ ಯಾವುದನ್ನೂ ಬೇರ್ಪಡಿಸಬೇಕಾಗಿಲ್ಲ. ಹೆಜ್ಜೆ ಹೆಜ್ಜೆಗೂ ಸಾಫಲ್ಯ ಹಾಗೂ ಉನ್ನತಿಯಾಗುವುದು. ಯಾವುದೇ ತೊಂದರೆಯಿರುವುದಿಲ್ಲ. ಆದರೆ ಶರೀರ ಹಾಗೂ ಆತ್ಮದ ನಡುವೆ ಯಾವುದೇ ವ್ಯತ್ಯಾಸ ಬಂದಲ್ಲಿ ತೊಂದರೆ ಎದುರಾಗುತ್ತದೆ. ಶರೀರ ಆತ್ಮವನ್ನು ಅವಹೇಳನೆಗೊಳಿಸುತ್ತಾ ಕಾರ್ಯ ನಿರ್ವಹಿಸಿದಲ್ಲಿ ಕೈ–ಕಾಲು ಖಂಡಿತ ಕೆಲಸವನ್ನಂತೂ ಮಾಡುತ್ತವೆ. ಆದರೆ ಈ ಆಂತರಿಕ ಸಂಘರ್ಷದಲ್ಲಿ ಎರಡೂ ಬಹಳ ದುರ್ಬಲವಾಗುತ್ತವೆ. ಶರೀರ ಕ್ಷೀಣಿಸುತ್ತದೆ ಹಾಗೂ ಆತ್ಮ ಮಲಿನಗೊಳ್ಳುತ್ತದೆ. ಈ ಕ್ರಿಯೆಗಳು ನಾಶದೆಡೆಗೆ ಕೊಂಡೊಯ್ಯುತ್ತವೆ. ಶರೀರ ಅಲೆದಾಡುತ್ತದೆ, ನಾಲಗೆ ಬಯಸಿದ ತಿನಿಸುಗಳನ್ನು ತಿನ್ನಲು ಇಷ್ಟಪಡುತ್ತದೆ ಹಾಗೂ ಹೊಟ್ಟೆ ಆ ಭಾರವನ್ನು ಹೊರುವುದರಲ್ಲಿ ಅಸಮರ್ಥವಾಗುತ್ತದೆ. ಆಗ ಒಂದೊಂದಾಗಿ ಪ್ರತಿಯೊಂದು ಅಂಗವೂ ತನಗಿಷ್ಟಬಂದ ಹಾಗೆ ನಡೆದುಕೊಳ್ಳುತ್ತದೆ. ಈ ರೀತಿಯ ಉಧ್ವಸ್ತ ಶರೀರದಲ್ಲಿ ಆತ್ಮವಾದರೂ ಎಷ್ಟು ದಿನಗಳವರೆಗೂ ಇರಬಲ್ಲದು? ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಯೋಚಿಸಬೇಕು. ಇದೇ ರೀತಿ ಸಾಮಾಜಿಕ ಅಸ್ತಿತ್ವದ ಅರಿವು, ಅದನ್ನು ಕಾರ್ಯರೂಪಕ್ಕೆ ತರಲು ಸಂಘಟಿತ ಕಾರ್ಯಶಕ್ತಿ ಹಾಗೂ ಇದಕ್ಕೆಲ್ಲಾ ಆಧಾರವಾಗಿರುವ ಧರ್ಮ– ಈ ಮೂರೂ ವಿಷಯಗಳು ಜೊತೆಯಾದಾಗ ಪರಮ ವೈಭವವನ್ನು ಗಳಿಸಿಕೊಳ್ಳಬಹುದು.

ಸಮಾಜದ ಸ್ಥಿತಿ ಹಾಗೂ ವಿಕಾಸದಲ್ಲಿ ಯಾವ ಧರ್ಮದ ಮಹತ್ವವಿದೆಯೋ ಅದನ್ನು ಸಹ ಚೆನ್ನಾಗಿ ತಿಳಿದುಕೊಳ್ಳಬೇಕು. ಪರಮವೈಭವವನ್ನು ಗಳಿಸಲು ಮೇಲಿನ ಪಂಕ್ತಿಗಳಲ್ಲಿ ಹೇಗೆ ಧರ್ಮದ ಅನಿವಾರ್ಯತೆಯನ್ನು ಹೇಳಲಾಗಿದೆಯೋ ಅದರಿಂದ ಅದರ ಸ್ವರೂಪದ ಅಲ್ಪ ಸ್ವಲ್ಪ ಜ್ಞಾನವುಂಟಾಗುತ್ತದೆ.

ಇಂದು 'ಧರ್ಮ' ಶಬ್ದವನ್ನು ಬಹಳ ಬಳಸಲಾಗುತ್ತಿದೆ. ಪಕ್ಷ ಹಾಗೂ ವಿರೋಧಗಳಲ್ಲಿ ಧರ್ಮದ ಚರ್ಚೆ ನಡೆಯುತ್ತಿರುತ್ತದೆ. ಧರ್ಮವನ್ನು ಈ ರೀತಿ ಎಳೆದಾಡುವುದರಿಂದ ಅದರ ಅರ್ಥವು ಅನರ್ಥವಾಗಿ ನಾಲ್ಕೂ ಕಡೆ ಹರಡುವುದನ್ನು ನಾವು ಗಮನಿಸಬಹುದು.

ಯಾವ ವಿಷಯಗಳು ಧರ್ಮಕ್ಕೆ ಸಂಬಂಧಪಟ್ಟಿರುವುದಿಲ್ಲವೋ ಅದೇ ವಿಷಯವನ್ನು ಧರ್ಮಕ್ಕೆ ಆರೋಪಿಸಿ ಜನರು ಸ್ವಯಂ ಧರ್ಮಾತ್ಮರಾಗಿಬಿಡುತ್ತಾರೆ.



ಹೀಗೆ ಮಂದಿರ, ಮಸೀದಿ, ಚರ್ಚಿಗೆ ಹೋಗುವುದು ಧರ್ಮದ ಒಂದು ಅಂಗವಾಗಿದೆ ಆದರೆ ಹಲವಾರು ಬಾರಿ ಧರ್ಮದ ವ್ಯಾಪಕತೆಯನ್ನು ವಿಚಾರಮಾಡದೇ ಯಾವ ವ್ಯಕ್ತಿ ಮಂದಿರ, ಮಸೀದಿಗೆ ಹೋಗುತ್ತಾನೆಯೋ ಅವನು ಧರ್ಮಾತ್ಮನೆಂದು ಸ್ವೀಕರಿಸಲಾಗುತ್ತದೆ. ಧರ್ಮದ ಹೆಸರಿನಲ್ಲಿ ಇಂತಹ ಎಷ್ಟೋ ಸಂಗತಿಗಳು ನಡೆದಿವೆ. ಈ ಸಂಗತಿಗಳಿಂದ ಧರ್ಮ ಅನುಪಯೋಗಿ, ಹೇಯ ಹಾಗೂ ತ್ಯಾಜ್ಯವಾಗಿ ಬಿಟ್ಟಿದೆ. ಸ್ವಾರ್ಥಿ ಹಾಗೂ ಧೂರ್ತ ಜನರು ಈ ಪ್ರಪಂಚದಲ್ಲಿ ಪ್ರತಿಯೊಂದು ಸಾಮಾಜಿಕ ದೌರ್ಬಲ್ಯದಿಂದ ಲಾಭ ಪಡೆಯುವುದನ್ನು ಬಿಡುವುದಿಲ್ಲ. ಈ ರೀತಿಯ ದೌರ್ಬಲ್ಯಗಳನ್ನು ಮುಚ್ಚಿಡುವ ಸಲುವಾಗಿ ಸಮಾಜದಲ್ಲಿ ಸದಾ ಅಜ್ಞಾನವನ್ನು ಹರಡುತ್ತಾರೆ. ಈ ಕಾರಣದಿಂದ ಧರ್ಮದ ಹೆಸರಿನಲ್ಲಿ ಅತ್ಯಂತ ವಿಕೃತ ಧೋರಣೆಗಳು ಪ್ರಚಲಿತವಾಗಿವೆ. ಉದಾಹರಣೆಗೆ ಅಸ್ಪೃಶ್ಯತೆಯನ್ನು ಕೆಲವು ಜನರು ಧರ್ಮವೆಂದು ತಿಳಿಯುತ್ತಾರೆ. ಈ ಕುರಿತು ಒಂದು ಘಟನೆ ನನಗೆ ನೆನಪಾಗುತ್ತಿದೆ. ನಮಗೆ ತಿಳಿದ ನಮ್ಮ ಪರಿಚಯದ ಒಬ್ಬ ವಿಖ್ಯಾತ ವಕೀಲರಿದ್ದಾರೆ. ಅವರ ಬಳಿ ಒಂದು ಮೊಕದ್ದಮೆ ಬಂದಿತು. ಅದು ಸೇನಾಪಡೆಗೆ ಸಂಬಂಧಪಟ್ಟ ವಿಷಯವಾಗಿತ್ತು. ಭಯಂಕರವಾದ ದರೋಡೆಯ ವಿಷಯವಾಗಿತ್ತು. ಯಾವ ವ್ಯಕ್ತಿ ಈ ವಿಷಯದಲ್ಲಿ ಸಿಕ್ಕಿಬಿದ್ದಿದ್ದನೋ ಅವನು ವಕೀಲರ ಬಳಿ ಬಂದು ಅವರೇ ತಮ್ಮ ವಕೀಲರಾಗಬೇಕೆಂದು ಪ್ರಾರ್ಥಿಸಿದನು. ಅವನು ಒಬ್ಬ ನುರಿತ ಕಳ್ಳನಾಗಿದ್ದನು. ಹಲವಾರು ಬರಿ ದರೋಡೆ ಮಾಡಿದ್ದನು. ಆದರೂ ಈ ವಿಷಯದಲ್ಲಿ ನಿರ್ದೋಷಿಯಾಗಿದ್ದನು. ಅವರು ಈ ಮೊಕದ್ದಮೆಗಾಗಿ ಹೋರಾಡಿದರು. ಮೊಕದ್ದಮೆಯನ್ನು ಗೆದ್ದರು. ಆ ವ್ಯಕ್ತಿಯನ್ನು ನ್ಯಾಯಾಲಯದಿಂದ ಬಿಡುಗಡೆ ಮಾಡಲಾಯಿತು.

ನ್ಯಾಯಾಲಯದಿಂದ ಬಿಡುಗಡೆಯಾದ ನಂತರ ಕೃತಜ್ಞತೆಯನ್ನು ಸಲ್ಲಿಸಲು ಆ ವ್ಯಕ್ತಿ ವಕೀಲನ ಬಳಿಗೆ ಬಂದನು. ಅವನ ಕಾಲಿಗೆ ಬಿದ್ದು, 'ಸ್ವಾಮಿ ನಿಮ್ಮ ಕೃಪೆಯಿಂದ ನನ್ನ ಬಿಡುಗಡೆಯಾಯಿತು. ನಾನು ಹಲವಾರು ಕಳ್ಳತನ, ದರೋಡೆಗಳನ್ನು ಮಾಡಿದ್ದೇನೆ, ಜನರನ್ನು ಪೀಡಿಸುವ ಹಲವಾರು ಕೃತ್ಯಗಳನ್ನು ಎಸಗಿದ್ದೇನೆ. ಆದರೆ ಮಹಾಸ್ವಾಮಿ ಈ ಜನಿವಾರದಾಣೆಗೂ ನಾನು ಎಂದಿಗೂ ನನ್ನ ಧರ್ಮವನ್ನು ಮರೆತಿಲ್ಲ.' ವಕೀಲನು ಆಶ್ಚರ್ಯದಿಂದ ಕೇಳಿದನು, 'ಅದು ಹೇಗೆ?' ಅವನು ಹೇಳಿದನು, 'ಮಹಾಸ್ವಾಮಿ, ಇಷ್ಟು ವಯಸ್ಸಾದರೂ ಬೇರೆಯವರು ಮುಟ್ಟಿದ ಆಹಾರವನ್ನು ಸೇವಿಸಿಲ್ಲ. ನನ್ನ ಧರ್ಮವನ್ನು ಬಿಡಲಿಲ್ಲ.' ಅಂದರೆ ಆ ವ್ಯಕ್ತಿಯ ಪ್ರಕಾರ ಯಾರೂ ಮುಟ್ಟದ ಆಹಾರವನ್ನು ಸೇವಿಸುವುದೇ ಧರ್ಮಪಾಲನೆಯನ್ನು ಮಾಡುವುದು ಎಂದರ್ಥ. ಹಾಗೆಯೇ ನಾನು ಒಂದೆಡೆಗೆ ಹೋದಾಗ ನನಗೆ ಹೀಗೆ ಹೇಳಿದರು, 'ನೋಡಿ ಉಪಾಧ್ಯಾಯರೇ, ನೀವು ಧರ್ಮದ ಸರಿಯಾದ

ಕಲ್ಪನೆಯನ್ನು ಜನರ ಮುಂದಿಡುತ್ತಿದ್ದೀರಿ. ಆದರೆ ಇಲ್ಲಿ ಹರಿಜನರ ಕಿವಿಗಳಲ್ಲಿ ಕಾಯಿಸಿದ ಸೀಸವನ್ನು ಹಾಕಲಾಗುವುದು ಹಾಗೂ ಇದನ್ನೇ ಅವರು ಧರ್ಮವೆಂದು ತಿಳಿಯುತ್ತಾರೆ." ಇದು ಧರ್ಮವಲ್ಲವೆಂದು ನಾನು ಹೇಳಿದೆ. ಆಗ ಅವರು ಹೇಳಿದರು, "ಆದರೆ ಇಲ್ಲಿ ಅದನ್ನೇ ಧರ್ಮವೆನ್ನಲಾಗುವುದು." ಹೀಗೆ ಧರ್ಮದ ಹೆಸರಿನಲ್ಲಿ ವಾಸ್ತವಕ್ಕೆ ಧರ್ಮವಲ್ಲದ ಅನೇಕ ವಿಷಯಗಳು ನಡೆಯುತ್ತಾ ಬಂದಿವೆ ಎನ್ನುವುದನ್ನು ನಾವು ಕಾಣಬಹುದು. ಆದರೆ ಧರ್ಮದ ಹೆಸರಿನಲ್ಲಿ ಪ್ರಚಲಿತವಾದ ಈ ವಿಷಯಗಳನ್ನೇ ಜನರು ಉತ್ತೇಜನಕ್ಕೊಳಗಾಗಿ ಇದನ್ನೇ ಧರ್ಮವೆಂದು ಕರೆಯುತ್ತಾರೆ. ಆದ್ದರಿಂದ ಇದರಿಂದ ನೋವಿಗೆ ಒಳಗಾದವರು ಈ ಧರ್ಮದಿಂದ ನಮ್ಮನ್ನು ಕಾಪಾಡಿ ಎಂದು ಕೂಗುತ್ತಾರೆ. ಇವರ ಮಾತುಗಳಿಂದ ಕರಗಿದ ಜನರು ಸಹ ಧರ್ಮದಿಂದ ದೂರ ಸರಿಯುವುದನ್ನು ಸರಿ ಎಂದು ತಿಳಿಯುತ್ತಾರೆ. ಈ ಸ್ಥಿತಿಯಲ್ಲಿ ಧರ್ಮವನ್ನು ಅರಿಯುವುದು ಬಹಳ ಕಷ್ಟ. ಕಥೆಯೊಂದು ಹೀಗಿದೆ. ಸೂರದಾಸ ಹೆಸರಿನ ವ್ಯಕ್ತಿಯೊಬ್ಬರು ಇದ್ದರು. ಅಂದರೆ ಭಕ್ತಸೂರದಾಸರಲ್ಲ. ಹುಟ್ಟಿನಿಂದ ಕುರುಡಾದ ವ್ಯಕ್ತಿಯನ್ನು ಸೂರದಾಸನೆಂದು ಕರೆಯಲಾಗುತ್ತದೆ.

ಸಜ್ಜನರೊಬ್ಬರು ಆ ಸೂರದಾಸರನ್ನು ಹೀಗೆ ಕೇಳಿದರು, "ಬಾಬಾ, ಪಾಯಸ ತಿನ್ನುವಿರೋ?"

ಸೂರದಾಸರು ಇಲ್ಲಿಯ ತನಕ ಪಾಯಸವನ್ನು ಸವಿದಿರಲಿಲ್ಲ. ಆದುದರಿಂದ ಅವರು ಕೇಳಿದರು, "ಪಾಯಸ? ಯಾವ ಪಾಯಸ? ಇದು ಹೇಗೆ ಇರುತ್ತದೆ?" ಪಾಯಸವೆಂದರೇನು ಎಂದು ತಿಳಿಸಲು ಮಾತು ಮುಂದುವರಿಯಿತು–

"ನಿಮಗೆ ಪಾಯಸವೆಂದರೆ ತಿಳಿಯದೋ?"

"ಇಲ್ಲ."

"ಅರೆ ಸೂರದಾಸ ಪಾಯಸ ಬಿಳುಪಗಿರುತ್ತದೆ"

"ಯಾವ ಬಿಳುಪು?"

"ಕೊಕ್ಕರೆಯ ಬಿಳುಪು"

"ಯಾವ ಕೊಕ್ಕರೆ?"

ಮೇಲೆ ತಿಳಿಸಿದ ಸಜ್ಜನರು ತಮ್ಮ ಕೈಯನ್ನು ಕೊಕ್ಕರೆಯ ಹಾಗೆ ಮಾಡಿ ಆ ಸೂರದಾಸರ ಕೈ ಕೆಳಗೆ ಇಟ್ಟು ಹೇಳಿದರು; "ಕೊಕ್ಕರೆ ಹೀಗೆ ಇರುತ್ತದೆ". ಸೂರದಾಸರು ಆ ಸಜ್ಜನರ ಕೈಯನ್ನು ಚೆನ್ನಾಗಿ ಪರೀಕ್ಷಿಸಿದರು. ಅನಂತರ ಹೀಗೆ ಹೇಳಿದರು, "ಬೇಡ ಸ್ವಾಮಿ, ಈ ಪಾಯಸವನ್ನು ನಾವು ತಿನ್ನಲಾರೆವು. ಇದು ಬಹಳ ಅಂಕು ಡೊಂಕಾದದ್ದಾಗಿದೆ."

ಹೀಗೆ ಒಳ್ಳೆಯ ಸ್ವಾದಿಷ್ಟವಾದ ಪಾಯಸವು ಸಹ ಆ ಕುರುಡನಿಗೆ ಅಂಕುಡೊಂಕಾದ ರೀತಿಯಲ್ಲಿ ಕಾಣುತ್ತದೆ. ಹಾಗೆಯೇ ಇಂದು ಧರ್ಮವನ್ನು



ತಿಳಿಯುವುದು ಕೆಲವು ಜನರಿಗೆ ಬಹಳ ಕಷ್ಟವೆನಿಸುತ್ತದೆ. ಹೀಗೆ ನಮ್ಮ ಸುತ್ತ–ಮುತ್ತ ಖೋಟಾನಾಣ್ಯಗಳು ಪ್ರಚಲಿತವಾದಲ್ಲಿ ನಿಜವಾದ ನಾಣ್ಯಗಳನ್ನು ಹುಡುಕುವುದು ಬಹಳ ಕಠಿಣವಾಗುತ್ತದೆ. ನಾನು ಒಂದು ಸ್ಥಳಕ್ಕೆ ಭೇಟಿ ನೀಡಿದೆ. ಅಲ್ಲಿ ೧೦ ಪೈಸೆಯ ಸಾಕಷ್ಟು ನಾಣ್ಯಗಳು ಪ್ರಚಲಿತವಿದ್ದವು. ನಾನು ರಿಕ್ಷಾದವನಿಗೆ ೧೦ ಪೈಸೆಯ ನಾಣ್ಯಕೊಟ್ಟಾಗ ಅವನು ಹೀಗೆ ಹೇಳಿದನು, 'ಅಯ್ಯಾ ಈ ನಾಣ್ಯ ಬೇಡ.' ನಾನು ಹೇಳಿದೆ, 'ಯಾಕಪ್ಪ, ಇದರಲ್ಲಿ ಏನು ದೋಷವಿದೆ?' ಆಗ ಅವನು ಹೇಳಿದನು, 'ದೋಷವೇನೂ ಇಲ್ಲವಾದರೂ ಇದು ಈಗ ನಡೆಯುವುದಿಲ್ಲ.' ನಾನು ಹೇಳಿದೆ, 'ದೋಷವಿರುವುದು, ಖೋಟಾನಾಣ್ಯ ನಡೆಯದಿರಬಹುದು, ಆದರೆ ಇದು ಒಳ್ಳೆಯ ನಾಣ್ಯವಾಗಿದೆ.' ನೀನು ಇದನ್ನು ಸ್ವೀಕರಿಸದಿದ್ದಲ್ಲಿ ಅಪರಾಧವಾಗುತ್ತದೆ, ನೀನು ಇದನ್ನು ಸ್ವೀಕರಿಸಲೇಬೇಕು ಎಂದು ಅವನಿಗೆ ಹೇಳಿದೆ. ಆಗ ಅವನು ಕೈ ಜೋಡಿಸಿ ಹೇಳಿದನು, 'ಅಯ್ಯಾ ನಾವು ಕಾನೂನು ಗೀನೂನು ಒಂದನ್ನೂ ಅರಿಯೆವು, ತಾವು ನನಗೆ ನಾಲ್ಕಾಣೆ (ಇಪ್ಪತ್ತೈದು ಪೈಸೆ) ಕೊಟ್ಟುಬಿಡಿ, ನಾನು ಉಳಿದ ಹಣವನ್ನು ವಾಪಸ್ ಮಾಡಿಬಿಡುವೆ.' ಅಂದರೆ ಖೋಟಾ ನಾಣ್ಯವೇ ಚಲಿಸಿತು. ದೋಷಯುಕ್ತ ನಾಣ್ಯ ಒಳ್ಳೆಯನಾಣ್ಯದ ಚಲನೆಯನ್ನು ನಿಲ್ಲಿಸುತ್ತದೆ ಎಂಬ ಸಿದ್ಧಾಂತವೂ ಇದೆ. ಏಕೆಂದರೆ ಅಲ್ಲಿ ಎಲ್ಲರೂ ಖೋಟಾ ನಾಣ್ಯಗಳ ಚಾಲನೆಗೇ ಪ್ರಯತ್ನಿಸುತ್ತಾರೆ. ಬಹಳ ಜನರು ನಾವು ಮೂರ್ಖರಾದರೆ ಮತ್ತೊಬ್ಬರನ್ನೂ ಮೂರ್ಖರನ್ನಾಗಿಸಬೇಕೆಂಬ ಪ್ರಯತ್ನದಲ್ಲಿರುತ್ತಾರೆ. ಮನುಷ್ಯನ ಮನಸ್ಸಿನಲ್ಲಿ ಮೂರ್ಖರಾಗುವ ಭಾವನೆ ಇರುವುದರಿಂದ ಪರರನ್ನು ಮೂರ್ಖರನ್ನಾಗಿಸಿದಾಗ ಶಾಂತಿಯನ್ನು ಅನುಭವಿಸುತ್ತಾರೆ. ಹೀಗೆ ಕೇವಲ ಖೋಟಾ ನಾಣ್ಯಗಳು ಚಲಿಸುತ್ತವೆ ಹಾಗೂ ಒಳ್ಳೆಯ ನಾಣ್ಯಗಳ ಚಾಲನೆ ನಿಂತುಹೋಗುತ್ತದೆ. ಸರಿಯಾಗಿ ಇದೇ ಮಾತನ್ನು ಧರ್ಮಕ್ಕೂ ಅನ್ವಯಿಸಬಹುದಾಗಿದೆ. ಧರ್ಮವನ್ನು ಕುರಿತು ಹೇಳುವುದಾದರೆ ವಿಕೃತಿಗಳ ಚಲನೆಯು ಹೆಚ್ಚಾಗಿದೆ. ಈ ಸ್ಥಿತಿಯಲ್ಲಿ ಜನರು ಈ ರೀತಿಯ ಧರ್ಮ ಬೇಡವೆಂದು ಹೇಳುತ್ತಾರೆ. ಸಂಪೂರ್ಣ ಧರ್ಮಕ್ಕೆ ಜನರು ಎಳ್ಳುನೀರು ಬಿಡುತ್ತಾರೆ. ಧರ್ಮದ ವಿಕೃತಿಯನ್ನು ಕಂಡು ಗಾಬರಿಗೊಂಡು ಸರಿಯಾದ ಧರ್ಮವನ್ನು ಬಿಡುವುದು ಭಯಂಕರ. ಆದರೆ ಈ ಸ್ಥಿತಿಯಿಂದ ಕೆಲಸ ಇನ್ನೂ ಕೆಡುತ್ತದೆ. ಮುಂದೆ ಕೆಲಸವೂ ಆಗುವುದಿಲ್ಲ. ಕಡೆಗೆ ಎಷ್ಟು ದಿವಸಗಳವರೆಗೆ ಧರ್ಮವನ್ನು ಅಲ್ಲಗಳೆಯಲಾಗುವುದು, ಏನಾದರೂ ಮಾಡಲೇಬೇಕಾಗುತ್ತದೆ. ಎಲ್ಲಿಯೋ ರೋಗ ಹರಡಿದೆಯೆಂದು ತಿಳಿದುಬಂತು. ಯಾರೋ ವ್ಯಕ್ತಿ ತಾನು ತಿನ್ನಬಾರದು ಹಾಗೂ ಕುಡಿಯಬಾರದೆಂಬ ನಿರ್ಣಯ ತೆಗೆದುಕೊಂಡನೆಂದುಕೊಳ್ಳಿ. ಹೀಗೆ ಎಷ್ಟು ಕಾಲ ನಡೆಯುವುದು? ಮನುಷ್ಯ ಊಟವಿಲ್ಲದೇ ಎಷ್ಟು ಕಾಲ ಇರಬಲ್ಲ? ಅವನು ಸರಿ ಹಾಗೂ ತಪ್ಪಿನ ಭೇದವನ್ನು

ವಿವೇಕದಿಂದ ತಿಳಿದು ವ್ಯವಹರಿಸುವುದು ಉತ್ತಮ. ಹೀಗೆಯೇ ಜನರು ಧರ್ಮವನ್ನು ಸಹ ವಿಕೃತಗೊಳಿಸಿರಬೇಕು. ದುರುಪಯೋಗ ಮಾಡಿರಬೇಕು. ಈ ಕಾರಣದಿಂದ ಧರ್ಮ ಅಪಾಯಕಾರಿ ಎಂದು ಸಹ ಕೆಲವರ ಭಾವನೆಯಿರಬೇಕು. ಆದರೂ ಸಹ ಧರ್ಮದ ಸತ್ಯ ಸ್ವರೂಪವನ್ನು ತಿಳಿದುಕೊಳ್ಳುವುದು ಅಗತ್ಯ, ಧರ್ಮವನ್ನು ಸಂಪೂರ್ಣವಾಗಿ ಹಾಗೇ ಬಿಡಲಾಗುವುದಿಲ್ಲ. ಮಂಚದ ಮೇಲೆ ಯಾರೋ ಸತ್ತುಹೋದ ಮಾತ್ರಕ್ಕೆ ಮಂಚದ ಮೇಲೆ ಮಲಗುವುದನ್ನೇ ನಿಲ್ಲಿಸಲಾಗುವುದಿಲ್ಲ. ರಸ್ತೆಯ ಮೇಲೆ ಅಪಘಾತವಾಗುವುದೆಂದು ಜನರು ರಸ್ತೆಯ ಮೇಲೆ ನಡೆಯುವುದನ್ನು ನಿಲ್ಲಿಸಲಾರರು. ದೋಷಯುಕ್ತ, ವಿಕೃತ, ಅಹಿತ ಸಂಗತಿಗಳನ್ನು ದೂರಮಾಡಿ ಒಳ್ಳೆಯದನ್ನು ಗ್ರಹಿಸುವುದೇ ಬುದ್ಧಿವಂತರ ಲಕ್ಷಣ.

ಧರ್ಮದ ಹೆಸರಿನಲ್ಲಿ ಯಾವ ವಿಕೃತಿ ಇಂದು ನಾಲ್ಕು ಎಡೆ ಕಾಣುತ್ತಿದೆಯೋ ಅದಕ್ಕಿರುವ ಅನ್ಯ ಕಾರಣಗಳೊಡನೆ ಒಂದು ದೊಡ್ಡ ಕಾರಣವೆಂದರೆ ವಿದೇಶಿ ಶಿಕ್ಷಣವೂ ಆಗಿದೆ. ಆಂಗ್ಲ ಶಬ್ದ 'ರಿಲಿಜನ್' ಧರ್ಮವನ್ನು ಕುರಿತಾದ ಶುದ್ಧ ಅರ್ಥವನ್ನು ಅಶುದ್ಧಗೊಳಿಸುವುದರಲ್ಲಿ ತನ್ನ ಸಹಕಾರವನ್ನು ನೀಡಿದೆ. ಆಂಗ್ಲರು ಭಾರತಕ್ಕೆ ಬಂದಾಗ ಅವರು ಭಾರತದಲ್ಲಿ ಧರ್ಮ ಶಬ್ದವನ್ನು ಕೇಳಿದರು. ಧರ್ಮದಂತಹ ವ್ಯಾಪಕ ಶಬ್ದ ಅವರಲ್ಲಿರಲಿಲ್ಲ. ಅವರು ಧರ್ಮವನ್ನು 'ರಿಲಿಜನ್' ಎಂದು ಅನುವಾದ ಮಾಡಿದರು. ಅನುವಾದದಿಂದ ಈ ರೀತಿಯ ಅನರ್ಥಗಳು ಭಾರತೀಯ ಶಬ್ದಗಳೊಡನೆಯಾಗಿದೆ. ಹೀಗೆ ಆಂಗ್ಲ ಭಾಷೆಯಲ್ಲಿ ಸಿಸ್ಟರ್–ಇನ್–ಲಾ ಶಬ್ದವಿದೆ. ಆಂಗ್ಲ ಭಾಷೆಯಲ್ಲಿ ನಾದಿನಿ ಹಾಗೂ ಅತ್ತಿಗೆಗೆ ಒಂದೇ ಶಬ್ದ ಬಳಸಲಾಗುತ್ತದೆ. ಹಾಗೆಯೇ ತಂದೆಯ ತಾಯಿ (ಅಜ್ಜಿ) ಹಾಗೂ ತಾಯಿಯ ತಾಯಿಗೂ ಗ್ರ್ಯಾಂಡ್‌ಮದರ್ ಎಂದೇ ಹೇಳಲಾಗುತ್ತದೆ. ಈಗ ಹಿಂದೀ ಹಾಗೂ ಆಂಗ್ಲ ಭಾಷೆಯ ಈ ಶಬ್ದಗಳ ಅರ್ಥದಲ್ಲಿ ಎಷ್ಟು ವ್ಯತ್ಯಾಸವಿದೆ? ಆದರೂ ಇವು ನಡೆಯುತ್ತವೆ. ಹೀಗೆಯೇ ಭಾರತೀಯ ಪ್ರಕೃತಿ, ನಾಗರಿಕತೆ, ಪರಂಪರೆಗೆ ಅನುಕೂಲವಿಲ್ಲದ ಎಷ್ಟೋ ಶಬ್ದಗಳನ್ನು ಅನುವಾದದಲ್ಲಿ ತುಂಬಿಬಿಡಲಾಗಿದೆ. ಧರ್ಮದ ಸ್ಥಿತಿಯೂ ಹೀಗೆಯೇ ಇದೆ. ಹಿಂದೂ ಧರ್ಮ ಒಂದು ವ್ಯಾಪಕ ಶಬ್ದವಾಗಿದ್ದು ಇದರಲ್ಲಿ ಹಲವಾರು ರಿಲೀಜನ್‌ಗಳು ಸೇರುತ್ತವೆ. ರಿಲೀಜನ್ ಎಂದರೆ ನಮ್ಮಲ್ಲಿ ಉಪಾಸನಾ–ಪದ್ಧತಿ ಎಂದು ಅರ್ಥ. ಹಾಗೆ ನೋಡಿದಲ್ಲಿ ಇಲ್ಲಿ ಅನೇಕ ಉಪಾಸನಾ ಪದ್ಧತಿಗಳು ಪ್ರಚಲಿತವಾಗಿವೆ. ವೈಷ್ಣವ, ಶೈವ, ಶಾಕ್ತ, ಜೈನ, ಬೌದ್ಧ, ಸಿಖ್, ಲಿಂಗಾಯತ ಮುಂತಾದ ಹಲವಾರು ದೇವರುಗಳ ಉಪಾಸನಾವಿಧಾನಗಳಿವೆ. ಅನೇಕ ಮತ, ಅನೇಕ ಸಂಪ್ರದಾಯಗಳ ಪ್ರಾರ್ಥನೆಗಳಿವೆ, ಆದರೂ ಧರ್ಮ ಒಂದೇ. ಎಲ್ಲರ ಹಿತ ಬಯಸುವುದು ಹಾಗೂ ಮೋಕ್ಷದ ಮಾರ್ಗವನ್ನು ಪ್ರಶಸ್ತಗೊಳಿಸುವುದೇ ಧರ್ಮ. ಧರ್ಮದ ವ್ಯಾಖ್ಯಾನ ಹೀಗಿದೆ,



"ಧಾರಣಾತ್ ಧರ್ಮಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ." ಧಾರಣೆಯೊಡನೆ ಧರ್ಮದ ಸಂಬಂಧವಿದೆ. ಅಂದರೆ ಯಾವ ವಸ್ತುವಿನಿಂದ, ಯಾವ ಶಕ್ತಿಯಿಂದ, ಯಾವ ಭಾವ, ಯಾವ ವ್ಯವಸ್ಥೆ, ಯಾವ ನಿಯಮಗಳಿಂದ ಧಾರಣೆಯಾಗುತ್ತದೆಯೋ ಅದೇ ಧರ್ಮ. ಯಾವುದರಿಂದ ಮನುಷ್ಯನ ಧಾರಣೆಯಾಗುವುದೋ ಅದೇ ಮನುಷ್ಯಧರ್ಮ, ಯಾವುದರಿಂದ ಶರೀರದ ಧಾರಣೆಯಾಗುವುದೋ ಅದೇ ಶರೀರಧರ್ಮ. ಇದೇ ರೀತಿ ಜನತೆಯ, ಪ್ರಜೆಗಳ ಹಾಗೂ ಇದಕ್ಕೂ ಮಿಗಿಲಾಗಿ ಜಡ–ಚೇತನ–ಯುಕ್ತ ಸಂಪೂರ್ಣ ಸೃಷ್ಟಿಯ ಧಾರಣೆಗೆ ನಿಶ್ಚಿತ ನಿಯಮಗಳಿವೆ. ಎಲ್ಲರ ಧಾರಣೆಯನ್ನು ಧರ್ಮ ಮಾಡುತ್ತದೆ. ಧರ್ಮವಿರದಿದ್ದಲ್ಲಿ ಯಾವುದೇ ವಸ್ತು ನಿಲ್ಲಲಾರದು, ಎಲ್ಲವೂ ನಷ್ಟವಾಗಿ ಹೋಗುತ್ತದೆ. ಆದುದರಿಂದಲೇ ನಮ್ಮಲ್ಲಿ ವೃಷಭ ಧರ್ಮದ ಸಂಕೇತವಾಗಿದೆ. ಧರ್ಮದಲ್ಲಿ ನಾಲ್ಕು ಪಾದ / ಚರಣಗಳಿವೆ. ಹೇಗೆ ಎತ್ತಿಗೆ ಅದರ ನಾಲ್ಕು ಕಾಲುಗಳು ಆಧಾರವಾಗಿರುತ್ತದೆಯೋ ಹಾಗೂ ಆ ಕಾಲುಗಳು ಮುರಿದಲ್ಲಿ ಅದು ನಿಲ್ಲಲಾಗುವುದಿಲ್ಲವೋ ಹಾಗೆಯೇ ಧರ್ಮದ ಈ ನಾಲ್ಕು ಪಾದಗಳ ಮೇಲೆ ಎಲ್ಲವೂ ನಿಂತಿದೆ. ನಾವು ನಮ್ಮ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ನಮ್ಮ ಜೀವನ ಶರೀರವನ್ನು ಆಧರಿಸಿದೆ. ಶರೀರ ಸರಿಯಾಗಿ ಇರದಿದ್ದಲ್ಲಿ ಯಾವ ಕಾರ್ಯವೂ ನಡೆಯುವುದಿಲ್ಲ. ಆದರೆ ಶರೀರವು ಭೋಜನವನ್ನು ಅವಲಂಬಿಸಿದೆ. ಭೋಜನದಿಂದ ಶರೀರಧರ್ಮದ ಪರಿಪಾಲನೆಯಾಗುತ್ತದೆ. ಹಾಗಿದ್ದಲ್ಲಿ ಶರೀರಕ್ಕೆ ಆಧಾರ ನೀಡುವ ಭೋಜನವನ್ನೇ ತಿನ್ನಬೇಕು. ಆದ್ದರಿಂದ ಶರೀರದ ಬೇರೆ–ಬೇರೆ ಸ್ಥಿತಿಗಳಲ್ಲಿ ಬೇರೆ–ಬೇರೆ ನಿಯಮಗಳು ಅನ್ವಯಿಸುತ್ತವೆ. ಯಾವ ಊಟವನ್ನು ಆರೋಗ್ಯವಂತ ವ್ಯಕ್ತಿ ಮಾಡುವನೋ ಅದನ್ನೇ ರೋಗಿಗೆ ನೀಡಿದಲ್ಲಿ ಅದು ಘೋರ ಅಧರ್ಮ. ಆದ್ದರಿಂದಲೇ ಪ್ರತಿ ಪರಿಸ್ಥಿತಿಗೂ ಒಂದು ಆಚಾರ–ಧರ್ಮವಿದೆ. ನವಿಲು ಕಲ್ಲು ತಿನ್ನುವುದು ಎಂದು ಹೇಳಲಾಗುವುದು. ಅದನ್ನನುಸರಿಸಿ ಮನುಷ್ಯ ಕಲ್ಲು ತಿನ್ನಲು ಯತ್ನಿಸುವುದು ಸರಿಯಲ್ಲ. ಮನುಷ್ಯರಲ್ಲಿಯೂ ಸಹ, ಚಿಕ್ಕ ಮಕ್ಕಳ ಆಹಾರವನ್ನು ದೊಡ್ಡ ವಯಸ್ಸಿನ ಯುವಕರಿಗೆ ನೀಡಲಾಗುವುದಿಲ್ಲ. ಎಲ್ಲರಿಗೂ ಒಂದೇ ಬಗೆಯ ಊಟವೆಂಬ ನಿಯಮ ಸಾಧ್ಯವಾಗಲಾರದು. ಭಿನ್ನ–ಭಿನ್ನ ಪರಿಸ್ಥಿತಿಗಳು ಹಾಗೂ ವಸ್ತುಗಳಿಗೆ ಒಂದೇ ರೀತಿಯ ನಿಯಮಗಳು ಅನ್ವಯಿಸಲಾರವು. ನಂತರ ಮನುಷ್ಯನಿಗೆ ಕೇವಲ ಶರೀರವೊಂದೇ ಮಹತ್ವಪೂರ್ಣವಲ್ಲ. ಆರೋಗ್ಯವಂತ ಶರೀರದೊಡನೆ ಆರೋಗ್ಯವಂತ ಮನಸ್ಸಿರಬೇಕು. ಆದರೆ ಇದರೊಟ್ಟಿಗೆ ಬುದ್ಧಿಯಲ್ಲಿ ವಿಕಾರ ಉಂಟಾದಲ್ಲಿ ಅಥವಾ ಅದು ಸರಿಯಾಗಿಲ್ಲದಿದ್ದಲ್ಲಿ ವ್ಯಕ್ತಿ ಹುಚ್ಚನೆನಿಸಿಕೊಳ್ಳುತ್ತಾನೆ. ಹುಚ್ಚನು ಯಾವ ಕೆಲಸ ಮಾಡಬಲ್ಲ? ಹುಚ್ಚನಲ್ಲದಿದ್ದರೂ, ಬುದ್ಧಿಭ್ರಮಣೆಯಾದಲ್ಲಿ ಯಾವ ಕಾರ್ಯವೂ ನಡೆಯಲಾರದು. ಮೃಗದ ಹಾಗೆ ಮರೀಚಿಕೆಯ ಹಿಂದೆ ಓಡಿದರೆ ಕೈಗೆ ಏನೂ ಸಿಕ್ಕದು.

ಆದುದರಿಂದಲೇ ಶರೀರ ಹಾಗೂ ಮನಸ್ಸಿನ ಜೊತೆ ಒಳ್ಳೆಯ ಬುದ್ಧಿಯೂ ಇರಬೇಕು. ಬುದ್ಧಿಗೂ ಮಿಗಿಲಾದ ನಮ್ಮ 'ಅಹಂ' ಕೂಡ ಸಂತೃಪ್ತಿ ಬಯಸುತ್ತದೆ. ಕೊನೆಗೆ ಮತ್ತೊಂದು ತತ್ವವಿದೆ, ಅದನ್ನು ಆತ್ಮತತ್ವವೆನ್ನಲಾಗಿದೆ. ಅದು ಸಹ ಸರಿಯಾಗಿರಬೇಕು. ಈ ರೀತಿ ಶರೀರ, ಮನಸ್ಸು, ಬುದ್ಧಿ, ಆತ್ಮದಿಂದ ಪರಿಪೂರಿತವಾದ ಮನುಷ್ಯನ ಧಾರಣೆಯೇ ಧರ್ಮವಾಗುತ್ತದೆ. ಧರ್ಮ ದೃಢ ವಿಚಾರ ಮಾಡುತ್ತದೆ ಹಾಗೂ ಸಾಮರಸ್ಯವನ್ನು ಸ್ಥಾಪಿಸುತ್ತದೆ. ಆದ್ದರಿಮದಲೇ ನಿಯಮಗಳು ತಯಾರಾಗುತ್ತವೆ. ಈ ನಿಯಮಗಳು ದೇಶ, ಕಾಲ, ಪರಿಸ್ಥಿತಿ ಹಾಗೂ ವಸ್ತುಗಳಿಗನುಗುಣವಾಗಿ ಬೇರೆ ಬೇರೆಯಾಗಿರುತ್ತವೆ. ಕೆಲವು ನಿಯಮಗಳು ಸರ್ವ ಸಾಮಾನ್ಯವಾಗಿರುತ್ತವೆ.

**ಧೃತಿಃ ಕ್ಷಮಾ ದಮೋಸ್ತೇಯಂ ಶೌಚಮಿಂದ್ರಿಯನಿಗ್ರಹಂಃ ।**
**ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ ॥**

**(ಮನುಸ್ಮೃತಿ)**

ಧರ್ಮದ ಧೃತಿ, ಕ್ಷಮಾ, ದಮ, ಕಳ್ಳತನ ಮಾಡದಿರುವುದು, ಶುದ್ಧತೆ, ಇಂದ್ರಿಯನಿಗ್ರಹ, ಧೀಃ, ವಿದ್ಯೆ, ಸತ್ಯ ಹಾಗೂ ಅಕ್ರೋಧ– ಎಂಬ ಹತ್ತು ಲಕ್ಷಣಗಳನ್ನು ಹೇಳಲಾಗಿದೆ. ಈ ನಿಯಮಗಳನ್ನು ಅರಿತುಕೊಳ್ಳಲು ಸ್ಮೃತಿ, ಶಾಸ್ತ್ರ, ಶ್ರುತಿಗಳಿವೆ. ಇದರ ರಚನೆ ಸಮಾಜ ಹಾಗೂ ಮನಃಶಾಸ್ತ್ರದ ತತ್ವದರ್ಶಿಗಳಿಂದ ಉಂಟಾಗಿದೆ, ಆದ್ದರಿಂದಲೇ ಧರ್ಮವು ಶ್ರುತಿಗಳಿಂದ ಉತ್ಪತ್ತಿಯಾಗಿದೆ ಎಂದು ಒಪ್ಪಿಕೊಳ್ಳಲಾಗಿದೆ. ಶ್ರುತಿ ಎಂದರೆ ವೇದ. ವೇದ ಯಾವುದೇ ಒಂದು ವ್ಯಕ್ತಿಯ ಯಾವುದೇ ವಿಶೇಷ ಸಮಯದಲ್ಲಿ ನಿರ್ಮಿಸಲ್ಪಟ್ಟದ್ದಲ್ಲ. ಅವು ಭಿನ್ನ–ಭಿನ್ನ ಸಮಯದಲ್ಲಿ ಬೇರೆ–ಬೇರೆ ಋಷಿಗಳ ಸಮಾಧಿಜನ್ಯ ಜ್ಞಾನದ ಸಂಗ್ರಹವಾಗಿದೆ. ಶ್ರುತಿಗಳು ಅತ್ಯಧಿಕವಾದಾಗ ಹಾಗೂ ಅದರಲ್ಲಿ ಅನೇಕ ಶಾಸ್ತ್ರಗಳು ಹಾಗೂ ಅನಂತ ವಿದ್ಯೆಗಳು ಸೇರಿದಾಗ ಶ್ರುತಿಯ ಸಮಷ್ಟಿಗತ ಪ್ರಚಾರವಾಗುವುದು ಅಸಾಧ್ಯವಾಯಿತು. ಆಗ ಅದರಿಂದ ಭಿನ್ನ–ಭಿನ್ನ ವಿಷಯಗಳ ಮೇಲಿನ ಬೇರೆ–ಬೇರೆ ಶಾಸ್ತ್ರಗಳಾದವು. ಇದರಲ್ಲಿ ಬಹು ಹೆಚ್ಚಾಗಿ ಹಾಗೂ ಪ್ರಪ್ರಥಮ ಆವಶ್ಯಕವಾಗಿ ಬೇಕಾದದ್ದು ಧರ್ಮಶಾಸ್ತ್ರವಾಯಿತು. ಅಂದರೆ ಮನುಷ್ಯರ ಪ್ರತ್ಯರ್ಥಿ ಭಾವಗಳ ಸಾಮ್ಯ–ಧಾರಣೆ ಮಾಡುವ ಶಾಸ್ತ್ರ. ಹೀಗೆ ಭಗವಾನ್ ಮನುವಿನ ಆಜ್ಞೆಯ ಮೇರೆಗೆ ಶ್ರುತಿ–ಸಾಗರದ, ಮಂಥನ ಕ್ರಿಯೆ ಆರಂಭವಾಯಿತು. ಅದರಿಂದ ಪ್ರಾಪ್ತವಾದ ಪ್ರಥಮ ರತ್ನವೇ ಮಾನವ–ಧರ್ಮ ಶಾಸ್ತ್ರವಾಗಿತ್ತು. ಆ ಶಾಸ್ತ್ರವನ್ನು ಸೂತ್ರಬದ್ಧಗೊಳಿಸಲಾಯಿತು. ಸದಾ ಇದು ನೆನಪಿರಲಿ ಎಂದು ಎಲ್ಲರೂ ಇದನ್ನು ಕಂಠಪಾಠ ಮಾಡಲಾರಂಭಿಸಿದರು. ಹಾಗೂ ಈ ಶಾಸ್ತ್ರಕ್ಕೆ ಮನುಸ್ಮೃತಿ ಎಂದು ಹೆಸರಾಯಿತು. ಮನುಸ್ಮೃತಿಯಲ್ಲಿ ಅನೇಕ ಧರ್ಮಗಳ ಮೀಮಾಂಸೆ ಮಾಡಲಾಗಿದೆ. ಅದಾದ



ನಂತರ ಮರೀಚಿ ಮುಂತಾದ ಅನೇಕ ಋಷಿಗಳು ಮಾನವಧರ್ಮಶಾಸ್ತ್ರದಲ್ಲಿ ಉಪದೇಶಿಸಲಾದ ಒಂದೊಂದು ಧರ್ಮವನ್ನು ಆಧರಿಸಿ ಬೇರೆ–ಬೇರೆ ಸ್ಮೃತಿಗಳನ್ನು ರಚಿಸಿದರು. ಕೆಲವರು ಜಾತಿ ಧರ್ಮವನ್ನು ಕುರಿತು, ಮತ್ತು ಕೆಲವರು ದೇಶಧರ್ಮವನ್ನು ಕುರಿತು, ಕೆಲವರು ವರ್ಣಾಶ್ರಮ ಧರ್ಮವನ್ನು ಕುರಿತು, ಕೆಲವರು ವ್ಯವಸ್ಥೆಯ ಧರ್ಮವನ್ನು ಕುರಿತು ರಚಿಸಿದರು. ಈ ಎಲ್ಲಾ ಸ್ಮೃತಿಗಳು ಸೂತ್ರಬದ್ಧವಾಗಿದ್ದವು. ಕಾಲಾಂತರದಲ್ಲಿ ಈ ಎಲ್ಲಾ ಸ್ಮೃತಿಗಳು ಲೋಪವಾದವು. ಆಗ ಪಂಡಿತರು ಸ್ಮೃತಿ ಪರಂಪರೆಯಿಂದ ಪ್ರಾಪ್ತವಾದ ಆ ಪೂರ್ವಸ್ಮೃತಿಗಳ ಛಾಯೆಯಿಂದ ಹಾಗೂ ಸಮಸಾಮಯಿಕ ವಿಷಯಗಳ ಸಮಾವೇಶದಿಂದ ಪೂರ್ವಸ್ಮೃತಿಗಳ ಹೆಸರಿನಲ್ಲಿ ಶ್ಲೋಕಬದ್ಧ ಸ್ಮೃತಿಗಳನ್ನು ರಚಿಸಿದರು. ಹಿಂದೆ ರಚಿಸಲಾದ ಸ್ಮೃತಿಗಳಲ್ಲಿ ಮನುಸ್ಮೃತಿ ಅತ್ಯಧಿಕವಾಗಿ ಗೌರವಿಸಲ್ಪಟ್ಟಿದೆ. ಈ ರೀತಿ ಧರ್ಮ ನಮ್ಮಲ್ಲಿ ಒಂದು ಅತಿ ದೊಡ್ಡ ವ್ಯಾಪಕ ಅರ್ಥದಲ್ಲಿ ಬಳಕೆಗೊಂಡಿದೆ. ಇದರ ಅರ್ಥ ದೃಢ ವಿಚಾರ ಮಾಡುವುದು ಹಾಗೂ ಪರಸ್ಪರ ಸಾಮರಸ್ಯ ಸ್ಥಾಪಿಸುವುದಾಗಿದೆ.

ಇಡೀ ಭಾರತದ ಚಿಕ್ಕ–ದೊಡ್ಡ ವ್ಯವಸ್ಥೆಗಳ ಆಧಾರವೇ ಈ ವ್ಯಾಪಕ 'ಧರ್ಮ'. ಧಾರಣ ಶಕ್ತಿಯ ಹೆಸರು ಧರ್ಮವಾದುದರಿಂದ ಇದರ ವ್ಯಾಪಕತೆಯು ಅನಂತವಾಗಿದೆ. ಇದು ಸಮಸ್ತ ಮಾನವ ಸಮಾಜವಲ್ಲದೇ ಚರಾಚರ ಸೃಷ್ಟಿಯ ಆಧಾರವಾಗಿದೆ. ಆದ್ದರಿಂದ ಭಾರತದ ಧರ್ಮ ಎಂದರೆ 'ಹಿಂದೂಧರ್ಮ' ಎಂದರೆ ಸರಿಯಾದ ಅರ್ಥದಲ್ಲಿ ಮಾನವಧರ್ಮವಾಗಿದೆ. ಇದರಿಂದಲೇ ವಿಶ್ವದ ಸಮಸ್ತ ಮಾನವರ ಕಲ್ಯಾಣವಾಗಬಹುದು. ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ಶ್ರೀ ರವೀಂದ್ರನಾಥ ಠಾಗೋರ್ ಮುಂತಾದ ಅರ್ವಾಚೀನ ಮಹರ್ಷಿಗಳು ವಿಶ್ವದ ವಿಭಿನ್ನ ದೇಶಗಳಿಗೆ ಹೋಗಿ ಇದೇ ಸಂದೇಶವನ್ನು ನೀಡಿದ್ದಾರೆ ಹಾಗೂ ವಿಶ್ವವು ಶ್ರದ್ಧೆಯಿಂದ ಹಿಂದೂಧರ್ಮ ವಾಸ್ತವಕ್ಕೆ ಮಾನವ ಧರ್ಮವೆಂಬ ಈ ತಥ್ಯವನ್ನು ಸ್ವೀಕರಿಸಿದೆ. ಇದನ್ನು ಆಧರಿಸಿ ವಿಶ್ವದ ಐಕ್ಯತೆ ಅಥವಾ ಮಾನವಕಲ್ಯಾಣವಾಗುತ್ತದೆ.

ಧರ್ಮದ ಈ ಧಾರಣಾ ಶಕ್ತಿಯನ್ನು ಪುಷ್ಟ ಹಾಗೂ ವ್ಯಾವಹಾರಿಕವನ್ನಾಗಿಸಲು ಭಾರತದಲ್ಲಿ ವ್ಯಕ್ತಿ, ಸಮಾಜ, ರಾಷ್ಟ್ರ ಮುಂತಾದ ಸಂಬಂಧಗಳಲ್ಲಿ ವಿಭಿನ್ನ ಮಟ್ಟಗಳಲ್ಲಿ ವ್ಯವಸ್ಥೆಗಳನ್ನು ಮಾಡಲಾಗಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ, ದಾರ್ಶನಿಕ ಎಲ್ಲಾ ಕ್ಷೇತ್ರಗಳನ್ನು ಕುರಿತು ಸಮತೋಲನದ ವಿಚಾರ ಮಾಡಿ ಸರ್ವಾಂಗೀಣ ಪ್ರಗತಿಯ ದಾರಿಯನ್ನು ಹುಡುಕಲಾಯಿತು. ವ್ಯಕ್ತಿಯ ಜೀವನಕ್ಕಾಗಿ ನಾಲ್ಕು ಪುರುಷಾರ್ಥಗಳು–ಧರ್ಮ, ಅರ್ಥ, ಕಾಮ, ಮೋಕ್ಷ; ನಾಲ್ಕು ಆಶ್ರಮಗಳು – ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸಂನ್ಯಾಸ ಹಾಗೂ ನಾಲ್ಕು ವರ್ಣಗಳು – ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವು ರಚಿಸಲ್ಪಟ್ಟವು. ಧರ್ಮವನ್ನು

ಈ ನಾಲ್ಕು ಕಾಲುಗಳ ಮೇಲೆ ಸ್ಥಿರಗೊಳಿಸಲಾಯಿತು. ಈ ನಾಲ್ಕು ಕಾಲುಗಳಲ್ಲಿ ಯಾವುದೊಂದೂ ಚಿಕ್ಕದು, ದೊಡ್ಡದು ಅಲ್ಲ, ಉದ್ದನೆಯ–ಗಿಡ್ಡದಾದದೂ ಅಲ್ಲ. ಧರ್ಮವು ನಾಲ್ಕು ಪಾದಗಳನ್ನು ಸಮನಾಗಿ ಆಧರಿಸಿದೆ. ಇವುಗಳ ನಿಯಮಗಳು ನಿರ್ಧರಿಸಲ್ಪಟ್ಟವು. ಈ ನಿಯಮಗಳು ದೇಶ, ಕಾಲ, ಪರಿಸ್ಥಿತಿಗಳಿಗನುಗುಣವಾಗಿ ಪರಿವರ್ತನೆಗೆ ಒಳಗಾಗುವುದು ಎಂದು ತಿಳಿದು ನೂತನ ಅಭಿವ್ಯಕ್ತಿ ಹಾಗೂ ಸಮಯಾನುಕೂಲ ವ್ಯವಸ್ಥೆಗಳ ಮಾರ್ಗವನ್ನು ಪ್ರಶಸ್ತಗೊಳಿಸಲಾಗಿದೆ. ಆದ್ದರಿಂದ ಇದು ಸನಾತನವಾಯಿತು. ಧರ್ಮದ ಸಲುವಾಗಿ ಅದಕ್ಕೆ ಸಂಬಂಧಿಸಿದ ಶಾಶ್ವತ ಸಿದ್ಧಾಂತಗಳನ್ನು ಆಧರಿಸಿ ಪ್ರತಿಯೊಂದು ವಸ್ತು ಹಾಗೂ ಕ್ರಿಯೆಯ ಹಿತ–ಅಹಿತ ವಿಚಾರ ಮಾಡುವುದರಿಂದ ಧರ್ಮದ ಎಲ್ಲೆ/ಮಿತಿಯನ್ನು ಎಷ್ಟು ವಿಸ್ತೃತವಾಗಿಟ್ಟಿದ್ದಾರೆಂದರೆ ಅವರ ಸಮಗ್ರ ಲೆಕ್ಕಾಚಾರವನ್ನು ಇಡುವುದು ಅಸಂಭವವಾಗುತ್ತದೆ. ಆದ್ದರಿಂದಲೇ **ಧರ್ಮಸ್ಯ ತತ್ವನಿಹಿತಃ ಗುಹಾಯಾಮ್** ಧರ್ಮತತ್ವ ಬಹಳ ಗೂಢವಾಗಿದೆ ಎಂದು ಹೇಳಲಾಗಿದೆ. ಇದರ ಸಾರಾಂಶವೆಂದರೆ ನಮ್ಮ ಆತ್ಮಕ್ಕೆ ಅನುಕೂಲಕರವಾದಂಥ ವ್ಯವಹಾರವನ್ನೇ ಎಲ್ಲರೊಡನೆ ಮಾಡಬೇಕು. ಆದ್ದರಿಂದಲೇ **ಮನಃ ಪೂತಂ ಸಮಾಚರೇತ್** ಎಂಬ ವಿಷಯ ಇದರ ಅತ್ಯಂತ ಸರಳ ಹಾಗೂ ಸಾಮಾನ್ಯ ಸಾಮಾಜಿಕ ವ್ಯವಹಾರಕ್ಕಾಗಿ **ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್** ಎಂಬ ಸರಳ ಸೂತ್ರವನ್ನೂ ಹೇಳಲಾಗಿದೆ. ಆದರೆ ಪ್ರತಿ ಕ್ಷಣಕ್ಕೂ ಪ್ರತಿಯೊಬ್ಬ ವ್ಯಕ್ತಿಗೂ ಸರಿಯಾದ ಧರ್ಮವನ್ನು ನಿಶ್ಚಯಗೊಳಿಸುವುದು ಬಹಳ ಕಠಿಣ. ಆದ್ದರಿಂದಲೇ **“ಮಹಾಜನೋ ಯೇನ ಗತಃ ಸ ಪಂಥಾಃ”** ಎಂಬ ಸರಳ ಮಾರ್ಗವನ್ನು ತೆರೆದಿಡಲಾಗಿದೆ. ಯಾವುದೇ ಸಂಕಟದಲ್ಲಿ ಸಿಲುಕಿದಾಗ ಶ್ರೇಷ್ಠ ಜನರು ಹೇಗೆ ಆಚರಣೆ ಮಾಡುವರೊ ಹಾಗೇ ಆಚರಣೆ ನಡೆಸಿ– ಇವೇ ಮುಂತಾದ ಎಷ್ಟೋ ಸ್ತರಗಳಲ್ಲಿ ಧರ್ಮದ ಈ ಸ್ವರೂಪದ ಸಂಕಲನವಾಗಿದೆ.

ಈ ಸರ್ವವ್ಯಾಪಿ, ವಿಶಾಲ, ವ್ಯಾಪಕ ಹಾಗೂ ಸಂಪೂರ್ಣ ರಚನೆಯ ಮೂಲಾಧಾರ ಧರ್ಮದ ಸಂರಕ್ಷಣೆ ಮಾಡುವುದರಿಂದಲೇ ಪರಮವೈಭವದೆಡೆಗೆ ಮುಂದೆ ಸಾಗಬಹುದು. ಇದರ ಸಂರಕ್ಷಣೆಗೆ ಮಹಾನ್ ಶಕ್ತಿಯ ಆವಶ್ಯಕತೆಯಿದೆ. ಆದ್ದರಿಂದ ರಾಷ್ಟ್ರದ ಸಂಘಟಿತ ಕಾರ್ಯಶಕ್ತಿಯನ್ನು ಬಯಸಲಾಗಿದೆ. ಇದೇ ಆ ಏಕೈಕ ಮಾರ್ಗವಾಗಿದೆ. ಇದರಿಂದಲೇ ರಾಷ್ಟ್ರದ ಸರ್ವಾಂಗೀಣ ಪ್ರಗತಿ ಸಾಧ್ಯವಾಗುತ್ತದೆ.



## ೧೨. ಸಂಘಟನೆಯ ಆಧಾರ : ರಾಷ್ಟ್ರವಾದ

ಒಟ್ಟಾಗಿ ಸೇರಿ ಇರುವುದರ ಹೆಸರೇ ಸಂಘಟನೆ. ‘ಸಂಘಟನೆ’ ಎಂದರೆ ಪರಸ್ಪರ ಸಹಕಾರದ ಸೂತ್ರ ಸ್ಥಾಪಿಸುವುದು ಎಂದರ್ಥ. ವ್ಯಕ್ತಿಯು ಒಬ್ಬಂಟಿಗನಾಗಿ ಏನನ್ನೂ ಸಾಧಿಸಲಾರ ಎಂಬುದೇ ಸಂಘಟನೆಯ ಸಹಜ ಆವಶ್ಯಕತೆಯ ಕಾರಣವಾಗಿದೆ. ಭೌತಿಕವಾಗಿರಲಿ ಅಥವಾ ಆಧ್ಯಾತ್ಮಿಕವಾಗಿರಲಿ, ಜೀವನದ ಸುಖ ಪ್ರಾಪ್ತಿಗಾಗಿ ಅನೇಕ ಜನರ ಸಹಕಾರ ಅಗತ್ಯ. ಹಾಗೆಯೇ ಹೇಳುವುದಕ್ಕೆ ನಾವು ಈ ವಿಶೇಷ ಕಾರ್ಯವನ್ನು ಒಬ್ಬಂಟಿಗನಾಗಿ ಮಾಡಿರುವೆನೆಂದರೂ ಸಹ, ಸರಿಯಾಗಿ ವಿಚಾರ ಮಾಡಿದಾಗ ನಮ್ಮ ಪ್ರತಿಯೊಂದು ಕೃತಿ ಹಾಗೂ ಆ ಕೃತಿಗೆ ಕಾರಣವಾದ ಉಪಲಬ್ಧಿಯ ಹಿನ್ನೆಲೆಯಲ್ಲಿ ಸಮಾಜದ ಅನೇಕ ಬಂಧುಗಳ ಕೈವಾಡವನ್ನು ಗಮನಿಸಬಹುದಾಗಿದೆ. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಸಂಘಟಿತವಾದ ಸಾಮಾಜಿಕ ಜೀವನದ ಅಂಗವಾಗಿ ಇರಬೇಕು. ಇದು ಸ್ವಾಭಾವಿಕ. ಇದರಲ್ಲಿಯೇ ಸುಖ, ಸಮೃದ್ಧಿ ಹಾಗೂ ಪ್ರಗತಿಗಳಡಗಿವೆ. ಸಂಘಟನೆಯಲ್ಲಿ ಶಕ್ತಿಯಿದೆ ಹಾಗೂ ಶಕ್ತಿಯಿಂದ ವಿಶ್ವದಲ್ಲಿ ಎಲ್ಲವನ್ನೂ ಪಡೆಯಬಹುದಾಗಿದೆ. ಸಂಘಟನೆಯ ಮಹಿಮೆಯಿಂದಲೇ ಸುಖದ ಘಳಿಗೆ, ಸುಖವು ಎಷ್ಟೋ ಪಟ್ಟು ಹೆಚ್ಚುತ್ತದೆ ಹಾಗೂ ದುಃಖ ಒದಗಿದಾಗ ಆ ದುಃಖವನ್ನು ಹಂಚಿಕೊಳ್ಳುವುದರಿಂದ ಅದರ ಆಘಾತವೂ ಸಹ ಬಹಳಷ್ಟು ಕಡಿಮೆಯಾಗುತ್ತದೆ.

ಆದರೆ ಯಾವುದೇ ಗುಂಪು ಸಂಘಟನೆಯಾಗಲಾರದು. ಸಾಧಾರಣವಾಗಿ ಈ ಕುರಿತು ಜನರು ಮೋಸಹೋಗುತ್ತಾರೆ. ಗುಂಪನ್ನು ಸಂಘಟನೆಯೆಂದು ತಿಳಿಯುತ್ತಾರೆ. ಗುಂಪು ಹಾಗೂ ಸಂಘಟನೆಯಲ್ಲಿರುವ ಅಂತರವೆಂದರೆ ಗುಂಪಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ಒಬ್ಬಂಟಿಗನೆಂದುಕೊಂಡು, ಒಂಟಿತನವನ್ನು ಅನುಭವಿಸುತ್ತಾನೆ. ಹಲವಾರು ವ್ಯಕ್ತಿಗಳಿದ್ದರೂ ಪ್ರತಿಯೊಬ್ಬರು ಏಕಾಂಗಿಯಾಗಿರುತ್ತಾರೆ. ಎಲ್ಲರ ಚಟುವಟಿಕೆಗಳು ಭಿನ್ನವಾಗಿರುತ್ತದೆ, ಎಲ್ಲರ ಗುರಿ ಹಾಗೂ ಹಿತದೃಷ್ಟಿ ಬೇರೆಯಾಗಿರುತ್ತದೆ. ಅವರಲ್ಲಿ ಯಾರಿಗೂ ಯಾವ ಕ್ಷಣ ಅಲ್ಲಿ ಏನು ಆಗುವುದು ಎಂಬುದು ತಿಳಿದಿರುವುದಿಲ್ಲ. ಗಲಭೆಯಲ್ಲಿ ಯಾರೂ ಸಹ ಯಾರೊಬ್ಬರ ಮಾತನ್ನೂ ಕೇಳುವುದಿಲ್ಲ. ಎಲ್ಲರೂ ಪರಸ್ಪರ ಅಪರಿಚಿತರಾಗಿರುತ್ತಾರೆ. ಮನಸ್ಸಿನಲ್ಲಿ ತೊಳಲಾಟ ಇದ್ದರೂ ಸಹ ಪ್ರತಿಯೊಬ್ಬನೂ ಒಬ್ಬಂಟಿಗನಾಗಿರುತ್ತಾನೆ. ಸಂಘಟನೆಯಲ್ಲಿ

ಹೀಗೆ ಇರುವುದಿಲ್ಲ. ಅನೇಕರು ಇದ್ದರೂ ಸಹ ಸಂಘಟನೆಯಲ್ಲಿ ಎಲ್ಲರ ಅಸ್ತಿತ್ವ ಒಂದೇ ಆಗುತ್ತದೆ. ಗುರಿ, ದಿಕ್ಕು ಹಾಗೂ ವಿಚಾರ ಒಂದೇ ಆಗಿರುತ್ತದೆ. ಈ ಕಾರಣದಿಂದ ಎಲ್ಲರ ಹಿತದೃಷ್ಟಿ ಸಮಾನವಾಗಿರುತ್ತದೆ. ಅವರ ಕ್ರಿಯೆಯಲ್ಲಿ ನೂರುಪಟ್ಟು, ಸಾವಿರಪಟ್ಟು, ಲಕ್ಷಪಟ್ಟು ಶಕ್ತಿ ಪ್ರಕಟವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ದೃಷ್ಟಿ ಇದ್ದರೂ ಅವನು ಈಗ ಪೂರ್ಣತೆಯ ಅಭಿನ್ನ ಘಟಕವಾಗುತ್ತಾನೆ. ಆದುದರಿಂದ ಯಶಸ್ಸು, ಆನಂದ, ಉತ್ಸಾಹಗಳನ್ನು ಅನುಭವಿಸುತ್ತಾನೆ.

ಸಂಘಟನೆಯ ಈ ಶಕ್ತಿಯನ್ನು ಅರಿತು ಮಾನವನು ಅನೇಕ ಪ್ರಕಾರದ ಸಂಘಟನೆಗಳನ್ನು ಮಾಡಲು ಯತ್ನಿಸುತ್ತಾನೆ. ಸಂಘಟನೆಗಾಗಿ ಅನೇಕ ಆಧಾರಗಳನ್ನು ಹುಡುಕಲಾಗುತ್ತದೆ. ಉದ್ದೇಶ ಹಾಗೂ ಆವಶ್ಯಕತೆಗಳು ಸಂಘಟನೆಯ ನಿರ್ಮಾಣಕ್ಕೆ ಆಧಾರ ಉದ್ದೇಶ ಹಾಗೂ ಅದರ ಅಗತ್ಯ. ಉದ್ದೇಶ ಹಾಗೂ ಸಂಘಟನೆಯ ಅಗತ್ಯದ ಸ್ವರೂಪವನ್ನಾಧರಿಸಿ ಸಂಘಟನೆ ವ್ಯಾಪಿಸುತ್ತದೆ ಹಾಗೂ ಅದರ ಕಾಲ–ಮರ್ಯಾದೆಯನ್ನು ನಿಶ್ಚಿತಗೊಳಿಸಲಾಗುತ್ತದೆ. ಉದ್ದೇಶ ತಾತ್ಕಾಲಿಕ ಹಾಗೂ ಕ್ಷಣಿಕವಾದಲ್ಲಿ ಅಗತ್ಯವು ಸಹ ಹಾಗೆಯೇ ಇರುತ್ತದೆ. ಸಂಘಟನೆಯ ರೂಪವು ತಾತ್ಕಾಲಿಕವಾಗುತ್ತದೆ. ಅದು ಅಷ್ಟೇ ಕಾಲ ಉಳಿಯುತ್ತದೆ ನಂತರ ಚದುರಿಹೋಗುತ್ತದೆ. ಆಟದ ಮೈದಾನದಲ್ಲಿಯೂ ಎರಡು ಗುಂಪುಗಳು ತಮ್ಮ–ತಮ್ಮ ಸಂಘಟನೆಯನ್ನು ನಿರ್ಮಿಸಿಕೊಳ್ಳುತ್ತವೆ. ಸೋಲು–ಗೆಲುವಿನ ಪಂದ್ಯ ನಡೆಯುತ್ತದೆ. ಆದರೆ ಈ ಸಂಘಟನೆ ಆಟ ಮುಗಿಯುವವರೆಗೆ ಮಾತ್ರ ಇರುತ್ತದೆ. ಸರಿಯಾಗಿ ಅದೇ ರೀತಿ ಅನೇಕ ಸಮಸ್ಯೆಗಳನ್ನಾಧರಿಸಿದ ಸಂಘಟನೆಗಳು ರೂಪುಗೊಳ್ಳುವುದನ್ನು ನಾವು ಕಾಣುತ್ತೇವೆ. ಪರಿಸ್ಥಿತಿಗಳು ಅವುಗಳ ಉದ್ದೇಶವನ್ನು ನಿರ್ಧರಿಸುತ್ತವೆ. ಅದರ ರೂಪರೇಷೆ ತಯಾರಾಗುತ್ತದೆ. ಆದರೆ ಈ ಮಧ್ಯೆ ಪರಿಸ್ಥಿತಿಗಳು ಬದಲಾದಲ್ಲಿ ಸಂಘಟನೆಯಲ್ಲಿ ಅಡಚಣೆ ಉಂಟಾಗುತ್ತದೆ. ವಿಭಿನ್ನ ಮಟ್ಟಗಳಲ್ಲಿ ಸಂಘಟನೆಯ ಮೂಲ ಸ್ವರೂಪವೇ ಅಲುಗಾಡಿದೆ ಎಂಬ ಪ್ರಶ್ನೆಗಳು ಮೂಡಿಬರುತ್ತವೆ. ಅಧ್ಯಾಪಕರು ಒಂದು ಸಂಘಟನೆಯನ್ನು ನಿರ್ಮಿಸುತ್ತಾರೆ, ಆದರೆ ಕೆಲವು ಕಾಲದ ನಂತರ ಆ ಅಧ್ಯಾಪಕರುಗಳಲ್ಲಿ ಒಬ್ಬರು ಪ್ರಾಧ್ಯಾಪಕರಾದಾಗ ಅವರ ಹಿತದೃಷ್ಟಿ ಬೇರೆಯಾಗಿದೆ ಎಂದು ಅನಿಸತೊಡಗುತ್ತದೆ. ಸಮಸ್ಯೆ ಎದುರಾಗುತ್ತದೆ. ವಿವಾದವುಂಟಾಗುತ್ತದೆ. ಸಂಘಟನೆಯ ಆವಶ್ಯಕತೆಯ ಬಗ್ಗೆಯೇ ಸಂದೇಹ ಉಂಟಾಗುತ್ತದೆ. ಶ್ರೀಮಂತ ಬಡವನ ವಿಷಯವು ಹೀಗೆಯೇ ಇರುತ್ತದೆ. ಸಾಧನಹೀನನು ಸಾಧನಸಂಪನ್ನನಾದಲ್ಲಿ, ಸಾಹುಕಾರನಾದಲ್ಲಿ ಅವನನ್ನು ಸಂಘಟನೆಯಿಂದ ಹೊರಗೆ ಹಾಕುವ ಪ್ರಶ್ನೆ ಎದುರಾಗುತ್ತದೆ. ಹಾಗಿದ್ದಲ್ಲಿ ಸಾಮಾಜಿಕ ಜೀವನದಲ್ಲಿ ನಾವು ಒಂದು ವಿಶಾಲವಾದ ಪರಿಧಿಯಲ್ಲಿರುತ್ತೇವೆ. ಆ ಪರಿಧಿಯಲ್ಲಿ



ನಾವು ಜನರಿಂದ ಸುತ್ತುವರಿಯಲ್ಪಟ್ಟಿರುತ್ತೇವೆ. ಚಳಿಗಾಲದಲ್ಲಿ ನಮ್ಮ ಬಳಿ ಮೆಟ್ಟಲು ಚಪ್ಪಲಿ ಇಲ್ಲದಿದ್ದರೂ ನಮ್ಮ ಸುತ್ತಮುತ್ತ ಹಲವಾರು ಕಾಲೇ ಇಲ್ಲದ ಜನರನ್ನು ಸಹ ಕಾಣುತ್ತೇವೆ. ಕಾಲಿಲ್ಲದ ಜನಕ್ಕಿಂತಲೂ ನಾವು ಸಂಪನ್ನರಾಗಿರುತ್ತೇವೆ. ಹೀಗೆ ಇಂತಹ ಸಂಘಟನೆಗಳಲ್ಲಿ ಜೀವನ ಮಟ್ಟವನ್ನು ಬೇರ್ಪಡಿಸುವ ಸಲುವಾಗಿ ಗೆರೆ ಎಳೆಯುವುದು ವ್ಯಾವಹಾರಿಕವಾಗಿರುವುದಿಲ್ಲ. ಹೀಗೆಯೇ ಸಾಹುಕಾರರ ವಿರುದ್ಧ ಬಡವರ ಸಂಘಟನೆಗಳು ಉಂಟಾಗುತ್ತವೆ. ಜಾತಿಗಳ ತಮ್ಮದೇ ಆದ ಸಂಘಟನೆಗಳುಂಟಾಗುತ್ತವೆ. ವೈದ್ಯ, ವಕೀಲ, ವ್ಯಾಪಾರಿಗಳು ಅಂಗಡಿಯವರ, ಕೈಗಾಡಿ ಎಳೆಯುವವರ, ರಸ್ತೆ ಬದಿಯ ಅನೇಕ ವ್ಯಾಪಾರಗಳಿಗನುಗುಣವಾಗಿ ಸಂಘಟನೆಗಳುಂಟಾಗುತ್ತವೆ. ಸಮಾನ ಅಭ್ಯಾಸಗಳು ಇಂತಹ ಸಂಘಟನೆಗಳಿಗೆ ಆಧಾರವಾಗುತ್ತವೆ. ಹಾಡು ಹೇಳುವವರು, ನೃತ್ಯ ಮಾಡುವವರು, ಲೇಖರು, ಕವಿಗಳು ಮಾತ್ರವಲ್ಲದೇ, ಯಾತ್ರಿಕರು ಸಹ ತಮ್ಮ ಸಂಘಟನೆಗಳನ್ನು ರೂಪಿಸಿಕೊಳ್ಳುತ್ತಾರೆ. ಧಾರ್ಮಿಕ ನಂಬಿಕೆ ಹಾಗೂ ಉಪಾಸನೆಯ ಆಧಾರದ ಮೇರೆಗೂ ಸಂಘಟನೆಗಳು ಉಂಟಾಗುವ ಅವಕಾಶ ಒದಗುತ್ತದೆ.

ರಾಜಕೀಯ ಆಕಾಂಕ್ಷೆಗಳು, ಭಾಷೆ, ತಿಂಡಿ–ತಿನಿಸುಗಳು ರುಚಿ ಎಷ್ಟೋ ಉದ್ದೇಶಗಳಿಂದ ಸಂಘಟನೆಯುಂಟಾಗಿರುತ್ತದೆ. ವ್ಯಕ್ತಿ ತನ್ನ ಜೀವನದಲ್ಲಿ ಅನೇಕ ಮಟ್ಟಗಳಲ್ಲಿ ವ್ಯವಹರಿಸುತ್ತಾನೆ, ಆದುದರಿಂದಲೇ ಅವನು ಒಮ್ಮೆಗೇ ಹಲವಾರು ಸಂಘಟನೆಗಳಲ್ಲಿ ಕಂಡುಬರುತ್ತಾನೆ. ಜೀವನದಲ್ಲಿ ಯಾವ ಆವಶ್ಯಕತೆ ಬಹಳ ಹೆಚ್ಚಾಗಿರುತ್ತದೆಯೋ ಅದಕ್ಕನುಗುಣವಾದ ಸಂಘಟನೆಯನ್ನು ತನ್ನದಾಗಿಸಿಕೊಳ್ಳುತ್ತಾನೆ. ಹಿರಿಯ ವ್ಯಕ್ತಿಜೀವನದಲ್ಲಿ ಮೂಡಿಬರುವ ಪ್ರಶ್ನೆಗಳ ಒತ್ತಡಕ್ಕೆ ಅನುಗುಣವಾಗಿ ಸಂಘಟನೆಯ ಸ್ವೀಕೃತಿ ಸದಾ ಬದಲಾಗುತ್ತಿರುತ್ತದೆ. ಹೀಗೆ ಸಂಘಟನೆಗಳುಂಟಾಗುತ್ತವೆ, ಮೂಡುತ್ತವೆ, ಕ್ಷೀಣಿಸುತ್ತವೆ, ನಷ್ಟವಾಗುತ್ತವೆ ಹಾಗೂ ಪುನಃ ಹೊಸದಾಗಿ ಮೂಡಿಬರುತ್ತವೆ.

ಈ ಎಲ್ಲ ರೀತಿಯ ಸಂಘಟನೆಗಳಿಗೂ ತಮ್ಮದೇ ಆದ ಉಪಯೋಗವಿದೆ. ಆದರೆ ಪರಿಸ್ಥಿತಿಗಳನ್ನಾಧರಿಸಿ ಸಂಘಟನೆಗಳು ಶಾಶ್ವತ ಸ್ವರೂಪವನ್ನು ಹೊಂದಿರಲಾರವು ಎಂಬುದು ಸ್ಪಷ್ಟವಾಗಿದೆ. ಆವಶ್ಯಕತೆಯೆಂಬ ತಕ್ಕಡಿಯಲ್ಲಿ ಏರಿಳಿತ ಉಂಟಾಗುತ್ತದೆ. ಅವುಗಳು ಬಾಹ್ಯ ಕಾರಣಗಳು, ಬಾಹ್ಯ ಪ್ರತಿಕ್ರಿಯೆಗಳನ್ನು ಅವಲಂಬಿಸಿರುತ್ತವೆ. ಅದರ ಸ್ವರೂಪ ಪರಿಪೂರ್ಣವಾಗಿರುವುದಿಲ್ಲ. ಅವುಗಳ ಗುರಿ ವ್ಯಾವಹಾರಿಕವಾಗಿರದ ಕಾರಣ ಹಲವಾರು ವ್ಯರ್ಥವಾಗಿ ಸವೆಯುತ್ತವೆ. ಹೇಗೆ ಹಲವಾರು ಜನ ಸೇರಿ ದಿಗಂತವನ್ನು ಮುಟ್ಟುವವರ ಸಂಘಟನೆ ಮಾಡಿದ ಮಾತ್ರಕ್ಕೆ ದಿಗಂತ ಅವರ ಕೈಗೆ ಎಟುಕುವುದು ಸಾಧ್ಯವಾಗುವುದೆ? ಹೀಗೆ ಅವರು ಮುಂದುವರಿದಂತೆಲ್ಲಾ ದಿಗಂತದಿಂದ ದೂರ ಸರಿಯುತ್ತಾ ಹೋಗುತ್ತಾರೆ. ಮಾನವ

ಮಾತ್ರರನ್ನು ಸಂಘಟಿತಗೊಳಿಸುವ ಘೋಷಣೆ ಮಾಡುವ ಸಂಘಟನೆಗಳು ಬಹುಶಃ ಈ ಅವ್ಯಾವಹಾರಿಕ ಶ್ರೇಣಿಗೆ ಸೇರಿಕೊಳ್ಳುತ್ತವೆ. ಈ ವಿಷಯದಲ್ಲಿ ವಿಶ್ವದ ಬಹು ಚರ್ಚಿತ ಸಂಯುಕ್ತ ರಾಷ್ಟ್ರ ಸಂಘ ಸಂಸ್ಥೆ, ಎಲ್ಲಾ ರಾಷ್ಟ್ರಗಳಿಗಿಂತ ಹೆಚ್ಚು ರಾಷ್ಟ್ರಗಳ ಪರಸ್ಪರ ಸಂಘರ್ಷಗಳ ಎಣಿಕೆಯಂಟಾಗಿ ನಮ್ಮ ಮುಂದೆ ನಿಲ್ಲುತ್ತದೆ. ಕಾರಣ ಅಲ್ಲಿ ವಿಭಿನ್ನ ರಾಷ್ಟ್ರಗಳ ಪ್ರತಿನಿಧಿಗಳಾಗಿ ರಾಜ್ಯ ಶಕ್ತಿಗಳು ಬೇರೂರಿವೆ. ಮಾನವನ ಹೆಸರಿನಲ್ಲಿಯೇ ರಾಷ್ಟ್ರಗಳೊಡನೆ ಸಂಘರ್ಷ ನಡೆದಿದೆ. ರಾಷ್ಟ್ರವನ್ನು ಆಧಾರವನ್ನಾಗಿರಿಸಿ ಸಂಪೂರ್ಣ / ಸಮಸ್ತ ವಿಶ್ವದ ವ್ಯವಹಾರ ನಡೆಯುತ್ತಿದೆ. ವಿಶ್ವ ಸಂಘಟನೆಯ ಹೆಸರಿನಲ್ಲಿ ರಾಷ್ಟ್ರಗಳ ನಡುವೆ ಜಗಳಗಳು ಉಂಟಾಗುತ್ತವೆ.

ನಮಗೆದುರಾಗುವ ಪ್ರಶ್ನೆಯೆಂದರೆ ಒಂದು ಕಡೆ ಸಮಸ್ತ ವಿಶ್ವ ಸಂಘಟನೆ ಈ ಅವ್ಯಾವಹಾರಿಕತೆಯನ್ನು ನೋಡುತ್ತಿದೆಯಾದರೆ ಮತ್ತೊಂದೆಡೆ ಬಾಹ್ಯ ಕಾರಣಗಳು ಹಾಗೂ ಪರಿಸ್ಥಿತಿಗಳನ್ನು ಅವಲಂಬಿಸಿದ ಅಲ್ಪಜೀವಿ ಸಂಘಟನೆಗಳನ್ನು ನೋಡುತ್ತಾ ಯಾವುದಾದರೂ ಪ್ರಬಲ, ಶಾಶ್ವತ, ವ್ಯಾವಹಾರಿಕ ದೃಷ್ಟಿಯಿಂದ ಕಲ್ಯಾಣಕಾರಿ ಸಂಘಟನೆಯ ಯಾವುದೇ ಮಾರ್ಗವು ಲಭಿಸುವುದೇ ಎಂದು.

ಕೇವಲ ಒಂದು ಮಾರ್ಗವಿದೆ. ಇಂದು ಈ ರೀತಿಯ ಸಂಘಟನೆ ರಾಷ್ಟ್ರವನ್ನು ಆಧರಿಸಿ ವ್ಯಾವಹಾರಿಕವೂ ಶಾಶ್ವತವೂ ಆಗಬಲ್ಲದು. ಆವಶ್ಯಕತೆಯ ದೃಷ್ಟಿಯಿಂದ ರಾಷ್ಟ್ರವನ್ನಾಧರಿಸಿದ ಸಂಘಟನೆ ಸದಾ ಅಗತ್ಯವೆಂದು ತಿಳಿಯಲಾಗುವುದು. ಶಾಶ್ವತತೆಯ ದೃಷ್ಟಿಯಿಂದ ಸಂಘಟನೆಯಲ್ಲಿ ವಿಭಿನ್ನ ಘಟಕಗಳ ಪರಸ್ಪರ ಪೂರೈಕೆಯಲ್ಲಿ ಯಾವ ಸ್ಥಾನವಿದೆಯೋ ಅದು ರಾಷ್ಟ್ರದಲ್ಲಿ ಸಹಜವಾಗಿಯೇ ಇದೆ. ರಾಷ್ಟ್ರದಲ್ಲಿ ಬಹುವಿಧ ಜೀವನವಿರುವುದರಿಂದ ಈ ಸಂಘಟನೆ ಏಕಾಂಗಿಯೂ ಅಲ್ಲ. ಆತ್ಮನಿರ್ಭರತೆ ಯಾವುದೇ ಸಂಘಟನೆಯ ಜೀವನಶಕ್ತಿಯಾಗಿರುತ್ತದೆ ಮತ್ತು ರಾಷ್ಟ್ರವು ಈ ದೃಷ್ಟಿಯಿಂದ ಸದಾ ಕಾಲಜಯಿ ಎನಿಸಿಕೊಳ್ಳುತ್ತದೆ. ಎಲ್ಲಿಯತನಕ ವ್ಯಾವಹಾರಿಕವಾಗಿ ಸಕ್ಷಮವಾಗಿರುವ ಪ್ರಶ್ನೆಯಿದೆಯೋ ಇಂದಿನ ಜಗತ್ತಿನಲ್ಲಿ ಇದೇ ಏಕೈಕ ಹಾಗೂ ಎಲ್ಲಾ ರೀತಿಯ ಕೊಳುಕೊಡುಗೆಗಳ ಮಾನ್ಯ ಅಂಗವಾಗಿದೆ. ಆದ್ದರಿಂದಲೇ ರಾಷ್ಟ್ರವನ್ನಾಧರಿಸಿದ ಸಂಘಟನೆಯ ವಾಸ್ತವಿಕ ಸ್ವರೂಪವು ಉದಯಿಸುತ್ತದೆ.

ಸಂಘಟನೆಯನ್ನು ಕುರಿತಾದ ಈ ನಿರ್ಣಯಕ್ಕೆ ತಲುಪುವ ಸಮಯದಲ್ಲಿ ನಾವು ಮತ್ತೊಂದು ವಿಚಾರ ಮಾಡಬೇಕು. ಸಂಘಟನೆಯ ಕೃತಿಯ ಹಾಗೂ ಸ್ವಾಭಾವಿಕ ಭೇದದ ಅಂತರವನ್ನು ಅರಿಯುವುದು ಆವಶ್ಯಕವಾಗಿದೆ. ಐವತ್ತು ವಸ್ತುಗಳನ್ನು ಒಟ್ಟುಗೂಡಿಸಿ ಸ್ವಾರ್ಥದ ಆಧಾರದ ಮೇಲೆ ನಿರ್ಮಿಸಲ್ಪಡುವ ಸಂಘಟನೆಗೆ ತನ್ನದೇ ಆದ ಅಸ್ತಿತ್ವ ಇರುವುದಿಲ್ಲ. ವಾಸ್ತವಕ್ಕೆ ಇದು ಸಂಘಟನೆಯಾಗಿರದೆ ಏಕತ್ರೀಕರಣವೆಂದರೆ ಸರಿಯಾಗಿರುವುದು. ಇಂಗ್ಲೀಷ್‌ನಲ್ಲಿ ಇದನ್ನು ಅಸೋಸಿಯೇಶನ್



ಎನ್ನುತ್ತಾರೆ. ಇದು ಕೃತ್ರಿಮ ಸಂಘಟನೆಯಾಗಿದೆ ಹಾಗೂ ಇದು ಸ್ವಾರ್ಥ ಸಾಧನೆಯಾಗುವವರೆಗೂ ಉಳಿದಿರುತ್ತದೆ. ಪರಸ್ಪರ ಅನುಕೂಲತೆಯ ಭಾವವನ್ನು ಇಂತಹ ಸ್ವಾಭಾವಿಕ ಸಂಘಟನೆಯ ಮೇಲೆ ಆರೋಪಿಸಲಾಗುವುದಿಲ್ಲ, ಅದು ಸ್ವಾಭಾವಿಕವಾಗಿಯೇ ನಿರ್ಮಾಣಗೊಂಡಿರುತ್ತದೆ. ಅಂದರೆ ಕೃತ್ರಿಮವಾಗಿ ನಿರ್ಮಿಸಲಾಗದಂತಹ, ಸ್ವಾಭಾವಿಕವಾಗಿ ಪ್ರಕಟವಾಗುವುದೇ ಸಂಘಟನೆ. ರಾಷ್ಟ್ರವನ್ನು ಕುರಿತು ನಾವು ವಿಚಾರಮಾಡಿದಲ್ಲಿ ರಾಷ್ಟ್ರವು ಒಂದು ಸ್ವಾಭಾವಿಕವಾದ ಅಂಗವೆಂಬುದನ್ನು ನಾವು ಕಾಣುತ್ತೇವೆ. ಇದು ಜೀವಂತವಾದ ನಾಮಪದ. ಆದುದರಿಂದಲೇ ಅದರಲ್ಲಿ ಚೈತನ್ಯವಿದೆ. ರಾಷ್ಟ್ರದ ಸಂಘಟನೆಯು ಯಾವುದೇ ಸ್ವಾರ್ಥಪೂರ್ತಿಗೆ ಉಂಟಾಗುವುದಿಲ್ಲ. ಹೇಗೆ ಮನುಷ್ಯನ ಶರೀರದಲ್ಲಿ ಪ್ರತಿಯೊಂದು ಅಂಗವೂ ಸಹಜವಾಗಿ ಕ್ರಿಯಾಶೀಲವಾಗಿರುತ್ತದೆಯೋ ಅದಕ್ಕಾಗಿ ಅವುಗಳಿಗೆ ಪ್ರಲೋಭನೆ ಅಥವಾ ಪ್ರಶಂಸೆಗಳು ಬೇಕಾಗಿಲ್ಲವೋ ಅದೇ ರೀತಿ ರಾಷ್ಟ್ರದ ಘಟಕಗಳೂ ಸಹ ರಾಷ್ಟ್ರದ ಸೇವೆಗಾಗಿ ಪರಸ್ಪರ ಅನುಕೂಲವಾಗಿ ವ್ಯವಹರಿಸುತ್ತಾ ಸಂಘಟನೆಯನ್ನು ಕಾಪಾಡಲಾಗುತ್ತದೆ. ಒಂದು ರಾಷ್ಟ್ರಭಾವದ ವಿಸ್ಮೃತಿಯಿಂದ ಘಟಕದ ಅಂಗಗಳು ಶಿಥಿಲಗೊಳ್ಳುತ್ತವೆ ಹಾಗೂ ಪೂರ್ತಿಯಾಗಿ ನಿಷ್ಕ್ರಿಯವಾದಲ್ಲಿ ಸಮಸ್ತ ರಾಷ್ಟ್ರದ ವಿನಾಶಕ್ಕೆ ಕಾರಣವಾಗುತ್ತದೆ. ಆದರೆ ಈ ಘಟಕಗಳಲ್ಲಿ ರಾಷ್ಟ್ರಭಾವದ ಉದಯವಾದಲ್ಲಿ ಅವು ಪುನಃ ತಮ್ಮ ಸ್ವಾಭಾವಿಕ ಕ್ರಿಯೆಯಲ್ಲಿ ನಿರತವಾಗುತ್ತವೆ.

ಹೀಗಾಗಿ ನಾವು ಕಾಲಜಯಿ, ಶಾಶ್ವತ, ಸಕ್ಷಮ, ಆತ್ಮನಿರ್ಭರ, ವ್ಯಾವಹಾರಿಕ ಹಾಗೂ ಸ್ವಾಭಾವಿಕ ಸಂಘಟನೆಗಳಿಗೆ ಆಧಾರವೇ ರಾಷ್ಟ್ರವೆಂದು ತಿಳಿಯಬೇಕು. ರಾಷ್ಟ್ರದ ಸಂಘಟನೆ ದೃಢವಾಗಿದ್ದಲ್ಲಿ ಸಾಮರ್ಥ್ಯವು ನಿರ್ಮಾಣವಾಗುತ್ತದೆ ಹಾಗೂ ವಿಭಿನ್ನ ಅಂಗಗಳು ಪುಷ್ಟವಾಗಬಲ್ಲವು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಪ್ರತಿಯೊಬ್ಬ ವ್ಯಕ್ತಿಯ ಅಂತಃಕರಣದಲ್ಲಿ ಭಾರತದ ಅನಾದಿ, ಅನಂತ, ಅತಿ ಪ್ರಾಚೀನ ರಾಷ್ಟ್ರೋಜ್ಜೀವನವನ್ನು ಜಾಗೃತಗೊಳಿಸುವುದೇ ಮೂಲಕಾರ್ಯ. ಭಾರತದ ರಾಷ್ಟ್ರೋಜ್ಜೀವನ ಹಿಂದೂಜೀವನವಾಗಿದೆ. ಈ ಸತ್ಯವನ್ನು ಗಮನದಲ್ಲಿಟ್ಟುಕೊಂಡೇ ಭಾರತದಲ್ಲಿ ರಾಷ್ಟ್ರೀಯ ಸಂಘಟನೆ ನಡೆಯುತ್ತದೆ.

ಈಗ ಈ ವಿಷಯವನ್ನು ಕುರಿತು ಕೆಲವು ಜನರು ನಮ್ಮನ್ನು ಹೀಗೆ ಪ್ರಶ್ನಿಸ ಬಹುದು, ರಾಷ್ಟ್ರದ ಸಂಘಟನೆ ಮಾನವ ಸಮಾಜದ ದೃಷ್ಟಿಯಿಂದ ಚಿಕ್ಕದಾಗಿದೆ, ಆದುದರಿಂದ ಸಂಕುಚಿತವಾಗಿದೆ. ಈ ಮಾತು ಸೈದ್ಧಾಂತಿಕ ದೃಷ್ಟಿಯಿಂದ ತಪ್ಪಾಗಿದೆ. ಏಕೆಂದರೆ ಯಾವುದೇ ವಸ್ತು ಚಿಕ್ಕದಾದ ಕಾರಣ ಸಂಕುಚಿತವಾಗಲಾರದು. ಶರೀರದಲ್ಲಿ ಮೆದುಳು ಅಥವಾ ಹೃದಯ ಸಂಪೂರ್ಣ ಶರೀರಕ್ಕೆ ಹೋಲಿಸಿದಾಗ ಆಕಾರದಲ್ಲಿ ಚಿಕ್ಕದಾಗಿರುತ್ತವೆ. ಅದಕ್ಕಾಗಿ ಅವುಗಳನ್ನು ಸಂಕುಚಿತ ಎನ್ನುವುದು ಸರಿಯೇ? ವಾಸ್ತವವಾಗಿಯೂ ಎಲ್ಲಾ ಅಂಗಗಳು ಮತ್ತೊಂದಕ್ಕೆ ಪೂರಕವಾಗಿವೆ.

ವಾಸ್ತವವಾಗಿ ರಾಷ್ಟ್ರ ಹಾಗೂ ವಿಶ್ವವೂ ಸಹ ಒಂದು ಮತ್ತೊಂದರ ಪೋಷಕವಾಗಿದೆ.

ಇನ್ನು ಹಲವರು ರಾಷ್ಟ್ರವು ಮಾನವತೆಯ ವಿರೋಧಿ ಎಂದು ಸಹ ಹೇಳುತ್ತಾರೆ. ಇದಕ್ಕೆ ಕಾರಣ ವಿಶ್ವದಲ್ಲಿ ಹೀಗೆ ಎಷ್ಟೋ ರಾಷ್ಟ್ರಗಳು ಮಾನವನ ಅಹಿತವನ್ನುಂಟುಮಾಡಿದೆ ಎಂದು ಹೇಳಲಾಗಿದೆ. ಆದರೆ ಯಾವುದೇ ವಸ್ತುವನ್ನು ದುರುಪಯೋಗಪಡಿಸುವುದರಿಂದಲೇ ವಸ್ತು ಹಾಳಾಗುತ್ತದೆಯೇ? ಬೆಂಕಿಯಿಂದ ಮನೆ ಸುಟ್ಟಿದೆ ಎಂದು ಬೆಂಕಿಯನ್ನು ಬಳಸುವುದನ್ನೇ ನಿಲ್ಲಿಸಿಬಿಟ್ಟರೆ ಅದು ಬುದ್ಧಿವಂತರ ಲಕ್ಷಣವಾಗುವುದೇ? ನಾವು ಹೀಗೆ ಮಾಡಿದಲ್ಲಿ ಎಷ್ಟು ವಸ್ತುಗಳನ್ನು ಬಿಡಬೇಕಾಗುವುದು? ಈ ದೃಷ್ಟಿಯನ್ನು ಸರಿ ಎನ್ನಲಾಗದು. ವಿವೇಕಶಾಲಿಗಳಾಗಿ ನಾವು ಕೆಲಸ ಮಾಡಬೇಕಾಗುತ್ತದೆ.

ವಿಶ್ವದ ಕೆಲವು ರಾಷ್ಟ್ರಗಳು ರಾಷ್ಟ್ರೀಯತೆಯ ಹೆಸರಿನಲ್ಲಿ ಮಾನವತೆಯನ್ನು ಸಂಕಟಕ್ಕೀಡುಮಾಡಿದೆ ಎಂಬುದು ನಿಜ. ಈ ರಾಷ್ಟ್ರಗಳ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇದಕ್ಕೆ ರಾಷ್ಟ್ರೀಯತೆಯ ವಿಚಾರ ದೋಷಿಯಲ್ಲವೆಂಬುದು ತಿಳಿಯುತ್ತದೆ. ಅಲ್ಲಿಯ ಸಂಪೂರ್ಣ ಜೀವನ–ಚಿಂತನೆಯೇ ದೋಷಿಯಾಗಿದೆ. ಮಾನವನನ್ನು ಕುರಿತು ಆ ಹಿನ್ನೆಲೆಯಲ್ಲಿ ವಿಚಾರಮಾಡುವ ಸ್ವಸ್ಥಮಾರ್ಗ ಅಲ್ಲಿ ಇಲ್ಲವಾಗಿದೆ. ಅಲ್ಲಿ ಜೀವನದ ವಿಕಾಸವೇ ತಪ್ಪು ರೀತಿಯಲ್ಲಿ ಉಂಟಾಗಿದೆ. ಪಾಶ್ಚಾತ್ಯ ಜೀವನದಲ್ಲಿ ಸಂಘರ್ಷವನ್ನು ವಿಕಾಸವೆಂದು ಪರಿಗಣಿಸಲಾಗಿದೆ. ಪಾಶ್ಚಾತ್ಯವು ಮಾನವ ಹಾಗೂ ಅನ್ಯಪ್ರಾಣಿಗಳ ವಿಕಾಸ ಪರಸ್ಪರ ಸಂಘರ್ಷದಿಂದ ಉಂಟಾಗಿದೆ ಎಂದು ಸ್ವೀಕರಿಸಿದೆ. ಡಾರ್ವಿನನ ವಿಕಾಸವಾದದಲ್ಲಿ ಈ ರೀತಿಯ ಸಂಘರ್ಷಗಳನ್ನು ಉಲ್ಲೇಖಿಸಲಾಗಿದೆ. ಈ ಸಂಘರ್ಷದಲ್ಲಿ ಯಾರು ಪರರ ವಿನಾಶವನ್ನು ಮಾಡುತ್ತಾರೆಯೋ ಅವರೇ ಉಳಿಯುತ್ತಾರೆ, ಆದುದರಿಂದಲೇ ಅಲ್ಲಿ ಸ್ಪರ್ಧೆಯನ್ನು ಜೀವನವೆಂದು ತಿಳಿಯಲಾಗಿದೆ. ಅರ್ಥವ್ಯವಸ್ಥೆ ಸಮಾಜ ವ್ಯವಸ್ಥೆ ಎಲ್ಲಾ ಕ್ಷೇತ್ರದಲ್ಲಿಯೂ ಈ ಪ್ರತಿದ್ವಂದ್ವವನ್ನು ವಿಕಾಸದ ಮುಖ್ಯಸೂತ್ರವನ್ನಾಗಿ ಪಾಶ್ಚಾತ್ಯದಿಂದ ಸ್ವೀಕರಿಸಲ್ಪಟ್ಟಿದೆ. ಅಲ್ಲಿ ಮನುಷ್ಯನನ್ನು ಸ್ವಾರ್ಥಿ ಎಂದು ತಿಳಿಯಲಾಗಿದೆ. ಸಮಸ್ತ ಪ್ರಕೃತಿ ಹಾಗೂ ಪ್ರಾಣಿ ಅವನ ಉಪಭೋಗಕ್ಕಾಗಿದೆ ಎಂದು ಸ್ವೀಕರಿಸಲಾಗಿದೆ. ಈ ಭೀಷಣ ಸಂಘರ್ಷದಿಂದಲೇ ಅಲ್ಲಿ ರಾಷ್ಟ್ರವಾದದ ಉದಯವಾಯಿತು. ಬಲಶಾಲಿ ರಾಷ್ಟ್ರಗಳು ಪರರಾಷ್ಟ್ರಗಳನ್ನು ತಿನ್ನುವ ಸಂಚಿನಲ್ಲಿದ್ದವು. ಅಲ್ಲಿ ಸಾಮೂಹಿಕ ಸ್ವಾರ್ಥಕ್ಕಾಗಿ ರಾಷ್ಟ್ರೀಯತೆಯು ವಿಕಾಸವಾಯಿತು. ಪಾಶ್ಚಾತ್ಯ ವಿಚಾರಕನೊಬ್ಬನು ಈ ಭಾವಕ್ಕನುಗುಣವಾಗಿ ಹೀಗೆ ವ್ಯಾಖ್ಯಾನ ನೀಡಿದನು: 'ನ್ಯಾಷನಲಿಜ಼ಮ್ ಅಂಡ್ ಪೇಟ್ರಿಯಾಟಿಜ಼ಮ್ ಆರ್ ಸೆಲ್‌ಫಿಶ್‌ನೆಸ್ ಎಕ್ಸ್‌ಟೆಂಡೆಡ್' ಸ್ವಾರ್ಥವನ್ನು ಉದ್ದೀಪಿಸುವುದೆ ಅಂದರೆ ರಾಷ್ಟ್ರವಾದ ಅಥವಾ ರಾಷ್ಟ್ರಭಕ್ತಿ ಎನ್ನಿಸಿಕೊಳ್ಳುತ್ತದೆ. ಸ್ವಾರ್ಥದ ವಶದಲ್ಲಿ ಏಕತ್ರಿತರಾಗಿ ಪರರೊಡನೆ ಹೋರಾಡುವುದೇ ಅವರಲ್ಲಿ



ರಾಷ್ಟ್ರೀಯತೆಯ ಆಧಾರವಾಯಿತು. ಈ ನಿಷೇಧಾತ್ಮಕ ವಿಚಾರದಲ್ಲಿ ರಾಷ್ಟ್ರದ ಭಾವಾತ್ಮಕ ಹಿನ್ನೆಲೆ ಛಿನ್ನ–ಭಿನ್ನವಾಯಿತು. ಪರಸ್ಪರ ಸಹಕಾರವನ್ನು ಆಧರಿಸಿದ ರಾಷ್ಟ್ರವಾದದ ವಿಕಾಸ ಉಂಟಾಗಲಿಲ್ಲ. ವಿರೋಧದಲ್ಲಿ ಜನ್ಮತಾಳಿದ ರಾಷ್ಟ್ರೀಯತೆ ಘಾತಕವಾಗುತ್ತದೆ. ಅದೇ ಸ್ಥಿತಿ ಇಲ್ಲಿ ಉಂಟಾಗಿದೆ.

ಐರೋಪ್ಯ ದೇಶಗಳಲ್ಲಿ ರಾಷ್ಟ್ರವೆಂಬ ಶಕ್ತಿ ಸಾವಿರ–ಸಾವಿರದ ಇನ್ನೂರು ವರ್ಷಗಳ ಹಿಂದೆ ನಿರ್ಮಿತವಾಯಿತು. ಅದರ ವಿಕಾಸ ಇತ್ತೀಚಿನ ನಾಲ್ಕು–ಐದು ನೂರು ವರ್ಷಗಳಲ್ಲಿ ಉಂಟಾಯಿತು. ಅವರ ಆ ಇತಿಹಾಸದ ಆಧಾರದ ಮೇರೆಗೆ ರಾಷ್ಟ್ರೀಯತೆಯ ಸಾರವಾಗಿ ಅವರು ರಾಷ್ಟ್ರೀಯತೆ ಎಂದರೆ ನಿಸ್ಸಂದೇಹವಾಗಿ ಘಾತಕವೆಂದು ತಿಳಿಯುತ್ತಾರೆ. ಮೊದಲು ಅಲ್ಲಿ ಜನರು ಕೋಮಿನ ಆಧಾರದ ಮೇಲೆ ಒಟ್ಟುಗೂಡಿದರು. ಕ್ರೈಸ್ತರು ಹಾಗೂ ಯಹೂದಿಗಳಲ್ಲಿ ಹೋರಾಟವಾಯಿತು. ನಂತರ ಕ್ರೈಸ್ತರು ಹಾಗೂ ಮುಸಲ್ಮಾನರುಗಳಲ್ಲಿ ಕ್ರೂಸೇಡ್ ಆರಂಭವಾಯಿತು. ವಿಭಿನ್ನ ಸಮೂಹಗಳು ತನ್ನ–ತನ್ನ ಶಕ್ತಿಯನ್ನು ಹೆಚ್ಚಾಗಿಸಲು ಯುದ್ಧಮಾಡುತ್ತಿದ್ದವು. ಬಹಳ ರಕ್ತಪಾತವುಂಟಾಯಿತು. ಇಂಗ್ಲೆಂಡ್‌ನ ರಾಷ್ಟ್ರೀಯತೆ ರೋಮ್‌ನ ವಿರೋಧದಲ್ಲಿ ಪ್ರಕಟಗೊಂಡಿತು. ಪ್ರತಿಯೊಂದು ಸ್ಥಾನದಲ್ಲಿಯೂ ರೋಮನ್–ಕ್ಯಾಥೊಲಿಕ್‌ನ ವಿರುದ್ಧ ಭಾವನೆಗಳು ಮೂಡತೊಡಗಿದವು. ಆರ್ಥಿಕ ಶಕ್ತಿಯನ್ನು ತಮ್ಮ ಕೈವಶ ಮಾಡಿಕೊಳ್ಳಲು ಆಂಗ್ಲರು ಹಾಗೂ ಫ್ರೆಂಚ್‌ರು ಹೊಡೆದಾಡಿದರು. ಫ್ರೆಂಚ್‌ರು ಹಾಗೂ ಜರ್ಮನರ ನಡುವೆ ಹೋರಾಟವಾಯಿತು. ಇಂಗ್ಲೆಂಡ್, ಫ್ರಾನ್ಸ್ ಹಾಗೂ ಸ್ಪೇನ್‌ನಲ್ಲಿ ಯಾವ ರೀತಿ ರಾಷ್ಟ್ರವಾದವು ಮೂಡಿತೋ ಅದೇ ರೀತಿ ಜರ್ಮನ್ ಹಾಗೂ ಇಟಲಿಯಲ್ಲಿ ನಂತರ ಅದರ ವಿಕಾಸವಾಯಿತು. ಈ ವಿಕಾಸ–ಕ್ರಮದಲ್ಲಿ ಯಾರು ಅತ್ಯಧಿಕ ಶಕ್ತಿಶಾಲಿಯಾದರೋ ಅವರು ಉಳಿದವರನ್ನು ಪೀಡಿಸಿ, ದುಃಖಿತರನ್ನಾಗಿಸಿದರು. ಪ್ರಪಂಚಕ್ಕೆ ಸಂಕಟ ಒದಗಿತು. ಮತವನ್ನು ಒಪ್ಪದ ಕಮ್ಯೂನಿಸ್ಟರೂ ತಮ್ಮ ವಿಚಾರಧಾರೆಗೆ ಆಧಾರ ವರ್ಗ–ಸಂಘರ್ಷವೆಂದೇ ತಿಳಿದರು. ಮೊದಲು ಮತದ ಹೆಸರಿನಲ್ಲಿ ಹೋರಾಡಿದರು. ಬಲವಂತವಾಗಿ ಮತ್ತೊಬ್ಬರ ಮೇಲೆ ಮತವನ್ನು ಆರೋಪಿಸಲಾಯಿತು. ರಾಜನ ಮತವನ್ನು ಪ್ರಜೆಗಳೆಲ್ಲ ಸ್ವೀಕರಿಸುವಂತೆ ಬಲವಂತಪಡಿಸಲಾಗುತ್ತಿತ್ತು. ಯಾರು ರಾಜನ ಮತವನ್ನು ಒಪ್ಪುವುದಿಲ್ಲವೋ ಆ ಪ್ರಜೆಯನ್ನು ದೇಶದಿಂದ ಹೊರಹಾಕುವ ಪ್ರಯತ್ನ ಮಾಡಲಾಗುತ್ತಿತ್ತು. ಯಾವ ವಿಷಯ ಮೊದಲು ಮತದ ಹೆಸರಿನಲ್ಲಿ ನಡೆಯುತ್ತಿತ್ತೋ ಅದೇ ಕಮ್ಯೂನಿಸ್ಟ್ ದೇಶಗಳಲ್ಲಿ ಶಕ್ತಿಯ ಹೆಸರಿನಲ್ಲಿ ಇಂದು ನಡೆಯುತ್ತಿದೆ. ಈ ರೀತಿ ಪಶ್ಚಿಮದಲ್ಲಿ ರಾಷ್ಟ್ರವಾದದ ಉದಯ ಮಾನವನ ಪರಸ್ಪರ ಸಮನ್ವಯದಿಂದ ಅಲ್ಲದೇ ಸಂಘರ್ಷದಿಂದ ಉಂಟಾಗಿದೆ. ಇದರಿಂದಾಗಿ ಅಲ್ಲಿ ಜಿಗುಪ್ಸೆ, ದ್ವೇಷ ಹಾಗೂ ವಿನಾಶಗಳು ಉಂಟಾದವು.

ಆದರೆ ಇದನ್ನು ಆಧರಿಸಿ ಭಾರತದ ರಾಷ್ಟ್ರೀಯತೆಯ ಮೌಲ್ಯಮಾಪನ ಮಾಡುವುದು ತಪ್ಪಾಗುತ್ತದೆ. ಭಾರತದಲ್ಲಿ ರಾಷ್ಟ್ರೀಯತೆಯ ಭಾವದ ಉದಯ ಸ್ವಾರ್ಥವನ್ನಾಧರಿಸಿ ಉಂಟಾಗಲಿಲ್ಲ. ಭಾರತದಲ್ಲಿ ರಾಷ್ಟ್ರೀಯತೆಯ ವಿಚಾರವು ಕೆಲವು ನೂರು ವರ್ಷಗಳದ್ದಲ್ಲ, ಹಲವು ಸಾವಿರ ವರ್ಷಗಳದ್ದು. ಅದರ ಆಧಾರ ಪರಸ್ಪರ ಸಂಘರ್ಷವಾಗಿರದೆ, ಸಮನ್ವಯವಾಗಿದೆ, ಪರಸ್ಪರ ಅನುಕೂಲತೆಯಾಗಿದೆ. ಪಶ್ಚಿಮದ ಹಾಗೆ ಭಾರತದ ರಾಷ್ಟ್ರೀಯತೆ ಒಂದು ದೊಡ್ಡ ಖಾಸಗಿ ಕಂಪನಿಯಲ್ಲ. ಹೀಗೆ ಆ ಕಂಪನಿಯಲ್ಲಿ ಪ್ರತಿಯೊಬ್ಬ ನಾಗರಿಕನು ಷೇರ್‌ಹೋಲ್ಡರ್ ಆಗಿರುವುದರಿಂದ ತನ್ನ ಸ್ವಾರ್ಥಸಾಧನೆಗಾಗಿ ಅದಕ್ಕೆ ಅಂಟಿಕೊಂಡಿರುತ್ತಾನೆ. ಸ್ವಾರ್ಥದಿಂದಲೆ ದರೋಡೆಕೋರರೂ ಸಹ ಒಗ್ಗೂಡಿ ಪರಸ್ಪರ ಪ್ರಾಮಾಣಿಕತೆಯಿಂದ ವ್ಯವಹರಿಸುತ್ತಾರೆ. ಜೇಬುಕಳ್ಳರು ಸಹ ಪರಸ್ಪರ ಕೆಲವು ನಿಯಮಗಳನ್ನು ಪಾಲಿಸುತ್ತಾರೆ. ಸ್ವಾರ್ಥವಶ ಉತ್ಪನ್ನವಾದ ಈ ನಿಯಮಗಳನ್ನು ಆಧರಿಸಿದ ಈ ಸಂಘಟನೆಗಳ ಪ್ರೇರಣೆಯೇ ಬೇರೆಯಾಗಿರುತ್ತದೆ. ಹೀಗೆ ಭಾರತವರ್ಷದಲ್ಲಿ ಆಗಲಿಲ್ಲ. ಭಾರತವರ್ಷದಲ್ಲಿ ಮಾನವಕಲ್ಯಾಣದ ಒಂದು ವ್ಯಾಪಕ ಹಾಗೂ ವಿಶಾಲ ಜೀವನ–ದರ್ಶನ ಪ್ರಕಟಗೊಂಡಿತು. ಜೀವನದ ಈ ಸಮಗ್ರ ಚಿಂತನೆಯಿಂದ ಅಂತಃಕರಣಗಳಲ್ಲಿ ಸಾಮೂಹಿಕ ಜೀವನದ ಒಂದೇ ಅನುಭವವುಂಟಾಯಿತು. ಇದನ್ನು ಆಧರಿಸಿ ಭಾರತದ ರಾಷ್ಟ್ರೋಜ್ಜೀವನದ ವಿಕಾಸವಾಯಿತು. ಮಾನವಜೀವನದ ಶ್ರೇಷ್ಠ ಗುಣಗಳನ್ನು ಆರಾಧಿಸುವ ಭಾವ ಪ್ರತಿಧ್ವನಿಸಿತು. ಭಾರತದ ಅಂತಃಕರಣದಲ್ಲಿ ಸೃಷ್ಟಿಯ ಪ್ರತಿಯೊಂದು ಕ್ರಿಯೆಯಲ್ಲಿ ಸಂಘರ್ಷದ ಬದಲು ಪೂರಕಭಾವವಿದೆ ಎಂಬ ಮಾತು ಕೇಳಿಬಂದಿತು. ಒಂದೇ ತತ್ವವು ವಿಭಿನ್ನ ರೂಪಗಳಲ್ಲಿ ನಮ್ಮ ಮುಂದೆ ಬಂದಿದೆ. ಆದುದರಿಂದ ಯಾರು ಈ ಎಲ್ಲಾ ವಿಭಿನ್ನತೆಗಳಲ್ಲಿಯೂ ಆ ಒಂದೇ ಆತ್ಮದ ದರ್ಶನಭಾಗ್ಯ ಪಡೆಯುತ್ತಾರೋ ಅವರೇ ಶ್ರೇಷ್ಠ, ಆರ್ಯರಾಗುತ್ತಾರೆ. ಮನುಷ್ಯನೆನಿಸಿಕೊಳ್ಳುತ್ತಾರೆ. ಈ ಶ್ರೇಷ್ಠ ಮನುಷ್ಯನ ನಿರ್ಮಾಣದಲ್ಲಿ ಯಾವ ವ್ಯವಸ್ಥೆ ಹಾಗೂ ನಿಯಮಗಳನ್ನು ಅಳವಡಿಸಿಕೊಳ್ಳಲಾಗುವುದೋ ಅದೇ ಧರ್ಮವಾಗುತ್ತದೆ. ಸ್ವಾರ್ಥಕ್ಕೆ ಬದಲಾಗಿ ಸಮರ್ಪಣೆಗೆ ಮಾನ್ಯತೆ ನೀಡಲಾಯಿತು. ಪ್ರತಿಕ್ರಿಯೆಯ ಬದಲಿಗೆ ಭಾವನಾತ್ಮಕ ಹಾಗೂ ರಚನಾತ್ಮಕ ಪದ್ಧತಿಯಿಂದ ವಿಚಾರ ಮಾಡಲಾಯಿತು. ಪ್ರತಿದ್ವಂದ್ವದ ಸ್ಥಾನದಲ್ಲಿ ಪರಸ್ಪರ ಪೂರಕತೆಯ ಮಂತ್ರವನ್ನು ಹೇಳಲಾಯಿತು. ಕ್ಷಮೆ, ದಯೆ, ಅಹಿಂಸೆ, ಅಸ್ತೇಯ (ಕದಿಯದಿರುವ ವ್ರತ) ಬ್ರಹ್ಮಚರ್ಯಗಳ ಮಹಿಮೆಯನ್ನು ಪ್ರಶಂಸಿಸಲಾಗಿದೆ. ವಿಭಿನ್ನ ನಂಬಿಕೆಗಳನ್ನು ಮಾನವನ ವಿಕಾಸದ ಮೆಟ್ಟಿಲುಗಳು ಎಂದು ಆದರದಿಂದ ಕಾಣಲಾಗಿದೆ. ವಿಭಿನ್ನ ಕೋಮುಗಳನ್ನು ಆದರದಿಂದ ನೋಡಲಾಗಿದೆ. ಒಂದೇ ಸತ್ಯದ ವಿಭಿನ್ನ ರೂಪಗಳು, ಅವುಗಳ ಹೆಸರುಗಳು ಹಾಗೂ ಸತ್ಯವನ್ನು ಅರಿಯಲು ಇರುವ ವಿಭಿನ್ನ



ಪದ್ಧತಿಗಳನ್ನು ಸ್ವಸ್ಥ ವಿಕಾಸಕ್ಕಾಗಿ ಅನಿವಾರ್ಯ ಮಾತ್ರವಲ್ಲದೆ ಅತಿ ಆವಶ್ಯಕವೆಂದು ತಿಳಿಯಲಾಯಿತು. ಆದ್ದರಿಂದಲೇ ಕೇವಲ ಸಹಿಷ್ಣುತೆ ಮಾತ್ರವಲ್ಲದೆ ಏಕಾತ್ಮವಾದದ ಆರಾಧನೆಯ ಉಪದೇಶ ದೊರೆಯಿತು. ಭಾರತದ ಈ ರಾಷ್ಟ್ರೀಯತೆಯು ಪ್ರತಿಯೊಂದು ಜೀವರಾಶಿಯ ಕಲ್ಯಾಣದ ಭಾವನೆಯಿಂದ ಪ್ರಕಟಗೊಂಡಿತು.

ಆದುದರಿಂದ ಪಶ್ಚಿಮದ ರಾಷ್ಟ್ರವಾದವನ್ನು ಭಾರತದ ರಾಷ್ಟ್ರವಾದಕ್ಕೆ ಹೋಲಿಸುವುದು ತಪ್ಪಾಗುತ್ತದೆ. ಪಶ್ಚಿಮವು ದ್ವೈತವನ್ನಾಧರಿಸಿದ ಸಂಘರ್ಷದ ನಗಾರಿಯನ್ನು ಬಾರಿಸಿತು ಹಾಗೂ ಭಾರತವು ಅದ್ವೈತವನ್ನಾಧರಿಸಿದ ಏಕಾತ್ಮತೆಯ ಕೊಳಲನ್ನು ನುಡಿಸಿತು. ಎರಡೂ ವಾದ್ಯಗಳಾಗಿದ್ದರೂ ಎರಡರ ಸ್ವರಲಹರಿಯಲ್ಲಿ ಬಹಳ ಅಂತರವಿದೆ. ಈ ಅಂತರವನ್ನು ತಿಳಿದು ನಾವು ನಮ್ಮ ರಾಷ್ಟ್ರೀಯ ಸಂಘಟನೆಯನ್ನು ಕುರಿತು ವಿಚಾರ ಮಾಡಬೇಕು. ಯೂರೋಪಿನ ದೇಶಗಳಲ್ಲಿ ರಾಷ್ಟ್ರವಾದದಿಂದ ವಿನಾಶವುಂಟಾಯಿತು ಆದುದರಿಂದ ಭಾರತದ ರಾಷ್ಟ್ರವಾದನ್ನು ಸಹ ವಿನಾಶಕಾರಿ ಎಂದು ಹೇಳುವುದು, 'ಬಿಸಿ ಹಾಲಿನಿಂದ ನಾಲಗೆ ಸುಟ್ಟುಕೊಂಡವರು ಮಜ್ಜಿಗೆಯನ್ನು ಆರಿಸಿ ಕುಡಿಯುತ್ತಾರೆ' ಎಂದು ಹೇಳಿಕೆಯನ್ನು ಸಾರ್ಥಕ ಗೊಳಿಸಿದಂತಾಗುತ್ತದೆ. ಆದ್ದರಿಂದ ಯಾವ ರಾಷ್ಟ್ರಗಳು ಮಾನವನಿಗೆ ಸಂಕಟಗಳನ್ನು ತಂದಿಟ್ಟಿವೆಯೋ, ತಪ್ಪು ಕಾರ್ಯವೆಸೆಗಿವೆಯೋ, ಅದೇ ರೀತಿಯ ಪರಿಣಾಮ ನಮ್ಮ ರಾಷ್ಟ್ರೀಯತೆಯಿಂದ ಆಗುವುದು ಎಂಬ ಸಾರಾಂಶ ತಪ್ಪಾಗುತ್ತದೆ. ಇದು ಕೇವಲ ಘೋಷಣೆಯಲ್ಲ. ಭಾರತದ ರಾಷ್ಟ್ರೀಯತೆಯ ಸಾವಿರಾರು ಶತಮಾನಗಳ ಇತಿಹಾಸವು ಈ ತಥ್ಯವನ್ನು ಪುಷ್ಟಿಗೊಳಿಸುತ್ತದೆ. ವಿಶ್ವದ ಈ ದೇಶಗಳು ಕಳೆದ ಸಾವಿರದ ಐನೂರು ವರ್ಷಗಳಲ್ಲಿ ಯಾವ ಭೀಷಣ ವಿನಾಶಕಾರಿ ದೃಶ್ಯಗಳನ್ನು ನಮ್ಮ ಮುಂದಿಟ್ಟಿದೆಯೋ ಅಲ್ಲಿ ಭಾರತದ ಬಹು ದೀರ್ಘ ಇತಿಹಾಸದಲ್ಲಿ ಮಾನವನನ್ನು ಪೀಡಿಸುವ ಉಲ್ಲೇಖ ಒಂದು ಪುಟದಲ್ಲಿಯೂ ಇಲ್ಲ. ಭಾರತದ ಯಾವುದಾದರೂ ಇತಿಹಾಸವಿದ್ದಲ್ಲಿ ಅದು ಸಮಸ್ತ ವಿಶ್ವದ ಕಲ್ಯಾಣವನ್ನು ಬಯಸುವುದಾಗಿದೆ. ವಿಶ್ವದ ವಿಭಿನ್ನ ದೇಶಗಳಲ್ಲಿ ದೊರೆತ ಭಾರತೀಯ ಇತಿಹಾಸದ ಅವಶೇಷಗಳು ಇಂದಿಗೂ ಭಾರತ ಪ್ರತಿಯೊಂದು ಜೀವಿಯ ಕಲ್ಯಾಣಕ್ಕಾಗಿ ಪ್ರಯತ್ನಿಸಿದೆ ಎಂದು ಸಾರುತ್ತದೆ. ಆದ್ದರಿಂದ ವಿಶ್ವದಲ್ಲಿ ಪರಸ್ಪರ ಸಂಘರ್ಷ, ದ್ವೇಷ, ಪ್ರತಿಸ್ಪರ್ಧೆಗಳನ್ನಾಧರಿಸಿ ಪ್ರಕಟವಾದ ಪಾಶ್ಚಾತ್ಯ ರಾಷ್ಟ್ರವಾದದ ಭೀಷಣತೆಯಿಂದ ವಿಶ್ವವನ್ನು ಕಾಪಾಡಲು ಅವು ಭಾರತದ ಸಶಕ್ತ ರಾಷ್ಟ್ರವಾದವನ್ನು ಸಂಘಟಿತ ಹಾಗೂ ಸಕ್ಷಮವನ್ನಾಗಿಸಿ ನಿಲ್ಲಬೇಕು ಎಂಬುದು ಸತ್ಯವಾಗಿದೆ. ಇದೇ ವಿಶ್ವಕಲ್ಯಾಣದ ಮಾರ್ಗವಾಗಿದೆ.

## ೧೫. ವ್ಯಕ್ತಿ ಹಾಗೂ ಸಮಾಜದ ಸಂಬಂಧ

ಇಂದು ವಿಶ್ವದಲ್ಲಿ ಸಮಷ್ಟಿಯ ಯಾವ ರೂಪಕ್ಕೆ ಎಲ್ಲದಕ್ಕಿಂತ ಮಿಗಿಲಾದ ಮಹತ್ವವಿದೆಯೋ ಅದೇ 'ರಾಷ್ಟ್ರ'ವಾಗಿದೆ.

ಸಂಪೂರ್ಣ ಮಾನವ ಜಾತಿಯ ಒಳಿತಿಗಾಗಿ ಇಲ್ಲಿಯತನಕ ಎಷ್ಟು ಪ್ರಯತ್ನಗಳಾಗಿವೆಯೋ ಅವೆಲ್ಲಾ ಕೊನೆಯಲ್ಲಿ ರಾಷ್ಟ್ರವಾದದ ಮುಂದೆ ಕ್ಷೀಣಗೊಂಡಂತೆ ಕಂಡುಬರುತ್ತದೆ. ಮಾನವತೆಯ ಕಲ್ಯಾಣಕ್ಕಾಗಿ ಎಷ್ಟು ಕಾರ್ಯವಾಗಿದೆಯೋ ಅದೆಲ್ಲವೂ ರಾಷ್ಟ್ರವನ್ನಾಧರಿಸಿರುವುದು ಸತ್ಯಸಂಗತಿ. ಕ್ರೈಸ್ತಮತದ ಪ್ರಾರಂಭದಲ್ಲಿ ರಾಷ್ಟ್ರವನ್ನು ಕುರಿತಾದ ಬಂಧನ ಅಳವಡಿಸುತ್ತಿರಲಿಲ್ಲ. ಕ್ಯಾಥೊಲಿಕ್ ಚರ್ಚ್‌ನ ಪ್ರಧಾನ ಪೋಪರೇ ಪ್ರಮುಖರಾಗಿರುತ್ತಿದ್ದರು. ವಿಭಿನ್ನ ದೇಶಗಳಲ್ಲಿ ಕ್ರೈಸ್ತಮತದ ಪ್ರಚಾರವಾಯಿತು. ರೋಮಿನ ಪೋಪರು ಸರ್ವೋಚ್ಚರಾಗಿದ್ದರು. ಆದರೆ ಕಾಲ ಕ್ರಮೇಣ ವಿಭಿನ್ನ ದೇಶಗಳಲ್ಲಿ ರಾಷ್ಟ್ರವಾದ ಪ್ರಬಲಗೊಂಡಿತು. ಪೋಪಿನ ಶಕ್ತಿಗೆ ಒಂದು ಸವಾಲು ಏರ್ಪಟ್ಟಿತು ಹಾಗೂ ಇದರ ಪರಿಣಾಮವಾಗಿ ಒಂದು ಚಿಕ್ಕ ವೆಟಿಕನ್ ಸಿಟಿಯವರೆಗೂ ಮಾತ್ರ ಇಂದು ಈ ಶಕ್ತಿ ಸೀಮಿತಗೊಂಡಿದೆ. ಇಂದು ಈ ಎಲ್ಲಾ ದೇಶಗಳಲ್ಲಿ ರಾಷ್ಟ್ರವಾದವೇ ನಿರ್ಣಾಯಕ ತತ್ವವಾಗಿದೆ. ಇಸ್ಲಾಂ ಕೂಡ ರಾಷ್ಟ್ರೀಯತೆಯನ್ನು ಒಪ್ಪುತ್ತಿರಲಿಲ್ಲ. ಪ್ರಪಂಚದ ಎಲ್ಲಾ ಮುಸಲ್ಮಾನರನ್ನು ಒಂದಾಗಿ ನಿಲ್ಲಿಸುವ ಆಲೋಚನೆಯಿಂದ ಇಸ್ಲಾಂ ಮುಂದುವರಿಯಿತು. ಸಮಸ್ತ ಮುಸ್ಲಿಂ ಜಗತ್ತಿಗೆ ಒಬ್ಬನೇ ಒಬ್ಬ ಖಲೀಫನೆಂದು ತಿಳಿಯಲಾಗುತ್ತಿತ್ತು. ಆದರೆ ರಾಷ್ಟ್ರೀಯತೆಯ ಅಲೆ ಎದ್ದು ಬಂದಾಗ ಖಲೀಫನನ್ನು ದೂರ ಸರಿಸಲಾಯಿತು. ಇಂದು ರಾಷ್ಟ್ರದಲ್ಲಿ ಮುಸಲ್ಮಾನರು ರಾಷ್ಟ್ರವನ್ನು ಆಧಾರವನ್ನಾಗಿರಿಸಿ ವಿಚಾರ ಮಾಡುವ ಕ್ರಮವನ್ನು ಅಳವಡಿಸಿಕೊಂಡಿದ್ದಾರೆ. ಇದೇ ವಿಷಯ ಸಾಮ್ಯವಾದದೊಡನೆಯೂ ಅನ್ವಯಿಸುತ್ತಿದೆ. ಸಾಮ್ಯವಾದವನ್ನು ಘೋಷಿಸುವವರು ಸಮಸ್ತ ವಿಶ್ವಕ್ಕೆ ಸಾರಿ ಹೇಳಿದರು. ಪ್ರಪಂಚದ ಜನರನ್ನು ಕುರಿತು ಹೀಗೆಯೇ ವಿಚಾರಮಾಡಿದರು. ರಾಷ್ಟ್ರದ ಗಡಿಯನ್ನು ತಿರಸ್ಕರಿಸಿದರು. ಆದರೆ ಇಂದು ಅದೇ ಸಾಮ್ಯವಾದದಲ್ಲಿ ರಾಷ್ಟ್ರೀಯ ಭಾವನೆಯು ಅಲೆಯಾಡುತ್ತಿದೆ. ರಷ್ಯಾ ಹಾಗೂ ಚೈನಾ ತಮ್ಮ-ತಮ್ಮ ರಾಷ್ಟ್ರವಾದದ ಹೆಸರಿನಲ್ಲಿ ನಿಂತುಕೊಂಡವು. ಇದೇ ಸಂಗತಿ ಅತಿ ಶೀಘ್ರವೇ ಅನ್ಯ ಸಾಮ್ಯವಾದಿ ದೇಶಗಳಲ್ಲಿ ಪ್ರಕಟಗೊಳ್ಳುವ ಲಕ್ಷಣವೂ ಆಗತೊಡಗಿತು. ಬೌದ್ಧಮತವನ್ನು ಒಪ್ಪಿರುವ ಅದೆಷ್ಟೋ



ದೇಶಗಳಿವೆ. ಆದರೆ ವಾಸ್ತವಕ್ಕೆ ಎಲ್ಲಾ ದಿಕ್ಕಿನಿಂದಲೂ ರಾಷ್ಟ್ರದ ಆಧಾರದ ಮೇಲೆ ಚಿಂತನೆ ನಡೆದುಬಂದಿದೆ. ವಿಶ್ವದ ಎಲ್ಲಾ ರೀತಿಯ ಕೊಡು-ಕೊಳಕೆಯ ಪ್ರಭಾವಶಾಲಿ ಮಾಧ್ಯಮ, ಇಂದು 'ರಾಷ್ಟ್ರ'ವಾಗಿದೆ. ಹೀಗೆ ವಿಶ್ವದಲ್ಲಿ ಮಾನವ ಸಂಘಟನೆಗಳ ಅತಿ ದೊಡ್ಡ ಮೂಲಾಧಾರವೇ ರಾಷ್ಟ್ರ. ಇದನ್ನು ಆಧಾರವಾಗಿರಿಸಿಕೊಂಡು ವಿಶ್ವದ ಸಮಸ್ತ ಸಮಸ್ಯೆಗಳಿಗೆ ಸಮಾಧಾನ ಹುಡುಕಬೇಕಾಗಿದೆ.

'ರಾಷ್ಟ್ರ' ಎಂಬ ಘಟಕದ ಆಧಾರವೇನು ಎಂಬುದನ್ನು ವಿಸ್ತೃತವಾಗಿ ಚರ್ಚಿಸುವ ಅಗತ್ಯವಿಲ್ಲ. ಸಾರಾಂಶವಾಗಿ ಹೇಳುವುದಾದರೆ, ರಾಷ್ಟ್ರಕ್ಕೆ ಯಾವ ವಿಷಯಗಳ ಅಗತ್ಯವಿರುವುದೋ ಅದರಲ್ಲಿ ಅತಿ ಪ್ರಮುಖವಾದದ್ದು 'ಭೂಮಿ'. ನಿಶ್ಚಿತ ಭೂಭಾಗದೊಡನೆ ಮತ್ತೊಂದು ಮಹತ್ವಪೂರ್ಣ ವಿಷಯವೆಂದರೆ ಅಲ್ಲಿ ವಾಸಿಸುವಂತಹ ಮಾನವ ಸಮುದಾಯ ಅಂದರೆ 'ಒಂದು ಜನಾಂಗ'. ಈ 'ಭೂಮಿ' ಹಾಗೂ 'ಜನ'ರ ನಡುವೆ ತಾಯಿ ಹಾಗೂ ಮಗನಂತಹ ಮಗಳಂತಹ ಸಂಬಂಧವಿರುವುದು ರಾಷ್ಟ್ರಕ್ಕೆ ಅನಿವಾರ್ಯವಾಗಿದೆ. ಅದೇ ಭೂ-ಭಾಗದಲ್ಲಿ ಆ ಭೂಮಿಯನ್ನು ತಮ್ಮ ಮಾತೃಭೂಮಿ ಎಂದು ತಿಳಿಯದೇ ಮತ್ತೊಂದು ರೀತಿ ಭಾವಿಸುವಂತಹ ಜನರು ಸಹ ವಾಸಿಸುತ್ತಾರೆ. ಉದಾಹರಣೆಗೆ ಆಂಗ್ಲರು ಭಾರತದಲ್ಲಿ ರಾಜ್ಯಭಾರಮಾಡುವಾಗ ಅವರ ಮಾತೃಭೂಮಿ ಇಂಗ್ಲೆಂಡ್ ಆಗಿತ್ತು. ಭಾರತವನ್ನು ಅವರು ಭೋಗಭೂಮಿಯೆಂದು ತಿಳಿಯುತ್ತಿದ್ದರು. ಈ ರೀತಿಯ ಎಲ್ಲಾ ಜನರೂ ಆ ಭೂಮಿಯನ್ನು ಆಕ್ರಮಿಸುವಂತಹವರಾಗುತ್ತಾರೆ. ಇವರು ಸ್ವಯಂಪುತ್ರ ರೂಪವನ್ನು ಅನುಭವಿಸಲಾರರು. ಈ ಭೂಮಿಯ ಮೇಲೆ ವಾಸಿಸುತ್ತಾ ಅನ್ಯ ಯಾವುದೋ ಭೂಮಿಯ ಕನಸು ಕಾಣುತ್ತಿರುತ್ತಾರೆ, ಅವರ ಶ್ರದ್ಧಾ ಕೇಂದ್ರ ಈ ಭೂಮಿಯ ಹೊರಗಿರುತ್ತದೆ ಅಥವಾ ಈ ಭೂಮಿಯನ್ನು ಹೊರತುಪಡಿಸಿ ಪ್ರೇರಣೆ ಗ್ರಹಿಸುತ್ತಾರೆ, ಇಂತಹ ಎಲ್ಲಾ ಜನರು ಇದೇ ಭೂಮಿಯ ಜಲವಾಯುವಿನಲ್ಲಿ- ಹವಾಮಾನದಲ್ಲಿ ಜನಿಸಿ, ಬೆಳೆದು, ದೊಡ್ಡವರಾಗಿದ್ದರೂ ಸಹ ಆ ಒಂದು ಜನಾಂಗದಿಂದ ದೂರಸರಿದವರಾಗಿರುತ್ತಾರೆ, ಬೇರ್ಪಟ್ಟಿರುತ್ತಾರೆ. ಅವರನ್ನೂ ಆ ನೆಲದ ಮಮತೆಯೊಂದಿಗೆ ಐಕ್ಯ ಮಾಡಲಾಗುವುದಿಲ್ಲವೋ ಅಲ್ಲಿಯ ತನಕ ಅವರು ಘಾತಕ ತತ್ವಗಳೆಂದು ಕರೆಯಲ್ಪಡುತ್ತವೆ. ಆದುದರಿಂದಲೇ ರಾಷ್ಟ್ರದ ಮೂರನೆಯ ಆವಶ್ಯಕತೆಯೆಂದರೆ ಇಂತಹ ಪುತ್ರ-ರೂಪ ಸಮಾಜದ ಎಲ್ಲಾ ಜನರ ಒಂದೇ ಸಮನಾದ ಇಚ್ಛೆ. ಒಂದಾಗಿ ಬಾಳುವುದು, ಸೇರಿ ಮುಂದೆ ನಡೆಯುವುದು, ಮಾತೃಭೂಮಿಯ ಗೌರವವನ್ನು ಹೆಚ್ಚಿಸುವುದು, ಸಮೃದ್ಧಿ ಹಾಗೂ ಪ್ರಗತಿಯಲ್ಲಿ ಸಹಜ ರೀತಿಯಿಂದ ಸಹಕಾರ್ಯ ಮಾಡುವುದು ಇಂತಹ ಇಚ್ಛೆಗಳಿರಬೇಕು. ಅಂದರೆ ಎಲ್ಲಾ ಸೇರಿ ಒಂದು ಸಂಕಲ್ಪವಿರಬೇಕು. ಒಂದು ಸಂಕಲ್ಪವಿಲ್ಲದೇ ಯಾವುದೇ ಸಮಷ್ಟಿ ಮುನ್ನಡೆಯಲಾರದು. ಎಲ್ಲಾ ಜನರ

ಸಮಾನ ಅನುಭವಗಳಿಂದಲೇ ಈ ಸಂಕಲ್ಪ ಪ್ರಕಟಗೊಳ್ಳುತ್ತದೆ. ಆದರೆ ಈ ರೀತಿಯ ಸಮಾನ ಅನುಭವ ಹಾಗೂ ಅವುಗಳಿಂದ ಪ್ರಕಟಗೊಂಡ ಸಂಕಲ್ಪಕ್ಕಾಗಿ ಎಲ್ಲರಮುಂದೇ ಒಂದು ಗುರಿ ಅಗತ್ಯವಾಗಿರಬೇಕು. ಲಕ್ಷ್ಯವೆಂದರೇ ಎಲ್ಲರ ಆದರ್ಶ ಒಂದಾಗಿರಬೇಕು. ಜೀವನದ ಆದರ್ಶ ಒಂದೇ ಆಗಿರಬೇಕು. ಈ ಆದರ್ಶವನ್ನು ಚರಿತಾರ್ಥಗೊಳಿಸುವ ಸಲುವಾಗಿ ಸಂಕಲ್ಪಮಾಡಲಾಗುತ್ತದೆ. ಈ ಆದರ್ಶ ಇದ್ದಕ್ಕಿದ್ದ ಹಾಗೆಯೇ ನಿರ್ಮಾಣವಾಗುವುದಿಲ್ಲ. ಸಮಾಜವನ್ನು ಉನ್ನತಮಟ್ಟಕ್ಕೆ ಏರಿಸಲು ಪೂರ್ವಕಾಲದಲ್ಲಿ ಹಿಂದೆ ಮಾಡಲ್ಪಟ್ಟ ಮಹಾನ್ ಪ್ರಯತ್ನಗಳು, ಎಲ್ಲೆಯಿಲ್ಲದ ತ್ಯಾಗ, ಪರಿಶ್ರಮ ಹಾಗು ಉದ್ಯೋಗಗಳನ್ನು ಮಾಡಲಾಗಿದೆಯೋ ಅವುಗಳ ಒಂದು ಪರಂಪರೆಯಾಗುತ್ತದೆ. ಈ ಪರಂಪರೆಯನ್ನು ದೃಢಗೊಳಿಸುವ ಮಹಾಪುರುಷರ ಜೀವನ ಆ ಆದರ್ಶವನ್ನು ಸೂಚಿಸುತ್ತದೆ. ಹಾಗೂ ಆಗ ರಾಷ್ಟ್ರದ ಅಂತಿಮ ಆವಶ್ಯಕತೆಯುಂಟಾಗುತ್ತದೆ, ಆ ವ್ಯವಸ್ಥೆಯಲ್ಲಿ ಈ ಆದರ್ಶಗಳನ್ನು ಗಳಿಸಿ ಯಶಸ್ವಿಯಾಗಿ ಮುನ್ನಡೆಯಬಹುದಾಗಿದೆ. ಯಾವುದೇ ವ್ಯವಸ್ಥೆಯಿಲ್ಲದೇ ಯಾವುದೇ ಸಮಷ್ಟಿ ಜೀವನವನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ವ್ಯವಸ್ಥೆ ನಷ್ಟಗೊಂಡಾಗ/ನಶಿಸಿದಾಗ ಸಮಷ್ಟಿಯ ವಿನಾಶಉಂಟಾಗುತ್ತದೆ.

ಒಟ್ಟಾರೆ 'ರಾಷ್ಟ್ರ'ಕ್ಕಾಗಿ ನಾಲ್ಕು ವಿಷಯಗಳು ಅಗತ್ಯವಾಗಿರಬೇಕು ಎಂದು ಹೇಳಬಹುದು. ಪ್ರಪ್ರಥಮವಾಗಿ ಭೂಮಿ ಮತ್ತು ಜನ, ಅದನ್ನೇ ನಾವು ದೇಶವೆನ್ನುತ್ತೇವೆ. ಎರಡನೆಯದಾಗಿ ಎಲ್ಲರ ಇಚ್ಛಾಶಕ್ತಿ ಅಂದರೆ ಸಾಮೂಹಿಕವಾದ ಜೀವನಸಂಕಲ್ಪ. ಮೂರನೆಯದಾಗಿ, ನಿಯಮ ಅಥವಾ ಸಂವಿಧಾನವೆಂದು ಕರೆಯಲಾಗುವ ಒಂದು ವ್ಯವಸ್ಥೆ ಹಾಗೂ ನಮ್ಮಲ್ಲಿ ಬಳಸಲಾದ ಅತಿ ಒಳ್ಳೆಯ ಶಬ್ದವೆಂದರೆ 'ಧರ್ಮ' ಹಾಗೂ ನಾಲ್ಕನೆಯದಾಗಿ, ಜೀವನದ ಆದರ್ಶ. ಈ ನಾಲ್ಕು ವಿಷಯಗಳ ಸಮುಚ್ಚಯ ಎಂದರೆ ಇಂತಹ ಸಮಷ್ಟಿಯನ್ನು 'ರಾಷ್ಟ್ರ' ಎಂದು ಹೇಳಲಾಗುವುದು. ಯಾವ ರೀತಿ ವ್ಯಕ್ತಿಗೆ ಶರೀರ, ಮನಸ್ಸು ಮತ್ತು ಬುದ್ಧಿ ಹಾಗೂ ಆತ್ಮ ಅತ್ಯವಶ್ಯಕವಾಗಿದೆಯೋ ಈ ನಾಲ್ಕನ್ನೂ ಸೇರಿಸಿ ವ್ಯಕ್ತಿಯ ನಿರ್ಮಾಣವಾಗುತ್ತದೆಯೋ ಅದೇ ರೀತಿ ದೇಶ, ಸಂಕಲ್ಪ, ಧರ್ಮ ಹಾಗೂ ಆದರ್ಶಗಳ ಸಮುಚ್ಚಯದಿಂದ ರಾಷ್ಟ್ರವಾಗುತ್ತದೆ.

ವ್ಯಷ್ಟಿ ಹಾಗೂ ಸಮಷ್ಟಿ ಈ ಎರಡೂ ಶಕ್ತಿಗಳ ಪರಸ್ಪರ ಸಂಬಂಧದಿಂದಲೇ ರಾಷ್ಟ್ರದ ಸರ್ವಾಂಗೀಣ ಉನ್ನತಿಯಾಗುತ್ತದೆ. ಆದುದರಿಂದಲೇ ವ್ಯಷ್ಟಿ ಹಾಗೂ ಸಮಷ್ಟಿಯ ಈ ಸಂಬಂಧಗಳನ್ನು ನಾವು ಚೆನ್ನಾಗಿ ಅರಿತುಕೊಳ್ಳಬೇಕು.

ಚೌಕಾಕಾರದ ಒಂದು ಡಬ್ಬವನ್ನು ನಿಮ್ಮ ಕೈಯಲ್ಲಿ ಹಿಡಿದರೆ ಅದರ ಎರಡು ಭಾಗಗಳನ್ನು ನಾವು ಕಾಣಬಹುದು. ಇದನ್ನು ನಾವು ಮೇಲ್ಭಾಗ ಹಾಗೂ ಕೆಳಭಾಗ ಎಂದು ಹೇಳಬಹುದು. ಆದರೆ ಈ ಡಬ್ಬದಿಂದ ಯಾವುದೇ ತಳಹದಿಯನ್ನು



ತೆಗೆದು ಬೇರ್ಪಡಿಸಲಾಗುವುದೆ? ನಾವು ಆ ಡಬ್ಬವನ್ನು ಚಿಕ್ಕದನ್ನಾಗಿ ಮಾಡಿದರೂ ಈ ಎರಡೂ ತಳಹದಿಗಳು ಹಾಗೆಯೇ ಇರುತ್ತದೆ. ಹೇಗೆ ಒಂದು ನಾಣ್ಯದ ಎರಡು ಮುಖಗಳಿರುವುದೋ ಮತ್ತು ಯಾವುದೇ ನಾಣ್ಯದಿಂದ ಈ ಎರಡೂ ಮುಖಗಳಲ್ಲಿ ಒಂದನ್ನು ತೆಗೆಯಲಾಗುವುದೇ? ಹಾಗೆಯೇ ವ್ಯಷ್ಟಿ ಹಾಗೂ ಸಮಷ್ಟಿ ಎರಡೂ ಅವಿಭಾಜ್ಯ ಅಂಗಗಳಾಗಿವೆ. ಯಾವ ರೀತಿ ನಾವು ಡಬ್ಬವನ್ನು ಎಷ್ಟು ಚಿಕ್ಕದಾಗಿ ಮಾಡಿದರೂ ಅದರ ಕೆಳಗಿನ ಹಾಗೂ ಮೇಲಿನ ಎರಡೂ ಭಾಗಗಳೂ ಹಾಗೆಯೇ ಉಳಿಯುತ್ತವೆ. ಅವುಗಳ ಅಂತರ ಕಡಿಮೆ ಅಥವಾ ಹೆಚ್ಚಾದರೂ ಸಹ ಎರಡೂ ಇರುತ್ತದೆ. ಈ ಎರಡೂ ಮುಖಗಳಲ್ಲಿ ಯಾವುದು ದೊಡ್ಡದು ಹಾಗೂ ಯಾವುದು ಚಿಕ್ಕದು? ಈ ವಿಚಾರ ವಾಸ್ತವಕ್ಕೆ ತಪ್ಪಾಗುತ್ತದೆ. ಆದುದರಿಂದಲೇ ವ್ಯಕ್ತಿ ದೊಡ್ಡವನೋ ಅಥವಾ ಸಮಾಜ ದೊಡ್ಡದೋ ಎಂಬ ಪ್ರಶ್ನೆ ಕೇಳಿದಾಗ ಉತ್ತರಿಸುವುದು ಅಸಂಭವವಾಗುತ್ತದೆ. ಸಮಾಜವು ದೊಡ್ಡದಾಗಿರುವುದು ಹಾಗೂ ವ್ಯಕ್ತಿಯು ಸಹ ದೊಡ್ಡವನಾಗಿರುತ್ತಾನೆ ಅಥವಾ ಎಷ್ಟು ದೊಡ್ಡ ವ್ಯಕ್ತಿಯೋ ಅಷ್ಟೇ ದೊಡ್ಡದಾದ ಸಮಾಜ ಹಾಗೂ ಎಷ್ಟು ದೊಡ್ಡ ಸಮಾಜವೋ ಅಷ್ಟೇ ದೊಡ್ಡ ವ್ಯಕ್ತಿಯೆಂದು ಹೇಳಬಹುದು. ಎರಡೂ ಅಭಿನ್ನ. ಪಾಶ್ಚಾತ್ಯ ವಿಚಾರಧಾರೆಯಿಂದ ಪ್ರಭಾವಿತರಾದ ಜನರು, ವ್ಯಕ್ತಿ ಹಾಗೂ ಸಮಾಜದ ನಡುವೆ ಸಂಘರ್ಷದ ಹಿನ್ನೆಲೆಯಿಂದ ವಿಚಾರ ಮಾಡುತ್ತಾರೆ. ಅವರಿಗೆ ಈ ಎರಡೂ ಬೇರೆ–ಬೇರೆಯಾಗಿ ಕಾಣಿಸುತ್ತವೆ. ಎರಡರ ಭಿನ್ನ ಅಸ್ತಿತ್ವದ ಕಲ್ಪನೆ ಮಾಡಲಾಗುತ್ತದೆ, ಎರಡರ ಅಧಿಕಾರ ಭಿನ್ನವೆಂದು ಹೇಳಲಾಗಿದೆ. ಎರಡರಲ್ಲಿಯೂ ಗಲಭೆಯನ್ನು ತೋರಿಸಲಾಗಿದೆ. ವ್ಯಕ್ತಿ ಹಾಗೂ ಸಮಾಜದ ಹಿತದೃಷ್ಟಿ ಎದುರಾಗುವುದೆಂದು ಹೇಳಲಾಗಿದೆ. ಪಾಶ್ಚಾತ್ಯದ ಚಿಂತನೆಯಲ್ಲಿ ದ್ವೈತವು ಬಲವಂತವಾಗಿ ಪ್ರವೇಶಿಸಿದೆ. ಅಲ್ಲಿ ಪ್ರತಿಯೊಂದು ವಿಷಯವನ್ನು ಸಂಘರ್ಷದ ಹಿನ್ನೆಲೆಯಲ್ಲಿ ಯೋಚಿಸಲಾಗುತ್ತದೆ. ಒಂದು ಅಂಶದಲ್ಲಿ ಯಾವುದೇ ಸಂಘರ್ಷವಿರುವುದಿಲ್ಲ. ಸಂಘರ್ಷಕ್ಕೆ ಎರಡು ಅಂಶಗಳ ಅಗತ್ಯವಿದೆ. ಪಾಶ್ಚಾತ್ಯವು ದ್ವೈತವನ್ನು ಅವಲಂಬಿಸಿತು. ಅಲ್ಲಿ ಪತಿ ಹಾಗೂ ಪತ್ನಿಯನ್ನು ಬೇರೆಯೆಂದು ತಿಳಿದು ವಿಚಾರ ಮಾಡಲಾಗುತ್ತದೆ. ಪ್ರೇಮವನ್ನು ಕುರಿತು ವಿಚಾರಮಾಡುವಾಗ ಇಬ್ಬರು ಬೇರೆಯೆಂದೇ ತಿಳಿದು ಪ್ರೇಮ ಉಂಟಾಗುತ್ತದೆ. ಎರಡರಲ್ಲೂ ಒಪ್ಪಂದವುಂಟಾಗುತ್ತದೆ, ಎರಡೂ ತಪ್ಪಿಸಿಕೊಳ್ಳಲು ಯತ್ನಿಸುತ್ತವೆ. ಎರಡರ ನಡುವೆಯ ಐಕ್ಯತೆಯ ಕಲ್ಪನೆಯನ್ನು ಮಾಡಲಾಗುತ್ತದೆಯೋ ಅದರಲ್ಲಿ ಆ ಎರಡನ್ನು ಬೇರೆ–ಬೇರೆ ಶಕ್ತಿಗಳೆಂದು ತಿಳಿಯಲಾಗುತ್ತದೆ. ಆದ್ದರಿಂದ ಅಲ್ಲಿ ವಿವಾಹವೂ ಸಹ ಪರಸ್ಪರ ಒಪ್ಪಂದವಾಗಿರುತ್ತದೆ. ನಂತರ ಒಪ್ಪಂದ ಮುರಿದು ವಿಚ್ಛೇದವುಂಟಾಗುತ್ತದೆ. ಅಂದರೆ ಒಂದು ಸತತ ಸಂಘರ್ಷವನ್ನೇ ಅಲ್ಲಿ ಸಹಜಸ್ಥಿತಿ ಎಂದು ತಿಳಿಯಲಾಗುತ್ತದೆ.

ಭಾರತದ ಚಿಂತನೆ ಅದ್ವೈತವಾಗಿದೆ. ಇಲ್ಲಿ 'ಎರಡು' ಅನ್ನು 'ಒಂದು' ಆಗಿ ನೋಡಲಾಗುತ್ತದೆ ಹಾಗೂ ಅದೇ ಸರಿಯಾಗಿದೆ ಹಾಗೂ ಅದೇ ವಾಸ್ತವ. ಒಂದು ನಾಣ್ಯದ ಎರಡು ಮುಖಗಳು ಅಥವಾ ಒಂದು ಚೌಕಾಕಾರದ ಡಬ್ಬಗಳ ಎರಡು ತಳಹದಿಗಳು ಕಾಣಿಸಿದರೂ, ಅಸ್ತಿತ್ವದಲ್ಲಿ ಅಭಿನ್ನ ಹಾಗೂ ಅವಿಭಾಜ್ಯವಾಗಿವೆ. ಎರಡರಲ್ಲಿಯೂ ಯಾವುದೇ ರೀತಿಯ ಸಂಘರ್ಷದ ಕಲ್ಪನೆಯ ಮೌಢ್ಯವಾಗುತ್ತದೆ. ಎರಡರಲ್ಲೂ ಮೇಲ್ನೋಟಕ್ಕೆ ಕಂಡುಬರುವ ಭಿನ್ನತೆಯಿಂದಾಗಿ ಎಂದಾದರೂ ಒಮ್ಮೆ ಭಿನ್ನಾಭಿಪ್ರಾಯವುಂಟಾಗಬಹುದು. ನಮ್ಮಲ್ಲಿ ಪತಿ–ಪತ್ನಿಯನ್ನು ಒಂದೇ ಎನ್ನಲಾಗಿದೆ, ಆದರೂ ಯಾವುದಾದರೂ ಒಂದು ವಿರೋಧವುಂಟಾಗುತ್ತದೆ. ಆದರೆ ಆ ವಿರೋಧವನ್ನು ದೂರಮಾಡುವ ಉಪಾಯ ಇಬ್ಬರನ್ನು ಪರಸ್ಪರ ವಿರೋಧಿಗಳೆಂದು ತಿಳಿದು ಉತ್ತರ ಹುಡುಕುವುದಲ್ಲ. ಶರೀರದಲ್ಲಿ ಹೇಗೆ ಎರಡು ಕಾಲುಗಳಿರುತ್ತವೆ, ಶರೀರವು ದುರ್ಬಲವಾದಲ್ಲಿ ಕೆಲವೊಮ್ಮೆ ಎರಡೂ ಕಾಲುಗಳು ಪರಸ್ಪರ ಹೊಡೆದುಕೊಳ್ಳುತ್ತವೆ. ಆದರೆ ಈ ಹೊಡೆದಾಟವನ್ನು ಎರಡೂ ಕಾಲುಗಳ ನಡುವಿನ ಪರಸ್ಪರ ಹಾಗೂ ಸ್ಥಾಯಿ ವಿರೋಧವೆಂದು ಅರಿತು ಬೇಯುವುದು ಹಾಗೂ ಹೊಡೆದಾಟವನ್ನು ದೂರಗೊಳಿಸಲು ಎರಡು ಕಾಲುಗಳ ನಡುವೆ ಒಂದು ಮರದ ತುಂಡನ್ನು ಕಟ್ಟುವ ಯತ್ನ ಬುದ್ಧಿವಂತರ ಲಕ್ಷಣವೆನಿಸಿಕೊಳ್ಳುವುದೇ? ಹೊಡೆದಾಟ ವಿಕೃತಿಯ ಲಕ್ಷಣ, ಅವ್ಯವಸ್ಥೆಯ ಲಕ್ಷಣವೆಂದು ಮೊದಲು ಯೋಚಿಸಬೇಕು. ವಿಕಾರ ಉತ್ಪನ್ನವಾದುದರಿಂದ ಅವ್ಯವಸ್ಥೆಯುಂಟಾಗಿದೆ. ಬುದ್ಧಿ ನೆಟ್ಟಗೆ ಸಮತೋಲನದಲ್ಲಿ, ನಿಯಂತ್ರಣದಲ್ಲಿ ಇರುವುದಿಲ್ಲ. ಈ ಸ್ಥಿತಿಯಲ್ಲಿ ಈ ವಿರೋಧ ಸ್ಥಾಯಿ ಎಂದು ತಿಳಿದುಕೊಳ್ಳುವುದು ಸರಿಯೇ? ಸಂಘರ್ಷ ಸಹಜವಾದದ್ದು, ಇದಕ್ಕಾಗಿ ಸಂಘರ್ಷವನ್ನು ಸ್ಥಾಯಿ ಎಂದು ತಿಳಿದು ನಿಯಮ ಹಾಗೂ ವ್ಯವಸ್ಥೆಗಳನ್ನು ನಿಲ್ಲಿಸಬಹುದೆ? ಎರಡನ್ನು ಬೇರೆಯಾಗಿಡಬಹುದೇ? ಆಗ ಯಾವುದಾದರೂ ಸ್ಥಾಯಿ ಉತ್ತರವನ್ನು ಹುಡುಕಬಹುದೇ? ಎರಡೂ ಸದಾ ಅಭಿನ್ನವಾಗಿದ್ದರೂ ಪರಸ್ಪರ ಒಬ್ಬರನ್ನೊಬ್ಬರು ಸಂದೇಹದ ದೃಷ್ಟಿಯಿಂದ ನೋಡುವುದರಿಂದ ಆನಂದವನ್ನು ಸೃಷ್ಟಿಮಾಡಬಲ್ಲರೇ? ಸುಖ ಸಿಗುವುದೇ? ಆದುದರಿಂದ ಭಾರತವು ಈ ಪ್ರಕಾರದ ರೀತಿಯ ದ್ವೈತದ ವಿಚಾರ ಮಾಡಿಲ್ಲ. ನಾವು ಸಮಷ್ಟಿಯನ್ನು ಒಂದು ಜೀವಂತ ಘಟಕ ಭಾವಿಸುವೆಂದು ತಿಳಿಯುತ್ತೇವೆ. ವ್ಯಷ್ಟಿ ಹಾಗೂ ಸಮಷ್ಟಿಯನ್ನು ಅಭಿನ್ನವೆಂದು ತಿಳಿದು ನಡೆದಿದ್ದೇವೆ. ನಾವು ಇದರಲ್ಲಿಯ ಹೊಡೆದಾಟವನ್ನು ಒಪ್ಪುವುದಿಲ್ಲ. ವ್ಯಕ್ತಿ ಸಮಾಜದ ವಿರುದ್ಧ ಕಾರ್ಯ ನಿರ್ವಹಿಸಿದಾಗ, ಸಮಾಜದ ಹಿತದೃಷ್ಟಿಯನ್ನು ಕುರಿತು ಚಿಂತಿಸದಿದ್ದಾಗ, ವ್ಯಕ್ತಿ ತನ್ನ ನೆರೆಯವನನ್ನು ಸದಾ ವೈರಿಯೆಂದು ತಿಳಿದಾಗ, ಪ್ರತಿಯೊಬ್ಬ ವ್ಯಕ್ತಿ ತನ್ನ ಸುಖವನ್ನು ಇತರರೊಡನೆ ಪ್ರತಿಸ್ಪರ್ಧೆಯಾಗಿ ತಿಳಿದಾಗ ಕಾರ್ಯಸಾಗುವುದೆ.?



ರಸ್ತೆಯ ಮೇಲೆ ಚಲಿಸುವ ಪ್ರತಿಯೊಂದು ಮೋಟಾರು ಗಾಡಿ ನನ್ನನ್ನು ಹೊಡೆದೇಬಿಡುವುದು, ಮನೆಗೆ ಬಂದ ಪ್ರತಿಯೊಬ್ಬನೂ ನನ್ನನ್ನು ಲೂಟಿಮಾಡಲೆಂದೇ ಬರುವನು, ಮಾರುಕಟ್ಟೆಯ ಪ್ರತಿ ಬದಿಯಲ್ಲಿ ಇರುವವರೆಲ್ಲಾ ಜೇಬುಗಳ್ಳರೇ – ಈ ರೀತಿಯಾದಂತಹ ಕಲ್ಪನೆಯಿಂದ ಮಾನವ ಸಮುದಾಯದಲ್ಲಿ ಹೇಗೆ ಶಾಂತಿಯ ನಿರ್ಮಾಣವಾಗಲು ಸಾಧ್ಯ? ವ್ಯಕ್ತಿ ಹೆಚ್ಚು ಸಂಪನ್ನ, ಬಲಶಾಲಿಯಾಗಿದ್ದಲ್ಲಿ ಅವನು ಸಮಾಜದೊಡನೆ ಘರ್ಷಣೆ ಮಾಡುವನು ಹಾಗೂ ಎಲ್ಲಾ ಸೂತ್ರ ಸಮಾಜದ ಅಧೀನಕ್ಕೆ ಒಳಗಾದಾಗ ವ್ಯಕ್ತಿ ಸ್ವಾತಂತ್ರ್ಯಗಳ ಅಪಹರಣವಾಗುತ್ತದೆ. ಹೀಗೆ ತಿಳಿದು ಮುಂದೆ ಸಾಗುವುದು ಹಾಗೂ ಈ ಎರಡು ಸ್ಥಿತಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಲು ಬಾಧ್ಯರಾಗುವುದು ಮಾನವನ ಉದಾತ್ತ ಚರಿತ್ರೆಯ ಪೀಠಿಕೆಯಾಗಲು ಸಾಧ್ಯವೇ? ಎರಡರ ನಡುವೆ ಸಿಲುಕಿ ಎರಡನ್ನು ಕಳೆದುಕೊಳ್ಳುತ್ತೇವೆಯೆ? ಆದುದರಿಂದ ಇಂದು ವ್ಯಕ್ತಿ ಸಂಪನ್ನತೆಯಿಂದ ಮುಂದೆ ಹೋಗುತ್ತಾರೆಯೋ ಅವರು ಸಮಾಜಕ್ಕೆ ಆದ್ಯತೆ ನೀಡುತ್ತಾರೆ ಹಾಗೂ ಸಮಾಜವು ಸರ್ವಶಕ್ತಿಸಂಪನ್ನವಾಗಿರುವುದನ್ನು ಕಂಡು ಯಾರು ಮರುಗುತ್ತಾರೆಯೋ ಅವರು ವ್ಯಕ್ತಿಯನ್ನು ಅಸಹಾಯಕನನ್ನಾಗಿಸುವ ಮಾತನ್ನು ಆಡತೊಡಗುತ್ತಾರೆ. ಆದರೆ ಈ ದ್ವೈತದಿಂದ ಒಂದು ಮಾರ್ಗವನ್ನು ಹುಡುಕುವುದು ಅಸಂಭವವಾಗಿದೆ. ಭಾರತದ ಚಿಂತನೆಯಲ್ಲಿ ವ್ಯಕ್ತಿ ಹಾಗೂ ಸಮಾಜದಲ್ಲಿ ವಿರೋಧವಿದೆ ಎಂದು ತಿಳಿಯುವುದೇ ತಪ್ಪು ಎಂದು ಸಾರಿಹೇಳಲಾಗಿದೆ. ವಿಕೃತಿಗಳು, ಅವ್ಯವಸ್ಥೆಗಳ ವಿಷಯವನ್ನು ಬಿಡಬೇಕು. ಅವುಗಳನ್ನು ದೂರಮಾಡಲು ಉಪಾಯ ಮಾಡುವುದು ಸಹ ಅತ್ಯಗತ್ಯವಾಗುತ್ತದೆ. ಆದರೆ ವ್ಯಕ್ತಿ ಹಾಗೂ ಸಮಾಜ ಅಭಿನ್ನ ಹಾಗೂ ಅವಿಭಾಜ್ಯವೆಂಬುದು ಮೂಲ ಸತ್ಯವಾಗಿದೆ. ವ್ಯಕ್ತಿಯು ತನ್ನನ್ನು ಕುರಿತು ಚಿಂತಿಸುತ್ತಾ ಸಮಾಜವನ್ನು ಕುರಿತು ಸಹ ಚಿಂತಿಸುವನೋ ಆ ಸಮಾಜವು ಸುಸಂಸ್ಕೃತ ಅವಸ್ಥೆಯನ್ನು ಗಳಿಸುತ್ತದೆ. ಎರಡರಲ್ಲಿಯೂ ಸಾಮಾನ್ಯ ಸ್ಥಿತಿಯಿದೆ. ಪೂರಕತೆಯಿದೆ. ಸಮಾಜವನ್ನು ಹಾಳುಮಾಡಿ ಒಳಿತನ್ನು ಕುರಿತು ಯಾರು ವಿಚಾರಮಾಡುವರೋ ಅವರು ತಪ್ಪಾಗಿ ವಿಚಾರ ಮಾಡುತ್ತಿದ್ದಾರೆ. ಇದು ವಿಕೃತ ಅವಸ್ಥೆ. ಇದರಲ್ಲಿ ಅವನಿಗೂ ಸಹ ಒಳಿತಾಗುವುದಿಲ್ಲ ಏಕೆಂದರೆ ಸಮಾಜ ಯಾವ ಸ್ಥಿತಿಯನ್ನು ತಲುಪುವುದೋ ಅದನ್ನು ವ್ಯಕ್ತಿಯೂ ಅನುಭವಿಸುತ್ತಾನೆ. 'ಹಿತ ಅನಹಿತ ಪಶು ಪಕ್ಷಿಹಿ ಜಾನಾ.' ಆದರೆ ಇವನು ಮನುಷ್ಯನಾಗಿಯೂ ತನ್ನ ವಾಸ್ತವಿಕ ಹಿತವನ್ನು ತಿಳಿಯಲಿಲ್ಲ ಆದುದರಿಂದ ಪಶುವಿಗಿಂತ ಕಡೆಯಾಗುತ್ತಾನೆ. ವಿಕೃತನಾಗಿದ್ದಾನೆ. ಇದನ್ನು ಸರಿಪಡಿಸಬೇಕು. ತಿಳಿಯಪಡಿಸುವುದರಿಂದ ಅವನು ಬದಲಾಯಿಸದಿದ್ದಲ್ಲಿ ಜನಮತದಿಂದ ಶಿಕ್ಷೆಗೊಳಪಡಿಸಬೇಕು. ಇದು ಸಾಮಾನ್ಯ ನಿಯಮವಾಗಿರದೇ ಒಂದು ಅಪವಾದವಾಗಿದೆ.

ಸಾಮಾನ್ಯ ಸ್ಥಿತಿಯೆಂದರೆ ನಾವು ನಮ್ಮನ್ನು ಕುರಿತು ಯೋಚಿಸುತ್ತಾ ಸಮಾಜದ ಬಗ್ಗೆಯೂ ಚಿಂತಿಸಬೇಕು. ನಮ್ಮ ಹಿತ ಹಾಗೂ ಸಮಾಜದ ಹಿತದೃಷ್ಟಿಯಲ್ಲಿ ವಿರೋಧವಿರದು. ಸಂಘರ್ಷವಿರದು. ಆದುದರಿಂದ ಯಾರಾದರು ನಮ್ಮನ್ನು ತಾವು ವ್ಯಕ್ತಿವಾದಿಯೋ ಅಥವಾ ಸಮಾಜವಾದಿಯೋ ಎಂದು ಕೇಳತೊಡಗಿದಾಗ ನಾವು ವ್ಯಕ್ತಿವಾದಿಗಳು ಹಾಗೂ ಸಮಾಜವಾದಿಗಳು ಆಗಿದ್ದೇವೆ ಎಂದು ಹೇಳಬೇಕಾಗಿರುತ್ತದೆ. ಭಾರತೀಯ ಚಿಂತನೆಯ ಪ್ರಕಾರ ನಾವು ವ್ಯಕ್ತಿಯನ್ನು ಅಲ್ಲಗಳೆಯಲಾಗದು ಜೊತೆಗೆ ಸಮಾಜದ ಹಿತವನ್ನು ಕುರಿತು ಸತತವಾಗಿ ಚಿಂತಿಸಬೇಕು. ಸಮಾಜದ ಹಿತವನ್ನು ಚಿಂತಿಸುವುದರಿಂದ ನಾವು ಸಮಾಜವಾದಿಗಳಾಗುತ್ತೇವೆ ಹಾಗೂ ವ್ಯಕ್ತಿಯನ್ನು ಉಪೇಕ್ಷೆಮಾಡುವುದಿಲ್ಲವಾದ್ದರಿಂದ ವ್ಯಕ್ತಿವಾದಿಗಳು ಸಹ ಆಗಿದ್ದೇವೆ. ವ್ಯಕ್ತಿಯನ್ನು ಸರ್ವಶಕ್ತಿಶಾಲಿಯೆಂದು ತಿಳಿಯದ ಕಾರಣ ನಾವು ವ್ಯಕ್ತಿವಾದಿಗಳಲ್ಲ. ವ್ಯಕ್ತಿಯ ಸಮಸ್ತ ಸ್ವಾತಂತ್ರ್ಯಗಳು ಹಾಗೂ ವೈವಿಧ್ಯಗಳನ್ನು ಅಪಹರಿಸಿ ಮನುಷ್ಯನನ್ನು ಯಾವುದೇ ಬಿಗಿಸರಪಳಿಯಲ್ಲಿ ಬಿಗಿಯಾಗಿ ಹಿಡಿದು ಯಂತ್ರದ ಭಾಗವನ್ನಾಗಿ ಬಳಸುವುದು ಎಂದು ಸಮಾಜವನ್ನು ಕುರಿತು ವಿಚಾರಮಾಡುವುದಿಲ್ಲವಾದ್ದರಿಂದ ನಾವು ಸಮಾಜವಾದಿಗಳೂ ಅಲ್ಲ. ನಮ್ಮ ವ್ಯಷ್ಟಿಯನ್ನು ಹೊರತುಪಡಿಸಿ ಯಾವುದೇ ಸಮಷ್ಟಿಯನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ ಹಾಗೂ ಸಮಷ್ಟಿಯಿಲ್ಲದೇ ವ್ಯಕ್ತಿಯ ಮೌಲ್ಯವೇನಾಗುತ್ತದೆ? ಆದುದರಿಂದಲೇ ಎರಡರಲ್ಲೂ ಸಮನ್ವಯ ಬಯಸುತ್ತೇವೆ. ವ್ಯಕ್ತಿಯ ವಿಕಾಸ ಹಾಗೂ ಸಮಾಜದ ಪರಿಪೂರ್ಣತೆಯ ಸಮನ್ವಯ ಭಾವನೆಯೇ ವಿಶ್ವಕ್ಕೆ ಭಾರತೀಯ ಚಿಂತನೆಯ ಕೊಡುಗೆಯಾಗಿದೆ. ವ್ಯಕ್ತಿ ಜನ್ಮತಾಳುತ್ತಾನೆ. ಸಮಾಜದಿಂದ ಅವನು ಸುಶಿಕ್ಷಿತ ಹಾಗೂ ಸಂಸ್ಕಾರವಂತನಾಗುತ್ತಾನೆ. ನಿಧಾನವಾಗಿ ವ್ಯಕ್ತಿ ಗುಣವಂತನಾಗುತ್ತಾನೆ. ವ್ಯಕ್ತಿಗೆ ತನ್ನಲ್ಲಿ ಹುದುಗಿರುವ ಶ್ರೇಷ್ಠಗುಣಗಳ ವಿಕಾಸಕ್ಕೆ ಅವಕಾಶ ಪಡೆಯುತ್ತಾನೆ. ಸಮಾಜವು ಅವನನ್ನು ನೋಡಿಕೊಳ್ಳುತ್ತದೆ. ಧೈರ್ಯವಂತ ಪರಾಕ್ರಮಿ, ಶಕ್ತಿವಂತ ಹಾಗೂ ಧನವಂತನನ್ನಾಗಿಸಲು ಸಕ್ಷಮರಾಗುತ್ತಾರೆ ಹಾಗೂ ಅವನು ಸ್ವತಃ ಕೆಲಸ ಮಾಡುತ್ತಾನೆ. ಆದರೆ ಹೇಗೆ ಪಕ್ಷವು ತನ್ನ ಫಲವನ್ನು ತಾನೇ ಗ್ರಹಿಸುವುದಿಲ್ಲವೋ ಹಾಗೆಯೇ ವ್ಯಕ್ತಿಯೂ ಸಹ ತನ್ನ ಸತ್ಕರ್ಮಗಳನ್ನು ಸಮಾಜಕ್ಕಾಗಿ ಮುಡಿಪಾಗಿಡಬೇಕು. ಅವನು ತನ್ನ ಹಕ್ಕುಗಳನ್ನು ಕುರಿತು ವಿಚಾರ ಮಾಡುವುದಿಲ್ಲ. ಎಲ್ಲರನ್ನು ಕುರಿತು ವಿಚಾರ ಮಾಡುತ್ತಾನೆ. ರೈತನಾಗಿದ್ದಲ್ಲಿ ಅವನು ಹೊಲಗದ್ದೆಗಳಲ್ಲಿ ತನ್ನ ಆವಶ್ಯಕತೆಯ ಅನ್ನ ಬೆಳೆಸಲಾರನು. ಪೂರೈಕೆಗಾಗಿ ಅವನು ಸಮಾಜದ ಆವಶ್ಯಕತೆಯನ್ನು ಅರಿತುಕೊಂಡು ಅನ್ನ ಉತ್ಪತ್ತಿ ಮಾಡುವನು. ಹೇಗೆ ತಾಯಿ ಮನೆಯಲ್ಲಿ ಅಡುಗೆ ಮಾಡುವಾಗ ತನ್ನನ್ನು ಕುರಿತು ವಿಚಾರಮಾಡಲಾರಳು. ಮನೆಯ ಎಲ್ಲಾ ಸದಸ್ಯರ ಆವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಅಡುಗೆ ತಯಾರಿಸುತ್ತಾಳೆ. ಇದೇ ರೀತಿ



ವ್ಯಕ್ತಿಯ ಕಾಯಕವು ಸಮಾಜದ ಆವಶ್ಯಕತೆಗಳ ಪೂರೈಕೆಗಾಗಿಯೇ ನಡೆಯುತ್ತವೆ. ವ್ಯಕ್ತಿಯು ತನ್ನ ಗುಣ ಹಾಗೂ ಶಕ್ತಿಯ ಉಪಯೋಗ ಸಮಾಜಕ್ಕಾಗಿಯೇ ಮಾಡುತ್ತಾನೆ. ವ್ಯಕ್ತಿಯು ಎಂದು ಸಮಾಜಕ್ಕಾಗಿ ಅಧಿಕಾಧಿಕ ಸಮರ್ಪಿತನಾಗುತ್ತಾನೆಯೋ ಅಂದು ಸಮಾಜವೂ ವ್ಯಕ್ತಿಯ ಯೋಗಕ್ಷೇಮವನ್ನು ಕುರಿತು ವಿಚಾರ ಮಾಡುತ್ತದೆ. ಹಾಗೆ ನೋಡಿದಲ್ಲಿ ವ್ಯಕ್ತಿ ತನ್ನ ಗುಣಗಳು ಹಾಗೂ ಶಕ್ತಿಯಿಂದ ಸಮಾಜದ ಒಂದೆರಡು ಆವಶ್ಯಕತೆಗಳನ್ನು ಮಾತ್ರ ಪೂರೈಸುತ್ತಾನೆ. ಆದರೆ ಸಮಾಜವು ಅದಕ್ಕೆ ಬದಲಾಗಿ ಅವನಿಗೆ ಹಲವಾರು ವಸ್ತುಗಳನ್ನು ನೀಡುತ್ತದೆ. ಶಿಕ್ಷಣ, ವಸ್ತ್ರ, ಮನೆ, ಸುರಕ್ಷೆಯಲ್ಲದೆ ಸುಖ ನೀಡುವ ಅನೇಕಾನೇಕ ಅನುಭವಗಳನ್ನು ಹಾಗೂ ದುಃಖದಲ್ಲಿ ಧೈರ್ಯಭಾವನೆ ಮುಂತಾದ ಹಲವಾರು ಮಾತುಗಳು ಸಮಾಜದಿಂದ ವ್ಯಕ್ತಿಗೆ ಲಭಿಸುತ್ತಲಿರುತ್ತದೆ. ಈ ರೀತಿ ವ್ಯಕ್ತಿ ಹಾಗೂ ಸಮಾಜದ ನಡುವೆ ಅವಿಭಾಜ್ಯ ಸಂಬಂಧದ ಆದಾನ–ಪ್ರದಾನವಾಗುತ್ತದೆ. ಯಾವ ವ್ಯಕ್ತಿ ಸಂಪಾದನೆ ಮಾಡುವುದಿಲ್ಲವೋ, ಹಾಗೂ ದುರ್ಬಲರಾಗಿರುತ್ತಾರೆಯೋ ಅವರನ್ನು ಕುರಿತ ಸಮಾಜ ಚಿಂತಿಸುತ್ತದೆ. ಈ ಆದಾನ–ಪ್ರದಾನದ ಮೂಲ್ಯಾಂಕನವನ್ನು ಲಾಭ–ನಷ್ಟವನ್ನು ಸೂಚಿಸುವ ಮೌಲ್ಯ ಪದ್ಧತಿಯಿಂದ ಮಾಡುವುದು ಕಠಿಣವಾಗಿದೆ. ಉದಾಹರಣೆಗೆ ಸಮಾಜವು ರೋಗಿಗಳ ಚಿಕಿತ್ಸೆಗಾಗಿ ವ್ಯವಸ್ಥೆಮಾಡಿದೆ. ಇದರಿಂದ ಸಾಯುವವನ ಜೀವ ಉಳಿಯುತ್ತದೆ. ಡಾಕ್ಟರ್ ಅಥವಾ ವೈದ್ಯರ ಈ ಪರಿಶ್ರಮದ ಬೆಲೆ ಏನಾಗಬಹುದು ? ಶಿಕ್ಷಣ–ಕೇಂದ್ರದಿಂದ ವ್ಯಕ್ತಿಯ ಅಜ್ಞಾನ ದೂರವಾಗುತ್ತದೆ. ಅಧ್ಯಾಪಕನ ಈ ಕಾರ್ಯದ ಪ್ರತಿಫಲವನ್ನು ಹೇಗೆ ಸಲ್ಲಿಸಬಹುದಾಗಿದೆ? ಇದರ ಬೆಲೆ ಕಟ್ಟುವುದು ಅಸಂಭವವಾಗಿದೆ. ಆದುದರಿಂದ ನಮ್ಮಲ್ಲಿ ಈ ಎಲ್ಲಾ ಕಾರ್ಯಗಳು ಮೊದಲಿಗೆ ಸೇವಾಕಾರ್ಯಗಳಾಗಿ ಸಲ್ಲಿಸಲ್ಪಡುತ್ತಿದ್ದವು. ದುಡ್ಡು–ಕಾಸಿನಲ್ಲಿ ಇದರ ಬೆಲೆ ಕಟ್ಟಲು ಆಗುವುದಿಲ್ಲ. ಪ್ರತಿಯೊಬ್ಬನು ತನ್ನ ಕರ್ತವ್ಯ ನಿರ್ವಹಿಸುವುದರಲ್ಲಿ ನಂಬಿಕೆಯಿಡುತ್ತಾನೆ ಏಕೆಂದರೆ ಸೇವೆಗೆ ಬೆಲೆಕಟ್ಟಲಾಗದು. ಸೇವೆ ಸಲ್ಲಿಸುವುದು ನಮ್ಮ ಧರ್ಮ. ಉಳಿದ ಎಲ್ಲಾ ಚಿಂತೆ ಸಮಷ್ಟಿಯ ಮೇಲೆ ಹೇರಬೇಕಾಗುತ್ತದೆ. ಭಗವಾನ್ ಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಹೇಳಿದ್ದಾನೆ – ನೀವು ಮಾಡುವ ಎಲ್ಲಾ ಕರ್ಮಗಳನ್ನು ನನಗೆ ಸಮರ್ಪಿಸಿರಿ. ತಪಸ್ಸು ಮಾಡುವಿರಿ, ಯಜ್ಞಮಾಡುವಿರಿ, ತಿಂದು–ತೇಗುವ ಏನೆಲ್ಲಾ ಕ್ರಿಯೆಗಳನ್ನು ಮಾಡುವಿರೋ ಅದನ್ನು ನನಗೆ ಅರ್ಪಿಸಿ ನಂತರ ನಿನ್ನ ಯೋಗಕ್ಷೇಮದ ಚಿಂತೆ ನಾನು ಮಾಡುವೆನು. ಹೀಗೆ ಸಮಷ್ಟಿಯ ಯೋಗಕ್ಷೇಮವನ್ನು ಕುರಿತು ಚಿಂತಿಸಿ ವ್ಯಕ್ತಿಗೆ ಆವಶ್ಯಕವಾದದ್ದನ್ನೆಲ್ಲಾ ಈಡೇರಿಸುತ್ತದೆ. ವ್ಯಕ್ತಿಗಾಗಿ ಸಮಾಜದಿಂದ ಪ್ರಾಪ್ತವಾದುದರ ಮೇಲೆ ಜೀವನ ನಿರ್ವಹಣೆ ಮಾಡುವುದೇ ಯಜ್ಞಶೇಷವೆನಿಸಿಕೊಳ್ಳುತ್ತದೆ. 'ತ್ಯೇನ ತ್ಯಕ್ತೇನ ಭುಂಜೀಥಾಃ' ಎಂಬುದಕ್ಕೆ ಅನುಗುಣವಾಗಿ ತ್ಯಾಗಪೂರ್ಣ ರೀತಿಯಿಂದ ಉಪಭೋಗಮಾಡುವ ಸಂಗತಿ ಇದೆ. ಯಜ್ಞಶೇಷವೇ

ಅಮೃತವಾಗುತ್ತದೆ. ಇದನ್ನು ಗಳಿಸಿ ಉಪಭೋಗ ಮಾಡುವವನು ಸ್ವಯಂ ಜೀವಂತವಾಗಿರುತ್ತಾನೆ ಹಾಗೂ ಸಮಾಜವನ್ನೂ ಜೀವಂತವಾಗಿಡುತ್ತಾರೆ.

ಈ ರೀತಿ ಭಾರತೀಯ ಚಿಂತನ ಪದ್ಧತಿಯಲ್ಲಿ ವ್ಯಕ್ತಿ ಹಾಗೂ ಸಮಾಜದ ನಡುವೆ ಸಾಮರಸ್ಯವು ಸ್ಥಾಪಿತವಾಗುತ್ತದೆ. ಸಮಾಜದಿಂದ ವ್ಯಕ್ತಿ ಸುಶಿಕ್ಷಿತನಾಗಿ, ಪ್ರಯೋಜಕನಾದಾಗ ಅವನ ಯೋಗಕ್ಷೇಮವನ್ನು ಕುರಿತು ಅದು ಚಿಂತಿಸುತ್ತದೆ. ವ್ಯಕ್ತಿಯು ಸಮಾಜಕ್ಕೆ ಕರ್ಮ ಹಾಗೂ ತ್ಯಾಗವನ್ನು ಉಡುಗೊರೆಯಾಗಿ ಕೊಟ್ಟನು. ವ್ಯಕ್ತಿ ಹಾಗೂ ಸಮಾಜವನ್ನು ಪರಸ್ಪರ ಹೊಂದಿಸಲು ಮಾಡುವ ಕಾರ್ಯವನ್ನು ಪುರುಷಾರ್ಥವೆಂದು ಕರೆಯಲಾಗುತ್ತದೆ. ನಾಲ್ಕು ಪುರುಷಾರ್ಥಗಳಿವೆ–ಅರ್ಥ, ಕಾಮ, ಮೋಕ್ಷ ಹಾಗೂ ಧರ್ಮ. ವ್ಯಕ್ತಿಯ ಶರೀರ, ಭೂಮಿ, ಜನ ಹಾಗೂ ಉಪಭೋಗ ಈ ನಾಲ್ಕು ವಸ್ತುಗಳಿಂದ ನಿರ್ಮಿಸಲ್ಪಟ್ಟ 'ಅರ್ಥ–ಪುರುಷಾರ್ಥ'ವಾಗಿದೆ. ಇದರಿಂದ ನಾವು ಧನವನ್ನು ಉತ್ಪತ್ತಿ ಮಾಡುತ್ತೇವೆ. ಸಂಪತ್ತನ್ನು ಕೂಡಿಡುತ್ತೇವೆ. ಶಾಸನ ಮಾಡುತ್ತೇವೆ. ಹಾಗೆಯೇ ಯೋಗಕ್ಷೇಮ, ಮನಸ್ಸಿನ ಕಾಮನೆಗಳು, ರಾಷ್ಟ್ರದ ಸಂಕಲ್ಪ ಹಾಗೂ ಯಜ್ಞಭಾಗ ಈ ನಾಲ್ಕೂ ಸೇರಿ 'ಕಾಮ–ಪುರುಷಾರ್ಥ'ವಾಗಿದೆ ಮೂರನೆಯ ಪುರುಷಾರ್ಥ 'ಧರ್ಮ'ವಾಗಿದೆ. ಬುದ್ಧಿ, ರಾಷ್ಟ್ರದ ಪರಂಪರೆಗಳು, ಯಜ್ಞಭಾವ ಹಾಗೂ ಜ್ಞಾನ ಅಥವಾ ಶಿಕ್ಷಣ ಈ ನಾಲ್ಕು ಸೇರಿ 'ಧರ್ಮ–ಪುರುಷಾರ್ಥ'ವಾಗಿದೆ. ನಾಲ್ಕನೆಯದಾಗಿ, 'ಮೋಕ್ಷ'ವಿದೆ. ನಿಷ್ಕಾಮ ಕರ್ಮ, ಜ್ಞಾನ, ರಾಷ್ಟ್ರದ ಆದರ್ಶಗಳು ಹಾಗೂ ಆತ್ಮದಿಂದ 'ಮೋಕ್ಷ–ಪುರುಷಾರ್ಥ'ವಾಗಿದೆ. ಜ್ಞಾನ, ಕರ್ಮ, ಭೋಗ ಹಾಗೂ ಯಜ್ಞ ಮತ್ತು ನಾಲ್ಕು ಪುರುಷಾರ್ಥಗಳನ್ನು ಸೇರಿಸಿ ಪರಿಪೂರ್ಣ ಮಾನವನನ್ನು ಕಲ್ಪಿಸಿಕೊಳ್ಳಲಾಗಿದೆ. ಎಲ್ಲದುದರ ಪೂರ್ಣ ಸಮುಚ್ಚಯ ಅಗತ್ಯವಾಗಿ ಆಗಬೇಕು. ಯಾವುದೇ ಒಂದು ಅಂಗವನ್ನು ಕುರಿತು ವಿಚಾರ ಮಾಡುವುದು ತಪ್ಪಾಗಿ ವಿಚಾರ ಮಾಡುವುದು ಎಂದು ಸಾಬೀತಾಯಿತು. ಯಾವುದೇ ಮನುಷ್ಯನು ಕೇವಲ 'ಅರ್ಥ' ಪುರುಷಾರ್ಥವನ್ನು ವಿಚಾರ ಮಾಡಿದ್ದಲ್ಲಿ ಅದು ತಪ್ಪಾಗುತ್ತದೆ. ಅದೇ ರೀತಿ ಯಾರಾದರು ಕೇವಲ ಧರ್ಮವನ್ನು ಕುರಿತು ವಿಚಾರ ಮಾಡಿ ಉಳಿದುದನ್ನು ಉಪೇಕ್ಷಿಸಿದಲ್ಲಿ ಅದು ಸಹ ತಪ್ಪಾಗುತ್ತದೆ. ಭಾರತೀಯ ಚಿಂತನೆಯಲ್ಲಿ ನಾವು ತುಂಡು–ತುಂಡಾಗಿ ಯಾವುದನ್ನೂ ವಿಚಾರ ಮಾಡಲಾಗುವುದಿಲ್ಲ. ಸಮಗ್ರ ಚಿಂತನೆಯ ಆವಶ್ಯಕತೆಯಿದೆ.

ನಾವು ವ್ಯಕ್ತಿ ಹಾಗೂ ಸಮಾಜವನ್ನು ಬೇರೆ–ಬೇರೆ ಭಾಗಗಳಲ್ಲಿ, ಪರಸ್ಪರ ವಿರೋಧದ ಹಿನ್ನೆಲೆಯಲ್ಲಿ ನೋಡಲಾಗುವುದಿಲ್ಲ. ವಿರೋಧವನ್ನಾಧರಿಸಿ ಯಾವ ಸಮಾನತೆಯನ್ನು ಕುರಿತು ಪಾಶ್ಚಾತ್ಯ ಚಿಂತನೆಯು ಹೇಳಿದೆಯೋ ಅದನ್ನು ನಾವು ಸ್ವೀಕರಿಸಲಾಗುವುದಿಲ್ಲ. ವಾಸ್ತವಕ್ಕೆ ಸೃಷ್ಟಿಯಲ್ಲಿ ಯಾವುದೇ ಎರಡು ವಸ್ತುಗಳು ಸಮಾನವಾಗಿಲ್ಲ. ವೈವಿಧ್ಯವೇ ಸೃಷ್ಟಿಯ ಸೌಂದರ್ಯವಾಗಿದೆ. ಆದುದರಿಂದ



ಎಲ್ಲರ ಆವಶ್ಯಕತೆಗಳು ಸಮಾನವಾಗಿರುವುದಿಲ್ಲ. ಆವಶ್ಯಕತೆಗಳ ಭಿನ್ನತೆಯೂ ಅವುಗಳ ಮಟ್ಟವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಆವಶ್ಯಕತೆಗಳ ಅನೇಕ ಮಟ್ಟಗಳಿರುವುದು ಸಹ ಸಾಧಾರಣ ವಿಷಯವಾಗುತ್ತದೆ. ಸಮಾನತೆಯ ವಿಷಯವನ್ನು ಅಳವಡಿಸಿದಾಗ ಪರಸ್ಪರ ಪ್ರತಿಸ್ಪರ್ಧೆ ಹಾಗೂ ಅಸೂಯೆ ಉಂಟಾಗುತ್ತದೆ. ಅಸಂತೋಷ ಹಾಗೂ ಸಂಘರ್ಷವನ್ನು ಅಧಿಕಗೊಳಿಸಲಾಗುತ್ತದೆ. ಆದರೆ ಇದು ಸರ್ವಾಂಗೀಣ ವಿಕಾಸಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ನಾವು ಸಮಾನತೆಯಲ್ಲದೇ ಆತ್ಮೀಯತೆಯನ್ನು ಆಧಾರವನ್ನಾಗಿರಿಸಿ ಯೋಚಿಸಲು ಪ್ರಾರಂಭಿಸಿದೆವು. ಮನೆಯಲ್ಲಿ ಚಿಕ್ಕಮಗು ಹಾಗೂ ಅತ್ಯಧಿಕ ವೃದ್ಧರು, ಇಬ್ಬರು ಸಂಪಾದನೆ ಮಾಡುವುದಿಲ್ಲವಾದ್ದರಿಂದ ಅವರು ಸಮಾನರಾಗಲಾರರು ಆದರೆ ಆತ್ಮೀಯತೆಯಿಂದ ಮುನ್ನಡೆಯುವ ಕುಟುಂಬದಲ್ಲಿ ಕರ್ತವ್ಯಬುದ್ಧಿಯಿಂದ ಎಲ್ಲರಿಗೂ ತಮ್ಮ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಸಾಧ್ಯವಾಗಿರುತ್ತದೆ. ಆದುದರಿಂದ ನಾವು ಯಾವುದೇ ಅಂಗದ ಮೇಲೆ ಗಮನ ಕೇಂದ್ರೀಕರಿಸುವುದರಲ್ಲಿ ನಂಬಿಕೆಯಿಡುತ್ತೇವೆ. ಆದ್ದರಿಂದ ನಮ್ಮ ದೃಷ್ಟಿಯಲ್ಲಿ ವ್ಯಕ್ತಿ ಹಾಗೂ ಸಮಾಜ ಪರಸ್ಪರ ಪೂರಕ, ಸಹಾಯಕ ಹಾಗೂ ಅಭಿನ್ನವಾಗಿದೆ. ಎರಡೂ ಅವಿರೋಧ ಶಕ್ತಿಗಳಾಗಿವೆ.

# ೧೪. ಸಾಮರಸ್ಯಪೂರ್ಣ ಸಮಾಜ ವ್ಯವಸ್ಥೆ

ಹಿಂದಿನ ಅಧ್ಯಾಯದಲ್ಲಿ ವ್ಯಕ್ತಿಯ ಸುಖಕ್ಕೆ ಸಂಬಂಧಿಸಿದ ಎರಡು ವಿಷಯಗಳು ಸ್ಪಷ್ಟವಾಗಿದೆ. ಮೊದಲನೆಯದಾಗಿ ಶಾರೀರಿಕ, ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಎಲ್ಲಾ ರೀತಿಯ ಸುಖಗಳು ವ್ಯಕ್ತಿಗೆ ದೊರಕಿದಲ್ಲಿ ವ್ಯಕ್ತಿ ತನ್ನ ಧಾರಣಾ–ಶಕ್ತಿಯಿಂದ ಪೂರ್ಣರೂಪೇಣ ಸಂತುಷ್ಟಿಯನ್ನು ಅನುಭವಿಸುತ್ತಾ ಪ್ರಗತಿಯನ್ನು ಸಾಧಿಸಬಹುದು. ಎರಡನೆಯದಾಗಿ ವ್ಯಕ್ತಿ ತನ್ನ ಈ ವಿವಿಧ ರೀತಿಯ ವಿಕಾಸಕ್ಕಾಗಿ ಸಮಾಜವನ್ನು ಅವಲಂಬಿಸಿರುತ್ತಾನೆ.

ವ್ಯಕ್ತಿಯ ವಿಕಾಸ ಹಾಗೂ ಸಮಾಜವನ್ನು ಎಷ್ಟರ ಮಟ್ಟಿಗೆ ಅವನು ಅವಲಂಬಿಸಿದ್ದಾನೆ ಎಂಬುದನ್ನು ವಿಚಾರ ಮಾಡುವ ಜನರು ಸಾಮಾನ್ಯರಾಗಿ ಎರಡು ಬೇರೆ–ಬೇರೆ ರೀತಿಯ ಚಿಂತನೆಯನ್ನು ಆಗ್ರಹಿಸುತ್ತಾ ನಮಗೆ ಕಾಣಿಸುತ್ತಾರೆ. ಕೆಲವರು ವ್ಯಕ್ತಿ ವಿಕಾಸವನ್ನು ಅತ್ಯಂತ ಪ್ರಮುಖವೆಂದು ತಿಳಿಯುತ್ತಾರೆ. “ವ್ಯಕ್ತಿ” ಮುಖ್ಯವಾದವನು ಎಂಬುದು ಅವರ ಹೇಳಿಕೆ. ಇವನಿಗಾಗಿಯೇ ಸಮಾಜವಿದೆ. ವ್ಯಕ್ತಿಯ ಪೋಷಣೆಗಾಗಿಯೇ ಸಮಾಜವೇರ್ಪಟ್ಟಿದೆ. ಎರಡನೆಯದಾಗಿ ಸಮಾಜಕ್ಕೆ ಅತಿ ಹೆಚ್ಚು ಮಹತ್ವ ಕೊಡುವ ಜನರು ಇರುತ್ತಾರೆ. ಇವರ ಹೇಳಿಕೆಯ ಪ್ರಕಾರ ವ್ಯಕ್ತಿಯ ಎಲ್ಲಾ ವ್ಯವಹಾರಗಳು ಸಮಾಜವನ್ನು ಅವಲಂಬಿಸಿರುವುದರಿಂದ ಸಮಾಜವನ್ನು ಶಕ್ತಿಶಾಲಿಯನ್ನಾಗಿಸುವುದು ಸರಿಯಾಗುತ್ತದೆ. ವ್ಯಕ್ತಿಯನ್ನು ಕಡೆಗಣಿಸಿ ಏನು ತೊಂದರೆ ಇಲ್ಲ. ಇವರ ಪ್ರಕಾರ ಪ್ರತಿಯೊಂದು ಪ್ರಶ್ನೆಯನ್ನು ಸಮಾಜವನ್ನು ಕುರಿತು ವಿಚಾರ ಮಾಡಿ ನಡೆಯಬೇಕೆ ಹೊರತು ವ್ಯಕ್ತಿಯನ್ನಲ್ಲ. ಈ ಎರಡು ದೃಷ್ಟಿಕೋನಗಳಿಂದ ಪಾಶ್ಚಾತ್ಯ ರಾಷ್ಟ್ರಗಳು ತಮ್ಮನ್ನು ಎರಡು ವಿಚಾರಧಾರೆಯಲ್ಲಿ ವಿಂಗಡಿಸಿಕೊಂಡಿದ್ದಾರೆ. ಆದರೆ ಈ ಎರಡು ವಿಚಾರಗಳು ಪ್ರತ್ಯೇಕವಾಗಿದ್ದು ಪೂರ್ಣ ಸತ್ಯವಲ್ಲ. ಮೊದಲ ಶ್ರೇಣಿಯ ವಿಚಾರಕನು ವ್ಯಕ್ತಿ ವಿಕಾಸದ ಸ್ವಾತಂತ್ರ್ಯದ ಹೆಸರಿನಲ್ಲಿ ಸಮಾಜದ ಅವಹೇಳನೆ ಬಿಡುತ್ತಾರೆ ಮಾಡಿ. ಆಗ ಪರ ಸಮಾಜವನ್ನು ಸರ್ವಶಕ್ತಿಸಂಪನ್ನನಾಗಿ ಮಾಡಲು ವ್ಯಕ್ತಿಯ ಬಹುಕಲಾತ್ಮಕ ವೈವಿಧ್ಯಗಳಿಂದ ಅವರು ಕೈ ತೊಳೆದುಕೊಳ್ಳುತ್ತಾರೆ. ವ್ಯಕ್ತಿ ಹಾಗೂ ಸಮಾಜದ ವರ್ಚಸ್ಸಿನ ಈ ವಿವಾದ ವಾಸ್ತವಕ್ಕೆ ಒಂದೇ ರೀತಿಯ ಚಿಂತನ–ಪದ್ಧತಿಯ ಎರಡು ಕೊನೆ ತೀರಗಳಾಗಿವೆ. ಈ ಎರಡೂ ತೀರಗಳ ಎಳೆದಾಟದಲ್ಲಿ ಕೇವಲ ಒತ್ತಡವುಂಟಾಗುತ್ತದೆ.



ಒಂದರಲ್ಲಿ ಸಮಾಜದ ಬೆಲೆಯಲ್ಲಿ ಹಿನ್ನೆಲೆಯಲ್ಲಿ ಆ ವ್ಯಕ್ತಿಯನ್ನು ಒತ್ತಾಯಿಸಲಾಗುತ್ತದೆ ಮತ್ತು ಈ ಹೆಸರಿನಲ್ಲಿ ಶಕ್ತಿಯನ್ನು ಗಳಿಸಲಾಗುತ್ತದೆ.

ಈ ಎರಡೂ ಬಿಡಿಬಿಡಿಯಾದ ವಿಚಾರಗಳು ಮನುಷ್ಯನಿಗೆ ನಿಜವಾದ ಸುಖ ನೀಡುವುದರಲ್ಲಿ ಅಸಮರ್ಥವಾಗಿವೆ. ಆದ್ದರಿಂದಲೇ ಇವುಗಳ ನಡುವೆ ಯಾವುದಾದರೂ ಮಧ್ಯಮ ಮಾರ್ಗವನ್ನು ಹುಡುಕಬೇಕಾಗಿದೆ. ಅದು ಈ ಎರಡರ ನಡುವೆ ಗುಣಾತ್ಮಕ ಸಮನ್ವಯವನ್ನು ಸ್ಥಾಪಿಸಬಹುದಾಗಿದೆ. ಇಂದು ವ್ಯಕ್ತಿ ತನ್ನ ವೈಯಕ್ತಿಕ ವಿಕಾಸದೊಡನೆ ಸಮಾಜದ ಆವಶ್ಯಕತೆಗಳನ್ನು ಪೂರೈಸಬೇಕಾಗಿದೆ ಹಾಗೂ ಪರಿಪೂರ್ಣ ಸಮಾಜವು ವ್ಯಕ್ತಿ–ವ್ಯಕ್ತಿಗಳ ನಡುವೆ ಸಾಮರಸ್ಯ ನಿರ್ಮಿಸುತ್ತಾ ಉನ್ನತ, ಪ್ರಗತಿಶೀಲ ಹಾಗೂ ದೃಢವಾಗಬೇಕಾಗಿದೆ. ಇಂತಹ ಸಮನ್ವಿತ ವಿಚಾರವು ಇಂದು ಬೇಕಾಗಿದೆ.

ಈ ದೃಷ್ಟಿಯಿಂದ ಭಾರತೀಯ ವ್ಯಕ್ತಿ ಹಾಗೂ ಸಮಾಜ–ರಚನೆಯ ಉದಾಹರಣೆ ವಿಶ್ವದಲ್ಲಿ ಅದ್ವಿತೀಯವಾಗಿದೆ. ಭಾರತೀಯ ರಚನೆಯಲ್ಲಿ ವ್ಯಕ್ತಿ ಹಾಗೂ ಸಮಾಜದ ಸಂಬಂಧಗಳನ್ನು ಪರಸ್ಪರ ಸಂಘರ್ಷಗಳ ಆಧಾರದ ಮೇಲೆ ನೋಡಲಿಲ್ಲ. ಇದರಲ್ಲಿ ಅಭಿನ್ನತೆಯನ್ನು ಕಾಣಲಾಗಿದೆ. ಹೀಗೆ ಪರಸ್ಪರ ಆವಶ್ಯಕತೆಗಳ ಪೂರ್ತಿಗಾಗಿ ಅಗಣಿತ ಕ್ಷೇತ್ರಗಳು ತೆರೆದುಕೊಂಡವು. ಅನೇಕ ಸಂಸ್ಥೆಗಳು ಜನ್ಮತಾಳಿದವು. ಸಮಾಜದ ಆವಶ್ಯಕತೆಗಳ ಪೂರ್ತಿಗಾಗಿ ವ್ಯಕ್ತಿಯು ಯೋಗ್ಯ ಸಹಕಾರ ನೀಡಲಿ ಹಾಗೂ ಜೊತೆಗೆ ತಾನು ಪ್ರಗತಿಯನ್ನು ಹೊಂದಿ ಸಮಾಜ ಸೇವೆಗಾಗಿ ಅಧಿಕಾಧಿಕ ಸಮರ್ಥರಾಗಲಿ. ಈ ದೃಷ್ಟಿಯಿಂದ ಭಾರತದಲ್ಲಿ ವರ್ಣ–ವ್ಯವಸ್ಥೆಯ ಸ್ಥಾಪನೆಯುಂಟಾಯಿತು. ಸಮಾಜದ ಆವಶ್ಯಕತೆಗಳನ್ನು ಕುರಿತು ವಿಚಾರ ಮಾಡಲಾಯಿತು. ಸಮಾಜಕ್ಕೆ ಅನೇಕ ರೀತಿಯ ಆವಶ್ಯಕತೆಗಳಿರುತ್ತವೆ. ಬೌದ್ಧಿಕ ಆವಶ್ಯಕತೆಗಳಿವೆ. ಆಂತರಿಕ ಹಾಗೂ ಬಾಹ್ಯ ಎರಡೂ ರೀತಿಯ ರಕ್ಷಣೆಯ ಪ್ರಶ್ನೆಯಿದೆ. ಹೊಟ್ಟೆಪಾಡಿನ ಪ್ರಶ್ನೆಯಿದೆ. ವಸ್ತುಗಳ ಉತ್ಪಾದನೆ, ವಿತರಣೆ, ಸಂರಕ್ಷಣೆಯ ಸಂಗತಿಯಿದೆ. ಇಂತಹ ಅನೇಕ ಸಾಮಾಜಿಕ ಆವಶ್ಯಕತೆಗಳ ನಡುವೆ ಅತಿ ದೊಡ್ಡ ಆವಶ್ಯಕತೆಯೆಂದರೆ ಜನರಿಗೆ ಯೋಚಿಸಿ ವಿಚಾರಮಾಡಲು ಯಥೇಷ್ಟ ಅವಕಾಶ ಲಭಿಸಲಿ, ಅದರಿಂದ ಚಿಂತನೆಯ ಗುಣಮಟ್ಟ ಏರಲಿ. ಹೀಗೆ ಸಮಾಜದಲ್ಲಿ ಜ್ಞಾನ–ವೃದ್ಧಿ, ಸಂರಕ್ಷಣೆ, ಪಾಲನೆ ಪೋಷಣೆ ಹಾಗೂ ಚಿಂತನೆಗೆ ಅವಕಾಶ ಪ್ರಾಪ್ತಿಯ ದೃಷ್ಟಿಯಿಂದ ಜನರಿಗೆ ಕೆಲವು ಕಾರ್ಯಗಳನ್ನು ಒಪ್ಪಿಸಲಾಯಿತು. ಭಿನ್ನ–ಭಿನ್ನ ರೀತಿಯ ವರ್ಗಗಳ ರಚನೆಯಾಯಿತು, ಎಲ್ಲರಿಗೂ ಬೇರೆ–ಬೇರೆ ರೀತಿಯ ಜವಾಬ್ದಾರಿಗಳನ್ನು ವಹಿಸಲಾಯಿತು. ಹೇಗೆ ಎಂಟು–ಹತ್ತು ದಿನಗಳ ಯಾವುದೇ ಶೈಕ್ಷಣಿಕ ವರ್ಗದಲ್ಲಿ ಉತ್ತಮ ಶಿಕ್ಷಣದ ದೃಷ್ಟಿಯಿಂದ ವಿಭಿನ್ನ ವಿಭಾಗಗಳನ್ನು ಸ್ಥಾಪಿಸಲಾಗುತ್ತದೆ. ಆ ವಿಭಾಗಗಳಲ್ಲಿ ಜವಾಬ್ದಾರಿಗಳನ್ನು ಹಂಚಲಾಗುತ್ತದೆ.

ಅದರಿಂದ ಸಮಯಕ್ಕೆ ಸರಿಯಾಗಿ ಪ್ರತಿಯೊಂದು ಕಾರ್ಯವು ಒಳ್ಳೆಯ ರೀತಿಯಲ್ಲಿ ಸಂಪನ್ನವಾಗುತ್ತದೆ. ಅದೇ ರೀತಿ, ಜನರು ಒಮ್ಮೆಗೆ ಒಂದೇ ರೀತಿಯ ಕಾರ್ಯಮಾಡಲಿಕ್ಕೆ ಆಗುವುದಿಲ್ಲ. ಊಟ, ನೀರು, ರಕ್ಷಣೆ, ಕಾರ್ಯಾಲಯ, ಶುದ್ಧಗೊಳಿಸುವುದು, ಬೌದ್ಧಿಕ ಕೆಲಸ, ಶುಶ್ರೂಷೆ, ನಿವಾಸ, ಆಟ–ಓಟ ಮುಂತಾದ ಎಷ್ಟೋ ಕಾರ್ಯಗಳು ಒಟ್ಟಿಗೆ ನಡೆಯುತ್ತವೆ. ಇದರಲ್ಲಿ ಯಾವುದೇ ಒಂದರಲ್ಲಿ ಅವ್ಯವಸ್ಥೆಯಾದರೂ ಕೆಲಸ ನಡೆಯುವುದಿಲ್ಲ. ಸರಿಯಾಗಿ ಅದೇ ರೀತಿ ವ್ಯಕ್ತಿಯ ವಿಕಾಸ ಹಾಗೂ ಸಾಮಾಜಿಕ ಆವಶ್ಯಕತೆಗಳ ಪೂರೈಕೆಗಾಗಿ ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದ ಯಾವ ವ್ಯವಸ್ಥೆ ನಡೆದು ಬಂದಿದೆಯೋ ಅದು ವರ್ಣ–ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯನ್ನು ಜನರು ತಮ್ಮ ಗುಣ–ಕರ್ಮಗಳಿಗೆ ಅನುಗುಣವಾಗಿ ಸಮಾಜದ ಸೇವೆ ಸಲ್ಲಿಸಲಿ ಎಂಬ ಉದ್ದೇಶದಿಂದ ನಿರ್ಮಿಸಲಾಗಿದೆ. ವ್ಯಕ್ತಿಯಲ್ಲಿರುವ ಶ್ರೇಷ್ಠತೆಗಳ ವಿಕಾಸವಾಗಲಿ ಹಾಗೂ ವ್ಯಕ್ತಿಯ ವಿಕಾಸಗೊಳ್ಳುವ ಪ್ರಣಾಲಿಯಲ್ಲಿ ಸಮಾಜವೂ ಎರಡು ಹೆಜ್ಜೆ ಮುನ್ನಡೆಯಲಿ. ಇದರ ವ್ಯಾವಹಾರಿಕ ರೂಪವನ್ನು ವರ್ಣ–ವ್ಯವಸ್ಥೆ ಎಂದು ಹೇಳಲಾಗಿದೆ. ಇದರಿಂದ ವ್ಯಕ್ತಿಗೆ ಜೀವನ ಧ್ಯೇಯ ದೊರೆತು ಸಮಾಜದ ಆವಶ್ಯಕತೆಗಳ ಪೂರೈಕೆಯಾಯಿತು.

ಸಮಾಜದ ಸುರಕ್ಷತೆಯ ಪ್ರಶ್ನೆ ಎದುರಾದಲ್ಲಿ ಪೌರುಷ–ಪರಾಕ್ರಮ ಹಾಗೂ ಬಲವಿರುವ ಜನರು ಸಹಜವಾಗಿ ಮುಂದೆಬಂದರು. ಸಮಾಜದಲ್ಲಿ ಜ್ಞಾನ–ವಿಜ್ಞಾನದ ಪ್ರಗತಿಗಾಗಿ ತಪಶ್ಚರ್ಯ, ಜ್ಞಾನ, ಸಾಧನೆಯ ಕ್ಷೇತ್ರದಲ್ಲಿ ನಿಪುಣರಾದ ಜನರು ಮುಂದೆ ಬರಲು ತಯಾರಾದರು. ಕಲೆ–ಕೌಶಲಗಳನ್ನು ಬಲ್ಲವರು, ವಾಣಿಜ್ಯ–ವ್ಯಾಪಾರವನ್ನು ವೃದ್ಧಿಗೊಳಿಸುವವರು ಹಾಗೂ ಕೃಷಿ, ಗೋರಕ್ಷೆಯಲ್ಲಿ ಚತುರರಾದ ಜನರು ಸಮಾಜವನ್ನು ಸಂಪನ್ನ–ಸಮೃದ್ಧಗೊಳಿಸಿ ಸಮಾಜದ ಲಾಲನೆ–ಪಾಲನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ತಯಾರಾದರು. ಇವುಗಳಲ್ಲಿ ಯಾವುದನ್ನೂ ಮಾಡಲು ಆಗದವರು ಸಹ ಸಮಾಜಕ್ಕೆ ಉಪಯೋಗಿಗಳಾದರು. ಅವರು ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಚಿಂತನೆಗೆ ಸಾಕಷ್ಟು ಅವಕಾಶ ಸಿಗುವಂತೆ ಮಾಡುವ ಸೇವಾವ್ರತವನ್ನು ಕೈಹಿಡಿದರು. ಸಮಾಜದ ಸಣ್ಣ–ಪುಟ್ಟ ದೈನಿಕ ಆವಶ್ಯಕತೆಗಳ ಪೂರೈಕೆಯ ದಾಯತ್ವವನ್ನು ಅವರು ವಹಿಸಿಕೊಂಡರು. ಇವುಗಳಲ್ಲಿ ಯಾವುದೇ ಕಾರ್ಯ ಚಿಕ್ಕದು ದೊಡ್ಡದು ಆಗಿರುವುದಿಲ್ಲ. ಸಮಾಜವೆನ್ನುವ ವಿರಾಟ್ ಪುರುಷನ ವಿಭಿನ್ನ ಅಂಗಗಳಾದುದರಿಂದ ಎಲ್ಲವೂ ಆವಶ್ಯಕ ಹಾಗೂ ಆದರಣೀಯವಾಗಿರುತ್ತದೆ. ಸಂಪೂರ್ಣ ಶರೀರದ ವಿಭಿನ್ನ ಅಂಗಗಳಲ್ಲಿ ಕೆಲವನ್ನು ಶ್ರೇಷ್ಠ ಹಾಗೂ ಮತ್ತು ಕೆಲವನ್ನು ನಗಣ್ಯವೆಂದು ಹೇಳುವವನು ಮೂರ್ಖನೆನಿಸಿಕೊಳ್ಳುತ್ತಾನೆ. ಈ ಅಂಗ–ಅಂಗೀಭಾವದಲ್ಲಿ ಪ್ರತಿಸ್ಪರ್ಧೆ, ಅಸೂಯೆ, ಸಂಘರ್ಷಗಳಿಗೆ ಸ್ಥಾನವಿಲ್ಲ. ಯಾವುದೇ ಅಂಗ ಕೇವಲ ತನ್ನದೇ ಆದ ಭರವಸೆಯ



ಮೇಲೆ ಸ್ವಯಂ ಪರಿಪೂರ್ಣವಾಗಲಾರದು. ಪರಸ್ಪರಾವಲಂಬಿ ಅಥವಾ ಹೆಚ್ಚು ಸಮರ್ಪಕವಾದ ಶಬ್ದಗಳಲ್ಲಿ ಹೇಳಬೇಕಾದರೆ ಪರಸ್ಪರಾನುಕೂಲವಾದ ಈ ವ್ಯವಸ್ಥೆ ಭಾರತದಲ್ಲಿ ನಿರ್ಮಿತವಾಯಿತು. ಒಂದು ಅತ್ಯಂತ ವೈಜ್ಞಾನಿಕ ಶಾಸ್ತ್ರ–ಶುದ್ಧ ಸಾಮಾಜಿಕ ಸ್ವರೂಪ ಈ ರೀತಿ ಭಾರತದಲ್ಲಿ ವಿಕಸಿತವಾಯಿತು.

ನಿಸ್ಸಂದೇಹವಾಗಿ ಶತಮಾನಗಳ ನಿರಂತರ ಕಾಲಖಂಡದಲ್ಲಿ ಸಾಮಾಜಿಕ ಉತ್ಥಾನ ಪತನಗಳ ಹೊಡೆತಗಳಿಂದ ಈ ವ್ಯವಸ್ಥೆ ದುರ್ಬಲವಾಯಿತು. ಪರಕೀಯ ಆಕ್ರಮಣಗಳು ಹಾಗೂ ನೂರಾರು ವರುಷಗಳ ದಾಸ್ಯದಿಂದಲೂ ಸಹ ಸಾಮಾಜಿಕ ಜೀವನ ಅಸ್ತವ್ಯಸ್ತವಾಯಿತು. ಪರಕೀಯ ಸಮಾಜದ ಅಂಧಾನುಕರಣೆಯಿಂದ ಬಹಳ ಹಾಸ್ಯಾಸ್ಪದ ಸಂಗತಿಗಳು ಇದರಲ್ಲಿ ಸೇರಿಕೊಂಡವೆನಿಸುತ್ತದೆ. ಈ ವ್ಯವಸ್ಥೆಯಲ್ಲಿನ ದೋಷಗಳನ್ನು ಹುಡುಕುವವರು ಈ ವ್ಯವಸ್ಥೆಯನ್ನು ಕೊನೆಗೊಳಿಸಬೇಕೆಂದು ಯೋಚಿಸುತ್ತಿರುತ್ತಾರೆ. ಈ ವ್ಯವಸ್ಥೆಯನ್ನು ಕೊನೆಗೊಳಿಸಲು ಕಾರಣವನ್ನು ಹೀಗೆ ವ್ಯಕ್ತಪಡಿಸಲಾಗುತ್ತದೆ. ವ್ಯಕ್ತಿ–ವ್ಯಕ್ತಿಯ ನಡುವೆ ಅಂತರ ಏರ್ಪಾಡಾಗಿದೆ. ಮೇಲು–ಕೀಳುಗಳ ಭಾವ ಬಂದಿದೆ. ಈ ಭೇದಭಾವವನ್ನು ಕೊನೆಗೊಳಿಸಲು ಈ ವ್ಯವಸ್ಥೆಯನ್ನು ಬೇರಿನಿಂದ/ಮೂಲದಿಂದ ನಷ್ಟಗೊಳಿಸಬೇಕು ಎಂದು ಹೇಳಲಾಗುತ್ತದೆ.

ಈಗ ವಿಚಾರಣೀಯ ಪ್ರಶ್ನೆಯೆಂದರೆ, ವ್ಯವಸ್ಥೆಯನ್ನು ಕೊನೆಗೊಳಿಸುವುದರಿಂದ ಈ ಭೇದಭಾವ ದೂರವಾಗುತ್ತದೆಯೇ ಹಾಗೂ ಭೇದವನ್ನು ದೂರಮಾಡಿ ನಾವು ಏನು ಆಗಬೇಕೆಂದುಕೊಂಡಿದ್ದೇವೆಯೋ ಅದನ್ನು ಸಾಧಿಸಲು ಯಾವುದೇ ವ್ಯವಸ್ಥೆಯು ಅಗತ್ಯವಲ್ಲವೇ? ಕಡೆಗೆ ವ್ಯವಸ್ಥೆ ಒಂದು ರೀತಿಯ ರಚನೆಯಾಗಿದೆ. ಭೇದ ನಿರ್ಮಾಣವಾಗುವುದು ಒಂದು ದೋಷವಾಗಿದ್ದು ಅದು ನೋಡುವವರ ದೃಷ್ಟಿಯನ್ನು ಅವಲಂಬಿಸಿರುತ್ತದೆ. ವ್ಯವಸ್ಥೆಯನ್ನು ನೋಡುವ ರೀತಿ ಸರಿಯಿಲ್ಲದಿದ್ದಲ್ಲಿ ಭೇದಗಳನ್ನು ಹುಟ್ಟಿಸಲೂಬಹುದು. ದೃಷ್ಟಿ–ದೋಷ ಉತ್ಪನ್ನವಾಗುವುದರಿಂದ ಯಾವುದೇ ಅತಿ ಶ್ರೇಷ್ಠವ್ಯವಸ್ಥೆಯಲ್ಲಿಯೂ ಭೇದಗಳು ಹುಟ್ಟಿಕೊಳ್ಳಲಾರಂಭಿಸುತ್ತವೆ. ದೃಷ್ಟಿ–ದೋಷ ದೂರವಾದಲ್ಲಿ ಭೇದಗಳು ಕ್ಷೀಣವಾಗಿಹೋಗುತ್ತದೆ ಹಾಗೂ ದೂರವಾಗುತ್ತವೆ. ದೋಷಗಳನ್ನು ಸರಿಯಾಗಿ ಗುರುತಿಸಿ ಅವುಗಳನ್ನು ಬೆಳೆಯುವ ಮುನ್ನವೇ ದೂರಗೊಳಿಸಲು ಪ್ರಯತ್ನಿಸಬಹುದು ಅವುಗಳಲ್ಲಿನ ವಿಕೃತಿಗಳನ್ನು ದೂರಗೊಳಿಸಬಹುದು. ಅದನ್ನು ಕುರಿತು ವಿಚಾರಮಾಡುವುದು ಅತಿ ಅಗತ್ಯವಾದ ಕೆಲಸ. ಆದರೆ ದೋಷಗಳು ಹಾಗೂ ವಿಕೃತಿಗಳನ್ನು ದೂರಗೊಳಿಸಲು ಪ್ರಯತ್ನಿಸದೇ ಸಂಪೂರ್ಣ ವ್ಯವಸ್ಥೆಯುನ್ನು ಕೊನೆಗೊಳಿಸಲು ಯುತ್ನಿಸುವುದು ಬುದ್ಧಿವಂತಿಕೆಯೆನಿಸುವುದೇ? ರೋಗದಿಂದ ಮುಕ್ತಿ ಪಡೆಯುವ ಸಲುವಾಗಿ ವೈದ್ಯರು ರೋಗಿಯನ್ನೇ ಮುಗಿಸಿಬಿಡುವ ಸಂಗತಿಯನ್ನು ಹೇಳಿದರೆ ಅದು

ಬುದ್ಧಿವಂತಿಕೆಯಾಗುವುದೇ ?

ವಾಸ್ತವಕ್ಕೆ ಪರಸ್ಪರ ಒತ್ತಡ ಹಾಗೂ ಸಂಘರ್ಷ ಹುಟ್ಟಲು ಪ್ರಮುಖ ಸಂಗತಿಗಳು ಕಾರಣವಾಗುವುದಿಲ್ಲ. ಜಗಳಗಳು ಚಿಕ್ಕ-ಚಿಕ್ಕ ಸಂಗತಿಗಳಿಂದ ಉಂಟಾಗುತ್ತವೆ. ಹೊಡೆದಾಟ-ಜಗಳ ಸ್ವಭಾವಗತವಾದಲ್ಲಿ ಯಾವುದೇ ಒಳ್ಳೆಯ ಆಧಾರದ ಹೆಸರಿನಲ್ಲಿಯೂ ಹೊಡೆದಾಟ-ಜಗಳವಾಡಬಹುದಾಗಿದೆ. ಈ ಕಾರಣದಿಂದ ಒಂದು ಕಡೆಯಿಂದ ಎಲ್ಲಾ ರೀತಿಯ ಆಧಾರಗಳನ್ನು ನಷ್ಟಗೊಳಿಸುತ್ತಾ ಹೋದಲ್ಲಿ ನಾವು ಎಲ್ಲಿಗೆ ತಲುಪುತ್ತೇವೆ? ಈ ಪದ್ಧತಿಯನ್ನು ಅನುಸರಿಸುವುದರಿಂದ ಭೇದ ಭಾವ ದೂರಗೊಳ್ಳುತ್ತವೆಯೇ ಜನರು ಕೋಳಿಗಳ ಜಗಳ ಮಾಡುತ್ತಾರೆ. ಇದ್ಕಕೆ ಆಧಾರ ಕೋಳಿಯಾಗಿರುತ್ತದೆ. ಯಾರಾದರೂ ಕೋಳಿಗಳಿರದಿದ್ದಲ್ಲಿ ಹೊಡೆದಾಟವಾಗಲಾರದೆಂದು ಹೇಳಿ ಇರುವ ಕೋಳಿಗಳನ್ನೆಲ್ಲಾ ನಷ್ಟಗೊಳಿಸುವ ಸಲಹೆ ನೀಡುತ್ತಾರೆ. ಆಗ ಹೊಡೆದಾಡುವವರು ಸರಿಹೋಗುತ್ತಾರೆಯೇ? ಅವರು ಇನ್ಯಾವುದೋ ಸಂಗತಿಯನ್ನು ಆಧಾರವನ್ನಾಗಿರಿಸಿ ಹೊಡೆದಾಡಲು ಆರಂಭಮಾಡುತ್ತಾರೆ. ಭೇದವನ್ನು ಉಂಟುಮಾಡಲು ಯಾವುದನ್ನಾದರೂ ಆಧಾರವನ್ನಾಗಿರಿಸಿ ಅದರ ದುರುಪಯೋಗ ಮಾಡುತ್ತಾರೆ. ಕೋಳಿಗಳಿಲ್ಲದಿದ್ದಲ್ಲಿ ಜನರು ತೋಳಗಳನ್ನು ಹೊಡೆದಾಟಕ್ಕಿಳಿಸುತ್ತಾರೆ ಹಾಗೂ ಎಮ್ಮೆಗಳ ಹೊಡೆದಾಟವನ್ನು ನೋಡಿ ಆನಂದಿಸುತ್ತಾರೆ. ಕುಸ್ತಿಪಟುಗಳನ್ನು ನಿಲ್ಲಿಸುತ್ತಾರೆ. ಪಾರಿವಾಳ ನಿರ್ಜೀವ ಗಾಳಿಪಟಗಳಿಂದಲೂ ಹೊಡೆದಾಡಬಹುದಾಗಿದೆ. ಹೊಡೆದಾಡುವವರು ಕಡಿಮೆಯಿದ್ದಾರೆಯೇ? ಮಾತು-ಮಾತಿಗೂ ಜಗಳವಾಡಬಹುದಾಗಿದೆ. ಆದ್ದರಿಂದ ಭೇದ ಅಥವಾ ವಿಕೃತಿಗಳನ್ನು ದೂರ ಮಾಡುವ ಬದಲು ವ್ಯವಸ್ಥೆಯನ್ನು ನಷ್ಟಗೊಳಿಸುವ ಬಗ್ಗೆ ಮಾತನಾಡುವುದು ಮೂರ್ಖತನವಾಗುತ್ತದೆ. ಹೀಗೆ ಯೋಚಿಸುವುದು ತಪ್ಪಾಗುತ್ತದೆ.

ಒಂದು ಶಾಲೆಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ಶಿಕ್ಷಣ ನೀಡುವುದು ಆ ಶಾಲೆಯ ಕೆಲಸ. ಇದರಲ್ಲಿ ಒಂದು ವ್ಯವಸ್ಥೆಯಿದೆ. ಚಪರಾಸಿಯಿಂದ ಹಿಡಿದು ವ್ಯವಸ್ಥಾಪಕರವರೆಗೂ ಕೆಲಸವನ್ನು ಹಂಚಲಾಗಿರುತ್ತದೆ. ಶಿಕ್ಷಣ ನೀಡಿ ಜನರನ್ನು ಜ್ಞಾನವಂತರನ್ನಾಗಿಸಲು ಈ ವ್ಯವಸ್ಥೆ ಅತಿ ಆವಶ್ಯಕವಾಗಿದೆ. ಈಗ, ನಮಗೆ ತಿಳಿದಂತೆ ಈ ನಡುವೆ – ಬಂದ್, ಧರಣಿ ಮಾಡುವುದು, ಹೊಡೆದು ಹಾಕುವುದು, ಉಪದ್ರವಗಳುಂಟಾಗುತ್ತವೆ. ಇವುಗಳನ್ನು ದೂರಮಾಡುವ ಸಲುವಾಗಿ ಹಲವರು ಈ ರೀತಿ ಹೇಳುತ್ತಾರೆ, ವಿಭಿನ್ನ ತರಗತಿಗಳನ್ನು ಮುಚ್ಚಿಬಿಡಿ, ವಿಭಿನ್ನ ಜವಾಬ್ದಾರಿಗಳನ್ನು ಹೊತ್ತ ಅಂಗಗಳನ್ನು ಸ್ಥಗಿತಗೊಳಿಸಿ. ಕೇವಲ ಒಂದು ತರಗತಿ, ಒಂದು ಪುಸ್ತಕ, ಒಂದು ಭಾವಣಿ ಇರಲಿ ಹಾಗೂ ಎಲ್ಲಾ ವಿಭಾಗಗಳನ್ನು ಮುಚ್ಚಿಬಿಡಿ. ವ್ಯವಸ್ಥೆಯನ್ನು ಭೇದಭಾವಗಳಿಗೆ ಕಾರಣವೆಂದು ತಿಳಿದು ಇರುವ ಎಲ್ಲಾ ವ್ಯವಸ್ಥೆಯನ್ನು ಮುಚ್ಚಿ



ಬಿಟ್ಟಲ್ಲಿ ಆ ವಿದ್ಯಾಲಯದ ಸ್ಥಿತಿ ಏನಾಗಬೇಕು? ಹಾಗೂ ಆ ಸ್ಥಿತಿಯಲ್ಲಿಯೂ ಶಾಂತಿ ಉಳಿಯುವುದೇ? ಅಶಾಂತಿಗಾಗಿ ಹಲವಾರು ಕಾರಣಗಳನ್ನು ಹುಡುಕಬಹುದಾಗಿದೆ. ಆದ್ದರಿಂದ ವ್ಯವಸ್ಥೆಯನ್ನು ಭೇದಭಾವಕ್ಕೆ ಕಾರಣವೆಂದು ತಿಳಿಯುವುದು ದೊಡ್ಡತಪ್ಪು. ನಿಜಕ್ಕೂ ಭೇದ ಹಾಗೂ ಸಂಘರ್ಷವನ್ನು ಆಧಾರವನ್ನಾಗಿರಿಸಿ ಯಾವುದೇ ವ್ಯವಸ್ಥೆ ನಿಲ್ಲಲಾರದು ಹಾಗೂ ನಾವು ಯಾವುದನ್ನು ವ್ಯವಸ್ಥೆಯನ್ನುತ್ತೇವೆಯೋ ಅದರಲ್ಲಿ ಭೇದಮಾಡಲು ಯಾವ ಸ್ಥಾನವಿರುವುದಿಲ್ಲ. ಭೇದ ಅಥವಾ ಸಂಘರ್ಷ, ವ್ಯವಸ್ಥೆಯ ಕಾರಣವಾಗದೇ ವಿಕೃತಿಗಳಿಗೆ ಕಾರಣವಾಗುತ್ತದೆ. ವಿಕೃತಿಗಳನ್ನು ದೂರಮಾಡಲು ವ್ಯವಸ್ಥೆಯನ್ನು ನಾಶಗೊಳಿಸುವುದು ಸರಿಯಾಗುವುದಿಲ್ಲ, ಅದಕ್ಕೆ ಬದಲಾಗಿ ವ್ಯವಸ್ಥೆಯನ್ನು ಸರಿಪಡಿಸುವುದೇ ಏಕೈಕ ಮಾರ್ಗವಾಗಿದೆ. ಮೂಲವ್ಯವಸ್ಥೆಯಲ್ಲಿ ಯಾವುದೇ ದೋಷವಿರುವುದಿಲ್ಲ, ಸಹಕಾರವನ್ನು ಅಪೇಕ್ಷಿಸಲಾಗುತ್ತದೆ. ದೋಷ ಜನರ ಪ್ರವೃತ್ತಿಯಲ್ಲಿ ಕಂಡುಬರುತ್ತದೆ. ಪ್ರವೃತ್ತಿಯು ದೋಷದಿಂದ ಕೂಡಿದಾಗ, ವ್ಯವಸ್ಥೆಯನ್ನು ಸರಿಯಾಗಿ ಪಾಲಿಸಲಾಗುವುದಿಲ್ಲ.

ಆದ್ದರಿಂದ ವ್ಯವಸ್ಥೆಯನ್ನು ಕುರಿತು ನಾವು ಈ ತಥ್ಯವನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಅದೇನೆಂದರೆ ಸದಾ ವ್ಯವಸ್ಥೆಯ ಎರಡು ರೂಪಗಳಿರುತ್ತವೆ – ಒಂದು ಆಂತರಿಕ ಹಾಗೂ ಮತ್ತೊಂದು ಬಾಹ್ಯ. ಬಾಹ್ಯ ಸ್ವರೂಪವನ್ನು ಎಷ್ಟು ಸರಿಪಡಿಸಿದರೂ ಹಾಗೂ ಸಮಯಕ್ಕೆ ಸರಿಯಾಗಿ ಅದರಲ್ಲಿ ಎಷ್ಟು ಪರಿವರ್ತನೆಗಳಿಗಾಗಿ ಯತ್ನಿಸಲಿ, ಸ್ವರೂಪ ಸ್ವರೂಪವಾಗಿಯೇ ಇರುವುದು. ಹೊರಗಿನ ಸ್ವರೂಪವನ್ನು ಆಧಾರವನ್ನಾಗಿಸಿ ಯಾವುದೇ ವಸ್ತು ಉಳಿಯಲಾರದು. ವಸ್ತುವಿನ ಬೆಲೆಯು ಅದರಲ್ಲಿನ ಒಳತತ್ವದಿಂದ ಉಂಟಾಗುತ್ತದೆ. ಆಂತರಿಕ ಭಾವನೆ ಅಥವಾ ಶಕ್ತಿ ಹೊರಗಿನ ಸ್ವರೂಪವನ್ನು ಉಳಿಸುವುದಕ್ಕೆ ಕಾರಣವಾಗುತ್ತದೆ. ಈ ಒಳಗಿನ ವಸ್ತು ಇರದಿದ್ದಲ್ಲಿ, ಒಳಗೆ ವ್ಯಾಪಿಸಿರುವ ಈ ಸೂಕ್ಷ್ಮ ತತ್ವ ಅದೃಶ್ಯವಾದಲ್ಲಿ ವಿಶ್ವದ ಯಾವುದೇ ಶಕ್ತಿ ಹೊರಗಿನ ಸ್ವರೂಪವನ್ನು ರಕ್ಷಿಸಲಾರದು. ಆದ್ದರಿಂದ ಪ್ರತಿಯೊಂದು ವ್ಯವಸ್ಥೆಯಲ್ಲಿ ಅಡಗಿರುವ ಈ ಆಂತರಿಕ ಭಾವನೆಯನ್ನು ಬಹಳ ಜಾಗರೂಕತೆಯಿಂದ ಕಾಪಾಡಬೇಕಾಗುತ್ತದೆ. ಹೊರಗಿನ ಸ್ವರೂಪ ಶುದ್ಧ ಅನುಪಯುಕ್ತವೆಂದು ಹೇಳಲಾಗದು. ಆಂತರಿಕ ತತ್ವವನ್ನು ಪ್ರಕಟಗೊಳಿಸಲು ಯಾವುದಾದರೂ ಬಾಹ್ಯ ಸ್ವರೂಪದ ಅಗತ್ಯವಿದೆ. ಆದರೂ ಇದರಲ್ಲಿ ಆಂತರಿಕ ತತ್ವ ಬಹು ಪ್ರಮುಖವಾದದ್ದು. ಮೇಲೆ ನಾವು ಶಾಲೆಯ ಉದಾಹರಣೆಯನ್ನು ತೆಗೆದುಕೊಂಡೆವು. ಅದರ ಪ್ರಕಾರ ಯೋಚಿಸಬೇಕು. ವಿದ್ಯಾಲಯವನ್ನು ಮುನ್ನಡೆಸಬೇಕು. ಇದಕ್ಕಾಗಿ ನಾವು ಒಳ್ಳೆಯ ಭವನವನ್ನು ನಿರ್ಮಿಸುತ್ತೇವೆ. ತರಗತಿಗಳನ್ನು ಆರಂಭಿಸಬೇಕು. ವಿಜ್ಞಾನದ ಪ್ರಯೋಗಶಾಲೆಗಳನ್ನು ಸ್ಥಾಪಿಸಬೇಕು.

ಮುಖ್ಯೋಪಾಧ್ಯಾಯ, ಶಿಕ್ಷಕ ಮುಂತಾದವರ ಕೋಣೆಗಳನ್ನು ಗೊತ್ತುಪಡಿಸಬೇಕು. ಸಮಯಚಕ್ರದ ನಿರ್ಧಾರಮಾಡಬೇಕು. ವಿದ್ಯಾರ್ಥಿಗಳಿಗೆ ಸಮಯ, ವಿಷಯ, ತರಗತಿ ಮುಂತಾದ ಹೊರ ಸ್ವರೂಪವನ್ನು ಪೂರ್ಣಗೊಳಿಸಬೇಕು. ಆಗಲೂ ಸಹ ವಿದ್ಯಾಲಯ ಸರಿಯಾಗಿ ಕ್ರಿಯಾಶೀಲವಾಗುವುದೇ? ಇಷ್ಟು ಆದರೂ ಸಹ ಅಗತ್ಯವಾದ ಸಂಗತಿ ಎಂದರೆ ಶಿಕ್ಷಕ, ಸೇವಕ ಹಾಗೂ ವಿದ್ಯಾರ್ಥಿಯ ನಡುವೆ ಶಿಕ್ಷಣದ ಇಚ್ಛೆ. ಅಧ್ಯಾಪಕರಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ಆಂತರಿಕ ಅಭಿಲಾಷೆ ಇರಬೇಕು ಹಾಗೂ ವಿದ್ಯಾರ್ಥಿಗಳು ಒಳ್ಳೆಯ ಜ್ಞಾನ–ವಿಜ್ಞಾನದ ಸಂಗತಿಗಳನ್ನು ಕಲಿಯುತ್ತೇವೆ ಎಂಬುದು ಬಹಳ ಅಗತ್ಯವಾಗಿದೆ. ಈ ಒಂದು ಬಯಕೆ– ಇಚ್ಛೆಯನ್ನು ಯಾವುದೇ ಥರ್ಮಾಮೀಟರ್‌ನಿಂದ ಅಳೆಯಲಾಗುವುದಿಲ್ಲ ಹಾಗೂ ಯಾವುದೇ ದೂರದರ್ಶಕದಿಂದ ನೋಡಲಾಗುವುದಿಲ್ಲ. ಆದರೂ ಸಹ ಅದರ ಇರುವಿಕೆ ಅಗತ್ಯ. ಈ ಆಂತರಿಕ ಇಚ್ಛೆಯ ಅನುಭವ ಆ ಶಾಲೆಯಲ್ಲಿ ಯಾವ ಪ್ರಮಾಣದಲ್ಲಿರುವುದೋ ಅಷ್ಟೇ ಆ ಬಾಹ್ಯ ಸ್ವರೂಪದ ಕಾರ್ಯಕ್ಷಮತೆ ಇರುತ್ತದೆ. ಆಂತರಿಕ ಇಚ್ಛೆಯಿಲ್ಲದಿದ್ದಲ್ಲಿ ಹೊರ ಸ್ವರೂಪ ನಾಲ್ಕು ಕಾಸಿಗೂ ಬೆಲೆ ಬಾಳದೆ ಒಟ್ಟಾರೆ ವ್ಯರ್ಥವಾಗಿ ಹೋದಂತೆ ಆಭಾಸವಾಗುತ್ತದೆ. ಕೇವಲ ಹೊರ ಹಾಗೂ ಔಪಚಾರಿಕ ರೀತಿಯಿಂದ ಭೇಟಿಯಾಗುವುದು, ಅಭಿನಂದಿಸುವುದು, ಪ್ರೇಮ ಪ್ರದರ್ಶಿಸುವುದರಿಂದ ಕೆಲಸವಾಗುವುದಿಲ್ಲ. ಆಂತರಿಕ ಶಕ್ತಿಯು ಪ್ರಮುಖ ಶಕ್ತಿಯಾಗಿದೆ. ವ್ಯವಸ್ಥೆ ಯಾವುದೇ ಆಗಿರಲಿ ಅದರ ಈ ಆಂತರಿಕ ಪಕ್ಷ ಬಹಳ ಮಹತ್ವಪೂರ್ಣವಾಗಿರುತ್ತದೆ.

ಪರಮಾತ್ಮನಿಂದ ನಿರ್ಮಿಸಲ್ಪಟ್ಟ ಈ ಮಾನವ ಶರೀರವನ್ನು ನೋಡಿದಾಗ ವ್ಯವಸ್ಥೆಯನ್ನು ಕುರಿತಾದ ಈ ತಥ್ಯ ಸ್ಪಷ್ಟವಾಗುತ್ತದೆ. ಶರೀರದ ಬಾಹ್ಯಸ್ವರೂಪ ಯಾವುದನ್ನು ಆಧಾರವನ್ನಾಗಿಸಿದೆ? ಪ್ರಕೃತಿಯು ತನ್ನ ಸಂಪೂರ್ಣ ಬುದ್ಧಿ ಕೌಶಲ್ಯದಿಂದ ಈ ಮಾನವ ಶರೀರವೆಂಬ ಉತ್ಕೃಷ್ಟ ಯಂತ್ರವನ್ನು ನಿರ್ಮಿಸಿದೆ. ಶರೀರದ ವಿಭಿನ್ನ ಕ್ರಿಯೆಗಳು ಪ್ರತಿಕ್ಷಣ ನಡೆಯುತ್ತಲೇ ಇರುತ್ತವೆ. ಈ ಕ್ರಿಯೆಗಳನ್ನು ನಮ್ಮ  ಹೊರ ಅಂಗಾಂಗಗಳ ಚಾಲನೆಯ ರೂಪದಲ್ಲಿ ಕಾಣುತ್ತೇವೆ. ಶರೀರದ ಎಲ್ಲಾ ಆವಶ್ಯಕತೆಗಳನ್ನು ಪ್ರತಿಕ್ಷಣ ಪೂರೈಸಲಾಗುತ್ತಿದೆ. ತಿಂಡಿ–ತಿನಿಸು, ನಡೆ–ನುಡಿ, ಹಾವ–ಭಾವ, ಸುಖ–ದುಃಖಗಳ ಅನುಭವಗಳ ಎಷ್ಟೋ ಕಾರ್ಯಗಳು ನಡೆಯುತ್ತಿವೆ. ಆದರೆ ಪ್ರತಿಯೊಂದು ಆವಶ್ಯಕತೆಯ ಪೂರೈಕೆಗಾಗಿ ಯೋಗ್ಯ ದೃಷ್ಟಿ ಹಾಗೂ ಪ್ರಶಸ್ತ ಮಾರ್ಗದ ಚಾಲನೆ ಯಾರು ಮಾಡುತ್ತಿದ್ದಾರೆ? ಬೆವರು ಸುರಿಯುತ್ತದೆ. ಎಷ್ಟು ಬೆವರಬೇಕು? ಬೆವರಿನೊಡನೆ ಶರೀರದ ಎಷ್ಟೋ ರೀತಿಯ ಅನಾವಶ್ಯಕ ವಸ್ತುಗಳು ಹೊರಹೋಗುತ್ತಿವೆ. ಇದರ ಪ್ರಮಾಣವನ್ನು ನಿಗದಿತಪಡಿಸುವವರು ಯಾರು? ಹಾಗೂ ಎಂದಾದರೂ ಒಮ್ಮೆ ಶರೀರ ದುರ್ಬಲವಾದಾಗ ವಾಸ್ತವದಲ್ಲಿ



ಯಾವ ತತ್ವ ಕ್ಷೀಣವಾಗುತ್ತದೆ? ಆಗ ನಾವು ಅದನ್ನೇ ಪ್ರಾಣ–ತತ್ವ ಎಂದು ಹೇಳುತ್ತೇವೆ. ಪ್ರಾಣ ಶರೀರದಲ್ಲಿದ್ದು ಈ ಹೊರ ಸ್ವರೂಪವನ್ನು ಚಾಲನೆಗೊಳಿಸುತ್ತಿದೆ. ಈ ಪ್ರಾಣತತ್ವದ ಧಾರಣಾ ಮಾಡುವುದೇ ಸಂಪೂರ್ಣ ವ್ಯವಸ್ಥೆಯ ರಹಸ್ಯವನ್ನು ತಿಳಿಯುವುದಾಗಿದೆ. ಈ ಆಂತರಿಕ ವಿಷಯವು ಮಹತ್ವಪೂರ್ಣವಾಗಿದೆ.

ಈ ರೀತಿ ಯಾವುದೇ ವ್ಯವಸ್ಥೆಯಾಗಿರಲಿ ಅದರ ಆಂತರಿಕ ವಿಷಯವು ಮಹತ್ವಪೂರ್ಣವಾಗಿರುತ್ತದೆ. ಯಾವುದೇ ವ್ಯವಸ್ಥೆಯನ್ನು ತಿಳಿಯಪಡಿಸುವುದರ ಅರ್ಥವೆಂದರೆ, ಅದರ ಆಂತರಿಕ ಭಾವವನ್ನು ಗುರುತಿಸುವುದಾಗಿದೆ. ಈ ಆಂತರಿಕ ಭಾವವೇ ಪ್ರಮುಖ ಚೈತನ್ಯದ ಕಾರಣವಾಗಿದೆ. ಆದ್ದರಿಂದಲೇ ಭಾರತದ ವರ್ಣ–ವ್ಯವಸ್ಥೆ ಅಷ್ಟು ಶ್ರೇಷ್ಠ ಹಾಗೂ ಪರಿಪೂರ್ಣವಾಗಿದ್ದಲ್ಲಿ ಭಾರತದ ಪತನ ಹೇಗಾಯಿತು? ಪ್ರಾಚೀನ ಕಾಲದಲ್ಲಿ ವರ್ಣ–ವ್ಯವಸ್ಥೆಯಿಂದ ಸಮಾಜಕ್ಕೆ ಸಂಪೂರ್ಣ ಲಾಭವಿದ್ದ ಪಕ್ಷದಲ್ಲಿ ಕೆಡುಕು ಇದರಲ್ಲಿ ಹೇಗೆ ಉತ್ಪನ್ನವಾಯಿತು? ಆಗ ಇದರರ್ಥವೇನಾಗುತ್ತದೆಯೆಂದರೆ ಸಂಪೂರ್ಣ ವ್ಯವಸ್ಥೆಯನ್ನು ಕೆಟ್ಟದು ಎಂದು ತಿಳಿಯಲಾಗುವುದಿಲ್ಲ ಹಾಗೂ ಸಂಪೂರ್ಣ ವ್ಯವಸ್ಥೆಯನ್ನು ನಷ್ಟಗೊಳಿಸುವುದು ಅದರ ಉಪಾಯವಾಗಲಾರದು. ವ್ಯವಸ್ಥೆಯ ಆಂತರಿಕ ಭಾವದಲ್ಲಿ ಬಂದಂತಹ ದೌರ್ಬಲ್ಯವೇ ಇದಕ್ಕೆ ಕಾರಣವೆಂದು ಎಣಿಸಲಾಗುವುದು. ಈ ದೌರ್ಬಲ್ಯ ಹೋಗಲಾಡಿಸಲು ನಾವು ಹೆಚ್ಚು ತನ್ಮಯತೆಯಿಂದ ಆ ವ್ಯವಸ್ಥೆಯ ಆಂತರಿಕ ಚೈತನ್ಯವನ್ನು ಜಾಗೃತಗೊಳಿಸಲು ಪ್ರಯತ್ನಿಸುವುದು ಅಗತ್ಯ. ಪ್ರಾಣವನ್ನು ಜಾಗೃತವಾದಾಗ ವಿಕೃತಿಗಳು ರೆಪ್ಪೆ ಮುಚ್ಚುವುದರೊಳಗಾಗಿ ದೂರ ಸರಿಯುತ್ತವೆ, ಶರೀರ ಸ್ವಸ್ಥವಾಗುತ್ತದೆ ಹಾಗೂ ಹೊರ ಸ್ವರೂಪವೂ ಸುಸ್ಥಿರವಾಗಿ ಕಾಣತೊಡಗುತ್ತದೆ.

ಆದ್ದರಿಂದಲೇ ವಿಶ್ವದಲ್ಲಿ ಪ್ರಚಲಿತ ಸಾಮಾಜಿಕ ವ್ಯವಸ್ಥೆಗಳನ್ನು ಕುರಿತು ವಿಚಾರ ಮಾಡುವಾಗ ನಾವು ನಮ್ಮ ದೇಶದ ಸಂಸ್ಕೃತಿ, ನಾಗರಿಕತೆಯ ತುಲನಾತ್ಮಕ ಅಧ್ಯಯನ ಮಾಡಿದಲ್ಲಿ ನಾವು ಗಂಭೀರವಾಗಿ ಯೋಚಿಸಬೇಕಾದುದೆಂದರೆ ವರ್ಣವ್ಯವಸ್ಥೆಯ ಹೆಸರಿನಲ್ಲಿ ಯಾವ ಸಾಮಾಜಿಕ ರಚನೆಯ ಅಧಿಷ್ಠಾನವನ್ನು ನಮ್ಮ ದೇಶದಲ್ಲಿ ನಿರ್ಮಾಣ ಮಾಡಲಾಯಿತೋ ಅದರ ಮೂಲ ಅಂತರ್ಭಾವವೇನು? ಆ ಅಧಿಷ್ಠಾನ ಇಂದು ಸಹ ನಮಗೆ ಯಾವ ರೀತಿ ಉಪಯೋಗಿಯಾಗುತ್ತದೆ? ವಿಕೃತಿಗಳನ್ನು ದೂರಮಾಡಿ ನಾವು ವಾಸ್ತವಿಕವಾದ ಸ್ವರೂಪವನ್ನು ಸ್ವೀಕರಿಸಿದಲ್ಲಿ ಅದು ಇಂದಿಗೂ ವಿಶ್ವದ ಶ್ರೇಷ್ಠ ಮಾನವ ರಚನೆಗಳಲ್ಲಿ ಯಾವ ಸ್ಥಾನ ಪಡೆಯುತ್ತದೆ?

ಪ್ರಪ್ರಥಮವಾಗಿ ನಾವು ಇಂದಿನ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡೋಣ. ಪ್ರತಿಯೊಬ್ಬ ಮನುಷ್ಯನ ಸಾಮಾಜಿಕ ಅವಲಂಬನೆಯನ್ನು ಸ್ವೀಕರಿಸದೇ ಇರಲಾಗುವುದಿಲ್ಲ. ವ್ಯಕ್ತಿಯ ಜೀವನ ಸಮಾಜವನ್ನು ಅವಲಂಬಿಸಿರುತ್ತದೆ.

ಈ ಅವಲಂಬಿನೆಯಿಂದ ವ್ಯಕ್ತಿಯೊಳಗೆ ಒಂದು ರೀತಿಯ ನಿರಾಸೆ ಆವರಿಸುತ್ತದೆ. ವ್ಯಕ್ತಿಯು ತಾನು ಒಬ್ಬಂಟಿಗನಾಗಿ ಏನೂ ಮಾಡಲಾರನೆಂದು ಯೋಚಿಸುತ್ತಾನೆ. ಅವನು ತನ್ನನ್ನು ಅಸಹಾಯಕನಾಗಿ ಅನುಭವಿಸುತ್ತಾನೆ. ವ್ಯಕ್ತಿಯು ತಾನು ಎಲ್ಲಾ ರೀತಿಯಲ್ಲೂ ಪರಾವಲಂಬಿ, ತನ್ನ ಮಹತ್ವವಿಲ್ಲವೆಂದು ಯೋಚಿಸುತ್ತಾನೆ. ಈ ಅವಸ್ಥೆಯಲ್ಲಿ ಅವನು ನಿರ್ಗತಿಕನಾಗಿ ಕಾರ್ಯಮಾಡುತ್ತಾನೆ. ವ್ಯಕ್ತಿ–ವಿಕಾಸದ ಉತ್ಸಾಹ ಕ್ಷೀಣಿಸುತ್ತದೆ. ಈ ಸಾಮಾಜಿಕ ಪರಾವಲಂಬನೆಯನ್ನು ದೂರಗೊಳಿಸಬೇಕು ಆಗಲೇ ಅವನು ವಿಕಾಸ ಹೊಂದಬಹುದು. ಪರಾವಲಂಬನೆಯ ಸ್ಥಿತಿಯಲ್ಲಿ ವ್ಯಕ್ತಿ ಸದಾ ಮತ್ತೊಬ್ಬರ ಸಹಾಯವನ್ನು ಎದುರುನೋಡುತ್ತಾನೆ. ಅವನು ಪರಿಸ್ಥಿತಿಗಳ ಸ್ವತಃ ಒಡೆಯನಾಗದಿದ್ದಲ್ಲಿ, ಅವನ ಶಕ್ತಿಯಿಲ್ಲದಿದ್ದಲ್ಲಿ ಅವನು ನೂತನ ಶೋಧ ಮತ್ತು ಅರಿವುಗಳಿಗೆ ಏಕೆ ಮುಂದೆ ಬರುತ್ತಾನೆ? ಆದ್ದರಿಂದ ವ್ಯಕ್ತಿ ತನ್ನ ವಿಕಾಸದಲ್ಲಿ ಸ್ವತಃ ಪರಿಪೂರ್ಣನಾಗುವುದು ಅಗತ್ಯ.

ವ್ಯಕ್ತಿಯ ಈ ಪರಾವಲಂಬನೆಯನ್ನು ದೂರಗಳಿಸುವ ಸಲುವಾಗಿ ಭಾರತೀಯ ಪದ್ಧತಿಯಿಂದ ಏನು ವಿಚಾರ ಮಾಡಲಾಗಿದೆಯೋ ಅದು ಸ್ವಲ್ಪಮಟ್ಟಿಗೆ ನೋಡುವ ದೃಷ್ಟಿಯಲ್ಲಿ ಆದ ಪರಿವರ್ತನೆಯಾಗಿದೆ. ವ್ಯಕ್ತಿ ಪರಾವಲಂಬಿ ಎಂಬುದನ್ನು ಯೋಚಿಸದೇ ನಮ್ಮಲ್ಲಿ ವ್ಯಕ್ತಿ ಪರಸ್ಪರಾವಲಂಬಿಗಳೆನ್ನಲಾಗಿದೆ. ಎಲ್ಲರೂ ಪರಸ್ಪರ ಒಬ್ಬರನ್ನೊಬ್ಬರು ಆಶ್ರಯಿಸಿದ್ದಾರೆ. ಅಷ್ಟೇ ಅಲ್ಲದೆ ನಮ್ಮಲ್ಲಿ ಪರಸ್ಪರ ಅವಲಂಬಿತರಾಗುವ ಭಾವನೆಯಿಂದಲೂ ಮೇಲಾಗಿ ನಾವು ಪರಸ್ಪರ ಒಬ್ಬರಿಗೊಬ್ಬರು ಅನುಕೂಲಕರವಾಗಿದ್ದೇವೆ ಎಂದು ಯೋಚಿಸಲಾಗಿದೆ. ಅನುಕೂಲತೆ ಮತ್ತು ಅವಲಂಬನೆಯಲ್ಲಿ ಬಹು ದೊಡ್ಡ ಅಂತರವಿದೆ ಅವಲಂಬನೆಯಲ್ಲಿ ದೈನ್ಯಭಾವವಿದೆ, ಪರಸ್ಪರಾವಲಂಬನೆಯಲ್ಲಿಯೂ ಅವಲಂಬನೆಯಿದೆ ಆದರೆ ಅನುಕೂಲತೆಯಲ್ಲಿ ತನ್ನ ಶಕ್ತಿಯ ಆದರದ ಭಾವವಿದೆ. ಹೇಗೆ ಪುತ್ರನು ತಂದೆಯನ್ನು ಅವಲಂಬಿಸಿರುತ್ತಾನೆಯೋ ಹಾಗೆ ತಂದೆಯೂ ಹಲವಾರು ಅರ್ಥಗಳಲ್ಲಿ ತನ್ನ ಪುತ್ರನನ್ನು ಅವಲಂಬಿಸಿರುತ್ತಾನೆ. ಇಷ್ಟು ಯೋಚಿಸಿ ವ್ಯವಹರಿಸಿದಲ್ಲಿ ಅವರಲ್ಲಿ ಒಂದು ಅಂತರವೇರ್ಪಡುವುದು ಸಹಜ. ಆದರೆ ತಂದೆ ಹಾಗೂ ಮಗ ಒಬ್ಬರಿಗೊಬ್ಬರು ಪರಸ್ಪರಾನುಕೂಲವಾಗಿದ್ದಾರೆ ಎಂದು ತಿಳಿದಾಗ ಒಬ್ಬರ ಸುಖ ಮತ್ತೊಬ್ಬರದೂ ಆಗುತ್ತದೆ. ಇದೇ ಪರಸ್ಪರ ಅನುಕೂಲತೆ. ನಮ್ಮ ಭಾರತೀಯ ಜೀವನ ರಚನೆಯ ದೃಷ್ಟಿಯ ವೈಶಿಷ್ಟ್ಯವಾಗಿದೆ.

ಯಾವ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿ ಹಾಗೂ ವ್ಯಕ್ತಿಯ ನಡುವಿನ ಅಂದರೆ ಸಮಾಜದ ವ್ಯವಹಾರದಲ್ಲಿ ಪರಸ್ಪರ ಅನುಕೂಲತೆಯಿರುವುದೋ ಅಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಹಾಗೂ ಅವನ ಗೌರವ ಸುರಕ್ಷಿತವಾಗಿರುತ್ತವೆ. ವ್ಯಕ್ತಿ ಸ್ವತಂತ್ರನಾಗಿರುತ್ತಾನೆ ಎಂದರೆ ಅದರ ಅರ್ಥ ಈ ಸಂದರ್ಭದಲ್ಲಿ ಪುನಃ ಅವನು



ಪರರಿಗಾಗಿ ಹೇಗೆ ಅನುಕೂಲಕರನಾಗಿರಬಲ್ಲ ಎಂಬುದೇ ಆಗಿರುತ್ತದೆ. ತನ್ನ ಜೀವನದಲ್ಲಿ ಪರರಿಗೆ ಅನುಕೂಲಕರವಾಗುವ ಭಾವದಲ್ಲಿ ಸ್ವಯಂ ಸಕ್ಷಮ ಹಾಗೂ ಸಮರ್ಥರಾಗುವ ಆವಶ್ಯಕತೆಯಿದೆ. ಯಾರಿಗೆ ತಮ್ಮದೇ ಆದ ಶಕ್ತಿಯಿದೆಯೋ ಅಲ್ಲಿ ಅನುಕೂಲವುಂಟಾಗುತ್ತದೆ. ಅನುಕೂಲವಾಗುವುದರಲ್ಲಿ ಬೇರೆಯವರನ್ನು ಅವಲಂಬಿಸಬಾರದು. ಅವಲಂಬನೆಯಲ್ಲಿ ದೈನ್ಯತೆ ಹಾಗೂ ಸ್ವಾರ್ಥವಿದೆ, ಪರತಂತ್ರ ಭಾವವಿದೆ. ಪರಸ್ಪರಾನುಕೂಲತೆಯಲ್ಲಿ ಯಾವುದೇ ರೀತಿಯ ಪರತಂತ್ರ ಭಾವವಿಲ್ಲ. ಬೇರೆಯವರ ಬಗ್ಗೆ ಅನುಕೂಲ ಆಚರಣೆ ನಡೆಸಲು ಸ್ವಾತಂತ್ರ್ಯವಿದೆ. ಅಂದರೆ ಪರಸ್ಪರ ಅನುಕೂಲಕರವಾಗುವುದರಲ್ಲಿ ತಮ್ಮ ಪುರುಷಾರ್ಥವು ಪ್ರಕಟವಾಗುತ್ತದೆ. ಈ ರೀತಿ ವ್ಯಕ್ತಿಯಲ್ಲಿ ಹುದುಗಿರುವ ಶಕ್ತಿಗಳನ್ನು ಹೆಚ್ಚಾಗಿ ಉಪಯೋಗ ಮಾಡಿ ಮತ್ತೊಬ್ಬರಿಗೆ ಒಳಿತುಮಾಡುವ ಭಾವನೆಯಲ್ಲಿ ಸತತವಾಗಿ ವಿಕಸಿತಗೊಳಿಸಲು ಅವಕಾಶವಿರುತ್ತದೆ.

ಪರಸ್ಪರ ಅನುಕೂಲತೆಯಲ್ಲಿ ಪುರುಷಾರ್ಥ ಪ್ರಕಟವಾಗುವುದು ಸಾಧಾರಣ ಸಂಗತಿಯಲ್ಲಿ. ಇದೇ ಸಮಾಜದ ಧಾರಣಾ–ಶಕ್ತಿಯಾಗಿದೆ. ಇದನ್ನೇ ನಮ್ಮಲ್ಲಿ ಧರ್ಮವೆಂದು ಹೇಳಲಾಗಿದೆ. ಅಂದರೆ ಕರ್ತವ್ಯದ ಮಹತ್ವವು ನಮ್ಮ ಮುಂದಿದೆ. ಸಮಾಜದ ಧಾರಣೆಗಾಗಿ ಆಗುವ ನಮ್ಮ ಆ ಎಲ್ಲಾ ಕಾರ್ಯಗಳು 'ಧರ್ಮ'ವಾಗಿದೆ. 'ಧರ್ಮ'ವೇ ಎಲ್ಲದಕ್ಕಿಂತಲೂ ದೊಡ್ಡ ಪುರುಷಾರ್ಥವಾಗಿದ್ದು ಅದರ ಮೇಲೆ ಸಮಾಜದ ಬಾಕಿ ಎಲ್ಲಾ ಪುರುಷಾರ್ಥಗಳು ನಿಂತಿವೆ. ವ್ಯಕ್ತಿ ಹಾಗೂ ಸಮಾಜ ಎರಡರ ಪರಸ್ಪರ ಸಂಬಂಧಗಳಲ್ಲಿ ಸ್ವಾತಂತ್ರ್ಯವೇ ಧರ್ಮವಾಗಿದೆ. ಆದುದರಿಂದ ಧರ್ಮದ ವ್ಯಾಖ್ಯಾನ ನೀಡುವಾಗ ಮಹಾಭಾರತಕಾರರು ಸಾರಾಂಶ ರೂಪದಲ್ಲಿ ಹೀಗೆ ಹೇಳಿದ್ದಾರೆ: 'ಧರ್ಮವು ಎಷ್ಟೇ ಗೂಢವಾಗಿದ್ದರೂ ಸಹ ಪರರಿಗೆ ದುಃಖವನ್ನುಂಟುಮಾಡುವುದು ಅಧರ್ಮ ಹಾಗೂ ಪರರಿಗೆ ಆನಂದವನ್ನುಂಟುಮಾಡುವುದು ಧರ್ಮವೆಂಬುದು ಸರ್ವಸಾಮಾನ್ಯವಾಗಿದೆ. ಪರಸ್ಪರ ನಾವು ಒಬ್ಬರಿಗೊಬ್ಬರು ಅನುಕೂಲವಾಗಿರಬೇಕು ಎನ್ನುವುದು ಧರ್ಮ.' ಪರಸ್ಪರ ಅನುಕೂಲವಾದ ಇದೇ ವ್ಯವಹಾರ ಆಚರಣೆ, ಪ್ರಯತ್ನ, ಚಿಂತನೆ, ವ್ಯವಸ್ಥೆ ಶ್ರೇಷ್ಠವಾಗಿವೆ. ಎಲ್ಲರನ್ನು ಕುರಿತು ಯೋಚಿಸಿ ನಾವು ಕಾರ್ಯನಿರತರಾಗಬೇಕು ಹಾಗೂ ಎಲ್ಲರೂ ಹೀಗೆ ಆಚರಿಸಿದಲ್ಲಿ ಸುಖದ ಸುರಿಮಳೆಯಾಗುತ್ತದೆ. ಹೇಗೆ ಖೋ–ಖೋ ಆಟವಾಡುವ ಸಮಯ ನಾವು ಒಬ್ಬರಿಗೊಬ್ಬರು ಆಡುವ ಅವಕಾಶವನ್ನು ನೀಡುತ್ತೇವೆ ಆಗ ಸಂಪೂರ್ಣ ಆಟ ಆನಂದಮಯವಾಗುತ್ತದೆ. ಅದಕ್ಕೆ ಬದಲಾಗಿ ಯಾವುದೇ ವ್ಯಕ್ತಿ ಖೋ–ಖೋ ಆಟವಾಡುವ ವೇಳೆ ಅವಕಾಶ ಸಿಕ್ಕೊಡನೆ ನಾವು ಈ ಅವಕಾಶ ಸಿಕ್ಕಿದೆಯಾದ್ದರಿಂದ ಯಾರಿಗೂ ಖೋ ಕೊಡುವುದಿಲ್ಲ – ಕೇವಲ ತಾನೊಬ್ಬನೇ ಆಡುತ್ತಿರುವೆನು ಎಂದಲ್ಲಿ ಆಟವೆಲ್ಲಾ

ಹಾಳಾಗಿ ಹೋಗುವುದು. ಆಗ ಅವನು ಸ್ವಯಂ ಆನಂದವನ್ನು ಅನುಭವಿಸಲಾರ. ಬೇರೆ ಆಟಗಾರರೂ ಸಹ ಆನಂದವನ್ನು ಅನುಭವಿಸಲಾರರು. ಒಬ್ಬರಿಗೊಬ್ಬರು ಖೋ ನೀಡಿ ಆಡುವುದರಲ್ಲಿ ಆನಂದವಿದೆ. ಸರಿಯಾಗಿ ಅದೇ ರೀತಿ ಎಂದು ನಾವು ಒಬ್ಬರಿಗೊಬ್ಬರು ಪರಸ್ಪರ ಅನುಕೂಲವಾಗಿದ್ದು ಕಾರ್ಯಮಾಡುತ್ತೇವೆ ಅಂದರೆ ಧರ್ಮಾಚರಣೆಯಲ್ಲಿ ನಿರತರಾಗುವೆವೋ ಆಗ ಎಲ್ಲರೂ ಆನಂದದಿಂದ ಇರುತ್ತಾರೆ ಹಾಗೂ ಆ ಆನಂದದ ಒಂದು ಭಾಗ ನಮಗೆ ಸಹ ದೊರೆಯುತ್ತದೆ. ನಮ್ಮ ವೈಯಕ್ತಿಕ ವಿಕಾಸ ಉಂಟಾಗುತ್ತದೆ. ವ್ಯಕ್ತಿ ಹಾಗೂ ಸಮಾಜ ಇಬ್ಬರೂ ಸುಖವಾಗಿರುತ್ತಾರೆ.

ಪರಸ್ಪರ ಅನುಕೂಲತೆಯನ್ನು ಅವಲಂಬಿಸಿದ ಈ ವ್ಯವಹಾರಚಕ್ರವು ಸುಖದಾಯಕ ಮಾತ್ರವಲ್ಲದೇ ಚೈತನ್ಯಮಯವೂ ಆಗಿರುತ್ತದೆ. ಇದರಲ್ಲಿ ಭಾರದ ಅಸಹಾಯಕತೆ ಇರುವುದಿಲ್ಲ ಹೀಗೂ ಅನಿವಾರ್ಯತೆಯ ಬೇಡಿಕೆಯೂ ಸಹ ಇರುವುದಿಲ್ಲ. ಇದರಲ್ಲಿ ಬೇರೆಯವರ ಮುಂದೆ ಕೈಚಾಚುವ ಅಗತ್ಯವಿಲ್ಲ ಹಾಗೂ ನಮ್ಮ ಶಕ್ತಿ ಸ್ವಾತಂತ್ರ್ಯ ಶಕ್ತಿಯನ್ನು ಕೇವಲ ನಮಗಾಗಿಯೇ ಉಳಿಸಿಕೊಳ್ಳುವ ಲೋಭದ ಭಾವನೆಯೂ ಇರುವುದಿಲ್ಲ. ಇದರಲ್ಲಿ ಸ್ವಯಂ ಹೆಚ್ಚುಹೆಚ್ಚಾಗಿ ಉಪಯೋಗಿಯಾಗುವ ಸಾತ್ವಿಕ ಬಯಕೆಯಿದೆ. ಇದೇ ವೈಶಾಲ್ಯತೆ. ಸಂಕುಚಿತ ಮನೋಭಾವದಲ್ಲಿ ದುಃಖ ಹಾಗೂ ವೈಶಾಲ್ಯತೆಯಲ್ಲಿ ಸುಖವಿದೆ ಎಂದು ಹೇಳಲಾಗಿದೆ. ಇದು ನನ್ನದಲ್ಲ ಸಮಾಜದ್ದು ಆದುದರಿಂದ ಸಮಾಜಹಿತದಲ್ಲಿ ಎಲ್ಲವನ್ನು ಹೂಡಿಕೆ ಮಾಡುವ ಭಾವದಲ್ಲಿ ಸಾರ್ಥಕತೆಯಿದೆ. ಸಂತೋಷವಿದೆ. ಈ ಸಂತೋಷವನ್ನು ಹೊರತುಪಡಿಸಿ ಮತ್ಯಾವ ಅನ್ಯಸುಖವಿದೆ? ಅಧಿಕಾಧಿಕ ವಿಕಾಸ, ಅಧಿಕಾಧಿಕ ಶಕ್ತಿ ಹಾಗೂ ಅಧಿಕಾಧಿಕ ಸಮರ್ಪಣೆಯ ಈ ಕ್ರಮವೇ ವ್ಯಕ್ತಿಗೆ ತನ್ನ ಸ್ವಾತಂತ್ರ್ಯದ ವಾಸ್ತವಿಕ ಅರ್ಥವನ್ನು ನೀಡುತ್ತದೆ. ಈ ವ್ಯವಹಾರ ಚಕ್ರ ಸೃಷ್ಟಿಯ ಸಂಚಾಲನೆಗೆ ಸಂಬಂಧಿಸಿದ ನಿಯಮಗಳಿಗೆ ಅನುಕೂಲವಾಗಿದೆ. ಆದುದರಿಂದ ಈ ಸುಖ ಎಷ್ಟೋಪಟ್ಟು ಹೆಚ್ಚಾಗುತ್ತದೆ. ಸಮಸ್ತ ಸೃಷ್ಟಿಯ ಸಂಚಾಲನೆಗೆ ಆಧಾರವೂ ಇದೇ ಆಗಿದೆ. ಒಂದು ಚಿಕ್ಕ ಉದಾಹರಣೆ ತೆಗೆದುಕೊಳ್ಳೋಣ ಮನುಷ್ಯ ಹಾಗೂ ಸಸ್ಯರಾಶಿಯ ನಡುವೆ ಎಂತಹ ಮಧುರ ಕೊಳು–ಕೊಡೆ ನಡೆದು ಬಂದಿದೆ. ಮನುಷ್ಯನಿಗೆ ಬೇಕಾದ ಆಮ್ಲಜನಕವು ಅವನಿಗೆ ಸಸ್ಯರಾಶಿಯಿಂದ ದೊರೆಯುತ್ತದೆ. ಹಾಗೂ ವನಸ್ಪತಿಗೆ ಅಗತ್ಯವಾಗಿ ಬೇಕಾದ ಕಾರ್ಬನ್–ಡೈ–ಆಕ್ಸೈಡ್‌ನ್ನು ಅದು ಮನುಷ್ಯನಿಂದ ಪಡೆಯುತ್ತದೆ. ಪರಸ್ಪರ ಅನುಕೂಲ ಸ್ಥಿತಿಯಲ್ಲಿ ಈ ವ್ಯವಸ್ಥೆಯಿದೆ. ಈ ಸೃಷ್ಟಿಯಲ್ಲಿ ಯಾರೂ ಯಾವುದೇ ವಸ್ತುವನ್ನು ಯಾವುದೇ ಕಾರಣಕ್ಕಾಗಿ ತಡೆಹಿಡಿಯಲು ತಯಾರಾಗಿಲ್ಲ. ಪ್ರತಿಯೊಂದು ಗಿಡವು ತನ್ನನ್ನು ತಾನು ಸಂಪೂರ್ಣವಾಗಿ ಸೃಷ್ಟಿಗಾಗಿ ಸಮರ್ಪಿಸುತ್ತಿದೆ. ಹಾಗೂ



ಪ್ರತಿಯೊಂದು ಕಣವೂ ಅದಕ್ಕೆ ಹೊಸ ಚೈತನ್ಯವನ್ನು ನೀಡಲು ಮಾಗ್ನವಾಗಿರುತ್ತದೆ ಎಂತಹ ಸ್ವರ್ಗೀಯ ಆನಂದ ಹರಡಿಕೊಂಡಿತ್ತದೆ. ಇದೆಲ್ಲಾ ಪರಸ್ಪರ ಅನುಕೂಲತೆಯಿಂದ ಉಂಟಾಗಿದೆ. ಪರಸ್ಪರ ವಿರೋಧ ಅಥವಾ ಸಂಘರ್ಷದ ಪ್ರಶ್ನೆಯೇ ಇಲ್ಲ. ಅವಲಂಬನೆಯೂ ಇಲ್ಲ, ನಿರಪವಾದ ರೂಪದಿಂದ ಎಲ್ಲವೂ ಪರಸ್ಪರ ಅನುಕೂಲತೆಯಿಂದ ಸಂಚಾಲನೆಗೊಳಗಾಗುತ್ತದೆ. ಹೀಗೆ ಸೃಷ್ಟಿ–ಸಂಚಾಲನೆಯ ನಿಯಮಗಳೊಡನೆ ವ್ಯಕ್ತಿ ತಾರತಮ್ಯವನ್ನು ಅನುಭವಿಸಿದಾಗ ಸಮಸ್ತ ಸೃಷ್ಟಿಯೂ ಅವನಿಗೆ ಆನಂದಮಯವಾಗಿ ಕಂಡುಬರುತ್ತದೆ. ಪರಸ್ಪರ ಕೊಡುಗೆಯೇ ಜೀವನ, ತಡೆಹಿಡಿಯುವುದೇ ಮೃತ್ಯುವಾಗಿದೆ. ಮೃತ್ಯುವನ್ನು ತ್ಯಜಿಸಿ ನಾವು ಜೀವನವನ್ನು ವರಿಸಬೇಕು. ಅಮರತ್ವವನ್ನು ವರಿಸಬೇಕು, ಮೃತ್ಯುವನ್ನು ಗೆಲ್ಲಬೇಕು. ಆದುದರಿಂದ ಭಾರತೀಯ ಋಷಿ–ಮುನಿಗಳು ಈ ವ್ಯವಸ್ಥೆಯನ್ನು ಸ್ವೀಕರಿಸಿರುವವರನ್ನು "ಅಮೃತಸ್ಯ ಪುತ್ರಾಃ" (ಅಮರತ್ವದ ಪುತ್ರರು) ಎಂದು ಸಂಬೋಧನೆ ಮಾಡಿದ್ದಾರೆ.

ಇದು ನಮ್ಮ ಸಾಮಾಜಿಕ ಜೀವನದ ಮುಖ್ಯ ಆಧಾರಶಿಲೆ. ಇದೇ ಆಧಾರದ ಮೇಲೆ ನಮ್ಮಲ್ಲಿ ಮಾನವ ಜೀವನ ರಚನೆಯನ್ನು ವ್ಯವಸ್ಥಿತಗೊಳಿಸಲಾಯಿತು. ವರ್ಣಧರ್ಮವನ್ನು ಸ್ಥಾಪಿಸಲಾಯಿತು. ಈ ವ್ಯವಸ್ಥೆಯಲ್ಲಿ ವ್ಯಕ್ತಿಗಳ, ಸಮೂಹಗಳ, ಸಮಾಜದ, ರಾಜ್ಯದ ಅಥವಾ ಅನ್ಯ ಎಷ್ಟೋ ರೀತಿಯ ಶಕ್ತಿಗಳ ಬೇರೆ–ಬೇರೆ ಹಾಗೂ ಪರಸ್ಪರ ವಿರೋಧಿ ರೂಪಗಳನ್ನು ಕುರಿತು ವಿಚಾರ ಮಾಡಿಲ್ಲ. ಪಾಶ್ಚಾತ್ಯವು ಹೇಗೆ ಈ ಎಲ್ಲಾ ಶಕ್ತಿಗಳನ್ನು ಪರಸ್ಪರ ವಿರೋಧಿ ಹಾಗೂ ಪರಸ್ಪರ ಸಂಘರ್ಷಯುಕ್ತವೆಂದು ತಿಳಿದು ವಿಚಾರ ಮಾಡಿತ್ತೋ ಭಾರತದಲ್ಲಿ ಹಾಗೆ ಆಗಲಿಲ್ಲ. ಭಾರತವು ಭೇದವನ್ನು ನೋಡುವುದು ಅಥವಾ ಭೇದವನ್ನು ನಿರ್ಮಿಸುವುದು ತಪ್ಪು ಎಂದು ತಿಳಿದಿದೆ. ಭೇದಭಾವವನ್ನು ಆಧಾರವನ್ನಾಗಿರಿಸಿ ಯಾವುದೇ ವ್ಯವಸ್ಥೆಯು ಮುನ್ನಡೆಯಲಾಗದು. ಭೇದ–ಭಾವನೆ ಸೃಷ್ಟಿಯ ನಿಯಮಗಳಿಗೆ ವಿರುದ್ಧವಾಗಿದೆ. ಇದು ವಿನಾಶಕ್ಕೆ ಕಾರಣವಾಗುತ್ತದೆ, ನಿರ್ಮಾಣಕ್ಕೆ ಅಲ್ಲ. ಆದುದರಿಂದ ಯಾವ ವರ್ಣ–ವ್ಯವಸ್ಥೆಯ ಚರ್ಚೆ ನಾವು ಇಲ್ಲಿ ಮಾಡುತ್ತಿದ್ದೇವೆಯೋ ಅದರಲ್ಲಿ ಸ್ವಭಾವವಿದೆಯೇ ಹೊರತು ಭೇದ–ಭಾವನೆ ಇಲ್ಲ. ಸರ್ವಸಮಭಾವವೇ ವರ್ಣವ್ಯವಸ್ಥೆಯಾಗಿದೆ. ಪ್ರತಿಯೊಬ್ಬ ವ್ಯಕ್ತಿ ಹಾಗೂ ವ್ಯಕ್ತಿ ಸಮೂಹಕ್ಕೆ ವಿಕಾಸದ ಸ್ವಾತಂತ್ರ್ಯ ಹಾಗೂ ಅನುಕೂಲ ಆಚರಣೆಯ ದಾಯಿತ್ವವನ್ನು ವಹಿಸಿ ಈ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ಬ್ರಾಹ್ಮಣನು ಯೋಚಿಸಬೇಕಾದುದೆಂದರೆ ಸಂಪೂರ್ಣ ಸಮಾಜದಲ್ಲಿ ಜ್ಞಾನದಾನ ಮಾಡುವನು. ಸರಿಯಾದ ಸಂಸ್ಕಾರ ನೀಡುವನು. ಜ್ಞಾನ–ದಾನಕ್ಕಾಗಿ ಬ್ರಾಹ್ಮಣನು ಎಷ್ಟು ಸಂಯಮ, ಸಾಧನೆ, ತಪ, ಅಧ್ಯಯನದ ಕಷ್ಟ ಅನುಭವಿಸಬೇಕೋ ಅದೆಲ್ಲಾ ಅವನ ಪಾಲಿಗೆ ಧರ್ಮವಾಗುತ್ತದೆ.

ಇದೇ ಅವನಿಂದ ನೆರವೇರುವ ಯಜ್ಞಕರ್ಮ. ಯಜ್ಞವನ್ನು ಹಲವರು ಹವನಕುಂಡವನ್ನು ನಿರ್ಮಿಸಿ ಮಂತ್ರೋಚ್ಚಾರಣೆ ಮಾಡುತ್ತಾ ಆಹುತಿ ನೀಡುವ ಕ್ರಿಯೆಯವರೆಗೂ ಸೀಮಿತಗೊಳಿಸುತ್ತಾರೆ, ಇದು ತಪ್ಪು. ಇದು ಯಜ್ಞ-ವಿಧಿಯಾಗಿರುತ್ತದೆ, ಆದರೆ ಕೇವಲ ಇದೇ ಯಜ್ಞವಾಗಲಾರದು. ಯಜ್ಞಕರ್ತನ ಜೀವನವೇ ವಾಸ್ತವದಲ್ಲಿ ಯಜ್ಞಕುಂಡವಾಗಿದೆ. ಯಜ್ಞ ಮಾಡುವಾಗ ಹೀಗೆ ಹೇಳಲಾಗುತ್ತದೆ. "ಇದಂ ಇಂದ್ರಾಯ, ಇದಂನ ಮಮ" ಇಲ್ಲಿ ಏನೆಲ್ಲಾ ನನ್ನದಾಗಿದೆಯೋ ಅದೆಲ್ಲಾ ಇಂದ್ರನಿಗಾಗಿ, ನನ್ನದಲ್ಲ. ಮತ್ತೊಬ್ಬರಿಗಾಗಿ ನಾನು ಸಲ್ಲಿಸಬೇಕಾದ ಕರ್ತವ್ಯಗಳನ್ನು ನಿಭಾಯಿಸಲು ಯಾವ ಪರಸ್ಪರ ಅನುಕೂಲತೆಯ ಆವಶ್ಯಕತೆಯಿದೆಯೋ ಅದೇ ದೃಷ್ಟಿಯಿಂದ ಜೀವನದಲ್ಲಿ ಪ್ರಯತ್ನಶೀಲರಾಗುವುದು ಯಜ್ಞವಾಗುತ್ತದೆ. ಈ ಯಜ್ಞದ ಮೂಲಭಾವವನ್ನು ಸ್ಪಷ್ಟಪಡಿಸುವ ಒಂದು ಕಥೆಯು ಮಹಾಭಾರತದಲ್ಲಿದೆ. ಧರ್ಮರಾಜ ಯುಧಿಷ್ಠಿರನು ರಾಜಸೂಯ ಯಜ್ಞವನ್ನು ಮಾಡಿದನು. ಯಜ್ಞ ಸಮಾಪ್ತವಾದ ವೇಳೆ ಎಲ್ಲರೂ ಸಂತೋಷಗೊಂಡರು. ಎಲ್ಲರೂ ಈ ಯಜ್ಞಕ್ಕೆ ಮಿಗಿಲಾದ ಮತ್ತೊಂದು ಯಜ್ಞವಿಲ್ಲವೆಂದು ತಿಳಿದರು. ಪಾಂಡವರು, ಭಗವಾನ್ ಕೃಷ್ಣ ಹಾಗೂ ರಾಜರಲ್ಲಿ ಈ ಯಜ್ಞದ ಮಹಾನ್ ಕೊಡುಗೆಗಳನ್ನು ಕುರಿತು ಚರ್ಚೆ ನಡೆಯುತ್ತಿತ್ತು. ಅದೇ ವೇಳೆಗೆ ಅಲ್ಲಿಗೆ ಒಂದು ಮುಂಗುಸಿಯು ಸಭಾಮಂಟಪದ ನಡುವೆ ಬಂದು ಯಜ್ಞಸ್ಥಳದಲ್ಲಿ ಬಿದ್ದು ಹೊರಳಾಡತೊಡಗಿತು. ತನ್ನ ಅರ್ಧಶರೀರ ಬಂಗಾರದ್ದಾಗಿದ್ದನ್ನು ಕಂಡು ಅದು ಆಶ್ಚರ್ಯಗೊಂಡಿತು. ಅಲ್ಲಿದ್ದವರಿಗೆಲ್ಲಾ ಈ ಮುಂಗುಸಿಯ ಅರ್ಧಶರೀರ ಬಂಗಾರವಾಗಿರುವುದನ್ನು ಕಂಡು ಆಶ್ಚರ್ಯವಾಯಿತು. ಈ ಸ್ಥಳದಲ್ಲಿರುವ ಯಜ್ಞಭೂಮಿಯಲ್ಲಿ ಅದು ಏಕೆ ಓಡಾಡುತ್ತದೆ ಎಂದು ತಿಳಿದುಕೊಳ್ಳುವ ಉತ್ಸುಕತೆ ಹೆಚ್ಚಾದಾಗ ಭಗವಾನ್ ಕೃಷ್ಣನು ಹೀಗೆ ಹೇಳಿದನು: ಈ ಮುಂಗುಸಿಯು ಹಿಂದೆ ನೋಡಿರುವ ಯಜ್ಞವು ಈ ರಾಜಸೂಯ ಯಜ್ಞಕ್ಕಿಂತಲೂ ದೊಡ್ಡದಾದ್ದು. ಈಗ ಎಲ್ಲರೂ ಆಶ್ಚರ್ಯಗೊಂಡು ಅಂತಹ ಯಜ್ಞ ಯಾವುದು, ಎಂದು ನಡೆದಿರಬಹುದು? ಕೊನೆಗೆ ಭಗವಾನ್ ಕೃಷ್ಣನು ಹೀಗೆ ಹೇಳಿದನು. ಒಮ್ಮೆ ಭೀಷಣ ಬರಗಾಲವುಂಟಾಯಿತು. ಒಂದು ಬ್ರಾಹ್ಮಣ ಕುಟುಂಬವು ಆ ಬರಗಾಲದಲ್ಲಿ ಅನೇಕ ದಿನಗಳಿಂದ ಹಸಿವೆಯಲ್ಲಿ ತೊಳಲುತ್ತಿತ್ತು. ಒಂದು ದಿನ ಬ್ರಾಹ್ಮಣನಿಗೆ ಯಾವುದೋ ಸ್ಥಳದಲ್ಲಿ ಸ್ವಲ್ಪ ಹುರಿದಹಿಟ್ಟು ಭಿಕ್ಷೆಯ ರೂಪದಲ್ಲಿ ದೊರೆಯಿತು. ಅವನು ಪ್ರಸನ್ನನಾಗಿ ಹುರಿಹಿಟ್ಟು ತೆಗೆದುಕೊಂಡು ಮನೆಗೆ ಬಂದನು. ಬ್ರಾಹ್ಮಣನ ಮನೆಯಲ್ಲಿ ಅವನ ಪತ್ನಿ, ಪುತ್ರ ಹಾಗೂ ಸೊಸೆ ಹೀಗೆ ಒಟ್ಟಾರೆ ನಾಲ್ಕು ಮಂದಿಯಿದ್ದರು. ಅವನು ಆ ಹುರಿಹಿಟ್ಟನ್ನು ಸರಿಯಾಗಿ ನಾಲ್ಕು ಭಾಗಗಳನ್ನಾಗಿ ಮಾಡಿದನು. ಹಿಟ್ಟನ್ನು ನೀರಿನಲ್ಲಿ ಕಲಸಿ ಪ್ರತಿಯೊಬ್ಬರಿಗೂ



ಕೊಟ್ಟನು ಹಾಗೂ ಇಷ್ಟೊಂದು ದಿವಸಗಳ ನಂತರ ಈ ಸ್ವಲ್ಪ ಹಿಟ್ಟು ಹೊಟ್ಟೆ ತಲುಪಿಸುವ ಸ್ಥಿತಿಯಾದುದರಿಂದ ಕೈ ಜೋಡಿಸಿ ಭಗವಂತನಿಗೆ ಧನ್ಯವಾದಗಳನ್ನು ಸಮರ್ಪಿಸಿದನು. ಭಗವಂತನನ್ನು ಸ್ಮರಿಸಿ ಅವರು ಹಿಟ್ಟನ್ನು ಇನ್ನೇನು ತಿನ್ನುವುದರಲ್ಲಿದ್ದು, ಅಷ್ಟರಲ್ಲಿ ಬಾಗಿಲಿನ ಬಳಿ ಒಬ್ಬ ಹಸಿದ ಅತಿಥಿ ಬಂದು ನಿಂತನು. ಬಹಳ ದಿನಗಳಿಂದ ಅವನು ಹಸಿವಿನಿಂದ ಇದ್ದನು. ಬ್ರಾಹ್ಮಣನು ತನ್ನ ಪಾಲನ್ನು ಅವನಿಗೆ ತಿನ್ನಲು ನೀಡಿದನು. ಆದರೆ ಆ ಅತಿಥಿಯ ಹಸಿವು ಎಷ್ಟು ಇತ್ತೆಂದರೆ ಅವನು ಮತ್ತಷ್ಟು ತಿನ್ನಲು ಬೇಡಿದನು. ಆಗ ಬ್ರಾಹ್ಮಣಿಯು ಹಾಗೂ ನಂತರ ಪುತ್ರ ಹಾಗೂ ಸೊಸೆ ಸಹ ತಮ್ಮ ತಮ್ಮ ಪಾಲನ್ನು ಒಬ್ಬರಾದ ನಂತರ ಮತ್ತೊಬ್ಬರು ಆ ಅತಿಥಿಗೆ ಕೊಡುಗೆಯಾಗಿ ನೀಡಿದರು. ಅತಿಥಿ ಸಂತುಷ್ಟನಾಗಿ ಅಲ್ಲಿಂದ ಹೊರಟುಹೋದನು. ಇದನ್ನು ನೋಡಿ ಆ ನಾಲ್ಕು ಜನರು ಬಹಳ ಆನಂದಗೊಂಡರು. ಆದರೆ ಹಸಿವೆಯಿಂದ ಆ ನಾಲ್ಕು ಜನರು ಪ್ರಾಣ ತ್ಯಾಗ ಮಾಡಿದರು. ಯಾವ ಸ್ಥಳದಲ್ಲಿ ಅತಿಥಿಯು ಹುರಿಹಿಟ್ಟು ತಿಂದು ನೀರು ಕುಡಿದಿದ್ದನೋ ಅಲ್ಲಿ ಎಂಜಲು ನೀರಿನ ಕೆಲವು ಹನಿಗಳಿದ್ದವು. ಈ ಮುಂಗುಸಿಯು ಹುರಿಹಿಟ್ಟಿನ ಸುಗಂಧವನ್ನು ಹೀರುತ್ತಾ ಆ ಹನಿಗಳ ಮೇಲೆ ನಡೆದಾಗ ಆ ಹನಿಗಳ ಸ್ಪರ್ಶದಿಂದ ಇದರ ಅರ್ಧ ಶರೀರ ಬಂಗಾರವಾಯಿತು. ಅಂದಿನಿಂದ ಈ ಮುಂಗುಸಿಯು ಯಜ್ಞ ಸ್ಥಳಗಳಿಗೆ ಹೋಗುತ್ತಿದೆ. ಯಾವುದಾದರೂ ಆ ರೀತಿಯ ಶ್ರೇಷ್ಠ ಯಜ್ಞ ಕಂಡುಬಂದಲ್ಲಿ ಅದರ ಸ್ಪರ್ಶದಿಂದ ತನ್ನ ಉಳಿದ ಅರ್ಧ ಶರೀರವು ಚಿನ್ನವಾಗಲಿ ಎಂದು. ಈಗ ಈ ಮುಂಗುಸಿಗೆ ಈ ಜಯ್ಞದಲ್ಲಿ ನಿರಾಶೆಯಾಯಿತು ಏಕೆಂದರೆ ರಾಜಸೂಯ ಯಜ್ಞ ಆ ಬ್ರಾಹ್ಮಣ ಪರಿವಾರವು ಮಾಡಿದಂತಹ ಯಜ್ಞಕ್ಕಿಂತ ಶ್ರೇಷ್ಠವಾಗಿರಲಿಲ್ಲ. ಈ ಕಥೆಯಿಂದ ಯಜ್ಞದ ಮೂಲಭಾವನೆ ಬಹಳ ಚೆನ್ನಾಗಿ ಸ್ಪಷ್ಟವಾಗಿದೆ. ತಮ್ಮ ಕರ್ತವ್ಯ ಕರ್ಮಗಳಿಗಾಗಿ ಸರ್ವಸ್ವವನ್ನು ಸಮರ್ಪಿಸುವ ಭಾವನೆ ಮುಖ್ಯ ಸಂಗತಿಯಾಗಿದೆ. ಇದು ಪರಸ್ಪರಾನುಕೂಲತೆಗೆ ಆಧಾರವಾಗಿದೆ. ಇದನ್ನೇ ತ್ಯಾಗವೆನ್ನಲಾಗಿದೆ. ಕೇವಲ ಬಿಡುವುದು ತ್ಯಾಗವಾಗುವುದಿಲ್ಲ. ಮತ್ತೊಬ್ಬರಿಗೆ ಸುಖ ನೀಡುವ ದೃಷ್ಟಿಯಿಂದ ಮಾಡುವ ಕಾರ್ಯವೇ ತ್ಯಾಗವಾಗಿದೆ. ಈ ಯಜ್ಞ ಅಂದರೆ ತ್ಯಾಗವೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಇಂತಹ ತ್ಯಾಗಮಯ ಜೀವನವನ್ನು ಸ್ವೀಕರಿಸುವಂತಹ ಬ್ರಾಹ್ಮಣ, ಸಮಾಜಕ್ಕಾಗಿ ಜ್ಞಾನದಾನದ ವ್ರತ ಸ್ವೀಕರಿಸುತ್ತಾನೆ. ಇದೇ ರೀತಿ ಉಳಿದ ಎಲ್ಲ ವರ್ಣಗಳ ಕರ್ತವ್ಯ-ಕರ್ಮ ನಿರ್ಧರಿಸಲ್ಪಟ್ಟಿವೆ ಹಾಗೂ ಈ ಯಜ್ಞಭಾವನೆಯಿಂದ ಅವರು ಶ್ರೇಷ್ಠರಾದರು. ಇದೇ ಭಾರತೀಯ ಜೀವನ ರಚನೆಯ ಸ್ವರೂಪವಾಗಿದೆ.

ಈ ವ್ಯವಸ್ಥೆಯನ್ನು ನಾವು ಪಶ್ಚಿಮದ ಕಣ್ಣುಗಳಿಂದ ನೋಡಿದಲ್ಲಿ ನಮಗೆ ಅರ್ಥವಾಗುವುದು ಬಹಳ ಕಷ್ಟ ಇಂದು ವರ್ಣವ್ಯವಸ್ಥೆಯಲ್ಲಿ ಬಹಳ ವಿಕೃತಿಗಳು

ಬಂದಿರಬಹುದು ಹಾಗೂ ಆ ವಿಕೃತಿಗಳನ್ನು ದೂರ ಮಾಡಲೇಬೇಕಾಗಿದೆ. ಆದರೆ ಇದರ ಮೂಲಭಾವನೆಯ ಯಾವ ಪ್ರಶ್ನೆಯಿದೆಯೋ ಇದು ಪಾಶ್ಚಾತ್ಯ ದೃಷ್ಟಿಯಿಂದ ನೋಡಿ ತಿಳಿಯಲು ಆಗುವುದಿಲ್ಲ. ಪಶ್ಚಿಮವು ಸಮಾಜ ರಚನೆಯ ಆಧಾರದಲ್ಲಿ ಸ್ಪರ್ಧೆ, ಪ್ರತಿದ್ವಂದ್ವಗಳನ್ನು ಪ್ರಮುಖವೆಂದು ತಿಳಿಯಲಾಗಿದೆ. ಸ್ವಾರ್ಥಮಯ ಸಂಘರ್ಷವನ್ನು ಮಾನವನ ಮೂಲಪ್ರವೃತ್ತಿಯೆಂದು ತಿಳಿದು ನಾಲ್ಕು ಕಡೆಯ ಸ್ವರೂಪದಲ್ಲಿ ಕೊನೆಯಿಲ್ಲದ ಪ್ರತಿಸ್ಪರ್ಧೆಯನ್ನು ಪ್ರಗತಿಯ ಅಳತೆಗೋಲು ಎಂದು ತಿಳಿಯಲಾಗಿದೆ. ನಿರಂತರ ಹಾಗೂ ಪ್ರತಿಮಟ್ಟದಲ್ಲಿ ಸಂಘರ್ಷದ ಕಲ್ಪನೆಯು ಪಾಶ್ಚಾತ್ಯ ಜೀವನ–ದರ್ಶನದ ಆಧಾರವಾಗಿದೆ. ಆದುದರಿಂದ ಅಲ್ಲಿ ಪರಸ್ಪರ ಅನುಕೂಲತೆಯ ಪ್ರಶ್ನೆಯೇ ಏಳುವುದಿಲ್ಲ. ಪರಾವಲಂಬನೆಯು ಸ್ವಾರ್ಥವಿರುವವರೆಗೂ ಇರುತ್ತದೆ. ಸಂಘರ್ಷದಲ್ಲಿ ಯಾರು ಎಷ್ಟು ಸಶಕ್ತನೋ ಅವನು ಅಷ್ಟೇ ಜೀವಂತವಾಗಿರಲು ಅಧಿಕಾರಿಯಾಗುತ್ತಾನೆ. ಆದುದರಿಂದ ಅಲ್ಲಿ ನಾಲ್ಕು ಮಂದಿ ಒಟ್ಟಾಗಿದ್ದಲ್ಲಿಯೂ ಅದು ಕೇವಲ ಸಂಘರ್ಷಕ್ಕಾಗಿ ಒಟ್ಟುಗೂಡಿದ ಶಕ್ತಿ ಬೇಕಾಗುವುದು. ಒಬ್ಬಂಟಿಗನಾಗಿ ವ್ಯಕ್ತಿ ಸರಿಯಾಗಿ ಸಂಘರ್ಷ ಮಾಡಲಾರ ಆದುದರಿಂದ ನಾಲ್ಕು ಜನ ಸೇರಿ ಶಕ್ತಿಯನ್ನು ಗಳಿಸುತ್ತಾರೆ. ಯಾವ ವರ್ಗಗಳುಂಟಾಗುವುದೋ ಅದೆಲ್ಲಾ ಪರಸ್ಪರ ಹೊಡೆದಾಡಲೆಂದೇ ಆಗಿದೆ. ಅಲ್ಲಿಯ ಟ್ರೇಡ್‌ಯೂನಿಯನ್‌ಗಳು ಸ್ವಾರ್ಥಗಳ ರಕ್ಷಣೆಗಾಗಿ ಇವೆ. ಭಾರತದಲ್ಲಿ ಅಲ್ಲಿಯ ಹಾಗೆ ಟ್ರೇಡ್ ಯೂನಿಯನ್‌ಗಳು ಇರಲಿಲ್ಲ. ವಿಭಿನ್ನ ಕಾಯಕಗಳಲ್ಲಿ ತೊಡಗಿರುವವರನ್ನು ಭಾರತದಲ್ಲಿ ಜಾತಿಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ ಇದೇ ಭಾರತದಲ್ಲಿ ಜಾತಿ ವ್ಯವಸ್ಥೆ ನಡೆದು ಬಂದಿದೆ. ಕಮ್ಮಾರ, ಚಮ್ಮಾರ, ಸವಿತಾ ಸಮಾಜದವರು, ಬಡಗಿ, ಮೀನುಗಾರ, ಮಾಲಿ ಮುಂತಾದ ಎಷ್ಟೋ ಪ್ರಕಾರದ ಜಾತಿಗಳು ಉಂಟಾಗಿವೆ. ಮೇಲ್ನೋಟಕ್ಕೆ ಇವುಗಳನ್ನು ಸಹ ಟ್ರೇಡ್ ಯೂನಿಯನ್ಸ್ ಎಂದು ಕರೆಯಲಾಗುತ್ತದೆ. ಆದರೆ ಪಾಶ್ಚಾತ್ಯಕ್ಕೂ ಹಾಗೂ ಇವುಗಳಿಗೂ ಆಕಾಶ ಭೂಮಿಯಷ್ಟು ಅಂತರವಿರುತ್ತದೆ. ಇವುಗಳಲ್ಲಿ ಪರಸ್ಪರ ಸಂಘರ್ಷ, ಸ್ಪರ್ಧೆಯಿಲ್ಲದೆ ಪೂರಕತೆ, ಸಾಮರಸ್ಯ ಹಾಗೂ ಸಹಕಾರವಿರುತ್ತದೆ. ಏಕಾತ್ಮ ಭಾವನೆಯಿರುತ್ತದೆ. ಸಮಾಜಸೇವೆಗಾಗಿ ಎಲ್ಲರ ಕೊಡುಗೆಯಿರುತ್ತದೆ. ಇಂದಿನ ವಿಕೃತ ಹಾಗೂ ಶಿಥಿಲ ವ್ಯವಸ್ಥೆಯಲ್ಲಿಯೂ ನಾವು ಈ ಜಾತಿಗಳ ನಡುವೆ ಪರಸ್ಪರ ಸಹಕಾರವನ್ನು ನೋಡಬಹುದಾಗಿದೆ. ಅನೇಕ ಜಾತಿಗಳಿದ್ದರೂ ಎಲ್ಲವೂ ಒಂದೇ ವ್ಯವಸ್ಥೆಯ ಅಂಗವಾಗಿದೆ. ಹೇಗೆ ಶರೀರದ ವಿಭಿನ್ನ ಅಂಗಗಳಿದ್ದರೂ ಎಲ್ಲದರ ಕಾರ್ಯ ಉದ್ದೇಶ ಒಂದೇ ಆಗಿರುತ್ತದೆ. ಆ ಅಂಗಗಳು ಪರಸ್ಪರ ಹೊಡೆದಾವುದಿಲ್ಲ. ನಡುವೆ ಪ್ರತಿಸ್ಪರ್ಧೆಯುಂಟಾಗುವುದು ಹಾಗೂ ಯಾವುದು ಇದರಲ್ಲಿ ಶಕ್ತಿಶಾಲಿಯೋ ಅದು ಜೀವಂತವಾಗಿರುತ್ತದೆ. ಈ ಕುರಿತಾದ ಒಂದು ರೋಚಕ ಕಥೆ ಭಾರತೀಯ



ಸಮಾಜದಲ್ಲಿ ಪ್ರಚಲಿತವಾಗಿದೆ. ಒಂದು ಬಾರಿ ಶರೀರದ ವಿಭಿನ್ನ ಅಂಗಗಳಲ್ಲಿ ಸಂಘರ್ಷವಾಯಿತು. ಕೈ, ಕಾಲು, ಮೂಗು ಕಣ್ಣು, ಬಾಯಿ, ಹಲ್ಲು, ನಾಲಗೆ ಮುಂತಾದ ಎಲ್ಲಾ ಉಪಾಂಗಗಳು ತಮ್ಮ–ತಮ್ಮ ಮಹತ್ವವನ್ನು ಕುರಿತು ಪ್ರಶಂಸೆ ಮಾಡತೊಡಗಿದವು. ಪ್ರತಿಯೊಂದು ಅಂಗಕ್ಕೂ ತಾನಿಲ್ಲದೆ ಶರೀರದ ಕೆಲಸವಾಗುವುದಿಲ್ಲವೆಂಬ ಗರ್ವ ಉದಯಿಸಿತು. ಪ್ರತಿಯೊಂದು ತನ್ನನ್ನು ತಾನು ಸರ್ವಶ್ರೇಷ್ಠವೆಂದು ತಿಳಿದು ಒಂದಾದನಂತರ ಮತ್ತೊಂದು ಶರೀರದಿಂದ ಬೇರೆಯಾಗತೊಡಗಿತು. ಕೈಗಳು ಕೆಲಸಮಾಡುವುದನ್ನು ನಿಲ್ಲಿಸಿದವು. ಇದರಿಂದ ಶರೀರಕ್ಕೆ ಬಹಳ ಕಷ್ಟವಾಯಿತು ಆದರೆ ಹೇಗೋ ಕೆಲಸ ಮುಂದೆ ನಡೆಯಿತು. ನಂತರ ಕೈಗಳು ತಾವಿಲ್ಲದೆಯೋ ಶರೀರ ತನ್ನ ಕೆಲಸವನ್ನು ನಡೆಸಿಕೊಳ್ಳುತ್ತಿದೆ ಎಂದು ಯೋಚಿಸಿ ತನ್ನ ಸೋಲನ್ನು ಒಪ್ಪಿಕೊಂಡಿತು. ಹೀಗೆ ಪ್ರತಿಯೊಂದು ಅಂಗವೂ ತನ್ನ ಶಕ್ತಿಯನ್ನು ಪರೀಕ್ಷಿಸಿಕೊಂಡಿತು. ಆದರೂ ಶರೀರದ ಕೆಲಸ ಮುಂದೆ ನಡೆಯಿತು. ಅದನ್ನು ನೋಡಿ ಶರೀರವನ್ನು ತೊರೆದು ತಮ್ಮ ಭಿನ್ನ ಶಕ್ತಿಯಿಲ್ಲವೆಂಬುದನ್ನು ಅರಿತುಕೊಂಡವು. ಆದರೆ ಈ ಜಗಳದಲ್ಲಿ ಶರೀರಕ್ಕೆ ಉಂಟಾದ ತೊಂದರೆಯಿಂದ ಪ್ರಾಣದೇವತೆಯು 'ನೋಡಿ! ಈ ಬಾರಿ ನಾನು ಹೊರಟೆ!' ಎನ್ನತೊಡಗಿತು. ಪ್ರಾಣ ಶರೀರವನ್ನು ತೊರೆಯಲು ತಯಾರಾದಾಗ ಎಲ್ಲಾ ಅಂಗಗಳು ಬಹಳ ದುರ್ಬಲಗೊಂಡವು. ಕಣ್ಣುಗಳ ಮುಂದೆ ಕತ್ತಲೆ ಹರಡಿತು. ಕಾಲುಗಳು ನಿಶ್ಶಕ್ತವಾದವು, ಕೈಗಳು ಕೆಲಸಮಾಡಲಿಲ್ಲ. ಉಸಿರು ನಿಲ್ಲತೊಡಗಿತು. ಇಷ್ಟು ದೊಡ್ಡ ಸಂಕಟವೆದುರಾದಾಗ ಎಲ್ಲಾ ಅಂಗಗಳು ಪ್ರಾಣವನ್ನು ಪ್ರಾರ್ಥಿಸುತ್ತಾ 'ಶರೀರವನ್ನು ತೊರೆಯದಿರು, ನೀನು ಇಲ್ಲದೇ ನಾವು ಒಂದು ಕ್ಷಣವು ಇರಲಾರೆವು' ಎಂದು ಹೇಳತೊಡಗಿದವು. ತಾತ್ಪರ್ಯವೆಂದರೆ ಶರೀರದ ವಿಭಿನ್ನ ಅಂಗಗಳಲ್ಲಿ ಪರಸ್ಪರ ಸಾಮರಸ್ಯವಿರುವುದರಿಂದಲೇ ಶರೀರದ ಎಲ್ಲಾ ಆವಶ್ಯಕತೆಗಳ ಪೂರೈಕೆಯಾಗುವುದು. ಈ ಅಂಗಗಳಲ್ಲಿ ಪರಸ್ಪರ ಸಂಘರ್ಷ ಮೂರ್ಖತ್ವವೆನಿಸಿಕೊಳ್ಳುವುದು. ಇವು ಪರಸ್ಪರ ಪೂರಕ ಮಾತ್ರವೇ ಅಲ್ಲದೆ ಒಂದೇ ಆಗಿರುತ್ತವೆ. ಶರೀರದಲ್ಲಿ ಐಕ್ಯತೆಯಿದೆ. ಬೇರೆ–ಬೇರೆ ಸ್ವಾರ್ಥ ಹಾಗೂ ಅದರಿಂದ ಉತ್ಪನ್ನವಾಗುವ ಸ್ಪರ್ಧೆಯಿಂದಾಗಿ ಅವುಗಳ ಸಂಚಾಲನೆಯಾಗುವುದಿಲ್ಲ. ಅವು ಒಂದೇ ಶರೀರದ ವಿಭಿನ್ನ ಅಂಗಗಳಾಗಿರುವುದರಿಂದ ಎಲ್ಲವೂ ಬೇರೆ–ಬೇರೆಯಾದರೂ ಒಂದಾಗಿರುತ್ತದೆ. ಅವು ಅವಿಚ್ಛಿನ್ನ, ಅಭೇದ್ಯವಾಗಿವೆ. ಅವುಗಳ ಈ ಐಕ್ಯತೆಗೆ ಕಾರಣವಾದದ್ದು 'ಪ್ರಾಣ'. ಈ ಪ್ರಾಣವೇ ಎಲ್ಲಾ ಅಂಗಗಳ ಧಾರಣೆಯನ್ನುಂಟುಮಾಡುತ್ತದೆ. ಸರಿಯಾಗಿ ಇದೇ ರೀತಿ ಸಮಾಜ–ಶರೀರದಲ್ಲಿಯೂ ಒಂದು ಪ್ರಾಣವಿರುತ್ತದೆ. ಈ ಪ್ರಾಣವನ್ನು ಸುರಕ್ಷಿತವಾಗಿಡಬೇಕು. ಪ್ರಾಣವನ್ನು ಶಕ್ತಿಶಾಲಿಯನ್ನಾಗಿಸಬೇಕು. ಪ್ರಾಣಾಯಾಮವನ್ನು ಮಾಡಬೇಕಾಗುತ್ತದೆ. ರಾಷ್ಟ್ರದ

ಪ್ರಾಣ–ರೂಪಿ ಈ ಐಕ್ಯತಾ ಭಾವನೆಯದ್ದು ಇದೇ ಮಹತ್ವವಿದೆ. ರಾಷ್ಟ್ರದ ಐಕ್ಯತಾ ಶಕ್ತಿಯನ್ನು ಸರಿಯಾಗಿ ಕಾಪಾಡುವುದರಿಂದ ಸಮಾಜ ಶರೀರದ ಎಲ್ಲಾ ರೀತಿಯ ಭೌತಿಕ ಹಾಗೂ ಆಧ್ಯಾತ್ಮಿಕ ಸುಖ ಸುಲಭವಾಗಿ ವಶವಾಗುತ್ತದೆ.

ಸಂಪೂರ್ಣ ಸಮಾಜದ ಇಷ್ಟೊಂದು ಸುಂದರ, ಸುಖದಾಯಕ, ಸರ್ವಾಂಗಪೂರ್ಣ ವ್ಯವಸ್ಥೆಯನ್ನುಂಟುಮಾಡಿದ ಆರ್ಯ ಋಷಿಗಳಿಗೆ ಯಾವ ಆನಂದವುಂಟಾಯಿತೋ ಅದನ್ನು ಉಲ್ಲೇಖಿಸುತ್ತಾ ಹೀಗೆ ಹೇಳಲಾಗಿದೆ. ಸಾವಿರಾರು ಮಸ್ತಕ, ಸಾವಿರಾರು ಬಾಹು, ಸಾವಿರಾರು ನೇತ್ರಗಳು, ಸಾವಿರಾರು ಉದರ, ಸಾವಿರಾರು ತೊಡೆಗಳು ಹಾಗೂ ಸಾವಿರಾರು ಕಾಲುಗಳ ಒಬ್ಬ ಪುರುಷ ಪೃಥ್ವಿಯ ಮೇಲೆ ನಾಲ್ಕು ದಿಕ್ಕುಗಳಲ್ಲಿಯೂ ಹರಡಿದ್ದಾನೆ. ಜ್ಞಾನಿಗಳು ಈ ಪುರುಷನ ಮುಖವಾಗಿರುತ್ತಾರೆ. ಶೂರವೀರರು ಬಾಹುಗಳಾಗಿರುತ್ತಾರೆ. ರೈತರು ಹಾಗೂ ವ್ಯಾಪಾರಿಗಳು ಈ ಪುರುಷನ ಉದರ ಹಾಗ್ಯೆ ತೊಡೆಗಳಾಗಿರುತ್ತಾರೆ. ಕೆಲಸಗಾರರು ಇವನ ಕಾಲುಗಳು. ಜ್ಞಾನಿ, ವ್ಯಾಪಾರಿ ಹಾಗೂ ಶಿಲ್ಪಿಗಳು ಒಂದಾಗಿ ಒಂದು ದೇಹವುಂಟಾಗುತ್ತದೆ. ಹೇಗೆ ಒಂದು ದೇಹದಲ್ಲಿ ಐಕ್ಯತೆಯಿರುವುದೋ ಅದೇ ಐಕ್ಯತೆ ಈ ಜನತಾರೂಪಿ ಪುರುಷನಲ್ಲಿರಬೇಕು.

**ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।**
**ಸ ಭೂಮಿಂ ವಿಶ್ವತೋ ವೃತ್ವಾಽತ್ಯತಿಷ್ಠತ್ ದಶಾಂಗುಲಮ್ ॥**
**ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹು ರಾಜನ್ಯಕೃತಃ ।**
**ಊರುತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥**

**(ಋಕ್ : ೧೦/೬೦)**

ಆದ್ದರಿಂದ ಸಮಾಜದ ವಿಭಿನ್ನ ವರ್ಗಗಳಲ್ಲಿ ಸಂಘರ್ಷ, ಭೇದ, ಸ್ಪರ್ಧೆಯಿಲ್ಲದೇ ಸಾಮರಸ್ಯವಿದೆ. ವರ್ಣವ್ಯವಸ್ಥೆಯಲ್ಲಿ ಯಾರು ಭೇದವನ್ನು ಕಾಣುತ್ತಾರೆಯೋ, ಅವರು ನಿಜಕ್ಕೂ ಸರಿಯಾಗಿ ಏನನ್ನೂ ನೋಡಲಾರರು. ವರ್ಣವು ಭೇದವಲ್ಲದ ವ್ಯವಸ್ಥೆಯಾಗಿದೆ. ಇದರಲ್ಲಿ ಚಿಕ್ಕ–ದೊಡ್ಡ ಗೌಣ–ಮುಖ್ಯವೆಂದೆಲ್ಲಾ ಯೋಚಿಸುವುದು ತಪ್ಪಾಗುತ್ತದೆ. ಐಕ್ಯತೆಯನ್ನು ಆಧರಿಸಿ ಎಲ್ಲ ಅಂಗಗಳೂ ತಮ್ಮ ಕಾರ್ಯ ಮಾಡಿದಲ್ಲಿ ಸುಖ ಲಭಿಸುತ್ತದೆ. ಗೀತೆಯಲ್ಲಿ ಹೀಗೆ ಹೇಳಿದೆ.

**ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।** **(೧೮–೪೫)**
ಹಾಗೂ
**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥** **(೧೮–೪೬)**



ಹೀಗೆ ಭಾರತವರ್ಷದಲ್ಲಿ ವ್ಯಕ್ತಿ ಹಾಗೂ ಸಮಾಜದ ಸರ್ವಾಂಗೀಣ ಪ್ರಗತಿ ಹಾಗೂ ಐಹಿಕ, ಪಾರಲೌಕಿಕ ಎಲ್ಲಾ ಸುಖವನ್ನು ಪಡೆದುಕೊಳ್ಳುವ ವರ್ಣ–ವ್ಯವಸ್ಥೆಯನ್ನು ರಚಿಸಲಾಗಿದೆ. ಇದೇ ಇಲ್ಲಿಯತನಕದ ಸಮಸ್ತ ರಚನೆಗಳಲ್ಲಿ ಶ್ರೇಷ್ಠ ರಚನೆಯಾಗಿದೆ. ಈ ರಚನೆಯಲ್ಲಿ ಯಾವ ವಿಕೃತಿಗಳುಂಟಾಗಿದೆಯೋ ಅವುಗಳನ್ನು ದೂರಗೊಳಿಸಿ ಇದರ ವಾಸ್ತವಿಕ ಸ್ವರೂಪವನ್ನು ಸಂಕಲನ ಮಾಡುವುದು ಯೋಗ್ಯ ಹಾಗೂ ಶ್ರೇಯಸ್ಕರ.

# ೧೫. ಯಾವ ಹಾದಿಯೂ ದೊರೆಯಲಿಲ್ಲ

ಯರೋಪಿಯ ವಿಚಾರಗಳು ಇಲ್ಲಿಯ ಶಿಕ್ಷಿತ ಜನರನ್ನು ಪ್ರಭಾವಿತರನ್ನಾಗಿಸಲು ಆರಂಭಿಸಿದವು. ಆ ಸಮಯದಲ್ಲಿ ಭಾರತದಲ್ಲಿ ಸಮಾಜವಾದಿ ವಿಚಾರ ಹಾಗೂ ಸಮಾಜವಾದಿ ಪಾರ್ಟಿಗಳು ಉಪಸ್ಥಿತವಿದ್ದವು. ಆದರೆ ಸೈದ್ಧಾಂತಿಕವಾಗಿ ಸಮಾಜವಾದವು ಇಲ್ಲಿನ ಜನರ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಯಾವುದೇ ವಿಶಿಷ್ಟ ಸ್ಥಾನವನ್ನು ಗಳಿಸಲಿಲ್ಲ. ಆದರೆ ಕಾಂಗ್ರೆಸ್‌ನ ಆವಡಿ ಅಧಿವೇಶನದ ನಂತರ, ಯಾವಾಗ ಕಾಂಗ್ರೆಸ್ ತನ್ನ ಅಂತಿಮ ಲಕ್ಷ್ಯವನ್ನಾಗಿ ಸಮಾಜವಾದಿ–ಸಮಾಜರಚನೆಯನ್ನು ಘೋಷಿಸಿತೋ ಆಗ ಸ್ಥಿತಿ ಬದಲಾಯಿತು. ಜನಸಾಮಾನ್ಯರ ಪ್ರಶ್ನೆ ಬಂದಾಗ, ಅವರು ಇಂದು ಸಹ ಅದರಿಂದ ಅಷ್ಟೇ ದೂರದಲ್ಲಿದ್ದಾರೆ. ಕಾಂಗ್ರೆಸ್ ಸಮಾಜವಾದದ ಗುರಿಯನ್ನು ಸ್ವೀಕರಿಸಿದ ನಂತರವೂ ಇದು ಜನತೆಯ ಹೃದಯವನ್ನು ಸ್ಪರ್ಶಿಸಲಾಗಲಿಲ್ಲ. ಜನತೆಯಲ್ಲಿ ಈ ಕುರಿತು ಯಾವುದೇ ಉತ್ಸಾಹವಿರಲಿಲ್ಲ. ಆದರೆ ಸರ್ಕಾರದ ನೀತಿಗಳು ಅದೇ ರೀತಿ ರೂಪುಗೊಳ್ಳತೊಡಗಿತು ಹಾಗೂ ಇದರಿಂದಾಗಿ ಯಾರು ಸರ್ಕಾರದ ನಿರ್ಣಯಗಳನ್ನು ಪ್ರಭಾವಗೊಳಿಸುವ ವಿಚಾರಮಾಡುತ್ತಾರೆಯೋ ಅವರಿಗೆ ಅವಶ್ಯವಾಗಿ ಚಿಂತೆಯಾಯಿತು ಎಂದು ತಿಳಿಯಲಾಯಿತು. ಇಂದು ಈ ವಿಚಾರಧಾರೆಯನ್ನು ಪರಿಪಾಲಿಸುವವರ ಸಂಖ್ಯೆಯ ಅನುಪಾತದಲ್ಲಿ ಇದಕ್ಕೆ ಅಧಿಕ ಮಹತ್ವ ದೊರೆತಿದೆ. ಜೊತೆಗೆ ಪ್ರಧಾನಮಂತ್ರಿಗಳ ಬಹುಪ್ರಚಾರದಿಂದ ಲೋಕಪ್ರಿಯತೆ ಹಾಗೂ ಸಮ್ಮಾನದಿಂದ ಕೆಲ ಸಮಯದವರೆಗೂ ಸಮಾಜವಾದ ಇಲ್ಲಿಯ ಜನತೆಯ ಸರ್ವಪ್ರಿಯ ಜೀವನದರ್ಶನವೆಂದು ಅಭಾಸವಾಗತೊಡಗಿತು. ಇಂದು ತನ್ನನ್ನು ತಾನು ಸಮಾಜವಾದಿ ಎಂದು ಹೇಳಿಕೊಳ್ಳುವುದು ಒಂದು ಫ್ಯಾಶನ್ ಆಗಿ ಕಂಡುಬರುತ್ತಿದೆ. ಪ್ರವಾಹದಲ್ಲಿ ಹರಿದುಹೋಗುವ ರಾಜಕೀಯ ಪಕ್ಷಗಳಲ್ಲಿ ಮಾತಿನ ಸ್ಪರ್ಧೆಯೇರ್ಪಟ್ಟಿದೆ. ಅದೇನೆಂದರೆ ಅವರಲ್ಲಿ ಯಾರು ತನ್ನನ್ನು ಸಮಾಜವಾದದ ಅತಿದೊಡ್ಡ ಪ್ರತಿಪಾದಕ ಎಂದು ಸಾಬೀತುಪಡಿಸುವುದು. ಹಿಂದೂ ಮಹಾಸಭೆಯೂ ಹಿಂದೂ ಸಮಾಜವಾದದ ಮಾತು ಹೇಳುತ್ತಿದೆ. ವೈದಿಕ ವಿಚಾರಕರು ಸಹ ಹಳೆಯ ಸಾಹಿತ್ಯವನ್ನು ಪುನರ್ ವಿಚಾರಮಾಡಿ "ವೈದಿಕ ಸಮಾಜವಾದ" ಎಂಬುದರ ಹೊಸ ಆವಿಷ್ಕಾರವನ್ನು ಮಾಡಿದೆ. ಇವೆಲ್ಲವೂ ಸಮಾಜವಾದ ಎಂದರೆ ಏನು ಹಾಗೂ ಈ ಘೋಷಣೆಯ



ಹಿಂದೆ ಯಾವ ರಾಷ್ಟ್ರಘಾತಿ ಪ್ರೇರಣೆಗಳು ಕೆಲಸ ಮಾಡುತ್ತಿವೆ ಎಂಬುದನ್ನು ಅರಿಯುವ ಕಷ್ಟವಿಲ್ಲದೇ ನಡೆಯುತ್ತಿವೆ.

ಈ ದೇಶದಲ್ಲಿ ಸಮಾಜವಾದದ ಘೋಷಣೆಯನ್ನು ಪ್ರಬಲಗೊಳಿಸಿದ ಮೊದಲನೆಯ ಪಕ್ಷ ಕಾಂಗ್ರೆಸ್ ಅಲ್ಲ. ಸಮಾಜವಾದವನ್ನು ಕಾಂಗ್ರೆಸ್ ಸ್ವೀಕರಿಸುವ ಮೊದಲೇ ಇಲ್ಲಿ ಸಮಾಜವಾದಿ ಪಕ್ಷಗಳು ಇದ್ದವು ಹಾಗೂ ಇಂದಿಗೂ ಇವೆ. ವಿಭಿನ್ನ ಸಮಾಜವಾಗಿ ಪಕ್ಷಗಳ ಅಸಂತುಷ್ಟ ಜನರು ಸಹ ತಮ್ಮನ್ನು ಸಮಾಜವಾದಿ ಎಂದೇ ಹೇಳುತ್ತಾರೆ. ಇಷ್ಟೇ ಅಲ್ಲ, ಅವರು ಯಾವ ಸಮಾಜವನ್ನು ಸ್ವೀಕರಿಸಿದ್ದಾರೆಯೋ ಅದು ಬಹಳ ಶುದ್ಧವಾದದ್ದು ಎಂಬುದು ಅವರ ಹೇಳಿಕೆಯಾಗಿದೆ. ಈ ಸ್ಥಿತಿಯಿಂದ ಸಮಾಜವಾದದ ಬಗ್ಗೆ ಇರುವ ಭ್ರಮೆ ಮತ್ತಷ್ಟು ಹೆಚ್ಚಿದೆ. ಹಾಗಿದ್ದರೂ ಸಹ ಯೂರೋಪಿನಲ್ಲಿ ಸಮಾಜವಾದದ ಎಷ್ಟೋ ಪ್ರಕಾರಗಳು ವಿದ್ಯಮಾನದಲ್ಲಿವೆ. ರೂಜ್‌ವೆಲ್ಟ್, ಹಿಟ್ಲರ್, ಮುಸಲೋನಿ ಹಾಗೂ ಸ್ಟ್ಯಾಲಿನ್ ಎಲ್ಲಾ ತಮ್ಮನ್ನು ತಾವು ಸಮಾಜವಾದಿ ಎಂದು ಹೇಳುತ್ತಾರೆ. ಸ್ವಯಂ ಪ್ರತ್ಯಕ್ಷವಾಗಿ ರಾಜನೀತಿಯಿಂದ ದೂರವಿದ್ದರೂ ಸಹ ಅನೇಕ ರೀತಿಯಿಂದ ಸಮಾಜವಾದಿ ಸಿದ್ಧಾಂತಗಳನ್ನು ರಚಿಸಿರುವ ಜನರು ಕಡಿಮೆಯಿಲ್ಲ. ಭಾರತದಲ್ಲಿ ಈ ಎಲ್ಲಾ ರೀತಿಯ ಸಮಾಜವಾದಿ ಪಂಥಗಳ ಅನುಯಾಯಿಗಳು ಚಾಲ್ತಿಯಲ್ಲಿ ಇದ್ದಾರೆ. ಯೂರೋಪಿನ ಸಮಾಜವನ್ನು ಭಾರತೀಯ ಸಾಮಾಜಿಕ–ಸಾಂಸ್ಕೃತಿಕ ಜೀವನಕ್ಕೆ ಅನುರೂಪವಾಗಿ ರೂಪಿಸಿ ಅದನ್ನು ಸ್ವೀಕರಿಸುವಂತಹ ಆಗ್ರಹದ ಪ್ರಯತ್ನಗಳು ಇಲ್ಲಿ ನಡೆಯುತ್ತಿವೆ.

ಬಾಬು ಜಯಪ್ರಕಾಶ ನಾರಾಯಣ ಇಂದಿಗೂ ಸಮಾಜವಾದಿಗಳಾಗಿದ್ದಾರೆ. ಎಂ.ಎನ್. ರಾಯ್ ತಮ್ಮ ಜೀವನದ ಅಂತಿಮ ಕಾಲದಲ್ಲಿ ಸಮಾಜವಾದವನ್ನು ಸಂಪೂರ್ಣವಾಗಿ ತ್ಯಜಿಸಿದರು. ಆದರೂ ಸಹ ಮರಣದ ವೇಳೆ ಅವರು ರ್‍ಯಾಡಿಕಲ್ ಸೋಶಿಯಲಿಸ್ಟ್ ಎಂದು ಕರೆಸಿಕೊಂಡರು. ಆ ರಾಜನೀತಿಜ್ಞರ ಜೊತೆಗೆ ಯಾರು ಏನನ್ನೂ ಅರಿಯದೇ ಯಾವುದೇ ವೇಳೆಯಲ್ಲಾಗಲೀ ಮಾತನಾಡಬಲ್ಲರೋ, ಅನ್ಯ ಸಿದ್ಧಾಂತವಾದಿ ಹಾಗೂ ರಾಜನೀತಿಜ್ಞರೂ ಈ ಸಮಾಜವಾದವನ್ನು ಕುರಿತು ಎಂಥ ಧೋರಣೆಗಳನ್ನು ಉಂಟುಮಾಡಿದ್ದಾರೆಂದರೆ ಜನರಿಗೆ ತಾವು ಎಲ್ಲಿದ್ದಾರೆ ಎಂಬುದನ್ನು ತಿಳಿಯಲು ಆಗುತ್ತಿಲ್ಲ.

ಒಮ್ಮೆ ಸಮಾಜವಾದವು ಯಾವುದೇ ಜೀವನ ದರ್ಶನವಲ್ಲ, ಕೇವಲ ಒಂದು ವಿಚಿತ್ರವಾದ ವೃತ್ತಿಯಾಗಿದೆ ಎಂದು ವ್ಯಂಗ್ಯಮಾಡಲಾಗಿತ್ತು. ನಾವು ಸಮಾಜವಾದಿಗಳನ್ನು ವಿಶ್ಲೇಷಣೆ ಮಾಡಿದಾಗ ಬಹುಮಟ್ಟಿಗೆ ಈ ಉಕ್ತಿ ಸರಿ ಎನಿಸುತ್ತದೆ. ಎಲ್ಲಾ ಸಮಾಜವಾದಿಗಳ ಒಂದು ಸರ್ವಸಾಮಾನ್ಯ ಅಭಿಲಾಷೆಯೆಂದರೆ ಸಾಧಾರಣ ಮನುಷ್ಯನ ಜೀವನ ಮಟ್ಟವನ್ನು ಹೆಚ್ಚಿಸುವುದು. ಅವರು ಮೈಗಳ್ಳರು

ಅಥವಾ ಕಾರ್ಮಿಕರ ಲಾಭಾಂಶಕ್ಕೆ ಯಾರನ್ನು ಅಡ್ಡಿಯೆಂದು ತಿಳಿಯುತ್ತಾರೋ ಅವರಿಗೆ ವಿರುದ್ಧವಾಗಿರುತ್ತಾರೆ. ಶ್ರಮಿಸುವ ಕಾರ್ಮಿಕರ ಪಕ್ಷವನ್ನು ಗ್ರಹಿಸುತ್ತಾರೆ. ಕೆಲವು ಜನರು ಸ್ವಾಮಿ ವಿವೇಕಾನಂದರನ್ನು ಸಹ ಸಮಾಜವಾದಿಗಳೆಂದು ಘೋಷಿಸುತ್ತಾರೆ. ಏಕೆಂದರೆ ಅವರು ಪೀಡಿತ, ಶೋಷಿತ ಮಾನವತೆಗಾಗಿ ಸಹಾನುಭೂತಿಯ ಕರೆ ನೀಡಿದರು. ಒಂದು ಭಾಷಣದಲ್ಲಿ 'ನಾನು ಸಹ ಒಬ್ಬ ಸಮಾಜವಾದಿ' ಎಂದು ಅವರು ಹೇಳಿದ್ದರು. ಸಮಾಜವಾದ ಯಾವುದೇ ಸಂಪೂರ್ಣ ದರ್ಶನವೆಂದಲ್ಲದೇ ಹಸಿವಿನಿಂದ ಬಳಲುವುದಕ್ಕಿಂತ ಒಂದು ತುತ್ತು ಪಡೆಯುವುದು ಒಳ್ಳೆಯದೆಂದು ನಾನು ತಿಳಿಯುತ್ತೇನೆ. ಸುಖ-ದುಃಖದ ಪುನರ್ವಿಭಾವನೆಯು ನಿಜಕ್ಕೂ ಯಾವುದಾದರೂ ನಿಗದಿತ ವ್ಯಕ್ತಿಯು ಸುಖ ಅಥವಾ ದುಃಖದ ಪಾಲುದಾರರಾಗುವ ಸ್ಥಿತಿಗಿಂತ ಬಹಳ ಶ್ರೇಯಸ್ಕರವಾಗುತ್ತದೆ. ಈ ಕಷ್ಟಮಯ ಸಂಸಾರದಲ್ಲಿ ಪ್ರತಿಯೊಬ್ಬರಿಗೂ ಒಳ್ಳೆಯ ದಿನಗಳನ್ನು ಕಾಣುವ ಅವಕಾಶ ಸಿಗಲೇಬೇಕು. ಭಿಕ್ಷುಕರ ಬಗ್ಗೆ ಹಾರ್ದಿಕ ಸಹಾನುಭೂತಿ ಹಾಗೂ ಸಮಾಜದಲ್ಲಿ ಅವರಿಗೆ ಸಮ್ಮಾನ ಹಾಗೂ ಸಮ್ಮಾನಪೂರ್ಣ ಸ್ಥಾನ ಗಳಿಸಿಕೊಡುವಂತಹ ಇಚ್ಛೆಯನ್ನು ಹೃದಯದಲ್ಲಿಟ್ಟಿರುವ ಸಮಾಜಸೇವಕರಾದ ವ್ಯಕ್ತಿಗಳು ಇಂದಿಗೂ ಇದ್ದಾರೆ.

ಅವರ ಈ ಸದಿಚ್ಛೆ ಪ್ರಶಂಸನೀಯ. ಈ ದುಃಖ ಹಾಗೂ ಕಷ್ಟಗಳಿಂದ ಕೂಡಿದ ವಿಶ್ವದಲ್ಲಿ ಅಸಮಾನತೆ, ಅನ್ಯಾಯ, ದುಃಖ, ಕಷ್ಟ, ಉತ್ಪೀಡನೆ, ದಾಸ್ಯ, ಶೋಷಣೆ, ಹಸಿವು ಹಾಗೂ ಅಭಾವಗಳನ್ನು ಕಂಡು ಯಾವುದೇ ಮಾನವೀಯ ಅಂತಃಕರಣವುಳ್ಳ ವ್ಯಕ್ತಿ ತನ್ನ ಪೀಡಿತ ಬಂಧು-ಬಾಂದವರ ಬಗ್ಗೆ ಆತ್ಮೀಯತೆಯನ್ನು ತೋರದೆ ಇರಲಾರ. ಆದರೆ ಯಾವ ಸಮಾಜವಾದದ ಚರ್ಚೆ ನಾವು ಮಾಡುತ್ತಿದ್ದೇವೆಯೋ ಅದು ಇಲ್ಲಿಗೆ ಸೀಮಿತವಾಗಿರುವುದಿಲ್ಲ. ಅವನು ಈ ದುಃಖ ಪೂರ್ಣ ಸ್ಥಿತಿಯನ್ನು ಕೊನೆಗೊಳಿಸಬಯಸುತ್ತದೆ ಎಂದು ಕೇವಲ ಹೇಳಿದರೆ ಸಾಲದು, ಆದರೆ ಅವನು ಸ್ಥಿತಿಯನ್ನು ವಿಶ್ಲೇಷಿಸಬೇಕು, ರೋಗಕ್ಕೆ ಸರಿಯಾದ ಚಿಕಿತ್ಸೆ ನೀಡಬೇಕು, ಹಾಗೂ ಅದಕ್ಕಾಗಿ ಔಷಧಿಯನ್ನು ಒದಗಿಸಿದನು. ಏಕೆಂದರೆ ಇದೇ ಕಾರಣದಿಂದಾಗಿ ಯಾವ ಕಾರ್ಲ್ ಮಾರ್ಕ್ಸ್‌ನ ಶಿಷ್ಯತ್ವವನ್ನು ಅವರು ಸ್ವೀಕರಿಸಬೇಕಾಗಿ ಬಂದಿತೋ ಅದೇ ಮಾರ್ಕ್ಸ್‌ನು ಒಂದು ಅವಶ್ಯವಾಗಿ ಮಾಡಬೇಕಾದ ಯೋಜನೆಯನ್ನು ಪ್ರಸ್ತುತಪಡಿಸಿದನು ಹಾಗೂ ಬೋಲ್‌ಶೇವಿಕರು ಆ ಕನಸನ್ನು ನನಸನ್ನಾಗಿಸಲು ರಷ್ಯಾದ ಮೇಲೆ ತಮ್ಮ ಅಧಿಕಾರವನ್ನು ಯಶಸ್ವಿಯಾಗಿ ಸ್ಥಾಪಿಸಿದರು. ಹೀಗಿದ್ದರೂ ಬೋಲ್‌ಶೇವಿಕ್ ಕ್ರಾಂತಿಯಿಂದ ಹಿಡಿದು ಇಂದಿನವರೆಗೂ ರಷ್ಯಾದ ಇತಿಹಾಸದಲ್ಲಿ ಅನೇಕ ಕ್ಷೇತ್ರಗಳ ಅನೇಕಾನೇಕ ಸಾಫಲ್ಯದ ನಂತರವೂ ಈ ಪದ್ಧತಿಯು ಅಪೂರ್ಣತೆಯನ್ನು ಪ್ರತಿನಿಧಿಸುತ್ತಲೇ ಇದೆ. ಮಾರ್ಕ್ಸ್‌ನ



ಸಮಾಜವಾದವು ಇಂದಿನವರೆಗೂ ಕೇವಲ ಬೌದ್ಧಿಕ ಕಲ್ಪನೆ ಹಾಗೂ ವ್ಯಾವಹಾರಿಕ ಕ್ಷೇತ್ರದಲ್ಲಿಯೂ ತಮ್ಮ ಸೋಲುಗಳಿಂದ ಭೀಕರ ಪರಿಣಾಮಕಾರಿ ಎಂದು ಸಾಬೀತಾಗಿದೆ. ಸಮಾಜವಾದ ಮೊದಲ ಆಕ್ರಮಣ ಪ್ರಜಾಪ್ರಭುತ್ವದ ಮೇಲಾದದ್ದನ್ನು ನಾವು ಕಂಡೆವು. ಕಬ್ಬಿಣದ ಪರದೆಯ ಹಿಂದೆ ಇರುವವರನ್ನು ಬಿಟ್ಟು ಉಳಿದ ಸಮಸ್ತ ವಿಶ್ವದ ಸಮಾಜವಾದಿ ವಿಚಾರಕರು ಆತಂಕಗೊಂಡರು. ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯಿತ್ತು. ನಿಜಕ್ಕೂ ಲೋಕತಾಂತ್ರಿಕ ಆದರ್ಶಗಳಿಂದಾಗಿ ಸಾಧಾರಣ ಜನರ ಬಗ್ಗೆ ಅವರಿಗೆ ಸಹಾನುಭೂತಿಯಿತ್ತು ಹಾಗೂ ಅವರು ಅದಕ್ಕಾಗಿ ಸಮಾನತೆಯ ಸ್ಥಾನವನ್ನು ಪ್ರಾಪ್ತಮಾಡಿಕೊಳ್ಳುವ ವಿಷಯ ಪ್ರಸ್ತಾವಿಸುತ್ತಿದ್ದರು. ಪ್ರಜಾಪ್ರಭುತ್ವವೇ ಅವರಿಗೆ ರಾಜಕೀಯ ಸಮಾನತೆಯನ್ನು ನೀಡಿತು. ಆದರೆ ವೈಜ್ಞಾನಿಕ ಆವಿಷ್ಕಾರಗಳು ಹಾಗೂ ಯಂತ್ರೋತ್ಪಾದನಾ ಪದ್ಧತಿಯು ಅವರನ್ನು ಆರ್ಥಿಕ ಅಸಮಾನತೆಯ ಕೂಪಕ್ಕೆ ತಳ್ಳಿತು. ಇದರ ಪರಿಣಾಮವಾಗಿ ಇಂತಹ ರಾಜಕೀಯದ ಪರಿಸ್ಥಿತಿಯಲ್ಲಿ ಸಮಾನತೆಗೆ ಯಾವುದೇ ಬೆಲೆಯಿಲ್ಲವಾಯಿತು. ಮಾರ್ಕ್ಸ್‌ನು ವರ್ಗರಹಿತ ಸಮಾಜದ ಘೋಷಣೆ ಮಾಡಿದರು. ಅಂತಿಮ ಅವಧಿಯುವರೆಗೂ ಕಾರ್ಮಿಕರ ಅಧಿನಾಯಕವಾದವನ್ನು ಕುರಿತು ಚರ್ಚೆಮಾಡಲಾಯಿತು. ಇದರಲ್ಲಿ ಸಂದೇಹಕ್ಕೆ ಎಡೆಯೂ ಇತ್ತು. ಜನರನ್ನು ಒಂದು ಸಂದಿಗ್ಧವಸ್ತುವನ್ನು ಪಡೆಯಲೆಂದು ಆ ವಸ್ತುವನ್ನು (ರಾಜಕೀಯ ಸಮಾನತೆ) ತ್ಯಾಗಮಾಡುವಂತೆ ಹೇಳಲಾಯಿತು. ಇದು ಅವರಿಗೆ ಮೊದಲೇ ದೊರೆತಂಥ ವಸ್ತುವಾಗಿತ್ತು. ಅವರಿಗೆ ಸಮಾಜವಾದವು ಮೊದಲೇ ದೊರೆತಂಥಹ ವಸ್ತುವನ್ನು ಅವರಿಂದ ಕಸಿದುಕೊಳ್ಳುತ್ತದೆಯೆಂಬ ಕಿಂಚಿತ್ ಕಲ್ಪನೆಯೂ ಇರಲಿಲ್ಲ. ಅವರು ಮೊದಲೇ ಅಭಾವದಿಂದ ಪೀಡಿತರಾಗಿದ್ದರು. ಸಮಾಜವಾದದಿಂದ ಅವರಿಗೆ ಏನಾದರೂ ದೊರೆಯಬೇಕಾಗಿತ್ತೇ ಹೊರತಾಗಿ ಅವರ ಬಳಿಯಿರುವುದನ್ನು ಸಹ ಕಸಿದುಕೊಳ್ಳುವುದಾಗಿರಲಿಲ್ಲ. ಆದರೆ ಅವರಿಗೆ ಏನನ್ನಾದರೂ ನೀಡುವ ಮೊದಲೇ ಸಮಾಜವಾದವು ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ಅಪಹರಿಸಿತು. ೧೯೧೯ರ ಏಪ್ರಿಲ್ ೨೮ರಂದು ಪ್ರಿನ್ಸ್ ಕ್ರೊಪಾಟ್‌ಕಿನ್‌ನು ಪಾಶ್ಚಾತ್ಯ ಯೂರೋಪಿನ ಕಾರ್ಮಿಕರಿಗೆ ಒಂದು ಪತ್ರವನ್ನು ಬರೆದನು:

"ನಾನು ನಿಮಗೆ ಸ್ಪಷ್ಟವಾಗಿ ಇದನ್ನು ತಿಳಿಸುವುದು ನನ್ನ ಹೊಣೆಗಾರಿಕೆ ಎಂದು ತಿಳಿಯುತ್ತೇನೆ. ಅದೇನೆಂದರೆ ನನ್ನ ವಿಚಾರದಿಂದ ಸುದೃಢ ಏಕತಂತ್ರ ರಾಜ್ಯ-ವ್ಯವಸ್ಥೆಯ ಆಧಾರದ ಮೇರೆಗೆ ಏಕಾಧಿಪತ್ಯದ ಕಬ್ಬಿಣದ ಮುಷ್ಟಿಯಲ್ಲಿ, ಸಾಮ್ಯವಾದಿ ಗಣತಂತ್ರ ನಿರ್ಮಾಣ ಮಾಡುವ ಪ್ರಯತ್ನಗಳು ಅಸಫಲತೆಗಳಾಗಿ ಬಂದವು. ರಷ್ಯಾದಿಂದ ನಾವು ಸಾಮ್ಯವಾದದ ಪ್ರವೇಶವನ್ನು ಹೇಗೆ ತಡೆಗಟ್ಟುವುದು ಎಂಬ ಸಂಗತಿಯನ್ನು ಕಲಿಯುತ್ತಿದ್ದೇವೆ. ಎಲ್ಲಿಯತನಕ ದೇಶದಲ್ಲಿ ಪಕ್ಷದ

ಏಕಾಧಿಪತ್ಯದ ಶಾಸನ ಖಾಯಂ ಆಗಿರುವುದೋ ಅಲ್ಲಿಯತನಕ ರೈತ ಹಾಗೂ ಕಾರ್ಮಿಕರ ಪರಿಷತ್ತು ತಮ್ಮ ಮಹತ್ವಪೂರ್ಣ ಸ್ಥಾನವನ್ನು ಖಚಿತ ಪಡಿಸಿಕೊಳ್ಳಲಾಗುವುದಿಲ್ಲ. ಅವು ತಮ್ಮ ಸಮಸ್ತ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತದೆ. ರಷ್ಯಾದ ಗಣರಾಜ್ಯವು ಇಂದು ಒಂದು ಅಭೇದ್ಯ ನೌಕರಶಾಹಿಗೆ ಜನ್ಮ ನೀಡುತ್ತಿದೆ ಹಾಗೂ ಇದರ ಮುಂದೆ ಫ್ರಾನ್ಸ್‌ನ ನೌಕರಶಾಹಿಯು ಸಹ ಸೋತುಹೋಗುತ್ತದೆ ಹಾಗೂ ಅದರ ದಾರಿಯಲ್ಲಿ ಬಿರುಗಾಳಿಯಿಂದ ಬಿದ್ದ ಮರಗಳನ್ನು ಮಾರಲು ಸಹ ನಲವತ್ತು ಸರ್ಕಾರಿ ಅಧಿಕಾರಿಗಳ ಆವಶ್ಯಕತೆಯುಂಟಾಗುತ್ತದೆ."

ಯೂರೋಪಿನ ಸಮಾಜವಾದಿಗಳ ಹೊಸ ಪ್ರಯತ್ನಗಳು ಉದಾರತತ್ವಕ್ಕೆ ಜನ್ಮಕೊಟ್ಟವು, ಇದಕ್ಕೆ ಇಂದು ಪ್ರಜಾತಂತ್ರದಲ್ಲಿ ಸಮಾಜವಾದದ ಹೆಸರು ನೀಡಲಾಗಿದೆ. ಅವರಿಗೆ ಕಮ್ಯೂನಿಸ್ಟರೊಡನೆ ಭಿನ್ನಾಭಿಪ್ರಾಯವಿದ್ದರೂ ಸಮಾಜವಾದದ ಉದಯ ಪ್ರಜಾತಾಂತ್ರಿಕ ರೀತಿಯಿಂದ ಉಂಟಾಗಬೇಕು ಎಂದು ಪ್ರತಿಪಾದಿಸುತ್ತಾರೆ. ಅವರು ಒಮ್ಮೆಗೆ ಸಮಾಜವಾದ ಹಾಗೂ ಪ್ರಜಾಪ್ರಭುತ್ವ ಎರಡನ್ನು ಆರಾಧಿಸಲು ಬಯಸುತ್ತಾರೆ. ಆದರೆ ಸಮಾಜವಾದ ಹಾಗೂ ಜನತಂತ್ರ ಒಮ್ಮೆಲೆ ವಿಕಸಿತವಾಗಬಹುದೆ ಎಂಬುದು ನಾವು ಎದುರಿಸುತ್ತಿರುವ ಮೂಲ ಪ್ರಶ್ನೆಯಾಗಿದೆ. ಪ್ರಗತಿವಾದಿಗಳು ಇದನ್ನು ನಂಬುವುದಿಲ್ಲ. ಸಾಮಾಜವಾದವು ಒಪ್ಪುವ ಸಂಗತಿ ಏನೆಂದರೆ ಮೂಲವು ರಾಜ್ಯದ ಅಧೀನಕ್ಕೆ ಒಳಪಟ್ಟಿರಬೇಕು. ಏಕೆಂದರೆ ಸಮಾಜವಾದಿಗಳು ಈ ಕುರಿತು ತಿಳಿದಿರುವುದೇನೆಂದರೆ ಸಮಾಜದ ರಾಜನೈತಿಕ, ಬೌದ್ಧಿಕ ಹಾಗೂ ಸಾಮಾಜಿಕ ಜೀವನ ಅದರ ಉತ್ಪಾದನೆಯ ಮೂಲಗಳಿಂದಲೇ ಕೆಳಮಟ್ಟಕ್ಕೆ ಇಳಿಯುತ್ತದೆ. ಆದುದರಿಂದಲೇ ಸಮಾಜವಾದಿ ವ್ಯವಸ್ಥೆಯಲ್ಲಿ ರಾಜ್ಯದ ಆರ್ಥಿಕ ಕ್ಷೇತ್ರದ ಜೊತೆ ಜೊತೆಗೆ ರಾಜಕೀಯ ಹಾಗೂ ಅನ್ಯ ಕ್ಷೇತ್ರಗಳಲ್ಲಿಯೂ ಸಂಪೂರ್ಣ ವರ್ಚಸ್ಸು ಅಗತ್ಯವಾಗಿರಬೇಕು. ಇದರಿಂದ ಎಂತಹ ಸ್ಥಿತಿಯುಂಟಾಗುತ್ತದೆಯೆಂದರೆ ಆ ಜನರ ವಿರುದ್ಧ ಶಾಸನದಲ್ಲಿರುವ ಲೋಕತಾಂತ್ರಿಕ ಅಧಿಕಾರಗಳನ್ನು ಪ್ರಭಾವಕಾರಿ ರೀತಿಯಲ್ಲಿ ಬಳಸುವುದು ಸಾಧ್ಯವಾಗುವುದಿಲ್ಲ. ಸಮಾಜವಾದದ ಬಂದೂಕಿನಿಂದ ಬರುವ ಗುಂಡಿನ ಮೊದಲ ಗುರಿ ಅಗತ್ಯವಾಗಿ ಯಾವುದಾದರೂ ಪ್ರಜಾಪ್ರಭುತ್ವವಾದಿಯಾಗಿರುತ್ತಾನೆ. ಹೇಗೆ ಹುಲಿ–ಮೇಕೆ ಒಂದೇ ತೀರದಲ್ಲಿ ನೀರು ಕುಡಿಯುವುದು ಸಾಧ್ಯವಿಲ್ಲವೋ ಹಾಗೆಯೇ ಸಮಾಜವಾದ ಹಾಗೂ ಪ್ರಜಾಪ್ರಭುತ್ವ ಎರಡೂ ಒಟ್ಟಿಗೆ ಚಲಿಸಲಾರವು.

ಇಂದು ಸಮಾಜವಾದಿ ಎಂಬ ಗುಡಾರದಲ್ಲಿ ವ್ಯಾಪ್ತವಾಗಿರುವ ಭ್ರಮೆಗೀಡಾದ ಸ್ಥಿತಿಗೆ ಬಹಳ ಮಟ್ಟಿಗೆ ಈ ಸಿದ್ಧಾಂತಗಳೇ ಹೊಣೆ. ಇಲ್ಲಿಯ ತನಕ ಯಾವುದೇ ವಿಚಾರಕನು ಇಂತಹ ಈ ಎರಡೂ ತತ್ವಗಳ ಸಹಅಸ್ತಿತ್ವವಿರುವಂತಹ ಸರ್ವಾಂಗಪೂರ್ಣ ದೋಷರಹಿತ ಚಿತ್ರ ಪ್ರಸ್ತುತಪಡಿಸುವುದರಲ್ಲಿ



ಯಶಸ್ವಿಯಾಗಲಾಗಲಿಲ್ಲ. ಇದರಲ್ಲಿಯೂ ಸಹ, ನಾವು ಪ್ರಜಾತಂತ್ರದ ವಿಭಿನ್ನ ಸ್ವರೂಪಗಳು ಹಾಗೂ ಮರ್ಯಾದೆಗಳೊಟ್ಟಿಗೆ ಭಿನ್ನ–ಭಿನ್ನ ದೇಶಗಳ ವಿಭಿನ್ನ ಸಾಮಾಜಿಕ, ಸಾಂಸ್ಕೃತಿಕ ಸ್ವರೂಪ ಹಾಗೂ ಭಿನ್ನ ರೀತಿಯ ಭೌತಿಕ ಹಾಗೂ ಆರ್ಥಿಕ ವಿಕಾಸದ ಮಟ್ಟಗಳನ್ನು ಕುರಿತು ವಿಚಾರ ಮಾಡಿದಲ್ಲಿ ಈ ಭ್ರಮೆಯ ಮೋಡಗಳು ಮತ್ತಷ್ಟು ಘನೀಭೂತವಾಗಿಬಿಡುತ್ತವೆ. ಈ ಭ್ರಮಬಲೆಯ ಜಟಿಲತೆಯಿಂದಾಗಿ ಈ ಸಮಸ್ಯೆ ಎಷ್ಟು ಕ್ಲಿಷ್ಟವಾಗಿ ಹೋಗಿದೆಯೆಂದರೆ ಅದನ್ನು ಪರಿಷ್ಕರಿಸುವುದು ಅಸಂಭವವಾಗಿಬಿಡುತ್ತದೆ.

ಸಮಾಜವಾದಿಗಳಲ್ಲದ ದೇಶಗಳೂ ಸಮಾಜವಾದಿಗಳ ಭ್ರಮೆಯನ್ನು ಹೆಚ್ಚಿಸುವ ಕಾರ್ಯವನ್ನು ಮಾಡಿದೆ. ಗತ ೩೦ ವರ್ಷಗಳಲ್ಲಿ ತನ್ನ ಉದಾರ ನೀತಿಗಳು ಹಾಗೂ ನವೀನ ಆರ್ಥಿಕ ಚಿಂತನೆಯಿಂದಾಗಿ ಅವರು ಸಮಾಜವಾದಿಗಳನ್ನು ಶ್ರೀಹೀನರನ್ನಾಗಿಸಿದ್ದಾರೆ. ಇಂದು ಅಮೇರಿಕಾ ಹಾಗೂ ಇಂಗ್ಲೆಂಡಿನ ಸರ್ವಸಾಧಾರಣ ವ್ಯಕ್ತಿ, ರೈತ ಹಾಗೂ ಕಾರ್ಮಿಕರು ಯಾರನ್ನು ಸಾಮ್ಯವಾದಿ ವ್ಯಾಖ್ಯೆಗನುಗುಣವಾಗಿ ಪರಾಜಿತ ಎಂದು ಹೇಳಲಾಗುತ್ತದೆಯೋ ಅವರು ನೂರು ವರ್ಷಗಳ ಹಿಂದೆ ಈ ರೀತಿಯಾದ ಶೋಷಣೆಗೊಳಪಟ್ಟಿರಲಿಲ್ಲ. ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೂ ಇಲ್ಲ. ಬಂಡವಾಳ ವ್ಯವಸ್ಥೆಗೆ ಬದಲಾಗಿ ರಾಜ್ಯದ ಕಲ್ಯಾಣಕಾರಿ ಆದರ್ಶಗಳು ಸ್ಥಾಪಿಸಲ್ಪಡುತ್ತಿವೆ. ಬಂಡವಾಳಶಾಹಿ ಹಾಗೂ ಸಮಾಜವಾದಿ ಎರಡೂ ರೀತಿಯ ದೇಶಗಳನ್ನು ಕುರಿತು ಮಾರ್ಕ್ಸ್‌ನ ಭವಿಷ್ಯವಾಣಿ ಅಸತ್ಯವೆಂದು ಸಾಬೀತಾಯಿತು. ನಿನ್ನೆಯ ಬಂಡವಾಳಶಾಹಿ ದೇಶಗಳೂ ಸಹ ತನ್ನ ಪದ್ಧತಿಯಲ್ಲಿ ಪ್ರಗತಿ ಸಾಧಿಸಿವೆ ಹಾಗೂ ಅವು ಭೌತಿಕ ವಿಕಾಸದಲ್ಲಿ ಸಮಾಜವಾದಿಗಳನ್ನು ಎದುರಿಸಲು ತಯಾರಾಗಿವೆ. ಆದರೆ ಸಮಾಜವಾದವು ಇಂದಗೂ ಎಲ್ಲಿಂದ ತನ್ನ ಯಾತ್ರೆಯನ್ನು ಪ್ರಾರಂಭಮಾಡಿ ತನ್ನ ಅದೇ ಸ್ಥಾನದಲ್ಲಿ ಸ್ಥಗಿತಗೊಂಡಿದೆ. ಅದು ಕೆಲವು ಹೆಜ್ಜೆಗಳನ್ನು ಮುಂದಿಟ್ಟಿದೆಯಾದರೂ ತಪ್ಪು ದಿಕ್ಕಿನಲ್ಲಿ ಮುಂದುವರಿಯುತ್ತಿದೆ. ಇದಕ್ಕೆ ವಿರುದ್ಧವಾಗಿ ಬಂಡವಾಳಶಾಹಿ ದೇಶಗಳಲ್ಲಿ ಪ್ರಜಾತಂತ್ರವಿರುವುದರಿಂದ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಹಾಗೂ ನವೀನ ಸಂಗತಿಗಳನ್ನು ಸ್ವೀಕರಿಸುವ ಸಿದ್ಧತೆಯಿರುತ್ತದೆ. ಆದರೆ ಸಮಾಜವಾದಿಗಳಲ್ಲಿ ಸಮಸ್ಯೆಗಳನ್ನು ಕುರಿತಾದ ದೃಷ್ಟಿಕೋನದಲ್ಲಿ ಈ ರೀತಿಯ ಒಂದು ಅನುಕೂಲದ ಅಭಾವವಿರುತ್ತದೆ. ಈ ವಿಚಾರಧಾರೆ ಯಾವುದೇ ರೀತಿಯ ನವೀನ ಚಿಂತನೆಗೆ ಪ್ರೇರಣೆ ನೀಡುವುದಿಲ್ಲ. ದೇವದೂತರ ವಾದ ಹಾಗೂ ಪರಿವರ್ತನೆಗೊಳಗಾಗದ ಅಂಧವಿಶ್ವಾಸಗಳನ್ನು ಆಧರಿಸಿದ ಮತಗಳನ್ನು ಅನುಸರಿಸುವವರ ಹಾಗೆ ಇಂದು ಸಮಾಜವಾದದ ಅಂಧಾನುಯಾಯಿಗಳು ಹೊಸ ಸ್ವತಂತ್ರ ವಿಚಾರಗಳಿಂದ ದೂರವಿರಲು ಇಷ್ಟಪಡುತ್ತಾರೆ. ಈ ಕಾರಣದಿಂದ ಕಮ್ಯುನಿಸ್ಟರ ಶಬ್ದಕೋಶದಲ್ಲಿ ಈ ರೀತಿಯ ಚಿಂತಕರಿಗಾಗಿ

ಅನೇಕ ರೀತಿಯ ಬೈಗುಳಗಳು ತುಂಬಿರುತ್ತವೆ. ಆದರೆ ವಿಚಾರಶೀಲ ಮಾನವನು ವಿಚಾರಹೀನರಾಗಲಾರರು. ಅವರ ವಿಚಾರ ತರಂಗಗಳಿಗೆ ಯೋಗ್ಯ ದಿಕ್ಕು ನೀಡಲು ಯಾವುದೇ ಸುನಿಯೋಜಿತ ವ್ಯವಸ್ಥೆಯಿಲ್ಲದಿದ್ದಲ್ಲಿ ಅದು ಅನಿವಾರ್ಯವಾಗಿ ದಿಗ್‌ಭ್ರಮೆಯಾಗಿ ನಮ್ಮ ಮುಂದೆ ನಿಲ್ಲುತ್ತಿದೆ.

ಇಂದು ಭಾರತದಲ್ಲಿ ಸಮಾಜವಾದವನ್ನು ಕುರಿತು ಮಾಡುತ್ತಿರುವ ವಾದ–ವಿವಾದವು ಮುಖ್ಯವಾಗಿ ರಾಜಕೀಯ ಉದ್ಯೋಗಗಳನ್ನು ವಿಸ್ತಾರಗೊಳಿಸುವ ಅನಿವಾರ್ಯತೆ ಅಥವಾ ವ್ಯರ್ಥತೆಯ ಮೇಲೆ ಕೇಂದ್ರಿತವಾಗಿದೆ. ಸ್ವತಂತ್ರ ಉದ್ಯೋಗಗಳನ್ನು ಪುರಸ್ಕರಿಸುವವರು ಹಾಗೂ ಸಮಾಜವಾದಿ ವಿಚಾರಕರು ಒಬ್ಬರಿಗೊಬ್ಬರಿಗೆ ವಿರೋಧಿಗಳಾಗಿ ತೊಡೆತಟ್ಟಿ ನಿಂತಿದ್ದಾರೆ. ಆದರೆ ಇದರ ಜೊತೆಗೆ ರೋಚಕವಾದ ತಥ್ಯವೊಂದಿದೆ ಅದೇನೆಂದರೆ ಎರಡೂ ಸಹ ಒಬ್ಬರಿಗೊಬ್ಬರು ಸಾಕಷ್ಟು ಕ್ಷೇತ್ರ ಖಾಲಿ ಬಿಡಲು ಸಿದ್ಧವಾಗಿದೆ. ಅವಿಕಸಿತ ಅರ್ಥವ್ಯವಸ್ಥೆಯಲ್ಲಿ ಸರ್ಕಾರವು ತನ್ನ ಕೈಯಲ್ಲಿ ಕೆಲವು ಉದ್ಯೋಗಗಳನ್ನು ಸಹ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಇವುಗಳನ್ನು ಸಾಧಾರಣ ಅವಸ್ಥೆಯಲ್ಲಿ ಸ್ವತಂತ್ರ ಜನರ ಕೈಗಳಲ್ಲಿ ಬಿಟ್ಟುಬಿಡಬಹುದಾಗಿದೆ. ಜೊತೆಗೆ ಯಾವುದೇ ನಿಯೋಜಿತ ಅರ್ಥವ್ಯವಸ್ಥೆಯಲ್ಲಿ ಸ್ವತಂತ್ರ ಉದ್ಯೋಗಪತಿಗಳಿಗೆ ಶತಾಬ್ದಿಗಳಿಂದ ಪಾಶ್ಚಾತ್ಯ ದೇಶದ ಜನರು ತೆಗೆದುಕೊಳ್ಳುವ ಉದ್ಯೋಗವನ್ನು ಅಂತಹ ರಿಯಾಯಿತಿಯನ್ನು ಸಹ ನೀಡಲಾಗುವುದಿಲ್ಲ. ನಿಜ ಹೇಳುವುದಾದರೆ, ಈ ಸ್ಪರ್ಧೆಯನ್ನು ನಿಯಂತ್ರಣಗೊಳಿಸಿದಲ್ಲಿ ಎರಡರಲ್ಲಿಯೂ ಸಂತುಲನ ಸ್ಥಾಪಿಸಿರುವುದರಲ್ಲಿ ಸಹಾಯಕವಾಗಬಹುದು.

ಸಮಾಜವಾದವನ್ನು ಸ್ವೀಕರಿಸಬೇಕೋ ಅಥವಾ ಉದ್ಯೋಗಗಳ ಸ್ವಾತಂತ್ರ್ಯದ ಸಿದ್ಧಾಂತವನ್ನು ಸ್ವೀಕರಿಸಬೇಕೋ ಎಂಬುದು ಮುಖ್ಯ ಸಮಸ್ಯೆಯಲ್ಲ. ಸಮಾಜವಾದ ಹಾಗೂ ಪ್ರಜಾಪ್ರಭುತ್ವವನ್ನು ಪರಸ್ಪರ ಹೋಲಿಸಲಾಗುವುದಿಲ್ಲ. ಆದರೆ ಇದು ನಮಗೆ ವಿಕಲ್ಪವಾಗಿಲ್ಲ. ಅವು ಕೇವಲ ಸಾಧನವಾಗಿದೆಯೇ ಹೊರತು ಗುರಿಯಾಗಿಲ್ಲ. ಹಾಗಾದರೆ ಗುರಿ ಯಾವುದು? ನಾವು ಮೊದಲು ನಮ್ಮ ಗುರಿಯನ್ನು ನಿರ್ಧರಿಸಬೇಕು. ನಂತರ ಮಾರ್ಗವನ್ನು ಗೊತ್ತುಪಡಿಸಿಕೊಳ್ಳಬೇಕು. ಎಲ್ಲಾ ವಿಚಾರಶೀಲ ಮನುಷ್ಯರು ಮಾನವ ಕಲ್ಯಾಣವನ್ನು ಗುರಿಯೆಂದು ಭಾವಿಸಿದ್ದಾರೆ. ಆದರೆ ದೌರ್ಭಾಗ್ಯವೆಂದರೆ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ತಿಳಿಯುವುದರಲ್ಲಿ ಅಸಮರ್ಥನಾಗಿದ್ದಾನೆ. ಮಾನವನನ್ನು ಸುಖಿ ಹಾಗೂ ಸಂಪನ್ನನನ್ನಾಗಿಸುವ ಪ್ರಯತ್ನದಲ್ಲಿ ಸಮಾಜವಾದ ಹಾಗೂ ಪ್ರಜಾಪ್ರಭುತ್ವ, ಎರಡೂ ಅದಕ್ಕೆ ಒಂದು ಬೀಭತ್ಸ ರೂಪವನ್ನು ನೀಡಿದೆ. ಅವರು ಅದರ ಸಮಸ್ತ ವೈಶಿಷ್ಟ್ಯಗಳನ್ನು ಅವರಿಂದ ಕಸಿದುಕೊಂಡಿದ್ದಾರೆ. ರೆನೆಪ್ಲುಪನು 'ಡಿ–ಹ್ಯೂ'ಮನೈಜೇಶನ್ ಇನ್ ಮಾಡರ್ನ್ ಸೊಸೈಟಿ' ಎಂಬ ಪುಸ್ತಕದಲ್ಲಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಈ ಆಯಾಮದ ವಿಸ್ತೃತ



ವಿವೇಚನೆಯನ್ನು ಮಾಡಲಾಗಿದೆ. "ಪ್ರಜಾತಂತ್ರವು ನಮಗೆ ಮತದಾನ ನೀಡುವ ಅಧಿಕಾರ, ನ್ಯಾಯ ಪಡೆಯುವ ಅಧಿಕಾರ, ವಿಚಾರ–ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಸ್ವಯಂ ವ್ಯಕ್ತಿಯನ್ನು ನಿರ್ಧರಿಸಿಕೊಳ್ಳುವ ಸ್ವಾತಂತ್ರ್ಯ ಹಾಗೂ ಭಾಷಣಸ್ವಾತಂತ್ರ್ಯವನ್ನು ನೀಡಿದೆ. ಆದರೆ ಜೊತೆಗೆ ಅದು ನಮಗೆ ಓರ್ವ ಆರ್ಥಿಕ ಮಾನವನ ಕಲ್ಪನೆಯನ್ನು ಸಹ ನೀಡಿದೆ."

ಈ ಆರ್ಥಿಕ ಮಾನವನ ಕಲ್ಪನೆಯೇ ಬಂಡವಾಳಶಾಹಿಗೆ ಜನ್ಮ ನೀಡಿದೆ, ಅಲ್ಲಿ ಅಧಿಕಾಧಿಕ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಅತ್ಯಧಿಕ ಮಹತ್ವ ನೀಡಲಾಗಿದೆ. ಆದರೆ ಉದ್ದೇಶದಿಂದ ಕೂಡಿದ ಜೀವನ ಸಾಗಿಸುವ ಸಾಮರ್ಥ್ಯವನ್ನು ಹೆಚ್ಚಿಸುವ ಕಡೆ ಸಂಪೂರ್ಣವಾಗಿ ಅಲಕ್ಷ್ಯ ಮಾಡಿದರು. ಮತ್ತೊಂದೆಡೆ ಸಮಾಜವಾದ ಅಥವಾ ಸಾಮ್ಯವಾದದ ಸಾಮೂಹಿಕ ಸುರಕ್ಷೆ ಹಾಗೂ ಕಾರ್ಮಿಕರ ಹಿತಗಳನ್ನು ಸಂರಕ್ಷಿಸಲು ಘೋಷಿಸಲಾಯಿತು, ಆದರೆ ಇದರೊಡನೆ ಅದು ಓರ್ವ ಯುದ್ಧ–ಪಿಪಾಸು ಮಾನವನಿಗೆ ಜನ್ಮನೀಡಿತು. ಈ ಯುದ್ಧಲೋಲುಪ ಮಾನವನು ಸಮಾಜವಾದಿ ರಾಜ್ಯದ ಕೊಡುಗೆಯಾಗಿದ್ದಾನೆ. ಅವನಿಗೆ ವಿಚಾರಮಾಡುವ ಸ್ವಾತಂತ್ರ್ಯವೂ ಇಲ್ಲ ಹಾಗೂ ಸ್ವಯಂನಿರ್ಣಯ ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲ. ಈ ವ್ಯವಸ್ಥೆಯಲ್ಲಿ ಮಾನವಜೀವನದ ಮೌಲ್ಯ ಒಂದು ಅಸಹಾಯಕ ಪಶುವಿಗಿಂತ ಹೆಚ್ಚಾಗಿ ಕಂಡುಬರುವುದಿಲ್ಲ.

ಸಮಾಜವಾದ ಹಾಗೂ ಲೋಕತಂತ್ರ ಎರಡು ಸಹ ಮಾನವನ ಭೌತಿಕ ಸ್ವರೂಪ ಹಾಗೂ ಆವಶ್ಯಕತೆಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿತು ಹಾಗೂ ಎರಡೂ ಆಧುನಿಕ ವಿಜ್ಞಾನ ಹಾಗೂ ಯಾಂತ್ರಿಕ ಉನ್ನತಿಯ ಮೇಲೆ ಬಹಳ ಶ್ರದ್ಧೆಯನ್ನಿಟ್ಟಿದೆ. ಎರಡೂ ಸಹ ಈ ವರ್ತಮಾನ ಆವಿಷ್ಕಾರಗಳ ಹಿಡಿತಕ್ಕೆ ಸಿಕ್ಕಿಬಿದ್ದಿದೆ. ಪರಿಣಾಮವಾಗಿ ಮಾನವನ ಕಲ್ಯಾಣ ಹಾಗೂ ಅವನ ಅಗತ್ಯಗಳಿಗನುಗುಣವಾಗಿ ಉತ್ಪಾದನೆಯ ಸಾಧನಗಳನ್ನು ನಿರ್ಧರಿಸಲಾಗುತ್ತಿಲ್ಲ ಅದಲ್ಲದೇ ಅದನ್ನು ಯಂತ್ರಗಳಿಗನುಗುಣವಾಗಿ ನಿರ್ಧರಿಸಬೇಕಾಗಿದೆ. ಉತ್ಪಾದನೆಯನ್ನು ಕೇಂದ್ರೀಕರಿಸಿದ ವ್ಯವಸ್ಥೆಯಲ್ಲಿ ವ್ಯಕ್ತಿಯಿಂದ ಅದು ನಿಯಂತ್ರಿಸಲ್ಪಡಲಿ ಅಥವಾ ರಾಜ್ಯದಿಂದ ಆಗಲಿ, ಮಾನವ ಸ್ವಾತಂತ್ರ್ಯ ಲೋಪವಾಗಿ ಹೋಗುತ್ತದೆ. ಯಂತ್ರದ ಒಂದು ಭಾಗಕ್ಕಿಂತಲೂ ಹೆಚ್ಚಿನ ಮಹತ್ವ ವ್ಯಕ್ತಿಗೆ ಇಲ್ಲ. ನಾವು ಮನುಷ್ಯನ ಮನುಷ್ಯತ್ವವನ್ನು ರಕ್ಷಿಸಬೇಕಾಗಿದೆ ಆದ್ದರಿಂದ ನಾವು ಅವನನ್ನು ಯಂತ್ರದ ದಾಸ್ಯದಿಂದ ಮುಕ್ತಗೊಳಿಸಬೇಕಾಗಿದೆ. ಇಂದು ವ್ಯಕ್ತಿ ಯಂತ್ರವನ್ನು ಆಳಲಾರ; ಯಂತ್ರ ಮನುಷ್ಯನನ್ನು ಆಳುತ್ತಿದೆ. ಈ ಯಂತ್ರ ಬಗೆಯ ಒಲವು ಮನುಷ್ಯನ ಭೌತಿಕ ಆವಶ್ಯಕತೆಗಳನ್ನು ಅಧಿಕಾಧಿಕವಾಗಿ ತೃಪ್ತಿಗೊಳಿಸುವ ಭಾವನೆಯಿಂದ ಉಂಟಾಗಿದೆ. ಆದರೆ ಕೇವಲ ಭೌತಿಕ ಸಮೃದ್ಧಿಯಿಂದ ಮನುಷ್ಯನು ಸುಖವಾಗಿರಲು

ಸಾಧ್ಯವಿಲ್ಲ. ಭೌತಿಕಸಾಧನಗಳಿಂದ ಸಮೃದ್ಧ ರಾಷ್ಟ್ರಗಳ ಸಮಸ್ಯೆಗಳೂ ಸಹ ನಮ್ಮ ಮುಂದಿವೆ. ನಾವು ಸಂಪೂರ್ಣ ಮಾನವ ಜೀವನ ವಿಚಾರಮಾಡಿ, ಉತ್ಪಾದನೆ, ವಿತರಣೆ ಹಾಗೂ ಉಪಭೋಗಿಸುವುದನ್ನು ಒಂದು ಮೂಲಮಾನವೆಂದು ತಿಳಿದು ಚಲಿಸುತ್ತೇವೆ. ನಾವು ಇಂದು ಎಂತಹ ಪದ್ಧತಿಯನ್ನು ನಿರ್ಮಿಸಬೇಕಾಗಿದೆಯೆಂದರೆ ಅದರಲ್ಲಿ ಮನುಷ್ಯನು ಉತ್ಪಾದನೆ ಹಾಗೂ ಅದನ್ನು ಭೋಗಿಸುವಾಗ ಒಂದು ಸಾರ್ಥಕ ಜೀವನವನ್ನು ನಡೆಸುವುದರ ಕಡೆಗೆ ಗಮನವಿಡಬೇಕು. ಮನುಷ್ಯನು ಕೇವಲ ಭೌತಿಕ ಅಗತ್ಯಗಳ ಕೇಂದ್ರವಾಗಿರುವುದಿಲ್ಲ. ಅವನಲ್ಲಿ ಕೆಲವು ಆಧ್ಯಾತ್ಮಿಕ ಅಗತ್ಯಗಳೂ ಇವೆ. ಅವು ಜೀವನ ಪದ್ಧತಿ, ಮಾನವ ಜೀವನದ ಈ ಆಧ್ಯಾತ್ಮಿಕ ಆಯಾಮವನ್ನು ಅಲಕ್ಷ್ಯ ಮಾಡಿದಲ್ಲಿ ಎಂದಿಗೂ ಪರಿಪೂರ್ಣವಾಗಲಾರವು. ಇಲ್ಲಿ ನಾವು ನೆನಪಿನಲ್ಲಿಡಬೇಕಾದುದೇನೆಂದರೆ ಭೌತಿಕ ಪ್ರಗತಿಯೊಡನೆ ಆಧ್ಯಾತ್ಮಿಕ ಪ್ರಗತಿಯ ಕಲ್ಪನೆಯು ಕೇವಲ ಗಾಳಿಮಾತಾಗಿಯೇ ಉಳಿಯಬಾರದು, ಮಾನವನ ಹಿರಿಮೆಯನ್ನು ಸುರಕ್ಷಿತವಾಗಿಟ್ಟು ಸಮಾಜದ ಅಗತ್ಯಗಳನ್ನು ಪೂರ್ಣಗೊಳಿಸುವ ಹೊಣೆಯನ್ನು ಸಹ ನಿರ್ವಹಿಸಬೇಕಾಗುತ್ತದೆ. ಇಂದು ಸಮಾಜವಾದ ಹಾಗೂ ಪ್ರಜಾಪ್ರಭುತ್ವ ಎರಡೂ ಸಹ ಏಕಾಂಗಿ ಮಾರ್ಗವನ್ನು ಸ್ವೀಕರಿಸಿವೆ ಹಾಗೂ ಮನುಷ್ಯನ ಈ ಎರಡೂ ಭಿನ್ನ ಪ್ರವೃತ್ತಿಗಳ ಸರಿಯಾದ ಸಾಮಂಜಸ್ಯದಿಂದ ಅವನ ವ್ಯಕ್ತಿತ್ವದ ವಿಕಾಸ ಮಾಡುವಲ್ಲಿ ಒಂದು ಭ್ರಮೆಯುಕ್ತ ಸ್ಥಿತಿಯನ್ನು ನಿರ್ಮಿಸಿ ವಿಭಿನ್ನ ಶಕ್ತಿಗಳಿಗೆ ಒಂದು ಯುದ್ಧ ಸ್ಥಳಗಳನ್ನು ತಯಾರಿಸಲಾಗಿದೆ.

ಮಾನವಜೀವನದ ಈ ನಿರಾಶಪೂರ್ಣ ಸ್ಥಿತಿಯಿಂದ ಮಾರ್ಗ ಹುಡುಕುವುದಾದರೆ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಈ ನಾಲ್ಕು ಪುರುಷಾರ್ಥಗಳನ್ನು ಆಧರಿಸಿದ ಹಿಂದೂ ಜೀವನಾದರ್ಶವೇ ನಮ್ಮನ್ನು ಈ ಸಂಕಟದಿಂದ ಪಾರುಮಾಡಬಲ್ಲದು. ವಿಶ್ವದ ಸಮಸ್ಯೆಗಳಿಗೆ ಪರಿಷ್ಕಾರ ಸಮಾಜವಾದವಲ್ಲ, ಹಿಂದುತ್ವವಾದವಾಗಿದೆ. ಇದು ಜೀವನದ ವಿಚಾರ ಮಾಡುವಾಗ ಅವನ್ನು ಖಂಡಗಳಾಗಿ ವಿಭಜಿಸದೆ ಸಂಪೂರ್ಣ ಜೀವನವನ್ನು ಒಂದು ಮೂಲಮಾನವೆಂದು ತಿಳಿದು ಅದನ್ನು ಕುರಿತು ವಿಚಾರ ಮಾಡುವಂತಹ ಒಂದು ಜೀವನ ದರ್ಶನವಾಗಿದೆ. ಇಲ್ಲಿ ನಾವು ಹಿಂದೂ ಜೀವನಾದರ್ಶಗಳನ್ನು ಕುರಿತು ವಿಚಾರ ಮಾಡುವಾಗ ಕೆಲವು ಪ್ರಾಣವೇ ಇರದ ಕರ್ಮಕಾಂಡಗಳೊಡನೆ ಅಥವಾ ಹಿಂದೂ ಸಮಾಜದಲ್ಲಿ ವ್ಯಾಪ್ತ ಅನೇಕ ಅಹಿಂದೂ ವ್ಯವಹಾರಗಳೊಡನೆ ಅದರ ಸಂಬಂಧವನ್ನು ಜೋಡಿಸಬಾರದು. ಜೊತೆಗೆ ಹಿಂದುತ್ವ ವರ್ತಮಾನ ವೈಜ್ಞಾನಿಕ ಪ್ರಗತಿಯನ್ನು ವಿರೋಧಿಸುತ್ತದೆ ಎಂದು ತಿಳಿಯುವುದು ಸಹ ದೊಡ್ಡ ತಪ್ಪಾಗುತ್ತದೆ. ವಿಜ್ಞಾನ ಹಾಗೂ ಯಂತ್ರ ಈ ಎರಡರ ಉಪಯೋಗ ಹೀಗೆ ಆಗಬೇಕೆಂದರೆ ಅದರಿಂದ ಅವರು ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ



ಜೀವನಪದ್ಧತಿಗೆ ಅನುಗುಣವಾಗಿ.

ಮಹಾತ್ಮಗಾಂಧೀಜಿಯವರ ವಿಚಾರಗಳನ್ನು ಅನುಸರಿಸಿ ವಿನೋಬಾ, ಜಯಪ್ರಕಾಶ ನಾರಾಯಣ ಹಾಗೂ ರಾಜಗೋಪಾಲಾಚಾರ್ಯರು ಧರ್ಮದರ್ಶಿತ್ವದ ವಿಚಾರವನ್ನು ಮುಂದಿಟ್ಟರು. ಇದು ಹಿಂದೂ ಜೀವನಪದ್ಧತಿಗನುಗುಣವಾಗಿದೆ. ಇದು ಒಂದು ಎಂತಹ ವಿಚಾರವೆಂದರೆ ಸಮಾಜವಾದಿ ಹಾಗೂ ಸಮಾಜವಾದವಲ್ಲದ ಎರಡೂ ಸಮಾಜಗಳಿಗೆ ಸಮಾನವಾಗಿ ಉಪಯೋಗಿಯಾಗುತ್ತದೆ. ಆದರೆ ನಾವು ಪಾಶ್ಚಾತ್ಯ ಯಂತ್ರಪ್ರಣಾಳಿಯ ಅಂಧಾನುಕರಣೆಯನ್ನು ಮಾಡುತ್ತಾ ಇದ್ದರೆ ಸರ್ವೋದಯ ಅಥವಾ ಸಮಾಜವಾದ ಎರಡೂ ಸಹ ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸಲಾರದು, ಹಾಗೂ ನಮ್ಮ ಮುಂದಿರುವ ಸಮಸ್ಯೆಗಳಿಗೆ ಪರಿಹಾರವೂ ಸಿಗುವುದಿಲ್ಲ. ನಾವು ರಾಜನೈತಿಕ, ಆರ್ಥಿಕ, ಸಾಮಾಜಿಕ ಹಾಗೂ ಸೈದ್ಧಾಂತಿಕವಾಗಿ ಎಲ್ಲವನ್ನೂ ಮುಷ್ಕರ, ಮೆರವಣಿಗೆಯಿಂದ ಈ ಯಂತ್ರವಾದವನ್ನು ಎದುರಿಸಬೇಕಾಗುತ್ತದೆ. ನಾವು ಧರ್ಮರಾಜ್ಯ, ಪ್ರಜಾಪ್ರಭುತ್ವ, ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ವಿಕೇಂದ್ರೀಕರಣವನ್ನು ನಮ್ಮ ಗುರಿಯನ್ನಾಗಿಸಬೇಕು. ಇವೆಲ್ಲವುಗಳಿಂದ ಕೂಡಿದ ಸತ್ವವೇ ನಮಗೆ ಒಂದು ಒಳ್ಳೆಯ ಜೀವನದರ್ಶನವಾಗುವಂತೆ ಮಾಡುತ್ತದೆ, ಅದೇ ಇಂದಿನ ಸಮಸ್ತ ತೊಳಲಾಟಗಳಿಂದ ನಮಗೆ ಸುರಕ್ಷತೆಯನ್ನು ನೀಡಬಲ್ಲದು. ನೀವು ಇದನ್ನು ಹಿಂದುತ್ವವಾದ, ಮಾನವತಾವಾದ ಅಥವಾ ಬೇರೆ ಯಾವುದಾದರೂ ಹೊಸ ವಾದ ಹೀಗೆ ಯಾವುದೇ ಹೆಸರಿನಿಂದ ಕರೆಯಿರಿ, ಆದರೆ ಇದೊಂದೇ ಮಾರ್ಗವು ಭಾರತದ ಆತ್ಮಕ್ಕನುರೂಪವಾಗಿರುತ್ತದೆ ಮತ್ತು ಜನತೆಯಲ್ಲಿ ಹೊಸ ಉತ್ಸಾಹದ ಸಂಚಲನೆಯಾಗುವಂತೆ ಮಾಡುತ್ತದೆ ಬಹುಶಃ ಭ್ರಮೆಯಲ್ಲಿರುವ ನಾಲ್ಕೂ ದಾರಿಗಳಲ್ಲೂ ನಿಂತಿರುವ ವಿಶ್ವಕ್ಕೂ ಇದು ಮಾರ್ಗದರ್ಶಕವಾಗಿ ಕೆಲಸ ಮಾಡುತ್ತದೆ.

# ೧೬. ವಿಕೇಂದ್ರೀಕರಣ

ಹಿಂದಿನ ವರ್ಷಗಳಲ್ಲಿ ಭಾರತ ಸರ್ಕಾರವು ಜನತೆಯನ್ನು ಯಾವ ಘೋಷಣೆಗಳಿಂದ ಮೋಹಿತರನ್ನಾಗಿಸಲು ಪ್ರಯತ್ನಿಸಿದೆಯೋ, ಅವುಗಳಲ್ಲಿ 'ವಿಕೇಂದ್ರೀಕರಣ'ದ ಘೋಷಣೆಯು ವಿಶೇಷ ಮಹತ್ವವುಳ್ಳದ್ದಾಗಿದೆ. ರಾಜಕೀಯ ಅಧಿಕಾರಗಳ ವಿಕೇಂದ್ರೀಕರಣ ಹಾಗೂ ಆರ್ಥಿಕ ವಿಕೇಂದ್ರೀಕರಣದೊಂದಿಗೆ ಕೈಗಾರಿಕಾ ಕ್ಷೇತ್ರದಲ್ಲಿಯೂ ಏಕಾಧಿಪತ್ಯವನ್ನು ಸಮಾಪ್ತಗೊಳಿಸಲು ಕೈಗಾರಿಕಾ ವಿಕೇಂದ್ರೀಕರಣದ ಘೋಷಣೆಯನ್ನು ಹಲವಾರು ಬಾರಿ ಮರುಕಳಿಸಲಾಗಿದೆ.

ಆದರೆ ಕಾಂಗ್ರೆಸ್‌ನ ಆಡಳಿತದಲ್ಲಿ ಆರ್ಥಿಕ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ವಿಕೇಂದ್ರೀಕರಣಕ್ಕೆ ಬದಲಾಗಿ ಏಕಾಧಿಪತ್ಯವು ಎಷ್ಟರಮಟ್ಟಿಗೆ ಹರಡಿತ್ತು ಎಂಬುದನ್ನು ನಾವು ಈ ಒಂದು ಘಟನೆಯಿಂದಲೇ ತಿಳಿಯಬಹುದಾಗಿದೆ. ಸರ್ಕಾರವು 'ಏಕಾಧಿಪತ್ಯ'ದ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಕುರಿತು ವಿಚಾರ ಮಾಡುವ ಸಲುವಾಗಿ 'ಮೊನಾಪಲಿ ಕಮೀಶನ್'ನ್ನು ಸ್ಥಾಪಿಸಬೇಕಾಯಿತು ಹಾಗೂ ಅದರ ಗಂಭೀರವಾದ ವರದಿಯನ್ನು ನೋಡಿ ಎಲ್ಲಾ ಕ್ಷೇತ್ರಗಳಲ್ಲಿಯೂ ಚಿಂತೆ ವ್ಯಕ್ತವಾಯಿತು.

ನಿಜಕ್ಕೂ ಏಕಾಧಿಪತ್ಯದ ಸಂಬಂಧವು ಅಷ್ಟಾಗಿ ಕಾನೂನಿಗೆ ಸಂಬಂಧಪಡದೆ ಸರ್ಕಾರದ ನೀತಿ–ನಿರ್ಧರಿಸುವ ತತ್ವಗಳೊಡನೆ ಇರುತ್ತದೆ. ನಮ್ಮ ವರ್ತಮಾನ ಸೂತ್ರಧಾರರು ಈ ವಿಷಯವನ್ನು ಕುರಿತು ಸ್ವತಂತ್ರವಾಗಿ ಚಿಂತಿಸುವುದರ ಅಗತ್ಯವಿಲ್ಲವೆಂದು ತಿಳಿದಿದ್ದರು. ವಿದೇಶಗಳ ಮೋಹಕ 'ವಾದಗಳ' ಸುಳಿಯಲ್ಲಿ ಸಿಲುಕಿ ಅವರು ತಮ್ಮ ಗುರಿಯನ್ನು ಮರೆತರು. ನಮ್ಮ ಆತ್ಮ ಹಾಗೂ ಪ್ರಕೃತಿಯ ಜೊತೆಗೆ ನಮ್ಮ ವರ್ತಮಾನ ವಿಶಿಷ್ಟ ಪರಿಸ್ಥಿತಿಗಳನ್ನು 'ಬ್ರಹ್ಮವಾಕ್ಯ'ವೆಂದು ತಿಳಿದು ನಾವು ಆ ರಸ್ತೆಯ ಮೇಲೆ ಚಲಿಸಲು ಪ್ರಯತ್ನಿಸಲಾರಂಭಿಸಿದೆವು.

ಕೇವಲ ಭಾರತವೊಂದೇ ಅಲ್ಲದೆ ಸಾಮಾನ್ಯವಾಗಿ ಅನ್ಯದೇಶಗಳಲ್ಲಿಯೂ ಸಹ ಆರಂಭದಲ್ಲಿ ಯಾವುದೇ ಕಾರ್ಯದ ಯಶಸ್ಸಿಗಾಗಿ ಮಾನವೀಯ ಸಂಬಂಧಗಳನ್ನಾಧರಿಸಿದ ಪ್ರೇರಣೆ, ಮಾರ್ಗದರ್ಶನ ಹಾಗೂ ನಿಯಂತ್ರಣದ ಅಗತ್ಯವಿರುತ್ತದೆ. ಪಾಶ್ಚಾತ್ಯವು ಕೈಗಾರಿಕಾ ಕ್ಷೇತ್ರದಲ್ಲಿ ತಮ್ಮ ಪರಿಸ್ಥಿತಿ ಹಾಗೂ ಅಗತ್ಯಗಳಿಗನುಗುಣವಾಗಿ ಯಾವ ದೊಡ್ಡ ಕೈಗಾರಿಕೆಯನ್ನು ಆಶ್ರಯಿಸಿದೆಯೋ ಅವುಗಳಲ್ಲಿ ಮಾನವ ಒಂದು ದೊಡ್ಡ ಯಂತ್ರದ, ಹೃದಯಹೀನ ಸಮಷ್ಟಿಯ ಕೇವಲ ಒಂದು ಭಾಗವಾಗಿಹೋಗಿದ್ದಾನೆ. ಭಾರತದಲ್ಲಿ ನಾವು ಈ ರೀತಿಯ



ನಿರ್ಜೀವ ಯಂತ್ರದ ಕೇವಲ ಒಂದು ಅಂಗವಾಗಿ ನಮ್ಮ ವ್ಯಕ್ತಿತ್ವದ ಉಜ್ವಲ ಸ್ವರೂಪವನ್ನು ಪ್ರಕಟಗೊಳಿಸಲಾಗುವುದಿಲ್ಲ. ಈ ದೃಷ್ಟಿಯಿಂದ ವಿಚಾರಮಾಡಿದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಕುಟುಂಬವನ್ನಾಧರಿಸಿದ ಕಾರ್ಯವು ಜೀವನದ ಭಾಗವಾಗುವಂತಹ ವ್ಯವಸ್ಥೆಯನ್ನು ಸ್ವೀಕರಿಸಬೇಕಾಗುತ್ತದೆ. ಈ ವ್ಯವಸ್ಥೆಯಲ್ಲಿ ಮಾಲಿಕ, ಶ್ರಮಿಕ, ಉತ್ಪಾದಕ, ಗ್ರಾಹಕ ಮುಂತಾದವರ ಪರಸ್ಪರ ಸಂಬಂಧಗಳ ನಿರ್ಧಾರವಾಗುವುದು, ನಾವು ಈ ಸಂಬಂಧಗಳನ್ನು ಪಾಶ್ಚಾತ್ಯ ಮೂಲ್ಯಗಳ ಆಧಾರದ ಮೇಲೆ ನಿಯಂತ್ರಿಸಲಾಗುವುದಿಲ್ಲ. ಅವರು ಮಾನವೀಯ ಮೌಲ್ಯಗಳನ್ನು ಉಪೇಕ್ಷಿಸಿ ಸಾಮಾಜಿಕ ಜೀವನದಲ್ಲಿ ವಿಷಮ ಹಾಗೂ ಕಟುತ್ವದ ವಿಷವನ್ನು ತುಂಬಿದರು. ನಮ್ಮಲ್ಲಿ ಸದ್ಯ ಫ್ಯಾಕ್ಟರಿ ಆಕ್ಟ್, ವೇಜಸ್ ಆಕ್ಟ್ ಮುಂತಾದ ಎಲ್ಲಾ ಕಾನೂನುಗಳನ್ನು ಪಾಶ್ಚಾತ್ಯರನ್ನು ಅನುಕರಿಸಿ ಮಾಡಲಾಗಿದೆ. ೧೮ನೇ ಅಥವಾ ೧೯ನೇ ಶತಮಾನದಲ್ಲಿ ಬ್ರಿಟನ್ ಅಥವಾ ಅನ್ಯದೇಶಗಳಲ್ಲಿ ಉದ್ಯೋಗಪತಿ ಹೇಗೆ ಕಾಣಿಸಿಕೊಂಡನೋ ಹಾಗೂ ಕಾರ್ಲ್ ಮಾರ್ಕ್ಸ್‌ನು ಹೇಗೆ ಅವನನ್ನು ಚಿತ್ರಿಸಿದ್ದಾನೆಯೋ ಹಾಗೆಯೇ ಅವರು ಉದ್ಯೋಗಪತಿಯನ್ನು ಕಾಣುತ್ತಾರೆ. ಭಾರತದ ಹಲವಾರು ಉದ್ಯೋಗಪತಿಗಳು ಪಾಶ್ಚಾತ್ಯ ಉದ್ಯೋಗಗಳ ಪರಂಪರೆಯನ್ನು ಭಾರತದಲ್ಲಿ ಚಲಾಯಿಸಲೆಂದು ಅವರ ವೇಷ– ಭೂಷವನ್ನೇ ಧರಿಸಿದರು, ಆದರೆ ದೇಶದಲ್ಲಿ ಹರಡುತ್ತಿದ್ದ ವ್ಯಾಪಕ ಕೈಗಾರಿಕೀಕರಣದಲ್ಲಿ ಮಾನವೀಯ ಸಂಬಂಧಗಳನ್ನು ನಾವು ಭಾರತೀಯ ಮೌಲ್ಯಗಳ ಆಧಾರದ ಮೇಲೆ ನಿರ್ಮಿಸಬೇಕಾಗುವುದು.

ಸಾಧಾರಣವಾಗಿ ಕೆಲಸ ಹಾಗೂ ಅದರಿಂದ ಸಿಗುವ ಫಲದಿಂದಲೇ ಭಾರಿ ವಿಷಮತೆಗಳು ಉತ್ಪನ್ನವಾಗುವುದಿಲ್ಲ, ಅದು ಖಾಸಗಿ ಸಂಪತ್ತಿನ ಮೇಲೆ ಮನುಷ್ಯ ಕರ್ತವ್ಯವಿಮುಖ ಅಧಿಕಾರ ಹಾಗೂ ಅದರ ಉಪಯೋಗದಿಂದ ದುಡಿಮೆಯಿಲ್ಲದೆ ದೊರೆಯುವ ಆದಾಯದಿಂದ ಹೆಚ್ಚುತ್ತದೆ. ಇದರಿಂದಾಗಿ ಸಮಾಜವಾದಿಗಳು ಖಾಸಗಿ ಸಂಪತ್ತನ್ನು ಕೊನೆಗೊಳಿಸುವ ಮಾತನಾಡುತ್ತಾರೆ ಹಾಗೂ ಸಿದ್ಧಾಂತ ಹಾಗೂ ವ್ಯವಹಾರ ಎರಡೂ ದೃಷ್ಟಿಗಳಲ್ಲಿಯೂ ಅದನ್ನು ಸಮರ್ಥಿಸುವುದು ಬಹಳ ಕಷ್ಟವಾಗುತ್ತದೆ. ಸೃಷ್ಟಿಯ ಆರಂಭದಿಂದಲೇ ಹಾಗೂ 'ಮಾಗೃಧಃ ಕಸ್ಯಸ್ವಿದ್ಧನಮ್'ನ ಉಪದೇಶ ದೊರೆತಿದೆಯಾದರೂ ಈ ಪ್ರಪಂಚ 'ನನ್ನದು ಹಾಗು ನಿನ್ನದು' ಎಂಬುದರ ಹೆಸರಾಗಿದೆ. ಸಾಮ್ಯವಾದಿಗಳು ಯಾವ ಖಾಸಗಿ ಸ್ವತ್ತಿನ ಭಾವನೆಯನ್ನು ಬೇರುಸಹಿತ ನಾಶಮಾಡಲಿಚ್ಛಿಸಿದ್ದಾರೆಯೋ, ಅವರು ಮೊದಲಿಗೆ ವೈಯಕ್ತಿಕ ಹಾಗೂ ನಂತರ ಖಾಸಗಿ ಆಸ್ತಿಯನ್ನು ಸಹ ಸ್ವೀಕರಿಸುತ್ತಿದ್ದಾರೆ. ಖಾಸಗಿ ಸ್ವತ್ತಿನಿಂದಾಗಿ ಕೆಡುಕಾಗುತ್ತಿದ್ದರೂ ನಾವು ಅದನ್ನು ಬಹಿಷ್ಕರಿಸಲಾಗುವುದಿಲ್ಲ. ಖಾಸಗಿ ಸ್ವತ್ತಿನ ಎಲ್ಲೆಯನ್ನು ನಾವು ಅಗತ್ಯವಾಗಿ ಸ್ಥಾಪಿಸಬೇಕಾಗಿದೆ. ಈ ಎಲ್ಲೆಯನ್ನು ಸ್ಥಾಪಿಸುವ ಕಾರ್ಯಕ್ರಮವೇ ವಿಕೇಂದ್ರೀಕರಣ.

ಪಾಶ್ಚಾತ್ಯವನ್ನಾಧರಿಸಿದ ಉದ್ಯೋಗಗಳು ಹಾಗೂ ವಿಕೇಂದ್ರೀಕರಣ ಜೊತೆಯಲ್ಲಿ ಚಲಿಸಲಾರವು. ಬಹಳಷ್ಟು ಜನ ವಿಕೇಂದ್ರೀಕರಣವನ್ನು ಪ್ರಾದೇಶಿಕ ವಿಚಾರವೆಂದು ತಿಳಿಯುತ್ತಾರೆ. ಅವರು ವಿಕೇಂದ್ರೀಕರಣದ ಹೆಸರಿನಲ್ಲಿ ಮುಂಬೈ ಹಾಗೂ ಅಹಮದಾಬಾದನ ಕಾರ್ಖಾನೆಗಳನ್ನು ಹಳ್ಳಿಯಲ್ಲಿ ಸ್ಥಾಪಿಸಿ ಸಂತುಷ್ಟರಾಗುತ್ತಾರೆ. ಸಮಾಜವಾದಿಗಳು ರಾಜಕೀಯ ಶಕ್ತಿಯನ್ನು ಹಂಚಿ ಸಂತುಷ್ಟರಾಗುತ್ತಾರೆ ಹಾಗೂ ಹಳ್ಳಿ, ಜಿಲ್ಲೆ, ಪ್ರಾಂತ ಹಾಗೂ ಕೇಂದ್ರವೆಂಬ ನಾಲ್ಕು ಕಂಬಗಳನ್ನಾಧರಿಸಿದ ರಾಜ್ಯದಲ್ಲಿ ಅವರ ಸಮಾಜವಾದವೂ ಬೆಳೆಯುತ್ತದೆ. ಆದರೆ ಪ್ರತಿಸ್ಥಾನದಲ್ಲಿಯೂ ಆರ್ಥಿಕ ಶಕ್ತಿಯು ರಾಜ್ಯದ ಅಂಗಗಳ ಕೈವಶವಾಗಿರುತ್ತದೆ ಹಾಗೂ ಯಾವ ಉದ್ಯೋಗಗಳಿಂದ ಸ್ಥಾನ–ಸ್ಥಾನಕ್ಕೂ ಉತ್ಪಾದನೆಯಾಗುವುದೋ ಅದು ಪಾಶ್ಚಾತ್ಯ ಶೈಲಿಯದ್ದಾಗಿರುತ್ತದೆ. ಅವರ ಒಡೆತನ ಪಾಲುದಾರಿಕೆಯದ್ದಾಗಿದ್ದು ಸ್ವಂತದ್ದಾಗಿರುವುದಿಲ್ಲ. ಸರ್ವೋದಯವಾದವು ವರ್ತಮಾನ ತಂತ್ರಜ್ಞಾನವನ್ನು ವಿರೋಧಿಸುತ್ತದೆಯಾದರೂ, ಅದರ ಗ್ರಾಮ–ರಾಜ್ಯದಲ್ಲಿ ಗ್ರಾಮಪಂಚಾಯತಿಯ ನಿರೀಕ್ಷಣೆಯಲ್ಲಿ ಸಂಪೂರ್ಣಹಳ್ಳಿ ಒಂದು ಭೂಪ್ರದೇಶವಾಗಿ ರೂಪುಗೊಂಡು ವ್ಯವಸಾಯವನ್ನು ಮಾಡಲಾಗುತ್ತದೆ. ಇದರ ವ್ಯಾವಹಾರಿಕ ಮುಖವು ರಷ್ಯಾದ ಸಾಮೂಹಿಕ ಬೇಸಾಯಕ್ಕಿಂತಲೂ ಅವ್ಯವಸ್ಥಿತವಾಗಿರುತ್ತದೆ. ಇದರಲ್ಲಿ ಆಧುನಿಕ ಯಂತ್ರಗಳನ್ನು ಉಪಯೋಗಿಸುವುದಿಲ್ಲ ಹಾಗೂ ವ್ಯಕ್ತಿಗೆ ಉತ್ಪಾದನೆಯ ಸ್ವಾತಂತ್ರ್ಯವೂ ಇರುವುದಿಲ್ಲ. ಸಮಾಜವಾದಿಗಳು ಹೇಗೆಯೇ ಇರಲಿ, ಪಾಶ್ಚಾತ್ಯ ಉದ್ಯೋಗಗಳಲ್ಲಿ ತಮ್ಮ ದೃಢ ಶ್ರದ್ಧೆಯನ್ನಿಟ್ಟು ಮುಂದುವರಿಯುತ್ತಾರೆ. ಅವರು ಯಂತ್ರಗಳೊಡನೆಯಲ್ಲದೇ ಯಂತ್ರಗಳ ಮಾಲೀಕರೊಡನೆ ಹೋರಾಡುತ್ತಾರೆ. ಪರಿಣಾಮ ಅವರು ಅದರ ಮಾಲಿಕತ್ವವನ್ನು ರಾಜ್ಯಕ್ಕೆ ವಹಿಸಿ ಸಂತುಷ್ಟರಾಗುತ್ತಾರೆ. ಮತ್ತೊಂದೆಡೆ ಸರ್ವೋದಯವಾದಿಗಳು ಯಂತ್ರಗಳಿಂದ ಉಂಟಾಗುವ ತೊಡಕುಗಳನ್ನು ತಿಳಿದರು ಹಾಗೂ ಅದನ್ನು ಬಹಿಷ್ಕರಿಸಿದರು. ಖಾಸಗಿ ಸ್ವತ್ತಿನಿಂದ ಉಂಟಾಗುವ ತೊಂದರೆಗಳನ್ನು ನೋಡಿದರು ಹಾಗೂ ಅದನ್ನು ನಾಶಮಾಡಲು ಪ್ರಯತ್ನಪಟ್ಟರು. ಸಮಾಜವಾದಿಗಳು ರಾಜ್ಯದ ಬಹು ದೊಡ್ಡ ಹಾಗೂ ನಿರಂಕುಶ ಶಕ್ತಿಯನ್ನು ನೋಡಿ ಅದನ್ನು ಸಹ ತ್ಯಾಜ್ಯವೆಂದು ಹೇಳಿದರು ಹಾಗೂ ಶಾಸನವಿಲ್ಲದ ಸಮಾಜದಲ್ಲಿ ಸಮಸ್ತ ಶಕ್ತಿಯನ್ನು ಹಳ್ಳಿಯ ಗ್ರಾಮಪಂಚಾಯಿತಿಗೆ ವಹಿಸಲಾಯಿತು. ಇದೆಲ್ಲಾ ಅವ್ಯಾವಹಾರಿಕವಾದರೂ ಯಾವ ಕೆಡುಕುಗಳಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ಇದನ್ನು ಮಾಡಲಾಗುತ್ತಿದೆಯೋ – ಆ ಕೆಡುಕುಗಳು ಇದರಿಂದ ಕೊನೆಗೊಳ್ಳುವುದಿಲ್ಲ. ಇದು ರೋಗದಿಂದ ಮುಕ್ತಿ ಪಡೆಯಲು ರೋಗಿಯನ್ನು ಮುಗಿಸಿಬಿಡುವ ಕ್ರಿಯೆಯಾಗುತ್ತದೆ. ಇದು ವಿಕೇಂದ್ರೀಕರಣದ ವಿಡಂಬನೆಯಲ್ಲದೆ ಮತ್ತೇನು?

ದೌರ್ಭಾಗ್ಯವೆಂದರೆ ಈ ಎಲ್ಲಾ ವಿಚಾರಧಾರೆಗಳು ಮಾನವನನ್ನು ಮೂಳೆ



ಮಾಂಸದಿಂದ ಕೂಡಿದ, ವಿವಿಧ ಗುಣಗಳಿಂದ ಪರಿಪೂರಿತ, ಇಚ್ಛೆ, ಆಕಾಂಕ್ಷೆಗಳು ಹಾಗೂ ಭಾವನೆಗಳಿರುವ ಜೀವಂತ ಪ್ರಾಣಿಯೆಂದು ತಿಳಿಯದೇ ಅವನ ಯಾವುದೋ ಭಾವಸ್ವರೂಪದ ಕಲ್ಪನೆಯನ್ನು ಹೊತ್ತು ತಮ್ಮನ್ನು ರಚಿಸಿಕೊಳ್ಳುತ್ತವೆ. ವೈಯಕ್ತಿಕ ಸ್ವಾತಂತ್ರ್ಯ ವಿಚಾರವನ್ನು ಹೊತ್ತು ಸಾಗುವ ಪ್ರಜಾತಂತ್ರವು ಒಬ್ಬ 'ಆರ್ಥಿಕ ಮಾನವ'ನನ್ನು ಸೃಷ್ಟಿಸಿದೆಯಾದರೆ ಸಾಮ್ಯವಾದವು 'ಸಾಧಾರಣ ಜನ' (ಮಾಸ್‌ಮ್ಯಾನ್)ವನ್ನು ಸೃಷ್ಟಿಸಿತು. ಈ ಸಾಧಾರಣಜನ (ಸಾಮಾನ್ಯಜನ) ಭಗವಂತನ ಸೃಷ್ಟಿಯಾಗಿರದೆ ರಾಜ್ಯದಿಂದ ಸೃಷ್ಟಿಸಲ್ಪಡುತ್ತಾರೆ. "ರಾಜ್ಯವೇ ಅವರ ಸಮಸ್ತ ವಿಚಾರಗಳು, ಭಾವನೆಗಳು, ಕ್ರಿಯೆಗಳು ಹಾಗೂ ಆದರ್ಶಗಳನ್ನು ನಿಯಂತ್ರಿಸುತ್ತದೆ. ಅವರಿಗೆ ವಿಚಾರ, ವೈಯಕ್ತಿಕ ನಿರ್ಣಯ ಹಾಗೂ ಸಂಕಲ್ಪಗಳ ಸ್ವಾತಂತ್ರ್ಯ ದೊರೆಯುತ್ತದೆ ಹಾಗೂ ಬದಲಿಗೆ ಅವರಿಗೆ ಯಾಂತ್ರಿಕ–ಮಾನವನ ಸುರಕ್ಷೆ ಪ್ರಾಪ್ತವಾಗುತ್ತದೆ." ಸರ್ವೋದಯವಾದಿಗಳು ಸಹ ಸರ್ವಸ್ವವನ್ನು ಸಮರ್ಪಿಸುವ, ಭಾವದಿಂದ ಸರ್ವೋದಯವಾದದ ಪ್ರಕೃತಿಯಿಂದ ಕೆಲಸ ಮಾಡುವಂತಹ ಭಾವನೆಯನ್ನು ಹೊಂದಿರುವ ಜನರ ಕಲ್ಪನೆಯನ್ನು ಹೊತ್ತು ಸಾಗುತ್ತಾರೆ.

ಸದ್ಯದ ಸಾಮ್ಯವಾದ ಹಾಗೂ ಬಂಡವಾಳಶಾಹಿ ಎರಡೂ ವಾದಗಳಲ್ಲಿ ಒಡೆತನದ ಸ್ವರೂಪದ ಅಂತರವನ್ನು ಬಿಟ್ಟು ಮತ್ತ್ಯಾವುದೇ ಅಂತರವಿಲ್ಲ. ಅಂದರೆ ಎರಡೂ ವಾದಗಳಲ್ಲಿ ವ್ಯಕ್ತಿವಿಕಾಸದ ಯಾವುದೇ ಸೌಲಭ್ಯವಿಲ್ಲ ಹಾಗೂ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳು ಸಹ ಕೇವಲ ಹೆಸರಿಗೆ ಲಭಿಸುತ್ತವೆ. ಸಾಮ್ಯವಾದವನ್ನು ಕುರಿತ ಪ್ರಿನ್ಸ್ ಕ್ರೊಪಾಟಕಿನನು ೧೯೦೪ರಲ್ಲಿ ಹೀಗೆ ಬರೆದಿದ್ದನು – "ಈ ಶತಮಾನದ ಪ್ರಭಾವಶಾಲಿ ಪ್ರವೃತ್ತಿಗಳಾದ ವಿಕೇಂದ್ರೀಕರಣ, ಸ್ವರಾಜ್ಯ ಹಾಗೂ ಸ್ವತಂತ್ರ ಒಪ್ಪಂದವನ್ನು ಅನುಸರಿಸುತ್ತಾರೆ ಅಥವಾ ಅದಕ್ಕೆ ವಿರುದ್ಧವಾಗಿ ನಾಶವಾದ ಶಕ್ತಿಯನ್ನು ಪುನಃ ಪ್ರತಿಷ್ಠಾಪನೆಗೊಳಿಸುತ್ತಾರೆ." ಪ್ರಿನ್ಸ್ ಕ್ರೊಪಾಟಕಿನ್ ಯಾವ ಕಮ್ಯೂನಿಸಮ್‌ನ್ನು ಕಲ್ಪಿಸಿಕೊಳ್ಳುತ್ತಿದ್ದರೋ ಅದೇ ನಿಜವಾದ ಕಮ್ಯೂನಿಸಮ್ ಆಗಿದೆಯೋ ಅಥವಾ ಇಂದು ರಷ್ಯಾದಲ್ಲಿ ಏನು ನಡೆಯುತ್ತಿದೆಯೋ ಎಂದು ಹೇಳುವುದು ಬಹಳ ಕಷ್ಟವಾಗಿದೆ. ಆದರೆ ಸಮಾಜವಾದವು ಸರ್ಕಾರೀಕರಣದ ಮತ್ತೊಂದು ಹೆಸರಾಗಿದೆ ಎಂಬುದು ನಿಜವಾದ ಸಂಗತಿಯಾಗಿದೆ. ಅದರಿಂದ ಶಕ್ತಿ ಹಾಗೂ ಆರ್ಥಿಕತೆಯ ವಿಕೇಂದ್ರೀಕರಣವನ್ನು ನಿರೀಕ್ಷಿಸುವುದು ವ್ಯರ್ಥ.

ವಿಕೇಂದ್ರೀಕರಣದ ಮೂಲ ಘಟಕಗಳೆಂದರೆ ವ್ಯಕ್ತಿ ಹಾಗೂ ಕುಟುಂಬ. ವ್ಯಕ್ತಿಯ ಪ್ರಯತ್ನಗಳು ಮತ್ತು ಕುಟುಂಬದ ಆಶ್ರಯ ಹಾಗೂ ಒಡೆತನದಿಂದ ಎಂದಿಗೂ ವ್ಯಾಪಕವಾಗಿ ಅಸಮಾನತೆ ಅಥವಾ ಶೋಷಣೆಯ ಸಾಧ್ಯತೆಗಳು ಉತ್ಪನ್ನವಾಗಲಾರವು. ಯಾವಾಗ ವ್ಯಕ್ತಿಯು ಈ ಎಲ್ಲೆಗಳನ್ನು, ಉಲ್ಲಂಘಿಸಿ ಸಾಮೂಹಿಕ ಸಂಸ್ಥೆಗಳು ಹಾಗೂ ನಿಗಮಗಳಿಂದ ಅಧಿಕ ಶಕ್ತಿಯ ಒಡೆಯನಾದನೋ

ಅಂದಿನಿಂದ ಈ ಪ್ರವೃತ್ತಿಗಳು ಮತ್ತಷ್ಟು ಬಲಿಷ್ಠವಾದವು. ಆದ್ದರಿಂದ ಸಾಧಾರಣವಾಗಿ ಉತ್ಪಾದನೆಯು ವ್ಯಕ್ತಿ ಅಥವ ಕುಟುಂಬವನ್ನು ಆಧರಿಸಿರಬೇಕು. ನಾವು ಕುಟುಂಬದ ಮೂಲಮಾನವನ್ನು ಉತ್ಪಾದನೆಯ ಮೂಲಮಾನವನ್ನಾಗಿಸುವಂತಹ ವ್ಯವಸ್ಥೆಯನ್ನು ಸ್ವೀಕರಿಸಬೇಕು. ಉದ್ಯೋಗಗಳಲ್ಲಿ ಕುಟೀರ ಮೂಲಮಾನಗಳನ್ನು ಉತ್ಪಾದನೆಯ ಮೂಲಮಾನವನ್ನಾಗಿಸಬೇಕು. ಉದ್ಯೋಗಗಳಲ್ಲಿ ಮನೆಯಲ್ಲಿಯೇ ಅಳವಡಿಸಬಹುದಾದ ಗೃಹ ಹಾಗೂ ಸಣ್ಣಕೈಗಾರಿಕೆಗಳು ನಮ್ಮ ಔದ್ಯೋಗೀಕರಣದ ಕಾರ್ಯಕ್ರಮಗಳಾಗಬಹುದು. ಆದರೆ ಇದರಲ್ಲಿ ನಾವು ಒಳ್ಳೆಯ ಯಂತ್ರಗಳು ಹಾಗೂ ವಿದ್ಯುತ್ತನ್ನು ಬಳಸಬಹುದಾಗಿದೆ.

ಗಂಭೀರವಾಗಿ ವಿಚಾರಮಾಡಿದಲ್ಲಿ ಒಡೆತನದ ಅಧಿಕಾರ ವಾಸ್ತವಕ್ಕೆ ನಿಶ್ಚಿತ ಎಲ್ಲೆಗಳು ಹಾಗೂ ನಿಶ್ಚಿತ ಉದ್ದೇಶಗಳಿಗಾಗಿ ಯಾವುದೇ ವಸ್ತುವನ್ನು ಉಪಯೋಗಿಸುವ ಅಧಿಕಾರವಾಗಿದೆ. ಸಮಯಕ್ಕನುಗುಣವಾಗಿ ಈ ಅಧಿಕಾರಗಳಲ್ಲಿಯೂ ಪರಿವರ್ತನೆ ಆಗುತ್ತಿರುತ್ತದೆ. ಆದ್ದರಿಂದ ನಾವು ವ್ಯಕ್ತಿ ಹಾಗೂ ಸಮಾಜದ ಅಧಿಕಾರಗಳ ಸೈದ್ಧಾಂತಿಕ ಜಗಳದಲ್ಲಿ ಸಿಲುಕುವುದಿಲ್ಲ ನಮ್ಮಲ್ಲಿ ಸಮಾಜದ ಕೇವಲ ಒಂದು ಸ್ವರೂಪವೆಂದರೆ ರಾಜ್ಯವೆಂದು ತಿಳಿದಿಲ್ಲ. ವ್ಯಕ್ತಿ, ಕುಟುಂಬ, ಕುಲ, ಜಾತಿ, ರಾಜ್ಯ ಮುಂತಾದ ಹಲವಾರು ರೂಪಗಳಲ್ಲಿ ಸಮಾಜ ತನ್ನನ್ನು ತಾನು ವ್ಯಕ್ತಪಡಿಸಿಕೊಂಡು ಅವುಗಳ ಮೂಲಕ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುತ್ತದೆ. ವ್ಯಕ್ತಿಯಲ್ಲಿ ಸಮಾಜ–ಹಿತಭಾವನೆ ಸದಾ ಮೂಡಿರಲಿ ಎಂದು ನಮ್ಮಲ್ಲಿ ಅವಿಭಕ್ತ ಕುಟುಂಬದ ಒಂದು ವ್ಯಾವಹಾರಿಕ ಮೂಲವನ್ನು ಮುಂದಿಡಲಾಗಿದೆ. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯು ದುಡಿಯುವ ಅಧಿಕಾರವನ್ನು ಹೊಂದಿರುತ್ತಾನೆ ಹಾಗೂ ಸಂಪತ್ತು ಕುಟುಂಬದ ಒಳಿತಿಗಾಗಿ ಬಳಸಲಾಗುತ್ತದೆ. ಮನಸ್ಸಿಗೆ ಬಂದ ಹಾಗೆ ಅದರ ಉಪಯೋಗವನ್ನು ಮಾಡಲಾಗುವುದಿಲ್ಲ.

ಧರ್ಮದರ್ಶಿತ್ವದ ಈ ಭಾರತೀಯ ಸಿದ್ಧಾಂತವನ್ನು ಗಾಂಧೀಜಿ ಸಮಾಜದ ಮುಂದಿಟ್ಟರು.

ಸಾಧಾರಣವಾಗಿ ಒಡೆತನ ಹಣಕ್ಕೆ ಸಂಬಂಧಿಸಿದ ವಿಷಯವಾಗಿದೆ. ಇದು ವ್ಯಾಪಾರ ವ್ಯವಸ್ಥೆಯ ಕೊಡುಗೆಯಾಗಿದೆ. ಕಾರ್ಖಾನೆಗಳಲ್ಲಿಯೂ ಬಂಡವಾಳ ಹೂಡುವವನು ಮಾಲಿಕನಾಗುತ್ತಾನೆ. ಬಂಡವಾಳ ಹೂಡುವವನು ಸ್ವತಃ ತಯಾರಿಸಿದ ಉಪಕರಣಗಳು ಹಾಗೂ ಸಾಧನಗಳನ್ನು ಬಳಸಿ ಉತ್ಪಾದನೆ ಮಾಡಿದಲ್ಲಿ ಯಾವುದೇ ತೊಂದರೆ ಉಂಟಾಗುವುದಿಲ್ಲ. ಏಕೆಂದರೆ ಅವನು ಸಮಸ್ತ ಉತ್ಪಾದನೆಯ ಮಾಲಿಕನಾಗುತ್ತಾನೆ. ಆದರೆ ಆ ಉಪಕರಣಗಳನ್ನು ಬಳಸಿ ಉತ್ಪಾದನೆ ಮಾಡಿದಲ್ಲಿ ಎರಡರಲ್ಲಿಯೂ ಉತ್ಪಾದನೆಯ ಬೆಲೆಯ ಹಂಚಿಕೆಯ ಸಮಸ್ಯೆಯೊಡನೆ



ಆ ಉಪಕರಣಗಳ ಒಡೆತನದ ಪ್ರಶ್ನೆಯೂ ಎದುರಾಗುತ್ತದೆ. ಏಕೆಂದರೆ ಶ್ರಮಿಕರಿಗೆ ತಮ್ಮ ಉಪಕರಣ ಹಾಗೂ ಯಂತ್ರದೊಡನೆ ಬಹಳ ಸಂಬಂಧವಿರುತ್ತದೆ. ಅವುಗಳ ಸರಿಯಾದ ಬಳಕೆಯ ಮೇಲೆ ಅವನ ಜೀವನದ ಸಾಧನವನ್ನು ಅವಲಂಬಿಸಿರುತ್ತದೆ. ಆ ಯಂತ್ರಗಳನ್ನು ಮಾರಿಬಿಟ್ಟರೆ ಅಥವಾ ಅನ್ಯ ರೀತಿಯಲ್ಲಿ ಹಸ್ತಾಂತರಣೆ ಮಾಡಿದ್ದಲ್ಲಿ ಅದರ ಪರಿಣಾಮ ಶ್ರಮಿಕರ ಮೇಲೂ ಆಗುತ್ತದೆ. ಚಿರ ಉತ್ಪಾದನೆಯ ಸಾಧನವಾದ ಭೂಮಿಯಲ್ಲಿ ಶ್ರಮಿಸುವ ಉತ್ಪಾದಕರ ಒಡೆತನದ ಅಧಿಕಾರವನ್ನು ಒಪ್ಪಲಾಗಿದೆ. ಹಾಗಿದ್ದಲ್ಲಿ ಕಾರ್ಖಾನೆಗಳಲ್ಲಿಯೂ ಸಹ ಶ್ರಮಿಕರ ಒಡೆತನವನ್ನು ಏಕೆ ಸ್ವೀಕರಿಸಬಾರದು? ಆಶ್ಚರ್ಯಕರ ಸಂಗತಿಯೆಂದರೆ ಇಂದು ಸಂಯುಕ್ತ ಬಂಡವಾಳದ ಕಂಪನಿಗಳಲ್ಲಿ ಬಹಳಮಟ್ಟಿಗೆ ಕಾರ್ಖಾನೆಯ ಲಾಭಾಂಶವನ್ನು ಬಿಟ್ಟು ಯಾವುದೇ ಬಗೆಯ ಸಂಬಂಧ ಒಡನಾಟವಿಲ್ಲದ ಒಬ್ಬ ಷೇರುದಾರ ಒಡೆತನದ ಅಧಿಕಾರವನ್ನು ಉಪಯೋಗಿಸಿಕೊಳ್ಳುತ್ತಾನೆ. ಯಾವ ಶ್ರಮಿಕರು ಆ ಕಾರ್ಖಾನೆಯಲ್ಲಿ ನಿರಂತರವಾಗಿ ದುಡಿಯುತ್ತಾರೆಯೋ, ವಾಸ್ತವಕ್ಕೆ ಯಂತ್ರಗಳನ್ನು ಸಕ್ರಿಯಗೊಳಿಸುತ್ತಾರೆಯೋ ಹಾಗೂ ಅವರ ಸಂಪೂರ್ಣ ಜೀವನ ಆ ಕಾರ್ಖಾನೆಯ ಒಳಿತು–ಕೆಡುಕುಗಳನ್ನು ಆಧರಿಸಿದೆಯೋ, ಅವರು ಸದಾ ಪರಕೀಯತೆಯನ್ನು ಅನುಭವಿಸುತ್ತಾರೆ. ಲೋಭ ಹಾಗೂ ಬಯಕೆಯಿಲ್ಲದ ಈ ಹಿನ್ನಲೆ ಸರಿಯಿರುವುದಿಲ್ಲ. ಆದುದರಿಂದ ಆಂಶಿಕವಾಗಿ ಮಾತ್ರವಲ್ಲದೇ ಶ್ರಮಿಕರಿಗೂ ಸಹ ಒಡೆತನದ ಅಧಿಕಾರ ದೊರೆಯಬೇಕು ಹಾಗೂ ಲಾಭ ಹಾಗೂ ಆಡಳಿತದಲ್ಲಿ ಅವರನ್ನು ಸಹ ಪಾಲುದಾರನನ್ನಾಗಿಸಬೇಕು. ಹೀಗೆ ಶ್ರಮಿಕರ ಪ್ರತಿನಿಧಿಯು ನಿರೂಪಕ ಮಂಡಳಿಯಲ್ಲಿ ಸದಸ್ಯನಾಗಿರುತ್ತಾನೆ.

ಸಾರ್ವಜನಿಕ ಉದ್ಯೋಗಗಳಿಂದ ಅತ್ಯಧಿಕ ಶಕ್ತಿಯು ರಾಜ್ಯದ ಕೈವಶವಾಗುತ್ತದೆ. ಪ್ರಜಾಪ್ರಭುತ್ವವನ್ನಾಧರಿಸಿದ ರಾಜ್ಯದ ವ್ಯಾವಹಾರಿಕ ಅರ್ಥ ಆ ಪಕ್ಷದ ಕೈಯಲ್ಲಿ ಆಡಳಿತಸೂತ್ರವಿರುತ್ತದೆ ಎಂದಾಗುತ್ತದೆ. ಹೀಗೆ ಆಡಳಿತ ಪಕ್ಷಕ್ಕೆ ಅತ್ಯಧಿಕ ಶಕ್ತಿ ಕೈವಶವಾಗುತ್ತದೆ, ಈ ರೀತಿಯ ಕೇಂದ್ರೀಕರಣ ಸದಾ ಪ್ರಜಾತಂತ್ರಕ್ಕೆ ಘಾತಕ.

ವ್ಯಾಪಾರ–ಉದ್ಯೋಗಗಳನ್ನು ಯಶಸ್ವಿಯಾಗಿ ಮುಂದುವರಿಸಲು ಅವುಗಳನ್ನು ಆರ್ಥಿಕವಾಗಿ ಸಂಪೂರ್ಣ ಸಾರ್ವಜನಿಕ–ಹಿತದೃಷ್ಟಿಯಿಂದ ಚಲಾಯಿಸುವುದು ಅಗತ್ಯವಾಗಿದೆ. ಆದ್ದರಿಂದ ಅವುಗಳನ್ನು ಪ್ರತಿನಿತ್ಯ ಬದಲಾಗುತ್ತಿರುವ ರಾಜಕೀಯ ಪಕ್ಷಗಳಿಂದ ದೂರವಿಡಬೇಕಾಗುತ್ತದೆ. ಈ ದೃಷ್ಟಿಯಿಂದ ಅವುಗಳನ್ನು ಸ್ವಾಯತ್ತ ನಿಗಮಗಳಿಂದ ಚಲಾಯಿಸಬೇಕಾಗುತ್ತದೆ. ಪ್ರತಿದಿನದ ವ್ಯವಹಾರದಲ್ಲಿ ಅವುಗಳಿಗೆ ಸ್ವಾತಂತ್ರ್ಯವಿರಬೇಕಾದರೂ ಸಂಸತ್ತಿನ ನಿಯಂತ್ರಣವಿರುವಂತಹ ಏರ್ಪಾಟಿರಬೇಕಾಗುತ್ತದೆ. ಶ್ರಮಿಕರನ್ನು ಆಡಳಿತದಲ್ಲಿ ಪಾಲುಗಾರರನ್ನಾಗಿಸುವ ದೃಷ್ಟಿಯಿಂದ ಸಾರ್ವಜನಿಕ ಉದ್ಯೋಗಗಳಲ್ಲಿ ಉಳಿದ ಮಾರ್ಗದರ್ಶನವನ್ನು ನೀಡಬೇಕಾಗುತ್ತದೆ.

# ೧೭. ಸ್ವದೇಶಿ–ವಿದೇಶಿ : ಗುರುಪೂಜೆ

ಗುರುಪೂಜಾ–ಪರ್ವ ಪ್ರತಿವರ್ಷ ಬರುತ್ತದೆ ಹಾಗೂ ಭಾರತದ ಕೋಟಿಗಟ್ಟಲೆ ಸ್ತ್ರೀ–ಪುರುಷರು ಒಂದಲ್ಲ ಮತ್ತೊಂದು ರೀತಿಯಲ್ಲಿ ಈ ಉತ್ಸವವನ್ನು ಆಚರಿಸುತ್ತಾರೆ. ಈ ಉತ್ಸವದ ಮಹತ್ವವನ್ನು ಮರೆತ ಕೋಟಿಗಟ್ಟಲೆ ಜನರು ಸಹ ಇದ್ದಾರೆ ಮತ್ತು ಅವರ ಪಾಲಿಗಿದು ಸರ್ವೇಸಾಧಾರಣ ದಿನವಾಗಿರುತ್ತದೆ. ಅವರು ಇದರ ಮಹತ್ವವನ್ನು ತಿಳಿದಿರುವುದಿಲ್ಲ ಹಾಗೂ ಯಾವುದೇ ರೀತಿ ಅದನ್ನು ಸ್ವೀಕರಿಸುವುದಿಲ್ಲ. ಇನ್ನು ಗುರುಪೂಜೆಯನ್ನು ಅವಮಾನಗೊಳಿಸುವ ಜನರು ಸಹ ಇದ್ದಾರೆ. 'ಗುರುಪೂಜೆ' ಶಬ್ದವನ್ನು ಕೇಳಿದೊಡನೆಯೆ ಕೋಪಗೊಳ್ಳುತ್ತಾರೆ. ಗುರುಪೂಜೆ ಮಾಡುವವರನ್ನು ನೋಡಿ ಅವರ 'ಹಿರಿತನ ಹರಡುತ್ತಿದ್ದಾರೆ' ಎಂದು ಹೇಳಿ ಶಿಷ್ಟ ಶಬ್ದಗಳಲ್ಲಿ ತಮ್ಮ ಮನಸ್ಸಿನ ದುಃಖವನ್ನು ತೋಡಿಕೊಳ್ಳುತ್ತಾರೆ. ಅವರು ಒಪ್ಪಿದರೂ ಒಪ್ಪದಿದ್ದರೂ ಅವರಿಗೂ ಗುರುಗಳಿರುತ್ತಾರೆ ಹಾಗೂ ಅವರು ಸಹ ಗುರುಪೂಜೆಯನ್ನು ಮಾಡುತ್ತಾರೆ. ಭೌತಿಕವಾಗಿ ಪೂಜೆ ಮಾಡದಿದ್ದರೂ ಆಧ್ಯಾತ್ಮಿಕ ಪೂಜೆ ಅವಶ್ಯವಾಗಿ ಮಾಡುತ್ತಾರೆ. ಗೋಸ್ವಾಮಿ ತುಳಸಿದಾಸರು ಹೀಗೆ ಹೇಳುತ್ತಾರೆ. "ಗುರುವಿಲ್ಲದೇ ಜ್ಞಾನವಿಲ್ಲ" ಹಾಗೂ ಇಂದಿನ ಮನೋವಿಜ್ಞಾನವು ಸಹ ಇದನ್ನು ಸಮರ್ಥಿಸುತ್ತಿದೆ. ಮನಷ್ಯ–ಜೀವನದ ಅನುಕರಣೆ, ಸಂವೇದನೆ ಹಾಗೂ ಸಹಾನೂಭೂತಿಯ ಪ್ರವೃತ್ತಿ ಹಾಗೂ ಶಕ್ತಿಯೇ ಅವರ ಜ್ಞಾನಕ್ಕೆ ಕಾರಣವಾಗುತ್ತದೆ. ಮನುಷ್ಯನು ತನಗಿಂತ ಯಾರನ್ನು ಶ್ರೇಷ್ಠ ಎಂದು ಭಾವಿಸುವನೋ ಅವರನ್ನು ಮಾತ್ರ ಅನುಕರಿಸುತ್ತಾನೆ,

**ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ**
**ಸ ಯತ್‌ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥**

ಭೌತಿಕ ಕ್ಷೇತ್ರಕ್ಕೆ ಸಮವಾಗಿ ಜ್ಞಾನ ಕ್ಷೇತ್ರದಲ್ಲಿಯೂ ಸಹ ಗುರುತ್ವಾಕರ್ಷಣೆಯ ನಿಯಮ ಅನ್ವಯಿಸುತ್ತದೆ ಎಂದು ಗೀತೆಯಲ್ಲಿಯೂ ಹೇಳಲಾಗಿದೆ. ಯಾರನ್ನು ಶ್ರೇಷ್ಠವೆಂದು ತಿಳಿಯುತ್ತೇವೆಯೋ ಅವರ ಕಡೆ ನಮ್ಮ ಮನಸ್ಸು ಆಕರ್ಷಿತವಾಗುತ್ತದೆ ಹಾಗೂ ಅವರ ಕ್ರಿಯೆಗಳ ಅನುಕರಣೆ, ವಿಚಾರಗಳಲ್ಲಿ ಸಂವೇದನೆ ಹಾಗೂ ಭಾವನೆಗಳೊಡನೆ ಸಹಾನುಭೂತಿಯ ಭಾವದೊಂದಿಗೆ ನಮ್ಮ ಜೀವನದ ಮೇಲೆ ಅವರ ಪ್ರಭಾವವನ್ನು ಏರ್ಪಡಿಸಿಕೊಳ್ಳುತ್ತೇವೆ. ಈ ಶ್ರೇಷ್ಠಪುರುಷನೇ ಅವರ ಗುರುವಾಗುತ್ತಾನೆ. ತಿಳಿಯದೇ ಅವರ ಬಗ್ಗೆ ಆದರದ ಭಾವನೆ ಮೂಡುತ್ತದೆ.



ಇಷ್ಟೇ ಅಲ್ಲದೇ, ಗುರುವಿನಂತೆ ಆಗುವ ಪ್ರಯತ್ನದಲ್ಲಿ ದೈಹಿಕ ಪೂಜೆಯಾಗದಿದ್ದರೂ 'ಶಿವೋ ಭೂತ್ವಾ ಶಿವಂ ಯಜೇತ್' ಎಂಬ ಮಾತಿನ ಪ್ರಕಾರ ನಿಜವಾದ ಅರ್ಥದಲ್ಲಿ ಪೂಜೆ ಖಂಡಿತವಾಗಿ ಆಗುತ್ತದೆ. ಈ ರೀತಿ ಈ ಜೀವಜಗತ್ತಿನಲ್ಲಿ ಹಾಗೂ ವಿಶೇಷವಾಗಿ ತಾರ್ಕಿಕವೆಂದು ಹೇಳಲಾಗುವ ಮಾನವರಲ್ಲಿ ಗುರುವು ಸೃಷ್ಟಿಸಲಾಗದ್ದು ಏನೂ ಇಲ್ಲ. ಕಬೀರರ ಪ್ರಕಾರ 'ಪರರನ್ನು ಅಲೆಮಾರಿಯೆನ್ನುವವನಿಗೆ ತನ್ನ ಅಲೆದಾಟದ ಅರಿವಾಗದು' ಎಂಬಂತೆ ಮತ್ತೊಬ್ಬರ ಗುರುಪೂಜೆಯನ್ನು ಹಲವರು ದೂಷಿಸಿದರು ಸರಿಯೇ.

ಗುರುಪೂಜೆ ಸರ್ವವ್ಯಾಪಕವಾದಲ್ಲಿ ನಮಗೆದುರಾಗುವ ಪ್ರಶ್ನೆಯೆಂದರೆ ಯಾವ ಗುರುವನ್ನು ಪೂಜಿಸಬೇಕು? ಇಂದಿನ ಸ್ಥಿತಿಯಲ್ಲಿ ಈ ಪ್ರಶ್ನೆಯ ಮಹತ್ವ ಮತ್ತಷ್ಟು ಹೆಚ್ಚುತ್ತದೆ. ಏಕೆಂದರೆ ಇಂದಿನ ಭಾರತೀಯ ಜೀವನದ ಅಸಮಾನತೆಗೆ ಇದೇ ಕಾರಣವಾಗಿದೆ. ನಾವು ಸ್ವತಂತ್ರರಾಗಿದ್ದರೂ ಸಹ ನಮ್ಮ ರಾಷ್ಟ್ರದ ಗುರುತ್ವಾಕರ್ಷಣಾ ಕೇಂದ್ರ ಈಗಲೂ ನಮ್ಮ ರಾಷ್ಟ್ರದ ಹೊರಗೇ ಇದೆ. ಗುರುತ್ವಾಕರ್ಷಣೆಯ ಕೇಂದ್ರ ಹೊರಗಿದ್ದಲ್ಲಿ ಯಾವುದೇ ವಸ್ತುವಿನ ಸ್ಥಿತಿ ಹೇಗಾಗುತ್ತದೆಯೋ ಅದೇ ಸ್ಥಿತಿ ನಮ್ಮ ರಾಷ್ಟ್ರಕ್ಕೆ ಉಂಟಾಗುತ್ತಿದೆ. ನಾವು ನಮ್ಮ ಮಹಾಪುರುಷರನ್ನಲ್ಲವೇ ಪರರನ್ನು ಅನುಸರಿಸುತ್ತಿದ್ದೇವೆ. ನಮ್ಮ ಸಾಕ್ಷಿ ಹಾಗೂ ಆಪ್ತವಾಕ್ಯಗಳು ವೇದ, ಸ್ಮೃತಿ, ಗೀತೆ ಹಾಗೂ ಪುರಾಣಗಳಾಗಿರದೆ ಮಿಲ್, ಹೇಗಲ್, ಆ್ಯಡಮ್ ಸ್ಮಿತ್, ಮಾರ್ಕ್ಸ್ ಹಾಗೂ ಏಂಜೆಲ್ಸ್ ಆಗಿದ್ದಾರೆ. ನಮ್ಮ ತಿಂಡಿ–ತೀರ್ಥ, ಉಡುಗೆ–ತೊಡುಗೆ ಆಚಾರ–ವಿಚಾರ ಎಲ್ಲವೂ ಪರ ಆದರ್ಶಗಳ ಪ್ರಭಾವಕ್ಕೊಳಗಾಗಿದೆ. ಬಹಳ ವೇಗವಾಗಿ ಆ ಆದರ್ಶಗಳ ಕಡೆ ಓಡುತ್ತಿದ್ದೇವೆ ಹಾಗೂ ಗುರುಪೂಜೆಯನ್ನು ಹಾಸ್ಯಕ್ಕೀಡುಮಾಡಿದ್ದೇವೆ.

ಪರತಂತ್ರ ಹಾಗೂ ಸ್ವಾತಂತ್ರ್ಯಕ್ಕಿರುವ ಅಂತರ ಕೇವಲ ಆಡಳಿತದ ಸೂತ್ರವು ವಿದೇಶಿ ಅಥವಾ ಸ್ವದೇಶಿಯರ ಕೈವಶವಾಗಿದೆಯೆಂದು ಅಲ್ಲ. ಮಾನವ–ಮಾನವನಲ್ಲಿ ಅಂತರವೇಕಿರಬೇಕು? ಮೌಂಟ್‌ಬೆಟನ್‌ರಿಗಿಂತ ಪಂಡಿತ ನೆಹರೂರವರು ಭಾವನಾಕ್ಷೇತ್ರದಲ್ಲಿ ಅಧಿಕ ಪ್ರಿಯರಾಗಿದ್ದರೂ ನಿಜವಾದ ತರ್ಕಸಮ್ಮತ ವೇದಾಂತಿಗಳಿಗೆ ಅವರಲ್ಲಿ ಯಾವುದೇ ಅಂತರವಿರುವುದಿಲ್ಲ. ಹಾಗಿದ್ದಲ್ಲಿ ವೇದಾಂತಿಗಳು ಸ್ವಾತಂತ್ರ್ಯದ ಪೂಜಾರಿಗಳಾಗಿರುವುದಿಲ್ಲವೇ. ರಾಷ್ಟ್ರ, ಕೇವಲ ರಾಷ್ಟ್ರವಲ್ಲದೇ, ಮಾನವ ಹಾಗೂ ಪಶು, ವಿಶ್ವದ ಎಲ್ಲಾ ಪದಾರ್ಥಗಳಲ್ಲಿಯೂ ಒಂದೇ ಸತ್ಯವನ್ನು ಕಾಣುವ ವೇದಾಂತಿಯು ಅಧಿಕ ಸ್ವಾತಂತ್ರ್ಯಪ್ರಿಯನಾಗಿರುತ್ತಾನೆ. ಸ್ವಾಮಿ ವಿವೇಕಾನಂದ ಹಾಗೂ ರಾಮತೀರ್ಥರಿಗೆ, ಜೀವನದಲ್ಲಿ ವೇದಾಂತದ ಪರಮಜ್ಞಾನ ಹಾಗೂ ಭಗವಂತನ ಸಾಕ್ಷಾತ್ಕಾರದ ಬಳಿಕವೂ ಸಹ ತಮ್ಮ ದೇಶ ಯಾವುದೇ ದೇಶಭಕ್ತನಿಗಿಂತಲೂ ಪ್ರಿಯವಾಗಿತ್ತು. ವಿಶ್ವಕವಿ ರವೀಂದ್ರನಾಥ ಠಾಗೋರರು ತಮ್ಮ ಮಾತೃಭಕ್ತಿಗಾಗಿ ಯಾವ ಸ್ವರ್ಗವನ್ನು ಕಲ್ಪಿಸಿಕೊಂಡರೋ ಅದರಲ್ಲಿ ಒಂದೆಡೆ ಹೀಗೆ ಹೇಳುತ್ತಾರೆ.

'ವೇರ್ ದಿ ವರ್ಲ್ಡ್ ಹ್ಯಾಸ್ ನಾಟ್ ಬೀನ್ ಬ್ರೋಕನ್ ಇಂಟು ಫ್ರೆಗ್‌ಮೆಂಟ್ಸ್ ಬೈ ನ್ಯಾರೋ ಡೊಮೆಸ್ಟಿಕ್ ವಾಲ್ಸ್' ಆದರೆ ಮತ್ತೊಂದು ಕಡೆ ಹೀಗೆ ಪ್ರಾರ್ಥಿಸುತ್ತಾರೆ, 'ಇಂಟು ದಟ್ ಹೆವೆನ್ ಆಫ್ ಫ್ರೀಡಂ, ಓಹ್ ಲಾರ್ಡ್! ಲೆಟ್ ಮೈ ಕಂಟ್ರೀ ಅವೇಕ್." ಇಲ್ಲಿ ಅವರು "ಲೆಟ್ ದಿ ವರ್ಲ್ಡ್ ಅವೇಕ್" ಎಂದು ಹೇಳಲಿಲ್ಲ. ಈ ಸ್ವರ್ಗವನ್ನು ಸಹ ಅವರು ತಮ್ಮ ದೇಶಕ್ಕಾಗಿ ಕೇಳಿಕೊಳ್ಳುತ್ತಿದ್ದಾರೆ. ಅಂದರೆ ಮಾನವ-ಮಾನವನಲ್ಲಿ ಯಾವುದೇ ರೀತಿಯ ಭೇದ-ಭಾವಮಾಡದೇ ಸ್ವಾತಂತ್ರ್ಯದ ಕಲ್ಪನೆ ಹಾಗೂ ಅದರ ಆರಾಧನೆಯ ಹಿನ್ನಲೆಯಲ್ಲಿ ಕೇವಲ ಅಧಿಕಾರದಲ್ಲಿರುವ ವ್ಯಕ್ತಿಗಳ ಪರಿವರ್ತನೆ ಮಾತ್ರವಲ್ಲದೇ ಅದಕ್ಕಿಂತಲೂ ಮುಖ್ಯವಾದ ಸಂಗತಿಯಾಗಿದೆ. ಗೀತೆಯಲ್ಲಿ ಈ ಸ್ವಾತಂತ್ರ್ಯದ ಭಾವನೆಯನ್ನು ಹೀಗೆ ವ್ಯಕ್ತಪಡಿಸಲಾಗಿದೆ. ಭಗವಂತ ಹೇಳಿದ –

**ಶ್ರೇಯಾನ್ ಸ್ವಧರ್ಮೋ ವಿಗುಣಃ**
**ಪರಧರ್ಮಾತ್ಸ್ವನುಷ್ಠಿತಾತ್**

ಹಾಗೂ

**ಸ್ವಧರ್ಮೇ ನಿಧನಂ ಶ್ರೇಯಃ**
**ಪರಧರ್ಮೋ ಭಯಾವಹಃ ।**

ತಮ್ಮ ಧರ್ಮಕ್ಕನುಗುಣವಾಗಿ ಜೀವನ ಸಾಗಿಸುವುದೇ ಸ್ವಾತಂತ್ರ್ಯ. ಸ್ವಾತಂತ್ರ್ಯದಲ್ಲಿ ಸ್ವಧರ್ಮ ಸದಾ ಅಡಗಿರುತ್ತದೆ. ಇಂದಿನ ಓದು-ಬರಹ ಕಲಿತ ಜನ ಸ್ವಧರ್ಮವೆಂದರೆ ರಿಲಿಜನ್ ಎಂದು ತಿಳಿಯುತ್ತಾರೆ. ಆದರೆ ಅದರ ನಿಜವಾದ ಅರ್ಥ ಉಪಾಸನಾ ವಿಧಿಯಲ್ಲದೇ ಸಮ್ಮ ಧಾರಣಾಶಕ್ತಿಯಾಗಿರುತ್ತದೆ. ಪಾಶ್ಚಾತ್ಯರ ಭಾಷೆಯಲ್ಲಿ ಸ್ವಧರ್ಮ-ಪಾಲನೆಯ ಅರ್ಥ 'ಆಪರ್‌ಚುನಿಟಿ ಫಾರ್ ಡೆವಲಪ್‌ಮೆಂಟ್' ಆಗಿರುತ್ತದೆ. ಸ್ವಧರ್ಮದಲ್ಲಿಯೇ ವಿಕಾಸವಡಗಿರುತ್ತದೆ, ಪರಧರ್ಮದಲ್ಲಿ ಅಲ್ಲ. ಮೀನಿನ ಸ್ವಧರ್ಮ ನೀರಿನಲ್ಲಿರುವುದಾಗಿದೆ ಹಾಗೂ ನಾಯಿಯ ಸ್ವಧರ್ಮ ಭೂಮಿಯ ಮೇಲೆ. ಮೀನನ್ನು ಭೂಮಿಯ ಮೇಲೆ ಹಾಗೂ ನಾಯಿಯನ್ನು ನೀರಿನಲ್ಲಿಟ್ಟರೆ ಎರಡೂ ಸಾಯುತ್ತವೆ.

ಪರತಂತ್ರದಲ್ಲಿ ಶಾಸನಸೂತ್ರ ಪರಕೀಯರ ಕೈವಶವಾದಾಗ ಸ್ವಧರ್ಮ ಪಾಲನೆಯಲ್ಲಿ ಅನೇಕ ರೀತಿಯ ಅಡ್ಡಿ-ಆತಂಕಗಳನ್ನು ಒಡ್ಡಲಾಗುತ್ತದೆ. ರಾಷ್ಟ್ರದ ಅಂಶಗಳನ್ನು ಧರ್ಮಭ್ರಷ್ಟವನ್ನಾಗಿಸುವ ಪ್ರಯತ್ನ ಮಾಡಲಾಗುತ್ತದೆ. ಈ ಅಡ್ಡಿ-ಆತಂಕಗಳ ಮುಂದೆ ಯಾರು ಬಾಗುತ್ತಾರೆಯೋ ಅವರು ರಾಷ್ಟ್ರೋಜ್ಜೀವನದಿಂದ ಪತಿತರಾಗಿ, ಭೌತಿಕವಾಗಿ ಅಲ್ಲದೇ ಮಾನಸಿಕ ಹಾಗೂ ಆತ್ಮದಿಂದಲೂ ಗುಲಾಮರಾಗಿಬಿಡುತ್ತಾರೆ. ಯಾರು ಈ ಅಡ್ಡಿ-ಆತಂಕಗಳನ್ನು ಎದುರಿಸುತ್ತಾರೆಯೋ ಅವರು ತಮ್ಮ ವ್ಯಕ್ತಿತ್ವವನ್ನು ಉಜ್ವಲಗೊಳಿಸುತ್ತಾ ಒಂದು ದಿನ ಸ್ವಾತಂತ್ರ್ಯದೇವಿಯ ಸಾಕ್ಷಾತ್ಕಾರ ಹೊಂದುವಲ್ಲಿ ಯಶಸ್ವಿಯಾಗುತ್ತಾರೆ. ತಮ್ಮ ಧರ್ಮ-ಪಾಲನೆಯ ಮಾರ್ಗದಲ್ಲಿ ಎದುರಾಗುವ ತೊಂದರೆಗಳನ್ನು ದೂರಗೊಳಿಸುವ ಪ್ರಯತ್ನಗಳಿಂದ



ಪಡೆದ ಸ್ವಾತಂತ್ರ್ಯ ಸದಾ ಸ್ವಧರ್ಮ ಪೂಜಾರಿಯಾಗಿರುತ್ತದೆ ಹಾಗೂ ಇಂತಹ ರಾಷ್ಟ್ರ ತಮ್ಮ ದೇವರಿಂದ ಪಡೆದಂತಹ ಬುದ್ಧಿ ಹಾಗೂ ಶಕ್ತಿಯ ವಿಕಾಸ ಮಾಡುತ್ತಾ ತನ್ನ ಹಾಗೂ ವಿಶ್ವದ ಒಳಿತನ್ನುಂಟುಮಾಡುತ್ತದೆ.

ಇಂದು ಭಾರತದ ಆಡಳಿತದ ಶಕ್ತಿ ದೇಶೀಯರ ಕೈವಶವಾಗಿದೆಯಾದರೂ ಅವರು ಸ್ವಧರ್ಮಭ್ರಷ್ಟರಾಗಿದ್ದಾರೆ. ಅವರಿಗೆ ಭಾರತೀಯತೆಯ ಬಗ್ಗೆ ಪ್ರೀತಿಯಿಲ್ಲ, ಅವರು ಭಾರತೀಯ ಆದರ್ಶಗಳ ಅನುಯಾಯಿಗಳಲ್ಲ. ಆದುದರಿಂದ ಅವರ ಶಾಸನದಿಂದ ಭಾರತೀಯ ಜೀವನದ ವಿಕಾಸವುಂಟಾಗುತ್ತಿಲ್ಲ. ಸ್ವಾತಂತ್ರ್ಯದ ನಮ್ಮ ದಾಹ ತೀರಲಿಲ್ಲ ಹಾಗೂ ಅದರ ಅಮೃತಫಲದ ಸ್ವಾದವೂ ಸಿಗಲಿಲ್ಲ. ಪ್ರತಿಯೊಬ್ಬ ಪರಕೀಯ ಆಡಳಿಗಾರನು ಕೆಲವು ದೇಶೀ ಜನರನ್ನು ತಮ್ಮ ಧರ್ಮದಲ್ಲಿ ದೀಕ್ಷಿತರನ್ನಾಗಿಸುವ ಪ್ರಯತ್ನಪಡುತ್ತಾನೆ. ಅವರ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅವನು ಗುರುವಾಗುತ್ತಾನೆ ಹಾಗೂ ತನ್ನ ಶಾಸನವನ್ನು ಅವರ ಮೇಲೆ ಹೇರಿರುತ್ತಾನೆ. ಮುಸ್ಲಿಂ ಆಡಳಿತಗಾರರು ಇಲ್ಲಿ ಅದನ್ನೇ ಮಾಡಿದರು. ಕೋಟಿಗಟ್ಟಲೆ ಭಾರತೀಯರನ್ನು ಧರ್ಮಭ್ರಷ್ಟರನ್ನಾಗಿಸಿ ತಮ್ಮ ಮತದಲ್ಲಿ ದೀಕ್ಷಿತರನ್ನಾಗಿಸಿದರು. ಇದರ ಪರಿಣಾಮವಾಗಿ ಮುಸ್ಲಿಂ ಉಪಾಸನಾ-ವಿಧಿಯನ್ನು ಸ್ವೀಕರಿಸಿದ ಹಿಂದೂಗಳು ಸ್ವಧರ್ಮ-ಭ್ರಷ್ಟರಾಗಿ ಭಾರತೀಯತೆಯ ವಿರೋಧಿಗಳಾದರು. ಅವರು ಭಾರತದ ಭೂಮಿಯನ್ನು ನರಕಸದೃಶವೆಂದು, ಭಾರತವಾಸಿಗಳನ್ನು ಧರ್ಮಭ್ರಷ್ಟರೆಂದೂ, ಭಾರತದ ಸಂಸ್ಕೃತಿಯನ್ನು ಅಪಸ್ವರವೆಂದೂ ತಿಳಿಯಲಾರಂಭಿಸಿದರು. ಇಂತಹ ಜನರು ಯಾವ ಪರಂಪರೆಯನ್ನೂ ಬೆಳೆಸಿದರೋ ಅದು ಭಾರತದ್ದಾಗಿರದೆ, ಪರ್ಶಿಯಾದ ಹಾಗೂ ಅರಬ್ಬಿ ಸ್ವರೂಪದ್ದಾಗಿತ್ತು ಹಾಗೂ ಈ ಕಾರಣಕ್ಕಾಗಿ ಪ್ರತಿಯೊಬ್ಬ ಸ್ವಾತಂತ್ರ್ಯ ಪ್ರಿಯ ಅದನ್ನು ವಿರೋಧಿಸಬೇಕಾಯಿತು. ಅಕ್ಬರ್, ಜಹಾಂಗೀರ್, ಷಾಹಜಹಾನ್ ಹಾಗೂ ಔರಂಗಜೇಬ್ ಎಲ್ಲರೂ ಈ ದೇಶದಲ್ಲಿ ಹುಟ್ಟಿದ್ದರೂ ಅವರ ರಾಜ್ಯ ಸ್ವರಾಜ್ಯವಾಗಿರಲಿಲ್ಲ.

ಮುಸಲ್ಮಾನರ ಹಾಗೆ ಆಂಗ್ಲರು ಸಹ ಭಾರತೀಯರನ್ನು ಧರ್ಮ ಭ್ರಷ್ಟರನ್ನಾಗಿಸಿದರು. ಆದರೆ ಅವರು ಮತಪರಿವರ್ತನೆಯ ನಡುವಿನ ಕೊಂಡಿಯತ್ತ ವಿಶೇಷ ಗಮನ ಕೊಡಲಿಲ್ಲ. ಅದರ ಪರಿಣಾಮವಾಗಿ ಈ ಧರ್ಮಭ್ರಷ್ಟರನ್ನು ಗುರುತಿಸುವುದು ಸಹ ನಮಗೆ ಕಷ್ಟವಾಗಿ ಹೋಗಿದೆ. ಅಷ್ಟೇ ಅಲ್ಲದೇ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಮುಸ್ಲಿಂರ ಕಾಲದಲ್ಲಿ ಧರ್ಮಭ್ರಷ್ಟರನ್ನು ಬಹಿಷ್ಕರಿಸಿ ನಾವು ನಮ್ಮ ರಾಷ್ಟ್ರೀಯ ಪರಂಪರೆಯನ್ನು ಪಾಲಿಸಿ ಅದನ್ನು ರಕ್ಷಿಸಿದೆವು, ಅದೇ ಆಂಗ್ಲರ ಕಾಲದಲ್ಲಿ ಈ ಧರ್ಮಭ್ರಷ್ಟ ವ್ಯಕ್ತಿಗಳು ನಮ್ಮ ನಾಯಕರಾಗಿ ನಮ್ಮನ್ನೂ ಸಹ ಪತನದೆಡೆಗೆ ಎಳೆದೊಯ್ಯುತ್ತಿದ್ದಾರೆ. ದೇಶದ ಸೂತ್ರ ದೇಶಜರಾದ ಕುತುಬ್ಬುದ್ದೀನ್, ಅಲಾಉದ್ದೀನ್, ಮುಹಮ್ಮದ್ ತುಘಲಕ್, ಫಿರೋಜ್ ಶಾಹ ತುಘಲಕ್, ಶೇರ್‌ಶಾಹ, ಅಕ್ಬರ್ ಹಾಗೂ ಔರಂಗಜೇಬ್ ನಂತಹ ನಾಯಕರ ಕೈವಶವಾಗಿದ್ದಲ್ಲಿ ಅವರ

ಗುರುತ್ವಾಕರ್ಷಣಾ ಕೇಂದ್ರ ಭಾರತೀಯ ಜೀವನದಲ್ಲಿ ಇಲ್ಲ ಎಂದೇ ಹೇಳಬೇಕಾಗುತ್ತದೆ.

ಆಂಗ್ಲರು ಧರ್ಮಪರಿವರ್ತನೆ ಯಾವ ಪ್ರಯತ್ನಗಳಿಂದ ಮಾಡಿದ್ದಾರೆ ಎನ್ನುವುದು ಕೇವಲ ಲಾರ್ಡ್ ಮೆಕಾಲೆಯ ಭಾವ ಸರ್ ಚಾರ್ಲ್ಸ್ ಟ್ರೆವೀಲಿಯನ್‌ರವರ ಈ ಒಂದು ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ೧೮೫೭ರ ಜೂನ್ ೨೩ರಂದು ರಂದು 'ಹೌಸ್ ಆಫ್ ಲಾರ್ಡ್ಸ್'ನ ಸೆಲೆಕ್ಟ್ ಕಮಿಟಿಯೆದುರು ತಮ್ಮ ಸಾಕ್ಷಿ ನೀಡುವ ವೇಳೆ ಅವರು ಹೀಗೆ ಹೇಳಿದ್ದನು:

"According to the unmitigated native system the Mahomedans regard us as Kafirs, as infidels. usurpers of some of the finest realms of Islam : for it is a tenet of that dominant and warlike religion constantly to strive for political supremacy and to hold all other races in subjection. According to the same original native views, the Hindoos regard us as 'mlechhas', the impure outcastes, with whom no communion ought to be held and they, all of them. both Hindoos and Mahomedans regard us as usurping foreigners, who have taken their country from them, and exclude them from the avenues to wealth and distinction. The effect of a training in European learning is to give an entirely new turn to the native mind. The youngmen educated in this way cease to strive after independence according to the original native model, and aim at improving the institutions of the country according to the English model, with the ultimate result of establishing constitutional Self-Government. They cease to regard us as enemies and usurpers, and they look upon us as friends and patrons and powerful beneficient persons under whose protection all they have most at heart for the regeneration of their country, will gradually be worked out. According to the original native view of political change, we might be swept off the face of India in a day and, as a matter of fact, those who look for the improvement of India according to this model are continually meditating on plots and conspiracies with that object. Whereas according to the new and improved system, the object must be worked out by very gradual steps and ages may elapse before the ultimate will be attained, and in the mean time the minority, who with out assistance, will receive continual accessions, until in the course of time they become



the majority. But when that will be, none can say; nor can anyone say how long we may continue to be politically connected with India even after the whole of civic employments have been transferred to the natives supporing our connections with India to cease according to the native views, it will cease suddenly, it will cease by violent convulsions; it will cease with most irritated feelings on both sides, and we shall leave a hostile country. Whereas if the connection ceases according to the other course of circumstances, we shall leave a grateful country and a highly improved country."

ಬಹಳ ದೊಡ್ಡ ಉದ್ಧರಣವಾದರೂ ಇದು ಆಂಗ್ಲರ ಪ್ರಯತ್ನಗಳು, ಅವರ ಶಿಕ್ಷಣ–ಪದ್ಧತಿ, ಶಾಸನತಂತ್ರ, ವೈಧಾನಿಕ ಸುಧಾರಣೆ, ನಮ್ಮ ನಾಯಕರ ಕದನಗಳು ಹಾಗೂ ಕೊನೆಯಲ್ಲಿ ಸ್ವಾತಂತ್ರ್ಯದ ಹೆಸರಿನಲ್ಲಿ ಪ್ರಾಪ್ತವಾದ ದೇಶಜರ ಶಾಸನಶಕ್ತಿಯ ಮೇಲೆ ಸಾಕಷ್ಟು ಬೆಳಕು ಹರಿಸಲಾಗಿದೆ. ಮೇಲಿನ ಉದ್ಧರಣೆಯ ಮಾತುಗಳಲ್ಲಿ ಆಂಗ್ಲ ಕಾರ್ಯಕರ್ತರು ಭಾರತವನ್ನು ಆಳಲು ಅಳವಡಿಸಿಕೊಂಡ ನೀತಿಗಳನ್ನು ವಿವರಿಸಲಾಗಿದೆ. ಇದೇ ನೀತಿಯನ್ನು ಅಳವಡಿಸಿಕೊಂಡ ಆಂಗ್ಲರು ಸಂಪೂರ್ಣ ಒಂದು ಶತಮಾನವನ್ನು ಕಳೆದಿದ್ದಾರೆ. ಅವರು ಭಾರತೀಯರ ಬುದ್ಧಿಯನ್ನು ಯೂರೋಪಿನ ಬುದ್ಧಿಯನ್ನಾಗಿಸಿ ಎಂದಿಗೂ ಇಂಗ್ಲೆಂಡನ್ನು ಆಶ್ರಿಸುವ ಕೆಲಸವನ್ನು ಮಾಡಿದ್ದಾರೆ. ಆದುದರಿಂದ ಈ ಉದ್ಧರಣೆಯಿಂದ, ನಮ್ಮ ಸಂವಿಧಾನವು ಏಕೆ ಪಾಶ್ಚಾತ್ಯವನ್ನಾಧರಿಸಿ ಮಾಡಲ್ಪಟ್ಟಿದೆ ಎಂಬುದನ್ನು ಬಹಳ ಚೆನ್ನಾಗಿ ತಿಳಿಯುತ್ತೇವೆ. ನಾವು ಏಕೆ ಬ್ರಿಟಿಷ್ ರಾಷ್ಟ್ರ–ಮಂಡಳಿಯ ಸದಸ್ಯರಾಗಿದ್ದೇವೆ ಹಾಗೂ ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಎಲ್ಲಾ ಕ್ಷೇತ್ರಗಳಲ್ಲಿಯೂ ಭಾರತೀಯ ಪರಂಪರೆಯನ್ನು ಅವಹೇಳನೆ ಮಾಡಿ ಪಾಶ್ಚಾತ್ಯ ಆದರ್ಶಗಳನ್ನು ಸೃಷ್ಟಿಸಲು ಇಚ್ಛಿಸುತ್ತಿದ್ದೇವೆ? ಸ್ವತಂತ್ರರಾದರೂ ಸಹ ನಾವು ಇಂದು ಆಂಗ್ಲರ ನಕಲುಪ್ರತಿಯ ಹಾಗೆ ಕಾಣುತ್ತಿದ್ದೇವೆ. ಭಾರತದ ಪ್ರತಿಯೊಂದು ವಸ್ತುವೂ ನಮಗೆ ಪ್ರತಿಗಾಮಿ ಮತ್ತು ಅನಗತ್ಯವಾಗಿ ತೋರುತ್ತದೆ. ಆದರೆ ಯೂರೋಪಿನ ಪ್ರತಿಯೊಂದು ಸಂಗತಿ ಅನುಕರಣೀಯವಾಗಿದೆ. ಇಂದಿಗೂ ಬಿಳಿ ಚರ್ಮದ ವ್ಯಕ್ತಿಯನ್ನು ನೋಡಿದ ಒಡನೆ ನಾವು ಹೀನಭಾವನೆಗೆ ಒಳಪಡುತ್ತೇವೆ. ಪಾಶ್ಚಾತ್ಯರ ಬಗ್ಗೆ, ಅವರ ಜೀವನ–ಪದ್ಧತಿ ಹಾಗೂ ಆಚಾರ–ವಿಚಾರಗಳ ಕಡೆ ಸಮ್ಮ ಸಹಜ ಆಕರ್ಷಣೆಯಿಂದಾಗಿ ದೇಶ ದೂರಸರಿಯುತಿದೆ. ಇದನ್ನು ನೋಡಿ ಯೂರೋಪಿಯನ್ ಇಂದಿನತನಕ ನಮ್ಮ ಗುರುವಾಗಿದ್ದಾನೆ ಹಾಗೂ ನಾವು ಅವನಿಗೆ ಗುರುಪೂಜೆ ಸಲ್ಲಿಸುತ್ತಿದ್ದೇವೆ ಎಂದೆನಿಸುತ್ತದೆ.

ಈ ರೀತಿಯ ಗುರುಪೂಜೆ ಬಹಳ ಭಯಹುಟ್ಟಿಸುತ್ತದೆ. ಆದ್ದರಿಂದಲೇ ಮಹರ್ಷಿ ದಯಾನಂದರು ತಮ್ಮ ಶಿಕ್ಷಣವನ್ನು ಪೂರ್ಣವಾಗಿ ಪಡೆದನಂತರ ಸ್ವಾಮಿ ವಿರಜಾನಂದರ ಬಳಿ ಬಂದರು. ಆಗ ಅವರು ಗುರುದಕ್ಷಿಣೆಯಾಗಿ ನಿಜವಾದ ವೈದಿಕ ಧರ್ಮ ಹಾಗೂ ರಾಷ್ಟ್ರೀಯ ಪರಂಪರೆ ಮುಂತಾದವುಗಳ ಪ್ರಚಾರ ಮಾಡಬೇಕು ಎಂದು ಕೇಳಿದರು. ಇದೇ ಬೇಡಿಕೆಯನ್ನು ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರ ಮುಂದಿಟ್ಟರು. ಈ ಎಲ್ಲಾ ಮಹಾಪುರುಷರು ತಮ್ಮನ್ನಲ್ಲದೆ ಭಾರತದ ನಿಜವಾದ ಗುರುವಿನ ಪೂಜೆ ಮಾಡಲಿಚ್ಛಿಸುತ್ತಿದ್ದರು. ಅದಕ್ಕಾಗಿ ಅವರು ಪ್ರಯತ್ನಿಸಿದರು. ಅದನ್ನು ಪೂಜಿಸಲೆಂದೇ ಪರಮಪೂಜ್ಯ ಡಾ. ಹೆಡ್ಗೇವಾರ್ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಡಿಪಾಯವನ್ನು ಹಾಕಿದರು. ಗುರುಪೂಜೆ ಮಾಡುವ ವೇಳೆ ಭಾರತೀಯ ಜೀವನದಲ್ಲಿ ಪಾಶ್ಚಾತ್ಯ ಗುರುಗಳನ್ನು ಪೂಜಿಸುವುದರಿಂದ ಯಾವ ಪರಾನುಕರಣೆಯ ದಾಸ್ಯಪ್ರವತ್ತಿಯು ಬೇರೂರಿದೆಯೋ ಅದನ್ನು ಕಿತ್ತೊಗೆಯಬೇಕೆಂಬ ಪ್ರತಿಜ್ಞೆ ಮಾಡಬೇಕು. ಶುದ್ಧಿಯ ಮಾರ್ಗ ತೆರೆದಿದೆ, ಎಲ್ಲಾ ಧರ್ಮಭ್ರಷ್ಟರನ್ನು ಶುದ್ಧಗೊಳಿಸಿ ಅವರನ್ನು ಪುನಃ ಭಾರತೀಯ ಧರ್ಮದಲ್ಲಿ ದೀಕ್ಷಿತರನ್ನಾಗಿಸಿ ಭಾರತಮಾತೆಯ ಆರಾಧಕರನ್ನಾಗಿಸುವುದು ನಮ್ಮ ಪರಮ ಕರ್ತವ್ಯವಾಗಿದೆ ಎಂದು ಭಾರತದ ಪ್ರತಿಯೊಂದು ಮಗುವು ತನ್ನ ರಾಷ್ಟ್ರಗುರುವಿನ ಪೂಜೆಗೆ ತನ್ನ ಜೀವನದಲ್ಲಿ ಸ್ಥಾನ ಕೊಟ್ಟು 'ಭಾರತೀಯ ಭೂತ್ವಾ ಭಾರತಂ ಯಜೇತ್'ನ ಸಿದ್ಧಾಂತವನ್ನು ಜೀವನದಲ್ಲಿ ಕ್ರಿಯಾನ್ವಿತಗೊಳಿಸುವ ಪ್ರಯತ್ನಪಡುವನೋ ಅಂದು ನಿಜವಾದ ಅರ್ಥದಲ್ಲಿ ನಾವು ಗುರುಪೂಜೆಯನ್ನು ಮಾಡುತ್ತೇವೆ.



# ೧೮. ಸಾರಾಂಶ

**ಸಾರಾಂಶ**

ದೇಶ ಸ್ವತಂತ್ರವಾಗಿ ಇಷ್ಟು ವರ್ಷಗಳು ಕಳೆದ ನಂತರವೂ ದೇಶದಲ್ಲಿ ಚೈತನ್ಯವೇಕೆ ನಿರ್ಮಿತವಾಗಿಲ್ಲ? ಬಡತನ–ಹಸಿವು, ನಿರುದ್ಯೋಗ, ನಿರಾಸೆ ಹಾಗೂ ಅಸಹಾಯಕತೆ ಏಕೆ ಹೆಚ್ಚುತ್ತಿದೆ? ರಾಷ್ಟ್ರೀಯ ಚರ್ಯೆ/ಆಚರಣೆ ಹಾಸ್ಯಾಸ್ಪದವೇಕೆ ಆಗಿದೆ? ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಮಶಃ ಏಕೆ ಪತನಗೊಳ್ಳುತ್ತಿದೆ ಹಾಗೂ ರಾಷ್ಟ್ರಜೀವನ ಪ್ರವಾಹಪತಿತವೇಕಾಗುತ್ತಿದೆ? ನಾವು ಹೀಗೆ ಏಕೆ ಕೊಚ್ಚಿ ಹೋಗುತ್ತಿದ್ದೇವೆ? ನಿಸ್ಸಂದೇಹವಾಗಿ ಇದಕ್ಕೆ ಒಂದು ಉತ್ತರವಿದೆ. ಅದೇನೆಂದರೆ ನಾವು ನಮ್ಮ ಕಾಲ ಮೇಲೆ ನಿಂತಿಲ್ಲ. ಯಾರು ನಿಲ್ಲುವ ಆಧಾರವನ್ನು ಕಳೆದುಕೊಂಡಿರುತ್ತಾರೆಯೋ ಅವರು ಕೊಚ್ಚಿಹೋಗಲೇಬೇಕಾಗುತ್ತದೆ. ಬೇರಿನಿಂದ ಕಿತ್ತೊಗೆಯಲಾದ ಒಂದು ವೃಕ್ಷ ಪ್ರವಾಹ, ರಭಸಕ್ಕೆ ಸಿಲುಕಿದಾಗ, ಅದು ನೀರಿನ ಪ್ರತಿಯೊಂದು ಧಾರೆಯೊಡನೆ ಅತ್ತ–ಇತ್ತ ಎಸೆಯಲ್ಪಡುತ್ತದೆ. ನಮ್ಮ ಸಂಪೂರ್ಣ ರಾಷ್ಟ್ರಜೀವನವು ತನ್ನ ತಾಯಿ ಬೇರನ್ನು ಕಳೆದುಕೊಂಡಿತು. ಈ ಪತನವನ್ನು ಅಂತ್ಯಗೊಳಿಸಲು ಇರುವ ಒಂದೇ ದಾರಿಯೆಂದರೆ ನಿಜವಾದ ರಾಷ್ಟ್ರಜೀವನವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಯಾವುದೇ ರಾಷ್ಟ್ರವು ಶುದ್ಧ ರಾಷ್ಟ್ರಭಾವವಿಲ್ಲದೇ ಪ್ರಗತಿ ಸಾಧಿಸಿದೆ ಎಂದು ಯಾರು ಹೇಳಬಲ್ಲರು. ಅವರಿಂದ ತನ್ನ ಸ್ವಾತಂತ್ರ್ಯವನ್ನು ಸಹ ಕಾಪಾಡಿಕೊಳ್ಳಲಾಗುವುದಿಲ್ಲ. ರಾಷ್ಟ್ರದ ಪರಂಪರಾಗತ ಇತಿಹಾಸದಿಂದ ಪ್ರಕಟಗೊಳ್ಳುವ ರಾಷ್ಟ್ರೀಯತೆಯ ಜ್ಞಾನ ಅಸ್ಪಷ್ಟವಾಗುತ್ತಿರುವುದರಿಂದಲೇ ನಾವು ಈ ವಿಪತ್ತುಗಳಲ್ಲಿ ಸಿಲುಕಿಕೊಂಡಿದ್ದೇವೆ. ಇದರಿಂದ ಪಾರಾಗಲು ರಾಷ್ಟ್ರದ ಭಾವನಾತ್ಮಕ ಆಧಾರವನ್ನು ಸ್ಪಷ್ಟಗೊಳಿಸಬೇಕು. ರಾಷ್ಟ್ರೀಯ ಆದರ್ಶಗಳು ಹಾಗೂ ಆಕಾಂಕ್ಷೆಗಳ ಬೇರನ್ನು ಪ್ರಬಲವಾಗಿಸುವುದರಿಂದಲೇ ಮಹಾನ್‌ಶಕ್ತಿ ಉತ್ಪನ್ನವಾಗಬಲ್ಲದು. ಪರಂಪರಾಗತ ರಾಷ್ಟ್ರೀಯ ಸ್ವರೂಪ ಸಾಕ್ಷಾತ್ಕಾರವುಂಟಾದಾಗ ರಾಷ್ಟ್ರೋಜ್ಜೀವನ ಉದ್ದೇಶದ ಅರಿವುಂಟಾಗುತ್ತದೆ ಹಾಗೂ ರಾಷ್ಟ್ರೋಜ್ಜೀವನ ಚೈತನ್ಯಮಯವಾಗುತ್ತದೆ. ನಮ್ಮ ವರ್ತಮಾನ ರಾಷ್ಟ್ರಪತನದ ಮೂಲಕಾರಣವು ರಾಷ್ಟ್ರದ ಈ ನಿಜವಾದ ಸಾಕ್ಷಾತ್ಕಾರದ ಅಭಾವದಲ್ಲಿ ಅಡಗಿದೆ.

ಬಹುಕಾಲದಿಂದ ಭಾರತದ ನಿಜವಾದ ರಾಷ್ಟ್ರ–ಜ್ಞಾನವನ್ನು ಉಪೇಕ್ಷಿಸುತ್ತಿದ್ದೇವೆ.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿಯೂ ಈ ದಿಕ್ಕಿನೆಡೆ ನಾವು ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಕೊಡಲಿಲ್ಲ. ಆದರೂ ದೇಶ ಗುಲಾಮವಾಗಿದ್ದಾಗ ಹಾಗೂ ಇಲ್ಲಿ ಆಂಗ್ಲರ ರಾಜ್ಯವಿದ್ದಾಗ ರಾಷ್ಟ್ರವ್ಯಾಪಿ ದೃಷ್ಟಿಯಿಂದ ಎಲ್ಲಾ ಜನರನ್ನು ಒಟ್ಟುಗೂಡಿಸಲು ಸುಗಮವಾದ ಧ್ಯೇಯ ಮುಂದಿತ್ತು ಹಾಗೂ ಆ ಧ್ಯೇಯ ಭಾರತದಿಂದ ಆಂಗ್ಲರ ರಾಜ್ಯ ಶಾಸನವನ್ನು ಕಿತ್ತೊಗೆಯುವುದಾಗಿತ್ತು. ಈ ಕಾರ್ಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸರಳವಾದ ಒಂದು ಸಂಗತಿ ಎಲ್ಲರಿಗೂ ತಿಳಿದಿತ್ತು. ಅದೇನೆಂದರೆ ಎಲ್ಲಿಯ ತನಕ ಆಂಗ್ಲರ ರಾಜ್ಯವಿರುವುದೋ ಹಾಗೂ ದೇಶ ಗುಲಾಮವಾಗಿರುವುದೋ ಅಲ್ಲಿಯತನಕ ನಾವು ನಮ್ಮ ರಾಷ್ಟ್ರೋಜ್ಜೀವನದ ಉದ್ದೇಶವನ್ನು ಸಾಧಿಸಲಾರೆವು ಹಾಗೂ ಅದರ ಸ್ಥಾಪನೆಗೆ ಪ್ರಯತ್ನಿಸಲಾಗದು. ದಾಸ್ಯತ್ವ ಅತಿ ದೊಡ್ಡ ತೊಡಕಾಗಿತ್ತು. ರಾಷ್ಟ್ರದ ಎಲ್ಲಾ ಸವಾಲು ಹಾಗೂ ಎಲ್ಲಾ ಸಮಸ್ಯೆಗಳನ್ನು ಕುರಿತು ಎಲ್ಲರದೂ ಒಂದೇ ಅಭಿಪ್ರಾಯವಾಗಿತ್ತು ಅದೇನೆಂದರೆ ಈ ಎಲ್ಲಾ ಸವಾಲುಗಳು ಹಾಗೂ ಸಮಸ್ಯೆಗಳಿಗೆ ಮೂಲಕಾರಣ ಆಂಗ್ಲರು ಭಾರತದಲ್ಲಿರುವುದು. ಎಲ್ಲಿಯತನಕ ಆಂಗ್ಲರ ರಾಜ್ಯ ಭಾರತವನ್ನು ಆವರಿಸಿರುತ್ತದೆಯೋ ಅಲ್ಲಿಯ ತನಕ ನಾವು ನಮ್ಮ ರಾಷ್ಟ್ರೀಯ ಪ್ರಕೃತಿ ಹಾಗೂ ಪ್ರತಿಭೆಗೆ ಅನುಗುಣವಾಗಿ ಈ ಸಮಸ್ಯೆಗಳನ್ನು ನಿರಾಕರಿಸುವುದರಲ್ಲಿ ಅಸಮರ್ಥರು ಎಂಬುದನ್ನು ಜನರು ಚೆನ್ನಾಗಿ ಅರಿತಿದ್ದರು. ಪರತಂತ್ರವು ನಮ್ಮ ಈ ಎಲ್ಲಾ ಪ್ರಯತ್ನಗಳಿಗೆ ಅಡ್ಡಿಯನ್ನುಂಟುಮಾಡುತ್ತಿತ್ತು. ಈ ಸ್ಥಿತಿಯಲ್ಲಿ ಸಂಪೂರ್ಣ ದೇಶವು ಒಂದು ಧ್ಯೇಯಕ್ಕಾಗಿ ಅಂದರೆ 'ಆಂಗ್ಲರನ್ನು ಭಾರತದಿಂದ ಓಡಿಸ'ಲೆಂದು ಎಚ್ಚೆತ್ತುಕೊಂಡಿತು. ಈ ಸಂದರ್ಭದಲ್ಲಿ ಮಹಾನ್ ಬಲಿದಾನ ಹಾಗೂ ತ್ಯಾಗಗಳ ಉದಾಹರಣೆಗಳು ಉಂಟಾದವು. ಆದರೆ ಈ ಗುರಿಯು ಪರಿಸ್ಥಿತಿಗಳನ್ನು ಅವಲಂಬಿಸಿತ್ತು. ರಾಷ್ಟ್ರೋನ್ನತಿಯ ಶಾಶ್ವತ ಆಧಾರವಾಗಿ ಚಿರಂತನ ಲಕ್ಷ್ಯ ಮಾತ್ರ ಆಗಿರಬಲ್ಲದು. ಆ ಚಿರಂತನ ಗುರಿಯೆಂದರೆ ರಾಷ್ಟ್ರದ ಶತಶತಮಾನಗಳ ಅತಿದೊಡ್ಡ ಜೀವನಾಧಾರದ ನಿಜವಾದ ಜ್ಞಾನವು ಪ್ರತಿಯೊಬ್ಬ ವ್ಯಕ್ತಿಯ ಅಂತಃಕರಣದಲ್ಲಿ ಜಾಗೃತವಾಗುವುದು. ದೌರ್ಭಾಗ್ಯದಿಂದ ಈ ಗುರಿಯತ್ತ ನಾವು ಆಗ ಉದಾಸೀನರಾಗಿಬಿಟ್ಟೆವು. ನಮ್ಮ ಸಂಪೂರ್ಣ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಂಗ್ಲರ ವಿರೋಧವೇ ನಮ್ಮ ದೇಶಭಕ್ತಿಯ ಮುಖ್ಯ ಆಧಾರವಾಗಿತ್ತು. ರಾಷ್ಟ್ರೋಜ್ಜೀವನದ ಭಾವನಾತ್ಮಕ ಜ್ಞಾನ ಹಾಗೂ ಅದಕ್ಕೆ ತಕ್ಕಂತೆ ಎಲ್ಲಿಯವರೆಗೆ ದಾಸ್ಯವಿದೆಯೋ ಸ್ವತಂತ್ರವನ್ನು ಆಧರಿಸಿದ ಚಿಂತನೆಯನ್ನು ಅಲ್ಲಿಯ ತನಕ ವ್ಯರ್ಥ, ಮಹತ್ವಹೀನವೆಂದು ತಿಳಿಯಲಾಗಿತ್ತು. ಆಂಗ್ಲರ ರಾಜ್ಯವನ್ನು ಅಂತ್ಯಗೊಳಿಸುವುದೇ ಸ್ವಾತಂತ್ರ್ಯ ಪ್ರಾಪ್ತಿಯ ಮುಖ್ಯ ಗುರಿಯಾಗಿತ್ತು.

ಮತ್ತೆ ೧೯೪೭ರಲ್ಲಿ ನಾವು ಸ್ವತಂತ್ರರಾದೆವು. ಆಂಗ್ಲರು ಭಾರತವನ್ನು ಬಿಟ್ಟು ಹೋದರು. ರಾಷ್ಟ್ರನಿರ್ಮಾಣದ ನಮ್ಮ ಯತ್ನಗಳಲ್ಲಿ ಅತಿ ದೊಡ್ಡ ಆತಂಕವು



ದೂರವಾಗಿದೆ ಎಂದುಕೊಂಡೆವು. ನಮ್ಮ ಇಚ್ಛೆಗನುಗುಣವಾಗಿ ನಮ್ಮ ಜೀವನ–ನಿರ್ಮಾಣವನ್ನು ತಡೆಗಟ್ಟುತ್ತಿದ್ದ ಪರಕೀಯಶಕ್ತಿಯು ಈಗ ಇಲ್ಲವಾಯಿತು. ಆಗ ಎಲ್ಲರ ಮುಂದೆ ಇದ್ದಕ್ಕಿದಂತೆ ಎದುರಾದ ಪ್ರಶ್ನೆಯೆಂದರೆ ಇಷ್ಟು ಪ್ರಯತ್ನಗಳಿಂದ ಗಳಿಸಿದ ಈ ಸ್ವಾತಂತ್ರ್ಯದ ಅರ್ಥವಾದರೂ ಏನು? ನಾವು ನಮ್ಮ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು? ರಾಷ್ಟ್ರಕ್ಕಾಗಿ ಭಾರತದ ಜೀವನಾದರ್ಶ ಹಾಗೂ ಕಾರ್ಯಸಿದ್ಧಾಂತಗಳು ಏನು? ಆದರೆ ಶುದ್ಧ ರಾಷ್ಟ್ರೋಜ್ಜೀವನ ಸಾಕ್ಷಾತ್ಕಾರದ ಕೊರತೆಯಲ್ಲಿ ದೊರೆತ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಆದರ್ಶಗಳನ್ನು ಸಾರ್ಥಕಗೊಳಿಸಲು ಬಳಸಲಾಗಲಿಲ್ಲ. ಪರಾನುಕರಣೆ ಮುಂದುವರೆಯಿತು. ಸಂವಿಧಾನವನ್ನು ನಿರ್ಮಿಸುವ ಸಮಯದಲ್ಲಿಯೂ ಸಹ ನಾವು ನಮ್ಮ ರಾಷ್ಟ್ರೀಯ ಸ್ವಭಾವದ ಆದರ್ಶಗಳನ್ನು ಅದರಲ್ಲಿ ಪ್ರತಿಬಿಂಬಿಸಲಿಲ್ಲ. ವಿದೇಶೀಯರಿಂದ ಘೋಷಿಸಲಾದ ಸಿದ್ಧಾಂತಗಳನ್ನು ಅವಲಂಬಿಸಿ ನಾವು ಅದರಲ್ಲೇ ಸಂತಸಪಟ್ಟೆವು. ನಾವು ನಮ್ಮ ಭಾರತದ ರಾಷ್ಟ್ರೋಜ್ಜೀವನವನ್ನು ಹೇಗೆ ರೂಪಿಸಬೇಕು ಎಂಬ ಮೂಲ ಪ್ರಶ್ನೆಯನ್ನು ಇಂದಿಗೂ ಸಹ ಬಗೆಹರಿಸಲಿಲ್ಲ. ನಮ್ಮ ಸ್ವತ್ವವನ್ನು ಕುರಿತು ಸರಿಯಾಗಿ ವಿಚಾರಮಾಡದಿದ್ದ ಕಾರಣವೇ ನಾವು ನಮ್ಮ ಕಾಲ ಮೇಲೆ ನಿಲ್ಲಲಾಗಲಿಲ್ಲ. ರಾಷ್ಟ್ರದ ವೈಭವಕ್ಕಾಗಿ ಪಟ್ಟ ನಮ್ಮ ಎಲ್ಲಾ ರೀತಿಯ ಪ್ರಯತ್ನಗಳಲ್ಲಿಯೂ, ನಮ್ಮ ರಾಷ್ಟ್ರೀಯ ವೈಭವದ ಕಲ್ಪನೆಯಾದಲೂ ಏನು? ಆ ವೈಭವದ ಸ್ವರೂಪವೇನು? ಎಂಬ ಮೂಲ ತಥ್ಯವು ಅದೃಶ್ಯವಾಗಿತ್ತು. ಬಹಳ ಜನರು ಈ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಪಟ್ಟರು. ಅದರಲ್ಲಿ ಕಂಡುಬಂದುದೇನೆಂದರೆ ಅವರ ಉತ್ತರ ಬಹುಶಃ ಭಾರತದ ಹೊರಗಿನ ಜೀವನಪದ್ಧತಿಗಳನ್ನು ಆಧರಿಸುತ್ತದೆ. ಹಲವರು ಸಮಾಜವಾದವನ್ನು ಆಧಾರವನ್ನಾಗಿರಿಸಿ ಸಮಾಜವನ್ನು ರಚಿಸಲು ಇಚ್ಛಿಸುತ್ತಾರೆಯಾದರೆ ಮತ್ತೆ ಹಲವರು ಸಾಮ್ಯವಾದಿಗಳನ್ನು ಆಧಾರವನ್ನಾಗಿರಿಸುತ್ತಾರೆ ಮತ್ತು ಹಲವರು ಸಮಾಜವಾದದ ಜೊತೆಗೆ ವ್ಯಕ್ತಿ–ಸ್ವಾತಂತ್ರ್ಯದ ಹೊಂದಾಣಿಕೆಯ ಮೇಲೆ ಪ್ರಜಾಪ್ರಭುತ್ವದ ಸಮಾಜವಾದದ ಮಾತನಾಡುತ್ತಾರೆ. ವಿದೇಶಿಗಳಿಂದ ಪಡೆದಂತಹ ಈ ವಿಚಾರಧಾರೆಗಳನ್ನು ಆಧಾರವನ್ನಾಗಿರಿಸಿ ಎಲ್ಲರೂ ಪ್ರಯತ್ನಿಸುತ್ತಿರುವಂತೆ ಕಂಡುಬರುತ್ತದೆ. ಆರ್ಥಿಕ, ರಾಜಕೀಯ, ಸಾಮಾಜಿಕ ಎಲ್ಲಾ ಕ್ಷೇತ್ರಗಳಲ್ಲಿಯೂ ಚಿಂತನೆಯು ವಿದೇಶಿ ವಿಚಾರ ಪದ್ಧತಿಗಳನ್ನು ಆಶ್ರಯಿಸಿತ್ತು. ಇದು ಹೇಗೆ ಕಂಡುಬರುತ್ತಿದೆಯೆಂದರೆ ನಮ್ಮ ಈ ಅತಿಪ್ರಾಚೀನ ರಾಷ್ಟ್ರೋಜ್ಜೀವನದಲ್ಲಿ ಈ ಎಲ್ಲಾ ವಿಷಯಗಳನ್ನು ಕುರಿತು ಎಲ್ಲಿಯೂ ವಿಚಾರ ಹೊರಬಂದಿಲ್ಲ ಅಥವಾ ನಮ್ಮ ರಾಷ್ಟ್ರೋಜ್ಜೀವನ ಕೇವಲ ಹಲವು ವರ್ಷಗಳಲ್ಲಿ ನಿರ್ಮಿತವಾದದ್ದು. ವಿದೇಶಿಗಳಿಂದ ಪಡೆದಂತಹ ಈ ವಿಚಾರಧಾರೆಗಳಲ್ಲಿ ನಮ್ಮ ರಾಷ್ಟ್ರದ ಸಂಸ್ಕೃತಿ, ನಾಗರಿಕತೆ ಪ್ರಕಟವಾಗಲಿಲ್ಲ. ಆದುದರಿಂದ ಇವು ರಾಷ್ಟ್ರೀಯ ಅಂತಃಕರಣವನ್ನು

ಸ್ಪರ್ಶಿಸುವಲ್ಲಿ ಅಸಮರ್ಥರಾದೆವು. ಜನರು ಇವುಗಳಿಂದ ತ್ಯಾಗ, ಪರಿಶ್ರಮ ಹಾಗೂ ಬಲಿದಾನಗಳ ಪ್ರೇರಣೆ ಗ್ರಹಿಸಲಾಗುವುದಿಲ್ಲ. ಇದೇ ಕಾರಣದಿಂದ ಇಂದು ದೇಶದಲ್ಲಿ ನಾಲ್ಕು ದಿಕ್ಕುಗಳಲ್ಲಿ ನಿರಾಶೆ ಹಬ್ಬಿಕೊಂಡಿದೆ. ರಾಷ್ಟ್ರ ಆತ್ಮವಿಶ್ವಾಸವನ್ನು ಕಳೆದುಕೊಂಡಿದೆ. ನಮ್ಮ ಚೈತನ್ಯ ಸುಪ್ತವಾಗಿ ಹೋಗಿದೆ ಹಾಗೂ ಇಷ್ಟು ದೊಡ್ಡ ಕೋಟಿಗಟ್ಟಲೆ ಜನಸಂಖ್ಯೆಯಿರುವ ಸಮಾಜ ಎಲ್ಲಾ ವಿಷಯಗಳಿಗಾಗಿಯೂ ಪರಾವಲಂಬಿಯಾಗಿ ಜೀವನಸಾಗಿಸುತ್ತಿದೆ.

## ಸ್ವಾಭಿಮಾನದ ವಿಚಾರ

ಈ ವಿದೇಶಿ ವಿಚಾರಧಾರೆಗಳನ್ನು ಕಣ್ಣು ಮುಚ್ಚಿ ಹಿಂಬಾಲಿಸುತ್ತಾ ಚಲಿಸುವುದು ಸರಿಯೇ? ಈ ಸ್ಥಿತಿಯು ನಮ್ಮ ರಾಷ್ಟ್ರೀಯ ಸ್ವಾಭಿಮಾನಕ್ಕೆ ಧಕ್ಕೆಯುಂಟು ಮಾಡುತ್ತಿಲ್ಲವೇ? ಈ ವಿದೇಶಿ ವಿಚಾರಧಾರೆಗಳನ್ನು ಆಧಾರವನ್ನಾಗಿಸಿ ಮಾಡುವ ಪ್ರಯತ್ನಗಳ ಯಶಸ್ಸನ್ನು ನಾವು ಒಮ್ಮೆ ಸ್ವೀಕರಿಸಿದರೂ ವಿದೇಶಿವಾದಗಳನ್ನು ನಾವು ಅವಲಂಬಿಸುತ್ತಿರುವುದು ಬಹಳ ಅಪಮಾನಕಾರಿಯಾಗಿದೆ. ನಿಸ್ಸಂದೇಹವಾಗಿ ನಾವು ರಾಷ್ಟ್ರೀಯ ಸ್ವಾಭಿಮಾನವನ್ನು ಅಂತಃಕರಣದಲ್ಲಿ ಅಳವಡಿಸಿಕೊಂಡು ವಿಚಾರ ಮಾಡಿದಲ್ಲಿ ಈ ರೀತಿಯಲ್ಲಿ ವಿದೇಶಿ ವಿಚಾರವಾದಗಳನ್ನು ತಮ್ಮದಾಗಿಸಿಕೊಳ್ಳುವುದು ನಮ್ಮ ರಾಷ್ಟ್ರೀಯ ಸ್ವಾಭಿಮಾನಕ್ಕೆ ಅನುಕೂಲಕರ ಸಂಗತಿಯಲ್ಲವೆಂದು ಹೇಳಬೇಕಾಗುತ್ತದೆ.

ಈ ವಿಷಯದಲ್ಲಿ ಸ್ವಾಭಿಮಾನದ ಜಗಳವನ್ನೇಕೆ ಸುಮ್ಮನೆ ತಂದೊಡ್ಡುತ್ತೀರಿ ಎಂದು ಹಲವರು ಕೇಳಬಹುದು. ಯಾವುದೇ ವಸ್ತು ಬಹಳ ಉಪಯೋಗಕಾರಿಯಾಗಿದ್ದಲ್ಲಿ ಹೊರಗೆ ಎಲ್ಲಿರಿಂದಲಾದರೂ ಸರಿ ಅದನ್ನು ತೆಗೆದುಕೊಳ್ಳಲೇಬೇಕು. ವಿಚಾರಗಳ ವಿಷಯದಲ್ಲಿಯೂ ಇಂತಹ ರಾಷ್ಟ್ರೀಯ ಅಹಂಕಾರವನ್ನು ತಂದೊಡ್ಡುವುದು ಅಥವಾ ಇಲ್ಲವೋ, ಇದು ಪರಚಿಂತನೆಯಾದ್ದರಿಂದ ನಾವು ಇದನ್ನು ಸ್ವೀಕರಿಸುವುದಿಲ್ಲ ಎಂಬುವುದು ಬುದ್ಧಿವಂತಿಕೆಯ ಸಂಗತಿಯೇ? ಆದರೆ ಈ ತರ್ಕದಲ್ಲಿರುವ ಗಾಂಭೀರ್ಯವನ್ನು ಸ್ವೀಕಾರಮಾಡುತ್ತಲೂ ಸಹ ರಾಷ್ಟ್ರೀಯ ಸ್ವಾಭಿಮಾನ ಎನ್ನುವ ಅಗತ್ಯವಾದ ವಸ್ತುವಿರುತ್ತದೆ. ಏಕೆಂದರೆ ಸ್ವಾಭಿಮಾನವನ್ನು ಹೃದಯದ ಪ್ರಬಲ ಭಾವನೆಯಾಗಿದೆ ಎಂದು ಸ್ವೀಕರಿಸಬೇಕಾಗುತ್ತದೆ. ಈ ಭಾವನೆ ರಾಷ್ಟ್ರ ಹಾಗೂ ವ್ಯಕ್ತಿ ಇಬ್ಬರ ವಿಕಾಸಕ್ಕೆ ಅಗತ್ಯವಾಗಿ ಬೇಕಾಗಿದೆ ಎಂದು ನಾನು ತಿಳಿಯುತ್ತೇನೆ. ನಾವು ಗುಲಾಮಗಿರಿಯಿಂದ ಮುಕ್ತರಾಗಿ ಸ್ವತಂತ್ರವಾಗುವ ಪ್ರೇರಣೆಯೂ ಈ ಭಾವದಿಂದಲೇ ಪ್ರಾಪ್ತವಾಗಿದೆ. ದೇಶ ಸ್ವತಂತ್ರವಾದ ಮೇಲೆ ಭಾರತದ ತನ್ನದೇ ಆದ ಧ್ವಜ, ಸಂವಿಧಾನ, ತನ್ನದೇ ವ್ಯವಸ್ಥೆ ಮುಂತಾದವುಗಳನ್ನು ನಿರ್ಮಿಸಲು ಯಾವ ವಿಷಯಗಳನ್ನು ನಾವು ಆದರ ಭಾವನೆಯೊಂದಿಗೆ



ಸ್ವೀಕರಿಸಿದ್ದೇವೆಯೋ ಅದೆಲ್ಲಾ ಇದೇ ಸ್ವಾಭಿಮಾನ ವೃತ್ತಿಯ ಸಂಕೇತಗಳು. ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ನಮ್ಮ ದೇಶದ ನಾಗರಿಕರು ವಿಜಯಿಗಳಾದಲ್ಲಿ ಹಾಗೂ ಸ್ವರ್ಣಪದಕ ಪಡೆದಲ್ಲಿ ನಮ್ಮ ಈ ಭಾವನೆಯಿಂದಲೇ ಸಂತೋಷ ಪ್ರಕಟವಾಗುತ್ತದೆ. ಈ ಸ್ವಾಭಿಮಾನವಿಲ್ಲದಿದ್ದಲ್ಲಿ ಯಾರು ಗೆದ್ದರೂ ಯಾರು ಸೋತರೂ ಸಹ ನಮಗೆ ಯಾವುದೇ ಅಂತರವುಂಟಾಗುವುದಿಲ್ಲ. ಇದರಿಂದ ರಾಷ್ಟ್ರೀಯ ಹೆಮ್ಮೆ ಎನ್ನುವ ವಸ್ತುವೊಂದು ಅಗತ್ಯವಾಗಿದೆ ಹಾಗೂ ಇದು ಯಾವುದೇ ಸ್ವತಂತ್ರ ದೇಶಕ್ಕೆ ಬಹಳ ಮಹತ್ವವುಳ್ಳದ್ದಾಗಿದೆ ಎಂಬುದು ಸ್ಪಷ್ಟವಾಗಿದೆ. ಸ್ವಾಭಿಮಾನ/ಹೆಮ್ಮೆಯಲ್ಲಿ ಮಮಕಾರವಡಗಿರುತ್ತದೆ. ಈ ಮಮಕಾರದಲ್ಲಿ ಕಾರ್ಯಪ್ರೇರಣೆಯ ತತ್ವವಾದ 'ಅಹಂ' ಅಡಗಿರುತ್ತದೆ. ಈ 'ಅಹಂ'ನ ಭಾವವೇ ರಾಷ್ಟ್ರದ ಘಟಕಗಳಿಗೆ ನವನಿರ್ಮಾಣ ಹಾಗೂ ನವೀನ ಆವಿಷ್ಕಾರಗಳ ಪ್ರೇರಣೆ ನೀಡುತ್ತದೆ. ಇದನ್ನು ಆಧಾರವನ್ನಾಗಿರಿಸಿಕೊಂಡ ಸ್ವಾಧೀನ ರಾಷ್ಟ್ರ ಇಕ್ಕಟ್ಟಿನ ಪ್ರಸಂಗಗಳಲ್ಲಿ ಸಾಹಸಪೂರ್ಣ ನಿರ್ಣಯವನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾಗುತ್ತವೆ. ಈ ನಿರ್ಣಯಗಳೇ ಐತಿಹಾಸಿಕವೆಂದು ಸ್ವೀಕರಿಸಲ್ಪಡುತ್ತದೆ. ಆದುದರಿಂದಲೇ ಮೇಲಿನ ತರ್ಕದ ನಂತರವೂ ಸಹ ವಿದೇಶಿ ವಾದಗಳು ಹಾಗೂ ವಿಚಾರ–ಪ್ರವಾಹಗಳಿಗೆ ಸಿಲುಕಿ ಮುಂದೆ ಚಲಿಸುವುದು ರಾಷ್ಟ್ರೀಯ ಹೆಮ್ಮೆಗೆ ಅನುಕೂಲಕರ ವಿಷಯವಲ್ಲ.

## ಪರಸ್ಪರ ಕೊಳು–ಕೊಡೆಯ ರೀತಿ–ನೀತಿ

ಇದಾದ ನಂತರ ನಮ್ಮ ಮುಂದೆಯಿರುವ ಪ್ರಶ್ನೆಯೆಂದರೆ ರಾಷ್ಟ್ರಗಳ ಪರಸ್ಪರ ಕೊಳು–ಕೊಡೆಯದ ಸಮಸ್ಯೆ. ಈ ವಿಷಯದಲ್ಲಿಯೂ ಸಹ ರಾಷ್ಟ್ರೀಯ ಹೆಮ್ಮೆಯೇ ನಿರ್ಣಾಯಕ ತತ್ವವಾಗಿದ್ದು ಅದು ಪರಸ್ಪರ ಕೊಳು–ಕೊಡೆಯ ಮೇರೆಯನ್ನು ನಿಗದಿತಗೊಳಿಸುತ್ತದೆ. ಜಾಗತಿಕ ತೊಳಲಾಟದಲ್ಲಿ ವಿಭಿನ್ನ ರಾಷ್ಟ್ರಗಳು ಹಲವಾರು ಕಾರಣಗಳಿಂದ ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ ಹಾಗೂ ಈ ಸಂಬಂಧದಲ್ಲಿ ವಿಚಾರಧಾರೆಗಳ ಕೊಳು–ಕೊಡೆಯೂ ಸಹ ಆಗುತ್ತದೆ. ವಿಶ್ವದ ಸಮಸ್ತ ವ್ಯವಹಾರದಲ್ಲಿ ಕೊಳು–ಕೊಡೆ ಒಂದು ಸಹಜ ಕ್ರಿಯೆ. ವಿಭಿನ್ನ ಪರಿಸ್ಥಿತಿಗಳಲ್ಲಿ ಹಾಗೂ ಆವಶ್ಯಕತೆಗಳಲ್ಲಿ ಈ ಕೊಳು–ಕೊಡೆ ಅಗತ್ಯವಲ್ಲದೇ ಶಕ್ತಿಸಂವರ್ಧಕವೂ ಆಗಿರುತ್ತದೆ. ಆದರೆ ನಾವು ಸ್ವಲ್ಪ ವಿಚಾರಮಾಡಿದಾಗ ತಿಳಿದುಬರುವ ಸಂಗತಿಯೆಂದರೆ ಯಾವ ರಾಷ್ಟ್ರ ಸ್ವಸ್ಥ ಹಾಗೂ ಸ್ವಾಭಿಮಾನಿಯಾಗಿರುತ್ತದೆಯೋ ಆ ರಾಷ್ಟ್ರವು ಯಾವುದೇ ವಸ್ತುವನ್ನು ಗ್ರಹಿಸುವಾಗ ಅದನ್ನು ಯಾವ ರೀತಿಯಲ್ಲಿ ಸ್ವೀಕರಿಸುತ್ತಾರೆಂದರೆ ಅದು ರಾಷ್ಟ್ರೀಯ ಆದರ್ಶಗಳು ಹಾಗೂ ಆಕಾಂಕ್ಷೆಗಳಿಗೆ ಪೂರಕವಾಗಿರಬೇಕು. ಈ ತಥ್ಯವನ್ನು ಸರಿಯಾಗಿ ತಿಳಿಯಲು ನಾವು ಮನುಷ್ಯ ಶರೀರದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಎಲ್ಲರೂ ಸೃಷ್ಟಿಯ ಈ ನಿಯಮವನ್ನು ಬಹಳ ಚೆನ್ನಾಗಿ

ಅರಿತಿದ್ದಾರೆ. ಅದೇನೆಂದರೇ ವಿಜಾತೀಯ ದ್ರವ್ಯವು ಯಾರದೇ ಶರೀರದಲ್ಲಿ ಪ್ರವೇಶಿಸಿದಾಗ ರೋಗ ಹಾಗೂ ಸಂಕಟಕ್ಕೆ ಕಾರಣವಾಗುತ್ತದೆ. ಆದ್ದರಿಂದಲೇ ಸ್ವಸ್ಥ ಶರೀರದ ಲಕ್ಷಣವೆಂದರೇ ಅದು ಕೇವಲ ಆ ವಿಜಾತೀಯ ದ್ರವ್ಯಗಳನ್ನು ತನ್ನ ಶರೀರ ಸ್ವೀಕರಿಸುವಷ್ಟು ಪ್ರಮಾಣ ಹಾಗೂ ವಿಧಿಯಲ್ಲಿ ಗ್ರಹಿಸುತ್ತದೆ. ಅಷ್ಟೆ ಏಕೆ ಗೋಧಿ, ಅಕ್ಕಿ ಹಾಗೂ ಅನ್ನವನ್ನು ಸಹ ಮನುಷ್ಯನು ಅದು ಹೇಗಿದೆಯೋ ಹಾಗೆಯೇ ತುಂಬಿಕೊಳ್ಳುವುದಿಲ್ಲ. ಭೋಜನದಲ್ಲಿಯ ಪ್ರತಿಯೊಂದು ವಸ್ತುವನ್ನು ಯಾವ ರೀತಿ ಸ್ವೀಕರಿಸಲಾಗುವುದೆಂದರೆ ಅದು ಶರೀರದಲ್ಲಿನ ರಕ್ತವನ್ನು ಹೆಚ್ಚಿಸಲು ಸಹಾಯಕವಾಗಲಿ. ಇದೇ ಸಂಗತಿಯನ್ನು ನಾವು ಕುಟುಂಬಗಳ ಪರಸ್ಪರ ವ್ಯವಹಾರದಲ್ಲಿ ಕಾಣಬಹುದು. ಯಾವುದೇ ಕುಟುಂಬವು ತಮ್ಮಲ್ಲಿ ಈ ರೀತಿಯ ಪರಸ್ಪರ ಕೊಳುಕೊಡೆಯಾಗುವುದಿಲ್ಲ ಎಂದು ಹೇಳಲಾರದು. ಹಾಗೆ ಹೇಳಿದ್ದಲ್ಲಿ ಅದು ಅಸಂಭವೆನಿಸುತ್ತದೆ. ವಿವಾಹದಂತಹ ಆವಶ್ಯಕ ಕಾರ್ಯಗಳ ವಿಭಿನ್ನ ಕುಟುಂಬಗಳ ನಡುವೆಯುಂಟಾಗುತ್ತದೆ. ಆದರೆ ವಿವಾಹದಲ್ಲಿ ಅನ್ಯ ಕುಟುಂಬದಿಂದ ಹೆಣ್ಣನ್ನು ಗ್ರಹಿಸುವಾಗ ಅವಳನ್ನು ಎಲ್ಲಾ ರೀತಿಯಿಂದಲೂ ಸ್ವೀಕರಿಸಬೇಕಾಗುತ್ತದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಇದೇ ರೀತಿ ರಾಷ್ಟ್ರಗಳ ನಡುವೆ ಸಂಪನ್ನವಾಗುವ ಕೊಳುಕೊಡೆಯಲ್ಲಿಯೂ ಎಚ್ಚರವಹಿಸಬೇಕಾಗುತ್ತದೆ. ರಾಷ್ಟ್ರದ ಜೀವನಮೌಲ್ಯ, ಜೀವನಪದ್ಧತಿ, ಆದರ್ಶ ಹಾಗೂ ಸಾಂಸ್ಕೃತಿಕ ಜೀವನಾಧಾರಕ್ಕೆ ಅನುಗುಣವಾಗಿ ಏನನ್ನು ಸ್ವೀಕರಿಸಲಾಗುತ್ತದೆಯೋ ಅದು ಏಕರಚನೆಯನ್ನು ನಿರ್ಮಿಸುತ್ತದೆ ಹಾಗೂ ರಾಷ್ಟ್ರವನ್ನು ಪುಷ್ಟಗೊಳಿಸುತ್ತದೆ. ಇದಕ್ಕೆ ವಿರುದ್ಧವಾಗಿ ಅಸಂಗತಿ ಹಾಗೂ ನಮಗೆ ವಿರೋಧವಾದದ್ದು ಅಶಾಂತಿ, ಗಲಭೆ ಹಾಗೂ ರೋಗರುಜಿನಗಳಿಗೆ ಕಾರಣವಾಗುತ್ತದೆ. ಕೊನೆಗೆ ವಿನಾಶಕ್ಕೆ ಕಾರಣವಾಗುತ್ತದೆ. ನಾವು ನಮ್ಮ ದೇಶದ ಉದಾಹರಣೆಯನ್ನು ತೆಗೆದುಕೊಂಡಲ್ಲಿ ನಮ್ಮ ರಾಷ್ಟ್ರಜೀವನದಲ್ಲಿ ಶಕ, ಹೂಣ, ಕುಶಾಣ ಮುಂತಾದ ಹಲವಾರು ಜಾತಿಗಳು ಬಂದು ಬೆರೆತುಹೋಗಿರುವುದನ್ನು ಕಾಣುತ್ತೇವೆ. ರಾಷ್ಟ್ರಜೀವನಧಾರೆ ಶಕ್ತಿಶಾಲಿಯಾಗಿರುವುದರಿಂದ ಅವು ಒಂದಾಗಿ ರಾಷ್ಟ್ರದ ಎಂತಹ ಅಭಿನ್ನ ಅಂಗವಾಗಿದೆಯೆಂದರೆ ಇಂದು ಅವುಗಳನ್ನು ನಮ್ಮಿಂದ ಬೇರೆಯಾಗಿ ಹುಡುಕುವುದು ಅಸಂಭವವಾಗಿದೆ.

ಆದರೆ ಆನಂತರದಲ್ಲಿ ರಾಷ್ಟ್ರದ ಸ್ವಾಭಿಮಾನ ಕ್ಷೀಣಿಸತೊಡಗಿತು, ರಾಷ್ಟ್ರೋಜ್ಜೀವನ ಗುಲಾಮಗಿರಿಯ ಯುಗದಲ್ಲಿ ವಿಸ್ಮೃತಗೊಂಡಿತು, ನಮ್ಮ ರಾಷ್ಟ್ರೋಜ್ಜೀವನ–ಸಿದ್ಧಾಂತಗಳ ಬಗ್ಗೆ ನಿಷ್ಠೆ ಬಲಹೀನವಾಗತೊಡಗಿತು. ಆಗ ದೇಶವು ದುರವಸ್ಥೆಯೆಡೆಗೆ ಸರಿಯತೊಡಗಿತು. ವಿರೋಧ ತತ್ವಗಳ ಸಮ್ಮಿಲನದಿಂದ ರಾಷ್ಟ್ರ ಕಟು ಅನುಭವಗಳನ್ನು ಎದುರಿಸಬೇಕಾಯಿತು. ಏಕರಸತ್ವದ ಮುಖ್ಯ ಸಿದ್ಧಾಂತವೆಂದರೆ



ರಾಷ್ಟ್ರದೊಳಗಿನ ನಮ್ಮ ಸಮಸ್ತ ನಿಷ್ಠೆಗಳು ಈ ಏಕರಸತೆಯ ಬದಿಯಲ್ಲಿಟ್ಟು ಭಾರತಕ್ಕೆ ಸಂಬಂಧಿಸಿದ ಬಾಹ್ಯ ನಿಷ್ಠೆಗಳನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನವುಂಟಾಯಿತು. ಪರಿಣಾಮ ನಮ್ಮ ಮುಂದೆ ಸ್ಪಷ್ಟವಾಗಿದೆ. ಮುಸ್ಲಿಂ ಲೀಗ್‌ನ್ನು ಸ್ವೀಕರಿಸಿದುದರ ಪರಿಣಾಮವೇ ಭಾರತ–ವಿಭಜನೆಯ ರೂಪದಲ್ಲಿ ಪ್ರಕಟಗೊಂಡಿತು. ಮುಸ್ಲಿಂಲೀಗ್‌ನ ಪ್ರೇರಣೆಯ ಕೇಂದ್ರವು ಸದಾ ಭಾರತದ ಹೊರಗಡೆಯೆ ಇದೆ.

ಒಮ್ಮೆ ಮುಸ್ಲಿಂ ಲೀಗ್‌ನ ಕರಾಚಿ ಅಧಿವೇಶನದಲ್ಲಿ ಭಾರತದ ಮುಸಲ್ಮಾನರಿಗೆ ಆ ಅಧಿವೇಶನದಲ್ಲಿ ಅರಬ್‌ನ ದೃಶ್ಯಗಳನ್ನು ತೋರಿಸುವ ಪ್ರಯತ್ನ ನಡೆಯಿತು. ಇದಕ್ಕಾಗಿ ಖರ್ಜೂರದ ಮರಗಳು ಹಾಗೂ ಮರಳಿನ ರಾಶಿಗಳನ್ನು ತಯಾರಿಸಲಾಗಿತ್ತು. ಈ ಕಾರ್ಯವು ಅವರ ಪ್ರೇರಣಾಕೇಂದ್ರ ಭಾರತ–ಬಾಹ್ಯವಾದುದರ ಕಾರಣದಿಂದ ಉಂಟಾಗಿತ್ತು. ಭಾರತದೇಶದಲ್ಲಿ ವಾಸಿಸುತ್ತಿರುವ ಇಂತಹ ಮುಸಲ್ಮಾನರ ಪ್ರೇರಣಾಕೇಂದ್ರ ಭಾರತವಾಗಿರದೇ ಅರಬ್ ದೇಶವಾಗಿದ್ದಲ್ಲಿ ಖಂಡಿತಗಿಯೂ ಅವರು ಎಲ್ಲಾ ವಿಷಯಗಳಿಗಾಗಿ ಆ ಕಡೆಯೇ ನೋಡುತ್ತಾರೆ. ಹೃದಯಲ್ಲಿ ಭಾರತದ ಯಾವುದೇ ದೃಶ್ಯ ಅಂಕಿತವಾಗಲಾರದು. ಭಾರತದ ನದಿಗಳು, ಬೆಟ್ಟಗುಡ್ಡಗಳು, ನೆಲ ಈ ಎಲ್ಲಾ ಸಂಗತಿಗಳು ಹೇಯವೆನಿಸುತ್ತದೆ. ವಿವಿಧ ರೀತಿಯ ಪ್ರಾಕೃತಿಕ ಮನೋರಮ ದೃಶ್ಯಗಳು ಹಾಗೂ ಇಲ್ಲಿಯ ಹವಾಮಾನವು ಅವರಿಗೆ ಸುಖದಾಯಕವಾಗಿರುವುದಿಲ್ಲ. ಹೊರಗಿನಿಂದ ಬಂದ ಉತ್ಸವಗಳು ಹಾಗೂ ರೀತಿ–ರಿವಾಜುಗಳೊಂದಿಗೆ ಈ ದೇಶದ ನದಿಗಳು ಕಾಡುಮೇಡುಗಳು ಮತ್ತು ಚಳಿಗಾಲ ಯಾವುದೂ ಹೊಂದಿಕೊಳ್ಳುವುದಿಲ್ಲ ಹೀಗಿರುವಾಗ ವಸಂತ ಇದರ ಪರಿಣಾಮವಾಗಿ ಮುಸ್ಲಿಂಲೀಗ್ ಪುನಃ ತಲೆಯೆತ್ತತೊಡಗಿದೆ, ಪ್ರತ್ಯೇಕತೆ ಹಾಗೂ ಒಡಕಿನ ಬೀಜ ಬಿತ್ತುತ್ತಿದೆ. ಇದೇ ರೀತಿಯಾದ ಅವಸ್ಥೆಯಲ್ಲಿ ಕಮ್ಯೂನಿಸ್ಟರೂ ಸಹ ಇದ್ದರು. ಅವರು ಸಹ ಅರಾಜಕತೆ, ಅಶಾಂತಿಯ ಕಾರ್ಯವೆಸಗುವುದರಲ್ಲಿ ಏನೂ ತಪ್ಪಿಲ್ಲವೆಂದು ತಿಳಿಯುತ್ತಿದ್ದರು. ಈ ಎಲ್ಲಾ ಕೆಡುಕುಗಳ ಮುಖ್ಯ ಕಾರಣವೆಂದರೆ ಭಾರತಕ್ಕೆ ಬಾಹ್ಯವಾದದ್ದನ್ನು ಪ್ರೇರಣಾಕೇಂದ್ರವನ್ನಾಗಿ ಗ್ರಹಿಸಿದ್ದು.

ವಿಚಾರಧಾರೆಗಳ ಹಾಗೆ ಸಂಸ್ಕೃತಿ, ಪರಂಪರೆ ಹಾಗೂ ಆಚರಣೆಗೆ ಸಂಬಂಧಿಸಿದ ಚಿಕ್ಕ–ಪುಟ್ಟ ಸಂಗತಿಗಳಿಗೂ ಈ ವಿಷಯ ಸನ್ವಯಿಸುತ್ತದೆ. ವಿದೇಶಗಳಲ್ಲಿ ಪ್ರಚಲಿತವಾಗಿದೆಯೆಂಬ ಒಂದೇಒಂದು ಕಾರಣದಿಂದ ಆ ಚಿಕ್ಕ–ಚಿಕ್ಕ ವಿಷಯಗಳನ್ನು ಸ್ವೀಕರಿಸುವುದು ರಾಷ್ಟ್ರೀಯ ದೃಷ್ಟಿಯಿಂದ ದುಷ್ಪರಿಣಾಮವನ್ನುಂಟುಮಾಡುತ್ತದೆ. ಕೇವಲ ಅಂಧಾನುಕರಣೆ ಹಾಗೂ ಹೊರಗಿನಿಂದ ಬಂದಂತಹುದೆಲ್ಲವನ್ನು ನಮ್ಮ ಆವಶ್ಯಕತೆ ಹಾಗೂ ಸ್ವಂತಕ್ಕೆ ಅನುಗುಣವಾಗಿ ಯಾವುದೇ ಎಚ್ಚರಿಕೆವಹಿಸದೇ ಸ್ವೀಕರಿಸಿದಲ್ಲಿ ಅದು ನಿಧಾನವಾಗಿ ನಮ್ಮ ರಾಷ್ಟ್ರೀಯ ಭಾವನೆಗಳನ್ನು ಕುಂಠಿತಗೊಳಿಸುತ್ತದೆ. ಇದರಿಂದ ಜೀವನದಲ್ಲಿ ಒಂದು ರೀತಿಯು

ಖಾಲಿತನವುಂಟಾಗುತ್ತದೆ. ಅಂತರ್ದ್ವಂದ್ವವುಂಟಾಗುತ್ತದೆ. ಇಂತಹ ಜನರಿಗೆ ಜೀವನದಲ್ಲಿ ಶಾಂತಿ ದೊರೆಯುವುದಿಲ್ಲ. ತಿಂಡಿ–ತೀರ್ಥ, ಉಡುಗೆ–ತೊಡುಗೆ, ಪರಸ್ಪರ ಸಾಮಾಜಿಕ ಆಚರಣೆಯ ಪದ್ಧತಿಗಳಲ್ಲಿ ಯಾರೂ ವಿಚಾರ ಮಾಡದೇ ಯೂರೋಪಿನ ಅಥವಾ ಅಮೇರಿಕಾದ ಪದ್ಧತಿಗಳನ್ನು ಅಳವಡಿಸಿಕೊಂಡರೋ ಅವರು ಭಾರತೀಯರಾಗಿದ್ದರೂ ಸಹ ಒಂದು ವಿಚಿತ್ರ ಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾರೆ. ವಿದೇಶೀಯರ ನಕಲು ಮಾಡುವುದರಲ್ಲಿ ಅವರೂ ಎಲ್ಲಿಯೂ ತಮ್ಮತನವನ್ನು ಉಳಿಸಿಕೊಳ್ಳಲಾಗಲಿಲ್ಲ ಹಾಗೂ ಬಹಳ ವಿಚಿತ್ರವಾದ ಅನುಭವ ಹೊಂದುತ್ತಿದ್ದರು. ಸಜ್ಜನರೊಬ್ಬರು ತಮ್ಮ ವ್ಯಥೆಯನ್ನು ತಿಳಿಸುತ್ತಾ ನನಗೆ ಹೀಗೆ ಹೇಳಿದರು. 'ಏನು ಹೇಳಲಿ ಉಪಾಧ್ಯಾಯರೇ, ನನ್ನದು ಬಹಳ ವಿಚಿತ್ರಸ್ಥಿತಿಯಾಗಿಬಿಟ್ಟದೆ. ನಾನು ಅಮೇರಿಕಾ ಅಥವಾ ಇಂಗ್ಲೆಂಡಿಗೆ ತೆರಳಿದಾಗ ಅಲ್ಲಿ ನಾನು ಭಾರತೀಯನೆಂದು ಹೇಳುತ್ತೇನೆ. ಆದರೆ ಭಾರತಕ್ಕೆ ಮರಳಿದಾಗ ನನ್ನ ಭಾಷೆ, ವೇಷಭೂಷ, ವಿಚಾರ ಹಾಗೂ ದೃಷ್ಟಿಕೋನಗಳನ್ನು ನೋಡಿ ನಾನು ಆಂಗ್ಲನೆಂದು ಹೇಳಬೇಕಾಗುತ್ತದೆ.'

**ಭೀಷಣ ಅಂತರ್ದ್ವಂದ್ವ**

ಈ ರೀತಿಯ ಅಂತರ್ದ್ವಂದ್ವದಿಂದ ಶಾಂತಿ ಸಿಗಲಾರದು ಹಾಗೂ ದುಃಖವುಂಟಾಗುತ್ತದೆ. ಈ ಅಂತರ್ದ್ವಂದ್ವವು ಪರಾನುಕರಣೆಯಿಂದ ಪ್ರೇರಿತವಾದ ಎಲ್ಲಾ ಕ್ಷೇತ್ರದಲ್ಲಿಯೂ ಇಂದು ಹರಡಿದೆ. ಈ ಅಂತರ್ದ್ವಂದ್ವವನ್ನು ತಿಳಿಸಲು ದಿನ ನಿತ್ಯ ಪರಿಚಯವಾಗುತ್ತಿರುವ ಎರಡು ಉದಾಹರಣೆಗಳಿಂದ ಮುಂದಿಡಬಹುದಾಗಿದೆ. ಇಂದು ನಮ್ಮಲ್ಲಿ ಪ್ರಚಲಿತವಾದ ಪ್ರಜಾತಂತ್ರದಲ್ಲಿ ಯಾವ ವಿದೇಶೀ ಮಾನ್ಯತೆಗಳನ್ನು ಸ್ವೀಕರಿಸಲೆಂದು ಭಾರತೀಯ ಜನರನ್ನು ಒತ್ತಾಯಪಡಿಸಲಾಗುತ್ತಿದೆಯೋ ಅದೇ ನಮ್ಮ ಆಂತರಿಕ ಅಂತರ್ದ್ವಂದ್ವದ ಸ್ಪಷ್ಟ ಪ್ರಮಾಣವಾಗಿದೆ. ಭಾರತೀಯರಾದ ನಾವು ಸಹ ನಮ್ಮ ಸಮಾಜರಚನೆಯಲ್ಲಿ ಸದಾ ಪ್ರಜಾಪ್ರಭುತ್ವದವರಾಗಿದ್ದೇವೆ. "ಜೌಂ ಪಾಂಚಹಿ ಮತ ಲಾಗೈ ನೀಕಾ" ಐವರ ಅಭಿಪ್ರಾಯವೇ ಸರಿಯಾದುದು ಎಂಬ ರಾಮಾಯಣದ ಉಕ್ತಿ ಯಾರಿಗೆ ತಿಳಿದಿಲ್ಲ. ಪರಸ್ಪರ ವಿಚಾರ–ವಿಮರ್ಶೆ ಮಾಡಿ ಯೋಜನೆ ಸಿದ್ಧಪಡಿಸಿ ಹಾಗೂ ಗುರಿಯನ್ನು ಪ್ರಾಪ್ತಗೊಳಿಸಿಕೊಳ್ಳಲು ಎಲ್ಲರೂ ಸಮಾನ ಮನಸ್ಸು, ಸಮಾನ ವಚನ ಹಾಗೂ ಸಮಾನ ಹೃದಯದಿಂದ ಕಾರ್ಯಮಾಡುವ ಬೋಧನೆ ನೀಡಲಾಗುತ್ತದೆ ವೈದಿಕ ಕಾಲದಿಂದಲೂ ಸಹ ನಮ್ಮಲ್ಲಿ ಯಾವುದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಸಹ ಅದಕ್ಕೆ ಅಡ್ಡಿಯುಂಟುಮಾಡಲಿಲ್ಲ. ಅಲ್ಲದೇ ನಮ್ಮಲ್ಲಿ ಹೀಗೆ ಹೇಳಲಾಗಿದೆ, "ವಾದೇ ವಾದೇ ಜಾಯತೇ ತತ್ವಬೋಧಃ." ಇದರಿಂದಾಗಿಯೇ ದೊಡ್ಡ–ದೊಡ್ಡ ದಾರ್ಶನಿಕ ಹಾಗೂ ಸಾಮಾಜಿಕ ವಿವಾದಗಳುಂಟಾಗಿವೆ. ಆದರೆ ನಮ್ಮಲ್ಲಿಯ ಒಂದು ದೊಡ್ಡ ವೈಶಿಷ್ಟವೆಂದರೆ



ನಾವು "ವಿರೋಧಕ್ಕಾಗಿ ವಿರೋಧ"ದ ನೀತಿಗೆ ಮಾನ್ಯತೆ ನೀಡಲಿಲ್ಲ. ಆದರೆ ಪಶ್ಚಿಮದಿಂದ ಬಂದ ಈ 'ಡೆಮೊಕ್ರೆಸಿ' ಪ್ರಜಾಪ್ರಭುತ್ವವು ಇದೇ ವಿರೋಧದ ತಳಹದಿಯ ಮೇಲೆ ನಿಂತಿದೆ. ನಮ್ಮ ಮಾತಿನಲ್ಲಿ ವಿರೋಧ ಅಗತ್ಯವೆಂದು ಹೇಳಲಾಗಿದೆ. ವಿರೋಧ ಪಕ್ಷವನ್ನು ಪ್ರತಿಯೊಂದು ವಿಷಯದಲ್ಲಿ ವಿರೋಧ ವ್ಯಕ್ತಪಡಿಸಲೆಂದೇ ಸ್ಥಾಪಿಸಲಾಗುತ್ತದೆ. ಫುಟ್‌ಬಾಲ್ ಆಟದ ಉದಾಹರಣೆ ನೀಡಿ, ಆಡಲು ಎರಡು ತಂಡಗಳು ಅಗತ್ಯವಾಗಿ ಬೇಕಾಗುತ್ತವೆ ಎಂದು ಹೇಳಲಾಗಿದೆ. ಒಂದು ತಂಡವಿದ್ದರೆ ಆಡಲಾಗುವುದಿಲ್ಲ. ಆದುದರಿಂದಲೇ ಇಂಗ್ಲೆಂಡ್‌ನಲ್ಲಿ ವಿರೋಧಪಕ್ಷವನ್ನು "ಹಿಜ಼ ಮೆಜೆಸ್ಟೀಜ್ ಅಪೊಜಿಶನ್' ಎನ್ನಲಾಗುತ್ತದೆ. ಅಲ್ಲಿ ಎರಡು ಪಕ್ಷಗಳಿವೆ. ಒಂದು ಕನ್ಸರ್‌ವೇಟಿವ್ ಹಾಗೂ ಎರಡನೆಯದು ಲಿಬರಲ್. ಆಂಗ್ಲರು ಬಹಳ ಗೌರವದಿಂದ ಏನು ಹೇಳುತ್ತಾರೆಯೆಂದರೆ: ಇಂಗ್ಲೆಂಡಿನಲ್ಲಿ ಯಾವುದೇ ಬಾಲಕರು ಜನ್ಮ ತಾಳಿದಲ್ಲಿ ಕಂಜರ್‌ವೇಟಿವ್ ಆಗುತ್ತಾನೆ ಅಥವಾ ಲಿಬರಲ್. ಅವನಿಗೆ ಹುಟ್ಟಿನಿಂದಲೇ ಪಕ್ಷ ದೊರೆತುಬಿಡುತ್ತದೆ. ಅದಿಲ್ಲದೇ ಅವನಿಗೆ ಬೇರೆ ಗತಿಯಿಲ್ಲ. ಈ ವಿಷಯವು ನಮ್ಮ ದೇಶದಲ್ಲಿ ಬಹಳ ವಿಚಿತ್ರವಾಗಿ ಕಾಣುತ್ತದೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮರ್ಥ್ಯ ಹಾಗೂ ಶ್ರದ್ಧೆಗನುಗಣವಾಗಿ ಸತ್ಯದ ಅನ್ವೇಷಣೆಯನ್ನು ಸ್ವೀಕರಿಸಿದ್ದಾನೆ. ಆದ್ದರಿಂದ ನಮ್ಮಲ್ಲಿ ವಿಚಾರಗಳ ಭಿನ್ನಾಭಿಪ್ರಾಯದಲ್ಲಿ ವಿರೋಧವಲ್ಲದೇ ಸಾಮರಸ್ಯವನ್ನು ಹುಡುಕುವ ಕಲೆಯನ್ನು ಸಂಸ್ಕೃತಿಗೆ ಭೂಷಣವೆಂದು ತಿಳಿಯಲಾಗಿದೆ. ವಿರೋಧಕ್ಕಾಗಿ ವಿರೋಧಿಸುವವನು ಒಳ್ಳೆಯ ವ್ಯಕ್ತಿಯೆಂದು ತಿಳಿಯುವುದಿಲ್ಲ. ಯಾರು ಪರಸ್ಪರ ಅನುಕೂಲ ಹಾಗೂ ಸರ್ವಮತ ಸಮನ್ವಯಕ್ಕಾಗಿ ಪ್ರಯತ್ನಿಸುತ್ತಾರೆಯೋ ಹಾಗೂ ವಿಭಿನ್ನ ಭಿನ್ನಾಭಿಪ್ರಾಯಗಳ ನಡುವೆಯೂ ಒಂದೇ ಸತ್ಯವನ್ನು ಕಂಡುಕೊಳ್ಳುತ್ತಾನೋ ಅವನು ಶ್ರೇಷ್ಠ ವ್ಯಕ್ತಿಯಾಗಿರುತ್ತಾನೆ.

ಇದು ಚಿಂತನೆಯ ಕ್ಷೇತ್ರದಲ್ಲಿ ವ್ಯಾಪಿಸಿರುವ ಅಂತರ್‌ದ್ವಂದ್ವದ ಒಂದು ಉದಾಹಣೆ. ಇದೇ ರೀತಿ ದೈನಂದಿನ ವ್ಯಾವಹಾರಿಕ ಕ್ಷೇತ್ರದಲ್ಲಿಯೂ ಸಹ ಎಷ್ಟೋ ಪ್ರಸಂಗಗಳು ಇವೆ. ಉದಾಹರಣೆಗೆ ಕೈಕುಲುಕುವ ವಿಷಯವನ್ನು ತೆಗೆದುಕೊಳ್ಳೋಣ. ಈ ವಿದೇಶೀ ಆಚರಣೆಯನ್ನು ಸಾಮಾಜಿಕ ಮಟ್ಟದಲ್ಲಿ ಪಾಲಿಸುತ್ತಾ ಈ ಕ್ರಿಯೆಯನ್ನು ಬಹಳ ಸಹಜವೆಂದು ತಿಳಿಯಲಾಗುತ್ತದೆ. ಆದರೆ ಯಾವುದೇ ಸಾರ್ವಜನಿಕ ಕಾರ್ಯಕ್ರಮಕ್ಕೆ ಅಧ್ಯಕ್ಷೆಯಾಗಿ ಯಾರಾದರೂ ಮಹಿಳೆಯನ್ನು ಆಯ್ದಾಗ, ಆಕೆಯ ಕೈಕುಲುಕುವಾಗ ಬಹಳ ಸಂಕೋಚವನ್ನು ಅನುಭವಿಸುತ್ತಾರೆ. ಹಲವು ಬಾರಿ ಅಭ್ಯಾಸದಿಂದಾಗಿ ಕೈ ಕುಲುಕುವ ಸಲುವಾಗಿ ಸಿದ್ಧರಾಗಿ, ಅಂತರದಲ್ಲಿ ನಮಸ್ಕಾರ ಮಾಡುವ ಸ್ಥಿತಿಯಲ್ಲಿ ಕೈಜೋಡಿಸಿ ನಿಂತುಬಿಡುತ್ತಾರೆ. ಪತಿ–ಪತ್ನಿ ಜೊತೆಯಾಗಿರುವಾಗ ಈ ಅಂತರ್ದ್ವಂದ್ವ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಅಂತರ್ದ್ವಂದ್ವದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಪುರುಷರು ತಮ್ಮೊಡನೆ ಮಹಿಳೆಯರನ್ನು ಸಾರ್ವಜನಿಕ

ಕಾರ್ಯಕ್ರಮಗಳಿಗೆ ಕರೆದೊಯ್ಯಲು ಇಷ್ಟಪಡದಂತಹ ಉದಾಹರಣೆಗಳೂ ಇವೆ. ಈಗ ಹೇಳಿ ಈ ಅಂತರ್ದ್ವಂದ್ವವನ್ನು ಪ್ರಗತಿಯ ಚಿಹ್ನೆಯೆಂದು ತಿಳಿಯಲಾಗುವುದೇ? ನಿಜಕ್ಕೂ ಇದು ಪರಾನುಕರಣೆಯ ಒತ್ತಡವಾಗಿದೆ. ಈ ಒತ್ತಡದಲ್ಲಿ ನಮ್ಮ ಆಚರಣೆಗಳೆಲ್ಲ ಹಿಂದುಳಿದಂತೆ ಕಂಡುಬರುತ್ತದೆ.

ಕೆಲವರು ಯಗಧರ್ಮವನ್ನು ಕುರಿತು ವಿಚಾರ ಮಾಡಬೇಕು ಎಂಬ ಕಾರಣವನ್ನು ನೀಡುತ್ತಾರೆ. ದೇಶ, ಕಾಲ ಹಾಗೂ ಪರಿಸ್ಥಿತಿಗನುಗುಣವಾಗಿ ಆಚರಣೆಯಲ್ಲಿ ಪರಿವರ್ತನೆ ಕಂಡುಬರುತ್ತದೆ ಎಂಬುದು ಸತ್ಯಸಂಗತಿ. ಆದರೆ ದೇಶ, ಕಾಲ ಹಾಗೂ ಪರಿಸ್ಥಿತಿಯ ಮಾಲೀಕರಾಗಿ ಕೇವಲ ಇಂಗ್ಲೆಂಡ್, ಅಮೇರಿಕಾ ಮಾತ್ರ ಇವೆಯೇ? ಮಾಡರ್ನ್‌ನ ಲೇಬಲ್ ಕೊಡುವ ಹಕ್ಕು ಕೇವಲ ಇವರಿಗೆ ಮಾತ್ರ ಇದೆಯೇ? ನಮ್ಮಲ್ಲಿಯೂ ಸಹ ನಮ್ಮ ಜೀವನಮೌಲ್ಯಗಳನ್ನು ಸ್ಥಾಪಿಸುವುದರ ಮಹತ್ವವನ್ನು ಹೆಚ್ಚಿಸುವಂತಹ ಒಳ್ಳೆಯ ಸಂಗತಿಗಳುಂಟಾಗಬಹುದು. ನಾವು ಅವುಗಳನ್ನು ಒಳ್ಳೆಯದೆಂದು ತಿಳಿದೂ ಪಾಲಿಸದಲ್ಲಿ ನಮ್ಮ ಅಂತರ್ದ್ವಂದ್ವ ಹಾಗೂ ಅಶಾಂತಿ ಹೆಚ್ಚುವುದಿಲ್ಲವೇ? ಈ ಮಾನಸಿಕ ದಾಸ್ಯದಿಂದ ನಮ್ಮ ಸ್ವತಂತ್ರ ಚಿಂತನೆ ಕುಂಠಿತವಾಗುತ್ತದೆ ಎನ್ನುವುದು ನಿಜ. ಬಾಹ್ಯ ಜೀವನದ ಮೇಲೆ ಉಂಟಾಗುವ ವಿದೇಶೀ ಪ್ರಭಾವವು ನಮ್ಮ ಆಂತರಿಕ ಸ್ವಾವಲಂಬನೆಯ ಭಾವನೆಯನ್ನು ಕ್ಷೀಣಿಸುತ್ತದೆ. ಇದರಿಂದಾಗಿ ಸಮಸ್ತ ಸಾಮುದಾಯಿಕ ಜೀವನವೇ ನಷ್ಟವಾಗುವಂತಹ ಸಂಕಟವು ಎದುರಾಗುವಂತಹ ಸಮಯವೂ ಬರುತ್ತದೆ. ವಿಶ್ವದಲ್ಲಿ ದೊಡ್ಡ–ದೊಡ್ಡ ಜಾತಿಗಳು ಇದೇ ರೀತಿ ನಷ್ಟವಾಗಿಹೋಗಿದೆ. ನಾವು ನಮ್ಮ ಸಂಪೂರ್ಣ ಜೀವನದ ಕ್ರಿಯಾಕಲಾಪಗಳನ್ನು ಹೊರಗಿನ ಅಂಧಾನುಕರಣೆಯ ಆಧಾರದ ಮೇರೆಗೆ ನಿರ್ವಹಿಸಿದಲ್ಲಿ ಪ್ರಗತಿ ಸಾಧಿಸಲಾಗುವುದಿಲ್ಲ. ಇಂತಹ ಅನುಕರಣೆಯಿಂದ ವಿಕಾಸ ಕುಂಠಿತವಾಗುತ್ತದೆ. ಆದುದರಿಂದ ಸಂಪೂರ್ಣ ಜೀವನದ ಆಧಾರ ಸ್ವಾಭಿಮಾನವಾಗಿರುತ್ತದೆ ಹಾಗೂ ಅದೇ ನಮ್ಮನ್ನು ವಿಶ್ವದ ಯೋಗ್ಯ ಸಂಗತಿಗಳ ಪರಸ್ಪರ ಕೊಳು–ಕೊಡೆಯ ಸಂತುಲಿತ ಪದ್ಧತಿಯ ಮಾರ್ಗದರ್ಶನವನ್ನು ನೀಡುತ್ತದೆ.

**ಆಧುನಿಕ ಪ್ರಗತಿಯ ದಿಕ್ಕು**

ನಮ್ಮ ರಾಷ್ಟ್ರವು ಈಗಷ್ಟೇ ನೀರಿನಿಂದ ಹೊರಬಂದಂತಹ ಭೂಪ್ರದೇಶವಲ್ಲವೆಂಬುದನ್ನು ಜೊತೆಗೆ ನಾವು ಯೋಚಿಸಬೇಕಾಗಿದೆ. ನಮ್ಮ ಸಹಸ್ರಾರು ವರ್ಷಗಳ ರಾಷ್ಟ್ರೋಜ್ಜೀವನ ಇದೇ ಭೂಮಿಯ ಮೇಲುಂಟಾಗಿದೆ. ಇಷ್ಟು ಪುರಾತನ ಕಾಲಖಂಡದಲ್ಲಿ ನಮ್ಮ ಸ್ವಭಾವ ಹಾಗೂ ಪರಂಪರೆ ಅವಿನಾಶಿಯಾಗಿದೆ. ನಾವು ಇದನ್ನು ಕುರಿತು ಸರಿಯಾಗಿ ವಿಚಾರಮಾಡಿ ನಮ್ಮ ಪ್ರತಿಭೆಯನ್ನು ನಂಬಿ ಆಧುನಿಕ ಪ್ರಗತಿಯ ದಿಕ್ಕನ್ನು ನಿಶ್ಚಿತಗೊಳಿಸಬೇಕಾಗಿದೆ. ನಮ್ಮ ಜೀವನಪದ್ಧತಿ ನಮ್ಮ



ಮಾರ್ಗದಶನಕ್ಕಾಗಿ ಪ್ರಚಲಿತವಿದೆ. ನಾವು ಸಾವಿರಾರು ವರ್ಷಗಳ ನಮ್ಮ ಇತಿಹಾಸವನ್ನು ಯಾವುದೇ ಬದಲಾವಣೆಯಿಲ್ಲದೇ, ಹೇಗಿದೆಯೋ ಹಾಗೇ ಮುಂದುವರಿಸಲಾಗದು ಎನ್ನುವುದು ಸರಿ. ಜೊತೆಗೆ ನಮ್ಮ ಜೀವನಪದ್ಧತಿಯ ಮೂಲ ತತ್ವಗಳನ್ನು ಮರೆತು ಮುಂದೆ ಚಲಿಸಲಾಗುವುದಿಲ್ಲ. ನಾವು ಅದನ್ನು ಯುಗಾನುಕೂಲವನ್ನಾಗಿಸಿ ಗ್ರಹಿಸಬೇಕಾಗಿದೆ. ಹೊಸ ಅರಿವು ಹಾಗೂ ಪುರಾತನ ಗುಣ–ಹಿರಿಮೆಯ ಸಂಯೋಗವನ್ನು ಇರಿಸಿಕೊಂಡು ಮುಂದುವರಿಯಬೇಕಾಗಿದೆ. ಆಧುನಿಕ ಕಾರ್ಯಯೋಜನೆ ಹಾಗೂ ಪುರಾತನ ಸಂದರ್ಭಶಿಕ್ಷಣದಿಂದ ನವನಿರ್ಮಾಣದ ಹೆಜ್ಜೆಯನ್ನಿಡಬೇಕು.

**ನಮ್ಮ ಗುರಿಯೇನು?**

ದಿಕ್ಕಿನಲ್ಲಿ ಏಳುವ ಪ್ರಶ್ನೆಯೆಂದರೆ ನಮ್ಮ ಗುರಿ ಏನು? ನಾವು ಎಲ್ಲಿಗೆ ತಲುಪಬೇಕಾಗಿದೆ? ನಮ್ಮ ಪ್ರತಿಭೆ ಹಾಗೂ ಸ್ವಭಾವದಿಂದ ಪ್ರಾಪ್ತವಾದ ನಮ್ಮ ಉಪಲಬ್ಧಿಯ ಸ್ವರೂಪವೇನು? ತಲುಪಬೇಕಾದ ಸ್ಥಾನಕ್ಕೆ ಅನುಗುಣವಾಗಿ ಈ ಯಾತ್ರೆಗೆ ಬೇಕಾದ ಸಾಧನಗಳನ್ನು ಕುರಿತು ವಿಚಾರ ಮಾಡುವುದು ಅತಿಅಗತ್ಯವಾಗಿದೆ. ಆದರೆ ಯಾರು ಎಲ್ಲಿಗೂ ಹೋಗಬೇಕಾಗಿಲ್ಲವೋ, ಯಾರ ಗುರಿ ಇನ್ನು ನಿಶ್ಚಿತವಾಗಿಲ್ಲವೋ ಅವರು ತಮ್ಮ ಗುರಿಯನ್ನು ತಲುಪುವ ಯಾತ್ರೆಗೆ ಬೇಕಾದ ಸಾಧನಗಳನ್ನು ಸಂಗ್ರಹಿಸುವ ಪ್ರಯತ್ನಪಟ್ಟರೇ ಅದು ವ್ಯರ್ಥವಾಗುತ್ತದೆ. ಇದೇ ರೀತಿಯಾದ ಯಾತ್ರೆ ನಮ್ಮ ರಾಷ್ಟ್ರೋಜ್ಜೀವನವಾಗಿದೆ. ಈ ಯಾತ್ರೆ ಎಲ್ಲಿಂದ ಆರಂಭವಾಯಿತು ಹಾಗೂ ಎಲ್ಲಿ ಕೊನೆಗೊಳ್ಳುತ್ತದೆ? ಇದನ್ನು ಕುರಿತು ವಿಚಾರಮಾಡಿದಲ್ಲಿ ನಾವು ಕೆಲವು ಸಂಗತಿಗಳನ್ನು ನಿರ್ಧರಿಸಬಹುದಾಗಿದೆ.

ಮನುಷ್ಯನು ತನ್ನ ಜೀವನಯಾತ್ರೆಯಲ್ಲಿ ಕೆಲವು ಕಾರ್ಯಗಳನ್ನು ಮಾಡಿದಲ್ಲಿ ಮತ್ತೆ ಕೆಲವನ್ನು ಮಾಡುವುದಿಲ್ಲ. ಯಾವುದು ಸುಖದಾಯಕವೋ ಅದನ್ನು ಮಾಡುತ್ತಾನೆ, ಯಾವುದು ಸುಖದಾಯಕವಲ್ಲವೋ ಅದನ್ನು ಮಾಡುವುದಿಲ್ಲ. ಆಗ ನಮಗೆದುರಾಗುವ ಪ್ರಶ್ನೆಯೆಂದರೆ ಈ 'ಸುಖ' ಎಂದರೆ ಏನು? ವ್ಯಾವಹಾರಿಕವಾಗಿ ಇದನ್ನು ಕುರಿತು ವಿವೇಚನೆ ಮಾಡಿದಲ್ಲಿ ಮತ್ತೊಂದು ಪ್ರಶ್ನೆ ಮೂಡಿಬರುತ್ತದೆ. ಅದೇನೆಂದರೆ ಇದು ಯಾವಸುಖ? ನಾವು ಇಂದ್ರಿಯಸುಖವೆಂದು ಹೇಳುತ್ತೇವೆ. ಆದರೆ ಇಷ್ಟು ಹೇಳಿದರೆ ಸಾಲದು. ಕೇವಲ ಇಂದ್ರಿಯಸುಖದಿಂದ ಕೆಲಸವಾಗುವುದಿಲ್ಲ. ಎಷ್ಟೋ ಬಾರಿ ನಾವು ಇಂದ್ರಿಯಗಳಿಗೆ ಸುಖನೀಡುವ ವಸ್ತುಗಳನ್ನು ತ್ಯಾಗ ಮಾಡಿರುವುದೂ ಉಂಟು. ಉದಾಹರಣೆಗೆ ನಾವು ಊಟಮಾಡಿದಾಗ ಇಂದ್ರಿಯಸುಖ ಅಗತ್ಯವಾಗಿ ಸಿಗುತ್ತದೆ. ಆದರೆ ನಾವು ಶತ್ರುಗಳ ಮನೆಯಲ್ಲಿ ಊಟಮಾಡುತ್ತೇವೆಯೇ? ಯಾರೊಂದಿಗೆ ಜಗಳವಾಗಿಯೋ, ಯಾರು ನಮ್ಮನ್ನು ತಿರಸ್ಕರಿಸುತ್ತಾರೆಯೋದೆ,

ಅವರ ಮನೆಯಲ್ಲಿ ನಾವು ಊಟ ಮಾಡುವುದಿಲ್ಲ. ಇದರ ಅರ್ಥ ಅಲ್ಲಿ ಊಟ ಮಾಡುವುದರಿಂದ ಇಂದ್ರಿಯಸುಖ ದೊರೆಯುವುದಿಲ್ಲ ಎಂದಲ್ಲ, ಅಲ್ಲಿ ಊಟಮಾಡುವುದರಿಂದ ಇಂದ್ರಿಯ ಸುಖ ದೊರೆಯುತ್ತದೆಯಾದರೂ ಮನಸ್ಸು ಒಪ್ಪುವುದಿಲ್ಲ, ಮನಸ್ಸಿಗೆ ಸುಖ ದೊರೆಯುವುದಿಲ್ಲ. ಹೀಗೆ ಸುಖ ಕೇವಲ ಇಂದ್ರಿಯಗಳಿಗೆ ಸಂಬಂಧಿಸಿದುದಲ್ಲ, ಮನಸ್ಸಿಗೂ ಸಹ ಸಂಬಂಧಪಟ್ಟಿದೆ. ಜೊತೆಗೆ ಬುದ್ಧಿಗೂ ಸುಖದ ಅಗತ್ಯಬೀಳುತ್ತದೆ. ಬುದ್ಧಿಗೂ ಶಕ್ತಿ ಬೇಕಾಗುತ್ತದೆ. ಒಬ್ಬ ಹುಚ್ಚನು ದಷ್ಟ–ಪುಷ್ಟವಾಗಿರುತ್ತಾನೆ. ಹಲವಾರು ಬಾರಿ ಅವನಿಗೆ ಸುಖವು ಸಿಗುತ್ತದೆ ಆದರೆ ಅವನ ಬುದ್ಧಿ ಅವಿಕಸಿತವಾಗಿರುತ್ತದೆ. ಅವನ ಬುದ್ಧಿಶಕ್ತಿಗೆ ಕಷ್ಟವಿರುತ್ತದೆ ಹಾಗೂ ಈ ಕಷ್ಟದಿಂದಾಗಿ ಊಟಮಾಡಿದನಂತರವೂ ಸಹ ಅವನಿಗೆ ನೆಮ್ಮದಿ ಇರುವುದಿಲ್ಲ. ಆದ್ದರಿಂದ ಮನಸ್ಸಿನ ಸುಖಬೇಕು, ಬುದ್ಧಿಯ ಸುಖ ಬೇಕು ಹಾಗೂ ಇದಕ್ಕೂ ಮಿಗಿಲಾಗಿ ಆತ್ಮಸುಖ ಬೇಕು. ಸಾಧಾರಣವಾಗಿ ನಮ್ಮ ಕಲ್ಪನೆಯಲ್ಲಿ ಸುಖವೆಂದರೆ ಅದು ಇಂದ್ರಿಯಸುಖ, ಮನಸ್ಸಿನ ಸುಖ, ಬುದ್ಧಿಯ ಸುಖ ಹಾಗೂ ಆತ್ಮದಸುಖ ಇದೆಲ್ಲದುದರ ಸಂಯೋಗವಾಗಿರಬೇಕು ಎಂದು ತಿಳಿಯುತ್ತೇವೆ. ಯಾವ ಸಾಧನಗಳಿಂದ ಮೇಲೆ ಹೇಳಿದಂತಹ ನಾಲ್ಕು ತತ್ವಗಳ ಪೂರ್ಣವಿಕಾಸ ಉಂಟಾಗುತ್ತದೆಯೋ ಅದನ್ನೇ ಸ್ವೀಕರಿಸಬೇಕು ಹಾಗೂ ಅದರಿಂದ ನಮಗೆ ಸುಖ ದೊರೆಯುತ್ತದೆ.

**ಸುಖಪ್ರಾಪ್ತಿಯ ಸಾಧನಗಳು**

ಸುಖಪ್ರಾಪ್ತಿಗಾಗಿ ಯಾವ ಸಾಧನಗಳನ್ನು ತಮ್ಮದಾಗಿಸುವ ಸಲುವಾಗಿ ನಾವು ಅಭ್ಯಾಸ ಮಾಡಬೇಕೋ ಅದನ್ನು ನಮ್ಮಲ್ಲಿ 'ಪುರುಷಾರ್ಥ'ವೆಂದು ಹೇಳಲಾಗಿದೆ. ಪುರುಷಾರ್ಥ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ನಾಲ್ಕು ಪ್ರಕಾರಗಳಾಗಿರುತ್ತದೆ. ಈ ನಾಲ್ಕು ಪುರುಷಾರ್ಥಗಳು ಪರಸ್ಪರ ಪೂರಕವಾಗಿರುತ್ತದೆ. ಅರ್ಥ ಪುರುಷಾರ್ಥ ಶರೀರಕ್ಕಾಗಿ, ಧರ್ಮ ಪುರುಷಾರ್ಥ ಸಮಾಜಕ್ಕಾಗಿ, ಕಾಮಪುರುಷಾರ್ಥ ಕಾಮನೆ (ಇಚ್ಛೆ)ಗಾಗಿ ಹಾಗೂ ಮೋಕ್ಷ ಪುರುಷಾರ್ಥ ಆತ್ಮಕ್ಕಾಗಿ– ಹೀಗೆ ಈ ನಾಲ್ಕು ಪುರುಷಾರ್ಥಗಳ ಸಮಾವೇಶದಿಂದಲೇ ಮನುಷ್ಯ ಅಭಿವೃದ್ಧಿ ಹೊಂದುತ್ತಾನೆ. ಮನುಷ್ಯನು ಎಂದು ಈ ನಾಲ್ಕು ಪುರುಷಾರ್ಥಗಳಿಗಾಗಿ ಪ್ರಯತ್ನಪಡುತ್ತಾನೆಯೋ, ನಾಲ್ಕನ್ನು ಗಳಿಸುವ ಪ್ರಯತ್ನ ಮಾಡುತ್ತಾನೆಯೋ ಆಗ ಅವನಿಗೆ ಸುಖ ಸಿಗಬಹುದು. ಈಗ ವಿಚಾರ ಮಾಡಬೇಕಾದ ಸಂಗತಿ ಎಂದರೆ ಈ ಪುರುಷಾರ್ಥಗಳಲ್ಲಿ ಯಾವ ಒಂದು ಪುರುಷಾರ್ಥವನ್ನು ಗಳಿಸುವುದರಿಂದ ಉಳಿದ ಎಲ್ಲವೂ ತಾನಾಗಿಯೇ ಸಿಗುತ್ತವೆ. ಈ ಪ್ರಶ್ನೆಗೆ ನಮ್ಮಲ್ಲಿ ಅನೇಕ ಜನರು ಭಿನ್ನಭಿನ್ನ ಉತ್ತರ ನೀಡಿದ್ದಾರೆ ಹಾಗೂ ಎಲ್ಲರೂ ತಮ್ಮತಮ್ಮ ಉತ್ತರಕ್ಕೆ ಮಹತ್ವ ನೀಡುತ್ತಾರೆ. ಹೇಗೆ ಕಾಲೇಜಿನಲ್ಲಿ



ಅರ್ಥಶಾಸ್ತ್ರ ಅಥವಾ ತರ್ಕಶಾಸ್ತ್ರ ಓದುವವನು ತಮ್ಮ ಶಾಸ್ತ್ರಕ್ಕೆ ಮಹತ್ವ ನೀಡುತ್ತಾನೆಯೋ ಹಾಗೆಯೇ ಇಲ್ಲಿ ಸಹ ಕೆಲವರು 'ಅರ್ಥ'ಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ, ಮತ್ತೆ ಕೆಲವರು 'ಕಾಮ'ವನ್ನು ಮುಖ್ಯವೆನ್ನುತ್ತಾರೆ. ಕೆಲವರು 'ಧರ್ಮ'ವನ್ನು ಮುಖ್ಯವೆನ್ನುತ್ತಾರೆ ಹಾಗೂ ಕೆಲವರು 'ಮೋಕ್ಷ'ಕ್ಕೆ ಮಹತ್ವ ನೀಡುತ್ತಾರೆ. ಕೆಲವರು ಧರ್ಮವನ್ನು ಆಧಾರವೆಂದು ತಿಳಿದು ಚಲಿಸಬೇಕು ಎಂದರೆ ಮತ್ತೆ ಕೆಲವರು 'ಅರ್ಥ' ಬಹಳ ಮುಖ್ಯವೆಂದು, ಅದಿಲ್ಲದೇ ಧರ್ಮವಿಲ್ಲ ಎಂದು ಹೇಳಿರುವಂಥ ವಿವಾದಗಳು ನಡೆದಿವೆ.

ನಾವು 'ಧರ್ಮ' ಶಬ್ದವನ್ನು ಬಳಸಿದಾಗ ಅದರಲ್ಲಿ ಅರ್ಥಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ಎರಡೂ ಸೇರಿಕೊಂಡಿರುತ್ತವೆ. ಧರ್ಮಶಾಸ್ತ್ರದಲ್ಲಿ ಅರ್ಥಶಾಸ್ತ್ರ ಹಾಗೂ ರಾಜ್ಯಶಾಸ್ತ್ರದ ಕೆಲವು ವಿಷಯಗಳು ಸೇರಿದ್ದರೂ ಸಹ ಅರ್ಥ ಮತ್ತು ಪುರುಷಾರ್ಥದ ಶಕ್ತಿ ಬೇರೆಯಾಗಿರುತ್ತದೆ. ಅರ್ಥ ಎಲ್ಲಾ ವಸ್ತುಗಳಿಗೂ ಆಧಾರವಾಗಿದೆ, ಧರ್ಮವು ಅದನ್ನು ಆಧರಿಸಿದೆ ಎಂದು ಹೇಳಲಾಗುತ್ತದೆ. ಅರ್ಥವಿಲ್ಲದಿದ್ದ ಪಕ್ಷ ಧರ್ಮವು ಚಲಿಸುವುದಿಲ್ಲ ಆದುದರಿಂದ ರಾಜ್ಯದ ಆವಶ್ಯಕತೆಗಳನ್ನು ಸಹ ಇದನ್ನು ಆಧಾರವನ್ನಾಗಿರಿಸಿ ವಿವರಿಸಲಾಗಿದೆ ಹಾಗೂ ನಮ್ಮಲ್ಲಿ ಧರ್ಮವು ಇದನ್ನು ಆಧರಿಸಿ ಚಲಿಸುತ್ತದೆ.

ಅರ್ಥದ ಅಭಾವವುಂಟಾದಲ್ಲಿ ಧರ್ಮವು ನಶಿಸುತ್ತದೆ. ಅರ್ಥವು ಸಾಕಷ್ಟು ಪ್ರಮಾಣದಲ್ಲಿದ್ದರೇ ಉಳಿದೆಲ್ಲವೂ ಸರಿಯಾಗಿರುತ್ತವೆ. ವಿಶ್ವಾಮಿತ್ರನು ಹಸಿವೆಯಿಂದ ಸಾಯಬೇಕಾದ ಸರದಿ ಬಂದಾಗ ಅವರು ಚಂಡಾಲನ ಮನೆಯ ಎಂಜಲು ನಾಯಿಯ ಮಾಂಸವನ್ನು ಕದ್ದು ತಿಂದರು. ಚಂಡಾಲನಿಗೆ ಸಂದೇಹವುಂಟಾದಾಗ ಇದರಲ್ಲಿ ಅಧರ್ಮವೇನೂ ಇಲ್ಲವೆಂದು ಹೇಳಿದರು. ಎಲ್ಲಾ ಧರ್ಮಗಳ ಆಧಾರ ಪ್ರಾಣರಕ್ಷಣೆಯಾಗಿದೆ. ಪ್ರಾಣಕ್ಕೆ ತೃಪ್ತಿಯನ್ನುಂಟುಮಾಡುವ ವಸ್ತುವೇ 'ಸುಖ' ಎಂದು ಹೇಳಲಾಗುತ್ತದೆ. ಪ್ರಾಣವನ್ನು ಧರ್ಮಕ್ಕೆ ಆಧಾರವೆನ್ನಲಾಯಿತು ಹಾಗೂ ಪ್ರಾಣರಕ್ಷೆ ಅರ್ಥದಿಂದ ಮಾತ್ರ ಸಾಧ್ಯ. ಯಾರ ಬಳಿ ಅರ್ಥ ಇಲ್ಲವೋ, ಅವನನ್ನು ಯಾರೂ ಕೇಳುವುದಿಲ್ಲ. ಆದರೆ ಈ ಅರ್ಥದಲ್ಲಿಯೇ ಧರ್ಮದ ಭಾವವನ್ನು ತ್ಯಜಿಸಿದರೆ ಸಹಜವಾಗಿ ಅನರ್ಥವುಂಟಾಗುತ್ತದೆ.

ಧರ್ಮದ ಚಾಲನೆಗೆಂದೇ ರಾಜ್ಯವನ್ನು ನಿರ್ಮಿಸಲಾಯಿತು. ಶಾಸ್ತ್ರಕಾರರು ಅರ್ಥವನ್ನು ಎಲ್ಲದುದರ ಮೂಲವೆಂದು ಹೇಳಿದ್ದಾರೆ. ಕೆಲವರು ಎಲ್ಲದ್ದಕ್ಕಿಂತಲೂ ದೊಡ್ಡ ವಸ್ತು ಕಾಮವೆಂದು ಹಾಗೂ ಇದಿಲ್ಲದಿದ್ದಲ್ಲಿ ಉಳಿದೆಲ್ಲವೂ ವ್ಯರ್ಥವೆಂದು ಸಹ ಹೇಳಿದ್ದಾರೆ. ವಿದುರ ಹೀಗೆ ಹೇಳಿದ್ದಾನೆ: ಅರ್ಥ ಬಂಧನಕಾರಕ, ಧರ್ಮ ಬಂಧನಕಾರಕ ಹಾಗೂ ಕಾಮವಂತೂ ಬಂಧನಕಾರಕವೇ ಸರಿ. ಎಲ್ಲದ್ದಕ್ಕಿಂತಲೂ ದೊಡ್ಡದಾದ ಮುಖ್ಯವಾದ ವಸ್ತು ಮೋಕ್ಷ–ಮೋಕ್ಷಪ್ರಾಪ್ತಿಯ ನಂತರ ಪಡೆಯಲು

ಏನೂ ಉಳಿದಿರುವುದಿಲ್ಲ. ಆನಂತರ ಯಾವುದೇ ಕಾಮನೆಯೂ ಇರಲಾರದು. ಆದುದರಿಂದ ನಿಷ್ಕಾಮ ಭಾವದಿಂದ ಮೋಕ್ಷ ಪಡೆಯುವುದೇ ಅತಿ ದೊಡ್ಡ ಪುರುಷಾರ್ಥವಾಗಿದೆ. ವಿದುರ ಈ ವಿವಾದವನ್ನು ಯುಧಿಷ್ಠಿರ ಕೊನೆಗೊಳಿಸಿದ. ಅವನು ಹೀಗೆ ಹೇಳಿದನು–ಯಾವುದೇ ಒಂದು ಪುರುಷಾರ್ಥವು ದೊಡ್ಡದಾಗಿರುವುದಿಲ್ಲ–ಯಾರು ನಾಲ್ಕು ಪುರುಷಾರ್ಥಗಳನ್ನು ಜೊತೆಗೆ ತೆಗೆದುಕೊಂಡು ಚಲಿಸುತ್ತಾರೆಯೋ ಅದೇ ಪುಣ್ಯವಾಗುತ್ತದೆ. ಒಂದನ್ನು ಪಡೆಯಲು ಯಾರು ಪ್ರಯತ್ನಿಸುತ್ತಾರೆಯೋ ಅವರ ಪ್ರಯತ್ನ ಅಪರಿಪೂರ್ಣವಾಗುತ್ತದೆ ಹಾಗೂ ಒಂದನ್ನು ಮಾತ್ರ ಪಡೆಯಲು ಪ್ರಯತ್ನಿಸುವವನು ಪಾಪಿಯಾಗುತ್ತಾನೆ. ಕೇವಲ ಒಂದನ್ನು ಕುರಿತು ವಿಚಾರ ಮಾಡುವುದು ಮಾನವ ಜೀವನವನ್ನು ಭಾಗಗಳಾಗಿ ತುಂಡರಿಸುವುದಾಗುತ್ತದೆ / ಖಂಡಿಸುವುದಾಗುತ್ತದೆ, ಆದರೆ ಮಾನವ ಜೀವನವನ್ನು ಖಂಡಿಸಲಾಗದು ಎನ್ನುವುದು ಸತ್ಯ. ಹಲವು ಬಾರಿ ಜನರು ಅದನ್ನು ಖಂಡಖಂಡವನ್ನಾಗಿಸಿ ವಿಚಾರಮಾಡುತ್ತಾರೆ. ಅದರಿಂದ ತಪ್ಪುಗಳುಂಟಾಗುತ್ತದೆ. ಏಕೆಂದರೆ ಆ ವಿಚಾರ ಜೀವನದ ಕೇವಲ ಒಂದು ಅಂಗವನ್ನು ಕುರಿತಾಗಿರುತ್ತದೆ. ಪಾಶ್ಚಾತ್ಯದಲ್ಲಿ ಇದೇ ರೀತಿ ಖಂಡಖಂಡವಾಗಿ ವಿಚಾರ ಮಾಡಲಾಗಿದೆ. ರಾಜಕೀಯ ವಿಷಯ ಆಗಿದ್ದಲ್ಲಿ ಕೇಲ 'ಮ್ಯಾನ್ ಈಸ್ ಎ ಪೊಲಿಟಿಕಲ್ ಬೀಯಿಂಗ್' ಎಂಬುದರ ಕುರಿತು ವಿಚಾರ ಮಾಡುತ್ತಾನೆ, 'ಅರ್ಥಶಾಸ್ತ್ರ'ದಲ್ಲಿ 'ಇಕನಾಮಿಕ್ ಮ್ಯಾನ್'ನ್ನು ಕಲ್ಪಿಸಿಕೊಳ್ಳಲಾಗಿದೆ. ಇದರ ಜೀವನ ಒಂದೇ ಆಗಿರುತ್ತದೆ ಹಾಗೂ ಇದರಲ್ಲಿ ಕೇವಲ ಅರ್ಥಶಾಸ್ತ್ರದ ಕ್ರಿಯೆಗಳು ಹಾಗೂ ಸಿದ್ಧಾಂತಗಳನ್ನು ಕುರಿತು ವಿಚಾರ ಮಾಡಲಾಗುತ್ತದೆ. ಆದರೆ ವಾಸ್ತವಿಕ ಜೀವನದಲ್ಲಿ ಹೀಗಾಗುವುದಿಲ್ಲ. ಆರ್ಥಿಕ ಕ್ರಿಯೆಗಳ ಹಿನ್ನೆಲೆಯಲ್ಲಿ ಕೇವಲ ಆರ್ಥಿಕ ಹಾಗೂ ಉಪಯುಕ್ತತಾವಾದದ ಸಿದ್ಧಾಂತ ಕಾರ್ಯ ನಿರ್ವಹಿಸಲಾರವು. ಅದಲ್ಲದೇ ಇನ್ನೂ ಕೆಲವು ಭಾವನೆಗಳು ಸಹ ಕೆಲಸ ಮಾಡುತ್ತವೆ. ಉದಾಹರಣೆಗೆ ನಮ್ಮ ದೇಶದಲ್ಲಿ ತಯಾರಿಸಲಾದಂತಹ ವಸ್ತುವಿನ ಬೆಲೆ ಹೆಚ್ಚಾಗಿದ್ದರೂ ಸಹ, ಕಡಿಮೆ ಉಪಯೋಗಿಯಾಗಿದ್ದರೂ ಸಹ ಅದನ್ನು ಕೊಳ್ಳಲಾಗುತ್ತದೆ. ಇದೇ ರೀತಿ ಬಳಕೆಯ ದೃಷ್ಟಿಯಿಂದ ಅನುಪಯುಕ್ತವಾದ ವಸ್ತುವಾಗಿದ್ದರೂ ಸಹ ಬಾಲಕನು ಹಠಮಾಡಿದಲ್ಲಿ ಅವನು ಇಷ್ಟಪಟ್ಟ ಆ ವಸ್ತುವನ್ನು ಕೊಳ್ಳಲೇಬೇಕಾಗುತ್ತದೆ. ಇಂತಹ ಸಮಯದಲ್ಲಿ ನಾವು ಅರ್ಥಶಾಸ್ತ್ರವನ್ನು ಕುರಿತು ವಿಚಾರಮಾಡಿದಲ್ಲಿ ಅನರ್ಥವಾಗಬಹುದು. ವಾಸ್ತವಕ್ಕೆ ಮಾನವನ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾಗುತ್ತದೆ. ಮನುಷ್ಯನಲ್ಲಿ ಅನೇಕ ಭಾವನೆಗಳು ಮೂಡುತ್ತವೆ. ಕೇವಲ ಒಂದು ಮನೋವೃತ್ತಿಯನ್ನು ಕುರಿತು ವಿಚಾರ ಮಾಡದೇ ನಾಲ್ಕು ಪುರುಷಾರ್ಥಗಳನ್ನು ಸರಿಸಮಾನವೆಂದು ತಿಳಿದು ನಾಲ್ಕು ಪುರುಷಾರ್ಥಗಳನ್ನು ನಾವು ಪೂಜಿಸಬೇಕಾಗಿದೆ.



## ನಾಲ್ಕು ಪುರುಷಾರ್ಥಗಳ ಆಧಾರವೇ ಧರ್ಮ

ಈ ನಾಲ್ಕು ಪುರುಷಾರ್ಥಗಳ ಆಧಾರಸ್ತಂಭವೆಂದು ಯಾವುದಾದರೂ ಒಂದನ್ನು ಹೇಳಬೇಕಾದಲ್ಲಿ ಅದು ಧರ್ಮವೇ ಆಗಿರುತ್ತದೆ. ಧರ್ಮದಿಂದಲೇ ಅರ್ಥ ಹಾಗೂ ಕಾಮ ಪ್ರಾಪ್ತಿಯಾಗುತ್ತದೆ. ಧರ್ಮವು ಅರ್ಥ ಹಾಗೂ ಕಾಮವನ್ನು ಆಧರಿಸಿದೆಯಾದರೂ ಇವುಗಳಲ್ಲಿ ಧರ್ಮದ ಆಧಾರವಿಲ್ಲದಿದ್ದಲ್ಲಿ ಅರ್ಥವು ಅನರ್ಥವಾಗಿಹೋಗುತ್ತದೆ ಹಾಗೂ ಅದರೊಡನೆ ಧರ್ಮವನ್ನು ಸೇರಿಸಿದಲ್ಲಿ ಅರ್ಥವೇ ನಮ್ಮ ಕಾಮಪ್ರಾಪ್ತಿಯ ಸಾಧನವಾಗುತ್ತದೆ. ಧರ್ಮ ಹಾಗೂ ಅರ್ಥ ಪರಸ್ಪರ ಪೋಷಕವಾಗಿರುತ್ತವೆ. ಮನು, ಧರ್ಮದ ಹತ್ತು ಲಕ್ಷಣಗಳನ್ನು ಉಲ್ಲೇಖಿಸಿದ್ದಾನೆ: **‘‘ಧೃತಿಃ ಕ್ಷಮಾದಮೋಽಸ್ತೇಯ’’** ಮುಂತಾದ ಮಾತುಗಳಿಗೆ ಇವುಗಳನ್ನು ಆಧರಿಸಿಯೇ ಅರ್ಥ ಉಂಟಾಗುತ್ತದೆ. “ಧಾರಣಾದ್ಧರ್ಮಮಿತ್ಯಾಹುಃ”ವಿನಲ್ಲಿ ಧೃತಿಯನ್ನು ಮೊದಲವಸ್ತುವೆನ್ನಲಾಗಿದೆ ಹಾಗೂ ಯಾವುದೇ ವಸ್ತುವಿನ ಪ್ರಾಪ್ತಿಗಾಗಿ ಇದು ಅತ್ಯವಶ್ಯವಾಗಿದೆ. ಧನಾರ್ಜನೆಯಲ್ಲಿಯೂ ಸಹ ಧೈರ್ಯದಿಂದ ಇರುವುದು ಅಗತ್ಯ. ಯಾರು ಧೈರ್ಯದಿಂದ ಪ್ರಯತ್ನಿಸಲಾರರೋ, ಅವನು ಹಣ ಗಳಿಸಲಾಗುವುದಿಲ್ಲ. ಧರ್ಮದ ಮತ್ತೊಂದು ಲಕ್ಷಣವೇ ಕ್ಷಮೆ. ಕ್ಷಮೆ ಆಚರಣೆಯಲ್ಲಿ ಉತ್ತಮವಾಗಿರುತ್ತದೆ. ವ್ಯವಹಾರದಲ್ಲಿ ಯಾವುದೇ ಸಂಗತಿ ನೆಟ್ಟಿಗೆ ಇರದಿದ್ದಲ್ಲಿ ದುಃಖವನ್ನು ನುಂಗಿಬಿಡುತ್ತಾನೆ, ಹೊಡೆದಾಡುವುದಿಲ್ಲ, ಹೀಗೆ ಕ್ಷಮಾಶೀಲನಾಗಿರುತ್ತಾನೆ – ಕ್ಷಮೆ ವ್ಯಾಪಾರ–ವೃದ್ಧಿ ಹಾಗೂ ಅರ್ಥಾರ್ಜನೆಗೂ ಅಗತ್ಯವಾಗಿ ಬಹುಶಃ ಬೇಕಾಗುತ್ತದೆ. ಯಾರು ಮತ್ತೊಬ್ಬರ ಅವಗುಣಗಳನ್ನು ಕ್ಷಮಿಸಲಾರನೋ ಅವನು ಅರ್ಥಾರ್ಜನೆಯೂ ಮಾಡಲಾರನು. ಧರ್ಮದ ಮೂರನೇ ಲಕ್ಷಣವೇ ಸತ್ಯ. ಸತ್ಯವೆಂದರೆ ಮನಸ್ಸು, ವಚನ, ಕರ್ಮದ ಐಕ್ಯತೆ ಎಂದರ್ಥ. ಇಂದು ವ್ಯಾಪಾರದಲ್ಲಿ ಅಸತ್ಯವೇ ಹೆಚ್ಚಾಗಿದೆ ಎಂದು ಜನರು ಯೋಚಿಸುತ್ತಾರೆ. ಆದರೆ ಇದು ತಪ್ಪು. ಸತ್ಯವನ್ನು ಜೀವನದಿಂದ ಬೇರ್ಪಡಿಸಿದಲ್ಲಿ ಕೆಲಸ ನಡೆಯುವುದಿಲ್ಲ. ಪರಸ್ಪರ ವಿಶ್ವಾಸವೂ ಸತ್ಯದ ಆಧಾರದಿಂದ ಮಾತ್ರ ಸಾಧ್ಯ. ಈ ಸತ್ಯದಿಂದ ನಮ್ಮ ವ್ಯಾಪಾರವೂ ಸಹ ಹೆಚ್ಚುತ್ತಾ ಹೋಗುತ್ತದೆ. ನಾವು ಸತ್ಯಪಾಲನೆ ಮಾಡಿಲ್ಲವಾದರೆ ಸಂಪೂರ್ಣ ವ್ಯವಸ್ಥೆಯಲ್ಲಿ ತೊಂದರೆಯುಂಟಾಗುತ್ತದೆ. ಇಂದು ಕಂಡುಬರುವ ವ್ಯಾವಹಾರಿಕ ತೊಂದರೆಗಳಿಗೆ ಕಾರಣವೇನೆಂದರೆ ಇಂದು ಸಾಮಾನ್ಯವಾಗಿ ನಾವು ಧರ್ಮದ ಸಿದ್ಧಾಂತಗಳನ್ನು ಪರಿಪಾಲಿಸುತ್ತಿಲ್ಲ.

ಹೀಗಾಗಿ ನಾವು ಧರ್ಮವನ್ನಾಧರಿಸಿ ಮುಂದೆ ಚಲಿಸಬೇಕಾಗುತ್ತದೆ. ನಮ್ಮ ಜೀವನದಲ್ಲಿ ಸತ್ಯ ಧರ್ಮವನ್ನು ಸಮ್ಯಕ್ ರೀತಿಯಿಂದ ಪ್ರತಿಷ್ಠಾಪಿಸಬೇಕು. ಇದರ ಸಾರವೆಂದರೆ ಧರ್ಮದಿಂದ ಎಲ್ಲಾ ರೀತಿಯಲ್ಲಿಯೂ ಅರ್ಥಪ್ರಾಪ್ತಿ ಸಾಧ್ಯವಾಗುತ್ತದೆ. ಮತ್ತೊಂದು ಕಡೆ ಧರ್ಮ ಅರ್ಥವನ್ನು ಅವಲಂಬಿಸಿದೆ ಸಾಕಷ್ಟು ಪ್ರಮಾಣದಲ್ಲಿ

ಅರ್ಥವಿದ್ದಲ್ಲಿ ಧರ್ಮವನ್ನು ಸರಿಯಾಗಿ ಪಾಲಿಸಲಾಗುತ್ತದೆ ಇಲ್ಲದಿದ್ದಲ್ಲಿ ಇದರ ಅಭಾವದಲ್ಲಿ ಜನರು ಪರಸ್ಪರ ಹೊಡೆದಾಡುತ್ತಾರೆ. ಅಧರ್ಮ ಉಂಟಾಗುತ್ತದೆ. ಆದುದರಿಂದ ನಮ್ಮಲ್ಲಿರುವ ನಿಯಮಗಳು ನಮ್ಮ ಸಮೃದ್ಧ ಕಾಲವನ್ನು ನೆನಪಿಸುತ್ತದೆ. ಹೀಗಾಗಿ ಯಾವ ಸಮಯದಲ್ಲಿ ನಮ್ಮಲ್ಲಿ ನಿಯಮಗಳನ್ನು ತಯಾರಿಸಲಾಯಿತೋ ಅದೇ ಸಮಯದಲ್ಲಿ ದೇಶ ಸಮೃದ್ಧವಾಗಿತ್ತು.

ಸಮೃದ್ಧಿಗೆ ಆಧಾರ ಧರ್ಮ. ಈ ಬಗ್ಗೆ ನಮಗೆ ತಿಳಿದು ಬರುವ ವಿಷಯವೆಂದರೆ ನಮ್ಮ ಆಧಾರ ಧರ್ಮ ಅಭಾವಾತ್ಮಕ-ಅಲ್ಲ. ನಮ್ಮಲ್ಲಿ ಅಭಾವವಲ್ಲದೇ ಸಂಯಮವನ್ನು ಕುರಿತು ವಿಚಾರಮಾಡಲಾಗಿದೆ. ಸದಾ ಜೀವನವನ್ನು ಕುರಿತು ವಿಚಾರ ಮಾಡಲಾಗಿದೆ. ನಮ್ಮ ಜೀವನದಲ್ಲಿ ಸರಳತೆಯನ್ನು ಅಳವಡಿಸಿಕೊಳ್ಳಬೇಕು ಎಂದು ವಿಚಾರ ಮಾಡುವುದು. ನಮ್ಮಲ್ಲಿ ಊಟ-ತಿಂಡಿಯ ಅಭಾವವಿದೆ. ಎಂದಲ್ಲದೇ ನಾವು ಸಾಕಷ್ಟು ಸಮೃದ್ಧರಾಗಿದ್ದೇವೆ ಹಾಗೂ ಸಮೃದ್ಧರಾಗಿರಬೇಕು. ಜೀವನದಲ್ಲಿ ಯಾವುದೇ ಅಭಾವವಿರಬಾರದು ಹಾಗೂ ಇವೆಲ್ಲವೂ ಪರಸ್ಪರಾವಲಂಬಿ ವಿಷಯಗಳಾಗಿವೆ.

ನಾವು ಪ್ರಾಣರಕ್ಷೆಗಾಗಿ ಅನ್ನತಿನ್ನುತ್ತೇವೆ. ಪ್ರಾಣವಿಲ್ಲದಿದ್ದಲ್ಲಿ ಸತ್ತವನ ಬಾಯಿ ಚೀರಿ ಬಲವಂತವಾಗಿ ಅದರಲ್ಲಿ ಅನ್ನ ತುಂಬಿದರೂ ಅದು ಜೀರ್ಣವಾಗುವುದಿಲ್ಲ. ಮತ್ತೊಂದೆಡೆ ಪ್ರಾಣವಿದ್ದಾಗ ಅನ್ನ ತಿನ್ನುವುದನ್ನು ಬಿಟ್ಟಲ್ಲಿ ಹೆಚ್ಚೆಂದರೆ ನಾಲ್ಕು ದಿನ ಕೆಲಸ ನಡೆಯುತ್ತದೆ. ಈ ಅವಧಿ ಹೆಚ್ಚಾದಲ್ಲಿ ಪ್ರಾಣ ಹೋಗುತ್ತದೆ. ಇದರಿಂದಾಗಿ ಪ್ರಾಣ ಅನ್ನವನ್ನು ಆಧರಿಸಿದೆ ಹಾಗೂ ಪ್ರಾಣದಿಂದಲೇ ಅನ್ನ ಜೀರ್ಣವಾಗುತ್ತದೆ ಎಂಬುದು ಖಚಿತವಾಗುತ್ತದೆ. ಆದ್ದರಿಂದ ಅನ್ನ ಹಾಗೂ ಪ್ರಾಣ ಪರಸ್ಪರಾವಲಂಬಿಗಳಾಗಿವೆ. ಸರಿಯಾಗಿ ಇದೇ ರೀತಿಯಾದ ಸಂಬಂಧ ಧರ್ಮ ಹಾಗೂ ಅರ್ಥದ ನಡುವೆಯಿದೆ. ಎರಡೂ ಪುರುಷಾರ್ಥಗಳ ಪರಸ್ಪರ ಪೋಷಕ ತತ್ವಗಳಿದ್ದರೂ ಸಹ ನಾವು ವಿಧಾನ ಎಂದು ತಿಳಿಯಬಹುದಾದ ಕೆಲವು ಸಂಗತಿಗಳಿವೆ. ಉದಾಹರಣೆಗೆ ಸ್ವಲ್ಪವೂ ಅರ್ಥವಿಲ್ಲದ ಅಭಾವಾತ್ಮಕ ಸ್ಥಿತಿಯಿರುವುದಿಲ್ಲ, ಅಲ್ಪಸ್ವಲ್ಪವಾದರೂ ಅರ್ಥವಿದೇ ಇರುತ್ತದೆ. ಇದನ್ನು ಧರ್ಮಾನುಸಾರವಾಗಿ ಬಳಸಿದಲ್ಲಿ ಅರ್ಥದಿಂದ ಅರ್ಥ ಹಾಗೂ ಹಣದಿಂದ ಮತ್ತಷ್ಟು ಹಣವನ್ನು ಗಳಿಸಲಾಗುತ್ತದೆ. ಇದನ್ನು ನಾವೆಲ್ಲ ಒಪ್ಪುತ್ತೇವೆ. ಅರ್ಥ ಸಾಧನವಾಗಿದೆ, ಅರ್ಥದಿಂದ ಅರ್ಥದ ಉತ್ಪತ್ತಿಯಾದಾಗ ಅದನ್ನು ನಾವು ಧರ್ಮಾನುಸಾರವಾಗಿ ಬಳಸುತ್ತೇವೆ. ಆದುದರಿಂದ ನಮ್ಮಲ್ಲಿ ಧರ್ಮವನ್ನು ಸರ್ವೋಪರಿ/ಸರ್ವಶ್ರೇಷ್ಠವೆಂದು ತಿಳಿಯಲಾಗಿದೆ, ಧರ್ಮಾನುಸಾರವಾಗಿ ನಡೆದಾಗ ಅರ್ಥ ಹುಟ್ಟುತ್ತದೆ ಹಾಗೂ ಹೆಚ್ಚುತ್ತದೆ. ಅರ್ಥಗಳಿಸಿದನಂತರ ಕಾಮ ಪ್ರಾಪ್ತಿಯುಂಟಾಗುತ್ತದೆ. 'ಧನಾದ್ ಧರ್ಮಃ ತತಃ ಸುಖಂ' ಎಲ್ಲಿ ಧನ ಹಾಗೂ ಧರ್ಮವಿದೆಯೋ ಅಲ್ಲಿ ಸುಖವಿದೆ. ಧನವನ್ನು ಧರ್ಮಾನುಸಾರವಾಗಿ ಬಳಸುವುದೆಂದರೆ ಯಾವ ಧನವನ್ನು ನಾವು



ಗಳಿಸುತ್ತೇವೆಯೋ ಅದನ್ನು ನಾವೊಬ್ಬರೇ ಅದನ್ನು ಅನುಭವಿಸದೇ ಅದರ ಕೆಲ ಭಾಗವನ್ನು ಬೇರೆಯವರಿಗೂ ಹಂಚಬೇಕು. ಆದುದರಿಂದಲೇ ನಮ್ಮಲ್ಲಿ ಬೇರೆಯವರಿಗೆ ಉಣಬಡಿಸುವುದಕ್ಕೆ ಮೊದಲು ಊಟ ಮಾಡುವವರನ್ನು 'ಪಾಪಿ' ಎನ್ನಲಾಗಿದೆ.

ಧನ ಗಳಿಸಿದಲ್ಲಿ ಅದನ್ನು ಧರ್ಮಾನುಸಾರವಾಗಿ ಖರ್ಚುಮಾಡಬೇಕು. ಆದುದರಿಂದ ಧರ್ಮ ಜೀವನಕ್ಕೆ ಅಗತ್ಯವಾಗಿ ಬೇಕಾದ ಪುರುಷಾರ್ಥವಾಗಿದೆ. ಅರ್ಥಶಾಸ್ತ್ರದಲ್ಲಿ ಉಪಭೋಗದಿಂದ ಕಾಮಪ್ರಾಪ್ತಿಯಾಗುತ್ತದೆ ಎಂದು ಹೇಳಲಾಗಿದೆ. ನಮ್ಮಲ್ಲಿ ಉಪಭೋಗ- ಸುಖಾನುಭವವು ಧರ್ಮದಲ್ಲಿ ಅಡಗಿರುತ್ತದೆ. ಧರ್ಮಾನುಸಾರವಾಗಿ ಉಪಭೋಗ/ಸುಖವನ್ನು ಅನುಭವಿಸಿದಾಗ ಶಾಂತಿ ದೊರೆಯುತ್ತದೆ. ಕಾಮ ಪ್ರಾಪ್ತಿ ಹಾಗು ಪರಿಪೂರ್ಣತೆಯುಂಟಾಗುತ್ತದೆ, ಆದರೆ ಕಾಮವೂ ಸಹ ಧರ್ಮಾನುಕೂಲವಾಗಿದ್ದರೇ ಸ್ವೀಕೃತವಾಗುತ್ತದೆ. ಮನಸ್ಸಿನಲ್ಲಿ ಬಂದ ಹುಚ್ಚುಭಾವನೆ, ಇಚ್ಛೆಗಳು ಪ್ರಾಪ್ತವಾಗಲೇಬೇಕು ಎಂಬುದು ಸರಿಯಲ್ಲ. ಕಾಮ ಮನಸ್ಸಿನ ಒಂದು ಗುಣವಾಗಿದೆ. ಮನಸ್ಸು ಚಂಚಲವಾದದ್ದು – ಮನಸ್ಸು ಎಲ್ಲಿಂದ ಮತ್ತೆಲ್ಲಿಗೋ ಹೋಗುತ್ತದೆ. ಮಾಡಬಾರದ್ದನ್ನು ಅದು ಮಾಡುತ್ತದೆ. ಆದುದರಿಂದಲೇ ಅದು ಚಂಚಲವಾಗಿದೆ ಹಾಗೂ ಚಂಚಲ ಮನಸ್ಸನ್ನು ಹತೋಟಿಯಲ್ಲಿಡಬೇಕಾದ ಅಗತ್ಯವಿದೆ. ಇಂದ್ರಿಯವೆಂಬ ಕುದುರೆಗೆ ಬುದ್ಧಿಯೆಂಬ ಕಡಿವಾಣದ ಅಗತ್ಯವಿದೆ. ಬುದ್ಧಿ ಅದನ್ನು ಸರಿಯಾಗಿ ತನ್ನ ಹತೋಟಿಯಲ್ಲಿಟ್ಟಿರುತ್ತದೆ. ಆಗ ರಥದಲ್ಲಿ ಸವಾರಿಯಾದ ಆತ್ಮ ಸರಿಯಾಗಿ ಕುಳಿತರಬಹುದಾಗಿದೆ. ಆದುದರಿಂದ ಬುದ್ಧಿಯನ್ನು ಸಾರಥಿಯನ್ನಾಗಿಸಬೇಕಾಗಿದೆ.

**ಆತ್ಮಾನಂ ರಥಿನಂ ವಿದ್ಧಿ, ಶರೀರಂ ರಥಮೇವ ತು ।**
**ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥**

ಕಡಿವಾಣವನ್ನು ಸಡಿಲಿಸಿದಲ್ಲಿ ಇಂದ್ರಿಯವೆಂಬ ಕುದುರೆ ತಪ್ಪು ಹಾದಿಯಲ್ಲಿ ಚಲಿಸತೊಡಗುತ್ತದೆ. ಬುದ್ಧಿಯನ್ನು ಹತೋಟಿಯಲ್ಲಿಡಬೇಕಾಗುತ್ತದೆ. ಏಕೆಂದರೆ ದೇವಾಲಯದ ಕಡೆ ನಡೆಯಬೇಕಾದ / ಚಲಿಸಬೇಕಾದ ನಿಮ್ಮ ಕಾಲುಗಳನ್ನು ಅದು ಮದ್ಯದಂಗಡಿಗೆ ಕರೆದೊಯ್ಯುತ್ತದೆ. ಧರ್ಮಕ್ಕನುಗುಣವಾಗಿರದಿದ್ದಲ್ಲಿ ಬುದ್ಧಿಯು ಸಹ ಎಲ್ಲಿಂದ ಮತ್ತೆಲ್ಲಿಗೋ ಕರೆದೊಯ್ಯುತ್ತದೆ.

ಕಾಮ ಮನಸ್ಸಿನ ಗುಣವಾಗಿದೆ. ಬುದ್ಧಿಯುತವಾಗಿ ಅದನ್ನು ತೃಪ್ತಿಗೊಳಿಸಿಬೇಕು ಹಾಗೂ ಬುದ್ಧಿಯ ಆಧಾರ ಧರ್ಮವಾಗಿರಬೇಕು. ಆಗ ಧರ್ಮವವಲಂಬಿಸಿ ಕೆಲಸ ಮಾಡುವ ಜನರು ತಮ್ಮ ಬುದ್ಧಿಬಲದಿಂದ ಉತ್ತಮ ಕಾರ್ಯಗಳನ್ನು ಮಾಡುತ್ತಾರೆ ಹಾಗೂ ಸುಖವು ದೊರೆಯುತ್ತದೆ. ಆದುದರಿಂದಲೇ ಅರ್ಥವನ್ನು ಧರ್ಮಕ್ಕಾಗಿ ಬಳಸಲಾದಾಗ ಅದರಿಂದ ಧರ್ಮ ಹೆಚ್ಚುತ್ತದೆ. ಧರ್ಮವು ಹೆಚ್ಚಾದಂತೆಲ್ಲಾ ಅರ್ಥ-ಕಾಮವನ್ನು ಉಪಯೋಗಿಸುವ ಇಚ್ಛೆಯು ಕಡಿಮೆಯಾಗುತ್ತದೆ. ಇದಕ್ಕೆ

ವಿರುದ್ಧವಾಗಿ ಚಲಿಸಿದರೆ ಧರ್ಮ ನಶಿಸುತ್ತದೆ ಹಾಗೂ ಅರ್ಥ-ಕಾಮದ ಸ್ಥಿತಿಯು ಕೊನೆಗೊಳ್ಳುತ್ತಾ ಹೋಗುತ್ತದೆ, ಅದರಿಂದ ಪುನಃ ಪ್ರಳಯಉಂಟಾಗುವ ಸ್ಥಿತಿಯುಂಟಾಗುತ್ತದೆ. ಈ ಪ್ರಳಯಂಕರ ಸ್ಥಿತಿಯನ್ನು ತಡೆಯಲು ಇರುವ ಒಂದೇ ಸಾಧವೆಂದರೆ ಅರ್ಥ ಹಾಗೂ ಕಾಮ ಧರ್ಮವನ್ನು ಅವಲಂಬಿಸಿರಬೇಕು. ನಮ್ಮಲ್ಲಿ 'ಧರ್ಮದ ವೃತ್ತಿ'ಯಿರಬೇಕು. ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಭಿನ್ನ-ಭಿನ್ನ ವೃತ್ತಿಗಳಿರುತ್ತವೆ. ವೃತ್ತಿ ಎಂದರೆ ಇಲ್ಲಿ ಪ್ರವೃತ್ತಿಯಾಗಿರದೇ ವ್ಯವಸಾಯವೆಂದು ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ವ್ಯಾಪಾರ ಬೇಕಾಗಿದೆ, ಇದರಿಂದಲೇ ಅವನು ಅರ್ಥವನ್ನು ಹುಟ್ಟಿಸಬಲ್ಲನು. ವೃತ್ತಿಯ ವ್ಯವಸ್ಥೆಯಿರದಿದ್ದಲ್ಲಿ ಅರ್ಥೋಪಾರ್ಜನೆಯೂ ಆಗುವುದಿಲ್ಲ. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಗೂ ಮಾಡಲು ಕೆಲಸ ಬೇಕಾಗುತ್ತದೆ ಹಾಗೂ ಅದರ ಗ್ಯಾರಂಟಿಯಿರಬೇಕು. ವ್ಯಾಪಾರದ ಗ್ಯಾರಂಟಿಯಿರದಿದ್ದಲ್ಲಿ ಉಳಿದವು ನಡೆಯವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಮಾಡಲು ಕೆಲಸ ದೊರೆಯಲೇಬೇಕು ಹಾಗೂ ಇಲ್ಲಿ ಪ್ರತಿಯೊಬ್ಬರಿಗೂ ಕೆಲಸ ಸಿಗುವುದು ಎಂದೇ ತಿಳಿಯೋಣ. ಏಕೆಂದರೆ ಈ ಭೂಮಿ ಕರ್ಮಭೂಮಿಯಾಗಿದೆ. ನಾವು ಇಲ್ಲಿ ಕರ್ಮಮಾಡಲೆಂದೇ ಜನ್ಮತಾಳುತ್ತೇವೆ, ಸ್ವತಃ ದೇವತೆಗಳು ಸಹ ಪುಣ್ಯ ಕ್ಷೀಣಿಸಿದಲ್ಲಿ ಜನ್ಮ ತಾಳುತ್ತಾರೆ. ಆಗ ಅವರು ಭಾರತದಲ್ಲಿ ಜನ್ಮ ಪಡೆಯಲು ಬಯಸುತ್ತಾರೆ ಹಾಗೂ ಇಲ್ಲಿ ಮಾಡಿದ ಕರ್ಮದಿಂದ ಪುಣ್ಯಫಲವನ್ನು ಅನುಭವಿಸಲು ಸ್ವರ್ಗಕ್ಕೆ ತೆರಳುತ್ತಾರೆ. ಮನುಷ್ಯನು ಕರ್ಮವನ್ನು ಮಾಡಬೇಕು ಹಾಗೂ ಪುಣ್ಯ ಫಲದೊರೆಯುವ ಕರ್ಮವನ್ನು ಮಾಡಿದಾಗ ಅದರಿಂದಾಗಿ ದೊರೆಯುವ ಫಲವು ಅವನ ಪ್ರಕೃತಿಯಂತೇ ಖಚಿತವಾಗಿರುತ್ತದೆ. ಇದೇ 'ಕರ್ಮಫಲ' ಸಿದ್ಧಾಂತ. ಯಾರು ಕರ್ಮವನ್ನು ಮಾಡುತ್ತಾರೆಯೋ ಅವರಿಗೆ ಅವಶ್ಯವಾಗಿ ಅದರ ಫಲ ದೊರೆಯುತ್ತದೆ.

ಕರ್ಮ ಪ್ರಮುಖ ವಸ್ತುವಾಗಿದೆ. ಇದೇ ಸಮಾಜ ವ್ಯವಸ್ಥೆಯ ಮೂಲ ವಿಚಾರವಾಗಿದೆ ಆ ವಿಚಾರವೇನೆಂದರೇ ಕರ್ಮಸಿದ್ಧಾಂತದಲ್ಲಿ ಯಾರನ್ನೇ ಆಗಲಿ ಯೋಗ್ಯ ಕರ್ಮದಿಂದ ಅಥವಾ ಅದರ ಫಲದಿಂದ ಬೇರ್ಪಡಿಸಲಾಗುವುದಿಲ್ಲ. ಕರ್ಮಸಿದ್ಧಾಂತದ ಈ ನ್ಯಾಯ ಪರಿಪಾಲನೆಯ ಜವಾಬ್ದಾರಿಯನ್ನು ಪಾಶ್ಚಾತ್ಯ ವಿಚಾರಪದ್ಧತಿಯುಲ್ಲಿ ರಾಜ್ಯಕ್ಕೆ ಮಾತ್ರ ವಹಿಸಲಾಗಿದೆ. ಅಲ್ಲಿ ರಾಜ್ಯ ಸರ್ವಶ್ರೇಷ್ಠವಾಗಿರುತ್ತದೆ. ಭಾರತೀಯ ಪದ್ಧತಿಯಲ್ಲಿ ಇದಕ್ಕಾಗಿ ಅನೇಕ ಮಟ್ಟಗಳಲ್ಲಿ ವಿಭಿನ್ನ ಸಂಸ್ಥೆಗಳನ್ನು ನಿರ್ಮಿಸಲಾಗುತ್ತದೆ. ವ್ಯವಸಾಯ, ವರ್ಣ, ಕುಟುಂಬ ಮುಂತಾದ ಎಷ್ಟೋ ಮಟ್ಟಗಳಲ್ಲಿ ಕರ್ಮದ ಆಶ್ವಾಸನೆ ನೀಡಲಾಗಿದೆ ಹಾಗೂ ಈ ಸಕಲ ಅರ್ಥ-ಕಾಮವನ್ನು ಒಂದೇ ಶಕ್ತಿಯಾದ ಧರ್ಮದಲ್ಲಿಡಲಾಗಿದೆ.

**ಧರ್ಮ ಸಂರಕ್ಷಣೆಗಾಗಿ ಅರ್ಥ**

ಈಗ ಈ ಪುರುಷಾರ್ಥದ ಮತ್ತೊಂದು ಅಂಶವಾದ 'ಅರ್ಥ'. ರಾಜಕೀಯದಲ್ಲಿ



ಇಂದು ಇದನ್ನು ಬೇರೆ ಎಂದು ಪರಿಗಣಿಸಲಾಗುತ್ತಿಲ್ಲ ಹಾಗೂ ಪ್ರಾಚೀನ ಕಾಲದಲ್ಲಿ ಶಾಸ್ತ್ರಗಳಲ್ಲಿ ಯಾವುದನ್ನು 'ದಂಡನೀತಿ' ಎಂದು ಕರೆಯಲಾಗಿದೆಯೋ ಇದನ್ನು ಕುರಿತು ವಿಚಾರ ಮಾಡೋಣ. ದಂಡನೀತಿಯ ಸಾಮಾನ್ಯ ಅರ್ಥವನ್ನು ನಾವು ರಾಜ್ಯದಿಂದ ತೆಗೆದುಕೊಳ್ಳಬಹುದು. ರಾಜ್ಯದ ಮಹಿಮೆಯನ್ನು ಸಾಕಷ್ಟು ಬಣ್ಣಿಸಲಾಗಿದೆ. ಈ ದಂಡ ಎಲ್ಲಿಂದ ಪ್ರಾರಂಭವಾಗುತ್ತದೆ ಎಂದು ನಾವು ವಿಚಾರ ಮಾಡಿ ನೋಡಬೇಕಾಗಿದೆ. ಇದರ ಆವಶ್ಯಕತೆಯಾದರೂ ಏನು? ರಾಜ್ಯವೇಕೆ ಬಂದಿತು? ಹೇಗೆ ಮೂಡಿತು? ಇದು ಸಹಜ ಪ್ರಶ್ನೆ. ಅತಿ ಪ್ರಾಚೀನ ಕಾಲದಲ್ಲಿ ಯಾವ ರಾಜನೂ ಇರಲಿಲ್ಲವೆಂದು ಹೇಳುತ್ತಾರೆ. ಎಲ್ಲಾ ಜನರೂ ಧರ್ಮಾವಲಂಬಿಗಳಾಗಿದ್ದರು ಹಾಗೂ ಪರಸ್ಪರ ಹಿತಸಾಧನೆಯನ್ನು ಗಮನದಲ್ಲಿಟ್ಟು ಮುನ್ನಡೆಯುತ್ತಿದ್ದರು. ಇದು ಕೃತಯುಗದ ವರ್ಣನೆ. ಆಗ ಎಲ್ಲಾ ಕಡೆಯೂ ಧರ್ಮವೇ ವ್ಯಾಪಿಸಿತ್ತು. ಅರ್ಥಲೋಭವಿರಲಿಲ್ಲ. ಆದುದರಿಂದಲೇ ರಾಜನ ಆವಶ್ಯಕತೆಯಿರಲಿಲ್ಲ, ಆದರೆ ಕಾಲಾಂತರದಲ್ಲಿ ಜನರಲ್ಲಿ ಉಂಟಾದ ಮೋಹದಿಂದ ಕರ್ತವ್ಯಾಕರ್ತವ್ಯದ ಗಮನ ಕಡಿಮೆಯಾಯಿತು. ಧರ್ಮ-ಅಧರ್ಮದ ವಿಚಾರ ಮಾಯವಾಯಿತು. ಈ ವಿಚಾರವಿಭ್ರಮೆಯಲ್ಲಿ ಲೋಭ ಹುಟ್ಟಿತು, ಕಾಮವು ಜನ್ಮ ತಾಳಿತು, ಹಾಗೂರೋಗುರುಜಿನಗಳು ಹುಟ್ಟಿದವು. ಈ ರೋಗದ ಪರಿಣಾಮವಾಗಿ ಏನು ಹೇಳಬೇಕು ಮಾಡಬೇಕು ಹಾಗೂ ಏನು ಮಾತನಾಡಬಾರದು-ಮಾಡಬಾರದು, ಯಾರನ್ನು ಆದರಿಸಬೇಕು ಹಾಗೂ ಯಾರನ್ನು ಇಲ್ಲ ಇತ್ಯಾದಿ ಜೀವನದ ಎಷ್ಟು ನಿಯಮಗಳಿವೆಯೋ ಅವುಗಳೆಲ್ಲವನ್ನು ವ್ಯವಹಾರದಲ್ಲಿ ಅಳವಡಿಸಿಕೊಳ್ಳುವುದನ್ನು ಮರೆತರು ಹಾಗೂ ಎಲ್ಲೆಡೆಯೂ ಧರ್ಮವು ಕೊನೆಗೊಂಡಿತು ಎಂದು ತೋರಿತು.

ಸಮಾಜದ ಈ ಸ್ಥಿತಿಗೆ 'ಮತ್ಸ್ಯ-ನ್ಯಾಯ' ಎಂಬ ಹೆಸರು ನೀಡಲಾಯಿತು. ಒಬ್ಬರನ್ನೊಬ್ಬರು ಭಕ್ಷಿಸಲು ಪ್ರತಿಯೊಬ್ಬನು ಸಿದ್ಧನಾಗಿದ್ದನು, ಸಣ್ಣ/ಚಿಕ್ಕವರನ್ನು ಕುರಿತು ಯಾರಿಗೂ ಚಿಂತೆಯಿರಲಿಲ್ಲ. ಆ ಸಮಯದಲ್ಲಿದ್ದ ಋಷಿಗಳು ಈ ಸ್ಥಿತಿಯಿಂದ ವಿಶ್ವ ಹೇಗೆ ನಡೆದೀತು ಎಂದು ಯೋಚಿಸಿದರು. ಎಲ್ಲರೂ ಸೇರಿ ಮನು ಮಹಾರಾಜನ ಬಳಿಗೆ ಹೋದರು. ಅವರನ್ನು ರಾಜನಾಗಲು ಹೇಳಿದರು. ಅವರು ಹೀಗೆ ಹೇಳಿದರು- ನಾನು ರಾಜನಾದರೆ ದಂಡವನ್ನು ಕೈಹಿಡಿದು, ಜನರಿಗೆ ಕಷ್ಟ ಕೊಟ್ಟು ನಿಯಂತ್ರಿಸಬೇಕಾಗುತ್ತದೆ. ಜನರಿಗೆ ದುಃಖವನ್ನುಂಟುಮಾಡುವ ಪಾಪ ನಾನು ಮಾಡಬಯಸುವುದಿಲ್ಲ. ಆಗ ಪ್ರಜಾಪತಿಯು ತಿಳಿಯ ಹೇಳಿದುದೇನೆಂದರೆ ಎಲ್ಲಾ ಕಡೆ ವ್ಯಾಪ್ತವಾಗಿರುವ ಅಧರ್ಮವನ್ನು ದೂರಮಾಡಲು ಯಾವ ದಂಡವನ್ನು ನೀಡಲಾಗುವುದೋ ಅದು ಅಧರ್ಮವಾಗಿರದೇ ಧರ್ಮವಾಗಿರುತ್ತದೆ. ದಂಡದಿಂದಾಗಿ ಪ್ರಜೆಯಲ್ಲಿ ಉಂಟಾಗುವ ಪುಣ್ಯದ ಒಂದು ಭಾಗ ರಾಜನಿಗೆ ಸಲ್ಲುತ್ತದೆ ಎಂಬ ವ್ಯವಸ್ಥೆಯನ್ನು ಅವರು ಮಾಡಿದರು, ಸರಿಯಾದ ವ್ಯವಸ್ಥೆ ಮಾಡಲಿಲ್ಲವಾದಾಗ

ಜನರೆಲ್ಲಾ ಪಾಪ ಮಾಡುತ್ತಾರೆ, ಆಗ ಆ ಅಧರ್ಮದಲ್ಲಿ ರಾಜನಿಗೂ ಪಾಲು ಇರುತ್ತದೆ ಎಂದು ರಾಜನನ್ನು ಸಹ ಬಂಧನಕ್ಕೊಳಪಡಿಸಲಾಯಿತು. ಇದೇ ಮೊದಲ ರಾಜ್ಯವ್ಯವಸ್ಥೆಯಾಯಿತು.

ಹೀಗೆ ಧರ್ಮವನ್ನು ರಕ್ಷಿಸುವ ಸಲುವಾಗಿ ರಾಜದಂಡವನ್ನು ಸ್ವೀಕರಿಸುವ ಪರಂಪರೆಯನ್ನು ಮನುವಿನ ನಂತರ ಹಲವಾರ ರಾಜರು ಅನುಸರಿಸಿದರು. ಈ ಪರಂಪರೆಯನ್ನು ಅನುಸರಿಸಿದವರಲ್ಲಿ ವೇನ ಎಂಬ ರಾಜನಿದ್ದ. ಅವನು ಪಾಪಿಯಾಗಿದ್ದನು. ಆಗ ಋಷಿಗಳು ಆ ವೇನನನ್ನು ಸಿಂಹಾಸನದಿಂದ ಕೆಳಗಿಳಿಸಿ ಅವನನ್ನು ಸಂಹರಿಸಿದರು ಹಾಗೂ ಅವನ ಬಲತೊಡೆಯನ್ನು ಮಥಿಸಿ ಪೃಥು ಎಂಬ ಒಬ್ಬ ದೈವೀ ಪುರುಷನನ್ನು ಉತ್ಪನ್ನ ಮಾಡಿದರು. ಅವನು ರಾಜ್ಯದಂಡ ಗ್ರಹಿಸುವ ಸಮಯ 'ನಾನು ಧರ್ಮದ ಆಧಾರದ ಮೇಲೆ ಪ್ರಜೆಗಳನ್ನು ಪರಿಪಾಲಿಸುವೆನು' ಎಂದು ಪ್ರತಿಜ್ಞೆ ಮಾಡಿದನು. ಅವನ ರಾಜ್ಯದಲ್ಲಿ ಸಂಪೂರ್ಣ ವ್ಯವಸ್ಥೆಯಿತ್ತು, ಈ ಭೂಮಿ ಅಂದಿನಿಂದಲೇ ಪೃಥ್ವಿ ಎಂದು ಕರೆಯಲ್ಪಟ್ಟಿತು.

ಈ ವಿವರಣೆಯಿಂದ ಒಂದು ತಥ್ಯವು ಸ್ಪಷ್ಟವಾಗುತ್ತದೆ. ಅದೇನೆಂದರೆ ಧರ್ಮವನ್ನು ಆಧಾರವನ್ನಾಗಿರಿಸಿ ಲೋಕಪಾಲನೆ ಹಾಗೂ ರಾಜ್ಯದ ವ್ಯವಸ್ಥೆಯ ವಿಧಿಯನ್ನು ಗೊತ್ತುಪಡಿಸಲಾಯಿತು. ಕೇವಲ ಅಧಿಕಾರವನ್ನು ಅನುಭವಿಸಲೆಂದು ರಾಜ್ಯಸ್ಥಾಪನೆ ಮಾಡುವುದು ನಮ್ಮ ಜೀವನದ ಗುರಿಯಲ್ಲ. ಧರ್ಮಕ್ಕಾಗಿ ರಾಜ್ಯದ ಅಗತ್ಯವುಂಟಾಯಿತು, ಆದುದರಿಂದಲೇ ಧರ್ಮದ ಪ್ರೇರಣೆಯಿಂದ, ಧರ್ಮದ ಸ್ಥಾಪನೆಗಾಗಿ ಋಷಿಗಳು, ಮುನಿಗಳು, ತಪಸ್ವಿಗಳು ಹಾಗೂ ಮಹರ್ಷಿಗಳು ಮುಂತಾದವರ ಪ್ರೇರಣೆಯಿಂದಲೇ ಯಾವುದೇ ವ್ಯಕ್ತಿಯು ರಾಜದಂಡವನ್ನು ಸ್ವೀಕರಿಸಲು ಸಿದ್ಧನಾದನು. ನಮ್ಮಲ್ಲಿ ಅನಾಧಿಕಾರದಿಂದ ಆಸನವನ್ನು ಕಸಿದುಕೊಳ್ಳುವ ಇಚ್ಛೆಯಿರುವವರು ಯಾರೂ ಇಲ್ಲ. ನಂದವಂಶದ ವಿರುದ್ಧ ಚಂದ್ರಗುಪ್ತನು ತಲೆಎತ್ತಿದ್ದು ಚಾಣಕ್ಯನ ಪ್ರೇರಣೆಯಿಂದಲೇ. ಶುಂಗವಂಶದ ಸಮಯದಲ್ಲಿಯೂ ಹೀಗೇ ಆಯಿತು. ಛತ್ರಪತಿ ಶಿವಾಜಿಯ ಎಲ್ಲಾ ಪ್ರಯತ್ನಗಳು ಅವರ ಯೋಗ್ಯ ಗುರುಗಳಾದ ರಾಮದಾಸರಂತಹ ಸಂತರ ಪ್ರೇರಣೆಯಿಂದ ಉಂಟಾಯಿತು. ಈ ರೀತಿಯಲ್ಲಿ ರಾಜನ ಅತ್ಯಾಚಾರವನ್ನು ಕಂಡು, ಗುರುಗಳ ಪ್ರೇರಣೆಪಡೆದು ವೀರರು ಮುಂದೆ ಬಂದರು. ವಿಜಯನಗರದ ಸ್ಥಾಪನೆಯೂ ಹೀಗೆಯೇ ಉಂಟಾಯಿತು ಹಾಗೂ ಇಲ್ಲಿ ಜನರು ರಾಜದಂಡವನ್ನು ಸ್ವೀಕರಿಸಿದ್ದು ಅಧಿಕಾರ ಹಾಗೂ ಪ್ರಭುತ್ವ ಪಡೆಯಲು ಅಲ್ಲ ಬದಲಿಗೆ ಧರ್ಮರಕ್ಷಣೆಗಾಗಿ. ಧರ್ಮಸಂರಕ್ಷಣೆ ರಾಜನ ಮೊತ್ತ ಮೊದಲ ಜವಾಬ್ದಾರಿಯೆಂದು ತಿಳಿಯಲಾಗಿದೆ.

ರಾಜನು ಲೋಕ–ಧರ್ಮವನ್ನು ಪಾಲಿಸುವವನಾದಲ್ಲಿ ಲೋಕಧರ್ಮವನ್ನು ಯಾರು ವ್ಯವಸ್ಥೆಗೊಳಿಸಬೇಕು ಎಂದು ವಿಚಾರ ಮಾಡಲಾಯಿತು. ರಾಜನು



ಧರ್ಮವನ್ನು ರಚಿಸುವವನಲ್ಲ. ಧರ್ಮ ಸನಾತನವಾದದ್ದು, ಶಾಶ್ವತವಾದದ್ದು, ಆದಿಕಾಲದಿಂದಲೂ ನಡೆದು ಬಂದಿರುವಂತದ್ದು. ಅದನ್ನು ನಿರ್ಮಿಸಲಾಗುವುದಿಲ್ಲ. ಕೇವಲ ಧರ್ಮದ ನಿಯಮಗಳ ಪಾಲನೆಗಾಗಿ ಯುಗಾನುರೂಪವಾಗಿ ವ್ಯವಸ್ಥೆಗಳನ್ನು ಮಾಡಬಹುದಾಗಿದೆ. ಧರ್ಮವು ಆದಿಕಾಲದಿಂದಲೇ ಮಾನವ ಸಮಾಜಕ್ಕಾಗಿ ಪ್ರಕೃತಯು ನೀಡಿರುವ ಸಹಜ ವಸ್ತು. ನಾವು ಪ್ರಾಕೃತಿಕ ನಿಯಮಗಳನ್ನು ತಿಳಿದಿದ್ದೇವೆ, ಅವುಗಳನ್ನು ಬದಲಾಯಿಸಲಾಗುವುದಿಲ್ಲ. ಜನರು ಭೌತವಿಜ್ಞಾನ, ಪದಾರ್ಥವಿಜ್ಞಾನವನ್ನು ಓದುತ್ತಾರೆ. ಎಲ್ಲಾ ವಸ್ತುಗಳು ಪ್ರಕೃತಿಯ ನಿಯಮಗಳಿಗನುಗುಣವಾಗಿ ಚಲಿಸುತ್ತವೆ. ಚುಂಬಕವು ಕಬ್ಬಿಣವನ್ನು ಆಕರ್ಷಿಸುತ್ತದೆ, ಇದು ಪ್ರಕೃತಿಯ ನಿಯಮವಾಗಿದೆ, ಇದನ್ನು ಬದಲಾಯಿಸಲಾಗುವುದಿಲ್ಲ. ಮೇಲೆ ಎಸೆದ ವಸ್ತುವು ಪೃಥ್ವಿಯ ಮೇಲೆ ಪುನಃ ಬಿದ್ದೇಬೀಳುತ್ತದೆ. ಇದು ಆಕರ್ಷಣಾ ಶಕ್ತಿಯ ನಿಯಮ. ಇದರ ಜ್ಞಾನವನ್ನುವುಂಟು ಮಾಡಬಹುದೇ ಹೊರತು ಆಕರ್ಷಣಾಶಕ್ತಿಯ ನಿಯಮಗಳನ್ನು ನಿರ್ಮಿಸಲಾಗುವುದಿಲ್ಲ. ಇದೇ ಪ್ರಕೃತಿಯ ನಿಯಮಗಳ ಹಾಗೆ ನಮ್ಮದೂ ಒಂದು ಜೀವನ ಪದ್ದತಿಯಿದೆ. ಆ ಪದ್ಧತಿಯ ಶಾಶ್ವತನಿಯಮಗಳಿವೆ. ಜೀವನದ ಎಲ್ಲಾ ಸಂಗತಿಗಳು ಅವುಗಳಿಗೆ ಅನುಗುಣವಾಗಿ ಚಲಿಸುತ್ತವೆ. ನಾವು ಈ ನಿಯಮಗಳ ಜ್ಞಾನವನ್ನು ಪಡೆಯಬಹುದಾಗಿದೆ ಹಾಗು ಇದರಿಂದಾಗಿಯೇ ಧರ್ಮದ ಆಧಾರ 'ಧೃತಿ' ಎನ್ನಲಾಗಿದೆ. 'ಧೃತಿ' ಎಂದರೆ ನಾಲ್ಕು ವೇದ–ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವವೇದ, ಶ್ರುತಿ ಎಂದರೆ ಕೇಳಲ್ಪಟ್ಟದ್ದು ಎಂದರ್ಥ. ಅತೀಂದ್ರಿಯ ದೃಷ್ಟಿಯುಳ್ಳ ಮುನಿಗಳಿಗೆ ಜ್ಞಾನೋದಯವಾಯಿತು – ಆ ಸತ್ಯ ಜ್ಞಾನವನ್ನು ಅರಿತು ಅದನ್ನು ಪ್ರತ್ಯಕ್ಷವಾಗಿ ಹೇಳಲ್ಪಟ್ಟಾಗ ಶ್ರುತಿಗಳಾದವು. ಶ್ರುತಿಯ ರೂಪದಲ್ಲಿ ನಂತರ ಸ್ಮೃತಿಗಳುಂಟಾದವು. ರಾಜನ ಕಾರ್ಯ ಸ್ಮೃತಿಗಳ ನಿರ್ಮಾಣವಲ್ಲದೇ, ಧರ್ಮದ ಸಂರಕ್ಷಣೆ ಹಾಗೂ ಸಂವರ್ಧನೆಯಾಗಿರುತ್ತದೆ. ಅವನ ಮೇಲೆ ಲೋಕಧರ್ಮ ಪಾಲನೆಯ ಜವಾಬ್ದಾರಿಯೂ ಇದೆ. ಯಾವ ವ್ಯವಸ್ಥೆಯನ್ನು ನಿರ್ಮಿಸಲಾಗಿದೆಯೋ ಅವು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆಯೋ ಇಲ್ಲವೋ ಎಂಬ ಜವಾಬ್ದಾರಿಯು ರಾಜನ ಮೇಲಿರುತ್ತದೆ.

ಇಂದು ಕೆಲವು ಕಡೆ 'ಶಾಸಕಾಂಗ' ಹಾಗೂ 'ಕಾರ್ಯಾಂಗ'ಗಳ ಅಧಿಕಾರವನ್ನು ಒಟ್ಟಿಗೆ ಜೊತೆಗೂಡಿಸಲಾಗಿದೆ. ಉದಾಹರಣೆಗೆ ಸಂಸತ್ತು. ಇದನ್ನು ವಿಧಾಯಕಶಕ್ತಿ ಎನ್ನಲಾಗಿದೆ ಹಾಗೂ ಅದರ ಸಂಪಾದನೆಯ ಕಾರ್ಯ ನಿರ್ವಹಿಸುವ ಕಾರ್ಯಕರ್ತರನ್ನು ಸಹ ಅದಕ್ಕೆ ಜವಾಬ್ದಾರರು ಎಂದು ಹೇಳಲಾಗಿದೆ. ಈ ವ್ಯವಸ್ಥೆ ನಮ್ಮ ಪರಂಪರೆಗೆ ವಿರುದ್ಧವಾಗಿದೆ. ನಾವು ರಾಜನಿಗೆ ಸ್ವೀಕೃತ ನಿಯಮಗಳನ್ನು ಪಾಲಿಸಬೇಕು. ಈ ನಿಯಮಗಳನ್ನು ತಯಾರಿಸುವ ವೇಳೆ ಯಾವುದೇ

ಸ್ವಾರ್ಥಕ್ಕೊಳಪಡದೆ ತಯಾರಿಸಬೇಕಾಗುತ್ತದೆ. ಅಂತಹ ವ್ಯಕ್ತಿಗಳಿಂದಲೇ ಈ ನಿಯಮಗಳು ಮಾಡಲ್ಪಟ್ಟಿವೆ ಹಾಗೂ ಮುಂದೆ ಮಾಡಲ್ಪಡಬೇಕಾಗುತ್ತದೆ. ಸಮಸ್ತ ಸಮಾಜದ ಸಮನ್ವಯವನ್ನು ಕುರಿತು ವಿಚಾರ ಮಾಡಿ ನಿಯಮಗಳನ್ನು ತಯಾರಿಸಬಲ್ಲ ವ್ಯಕ್ತಿಯೇ ಆ ನಿಯಮಗಳನ್ನು ತಯಾರಿಸಬೇಕು. ಸ್ಮೃತಿ ಹಾಗೂ ಶಾಸ್ತ್ರಗಳು ಇಂತಹ ಜನರಿಂದ ಮಾಡಲ್ಪಟ್ಟಿವೆ. ಇಂತಹ ಜನರು ಈಗ ಇಲ್ಲ ಎಂದು ಹೇಳಲಾಗುವುದಿಲ್ಲ. ಇಲ್ಲಿಯತನಕ ಎಷ್ಟು ಶಾಸ್ತ್ರಕಾರ ಋಷಿಗಳು ಇದ್ದರೋ ಅವರೇ ನಮ್ಮ ಕೊನೆಯ ದೇವದೂತರಾಗಿದ್ದರು ಎಂದು ನಾವು ತಿಳಿಯಲಾರೆವು. ಇಂತಹ ಜನರು ಮುಂದೆಯು ಭವಿಷ್ಯದಲ್ಲಿಯೂ ಕಂಡುಬರಬಹುದು ಎಂದು ನಾವು ತಿಳಿಯುತ್ತೇವೆ. ಇಂತಹವರು ಕಾನೂನು ನಿರ್ಮಿಸುತ್ತಾರೆ. ಆದರೆ ಮತ್ತು ಕೆಲವು ಜನರು ನಾಲ್ಕು ಮಂದಿಯೊಳಗಿನ ಸ್ವಾರ್ಥವನ್ನು ರೊಚ್ಚಿಗೆಬ್ಬಿಸಿ ಅವರ ಪ್ರತಿನಿಧಿತ್ವದ ಅಧಿಕಾರ ಹೂಡುವವರಾಗಿ ಎಂದು ಕಾನೂನನ್ನು ನಿರ್ಮಿಸುತ್ತಾರೆಯೋ ಆಗ ಕಾನೂನಿಗೆ ಜಗ್ಗಾಟ– ಎಳೆದಾಟವಾಗುತ್ತದೆ ಹಾಗೂ ಈ ಎಳೆದಾಟದಲ್ಲಿ ಹೊಂದಾಣಿಕೆಯಿಲ್ಲದ ಕಾನೂನು ಸಿದ್ಧವಾಗುತ್ತದೆ. ಯಾವ ಕಾನೂನಿಗೆ ಬಹುಮತ ದೊರೆಯುತ್ತದೆಯೋ, ಯಾವ ಸ್ವಾರ್ಥಕ್ಕೆ ನಾಲ್ಕು ಜನ ತಮ್ಮ ಒಪ್ಪಿಗೆ ನೀಡುತ್ತಾರೆಯೋ ಅದೇ ಕಾನೂನಾಗಿಬಿಡುತ್ತದೆ. ಈ ತಪ್ಪು ಇಂದಿಗೂ ನಡೆಯುತ್ತಲೇ ಇದೆ.

### ರಾಜತ್ವ ಮತ್ತು ಧರ್ಮ

ನಮ್ಮಲ್ಲಿ ರಾಜನಿಗೆ ಧರ್ಮದ ನಿಯಮಗಳು ಹಾಗೂ ಅದನ್ನು ಟೀಕೆಮಾಡುವ ಅಧಿಕಾರ ಎಂದಿಗೂ ನೀಡಿಲ್ಲ. ಆಗ ಒಂದು ವಿಚಾರ ಮೂಡುತ್ತದೆ. ಅದೇನೆಂದರೆ ಸಮಾಜ ಜೀವನದ ಸಂಪೂರ್ಣ ಅಧಿಕಾರ 'ಸಾರ್ವಭೌಮತ್ವ' ಯಾರ ಬಳಿಯಿದೆ? ನಮ್ಮಲ್ಲಿ ರಾಜನನ್ನು ವಿಷ್ಣುವಿನ ಅವತಾರವೆಂದು ತಿಳಿಯಲಾಗಿದೆ ಆದರೆ ಅವನು ಸ್ವೇಚ್ಛಾಚಾರಿ, ಸರ್ವಾಧಿಕಾರಸಂಪನ್ನನಾಗಿರುವುದಿಲ್ಲ. ರಾಜನು ವಿಷ್ಣುವಿನ ಅವತಾರವಾದಲ್ಲಿ ಪ್ರಜೆಗಳನ್ನು 'ಜನತಾಜನಾರ್ದನ'ನೆಂದು ತಿಳಿಯಲಾಗಿದೆ. ರಾಜನೇ ಸರ್ವಾಧಿಕಾರಿ, ಅವನು ಯಾವುದೇ ತಪ್ಪು ಮಾಡುವಿದಲ್ಲ, 'ಕಿಂಗ್ ಡಸ್ ನೋ ರಾಂಗ್' ಎನ್ನುವ ಸಂಗತಿಯನ್ನು ನಾವು ಎಂದಿಗೂ ಒಪ್ಪಲಿಲ್ಲ. ನಮ್ಮ ಮಾನ್ಯತೆ ಹಾಗೂ ಪದ್ಧತಿಗಳಿಗನುಗುಣವಾಗಿ ರಾಜ್ಯಾಭಿಷೇಕದ ಸಂದರ್ಭದಲ್ಲಿ ರಾಜನು ಮೂರು ಘೋಷಣೆ ಮಾಡುತ್ತಾನೆ. 'ಅದಂಡ್ಯೋಸ್ಮಿ' – ಆದರೆ ಅದೇ ವೇಳೆ ರಾಜ ಪುರೋಹಿತನು ಮುತ್ತುಗದ ದಂಡದಿಂದ ಅವನ ತಲೆಯನ್ನು ಸ್ಪರ್ಶಿಸುತ್ತಾ 'ಧರ್ಮವೇ ನಿನಗೆ ದಂಡವಾಗಿದೆ'. ಅಂದರೆ ಧರ್ಮಕ್ಕೆ ಸರ್ವಾಧಿಕಾರವಿದೆ. ಧರ್ಮದಂಡ ರಾಜನನ್ನು ಸಹ ಶಾಸಿಸುತ್ತದೆ. ಇಂದು ಸರ್ವಾಧಿಕಾರ ಜನರಿಗಿದೆ ಎಂದು ಹೇಳಲಾಗುತ್ತದೆ. ಆದರೆ ನಮ್ಮಲ್ಲಿ ಜನತೆಗೂ ಸಹ ಈ ಅಧಿಕಾರವನ್ನು



ನೀಡಲಾಗುವುದಿಲ್ಲ. ರಾಜನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಮಾದವನ್ನು ಉಂಟುಮಾಡಿದಲ್ಲಿ ಜನರ ಸರ್ವಾಧಿಕಾರವನ್ನು ಸ್ವೀಕರಿಸಲಾಗುವುದು. ಆಗ ಪ್ರಜೆಗಳಿಗೆ ವಿದ್ರೋಹವನ್ನುಂಟು ಮಾಡುವ ಅಧಿಕಾರವಿರುತ್ತದೆ. ಇಂದು ಅದನ್ನೇ 'ಇನ್‌ಹೆರೆಂಟ್ ರೈಟ್ ಟು ರಿವೋಲ್ಟ್ ವಿದ್ ದ ಪೀಪಲ್' ಎಂದು ಹೇಳಲಾಗುತ್ತದೆ, ನಮ್ಮಲ್ಲಿ ಇಂತಹ ಯಾವುದೇ ಮಾನ್ಯತೆಯಿಲ್ಲ. ನಮ್ಮಲ್ಲಿ ರಾಜನು ಪ್ರತಿಬಾರಿ ಪ್ರಜೆಗಳ ಮುಂದೆ ನಿಂತಿರಬೇಕು, ಪ್ರಜೆಗಳ ಒಂದು ವರ್ಗ ಸತತವಾಗಿ ಅವನನ್ನು ವಿರೋಧಿಸುತ್ತಲಿರಬೇಕು ಹಾಗೂ ಮತ್ತೊಂದು ವರ್ಗ ಸಮರ್ಥಿಸಬೇಕು ಎಂಬ ಪರಿಕಲ್ಪನೆಯಿಲ್ಲ ಹಾಗೂ ಪ್ರಜೆಗಳು ರಾಜನನ್ನು ಅವನ ಪದವಿಯಿಂದ ಸರಿಸಲಾಗುವುದಿಲ್ಲ ಎಂದು ಹೇಳಿಲ್ಲ. ನಮ್ಮಲ್ಲಿ ರಾಜ ಹಾಗೂ ಪ್ರಜೆ ಇಬ್ಬರೂ ಧರ್ಮದ ಹಾದಿಯಲ್ಲಿ ನಡೆಯಬೇಕು. ಸರ್ವಾಧಿಕಾರ ರಾಜನಿಗೂ ಇಲ್ಲ, ಪ್ರಜೆಗೂ ಇಲ್ಲ. ಸರ್ವಾಧಿಕಾರ ಸದಾ ಧರ್ಮಕ್ಕಿರುತ್ತದೆ ಎಂಬುದನ್ನು ಒಪ್ಪಲಾಗಿದೆ.

### ನಾವು ಸಮಾಜವಾದಿಗಳಲ್ಲ, ಸಮನ್ವಯವಾದಿಗಳು

ಆಂತರಿಕ ಶಾಂತಿ ಹಾಗೂ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದು ಹಾಗೂ ಹೊರ ಆಕ್ರಮಣಗಳಿಂದ ರಕ್ಷಿಸುವುದು ಶಾಸನದ ಕಾರ್ಯವೆಂದು ತಿಳಿಯಲಾಗಿದೆ. ಪ್ರಜೆಗಳ ಸುಖ ಹಾಗೂ ಸಮೃದ್ಧಿಗಾಗಿ ಸಮಾಜವನ್ನು ಸುವ್ಯವಸ್ಥಿತಗೊಳಿಸುವ ಹೆಸರಿನಲ್ಲಿ ರಾಜ್ಯ ಜೀವನದ ಸಂಪೂರ್ಣ ಕ್ಷೇತ್ರದ ಮೇಲೆ ಅಧಿಕಾರ ಹೊಂದಿ, ನಿಯಂತ್ರಿಸಿದಲ್ಲಿ ಆ ಸ್ಥಿತಿಯನ್ನು ನಾವು ಕಲ್ಯಾಣಕಾರಿ ಎಂದು ತಿಳಿಯುವುದಿಲ್ಲ. ಇಂದು ಯಾವ ಸಮಾಜವಾದದ ಚರ್ಚೆ ನಾಲ್ಕು ದಿಕ್ಕುಗಳಲ್ಲಿ ನಡೆಯುತ್ತಿದೆಯೋ ಅದರಲ್ಲಿ ಇದೇ ಸ್ಥಿತಿಯನ್ನು ಕಲ್ಯಾಣಕಾರಿ ಎಂದು ತಿಳಿಯಲಾಗಿದೆ. ಉತ್ಪಾದನೆ ಹಾಗೂ ವಿತರಣೆಯ ಎಲ್ಲಾ ಸಾಧನಗಳ ಮೇಲೆ ರಾಜ್ಯವು ತನ್ನ ನಿಯಂತ್ರಣವನ್ನು ಹೊಂದಿರುವುದು ಸಮಾಜವಾದದಲ್ಲಿ ಸ್ವೀಕರಿಸಲಾಗಿದೆ. ಜನತೆ ಶ್ರಮಿಕರಾಗಿ ಕೆಲಸಮಾಡಲು ಬದ್ಧರಾಗುತ್ತಾರೆ. ಯಾರ ಬಳಿಯೂ ಸ್ವತಂತ್ರ ಸ್ವಾಮಿತ್ವ ಇರುವುದಿಲ್ಲ. ಹೀಗೆ ಸಮಾಜವಾದವನ್ನು ತರಲು ವರ್ಗಸಂಘರ್ಷ ಹಾಗೂ ರಕ್ತಕ್ರಾಂತಿಯನ್ನು ಆಹ್ವಾನಿಸಲಾಯಿತು. ಈ ಸಮಾಜವಾದವನ್ನು ಶಾಂತಿಯುತ ರೀತಿಯಲ್ಲೂ ತರಲು ಪ್ರಯತ್ನಿಸಲಾಗುತ್ತದೆ. ವ್ಯಕ್ತಿ ಹಾಗೂ ಸಮಾಜದ ಹಿತಗಳಲ್ಲಿ ಸಂಘರ್ಷವಾಗುತ್ತದೆ ಎಂದು ತಿಳಿದು ವ್ಯಕ್ತಿಸ್ವಾತಂತ್ರ್ಯವನ್ನು ಸೀಮಿತವನ್ನಾಗಿಸುವ ಈ ಪದ್ಧತಿಯಲ್ಲಿ ಮನುಷ್ಯನು ಕೇವಲ ಯಂತ್ರದ ಒಂದು ಭಾಗವಾಗಿಬಿಡುತ್ತಾನೆ. ಹೀಗೆ ಸಮಾಜವಾದದಲ್ಲಿ ವ್ಯಕ್ತಿ ಹಾಗೂ ಸಮಾಜದ ಈ ಸಂಬಂಧ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಗಳೊಂದಿಗೆ ಹೊಂದಾಣಿಕೆಯನ್ನು ಸ್ಥಾಪಿಸುವುದಿಲ್ಲ. ನಾವು ಇಂತಹ ಸಮಾಜವಾದಿಗಳಲ್ಲ ಹಾಗೂ ಪಶ್ಚಿಮದ ವಿಚಾರಧಾರೆಗಳಿಗನುಗುಣವಾಗಿ

ವ್ಯಕ್ತಿವಾದಿಗಳೂ ಅಲ್ಲ. ನಮ್ಮ ಉಪನಿಷತ್ತುಗಳಲ್ಲಿ ಯಾರು ವ್ಯಕ್ತಿಯನ್ನು ಪೂಜಿಸುತ್ತಾರೆಯೋ ಅವರು ಅಂಧಕಾರದಲ್ಲಿ ಬೀಳುತ್ತಾರೆ ಎಂದು ಹೇಳಲಾಗಿದೆ. ಭಾರತೀಯ ಪದ್ಧತಿಗುಣವಾಗಿ ಎರಡರಲ್ಲಿ ಸಮನ್ವಯದ ಅಗತ್ಯವಿದೆ. ವ್ಯಕ್ತಿವಾದವನ್ನು ಪೂಜಿಸಿ ಮೃತ್ಯುವನ್ನು ಗೆಲ್ಲಬೇಕು ಹಾಗೂ ಸಮಷ್ಟಿಯನ್ನು ಆರಾಧಿಸಿ ಅಮರತ್ವವನ್ನು ಪಡೆಯಬೇಕು. ವ್ಯಷ್ಟಿಯನ್ನು ಸಮಷ್ಟಿಯಲ್ಲಿ ಸೇರಿಸಲು ನಾವು ಪ್ರಯತ್ನಶೀಲರಾಗಿದ್ದೇವೆ. ವ್ಯಷ್ಟಿ ನಶಿಸುವಂತಹುದಾಗಿದೆಯಾದರೆ ಸಮಷ್ಟಿ ಅಮರವಾಗಿರುತ್ತದೆ. ದೊಡ್ಡ–ದೊಡ್ಡ ಮಹಾನ್ ವ್ಯಕ್ತಿಗಳಿದ್ದರೂ ಸಹ ವ್ಯಷ್ಟಿಯಾಗಿ ಅವರು ಅಮರತ್ವವನ್ನು ಹೊಂದಲಿಲ್ಲ. ರಾಜ ಭೋಜನ ಬಾಲ್ಯದ ಒಂದು ಕಥೆ ಈ ಸಂದರ್ಭಕ್ಕೆ ಅನುಗುಣವಾಗಿದೆ. ಮುಂಜನ ಆಜ್ಞೆಯಂತೆ ಚಂಡಾಲರು ಭೋಜನನ್ನು ಸಾಯಿಸಲೆಂದು ಕಾಡಿಗೆ ಕರೆದೊಯ್ದರು ಹಾಗೂ ಅವನ ತಲೆಯನ್ನು ಕಡಿಯಲೆಂದು ಖಡ್ಗವನ್ನು ಹಿಡಿದು ಸಿದ್ಧರಾದರು. ಆಗ ಭೋಜನು ಅವರನ್ನು ಕುರಿತು ಹೀಗೆ ಪ್ರಾರ್ಥಿಸಿದನು. ಅದರಂತೆ ಮರಣದ ನಂತರ ಅವನ ಒಂದು ಸಂದೇಶವನ್ನು ಮುಂಜನಿಗೆ ತಲುಪಿಸಬೇಕು. ಚಂಡಾಲರು ಈ ಮಾತನ್ನು ಸ್ವೀಕರಿಸಿದರು. ಭೋಜನು ತನ್ನ ಸಂದೇಶದಲ್ಲಿ ಹೀಗೆ ಹೇಳಿದ್ದನು 'ದೊಡ್ಡದೊಡ್ಡ ಪೃಥ್ವಿಪತಿ, ಮಹಿಪತಿ, ಮಾಂಧಾತರು ಬಂದರು ಹಾಗೂ ಹೊರಟುಹೋದರು. ರಾಮ, ಕೃಷ್ಣ, ಧರ್ಮರಾಜ, ಯುಧಿಷ್ಠಿರ ಹೀಗೆ ಇವರೆಲ್ಲಾ ಬಂದರು, ಎಲ್ಲರೂ ರಾಜ್ಯವನ್ನು ಅನುಭವಿಸಿದರು. ಆದರೆ ಸರದಿಯಲ್ಲಿ ಇಲ್ಲಿಂದ ಹೊರಟು ಹೋದರು ಆಗಲೂ ಸಹ ಪೃಥ್ವಿ ಎಲ್ಲಿ ಇತ್ತೋ ಅಲ್ಲಿಯೇ ಇತ್ತು. ಈ ಬಾರಿ ನೀನು ಈ ಪೃಥ್ವಿಯನ್ನು ನಿನ್ನೊಡನೆ ಕೊಂಡೊಯ್ಯುವೆ ಎಂದೆನಿಸುತ್ತದೆ.' ಇದರ ಆಶಯವೇನೆಂದರೆ ವ್ಯಕ್ತಿ ಹೋಗುತ್ತಾನೆ ಸಮಾಜ ಸದಾ ಇದ್ದೇ ಇರುತ್ತದೆ. ವ್ಯಕ್ತಿ ಸ್ವತಂತ್ರನಾಗಿರಬೇಕಾದರೆ ಸಮಾಜ ಸ್ವತಂತ್ರವಾಗಿರಬೇಕು. ವ್ಯಕ್ತಿ ಅಮರನಾಗಬೇಕಾದರೆ ಸಮಾಜವೂ ಅಮರವಾಗಬೇಕು. ಸಮಾಜಕ್ಕಾಗಿ ವ್ಯಕ್ತಿಯ ಸಮರ್ಪಣೆಯಾಗಲೇಬೇಕು. ಜೊತೆಗೆ ವ್ಯಕ್ತಿಯನ್ನು ಸಮರ್ಥನನ್ನಾಗಿಸಲು ಹಾಗೂ ವಿಕಾಸಹೊಂದಲು ಎಲ್ಲಾ ರೀತಿಯ ಸ್ವಾತಂತ್ರ್ಯ ಕೊಡುವ ಕಾರ್ಯ ಸಮಾಜದ್ದು ಆಗಿದೆ. ಈ ವ್ಯಷ್ಟಿ ಹಾಗೂ ಸಮಷ್ಟಿಯ ಸಂಬಂಧವನ್ನು ನಾವು ಸ್ವೀಕರಿಸಿದ್ದೇವೆ. ಹೀಗೆ ನಾವು ಸಮಾವಾದಿಗಳಾಗಿರದೆ ಸಮನ್ವಯವಾದಿಗಳಾಗಿರುತ್ತೇವೆ.

**ಸಮಾಜವೆಂದರೆ ರಾಜ್ಯವಲ್ಲ**

ಜೊತೆಗೆ ಇಂದಿನ ಪ್ರಚಲಿತ ಸಮಾಜವಾದದಲ್ಲಿ 'ಸಮಾಜ' ಶಬ್ದದ ಕಲ್ಪನೆಯಲ್ಲಿ ಯಾವ ರೀತಿ 'ರಾಜ್ಯ'ವನ್ನು ಸಮಷ್ಟಿಯನ್ನು ಪ್ರತಿನಿಧಿಸುವ ಏಕೈಕ ಹಾಗೂ ಸರ್ವಶ್ರೇಷ್ಠ ಶಕ್ತಿ ಎಂದು ಸ್ವೀಕರಿಸಲಾಗಿದೆ, ನಮ್ಮದು ಈ ರೀತಿಯ ವೈಚಾರಿಕ ಮಾನ್ಯತೆಯಲ್ಲ.



ನಮ್ಮ 'ಸಮಾಜ' ಶಬ್ದದ ಪರಿಕಲ್ಪನೆಯಲ್ಲಿ ಕೇವಲ 'ರಾಜ್ಯ'ವು ಸೇರಿಕೊಂಡಿಲ್ಲ. ವ್ಯಕ್ತಿಯಿಂದ ಹಿಡಿದು ರಾಜ್ಯದವರೆಗೆ ನಾವು ಅನೇಕ ಆಧಾರಕಲ್ಪನೆಗಳನ್ನು ಒಪ್ಪಿದ್ದೇವೆ ಹಾಗೂ ಇವೆಲ್ಲವೂ ಸಮಷ್ಟಿಯನ್ನು ಪ್ರತಿನಿಧಿಸುತ್ತವೆ. ಉದಾಹರಣೆಗೆ ಕುಟುಂಬ ಒಂದು ಮಹತ್ವಪೂರ್ಣ ಮೂಲ ಕಲ್ಪನೆಯಾಗಿದ್ದು ಅದು ಸಮಷ್ಟಿಯನ್ನು ಸೂಚಿಸುತ್ತದೆ ಹಾಗೂ ವ್ಯಷ್ಟಿ ಹಾಗೂ ಸಮಷ್ಟಿಯ ಸಂಬಂಧಗಳ ಸಂಪೂರ್ಣ ಸಂಬಂಧವು ಅದರಲ್ಲಿ ಅಡಗಿದೆ. ಇದೇ ರೀತಿಯಾಗಿ ನಮ್ಮಲ್ಲಿ ಗ್ರಾಮಪಂಚಾಯಿತಿಗಳ ವ್ಯವಸ್ಥೆ ಅತಿ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಇದು ಸಹ ಸಮಷ್ಟಿಯ ಆಧಾರವಾಗಿದೆ. ನಮ್ಮ ಪ್ರಾಚೀನ ಭಾರತದ ವ್ಯವಸ್ಥೆಯಲ್ಲಿ ಈ ಪಂಚಾಯತಿಗಳು ಇಂದಿನ ಹಾಗೆ ರಾಜಾಜ್ಞೆ ಮೇರೆಗೆ ಸಾಗುವ ಪಂಚಾಯತಿಗಳು ಅಲ್ಲ ಎಂಬುದು ಗಮನಿಸಿಬೇಕಾದ ಸಂಗತಿಯಾಗಿದೆ. ಇಂದು ಮಂತ್ರಿಗಳು ಗ್ರಾಮಪಂಚಾಯಿತಿಯನ್ನು ಸಿದ್ಧಗೊಳಿಸುತ್ತಾರೆ. ವಿಧಾಯಕ ಇದರ ಕರ್ತವ್ಯ ಹಾಗೂ ಅಧಿಕಾರದ ಎಲ್ಲೆಯನ್ನು ನಿಗದಿಪಡಿಸುತ್ತಾರೆ. ಇನ್ಸ್‌ಪೆಕ್ಟರ್ ನಿರೀಕ್ಷಣೆಗಾಗಿ ನಿಯುಕ್ತರಾಗುತ್ತಾರೆ ಹಾಗೂ ಪಂಚಪರಮೇಶ್ವರರನ್ನು ಪದವಿಯಿಂದ ತೆಗೆಯುವ ಅಥವಾ ನೇಮಕಾತಿಮಾಡುವ ವ್ಯವಸ್ಥೆ ಮಾಡಲಾಗುತ್ತದೆ. ಚುನಾವಣೆಯಲ್ಲಿ ಅದರ ಸ್ವರೂಪವನ್ನು ಬಹಳ ವಿಕೃತಗೊಳಿಸಲಾಗುತ್ತದೆ. ಈ ರೀತಿಯಾದಂತಹ ಗ್ರಾಮಪಂಚಾಯತಿಗಳ ಸ್ವರೂಪ ನಮ್ಮಲ್ಲಿ ಆಗ ಇರಲಿಲ್ಲ. ಆ ಸಮಯದಲ್ಲಿ ಗ್ರಾಮ ಪಂಚಾಯಿತಿಗಳು ಸ್ವತಂತ್ರ ಹಾಗೂ ಸ್ವಯಂಭೂ ಮೂಲಮಾನಗಳಾಗಿದ್ದವು ಹಾಗೂ ಆದಿಕಾಲದಿಂದಲೂ ನಡೆದುಬರುತ್ತಿವೆ. ರಾಜನು ಇವುಗಳನ್ನು ಆದೇಶಿಸುವಂತೆ ಇಲ್ಲ. ರಾಜನ ಬಳಿ ಒಂದು ಸಮಿತಿಯಿರುತ್ತಿತ್ತು. ಅದರಲ್ಲಿ ಗ್ರಾಮಪಂಚಾಯತಿಯ ಪ್ರತಿನಿಧಿಗಳು ಕುಳಿತುಕೊಳ್ಳುತ್ತಿದ್ದರು. ಹೀಗೆ ಗ್ರಾಮಪಂಚಾಯತಿಯ ಮಾತನ್ನು ರಾಜ ಕೇಳಬೇಕಾಗುತ್ತಿತ್ತು. ರಾಜನ ಈ ಸಮಿತಿ, ಕಾನೂನುಗಳನ್ನು ನಿಗದಿಪಡಿಸದೆ ಕೇವಲ ಶಾಸನ ನಡೆಸುವ ಕಾರ್ಯಪಾಲಿಕೆಯ ಶಕ್ತಿಯಾಗಿತ್ತು. ಈ ಪ್ರತಿನಿಧಿಗಳು ರಾಜನ ಅಭಿಷೇಕದಲ್ಲಿ ಭಾಗವಹಿಸುತ್ತಿದ್ದರು, ವ್ಯವಸ್ಥೆಗಳಿಗೆ ತಮ್ಮ ಒಪ್ಪಿಗೆ ನೀಡುತ್ತಿದ್ದರು. ಇದರಿಂದ ಇವು ರಾಜನ ಕೃಪೆಯನ್ನು ಅವಲಂಬಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಇದಕ್ಕೆ ಬದಲಾಗಿ ರಾಜನೇ ಇವುಗಳನ್ನು ಆಧರಿಸಿರುತ್ತಾನೆ.

ರಾಜ್ಯಾಭಿಷೇಕದ ವೇಳೆ ವೈದಿಕ ಋಷಿಗಳಿಂದ ರಾಜನ ಈ ಸಂಬೋಧನೆ ಭಾರತೀಯ ಮಾನ್ಯತೆಯನ್ನು ಸ್ಪಷ್ಟಪಡಿಸಲು ಸೂಕ್ತವಾಗಿದೆ:

**ತ್ವಾಂ ವಿಶೋ ವೃಣತಾಂ ರಾಜ್ಯಾಯ ತ್ವಾಮಿಮಾಃ ಪ್ರದಿಶಃ ಪಂಚದೇವಾಃ ।**
**ಸರ್ವಾಸ್ವತ್ವಾ ರಾಜನ್ ಪ್ರದಿಶೋ ಹ್ವಯಂತು ಉಪಸದ್ಯೋ ನಮಸ್ಯೋ ಭವೇಹ ॥**

**(ಅಥರ್ವ ೩–೪–೨.೧)**

ಅರ್ಥ: "ಹೇ ರಾಜನೆ! ಎಲ್ಲಾ ಪ್ರಜೆಗಳು ತಮ್ಮ ರಾಜ್ಯ ಶಾಸನ ಕಾರ್ಯಗಳಿಗಾಗಿ

ನಿನ್ನನ್ನು ಸ್ವೀಕರಿಸಲಿ. ಐದು ರೀತಿಯ ಪ್ರಜೆಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹಾಗೂ ನಿಷಾದ – ನಿನ್ನನ್ನೇ ಬಯಸಲಿ. ಪ್ರಜೆಗಳೆಲ್ಲಾ ನಿನ್ನನ್ನೇ ಕರೆಯಲಿ ಹಾಗೂ ನೀನು ಎಲ್ಲರ ಆದರಕ್ಕೆ ಪಾತ್ರನಾಗು."

ಭಾರತೀಯ ವಿದ್ವಾಂಸರ ಅಭಿಪ್ರಾಯ ಏನಿತ್ತೆಂದರೆ 'ವಿಶಿ ರಾಜಾ ಪ್ರತಿಷ್ಠಿತಃ' ಪ್ರಜೆಗಳನ್ನವಲಂಬಿಸಿ ರಾಜನಿರುತ್ತಾನೆ ಹಾಗೂ ರಾಜನು ಒಪ್ಪುವುದೇನೆಂದರೆ 'ವಿಶೋ ಮೇ ಅಂಗಾನಿ ಸರ್ವತಃ' ಪ್ರಜೆಗಳೇ ನನ್ನ ಶರೀರದ ಅಂಗಗಳು.

ಋಗ್ವೇದದಲ್ಲಿ ವರ್ಣಿಸಲಾದ ರಾಜ್ಯಶಾಸನದ ಉದ್ದೇಶ "ವಿಶ್ವೇ ಜನಾಸಃ ಶರ್ಮನ್", ಸಮಸ್ತ ಜನರಿಗೂ ಸುಖ ದೊರೆಯಲಿ, ಇದರ ಪ್ರಕಾರ ಪರಸ್ಪರ ಐಕ್ಯತೆಯೊಂದಿಗೆ ಯಾವ ಸುವ್ಯವಸ್ಥೆಯುಂಟಾಗುತ್ತಿತ್ತೋ ಅದರ ಆಧಾರದ ಮೇರೆಗೆ ಛಾಂದೋಗ್ಯ ಉಪನಿಷತ್ತಿನ ಈ ಮಂತ್ರವು ಬೆಳಕಿಗೆ ಬಂತು. ಇದರಲ್ಲಿ ಹೀಗೆ ಹೇಳಲಾಗಿದೆ–

**ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪಃ ।**
**ನಾನಾಹಿತಾಗ್ನಿರ್ನಾವಿದ್ವಾನ್ ನ ಸ್ವೈರೋ ಸ್ವೈರಿಣೀ ಕುತಃ ॥**

ಅಂದರೆ ನನ್ನ ರಾಜ್ಯದಲ್ಲಿ ಕಳ್ಳ, ಜಿಪುಣ, ಮದ್ಯವ್ಯಸನಿ, ಅಯಾಜಿಕ, ಅಜ್ಞಾನಿ, ವ್ಯಭಿಚಾರಿಗಳು ಇಲ್ಲ. ಹೀಗಿರುವಾಗ ವ್ಯಭಿಚಾರಿಣಿ ಎಲ್ಲಿ ದೊರೆಯುವಳು?

ಈ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ನೇಮಕಾತಿ ಮಾಡಲಾದ ಗ್ರಾಮದ ಗ್ರಾಮಸಭೆ, ರಾಷ್ಟ್ರದ ರಾಜ್ಯಸಮಿತಿ, ರಾಷ್ಟ್ರ ನಿಯಾಮಕವಾದ ಮಂತ್ರಿಮಂಡಲ ಮುಂತಾದ ಹಲವಾರು ಶ್ರೇಣಿಗಳಿದ್ದವು. ಇವು ತಮ್ಮ ಕಾರ್ಯಗಳನ್ನಾಧರಿಸಿ ಆಚರಣೆ ಧರ್ಮ (ಕೋಡ್ ಆಫ್ ಕಂಡಕ್ಟ್)ವನ್ನು ನಿರ್ಧರಿಸುತ್ತಿತ್ತು. ಇದಕ್ಕೆ ವಿರುದ್ಧವಾಗಿ ಕಾರ್ಯವೆಸಗುವವರನ್ನು ಈ ಶ್ರೇಣಿಯು ಬಹಿಷ್ಕರಿಸಬಹುದಾಗಿತ್ತು. ಸಾಮೂಹಿಕ ಹಿತಕ್ಕೆ ವಿರುದ್ಧವಾಗಿ ಆಚರಣೆ ಮಾಡುವವರನ್ನು ಬಹಿಷ್ಕರಿಸಲಾಗುತ್ತಿತ್ತು. ಈ ಭಯವು ಜನರನ್ನು ಆಚರಣೆ–ಧರ್ಮದ ಸರಿಯಾದ ಪಾಲನೆಗಾಗಿ ಪ್ರೇರಣೆ ನೀಡುತ್ತಿತ್ತು. ಹಾಗಿದ್ದರೂ ಕಾಲಾಂತರದಲ್ಲಿ ಇದರಲ್ಲಿಯೂ ಹಲವಾರು ರೀತಿಯ ವಿಕಾರ ಹಾಗೂ ಸಂಕುಚಿತತೆಯುಂಟಾಗಿತ್ತು. ರೂಢಿವಾದವು ಪ್ರವೇಶಿಸಿತು. ಮೂಲತಃ ಇದು ಸರ್ವಸ್ಪರ್ಶಿ ಪದ್ಧತಿಯಾಗಿತ್ತು, ಇದರ ದಂಡವು ಸಹ ಜೀವನ ಮೇಲೆ ಸಮಗ್ರವಾಗಿ ಪ್ರಭಾವ ಬೀರುತ್ತಿತ್ತು. ಏಕೆಂದರೆ ಅದರಲ್ಲಿ ಇಂದಿನ ಹಾಗೆ 'ಫಂಕ್ಷನಲ್ ರಿಪ್ರೆಜೆಂಟೇಟಿವ್' ಇರಲಿಲ್ಲ. ಪ್ರಾಚೀನ ವರ್ಣನೆಯಲ್ಲಿ ಇಲ್ಲಿ ಎಲ್ಲಾ ಜಾತಿಗಳು ಹಾಗೂ ವರ್ಣಗಳನ್ನು ಪ್ರತಿನಿಧಿಸುವವರು ಕುಳಿತುಕೊಳ್ಳುತ್ತಿದ್ದರು. ಅವರ ಸಂಖ್ಯೆಯೂ ಖಚಿತವಾಗಿರುತಿತ್ತು. ಪ್ರತಿನಿಧಿಗಳಲ್ಲಿ ಸರ್ವಾಧಿಕ (ಬಹಳ) ಸಂಖ್ಯೆಯಲ್ಲಿ ವೈಶ್ಯ ಹಾಗೂ ಶೂದ್ರರಿರುತ್ತಿದ್ದರು ಹಾಗೂ ಇವರು ಕ್ರಮಶಃ ೨೧ ರಿಂದ ೪೦ರಲ್ಲಿ ಇರುತ್ತಿದ್ದರು. ಉಳಿದವರಲ್ಲಿ ಬ್ರಾಹ್ಮಣ ಅಥವಾ ಕ್ಷತ್ರಿಯ ನಾಲ್ಕು ಅಥವಾ ಆರು



ಮಂದಿಯಿರುತ್ತಿದ್ದರು. ಇದಕ್ಕನುಗುಣವಾಗಿ ಪ್ರತಿನಿಧಿಗಳೆಲ್ಲಾ ಸೇರಿ ಮಂತ್ರಿಮಂಡಲವನ್ನು ಸಿದ್ಧಪಡಿಸುತ್ತಿದ್ದರು ಇವರ ಸಹಾಯದಿಂದ ರಾಜನು ರಾಜ್ಯ ಕಾರ್ಯವನ್ನು ನೆರವೇರಿಸುತ್ತಿದ್ದನು. ರಾಜನು ಸಮಿತಿ ಹಾಗೂ ಮಂತ್ರಿಮಂಡಲವಿಲ್ಲದೆ ಇಷ್ಟಬಂದ ಕಾರ್ಯ ಮಾಡಲು ಸ್ವತಂತ್ರನಾಗಿರಲಿಲ್ಲ.

ಈ ಕುರಿತು ಒಂದು ಸುಂದರ ಕಥೆಯಿದೆ. ಸಾಮ್ರಾಟ ಅಶೋಕನು ಒಮ್ಮೆ ತನ್ನ ಸಂಪೂರ್ಣ ರಾಜ್ಯದ ಸಂಪತ್ತನ್ನು ಬೌದ್ಧವಿಹಾರಗಳಿಗೆ ಉಡುಗೊರೆಯಾಗಿ ಕೊಡಬೇಕೆಂದು ನಿರ್ಧರಿಸಿದನೆಂದು ಹೇಳಲಾಗುತ್ತದೆ. ಮಂತ್ರಿಮಂಡಲದ ಮುಂದೆ ಈ ಪ್ರಸ್ತಾವವನ್ನು ಇಟ್ಟಾಗ ಅವರು ಇದನ್ನು ಒಪ್ಪಲಿಲ್ಲ. ಕೊನೆಗೆ ಅಶೋಕನು ಅಸಹಾಯಕನಾಗಿ ಬೌದ್ಧ–ವಿಹಾರವಕ್ಕೆ ನೆಲ್ಲಿಕಾಯಿಯನ್ನು ಉಡುಗೊರೆಯಾಗಿ ನೀಡಿ ಹೀಗೆ ಹೇಳಿದನು, "ಇದಿಷ್ಟು ಮಾತ್ರ ನನ್ನದು, ಉಳಿದದ್ದೆಲ್ಲಾ ರಾಜ್ಯದ ಸಂಪತ್ತಾಗಿದೆ. ಅದನ್ನು ಕೊಡಲು ನಾನು ಯಾರು ।" ರಾಜ್ಯಗಳು ಈ ಆಧಾರದ ಮೇರೆಗೆ ಸಾಗುತ್ತಿದ್ದವು. ಮೂಲಮಾನಗಳ ರೂಪದಲ್ಲಿ ನಾವು ಅದರ ಕ್ಷೇತ್ರವನ್ನು ಹಂಚಿದೆವು ಹಾಗೂ ಅವುಗಳ ಸ್ವತಂತ್ರ ವ್ಯವಸ್ಥೆಯಲ್ಲಿ ಎಂದಿಗೂ ಮಧ್ಯೆ ಪ್ರವೇಶಿಸಲಿಲ್ಲ.

ಇದೇ ರೀತಿ ಶೈಕ್ಷಣಿಕ ಕೇಂದ್ರಗಳಿಗೆ ಕುಲಪತಿಗಳು ಪ್ರಮುಖರಾಗಿದ್ದರು. ಅವರೇ ಎಲ್ಲರ ಊಟ–ತಿಂಡಿ, ಓದು–ಬರಹ ಮುಂತಾದವುಗಳ ವ್ಯವಸ್ಥೆ ಮಾಡುತ್ತಿದ್ದರು. ರಾಜನು ಈ ವ್ಯವಸ್ಥೆಗಾಗಿ ಕೇವಲ ಧನಸಹಾಯ ಮಾಡುತ್ತಿದ್ದನು. ಉಳಿದ ಪ್ರಜೆಗಳೂ ಸಹ ಅವರಿಗೆ ಧನಸಂಪತ್ತನ್ನು ದಾನವನ್ನಾಗಿ ನೀಡುತ್ತಿದ್ದರು. ವಿದ್ಯಾರ್ಥಿಗಳು ಭಿಕ್ಷಾಟನೆಗಾಗಿ ಹಳ್ಳಿಗಳಿಗೆ ಹೋಗುತ್ತಿದ್ದರು ಹಾಗೂ ಎಲ್ಲಾ ಗೃಹಸ್ಥರು ಭಿಕ್ಷೆ ನೀಡುತ್ತಿದ್ದರು. ವಿದ್ಯಾರ್ಥಿಗಳು ಬರಿಗೈಯಲ್ಲಿ ಹೋಗಬಾರದೆಂದು ಎಲ್ಲರು ಗಮನಹರಿಸುತ್ತಿದ್ದರು. ಹೀಗೆ ಕುಲಪತಿಯು ಸಮಾಜದಿಂದ, ರಾಜ್ಯದಿಂದ ಸಂಗ್ರಹಿಸಿ ವಿದ್ಯಾಲಯದ ಕಾರ್ಯವನ್ನು ನೆರವೇರಿಸುತ್ತಿದ್ದರು. ರಾಜನು ಶಿಕ್ಷಣ ಪಡೆಯಲು ಹೋದರೆ ಅವನು ಸಹ ಅದನ್ನೇ ಮಾಡಬೇಕಾಗಿತ್ತು. ರಾಜನು ಇದರಲ್ಲಿ ಕೇವಲ 'ಸೂಪರವಿಷನ್' ಮಾಡುತ್ತಿದ್ದನು. ಧರ್ಮದ ನಿಯಂತ್ರಣದ ದೃಷ್ಟಿಯಿಂದ ಅವನ ಕೆಲಸ ಕೇವಲ ರಾಜದಂಡದ ಪಾಲನೆಯಾಗಿತ್ತು. ಉಳಿದ ಕ್ಷೇತ್ರಗಳಲ್ಲಿ ಅವುಗಳ ತಮ್ಮದೇ ಆದ ಸ್ವತಂತ್ರ ವ್ಯವಸ್ಥೆಯಿರುತ್ತಿತ್ತು. ಹೀಗೆಯೇ ಕುಟುಂಬವೂ ಒಂದು ಸ್ವತಂತ್ರ ಘಟಕವಾಗಿತ್ತು. ರಾಜನು ಅದರಲ್ಲಿ ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ಕುಟುಂಬದಲ್ಲಿ ಅವ್ಯವಸ್ಥೆಯಿದ್ದಲ್ಲಿ ಮಾತ್ರ ರಾಜದಂಡದ ಪ್ರಯೋಗವನ್ನು ಸ್ವೀಕರಿಸಲಾಗುತ್ತಿತ್ತು. ಅಂತಹ ಸ್ಥಿತಿಯಲ್ಲಿ ಸದಾ ರಾಜದಂಡವನ್ನು ಪ್ರಯೋಗಿಸಲಾಗುತ್ತಿತ್ತು.

### ವಿಕೇಂದ್ರೀಕರಣವೆಂದರೆ ವಿಘಟನೆಯಲ್ಲ

ಇಂತಹ ನಮ್ಮ ಸಮಾಜದಲ್ಲಿ ಯಾವುದೇ ಒಂದು ಸಂಚಾಲನಾ–ಕೇಂದ್ರವಿರಲಿಲ್ಲ

ಎಂದು ಹೇಳಬಹುದು. ಆದರೆ ಇಂದಿನ ಬಹು ಪ್ರಚಲಿತ ಅರ್ಥದಲ್ಲಿ ವಿಕೇಂದ್ರಿತ–ವ್ಯವಸ್ಥೆಯೆಂದು ಏನನ್ನು ಹೇಳಲಾಗುವುದೋ ಅದಕ್ಕಿಂತ ಭಿನ್ನವಾಗಿತ್ತು. ಇಂದು ವಿಕೇಂದ್ರಿತ ಎಂದರೆ ಕೇಂದ್ರದಿಂದ ಕಳಚಿಕೊಂಡ, ದೂರಸರಿದ ಎಂಬ ಅರ್ಥದಲ್ಲಿ ಗ್ರಹಿಸಲಾಗುತ್ತದೆ. ಈ ಅರ್ಥದಲ್ಲಿ ಒಂದು ಕೇಂದ್ರ ನಷ್ಟವಾಗಿ ಹೋದಲ್ಲಿ, ಅದರ ಶಕ್ತಿಯನ್ನು ಕ್ಷೀಣಗೊಳಿಸಿದಲ್ಲಿ ಯಾವುದೇ ಕೇಂದ್ರ ಉಳಿಯುವುದಿಲ್ಲ. ಆದುದರಿಂದ ಘರ್ಷಣೆ, ಸಂಘರ್ಷ, ವಿಘಟನೆಯನ್ನು ಅನಿವಾರ್ಯವೆಂದು ತಿಳಿಯಲಾಗಿದೆ. ನಮ್ಮಲ್ಲಿ ವಿಕೇಂದ್ರಿತ ವ್ಯವಸ್ಥೆಯ ಅರ್ಥವನ್ನು ಹೀಗೆ ಹೇಳಲಾಯಿತು. ಅದೇನೆಂದರೆ ಯಾವುದೇ ಕೇಂದ್ರದ ಶಕ್ತಿ ಕ್ಷೀಣವಾದರು ಸಹ ಅನ್ಯ ವ್ಯವಸ್ಥೆಗಳು ಸಮಷ್ಟಿಯ ಹಿತಸಾಧನೆಯಲ್ಲಿ ತಮ್ಮ–ತಮ್ಮ ನಿಗದಿತ ಜವಾಬ್ದಾರಿಯನ್ನು ಯಾವುದೇ ತೊಂದರೆಯಿಲ್ಲದೆ ನೆರವೇರಿಸಲಿ ಎಂದರ್ಥ. ವಾಸ್ತವಕ್ಕೆ ನಮ್ಮ ಸಮಾಜ–ಜೀವನದಲ್ಲಿ ಮುಂದಾಳತ್ವದ ಅನೇಕ ಕೇಂದ್ರಗಳಿವೆ. ಕುಟುಂಬದ ಸದಸ್ಯ, ಪಂಚಾಯತಿಯ ಅಂಗ, ವ್ಯವಸಾಯ–ಶ್ರೇಣಿಯಲ್ಲಿ ಸದಸ್ಯನಾದ ಓರ್ವ ವ್ಯಕ್ತಿ ರಾಜ್ಯದ ಅಂಗವೂ ಆಗಿರುತ್ತಾನೆ. ಈ ಎಲ್ಲಾ ಕೇಂದ್ರಗಳೊಡನೆ ಜೀವನದಲ್ಲಿ ಸಮನ್ವಯ ಸ್ಥಾಪಿಸಿ ಕೆಲಸ ಮುಂದುವರಿಸಬೇಕು. ಇಂತಹ ಸಮಾಜ–ವ್ಯವಸ್ಥೆ ಹಾಗೂ ಇದಕ್ಕೆ ಅನುಕೂಲಕರವಾದ ರಾಜ್ಯವ್ಯವಸ್ಥೆಯನ್ನು ಭಾರತದಲ್ಲಿ ವಿಕಸಿತಗೊಳಿಸಲಾಯಿತು. ಇದರ ಜೊತೆಗೆ ಇದ್ದಂತಹ ಮತ್ತೊಂದು ಸಂಗತಿಯೇನೆಂದರೆ ಯಾವುದೇ ರಾಜ್ಯವಾಗಿರಲಿ ಅದಕ್ಕೆ ಧರ್ಮದ ಆದೇಶ ಒಂದೇ ಆಗಿರುತ್ತಿತ್ತು. ಅದೇನೆಂದರೆ, "ಪೃಥ್ವಿವ್ಯೈ ಸಮುದ್ರಪರ್ಯಂತಾಮಾ ಏಕರಾಟ್ ಇತಿ" ಸಮುದ್ರಪರ್ಯಂತ ಈ ಪೃಥ್ವಿ ಒಂದು ರಾಷ್ಟ್ರವಾಗಿದೆ. ಅಶ್ವಮೇಧ, ರಾಜಸೂಯ ಮುಂತಾದ ಎಷ್ಟು ಯಜ್ಞಗಳನ್ನು ಮಾಡಲಾಗಿದೆಯೋ ಅವುಗಳಿಂದ ರಾಜನ ರಾಜದಂಡದ ಪ್ರಭಾವವನ್ನು ಸ್ಥಾಪಿಸಲಾಗುತ್ತಿತ್ತು. ರಾಜನಿಂದ ಮಾಡಲ್ಪಟ್ಟ ಯಜ್ಞ ಸಮಸ್ತ ಭಾರತವನ್ನು ಒಟ್ಟು ಗೂಡಿಸುವ ಪ್ರಯತ್ನವಾಗಿರುತ್ತಿತ್ತು. ರಾಮ, ಕೃಷ್ಣ ಮುಂತಾದ ಅವತಾರಪುರುಷರು ಸಮಸ್ತ ಭಾರತದಲ್ಲಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದರು. ಭಾರತದ ಒಗ್ಗಟ್ಟಿನ ಈ ಸಿದ್ಧಾಂತವನ್ನು ನಾವು ಸ್ವೀಕರಿಸಿದೆವು. ಇಲ್ಲಿಯ ರಾಷ್ಟ್ರೋಜ್ಜೀವನ ಅವಿಭಾಜ್ಯವಾಗಿದೆ. ಇದರ ವಿಭಜನೆ ಅಥವಾ ಪಾಲುದಾರಿಕೆ ಎಂದಿಗೂ ಸಾಧ್ಯವಾಗಲಿಲ್ಲ. ಸಮಸ್ತ ಭಾರತದಲ್ಲಿ ಒಂದೇ ಸಾಮ್ರಾಜ್ಯವಿದೆ, ಒಂದೇ ಇರಬೇಕು. ಹಲವಾರು ಶಕ್ತಿಗಳಿಂದ ಮಾಡಲ್ಪಟ್ಟ ಒಂದೇ ಶಕ್ತಿಯಿರಬೇಕು. ಸಮಸ್ತ ಸಮಾಜದ ಕೆಲಸ ಸಾಗುತ್ತಲಿರಲೀಯೆಂದು 'ಟೆರಿಟೋರಿಯಲ್ ವ ಸೆಕ್‌ಶನಲ್'ಗಳನ್ನು ಆಧರಿಸಿದ ಅನೇಕ ಕೇಂದ್ರಗಳನ್ನು ಒಟ್ಟುಗೂಡಿಸಿ ಒಂದು ಕೇಂದ್ರವಾಗಬೇಕು. ಆದರೆ ಸಮಸ್ತ ಅಧಿಕಾರಶಕ್ತಿಯನ್ನು ಒಂದಾಗಿರಿಸುವುದರ ಕಡೆಗೆ ಆಗ್ರಹವಿತ್ತು. ರಾಜಕೀಯದ ಈ ಆದರ್ಶವನ್ನು ಹಿಂದಿನವರು ನಮ್ಮ ಮಂದಿಟ್ಟಿದ್ದಾರೆ. ರಾಜ್ಯ ಧರ್ಮಾಧಿಷ್ಠಿತವಾಗಲಿ,



ಧರ್ಮನಿಷ್ಠವಾಗಲಿ ಎಂಬುದು ಭಾರತೀಯ ಪರಂಪರೆಯಾಗಿದೆ. ಆದ್ದರಿಂದ ಇಂದಿಗೂ ನಾವು ಆದರ್ಶ ಜೀವನವ್ಯವಸ್ಥೆಯನ್ನು ಸ್ವೀಕರಿಸಬೇಕಾದಲ್ಲ ಅದು ಧರ್ಮವನ್ನು ಆಧರಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಚಲಿಸಿದಲ್ಲಿ ಆ ವ್ಯವಸ್ಥೆ ಅಭಾರತೀಯ ವಿಚಾರಗಳನ್ನು ಹೊರತೊಡಗುತ್ತದೆ. ಅದು ಗ್ರಹಿಸಲು ಯೋಗ್ಯವಲ್ಲ ಹಾಗೂ ಬಹುಕಾಲ ಬಾಳುವುದೂ ಇಲ್ಲ. ಇಂದಿನ ಯುಗದಲ್ಲಿ ಈ ಸಂಗತಿಗಳು ಬಹಳ ವಿಚಿತ್ರವೆನಿಸುತ್ತದೆ. ಎಲ್ಲಿ ಧರ್ಮವನ್ನು ಮನುಷ್ಯನ ಶತ್ರುವೆಂದು ತಿಳಿಯಲಾಗಿದೆಯೇ ಅಲ್ಲಿ ಸಮಸ್ತ ಆಡಳಿತದ ತಂತ್ರವನ್ನು ಧರ್ಮದ ಮೇರೆಗೆ ಜಾರಿಗೆ ತರುವ ಸಂಗತಿ ಬೇಗ ಅರ್ಥವಾಗುವುದಿಲ್ಲ. ಆದರೆ ನಾವು ನೆನಪಿನಲ್ಲಿಡಬೇಕಾದ ಸಂಗತಿಯೆಂದರೆ ಎಲ್ಲಿಯತನಕ ಈ ಸಮಸ್ಯೆಯನ್ನು ಕುರಿತು ವಿಚಾರ ಮಾಡಲಾಗುವುದಿಲ್ಲವೋ ಅಲ್ಲಿಯತನಕ ಮಾನವನ ಸರ್ವಾಂಗೀಣ ವಿಕಾಸದ ಮಾರ್ಗದಲ್ಲಿ ತಡೆಯಿರುತ್ತದೆ.

### ಧರ್ಮತತ್ತ್ವದ ಸಾರ

ಧರ್ಮದ ಮುಖ್ಯ ತತ್ವವೇ 'ಧಾರಣಾ ಶಕ್ತಿ'. ಧರ್ಮ ಹಾಗೂ ಅಧರ್ಮವನ್ನು ಕುರಿತು ವಿಚಾರಮಾಡಿದಲ್ಲಿ ಮಹಾಭಾರತದ ಒಂದು ವಾಕ್ಯ ನೆನಪಾಗುತ್ತದೆ. ಅದರಲ್ಲಿ ಹೀಗೆ ಹೇಳಲಾಗಿದೆ, "ನಿನಗೆ ಕಷ್ಟವನ್ನುಂಟುಮಾಡುವ ಆಚರಣೆಯನ್ನು ಮತ್ತೊಬ್ಬರೊಡನೆ ಆಚರಿಸಬೇಡ." ವಾಸ್ತವವಾಗಿ ಸಮಷ್ಟಿ ಧರ್ಮದ ಆಧಾರವೇ ಆತ್ಮೀಯತೆ. ಸಂಪೂರ್ಣ ಸಮಾಜದ ಬಗ್ಗೆ ತನ್ನತನದ ಭಾವವನ್ನು ಮನಸ್ಸಿನಲ್ಲಿ ಹೊತ್ತು 'ಅಹಂ–ಭಾವ'ವನ್ನು ದೂರಸರಿಸಿ ಆತ್ಮೀಯತೆಯನ್ನು ಜಾಗೃತಗೊಳಿಸುವುದೇ ನಿಜವಾದ ಧರ್ಮ. ಇದರಿಂದಲೇ ಸಮಾಜದ 'ಧಾರಣಾ' ಎಂಬುದು ಉಂಟಾಗುತ್ತದೆ.

ನಾವು ಯಜ್ಞಗಳನ್ನು ಮಾಡುತ್ತೇವೆ. ಯಜ್ಞ ಮಾಡುವ ಸಮಯದಲ್ಲಿ ನಾವು ಹೀಗೆ ಹೇಳುತ್ತೇವೆ. 'ಇದಂ ನ ಮಮ'– ಇದು ನನ್ನದಲ್ಲ. ಯಜ್ಞದ ನಂತರ ಏನು ಉಳಿಯುತ್ತದೆಯೋ ಅದನ್ನು ನಾವು ಭಗವಂತನ ಪ್ರಸಾದವನ್ನಾಗಿ ಗ್ರಹಿಸುತ್ತೇವೆ. ಯಜ್ಞಕ್ಕೆ ಮೊದಲೇ ಪ್ರಸಾದವನ್ನು ಹಂಚಲಾಗುವುದಿಲ್ಲ. ನಾವು ಬೆಳದಿದ್ದೆಲಾ ನನ್ನದಲ್ಲಾ ಎಂದು ನಮ್ಮಲ್ಲಿ ಹೇಳಲಾಗಿದೆ. ಓರ್ವ ವ್ಯಕ್ತಿ ವೇತನಪಡೆದರೆ ಆ ವೇತನವೆಲ್ಲಾ ಅವನು ಸ್ವಂತಕ್ಕಾಗಿ ಬಳಸುವುದಿಲ್ಲ. ಅವನು ಆ ಹಣವನ್ನು ತನ್ನ ತಂದೆ ಅಥವಾ ತಾಯಿಗೆ ನೀಡುತ್ತಾನೆ ಹಾಗೂ ಆ ಧನವನ್ನು ಸಮಸ್ತ ಕುಟುಂಬದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಬಳಸುತ್ತಾನೆ. ನಾವೆಲ್ಲರೂ ಊಟಮಾಡುವಾಗ ಹೀಗೆ ಹೇಳುತ್ತೇವೆ, 'ತ್ವದೀಯಂ ವಸ್ತು ಗೋವಿಂದಂ ತುಭ್ಯಮೇವ ಸಮರ್ಪಯೇ" ಊಟವನ್ನು ಸಹ ನಾವು ನಮಗಾಗಿ ಮಾಡುವುದಿಲ್ಲ. ಕಾರಣ ಭಗವಂತನ ಅಪಾರ ಕೃಪೆಯಿಂದ ನಮಗೆ ದೊರೆತಂತಹ ಮಾನವಶರೀರದ ಸಂರಕ್ಷಣೆ ಹಾಗೂ ಅದರಿಂದ

ಧರ್ಮಸಂರಕ್ಷಣೆಯೆಂಬ ಭಗವಂತನ ಕಾರ್ಯಕ್ಕಾಗಿ ಈ ಶರೀರದ ಸದುಪಯೋಗವಾಗಲಿ ಎಂದು ಊಟ ಮಾಡುತ್ತೇವೆ. ನಾನು ಕೇವಲ ನನ್ನನ್ನು ಕುರಿತಲ್ಲದೇ ಇತರರನ್ನು ಕುರಿತು ವಿಚಾರ ಮಾಡುತ್ತೇನೆ ಎಂಬ ವಿಚಾರ ನಮ್ಮಲ್ಲಿ ಮೂಡಿದಲ್ಲಿ ನಾವು ಧರ್ಮವನ್ನಾಧರಿಸಿ ನಿಂತಿರುವೆವು ಎಂದು ಹೇಳಬಹುದು.

ಯುಧಿಷ್ಠಿರನನ್ನು ಕುರಿತು ಏನು ಹೇಳಲಾಗಿದೆಯೆಂದರೇ ಅವನು ಕೇವಲ ತನ್ನನ್ನು ಕುರಿತಲ್ಲದೇ ಇತರನ್ನು ಕುರಿತು ವಿಚಾರ ಮಾಡಿದನಾದುದರಿಂದಲೇ ಅವನು ಧರ್ಮರಾಜನೆಂದು ಕರೆಯಲ್ಪಟ್ಟನು. ಒಮ್ಮೆ ಪಂಚಪಾಂಡವರು ಕುಂತಿಯೊಡನೆ ಕಾಡಿನಲ್ಲಿ ಹೋಗುತ್ತಿದ್ದರು. ದಾರಿಯಲ್ಲಿ ತಾಯಿ ಕುಂತಿಗೆ ಬಾಯಾರಿಕೆಯಾಯಿತು, ನೀರು ತರಲೆಂದು ಭೀಮ ಕೆರೆಯೊಂದರ ಬಳಿ ಹೋದನು. ಅಲ್ಲಿ ಅವನನ್ನು ಯಕ್ಷನು ತಡೆಹಿಡಿದು ಪ್ರಶ್ನೆ ಕೇಳಿದನು. ಸರಿಯಾಗಿ ಉತ್ತರ ಸಿಗದಿದ್ದಲ್ಲಿ ಕ್ರೋಧಗೊಂಡ ಯಕ್ಷನು ಭೀಮನನನ್ನು ಮೂರ್ಛೆಗೊಳಿಸಿದ. ಬಹಳ ಹೊತ್ತಾದರೂ ಭೀಮ ಮರಳದೇ ಹೋದಾಗ ಅರ್ಜುನನು ಅವನನ್ನು ಹುಡುಕುತ್ತಾ ಹೋದನು ಹಾಗೂ ಅರ್ಜುನನಿಗೂ ಅದೇ ಗತಿಯುಂಟಾಯಿತು. ಹೀಗೆ ಕ್ರಮವಾಗಿ ಸಹದೇವ ಹಾಗೂ ನಕುಲ ಹೋದರು. ಅವರ ಗತಿಯೂ ಇದೇ ಆಯಿತು. ಕೊನೆಗೆ ಯುಧಿಷ್ಠಿರನು ಸ್ವಯಂ ಹೊರಟನು. ಯಕ್ಷನು ಯುಧಿಷ್ಠಿರನನ್ನು ಅದೇ ಪ್ರಶ್ನೆ ಕೇಳಿದನು. ಯುಧಿಷ್ಠಿರನು ಉತ್ತರಿಸಿದನು. ಯಕ್ಷನು ಪ್ರಸನ್ನನಾದನು ಹಾಗು ಹೀಗೆಂದನು 'ಹೋಗು, ನೀರು ತೆಗೆದುಕೋ, ಹಾಗೂ ಯಾರಾದರೂ ಒಬ್ಬ ತಮ್ಮನ ಪುನರ್ಜೀವನಕ್ಕಾಗಿ ವರದಾನವನ್ನು ಕೇಳು.' ಯುಧಿಷ್ಠಿರನು ಹೀಗೆ ಹೇಳಿದನು–'ನೀನು ಹೀಗೆ ವರ ನೀಡಿದಲ್ಲಿ ನಕುಲ ಅಥವಾ ಸಹದೇವರಲ್ಲಿ ಯಾರಾದರೂ ಒಬ್ಬರನ್ನು ಜೀವಂತಗೊಳಿಸು.' ಇದನ್ನು ಕೇಳಿ ಯಕ್ಷನಿಗೆ ಬಹಳ ಆಶ್ಚರ್ಯವುಂಟಾಯಿತು. ಅವನು ಹೇಳಿದನು – ಅರ್ಜುನ ಹಾಗೂ ಭೀಮನಂತಹ ಮಹಾಪರಾಕ್ರಮಿ ತಮ್ಮಂದಿರನ್ನು ಬಿಟ್ಟು ನೀನು ಇವರನ್ನು ಬದುಕಿಸಲು ಹೇಳುತ್ತೀಯ, ಇದು ನನಗೆ ತಿಳಿಯುತ್ತಿಲ್ಲ. ಅರ್ಜುನನು ಗಾಂಡೀವಧಾರಿ, ಭೀಮನು ಅತಿಬಲಶಾಲಿ ಪುರುಷನಾಗಿದ್ದಾನೆ. ನೀನು ಅವರನ್ನು ಏಕೆ ಕೇಳುತ್ತಿಲ್ಲ? 'ಯುಧಿಷ್ಠಿರನು ಸಹಜವಾಗಿ ಉತ್ತರಿಸಿದನು' ನನಗೆ ಇಬ್ಬರು ತಾಯಂದಿರು, ಕುಂತಿ ಹಾಗೂ ಮಾದ್ರಿ. ಸೌಭಾಗ್ಯದಿಂದ ಕುಂತಿಯ ಮಗನಾದ ನಾನು ಜೀವಂತದಿಂದಿರುವೆನು. ಮಾದ್ರಿಯ ಮಗನೊಬ್ಬನು ಜೀವಂತವಾಗಿರಲೆಂದು ನಾನು ನಕುಲ ಹಾಗೂ ಸಹದೇವರಲ್ಲಿ ಯಾರನ್ನಾದರೂ ಒಬ್ಬರನ್ನು ಜೀವಂತಗೊಳಿಸಲು ಬೇಡುತ್ತಿರುವೆನು. ಅವರು ಅಲ್ಲಿ ಅರ್ಜುನ ಧನುರ್ಧಾರಿ, ಭೀಮನು ಅತೀವ ಬಲಶಾಲಿ ಎಂಬುದನ್ನು ಕುರಿತು ನಾನು ಅಲ್ಲಿ ವಿಚಾರಮಾಡಲಿಲ್ಲ. ನಾನು ಆಗ ಕೇವಲ ಧರ್ಮವನ್ನು ಕುರಿತು ಯೋಚನೆ ಮಾಡಿರುವೆನು' ಎಂದು ಹೇಳಿದನು. ಆಗ ಈ ಉತ್ತರದಿಂದ ಯಕ್ಷನು ಎಷ್ಟು



ಸಂತೋಷಗೊಂಡನೆಂದರೆ ಅವನು ನಾಲ್ವರು ತಮ್ಮಂದಿರನ್ನು ಜೀವಂತಗೊಳಿಸಿದನು.

ನಾವು ಈ ರೀತಿಯಾದ ಧರ್ಮದ ವಿಚಾರವನ್ನು ಬಯಸುತ್ತೇವೆ. ಇದೇ ನಮ್ಮ ಆದರ್ಶವಾಗಿದೆ. 'ಮಮ ಇತಿ ಮೃತ್ಯುಃ' ಮಮತ್ವವೇ ಮೃತ್ಯು. 'ನ ಮಮ' ವೇ ಅಮರತ್ವವಾಗಿದೆ. ಇದು ನನ್ನದಲ್ಲ, ಎಲ್ಲರದು ಹಾಗೂ ಎಲ್ಲರದು ಆದ್ದರಿಂದಲೇ ರಾಷ್ಟ್ರದ್ದಾಗಿದೆ. ಈ ರೀತಿಯ ಭಾವವೇ ಸರಿಯಾದ ರಾಷ್ಟ್ರಭಾವವಾಗಿದೆ. ಇದರಲ್ಲಿಯೇ ತ್ಯಾಗ ವೃತ್ತಿ ಹುಟ್ಟುತ್ತದೆ. ಈ ವೃತ್ತಿಯಿಂದಲೇ ಜೀವನದ ಎಲ್ಲಾ ಸಮಸ್ಯೆಗಳಿಗೂ ಪರಿಷ್ಕಾರ ದೊರೆಯುತ್ತದೆ.

ಆದುದರಿಂದ ರಾಷ್ಟ್ರದ ಚಿರಂ ಜೀವತ್ವಕ್ಕಾಗಿ ಸಮಷ್ಟಿ ಭಾವದ ಜಾಗೃತಿ ಅತಿ ಆವಶ್ಯವಾಗಿದೆ. ಇಂದು ರಾಷ್ಟ್ರದ ಆತ್ಮವು ಬಹಳ ದುರ್ಬಲವಾಗಿಬಿಟ್ಟಿದೆ. ಒಗ್ಗಟ್ಟಿನ ಬಂಧವು ಸಡಿಲವಾಗಿದೆ. ಆತ್ಮೀಯತೆ ಸ್ಥಾನದಲ್ಲಿ ದ್ವೇಷವು ಮನೆಮಾಡಿಕೊಂಡಿದೆ. ಇದೇ ರಾಷ್ಟ್ರೀಯಭಾವವು ನಷ್ಟವಾದುದರಿಂದ ಅನೇಕ ಸಮಸ್ಯೆಗಳು ಜನ್ಮತಾಳಿದೆ. ಈ ಸಮಸ್ಯೆಗಳನ್ನು ಹೊರನೋಟಕ್ಕೆ ಬಗೆಹರಿಸುವುದರಿಂದ ಸಮಸ್ಯೆಗೆ ಒಂದು ಶಾಶ್ವತ ಪರಿಷ್ಕಾರ ದೊರೆಯುವುದಿಲ್ಲ. ರಾಷ್ಟ್ರಭಾವವನ್ನು ಹೊರತುಪಡಿಸಿ ಯಾವುದೇ ರಾಷ್ಟ್ರ ವಿಕಸಿತವಾಗುವುದಿಲ್ಲ. ಹೀಗೆ ಹಿಂದೆ ಎಂದೂ ಆಗಿಲ್ಲ ಹಾಗೂ ಇದು ತ್ರಿಕಾಲದಲ್ಲೂ ಒಪ್ಪುವಂತಹ ಒಂದು ಸತ್ಯವಾಗಿದೆ. ಭವಿಷ್ಯದಲ್ಲೂ ಆಗಲಾರದು. ಹೀಗಾಗಿ ರಾಷ್ಟ್ರೋದ್ಧಾರದ ವಿಚಾರ ಮಾಡುವ ದೇಶಭಕ್ತರು ಈ ಮೂಲ ಸಮಸ್ಯೆಯನ್ನು ಕುರಿತು ವಿಚಾರ ಮಾಡಲೇಬೇಕಾಗಿದೆ. ಎಲ್ಲಿಯತನಕ ಧರ್ಮ ಹಾಗೂ ಸಂಸ್ಕೃತಿಯನ್ನು ಕುರಿತಾದ ಪೂರ್ವಗ್ರಹವನ್ನು ಬಿಟ್ಟು ಅದರ ವ್ಯಾಪಕ ಹಾಗೂ ಸನಾತನ ತತ್ವವನ್ನು ದರ್ಶಿಸಿ ರಾಷ್ಟ್ರೋಜ್ಜೀವನವನ್ನು ಸುದೃಢವನ್ನಾಗಿಸುವ ಪ್ರಯತ್ನವುಂಟಾಗುವುದಿಲ್ಲವೋ ಅಲ್ಲಿಯತನಕ ನಮ್ಮ ಸರ್ವಾಂಗೀಣ ವಿಕಾಸದ ಹಾದಿ ಕುಂಠಿತವಾಗಿಯೇ ಇರುತ್ತದೆ.

# ಜೀವನ-ದರ್ಶನ

**ಪಂಡಿತ ದೀನ್ ದಯಾಳ್ ಉಪಾಧ್ಯಾಯ**

೧೯೬೮ರ ಫೆಬ್ರವರಿ ೧೧ ರಂದು ಭಾರತ ಜನಸಂಘದ ಅಧ್ಯಕ್ಷರಾದ ಪ. ದೀನದಯಾಲ ಉಪಾಧ್ಯಾಯರ ಮೃತಶರೀರ ಮುಗಲ್‌ಸರಾಯನ ಸ್ಟೇಶನ್‌ನ ಯಾರ್ಡಿನಲ್ಲಿ ದೊರೆಯಿತು. ಈ ಕುತಂತ್ರಕಾರಿ ಘಟನೆಯ ರಹಸ್ಯ ಇಲ್ಲಿಯತನಕ ನಿಗೂಢವಾಗಿದೆ. ಮುಂದೆ ಭವಿಷ್ಯದಲ್ಲಿ ಇದರ ರಹಸ್ಯ ಪ್ರಕಟವಾಗುತ್ತದೆ. ಆ ರಹಸ್ಯವೇನೇ ಆಗಿರಲಿ ಭಾರತೀಯ ಪ್ರಜಾತಂತ್ರದ ರಾಜನೈತಿಕ/ರಾಜಕೀಯ ದಿಗಂತದ ಮೇಲೆ ವಿಚಾರ, ಕಾರ್ಯ ಹಾಗೂ ಪ್ರಗತಿಯ ಮಹತ್ತರವಾದ ಆಶಾಕಿರಣದೊಂದಿಗೆ ಅತಿ ದಿವ್ಯ ಜೀವನವು ನಮ್ಮ ಮುಂದೆ ಪ್ರಕಟಗೊಳ್ಳುತ್ತಿತ್ತೋ ಹಾಗೂ ಅತಿ ಪ್ರಾಚೀನ ಭಾರತೀಯ ಜೀವನದರ್ಶನವನ್ನಾಧರಿಸಿ ಯುಗಾನುರೂಪ ನೂತನ ವ್ಯವಸ್ಥೆಗಳು, ಸ್ವತಂತ್ರ ಚಿಂತನೆ ಹಾಗೂ ದಾರ್ಶನಿಕ ದೃಷ್ಟಿಕೋನದಿಂದ ಪರಿಪೂರ್ಣವಾದ ವ್ಯಾವಹಾರಿಕ ವ್ಯಾಖ್ಯಾನಗಳನ್ನು ಪ್ರಸ್ತುಪಡಿಸುತ್ತಿದ್ದರೋ ಅವರು ಇದ್ದಕ್ಕಿದಂತೆಯೇ ಕಣ್ಮರೆಯಾಗಿ ಹೋದರು. ದೇಶದ ಗೌರವಶಾಲಿ ಗತವನ್ನು ಭವ್ಯಭವಿಷ್ಯದೊಡನೆ ಸೇರಿಸುವ ಇಂದಿನ ಮಹಾನ್ ಶಿಲ್ಪಿ ಚಿರನಿದ್ರೆಯಲ್ಲಿ ಮುಳುಗಿದರು. ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ- ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಜನಸಾರ ಸುಖ-ದುಃಖಗಳಲ್ಲಿ ಸಾಮರಸ್ಯವನ್ನುಂಟುಮಾಡುತ್ತಾ ನೇತೃತ್ವದ ಸೂತ್ರಹಿಡಿದ ಮಹಾನ್ ನಾಯಕರು ದಿವಂಗತರಾಗಿ ಹೋದರು. ಸಮಸ್ಯೆಗಳಿಂದ ತುಂಬಿತುಳುಕುತ್ತಿದ್ದ ದೇಶದಲ್ಲಿ ಎಲ್ಲಾ ರೀತಿಯಿಂದಲೂ ಪರಿಷ್ಕಾರ ಹುಡುಕುವ ವಿಶ್ವಾಸವನ್ನು ಮೂಡಿಸುವಂತಹ ಪ್ರಕಾಶಪುಂಜವು ಆರಿಹೋಯಿತು. ಸರಳ ವ್ಯವಹಾರ/ಆಚರಣೆ, ಸರಳ ಜೀವನ, ಉಚ್ಚ ವಿಚಾರ. ಪ್ರದೀಪ್ತವಾದ ಅಂತಃಕರಣ ಹಾಗೂ ಕರ್ಮನಿಷ್ಠೆಯ ಮೂರ್ತಿ ಇದ್ದಕ್ಕಿದ್ದ ಹಾಗೆ ಕರಗಿಹೋಯಿತು. ಇದರಿಂದಾಗಿಯೇ ಜನಸಂಘದ ಇಂದಿನ ಅಧ್ಯಕ್ಷರಾದ ಪಂ. ಅಟಲಬಿಹಾರಿ ವಾಜಪೆಯಿ ಅವರು ಹೀಗೆಂದು ಹೇಳಿದರು: "ಸೂರ್ಯ ಮುಳುಗಿ ಹೋದನು. ಈಗ ನಾವು ನಕ್ಷತ್ರಗಳ ಬೆಳಕಿನಲ್ಲಿ ನಮ್ಮ ಮಾರ್ಗವನ್ನು ಹುಡುಕಿಕೊಳ್ಳಬೇಕಾಗಿದೆ." ನಿಸ್ಸಂದೇಹವಾಗಿ ಪಂ. ದೀನದಯಾಲರು ಎಷ್ಟು ನಮ್ರ ಹಾಗೂ ಸರಳ ವ್ಯಕ್ತಿಗಳಾಗಿದ್ದರು ಎಂದರೆ ಅವರ ಮಹಾನತೆಯನ್ನು ಅರಿಯುವುದು ಕಷ್ಟವಾಗಿತ್ತು



ಹಾಗೂ ಅವರು ಎಂಥ ಮಹಾತ್ಮರಾಗಿದ್ದರೆಂದರೆ ಅವರ ಅಕ್ಕಪಕ್ಕದ ಪ್ರತಿ ವಸ್ತುವೂ ಧ್ಯೇಯಸಮರ್ಪಿತವಾಗಿತ್ತು.

ಪಂ. ದೀಣ್‌ದಯಾಳ್ ಉಪಾಧ್ಯಾಯರು ಆಶ್ವಯುಜ ಮಾಸದ ವಿ.ಸಂ. ೧೯೭೩ರಲ್ಲಿ ಕೃಷ್ಣಪಕ್ಷ ತ್ರಯೋದಶಿಯಿಂದ ೨೫ ಡಿಸೆಂಬರ್ ೧೯೧೬ ರಂದು ಜನಿಸಿದರು. ಅವರ ತಾತ ಪಂ. ಚುನ್ನೀಲಾಲ ಶುಕ್ಲರು ಜಯಪುರ-ಅಜಮೇರಿನ ರೈಲ್ವೇಲೈನಿನ ಬಳಿಯಿದ್ದ ಧನಕಿಯಾ ಗ್ರಾಮದಲ್ಲಿ ಸ್ಟೇಶನ್ ಮಾಸ್ಟರ್‌ರಾಗಿದ್ದರು. ಪಂ. ದೀನದಯಾಲರ ಜನ್ಮ ಇದೇ ಗ್ರಾಮದಲ್ಲಿದ್ದ ತಾತನ ಮನೆಯಲ್ಲಿ ಉಂಟಾಯಿತು. ಅವರ ತಂದೆಯ ಹೆಸರು ಶ್ರೀ ಭಗವತಿ ಪ್ರಸಾದ ಉಪಾಧ್ಯಾಯ ಹಾಗೂ ಅವರು ಉತ್ತರ ಪ್ರದೇಶದಲ್ಲಿನ ಜಲೇಸರ್ ರೋಡ್ ರೈಲು ಸ್ಟೇಶನ್‌ನ ಸ್ಟೇಶನ್ ಮಾಸ್ಟರ್ ಆಗಿದ್ದರು. ತಮ್ಮ ಪಿತಾಮಹ ಪಂ. ಹರೀರಾಮ ಶಾಸ್ತ್ರಿಗಳು ಜ್ಯೋತಿಶಾಸ್ತ್ರದಲ್ಲಿ ತಮ್ಮ ಸಮಯದ ಅತಿ ಪ್ರಸಿದ್ಧ ವಿದ್ವಾನರಾಗಿದ್ದರು. ಪಂ. ಹರೀರಾಮ ಶಾಸ್ತ್ರಿಗಳ ಮೃತ್ಯು ಆದ ವೇಳೆ ಆಗ್ರಾ ಹಾಗೂ ಮಥುರಾದಲ್ಲಿ ಅವರ ಗೌರವಾರ್ಥ ಶೋಕಹರತಾಳವಾಗಿತ್ತು ಎಂದು ಹೇಳಲಾಗುತ್ತದೆ.

ಬಾಲ್ಯದಲ್ಲಿ ಅವರು ಸುಮಾರು ಏಳು ವರ್ಷದ ಹುಡುಗನಾಗಿದ್ದಾಗ ಅವರ ತಾಯಿ-ತಂದೆ ತೀರಿಕೊಂಡ ಹಾಗೂ ಅವರ ಲಾಲನೆ ಪೋಷಣೆ ಅವರ ಮಾವನಾದ ಶ್ರೀ ರಾಧರಮಣ ಶುಕ್ಲರ ಮನೆಯಲ್ಲಿ ಉಂಟಾಯಿತು. ಹೀಗೆ ಬಾಲ್ಯಕಾಲದಿಂದಲೇ ಆಪತ್ತು ಹಾಗೂ ಅನಾನುಕೂಲ ಪರಿಸ್ಥಿತಿಗಳೊಡನೆ ಹೋರಾಟ ಆರಂಭವಾಯಿತು.

ಬಾಲ್ಯಕಾಲದಲ್ಲಿಯೇ ತಾಯಿ-ತಂದೆಯ ಪ್ರೀತಿಯಿಂದ ವಂಚಿತರಾದ ದುಃಖ ಸಂಪೂರ್ಣ ಜೀವನವನ್ನು ನಾಶಗೊಳಿಸಬಹುದಾಗಿದೆ. ಈ ರೀತಿಯ ದುರ್ಭಾಗ್ಯಕ್ಕೆ ಸಿಲುಕಿದವರಲ್ಲಿ ಬಹಳ ಕಡಿಮೆ ಜನರು ಮಾತ್ರ ಉದ್ಧಾರವಾಗಲು ಸಾಧ್ಯವಾಗುತ್ತದೆ. ಇಂತಹ ಕೋಮಲ ವಯಸ್ಸಿನಲ್ಲಿ ಸ್ವಾವಲಂಬನೆ ಹಾಗೂ ಕಷ್ಟವನ್ನು ಸಹಿಸುವ ಪರೀಕ್ಷೆ ನಿಸ್ಸಂದೇಹವಾಗಿ ಬಹು ಕಠೋರವಾಗಿಯೇ ಕಂಡುಬರುವುದು. ಚಿಕ್ಕ ಮಕ್ಕಳು ಪ್ರೀತಿ-ಪ್ರೇಮ, ಅಕ್ಕರೆ ಪಡೆಯುತ್ತಿರುವ ವೇಳೆ ಒರ್ವ ಬಾಲಕ ಏಕಾಂಗಿಯಾಗಿ ತನ್ನ ದುಃಖವನ್ನು ನುಂಗಿ, ತನ್ನ ಮುಷ್ಟಿಯಲ್ಲಿ ದೌರ್ಭಾಗ್ಯವನ್ನು ಅಡಗಿಸಿಡಲು ಪ್ರಯತ್ನಿಸಿದಾರೆ, ಆಗ ಅದು ಕಠೋರವೆಂದೆನಿಸುತ್ತದೆ. ನಿಜಕ್ಕೂ ತನ್ನೊಡನೆ ಅತಿ ಕಠೋರವಾಗಿ ವರ್ತಿಸುವುದು ಹಾಗೂ ಕರ್ಮದಲ್ಲಿ ನಿರತನಾಗಿ ಏಕಾಗ್ರತೆಯ ಮಂತ್ರವನ್ನು ಪಠಿಸುವುದು ಪಂ. ದೀನದಯಾಲರು ಬಾಲ್ಯದಲ್ಲಿಯೇ ಗ್ರಹಿಸಿದರು. ವಿದ್ಯಾರ್ಜನೆಯ ಮೆಟ್ಟಿಲುಗಳನ್ನು ಯಶಸ್ವಿಯಾಗಿ ಹತ್ತತೊಡಗಿದರು ಹಾಗೂ ಅವರು ಅಜಮೇರ್ ಬೋರ್ಡಿನ ಮೆಟ್ರಿಕ್ ಪರೀಕ್ಷೆ ಸೀಕರಿನ ಕಲ್ಯಾಣ ಹೈಸ್ಕೂಲ್‌ನಿಂದ ಉತ್ತೀರ್ಣನಾದ ಸಂದರ್ಭದಲ್ಲಿ ಅವರಿಗೆ ಸ್ವರ್ಣಪದಕ ಪ್ರಾಪ್ತವಾಯಿತು. ಅವರು ಸಂಪೂರ್ಣ ಬೋರ್ಡ್‌ನಲ್ಲಿ ಪ್ರಪ್ರಥಮರಾಗಿ ಉತ್ತೀರ್ಣರಾಗಿದ್ದರು. ಏಕಾಗ್ರತೆಯೊಡನೆ

ಮನ ಹಾಗೂ ಬುದ್ಧಿಯನ್ನು ನಿಯೋಜಿಸಿ ಕಾರ್ಯದಲ್ಲಿ ತೊಡಗಿಸುವುದರಿಂದ ಯಾವ ಸಂಕಟವನ್ನಾದರೂ ಎದುರಿಸಬಹುದಾಗಿದೆ ಹಾಗೂ ಇವೆರಡರ ಸಂಯೋಜನೆಯಿಂದ ಯಶಸ್ಸಾಗದ ಪರೀಕ್ಷೆಯಾದರೂ ಯಾವುದಿದೆ. ಇದೇ ಕ್ರಮ ಮುಂದುವರಿಯಿತು. ಎರಡು ವರ್ಷಗಳ ನಂತರ ಪಿಲಾನಿ (ರಾಜಸ್ಥಾನ)ಯಿಂದ ಅವರು ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ ಸಹ ಪ್ರಥಮ ಸ್ಥಾನದಲ್ಲಿದ್ದರು. ಕಾನಪುರದ ಸನಾತನ ಧರ್ಮ ಕಾಲೇಜಿನಿಂದ ಬಿ.ಎ. ಪರೀಕ್ಷೇಯಲ್ಲಿಯೂ ಅವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು.

ಇದೇ ವೇಳೆ ಕಾನಪುರದಲ್ಲಿ ೧೯೩೭ನೆಯ ಇಸ್ವಿಯಲ್ಲಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ಉತ್ತರಪ್ರದೇಶದಲ್ಲಿ ಸಂಘದ ಕಾರ್ಯಕ್ಕೆ ತಳಹದಿಯನ್ನು ಹಾಕಿದ ಮಾನ್ಯ ಶ್ರೀ ಭಾವೂರಾವ್ ದೇವರಸರ ಪರಿಚಯವಾಗಿ ಅವರಿಗೆ ರಾಷ್ಟ್ರಕ್ಕಾಗಿ ಜೀವನವನ್ನು ಮುಡುಪಾಗಿಸುವ ವ್ರತವನ್ನು ಸ್ವೀಕರಿಸುವ ಮಹಾಮಂಗಳಕರ ಕ್ಷಣವಾಯಿತು. ಮೇಧಾಶಕ್ತಿಗೆ ಗುರಿ ದೊರೆಯಿತು ಹಾಗೂ ಅವರ ಶಕ್ತಿಯು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯದಲ್ಲಿ ತೊಡಗಿತು.

ಕಾನಪುರದ ಸನಾತನಧರ್ಮ ಕಾಲೇಜಿನಿಂದ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದನಂತರ ಅವರು ಆಗ್ರದಿಂದ ಆಂಗ್ಲ ಸಾಹಿತ್ಯದಲ್ಲಿ ಎಮ್. ಎ. ಮಾಡಲು ಸೆಂಟ್ ಜಾನ್ಸ್ ಕಾಲೇಜಿನಲ್ಲಿ ದಾಖಲೆ ಪಡೆದರು, ಪ್ರಥಮ ವರ್ಷದಲ್ಲಿ ಅವರು ಉತ್ತೀರ್ಣರಾದರು. ಆದರೆ ಅವರು ದ್ವಿತೀಯ ಎಮ್.ಎ. ಪರೀಕ್ಷೆಗಳನ್ನು ತೆಗೆದುಕೊಳ್ಳಲಾಗಲಿಲ್ಲ. ಆ ಸಮಯದಲ್ಲಿ ತಮ್ಮ ಹಾಗೂ ಅಕ್ಕನ (ಸ್ವಂತ–ಅಲ್ಲ) ಜೊತೆಯಲ್ಲಿ ಇರುತ್ತಿದ್ದರು. ಅಕ್ಕನ ಆರೋಗ್ಯ ಹದಗೆಟ್ಟಾಗ ಅವರು ಸೇವೆ–ಸುಶ್ರೂಷೆಗಾಗಿ ಅವರನ್ನು ನಿಸರ್ಗೋಪಚಾರಕ್ಕಾಗಿ ಪರ್ವತಧಾಮಕ್ಕೆ ಕರೆದೊಯ್ಯಬೇಕಾಯಿತು. ಈ ಕಾರಣದಿಂದ ಅವರ ದ್ವಿತೀಯ ವರ್ಷದ ಎಮ್.ಎ. ಅಧ್ಯಯನ ಸ್ಥಗಿತಗೊಂಡಿತು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕನಾಗಿ ಅವರು ೧೯೪೨ನೇ ಇಸವಿಯಲ್ಲಿ ಲಖೀಮಪುರದಲ್ಲಿ ನಿಯುಕ್ತರಾದರು. ಶಿಕ್ಷಣ ಕಾರ್ಯದಲ್ಲಿ ತಮ್ಮ ಸೇವೆಸಲ್ಲಿಸಲೆಂದು ಆಗೊಮ್ಮೆ–ಈಗೊಮ್ಮೆ ಅಲ್ಲಿಯ ಒಂದು ಹೈಸ್ಕೂಲ್‌ನಲ್ಲಿ ನಿಃಶುಲ್ಕ ಅಧ್ಯಾಪನ ಕಾರ್ಯ ನೆರವೇರಿಸತೊಡಗಿದರು. ಅವರ ಅದ್ವಿತೀಯ ಪ್ರತಿಭೆ, ಉಚ್ಚ ಚಾರಿತ್ರ್ಯ ಹಾಗೂ ವ್ಯವಹಾರ ಕುಶಲತೆಯಿಂದ ಪ್ರಭಾವಿತರಾಗಿ ಸ್ಕೂಲಿನ ಆಡಳಿತಗಾರರು ಅವರಿಗೆ ಮುಖ್ಯೋಪಾಧ್ಯಾಯರ ಸ್ಥಾನ ಕೊಡುವ ಇಚ್ಛೆಯನ್ನು ಪ್ರಕಟಗೊಳಿಸಿದರು. ಆದರೆ ಶ್ರೀ ದೀನ್‌ದಯಾಳ್ ಉಪಾಧ್ಯಾಯರು ಅದನ್ನು ಸ್ವೀಕರಿಸಲಿಲ್ಲ. ಮೂರು ವರುಷಗಳ ಕಾರ್ಯದ ವೇಳೆಯಲ್ಲಿ ಅವರು ಉತ್ತರ



ಪ್ರದೇಶದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಪ್ರಾಂತ ಪ್ರಚಾರಕರಾದರು. ೧೯೫೧ರಲ್ಲಿ ಜನಸಂಘದ ನಿರ್ಮಾಣವಾಗುವವರೆಗೂ ಅವರು ಇದೇ ಕ್ಷೇತ್ರದಲ್ಲಿ ಈ ದಾಯಿತ್ವದಿಂದ ಕಾರ್ಯಮಾಡತೊಡಗಿದರು.

ಈ ಮಧ್ಯೆ ಪಂ. ದೀನದಯಾಲರು ಕೇವಲ ಸಂಘದ ಶಾಖೆಗಳನ್ನು ವಿಸ್ತೃತಗೊಳಿಸುವ ಸಂಘಟನೆಯ ಕಾರ್ಯವನ್ನು ಮಾಡಿದುದಲ್ಲದೇ ಸಂಘದ ಮೇಲೆ ನಿಷೇಧವನ್ನು ಹಾಕಿದ ಕಾಲಖಂಡದಲ್ಲಿ ಸಮಾಚಾರಪತ್ರ ಹಾಗೂ ಪುಸ್ತಕ ಪ್ರಕಾಶನದಂತಹ ಸಾಹಿತ್ಯಕ ಕಾರ್ಯವನ್ನು ಸಹ ಯಶಸ್ವಿಯಾಗಿ ನೆರವೇರಿಸಿದರು. 'ಸಮ್ರಾಟ್ ಚಂದ್ರಗುಪ್ತ', 'ಜಗದ್ಗುರು ಶಂಕರಾಚಾರ್ಯ' ಎಂಬ ಎರಡು ಪುಸ್ತಕಗಳನ್ನು ಬರೆದರು. ಇದಲ್ಲದೇ 'ರಾಷ್ಟ್ರಧರ್ಮ' (ಮಾಸಿಕ) ಹಾಗೂ 'ಪಾಂಚಜನ್ಯ' (ಸಾಪ್ತಾಹಿಕ)ದ ಸಂಪಾದನೆ ಕಾರ್ಯ ನೆರವೇರಿಸಿದರು. ಲಖನೌನಲ್ಲಿ 'ರಾಷ್ಟ್ರಧರ್ಮ ಪ್ರಕಾಶನ ಲಿಮಿಟೆಡ್' ನ ಸಂಸ್ಥಾಪಕರಾದರು.

ಭಾರತದ ರಾಜನೀತಿಯಲ್ಲಿ ಕಾಂಗ್ರೆಸ್ಸಿನ ರಾಷ್ಟ್ರಘಾತಕ ಹಾಗೂ ಅದೂರದರ್ಶಿ ನೀತಿಗಳ ಪರಿಣಾಮವಾಗಿ ಪಾಕಿಸ್ತಾನದ ನಿರ್ಮಾಣವಾದ ನಂತರ ಕಾಂಗ್ರೆಸ್ಸಿನಲ್ಲಿ ಅಧಿಕಾರ, ಹಾಗೂ ರಾಜಕೀಯದ ಓಟವಾರಂಭವಾಯಿತು. ದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಕಟವಾಗತೊಡಗಿತು. ಇಂತಹ ಕ್ಷಣಗಳಲ್ಲಿ ರಾಜನೈತಿಕ ಕ್ಷೇತ್ರದಲ್ಲಿಯೂ ಹೊಸ ನೇತೃತ್ವದ ಅಗತ್ಯವುಂಟಾಯಿತು. ಈ ಮಹತ್ವಪೂರ್ಣ ಅಗತ್ಯದ ಪೂರ್ತಿ ೧೯೫೧ರಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿರವರ ನೇತೃತ್ವದಲ್ಲಿ ಅಖಿಲ ಭಾರತೀಯ ಜನಸಂಘದ ನಿರ್ಮಾಣವನ್ನು ಕುರಿತು ವಿಚಾರಮಾಡಲಾಗುತ್ತಿತ್ತು. ಆಗ ಪಂ. ದೀನದಯಾಳ್ ಉಪಾಧ್ಯಾಯರು ೧೯೫೧ರ ಸೆಪ್ಟೆಂಬರ್ ೨೧ ರಂದು ಲಖನೌದಲ್ಲಿ ಪ್ರಾದೇಶಿಕ ಸಮ್ಮೇಳನವನ್ನು ಕರೆದು ಜನದಂಘವನ್ನು ಸ್ಥಾಪಿಸಲಾಯಿತು. ಸರಿಯಾಗಿ ಒಂದು ತಿಂಗಳ ಅನಂತರ ೨೧ ಅಕ್ಟೋಬರ್ ೧೯೫೧ ರಂದು ದೆಹಲಿಯಲ್ಲಿ ಡಾ. ಶ್ಯಾಮಾಪ್ರಸಾದ್ ಮುಖರ್ಜಿರವರ ನೇತೃತ್ವದಲ್ಲಿ ಅಖಿಲ ಭಾರತೀಯ ಜನಸಂಘದ ಸ್ಥಾಪನೆಯಾಯಿತು. ೧೯೫೨ರಲ್ಲಿ ಜನಸಂಘದ ಪ್ರಥಮ ಅಖಿಲ ಭಾರತೀಯ ಅಧಿವೇಶನವನ್ನು ಕಾನಪುರದಲ್ಲಿ ಆಯೋಜಿಸಲಾಯಿತು. ಪಂ. ದೀನದಯಾಳ್ ಸಂಘಟನೆಯ ಕೌಶಲ್ಯದಿಂದ ಜನಸಂಘದ ಈ ಮೊದಲ ಅಧಿವೇಶನ ಅತ್ಯಂತ ಯಶಸ್ವಿಯಾಯಿತು. ಇದೇ ಅಧಿ ವೇಶನದಲ್ಲಿ ಪಂ. ದೀನದಯಾಳ್ ಉಪಾಧ್ಯಾಯರಿಗೆ ಅಖಿಲ ಭಾರತೀಯ ಮಹಾಮಂತ್ರಿಯ ಪದವಿಯನ್ನು ವಹಿಸಲಾಯಿತು, ಅದನ್ನು ಅವರು ೧೯೬೭ರ ಜನಸಂಘದ ಕ್ಯಾಲಿಕಟ್ ಅಧಿವೇಶನದವರೆಗೂ ನಿಭಾಯಿಸಿದರು. ಕಾನಪುರದಿಂದ ಕ್ಯಾಲಿಕಟ್‌ನವರೆಗೂ ಜನಸಂಘದ ಉನ್ನತ ಸ್ಥಾನದಲ್ಲಿ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ, ಆಚಾರ್ಯ

ರಘುವೀರ್‌ರಂತಹ ಅಖಿಲ ಭಾರತೀಯ ವಿದ್ವಾಂಸರು ಅಲಂಕೃತರಾಗಿದ್ದರು. ಆದರೆ ದುರ್ಭಾಗ್ಯದಿಂದ ಅಲ್ಪಕಾಲದಲ್ಲಿಯೇ ಅವೆಲ್ಲ ಕಸಿದುಕೊಳ್ಳಲಾಯಿತು. ಪಂ. ದೀನದಯಾಲ ಉಪಾಧ್ಯಾಯರೇ ಈ ಅವಕಾಶದ ಸಮಯದಲ್ಲಿ ಆಶಾಕಿರಣ ಹಾಗೂ ವಿಶ್ವಾಸದ ಜ್ಯೋತಿಸ್ತಂಭವಾಗಿ ಮಾರ್ಗದರ್ಶನದ ದಾಯಿತ್ವವನ್ನು ವಹಿಸುವ ಏಕೈಕ ವ್ಯಕ್ತಿಯಾಗಿದ್ದರು. ಕಾಶ್ಮೀರದ ಆಂದೋಳನವಾಗಿರಲಿ ಅಥವಾ ರೈತರು ಹಾಗೂ ಕಾರ್ಮಿಕರ ಪಂಚವರ್ಷೀಯ ಯೋಜನೆಯಾಗಿರಲಿ ಅಥವಾ ಸಾಮಾಜಿಕ ಗುಂಪು ಎಲ್ಲಾ ಸ್ಥಾನ ಹಾಗೂ ಕಾರ್ಯಗಳಲ್ಲಿ ಪಂ. ದೀನದಯಾಲರ ಮಾರ್ಗದರ್ಶನ ದೇಶಕ್ಕೆ ಪ್ರಾಪ್ತವಾಗುತ್ತಲೇ ಇತ್ತು. ಪಂ. ದೀನದಯಾಲರು ದೇಶದ ಎಲ್ಲಾ ಮಹತ್ವಪೂರ್ಣ ಕ್ಷೇತ್ರಗಳಿಗಾಗಿ ಗಂಭೀರ ಸಾರಯುಕ್ತ ವಿಚಾರ ಮಂಥನ ನಡೆಸಿದರು. ಇದೆಲ್ಲಾ ಕಾರ್ಯಗಳಲ್ಲಿಯೂ ಅವರ ವೈಶಿಷ್ಟ್ಯವೆಂದರೆ ಅವರು ತಾತ್ಕಾಲಿಕ ಹಾಗೂ ಚಿಕ್ಕ/ಸಣ್ಣ ವಿಷಯಗಳನ್ನು ಸಹ ಒಂದು ಸ್ಥಾಯಿ ಸೈದ್ಧಾಂತಿಕ ಅಧಿಷ್ಠಾನವನ್ನಾಗಿಸಿ ಬರೆದು–ಹೇಳುತ್ತಿದ್ದರು. ಅವರ ಜೀವನ ರಾಷ್ಟ್ರಹಿತಕ್ಕಾಗಿ ಸಮರ್ಪಿತವಾಯಿತು ಹಾಗೂ ರಾಷ್ಟ್ರೀಯ ಚಿಂತನೆಯಲ್ಲಿ ಸದಾ ಮಗ್ನವಾಗಿದ್ದಿತು.

ಸೃಷ್ಟಿಕರ್ತರು ಅವರನ್ನು ತಮ್ಮ ಜನ್ಮದಿಂದಲೇ ವಿಪತ್ತುಗಳಲ್ಲಿ ಸಿಲುಕಿಸಲು ಬಲೆ ಬೀಸಿದ್ದನು. ಆದರೆ ಪಂ. ದೀನದಯಾಲರು ತಮ್ಮ ತೀಕ್ಷ್ಣ ಬುದ್ಧಿ ಹಾಗೂ ಕಷ್ಟ ಸಹಿಷ್ಣುತೆಯ ಬಲದಿಂದ ಸದಾ ಪ್ರಗತಿ ಸಾಧಿಸುವ ಸಂಕಲ್ಪವನ್ನು ಮಾಡಿದ್ದರು. ಅವರು ತಮ್ಮ ದೈವೀಗುಣಗಳ ಬಲದಿಂದ ಸದಾ ಪರಿಶ್ರಮ, ತ್ಯಾಗ, ಶ್ರದ್ಧೆಯ ಪರಿಚಯ ನೀಡುತ್ತಾ ಯಶಸ್ವಿಯಾಗುತ್ತಾ ಹೋದರು. ಈ ಕ್ರಮ ಅವರ ಬಾಲ್ಯದಿಂದಲೇ ಆರಂಭವಾಯಿತು ಹಾಗೂ ಅವರ ಮೃತ್ಯುವಿನ ತನಕ ನಿರಂತರವಾಗಿ ನಡೆಯುತ್ತಲೇ ಇತ್ತು. ಸೃಷ್ಟಿಕರ್ತ ಬ್ರಹ್ಮನು ಬಾಲ್ಯಕಾಲದಲ್ಲಿಯೇ ಅವರನ್ನು ಅನಾಥರನ್ನಾಗಿಸಿದನು. ವಿದ್ಯಾರ್ಥಿಜೀವನಲ್ಲಿ ಅವರಿಗೆ ಪ್ರೀತಿ, ಅಕ್ಕರೆಯಿಂದ ಆಶ್ರಯ ನೀಡಿದ ಅವರ ಅಕ್ಕನನ್ನು ಮೃತ್ಯುಮುಖದಲ್ಲಿ ಕಳುಹಿಸಿ ಅವರನ್ನು ವಿಕ್ಷಿಪ್ತನನ್ನಾಗಿಸುವ ಸಂಕಲ್ಪವನ್ನು ಹೊತ್ತನು ಹಾಗೂ ಅವರು ಯಶಸ್ಸು, ಹಿರಿಮೆಯ ದಿಗಂತವನ್ನೇರಿ ಅಧ್ಯಕ್ಷರ ಸ್ಥಾನವನ್ನು ಗ್ರಹಿಸಿದರೋ ಆಗ ಅವರ ಮೇಲೆ ಕಾಲಪಾಶವನ್ನು ಬೀಸಿ, ಚಿರನಿದ್ರೆಯಲ್ಲಿರಿಸಿ ಅವರನ್ನು ಅನಾಥರನ್ನಾಗಿಸಿದನು. ಸೃಷ್ಟಿಕರ್ತನಾದ ಬ್ರಹ್ಮನು ತನ್ನ ಕ್ರೂರಕ್ರೀಡೆಯಿಂದ ಅವರನ್ನು ಗುರುತು ಹಿಡಿಯಲಾರದಂತಹ ಅಪರಿಚಿತ ಹೆಣವನ್ನಾಗಿಸಿದನು. ಆದರೆ ಪ್ರತಿ ಬಾರಿಯೂ ಅವರು ತಮ್ಮ ಕರ್ತವ್ಯ ನಿಷ್ಠೆಯಲ್ಲಿ ಯಶಸ್ವಿಯಾದರು. ಅವರು ಜನ್ಮದಿಂದಲೇ ದೀನದಯಾಳುಗಳಾಗಿದ್ದರು. ಬ್ರಹ್ಮನು ಅವರನ್ನು ಅನಾಥರನ್ನಾಗಿಸಿದಾಗ ಅವರು ಕರ್ಮಯೋಗಿಗಳಾದರು. ಅವರನ್ನು ವಿಕ್ಷಿಪ್ತಗೊಳಿಸಿದಾಗ ಅವರು ಸಮಾಜಸೇವಕರಾಗಿ ಸರ್ವವನ್ನು ತ್ಯಾಗಮಾಡಿದ ಸನ್ಯಾಸಿಗಳಾದರು ಹಾಗೂ ಕೊನೆಗೆ ಅವರನ್ನು ಹೆಣವನ್ನಾಗಿಸಿ ಸಮಾಜವು



ಮರೆಯುವಂತೆ ಮಾಡಬಯಸಿದಾಗ, ಅವರ ಜೀವನ–ಸಾಧನೆ ಅವರ ಯಶಃಕಾಯದ ರೂಪದಲ್ಲಿ ಮಿಂಚಿತು. ಬೆಳಗಿನ ಜಾವ ೯ ಗಂಟೆಯವರೆಗೂ ಅವರ ಹೆಣ ಅನಾಥ ಶವವಾಗಿ ಬಿದ್ದಿತ್ತು ಹಾಗೂ ೧೦ ಗಂಟೆಗೆ ಈ ಘಟನೆಯ ಬಗ್ಗೆ ತಿಳಿದೊಡನೆ ಇಡೀ ದೇಶ ಕಣ್ಣೀರು ಸುರಿಸಿತು ಹಾಗೂ ಪುಷ್ಪಾಂಜಲಿಗಳಿಂದ ಪೂಜಿಸತೊಡಗಿತು. ಬ್ರಹ್ಮನು ಅವರನ್ನು ಒಂದು ಹಿಡಿಬೂದಿಯನ್ನಾಗಿ ಮಾಡಬೇಕೆಂದು ಬಯಸಿದ; ಆದರೆ ಅವರು ಚಿತಾಭಸ್ಮದಿಂದ ಮೇಲೆದ್ದು ಜನರ ಮನಸ್ಸಿನಲ್ಲಿ ಎಂದೆಂದಿಗೂ ಮನೆ ಮಾಡಿಕೊಂಡರು. ವಿಧಿಯ ಕ್ರೌರ್ಯ ಕೈಕಟ್ಟಿಕೊಂಡು ಸುಮ್ಮನಿರಬೇಕಾಯಿತು ಹಾಗೂ ಶ್ರೀ ದೀನ್ ದಯಾಳ್‌ರು ಅಮರತ್ವವನ್ನು ಪಡೆದುಕೊಂಡರು.

ನಿಜಕ್ಕೂ ಅವರು ಹುಟ್ಟಿನಿಂದಲ್ಲ, ತಮ್ಮ ಕಾರ್ಯಗಳಿಂದ ಮಹಾನ್ ಪುರುಷರಾದರು. ತಮ್ಮ ಕರ್ಮಗಳನ್ನಾಧರಿಸಿ ಜೀವನದಲ್ಲಿ ಉನ್ನತ ಮಟ್ಟವನ್ನು ತಲುಪಬೇಕೆಂಬ ಸಂದೇಶವು ಅವರ ಜನ್ಮದಿಂದ ಮೃತ್ಯುವಿನ ತನಕ ಜೀವನದ ಪ್ರತಿಯೊಂದು ಘಟನೆಯಲ್ಲಿ ಸತತವಾಗಿ ಪ್ರತಿಧ್ವನಿಸುತ್ತದೆ. ಒಂದು ವಾಕ್ಯದಲ್ಲಿ ಪಂ.ದೀನದಯಾಲ ಉಪಾಧ್ಯಾಯರ ಜೀವನದ ಸಾರವನ್ನು ವ್ಯಕ್ತಪಡಿಸಬೇಕಾದಲ್ಲಿ "ವ್ಯಕ್ತಿ ತನ್ನ ಕರ್ಮಗಳಿಂದ ಪೂಜಿಸಲ್ಪಡುತ್ತಾನೆ" ಎಂಬುದು ಸಾರ್ಥಕವಾಗುತ್ತದೆ.

ಅವರು ತಮ್ಮ ಸಂಘರ್ಷಪೂರ್ಣ ಜೀವನದಲ್ಲಿ ಸದಾ ಕರ್ಮದ ಶ್ರೇಷ್ಠತೆಯನ್ನು ಸಾರಿದ್ದಾರೆ. ಕಲ್ಲಿಕೋಟೆ ಅಧಿವೇಶನದಲ್ಲಿ ಅವರು ಸಂಪೂರ್ಣ ರಾಷ್ಟ್ರಕ್ಕೆ 'ಚರೈವೇತಿ! ಚರೈವೇತಿ !!' ಎಂಬ ಯಾವ ಸಂದೇಶವನ್ನು ನೀಡಿದರೋ ಅದನ್ನು ಅವರು ತಮ್ಮ ಜೀವನದಲ್ಲಿ ಸಾಕಾರಗೊಳಿಸಿದರು.